ಕರ್ನಾಟಕ ಸರ್ಕಾರ

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಬೆಂಗಳೂರು

# ಯಕ್ಷೋಪಾಸಕರು

## ಭಾಗ - ೨

ಯಕ್ಷೋಪಾಸಕರು ಭಾಗ 2
JNANA001066



ಯಕ್ಷೋಪಾಸಕರು

# ಯಕ್ಷೋಪಾಸಕರು

(ತೆಂಕು-ಬಡಗು ಯಕ್ಷ ಕಲಾವಿದರ ಪರಿಚಯ)

## ಭಾಗ-೨

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು
2010

**YAKSHOPASAKARU :** Introduction of Yakshagana Artistes
Published by : **Padmaja Kumari N.**
**Registrar**
Karnataka Yakshagana Bayalata Academy, 2nd Floor, Kannada Bhavana,
J.C. Road, Bangalore - 560 002

Edition : 2011

Pages : xvi+300

Copies : 1000

Price : Rs. 100 /-

ಹಕ್ಕುಗಳು : ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

ಮುದ್ರಣ : ೨೦೧೧

ಪುಟಗಳು : xvi+300

ಪ್ರತಿಗಳು : ೧೦೦೦

ಬೆಲೆ : ರೂ. ೧೦೦/-

ಪ್ರಧಾನ ಸಂಪಾದಕರು :
**ಕುಂಬಳೆ ಸುಂದರ ರಾವ್**
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

ಸಂಗ್ರಹ ಮತ್ತು ಬರಹ :
**ಡಾ. ದಿನಕರ ಎಸ್ ಪಚ್ಚನಾಡಿ (ತೆಂಕು)**
**ಪ್ರಸಾದ ಮೊಗೆಬೆಟ್ಟು (ಬಡಗು)**

ಪ್ರಕಾಶಕರು :
**ಶ್ರೀಮತಿ ಪದ್ಮಜ ಕುಮಾರಿ ಎನ್.**
ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
೨ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು-೫೬೦ ೦೦೨

ಮುದ್ರಕರು :
**ಸುಮ ಪ್ರಿಂಟ್ಸ್**
ನಂ.12, 2ನೇ ಮುಖ್ಯ ರಸ್ತೆ, ವಿನಾಯಕನಗರ,
ಆಡುಗೋಡಿ ಪೋಸ್ಟ್, ಬೆಂಗಳೂರು – 560 030
ದೂರವಾಣಿ – 080–22115218 ಮೊಬೈಲ್ – 91644 52451

# ಇರುಳು ಬೆಳಗುವ ಕಲಾವಿದರತ್ತ ಅಕ್ಷರದ ಬೆಳಕು!

ಕಾಲ ಬದಲಾದಂತೆ ಪರಂಪರೆಯನ್ನು, ಸಂಸ್ಕೃತಿಯನ್ನು ಉಳಿಸುವ ವಿಧಾನವೂ ಬದಲಾಗಿದೆ. ಮೌಖಿಕ ರೂಪದಲ್ಲಿದ್ದ ಕಲೆ – ಸಂಸ್ಕೃತಿ, ಆಧುನಿಕವಾದ ಈ ಕಾಲದಲ್ಲಿ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಅಕ್ಷರರೂಪದಲ್ಲಿ, ಧ್ವನಿರೂಪದಲ್ಲಿ, ದೃಶ್ಯರೂಪದಲ್ಲಿ ದಾಖಲುಗೊಂಡು ಪರಂಪರೆಯ ಹೊಸವಾಹಿನಿಗಳಾಗಿ ಸಾಗುತ್ತಿವೆ. ಇಂಥ ಸಂದರ್ಭದಲ್ಲಿ, ಕರೆನಾಡು – ಮಲೆನಾಡುಗಳ ಇರುಳುಗಳನ್ನು ಬೆಳಗಿಸುತ್ತಾ ಯಕ್ಷಗಾನ ಕಲೆಯನ್ನು ಜೀವಂತವಾಗಿರಿಸಿರುವ ಕಲಾವಿದರ ವಿವರಗಳನ್ನು ಅಕ್ಷರರೂಪದಲ್ಲಿ ದಾಖಲಿಸುವುದು ಅಗತ್ಯವಲ್ಲವೆ, ಎಂಬ ಯೋಚನೆ ಯಕ್ಷಗಾನ ಬಯಲಾಟ ಅಕಾಡೆಮಿಗೆ ಬಂದದ್ದೇ ಈ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ದಾರಿಯಾಯಿತು.

ಅದರ ಫಲವಾಗಿ ಮೊದಲ ಸಂಪುಟ ಪ್ರಕಟಗೊಂಡಿದೆ. ಎರಡನೆಯ ಸಂಪುಟ ಈಗ ನಿಮ್ಮ ಕೈಯಲ್ಲಿದೆ.

ಎಲ್ಲ ಕಲಾವಿದರಂತೆ ಮೇಳದ ಚೌಕಿಯಲ್ಲಿದ್ದು, ಮುಂದೆ ರಾಜಕೀಯ ಕ್ಷೇತ್ರ ಸೇರಿ, ಯಕ್ಷಗಾನ ಬಯಲಾಟಕ್ಕೆ ಒಂದು ಪ್ರತ್ಯೇಕ ಅಕಾಡೆಮಿ ಬೇಕು ಎಂದು ಕನಸು ಕಾಣುತ್ತಿದ್ದ ನನ್ನ ಹೆಸರು ಕೂಡ ಈ ಸಂಪುಟದಲ್ಲಿ ಉಲ್ಲೇಖವಾಗಿರುವುದು ನನಗೆ ಹೆಮ್ಮೆಯೆನಿಸಿದೆ. ನನ್ನದೇನು, ಈ ನಾಡಿನ ಸಾವಿರಾರು ಕಲಾವಿದರ ಮತ್ತು ಕಲಾರಸಿಕರ ಹಾರೈಕೆಯ ಫಲವಾಗಿ, ಘನ ಸರಕಾರ ಯಕ್ಷಗಾನದ ಪರಂಪರೆಗೆ ಸಂಬಂಧಿಸಿದ ವಿವಿಧ ಪ್ರಕಾರಗಳನ್ನು ಸೇರಿಸಿ 'ಯಕ್ಷಗಾನ ಬಯಲಾಟ ಅಕಾಡೆಮಿ'ಯನ್ನು ಘೋಷಿಸಿದ ದಿನ ಯಕ್ಷ ಪ್ರಪಂಚದ ಎಲ್ಲರೂ ಪುಳಕಿತರಾದರು. ಮುಂದೆ, ಅಕಾಡೆಮಿಗೆ ಅಧ್ಯಕ್ಷರು, ಸದಸ್ಯರು ನೇಮಕವಾಗಿ ವಿಧ್ಯುಕ್ತವಾಗಿ ಚಟುವಟಿಕೆಗಳು ಆರಂಭವಾಗಿಯೇ ಬಿಟ್ಟಿತು.

ನಾವು ಕಾರ್ಯೋನ್ಮುಖರಾದಾಗ, ಜಾನಪದ ಅಕಾಡೆಮಿಯ ಜೊತೆಗಿದ್ದ ಯಕ್ಷಗಾನ ಕಲೆಗೆ ಪ್ರತ್ಯೇಕ ಸ್ವರೂಪದ ಸಾಂಸ್ಥಿಕ ಆಯಾಮ, ಕಾರ್ಯ ವೈಖರಿ ಇರಬೇಕಾದ ಅಗತ್ಯ ಕಂಡುಬಂತು. ಅಸಾಮಾನ್ಯರು ಪೋಷಿಸಿಕೊಂಡು ಬಂದ ಈ ರಂಗವೃತ್ತಿ, 'ರಂಗಭೂಮಿ'ಯಾಗಿ, ವ್ಯಾಪಕವಾದ ಹರವನ್ನು ಹೊಂದಿದ್ದು, ಅದಕ್ಕೆ ತಕ್ಕಂತೆ ಕಾರ್ಯಸೂಚಿಯನ್ನು ಹಾಕಿಕೊಳ್ಳುವುದು ಅನಿವಾರ್ಯವೆನಿಸಿತು. ಅದಕ್ಕಾಗಿ ಸದಸ್ಯರ ಸಹಮತದೊಂದಿಗೆ ಕರ್ನಾಟಕದ ಕರಾವಳಿಯಿಂದ ತೊಡಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ಚಟುವಟಿಕೆಯನ್ನು ವಿಸ್ತರಿಸಬೇಕಾದ ಅಗತ್ಯ ಉಂಟಾಯಿತು. ಸರಕಾರದ ಅನುದಾನದ ಹೆಚ್ಚಳ, ಸದಸ್ಯರ ಉತ್ಸಾಹ ಜೊತೆ ಸೇರಿ, ಪ್ರದರ್ಶನಗಳು, ಶಿಬಿರಗಳು, ಅಭ್ಯಾಸ ವರ್ಗಗಳು ಏರ್ಪಾಟಾಗತೊಡಗಿದವು. ಹಿಂದೆ ಅಕಾಡೆಮಿ ವತಿಯಿಂದ ವರ್ಷಕ್ಕೆ ಮೂರು ಮಂದಿಗೆ ಇದ್ದ ಅಕಾಡೆಮಿ ಪ್ರಶಸ್ತಿಯನ್ನು ಹತ್ತು ಮಂದಿಗೆ ಹೆಚ್ಚಿಸುವುದಕ್ಕೆ ಮತ್ತು ಯಕ್ಷಗಾನದ ಸೀಮಾ ಪುರುಷನೆಂಬ ಕೀರ್ತಿಗೆ ಪಾತ್ರನಾದ ಪಾರ್ತಿಸುಬ್ಬನ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಗಳ ಪ್ರಶಸ್ತಿಯನ್ನು ಪ್ರಕಟಿಸುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು. ಈ ಹೊಸ ಯೋಜನೆಗೆ ಒಪ್ಪಿಗೆ ದೊರೆತು ಅಕಾಡೆಮಿಯ ಎರಡು ವರ್ಷಗಳ ಪ್ರಶಸ್ತಿಯನ್ನು ಇಪ್ಪತ್ತು ಮಂದಿಗೆ ಹಾಗೂ ಪಾರ್ತಿಸುಬ್ಬ ಪ್ರಶಸ್ತಿಯನ್ನು ಇಬ್ಬರಿಗೆ ಪ್ರದಾನ ಮಾಡಿದವು.

ಯಕ್ಷಗಾನ ರಂಗದಲ್ಲಿ ಕಲಾವಿದರ ಕ್ಷೇಮಕ್ಕಾಗಿ ಕಲೆಯ ಪ್ರಗತಿಗಾಗಿ ಎಲ್ಲೆಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆಯೋ ಅಲ್ಲೆಲ್ಲ ಅಕಾಡೆಮಿಯ ಸಹಾಯಹಸ್ತ ಚಾಚಲ್ಪಡುತ್ತಿದೆ.

'ಶಿಕ್ಷಣದಲ್ಲಿ ಯಕ್ಷಗಾನ – ಯಕ್ಷಗಾನ ಶಿಕ್ಷಣ' ಕುರಿತ ರಾಜ್ಯಮಟ್ಟದ ಸಮ್ಮೇಳನವು ಸುಳ್ಯದಲ್ಲಿ ನಡೆಯಿತು. ಯಕ್ಷ ಶಿಕ್ಷಣಕ್ಕೆ ಬೇಕಾದ ಚೌಕಟ್ಟನ್ನು ನಿರ್ಧರಿಸಲಾಯಿತು. ಶಿವಮೊಗ್ಗದಲ್ಲಿ ಎಲ್ಲಾ ಕಲಾ ಪ್ರಕಾರದ ಪ್ರದರ್ಶನ, ಯಕ್ಷರಂಗ ದರ್ಶನ ಕಾರ್ಯಕ್ರಮ, ಕಿನ್ನಿಗೋಳಿಯಲ್ಲಿ ಯಕ್ಷಗಾನ ಆಂಗಿಕ ಅಭಿನಯದ ಬಗ್ಗೆ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆ, ಉಜಿರೆಯಲ್ಲಿ ಏಳು ದಿನಗಳ 'ಯುವ ವೃತ್ತಿಪರ ಯಕ್ಷಗಾನ ಕಲಾವಿದರ ಪುನಶ್ಚೇತನ ಶಿಬಿರ' ಮಂಗಳೂರಿನಲ್ಲಿ 'ಸರಣಿ ಯಕ್ಷಗಾನ ತಾಳಮದ್ದಳೆ' ಕಾರ್ಯಕ್ರಮ, ಬೆಂಗಳೂರಿನಲ್ಲಿ ಯಕ್ಷಗಾನ ಮುಖವರ್ಣಿಕೆ ಕಾರ್ಯಾಗಾರ ಪ್ರಾತ್ಯಕ್ಷಿಕೆ, ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಮೂಡಲಪಾಯ ಯಕ್ಷಗಾನದ ಪ್ರಾತ್ಯಕ್ಷಿಕೆ ಮತ್ತು ದಾಖಲಾತಿ, ಅರಳುಗುಪ್ಪೆಯಲ್ಲಿ ಮೂಡಲಪಾಯ ದೊಡ್ಡಾಟ ಯಕ್ಷಗಾನ ಸಮ್ಮೇಳನ–ವಿಚಾರ ಸಂಕಿರಣ ಕಾರ್ಯಕ್ರಮ, ಕಾರ್ಕಳದಲ್ಲಿ

'ಎರಡು ದಿನಗಳ ಯಕ್ಷಗಾನ ಪ್ರಾತ್ಯಕ್ಷಿಕೆ ಮತ್ತು ಹಿರಿಯ ವಿದ್ವಾಂಸರು/ತಜ್ಞರಿಂದ ಯಕ್ಷಗಾನ ವಿಚಾರ ಗೋಷ್ಠಿ', ಮುಂಬೈನಲ್ಲಿ ಯಕ್ಷಗಾನೋತ್ಸವ, ಕಾಸರಗೋಡಿನಲ್ಲಿ 'ಯಕ್ಷಪುನರ್ನವ', ಮಂಗಳೂರಿನಲ್ಲಿ 'ವಿದ್ಯಾರ್ಥಿ ಯಕ್ಷಗಾನ ಸಂಭ್ರಮ'. ಬೆಂಗಳೂರಿನಲ್ಲಿ 'ಯಕ್ಷಗಾನದಲ್ಲಿ ಅಭಿನಯ ಹಾಗೂ ಪ್ರಯೋಗ', ಉಜಿರೆಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗಡೆಯವರ ಅನುಗ್ರಹದೊಂದಿಗೆ ತೆಂಕು-ಬಡಗುತಿಟ್ಟಿನ ಕಲಾವಿದರನ್ನು ಕಲೆ ಹಾಕಿ ಒಂದು ವಾರದ ಪುನಶ್ಚೇತನ ಶಿಬಿರವನ್ನು ಏರ್ಪಡಿಸಿದ್ದಾಯಿತು. ಉಡುಪಿಯಲ್ಲಿ ಪ್ರಸಂಗ ರಚನಾ ಕಮ್ಮಟವನ್ನು ಏರ್ಪಡಿಸಿ ಅನೇಕ ಕವಿಗಳ ಛಂದಸ್ಸಿನ ವಿದ್ವಾಂಸರ ಸಹಯೋಗವನ್ನು ಏರ್ಪಡಿಸಿದ್ದಾಯಿತು. ಮೂಡಲ ಪಾಯ ಯಕ್ಷಗಾನವನ್ನು ಪುನಶ್ಚೇತನಗೊಳಿಸುವ ಸಲುವಾಗಿ ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಸಬನಾ ತರಬೇತಿ ಶಿಬಿರವನ್ನು, ಬೆಳಗಾವಿಯಲ್ಲಿ ಯಕ್ಷಗಾನ ಬಯಲಾಟ ಸಂಭ್ರಮ, ಮಂಗಳೂರಿನಲ್ಲಿ ವಿದ್ಯಾರ್ಥಿ ಯಕ್ಷಗಾನ ಸಂಭ್ರಮ, ಶೃಂಗೇರಿಯಲ್ಲಿ ಒಳ ಮಲೆನಾಡು ಯಕ್ಷವೀಕ್ಷಣಾ ನಾವಡ ಸಂಸ್ಮರಣ ಕಾರ್ಯಕ್ರಮ, ಬೆಂಗಳೂರಿನಲ್ಲಿ ಯಕ್ಷಗಾನ ಕಮ್ಮಟ, ತಿಪಟೂರು ಜಿಲ್ಲೆಯ ಕೆರೆಗೋಡಿ-ರಂಗಾಪುರದಲ್ಲಿ ಯಕ್ಷಶಿಕ್ಷಣ ಯೋಜನೆಯಡಿ ಮೂಡಲ ಪಾಯ ಯಕ್ಷಗಾನ ಶಿಕ್ಷಣ ಪಡೆದ ಮಕ್ಕಳಿಂದ ಮೂಡಲಪಾಯ ಯಕ್ಷಶಿಕ್ಷಣ-ಯಕ್ಷಗಾನ ಸಂಭ್ರಮ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಯಕ್ಷರಂಗದರ್ಶನ' ಸುಳ್ಯಾದಲ್ಲಿ ಯಕ್ಷ-ರಂಗ ಕಾರ್ಯಗಾರ ಮತ್ತು ಯಕ್ಷ-ರಂಗ ಉತ್ಸವವನ್ನು ಏರ್ಪಡಿಸಿದ್ದಾಯಿತು. ಈ ಮಧ್ಯೆ ಶೇಣಿಯವರ 'ಶೇಣಿ ಭಾರತ'ವನ್ನು ಪುನರ್ ಮುದ್ರಣಕ್ಕೆ ಅಣಿಗೊಳಿಸುವ ಯೋಜನೆಯು ಸಿದ್ಧವಾಗಿದೆ.

ಯಕ್ಷಗಾನದ ಉಭಯ ತಿಟ್ಟುಗಳ ಕಲಾವಿದರ ದಾಖಲೀಕರಣದ ಯೋಜನೆ ಹಿಂದೆಯೇ ಅನುಮೋದನೆ ಪಡೆದಿತ್ತು. ಈಗ ಅದು ಈ ಪುಸ್ತಕದ ರೂಪದಲ್ಲಿ ಕಾರ್ಯರೂಪಕ್ಕೆ ಮೊದಲ ಸಂಪುಟ ಬಂದಿದೆ. ಈಗ ಎರಡನೇ ಸಂಪುಟ ಪ್ರಕಟಗೊಂಡು ಒಟ್ಟು ಆರು ನೂರು ಕಲಾವಿದರ ವಿವರಗಳು ಇವುಗಳಲ್ಲಿ ದಾಖಲಾಗಿವೆ. ಇವುಗಳಲ್ಲಿ ಪರಿಗಣಿಸಲಾಗಿರುವ ಹೆಚ್ಚಿನ ಕಲಾವಿದರು ಈಗಲೂ ಕಲಾ ವ್ಯವಸಾಯ ಮಾಡುತ್ತಿರುವವರು. ಕೆಲವರು ನಿವೃತ್ತರಾಗಿದ್ದರೆ, ಇನ್ನು ಕೆಲವರು ಹವ್ಯಾಸಿ ರಂಗದಲ್ಲಿ ಪ್ರವೃತ್ತರಾಗಿರುವವರು. ಒಂದು ಸಂಪುಟದಲ್ಲಿ ಪ್ರತೀ ತಿಟ್ಟಿನ ಒಟ್ಟು ಮುನ್ನೂರು ಕಲಾವಿದರ ಸಂಕ್ಷಿಪ್ತ ಪರಿಚಯವಿದೆ.

ಈ ಸಂಪುಟಗಳು ಕನಿಷ್ಠ ಹತ್ತು ವರ್ಷ ಮೇಳದ ತಿರುಗಾಟವನ್ನು ಹೊಂದಿರುವ ಕಲಾವಿದರ ವಿವರಗಳನ್ನಷ್ಟೇ ಒಳಗೊಂಡಿದೆ. ಆದಾಗ್ಯೂ ಈ ಸಂಪುಟಗಳು ಸಮಗ್ರವಾಗಿವೆಯೆಂದು ಹೇಳುವ ಧೈರ್ಯ ನಮಗಿಲ್ಲ. ವಿಸ್ತಾರವಾದ ಭೌಗೋಳಿಕ ಪರಸರದಲ್ಲಿ ಹರಡಿಕೊಂಡಿರುವ ಈ ಕಲೆಯಲ್ಲಿ ನಿಡುಗಾಲ ದುಡಿದ ಕೆಲವು ಕಲಾವಿದರಾದರೂ ನಮ್ಮ ಪರಿಗಣನೆಯಿಂದ ಹೊರಗುಳಿದಿರಬಹುದು. ಕೆಲವರು ಪ್ರಸಿದ್ಧಿಯ ಬೆಳಕಿನ ಮರೆಯಲ್ಲಿರಬಹುದು. ಇನ್ನೂ ಕೆಲವರು ದೂರದ ಊರುಗಳಲ್ಲಿರಬಹುದು. ಹಾಗಾಗಿ ಹೆಸರು ಬಿಟ್ಟು ಹೋಗಿರುವುದು ಉದ್ದೇಶಪೂರ್ವಕವಲ್ಲ. ತಾಂತ್ರಿಕ ಕಾರಣದಿಂದಾದ ಪ್ರಮಾದವೆಂದು ತಿಳಿಯಬೇಕೆಂದು ಕೋರಿಕೆ. ಮುಂದಿನ ಸಂಪುಟಗಳಲ್ಲಿ ಅಂಥವರ ವಿವರಗಳು ಬರುವಂತೆ ನೋಡಿಕೊಳ್ಳುತ್ತೇವೆ ಎಂದಷ್ಟೇ ಇಲ್ಲಿ ಹೇಳಬಹುದು.

ಈ ಕೃತಿ ಮೈದಳೆಯುವಲ್ಲಿ ಮಾರ್ಗದರ್ಶಕರಾಗಿ ಸಹಕರಿಸಿದ ಈ ಸಂಗ್ರಹದ ಕನಸನ್ನು ಹೊತ್ತು, ಗ್ರಂಥ ಹೊರಬರುವಲ್ಲಿ ಮಾರ್ಗದರ್ಶಕರಾಗಿ ಸಹಕರಿಸಿದ ಅಕಾಡೆಮಿಯ ಸದಸ್ಯರಾದ ಮುರಳಿ ಕಡೆಕಾರ್ ಮತ್ತು ಡಾ. ಸುಂದರ್ ಕೇನಾಜೆಯವರ ಹೆಸರುಗಳನ್ನು ನಾನಿಲ್ಲಿ ಉಲ್ಲೇಖಿಸಲೇಬೇಕು ಹಾಗೂ ಅಭಿನಂದಿಸಲೇಬೇಕು. ಈ ಕಾರ್ಯದಲ್ಲಿ ಸಂಗ್ರಹಕಾರರಾಗಿ ಶ್ರಮಿಸಿದ ಕಲಾವಿದರೂ, ಯಕ್ಷಗಾನದ ಕುರಿತು ಆಳವಾದ ಅಸ್ಥೆಯುಳ್ಳವರೂ ಆದ ಡಾ. ದಿನಕರ ಎಸ್. ಪಚ್ಚನಾಡಿ ಮತ್ತು ಪ್ರಸಾದ ಕುಮಾರ್ ಮೊಗೆಬೆಟ್ಟು ಅಭಿನಂದನೆಗೆ ಅರ್ಹರಾಗಿದ್ದಾರೆ. ಈ ಪುಸ್ತಕ ಹೊರಬರಲು ಸಹಕರಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಪದ್ಮಜಕುಮಾರಿ ಎನ್. ಅವರಿಗೂ, ಅಕಾಡೆಮಿಯ ಸಿಬ್ಬಂದಿಯವರಿಗೂ ಅಭಿನಂದನೆಗಳು.

ಕಲೆಗೆ ಮತ್ತು ಕಲಾವಿದರಿಗೆ ಸಂಬಂಧಿಸಿದ ದಾಖಲಾತಿ ಕೆಲಸಗಳನ್ನು ಮುಂದುವರಿಸುವ ಹೆಬ್ಬಯಕೆ ಅಕಾಡೆಮಿಗಿದೆ. ಸಹೃದಯರಾದ ನಿಮ್ಮ ಸಲಹೆ – ಸಹಕಾರ ನಮ್ಮ ಮಾರ್ಗವನ್ನು ಇನ್ನಷ್ಟು ಸ್ಪಷ್ಟವಾಗಿರಸುತ್ತದೆಂಬ ವಿಶ್ವಾಸ.

**(ಕುಂಬಳೆ ಸುಂದರ ರಾವ್)**

ಅಧ್ಯಕ್ಷರು

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

## ಪರಿವಿಡಿ


| ಕ್ರ.ಸಂ. | ವಿವರ | ಪುಟ |
|---|---|---|
| | **ಬಡಗುತಿಟ್ಟು ಕಲಾವಿದರು** | |
| 1 | ಅಣ್ಣಪ್ಪ ಗಾಣಿಗ ಹಾರಾಡಿ | 1 |
| 2 | ಅಣ್ಣಪ್ಪಶೆಟ್ಟಿ ನಗರ | 2 |
| 3 | ಅನಂತ ಭಟ್ ಮಾವಿನಮನೆ | 3 |
| 4 | ಅನಂತ ವೆಂಕಟರಮಣ ಹೆಗಡೆ, ದಂತಳಿಗೆ | 4 |
| 5 | ಅಶ್ವತ್ಥನಾರಾಯಣ ಎಂ.ಪಿ. ಮಾಕರಸು | 5 |
| 6 | ಆನಂದ ದೇವಾಡಿಗ ಕಮಲಶಿಲೆ | 6 |
| 7 | ಈಶ್ವರ ಗೌಡ, ಬುಕ್ಕಡಿಬೈಲು | 7 |
| 8 | ಈಶ್ವರ ನಾಯ್ಕ ಮಂಕಿ | 8 |
| 9 | ಉದಯ ಕುಮಾರ್ ಬಾರ್ಕೂರು | 9 |
| 10 | ಉದಯ ಕುಮಾರ್ ತಾರೆಕೊಡ್ಲು | 10 |
| 11 | ಉದಯ ಕುಮಾರ ಶೆಟ್ಟಿ ಆಜ್ರಿ | 11 |
| 12 | ಉದಯ ಕುಮಾರ ಶೆಟ್ಟಿ, ಚೌಕುಳುಮಕ್ಕಿ | 12 |
| 13 | ಉದಯ ಪುಂಡಲೀಕ ಸೇರಿಗಾರ್ | 13 |
| 14 | ಉದಯ ಮೆಂಡನ್, ಕೋಟ | 14 |
| 15 | ಉದಯ ಹೆಗಡೆ ಮಾಳ್ಕೋಡು | 15 |
| 16 | ಕೃಷ್ಣ ಚಿಕ್ಕಯ್ಯ ಪೂಜಾರಿ | 16 |
| 17 | ಕೃಷ್ಣದಾಸ್ ಮರವಂತೆ | 17 |
| 18 | ಕೃಷ್ಣ ಮಂಜ ಭಂಡಾರಿ | 18 |
| 19 | ಕೃಷ್ಣನಾಯ್ಕ, ಮುಂಡಾಡಿ | 19 |
| 20 | ಕೃಷ್ಣಮೂರ್ತಿ ಎನ್.ಕೆ. | 20 |
| 21 | ಕೃಷ್ಣ ಮೊಗವೀರ, ಮೊಳಹಳ್ಳಿ | 21 |
| 22 | ಕೃಷ್ಣಯ್ಯ ಆಚಾರ್ಯ ಬಿದ್ಕಲ್‌ಕಟ್ಟೆ | 22 |
| 23 | ಕೃಷ್ಣಯ್ಯ ಆಚಾರ್ಯ, ತೆಂಕಬೆಟ್ಟು | 23 |
| 24 | ಕೇಶವ ನಾಯಕ್, ಎಳ್ಳಂಡಳ್ಳಿ | 24 |
| 25 | ಗಜಾನನ ನಾರಾಯಣ ಭಂಡಾರಿ, ಬೋಳ್ಗೆರೆ | 25 |
| 26 | ಗಜಾನನ ವೆಂಕಟರಮಣ ಹೆಗಡೆ | 26 |
| 27 | ಗಣಪತಿ ಗೋವಿಂದ ನಾಯ್ಕ, ಕುಮಟಾ | 27 |
| 28 | ಗಣಪತಿ ಪಿ. ಬೈಲಗದ್ದೆ | 28 |
| 29 | ಗಣಪತಿ ಶೆಟ್ಟಿ, ಮಡಾಮಕ್ಕಿ | 29 |
| 30 | ಗಣೇಶ ದೇವಾಡಿಗ, ಉಪ್ಪುಂದ | 30 |
| 31 | ಗಣೇಶ ಬಳೆಗಾರ ಜನ್ಸಾಡಿ | 31 |
| 32 | ಗೋಪಾಲ ಕೃಷ್ಣಯ್ಯ ಎಚ್.ಎಸ್. | 32 |
| 33 | ಗೋಪಾಲ ನಾಯ್ಕ ಜಡ್ಕಲ್ | 33 |
| 34 | ಗೋಪಾಲಮೂರ್ತಿ ಎಚ್.ಆರ್. | 34 |
| 35 | ಗೋಪಾಲ ಸೌಡ | 35 |

| ಕ್ರ.ಸಂ. | ವಿವರ | ಪುಟ |
|---|---|---|
| 36 | ಗೋವಿಂದ ದೇವಾಡಿಗ, ಸಾಲೆಮಕ್ಕಿ | 36 |
| 37 | ಗೋವಿಂದ ಮೊಗವೀರ, ವಂಡಾರು | 37 |
| 38 | ಚಂದ್ರನಾಯ್ಕ, ಕೊಡ್ಗಿಜೆಡ್ಡು | 38 |
| 39 | ಚಂದ್ರಶೇಖರ ಆಚಾರಿ, ಹಾರೆಕೊಪ್ಪ | 39 |
| 40 | ಚಂದ್ರಶೇಖರ ಉಡುಪ | 40 |
| 41 | ಚಂದ್ರಶೇಖರ ಕುಲಾಲ, ಆವರ್ಸೆ | 41 |
| 42 | ಚಂದ್ರಶೇಖರ ಶೆಟ್ಟಿ ಬಿಜೂರು | 42 |
| 43 | ಚಂದ್ರಶೇಖರ ಶೆಟ್ಟಿ ಬೆದ್ರಳ್ಳಿ | 43 |
| 44 | ಚಂದ್ರಶೇಖರ ಹೆಗಡೇಕರ್ | 44 |
| 45 | ತೇಜ ಆಲೂರು | 45 |
| 46 | ದಿನಕರ ಕುಂದರ್, ನಡೂರು | 46 |
| 47 | ದೇವರಾಜ್‌ದಾಸ್ ಭಾಗವತ್ | 47 |
| 48 | ದೇವರಾಜ ಮಂಡಲೀಕ ಅಂಬಿಗ | 48 |
| 49 | ನರಸಿಂಹ ರಾಮಚಂದ್ರ ಹೆಗಡೆ ಚಿಟ್ಟಾಣಿ | 49 |
| 50 | ನಾಗರಾಜ ಭಂಡಾರಿ, ಹಿರೇಬೈಲು | 50 |
| 51 | ನಾಗೇಶ್ ಗಣಪಯ್ಯ ಗೌಡ | 51 |
| 52 | ನಾಗೇಶ್ ಎನ್. ದೇವಾಡಿಗ | 52 |
| 53 | ಎನ್.ಜಿ. ಹೆಗಡೆ, ಯಲ್ಲಾಪುರ | 53 |
| 54 | ನಾರಾಯಣ ಗೌಡ, ಎಳಜಿತ್ | 54 |
| 55 | ಪ್ರಕಾಶನಾವಡ ಜಿ.ಎಸ್. ಗುಂಡ್ಮಿ | 55 |
| 56 | ಪ್ರಭಾಕರ ಶೆಟ್ಟಿ, ಮಡಾಮಕ್ಕಿ | 56 |
| 57 | ಪ್ರವೀಣ ಗಾಣಿಗ, ಕೆಮ್ಮಣ್ಣು | 57 |
| 58 | ಪ್ರಸಾದ ಹೆಗಡೆ, ಗೋಡೆ | 58 |
| 59 | ಬಸವ ಮರಕಾಲ, ಮುಂಡಾಡಿ | 59 |
| 60 | ಬಸವ ಹಟ್ಟಿಯಂಗಡಿ | 60 |
| 61 | ಬಾಲಕೃಷ್ಣ ನಾಯಕ್, ಪೇತ್ರಿ | 61 |
| 62 | ಭಾಸ್ಕರ ಶೆಟ್ಟಿ ಆಂಜ್ರಿ-ರಾಮನಕೊಡ್ಲು | 62 |
| 63 | ಭೋಜು ಮೊಗವೀರ, ಶಿರಿಯಾರ | 63 |
| 64 | ಮಧುಕರ ಭಟ್ ಕೆ. | 64 |
| 65 | ಮನೋಹರ ರಾವ್ ಕೆ.ಜಿ., ಸೀತೂರು | 65 |
| 66 | ಮನೋಹರ ಹೆಗ್ಡೆ, ಕಳ್ತೂರು | 66 |
| 67 | ಮಹಮ್ಮದ್ ಗೌಸ್, ಕಾವ್ರಾಡಿ | 67 |
| 68 | ಮಹಾಬಲೇಶ್ವರ ಭಟ್ಟ, ಇಟಗಿ | 68 |
| 69 | ಮಹೇಶ ಕುಮಾರ್, ಮಂದಾರ್ತಿ | 69 |
| 70 | ಮೂರ್ತಿಗೌಡ ಬಿ.ಎಚ್. | 70 |
| 71 | ಮಂಜು ನಾಗಪ್ಪ ಗೌಡ | 71 |
| 72 | ಮಂಜುನಾಥ ಕೊಠಾರಿ | 72 |
| 73 | ಮಂಜುನಾಥ ನಾವಡ, ಕಟ್ಕೆರೆ | 73 |

| ಕ್ರ.ಸಂ. | ವಿವರ | ಪುಟ |
|---|---|---|
| 74 | ಮಂಜುನಾಥ ಭಂಡಾರಿ, ಕರ್ಕಿ | 74 |
| 75 | ಮಂಜಯ್ಯ ಜೈನ್ | 75 |
| 76 | ರಘುರಾಮಗೌಡ ಕೆಂಜಿ | 76 |
| 77 | ರಮಾಕಾಂತ ಮಡಿವಾಳ | 77 |
| 78 | ರಮೇಶ ಕುಮಾರ್, ಕಾವ್ರಾಡಿ | 78 |
| 79 | ರಮೇಶ ಗಾಣಿಗ, ಹಾರಾಡಿ | 79 |
| 80 | ರಮೇಶ ಭಂಡಾರಿ, ಮೂರೂರು | 80 |
| 81 | ರಮೇಶ್ ವಂಡಾರು | 81 |
| 82 | ರವಿಚಂದ್ರ, ನೀಲಾವರ | 82 |
| 83 | ರವೀಂದ್ರ ಆಚಾರ್, ಕಾಡೂರು | 83 |
| 84 | ರವೀಂದ್ರ ಪೂಜಾರಿ, ಸೆಳ್ಕೋಡು | 84 |
| 85 | ರವೀಂದ್ರ ಶೆಟಿ, ವಾಟಾರು | 85 |
| 86 | ರವೀಂದ್ರ ಶೆಟ್ಟಿ, ಹಕ್ಲಾಡಿ | 86 |
| 87 | ರವೀಂದ್ರ ಎಸ್.ಎ., ಶೃಂಗೇರಿ | 87 |
| 88 | ರಾಘವೇಂದ್ರ ಆಚಾರ್, ಸಿದ್ಧಾಪುರ | 88 |
| 89 | ರಾಘವೇಂದ್ರ ಸಕ್ಕಟ್ಟು | 89 |
| 90 | ರಾಜು ಕುಲಾಲ್ ಬಿ.ಎಸ್. | 90 |
| 91 | ರಾಜು ದೇವಾಡಿಗ, ಕುದ್ರುಕೋಡು | 91 |
| 92 | ರಾಮ ಕುಲಾಲ, ಮುದ್ದೂರು | 92 |
| 93 | ರಾಮ ಕೇಶವ ಗೌಡ, ಗುಣವಂತೆ | 93 |
| 94 | ರಾಮಚಂದ್ರ ಎಂ. ನಾಯ್ಕ | 94 |
| 95 | ರಾಮಚಂದ್ರ ಪರಮೇಶ್ವರ ಹೆಗಡೆ | 95 |
| 96 | ರಾಮ ಸತ್ಯನಾರಾಯಣ ಭಂಡಾರಿ | 96 |
| 97 | ಲಕ್ಷ್ಮಣ ಕಾಂಚನ್ | 97 |
| 98 | ಲಕ್ಷ್ಮೀನಾರಾಯಣ ಶೆಟ್ಟಿ, ಎಡಮಕ್ಕಿ | 98 |
| 99 | ವಸಂತ ಭಟ್, ಹಳುವಳ್ಳಿ | 99 |
| 100 | ವಾಸುದೇವ ಸಾಮಗ ಎಂ.ಆರ್. | 100 |
| 101 | ವೀರಭದ್ರ ಗೌಡ | 101 |
| 102 | ವಿಠ್ಠಲ ಕುಲಾಲ್ ಚೋರಾಡಿ | 102 |
| 103 | ವಿಠಲ ನಾಯ್ಕ ಶಂಕರನಾರಾಯಣ | 103 |
| 104 | ವಿಶ್ವನಾಥ ಆಚಾರ್, ತೊಂಬಟ್ಟು | 104 |
| 105 | ವೆಂಕಟೇಶ ನ್ಯಾರಿ | 105 |
| 106 | ಶಶಿಧರ ಪಡುಕೋಣೆ | 106 |
| 107 | ಶಂಕರ ನಾಯ್ಕ ಉಳ್ಳೂರು-74 | 107 |
| 108 | ಶಂಕರ ನಾಯ್ಕ ಬೇಳಂಜೆ | 108 |
| 109 | ಶಂಕರ ರಾವ್, ಜನ್ನಾಡಿ | 109 |
| 110 | ಶಂಕರ ಮರಕಾಲ ಮೊಗೆಬೆಟ್ಟು | 110 |
| 111 | ಶಂಕರ ವಿಶ್ವನಾಥ ಹೆಗಡೆ | 111 |

| ಕ್ರಸಂ. | ವಿವರ | ಪುಟ |
|---|---|---|
| 112 | ಶಂಭು ಕುಮಾರ್, ಬೆದ್ರಾಡಿ | 112 |
| 113 | ಶಾಂತಾರಾಮ ಭಂಡಾರಿ | 113 |
| 114 | ಶ್ಯಾಮ ನಾಯ್ಕ | 114 |
| 115 | ಶಿವಶಂಕರ್ ಎಚ್.ಜಿ. | 115 |
| 116 | ಶ್ರೀಕಂಠ ಭಟ್, ಕಿಗ್ಗ | 116 |
| 117 | ಶ್ರೀಧರ ಕುಮಾರ್, ಮಾನ್ಯ | 117 |
| 118 | ಶ್ರೀಧರ ಗಾಣಿಗ, ಉಪ್ಪುಂದ | 118 |
| 119 | ಶ್ರೀಧರ ಡಿ. ನಾಯ್ಕ, ಹಾರ್ಸಿಕಟ್ಟಾ | 119 |
| 120 | ಶ್ರೀಧರ ದತ್ತಾತ್ರೇಯ ಭಟ್ಟ ಕತಗಾಲ | 120 |
| 121 | ಶ್ರೀಧರ ಭಂಡಾರಿ, ಭದ್ರಾಪುರ ಮನೆ | 121 |
| 122 | ಶ್ರೀಧರ ಸುಬ್ರಾಯ ಭಂಡಾರಿ | 122 |
| 123 | ಶ್ರೀಧರ ಸುಬ್ರಾಯ ಭಟ್ಟ, ಕಾಸರಕೋಡ | 123 |
| 124 | ಶ್ರೀನಿವಾಸ ನಾಯ್ಕ ಬೇಳಂಜೆ | 124 |
| 125 | ಶ್ರೀಪಾದ ಮಹಾಬಲೇಶ್ವರ ಹೆಗಡೆ | 125 |
| 126 | ಸಂಜಯ ಕುಮಾರ ಬೆಳೆಯೂರು | 126 |
| 127 | ಸಂಜೀವ ಗಾಣಿಗ, ಹೆರಂಜಾಲು | 127 |
| 128 | ಸಂಜೀವ ಶೆಟ್ಟಿ ಎಚ್. | 128 |
| 129 | ಸತ್ಯನಾರಾಯಣ ಪೂಜಾರಿ ಸೌಡ | 129 |
| 130 | ಸತೀಶ ಹೆಗಡೆ, ಆನೆಗದ್ದೆ | 130 |
| 131 | ಸಂತೋಷ ಕುಮಾರ್, ಹಿಲಿಯಾಣ | 131 |
| 132 | ಸದಾನಂದ ಶೆಣೈ, ಆರ್ಗೋಡು | 132 |
| 133 | ಸದಾನಂದ ಹೆಬ್ಬಾರ್ ಎಚ್.ಎಸ್. | 133 |
| 134 | ಸೀತಾರಾಮ ಭಂಡಾರಿ, ಮಾಳ್ಕೋಡು | 134 |
| 135 | ಸೀತಾರಾಮ ಹೆಗಡೆ, ಉಳವಿ–ಗದ್ದೆಮನೆ | 135 |
| 136 | ಸೀತಾರಾಮ ಹೆಗಡೆ, ಮುಡಾರೆ | 136 |
| 137 | ಸುಧಾಕರ ಕೊಠಾರಿ | 137 |
| 138 | ಸುಧಾಕರ ದೇವಾಡಿಗ, ಉಪ್ಪುಂದ | 138 |
| 139 | ಸುಧಾಕರ ಶೆಟ್ಟಿ, ಕಾನ್ಕಿ | 139 |
| 140 | ಸುಬ್ರಹ್ಮಣ್ಯ ಆಚಾರ್ ನಗರ | 140 |
| 141 | ಸುಬ್ರಹ್ಮಣ್ಯ ಗಣಪತಿ ಹೆಗಡೆ, ಮೂರೂರು | 141 |
| 142 | ಸುಬ್ರಹ್ಮಣ್ಯ ನಾವುಡ, ತೆಂಕಬೆಟ್ಟು | 142 |
| 143 | ಸುಬ್ರಹ್ಮಣ್ಯ ಪ್ರಸಾದ್, ಮುದ್ರಾಡಿ | 143 |
| 144 | ಸುಬ್ರಹ್ಮಣ್ಯ ಭಂಡಾರಿ, ಗುಣವಂತೆ | 144 |
| 145 | ಸುನಿಲ್ ಎಸ್. ಭಂಡಾರಿ | 145 |
| 146 | ಸುರೇಶ್ ಕುಲಾಲ್, ಆವರ್ಸೆ | 146 |
| 147 | ಸುರೇಶ ಗಾಣಿಗ, ಪಡುಕೋಣೆ | 147 |
| 148 | ಸುರೇಶ ಮ್ಯೊಲಿ | 148 |
| 149 | ಸುರೇಶ ರಾವ್, ಬಾರ್ಕೂರು | 149 |
| 150 | ಸೂರ್ಯ ದೇವಾಡಿಗ, ನೀಲಾವರ | 150 |

## ತೆಂಕುತಿಟ್ಟು ಕಲಾವಿದರು


| | | |
|---|---|---|
| 1 | ಅಣ್ಣಿ ಗೌಡ ಕೆ. | 151 |
| 2 | ಅಶೋಕ ಭಟ್ ಉಜಿರೆ | 152 |
| 3 | ಅಶೋಕ್ ಕುಮಾರ್ ಕೊಲೆಕಾಡಿ | 153 |
| 4 | ಆನಂದ ಪುರುಷ ಜೋಡುಕಲ್ಲು | 154 |
| 5 | ಆನಂದ ಯು.ಟಿ. | 155 |
| 6 | ಆನಂದ ಗುಡಿಕಾರ್ ಕೆ. | 156 |
| 7 | ಆನಂದ ಕೊಕ್ಕಡ | 157 |
| 8 | ಆನಂದ ಮುಡಿಪು | 158 |
| 9 | ಈಶ್ವರ್ ಭಟ್ ಕೆ. ಹೆನ್ನಳ | 159 |
| 10 | ಈಶ್ವರ್ ಪ್ರಸಾದ್ ಪಿ.ವಿ. | 160 |
| 11 | ಉಮೇಶ ಎಚ್. ಹೆಬ್ಬಾರ್ | 161 |
| 12 | ಉದಯಕುಮಾರ್ ಧರ್ಮಸ್ಥಳ | 162 |
| 13 | ಉದಯಕುಮಾರ್ ನಾವಡ, ಮಧೂರು | 163 |
| 14 | ಉಮೇಶ ಕುಪ್ಪೆಪದವು | 164 |
| 15 | ಉಮೇಶ ಕೊಳಂಬೆ | 165 |
| 16 | ಎಂ.ಟಿ.ಎಸ್. ಕುಲಾಲ್ | 166 |
| 17 | ಐತಪ್ಪ ಎಸ್. ವರ್ಕಾಡಿ | 167 |
| 18 | ಕಮಲಾಕ್ಷ ಶೆಟ್ಟಿಗಾರ್ | 168 |
| 19 | ಕುಸುಮಾಕರ್ ಮುಡಿಮು | 169 |
| 20 | ಕೃಷ್ಣ ಭಟ್ ಮುಂಡಿಕ್ಕಾ | 170 |
| 21 | ಕೃಷ್ಣ ಮುಡಿಪು | 171 |
| 22 | ಕೃಷ್ಣ ಬಿ. ಶೆಟ್ಟಿ, ಬೆಳ್ತಂಗಡಿ | 172 |
| 23 | ಕೃಷ್ಣ ಭಟ್ ಪೆರುವಾಯಿ | 173 |
| 24 | ಕೃಷ್ಣಮೂರ್ತಿ, ನೀರ್ಮಜೆ | 174 |
| 25 | ಕೃಷ್ಣ ರೈ ನೀರ್ಚಾಲು | 175 |
| 26 | ಕೇಶವ ಶೆಟ್ಟಿಗಾರ್ | 176 |
| 27 | ಕೇಶವ ಶಕ್ತಿನಗರ | 177 |
| 28 | ಗಣಾಧಿರಾಜ ಉಪಾಧ್ಯಾಯ ಎ. ಕೊಲ್ಲಂಗಾನ | 178 |
| 29 | ಗಣೇಶ್ ಶರ್ಮಾ ಕೆ. | 179 |
| 30 | ಗಣೇಶ ಚಂದ್ರ ಮಂಡಲ | 180 |
| 31 | ಗಣೇಶ್ ರೈ, ಅರಳ | 181 |
| 32 | ಗಣೇಶ್ ನಿಡ್ಡೋಡಿ | 182 |
| 33 | ಗಿರೀಶ್ ರಾವ್ ಐ. | 183 |
| 34 | ಗಿರಿಧರ ರಾವ್ | 184 |
| 35 | ಗುಡ್ಡಪ್ಪ ಸುವರ್ಣ | 185 |
| 36 | ಗುರುಪ್ರಸಾದ್ ಬೊಳಿಂಜಡ್ಕ | 186 |

| ಕ್ರ.ಸಂ. | ವಿವರ | ಪುಟ |
|---|---|---|
| 37 | ಗೋವಿಂದ ಭಟ್ ಪದ್ಯಾಣ | 187 |
| 38 | ಗೋಪಾಲಕೃಷ್ಣ ಭಟ್ | 188 |
| 39 | ಗೋಪಾಲಕೃಷ್ಣ ಮಯ್ಯ ಬಾಯಾರು | 189 |
| 40 | ಗಂಗಾಧರ ಕೆಸರುಗದ್ದೆ | 190 |
| 41 | ಚೆನ್ನಪ್ಪ ಗೌಡ (ಉಮೇಶ್ ಬಂಗಾಡಿ) | 191 |
| 42 | ಚೆನ್ನಕೇಶವ ಎಂ. | 192 |
| 43 | ಚಂದ್ರಶೇಖರ ಹೆಗ್ಡೆ ಬಿ. ಎನ್. ಪುತ್ತೂರು | 193 |
| 44 | ಚಂದ್ರಹಾಸ ತುಂಬೆ | 194 |
| 45 | ಜನಾರ್ದನ ಕೊಕ್ಕಡ | 195 |
| 46 | ಜಗದಾಭಿರಾಮ ಸ್ವಾಮಿ ಪಡುಬಿದ್ರಿ | 196 |
| 47 | ಜಗದೀಶ ನಲ್ಕ | 197 |
| 48 | ಜಿ.ಕೆ. ನಾವಡ | 198 |
| 49 | ತನಿಯಪ್ಪ ಗೌಡ, ಕುಂಟಪದವು | 199 |
| 50 | ತಿಮ್ಮಯ್ಯ ಮಾನ್ಯ | 200 |
| 51 | ತಿಮ್ಮಪ್ಪ ಕೆ. ಗುಜರನ್ | 201 |
| 52 | ತಿರುಮಲೇಶ್ವರ ಶಾಸ್ತ್ರಿ ತೆಂಕಬೈಲು | 202 |
| 53 | ದಯಾನಂದ ಶೆಟ್ಟಿಗಾರ್ | 203 |
| 54 | ದಿನೇಶ್ ಕೋಡಪದ | 204 |
| 55 | ದಿವಾಕರ ಆಚಾರ್ಯ ಪೊಳಲಿ | 205 |
| 56 | ದಿವಾಕರ ಬಂಗಾಡಿ | 206 |
| 57 | ದೇರಣ್ಣ ಬಜಪೆ | 207 |
| 58 | ನವೀನ ಮುಂಡಾಜೆ | 208 |
| 59 | ನಾಗಪ್ಪ ಪಡುಮಲೆ | 209 |
| 60 | ನಾಗೇಶ್ ಕುಲಶೇಖರ | 210 |
| 61 | ನಾರಾಯಣ ಪೂಜಾರಿ ಕೆ. ಉಜಿರೆ | 211 |
| 62 | ನಾರಾಯಣ ಬಿ. ಭಟ್ | 212 |
| 63 | ಪದ್ಮನಾಭ ಶೆಟ್ಟಿ | 213 |
| 64 | ಪಿ.ಟಿ. ಪ್ರಸಾದ್ | 214 |
| 65 | ಪುಷ್ಪರಾಜ್ ಜೋಗಿ ನೆಲ್ಯಾಡಿ | 215 |
| 66 | ಪುರುಷೋತ್ತಮ ಬೆಳ್ಳಾರೆ ಕೆ. | 216 |
| 67 | ಪ್ರಸಾದ್ ಶೆಟ್ಟಿ | 217 |
| 68 | ಪ್ರಕಾಶ್ ಕೆ. ವಿಟ್ಲ | 218 |
| 69 | ಪ್ರಫುಲ್ಲ ಚಂದ್ರ ಭಟ್, ನೆಲ್ಯಾಡಿ | 219 |
| 70 | ಪ್ರಶಾಂತ್ ಡಿ. ಶೆಟ್ಟಿ, ನೆಲ್ಯಾಡಿ | 220 |
| 71 | ಪ್ರಶಾಂತ ಕುಮಾರ್ ಕೋಳ್ಯೂರು | 221 |
| 72 | ಪ್ರಶಾಂತ ವಗೆನಾಡು | 222 |
| 73 | ಬಾಬುಗೌಡ ಚಾರ್ಮಾಡಿ | 223 |
| 74 | ಬಾಬುಗೌಡ ತೆಂಕ ಎಕ್ಕಾರು | 224 |

| ಕ್ರಸಂ. | ವಿವರ | ಪುಟ |
|---|---|---|
| 75 | ಬಾಲಕೃಷ್ಣ ಗೌಡ ಯಂ. | 225 |
| 76 | ಬಾಲಕೃಷ್ಣ ಗೌಡ ಮಿಜಾರು | 226 |
| 77 | ಬಾಲಕೃಷ್ಣ ಪಾಟಲಿ ಸೀತಂಗೋಳಿ | 227 |
| 78 | ಬಾಲಕೃಷ್ಣ ಶೆಟ್ಟಿ ಯಂ. | 228 |
| 79 | ಭಾಸ್ಕರ ಕೋಳ್ಯೂರು | 229 |
| 80 | ಭಾಸ್ಕರ ಸರಪಾಡಿ | 230 |
| 81 | ಬೇತಕುಂಞಿ ಕುಲಾಲ್ | 231 |
| 82 | ಮಹಾಬಲ ಭಟ್ ಕೋಳ್ಯೂರು | 232 |
| 83 | ಮಾರಿಯಯ್ಯ ಬಲ್ಲಾಳ್ ಚಿಪ್ಪಾರು. | 233 |
| 84 | ಮನೋಹರ ರೈ ಬೆಳ್ಳಾರೆ | 234 |
| 85 | ಮಾಧವ ಭಂಡಾರಿ, ಕುಳಾಯಿ | 235 |
| 86 | ಮಾಧವ ಬಂಗೇರ ಡಿ. ಕೊಳತ್ತಮಜಲು | 236 |
| 87 | ಮೋನಪ್ಪ ದೇವಾಡಿಗ ಮುಚ್ಚೂರು | 237 |
| 88 | ಮೋಹನ ಶೆಟ್ಟಿ ಬಾಯಾರು | 238 |
| 89 | ಮೋಹನ ಬೆಳ್ಳಿಪಾಡಿ | 239 |
| 90 | ಮಂಜುನಾಥ ಭಟ್ ಕೆ. ಜಿ., ಬೆಳ್ಳಾರೆ | 240 |
| 91 | ಯಶೋಧರ ಗೌಡ | 241 |
| 92 | ಯೋಗೀಶ್ ದಾಸ್ | 242 |
| 93 | ರವಿರಾಜ ಪಣೆಯಾಲ | 243 |
| 94 | ರವಿಶಂಕರ್ ವಿ.ಎಸ್. | 244 |
| 95 | ರಮೇಶ್ ಕುಲಶೇಖರ | 245 |
| 96 | ರಮೇಶ್ ಪಟ್ರಮೆ | 246 |
| 97 | ರಮೇಶ ಬೆಳಾಲು | 247 |
| 98 | ರತ್ನಾಕರ ಆಚಾರ್ ಪಡುಬಿದ್ರೆ | 248 |
| 99 | ರವಿಕುಮಾರ್ ಬಿ. | 249 |
| 100 | ರಾಮ್ ಭಟ್ ಕುದ್ರೆಕೂಡ್ಲು | 250 |
| 101 | ರಾಮ್ ಭಟ್ ಸಬ್ಬನ ಕೋಡಿ | 251 |
| 102 | ರಾಧಕೃಷ್ಣ ನಾವಡ ಮಧೂರು | 252 |
| 103 | ರಾಮಣ್ಣ ಭಂಡಾರಿ | 253 |
| 104 | ರಾಮ ಪಾಟಾಳಿ ಪದವಿನಂಗಡಿ | 254 |
| 105 | ರಾಮಕೃಷ್ಣ ಭಟ್ ಶಿರಂಕಲ್ಲು | 255 |
| 106 | ರಾಮಚಂದ್ರ ಎನ್. ರೈ, ಕಡಬ | 256 |
| 107 | ರಾಮಚಂದ್ರ ಭಟ್, ಮುಂಡ್ರಕಜೆ | 257 |
| 108 | ರಾಧಾಕೃಷ್ಣ ಕಲ್ಲುಗುಂಡಿ | 258 |
| 109 | ರಾಧಾಕೃಷ್ಣ ಶೆಟ್ಟಿ, ಬೆಳ್ತಂಗಡಿ | 259 |
| 110 | ರಾಘವದಾಸ್ ಬಿ. | 260 |
| 111 | ಲಕ್ಷ್ಮೀ ನಾರಾಯಣ ಭಟ್, ಪೂಕಳ | 261 |
| 112 | ಲಕ್ಷ್ಮೀನಾರಾಯಣ ರಾವ್, ಅಡೂರು | 262 |

| ಕ್ರಸಂ. | ವಿವರ | ಪುಟ |
|---|---|---|
| 113 | ಲಕ್ಷ್ಮಣ ಶೆಟ್ಟಿ | 263 |
| 114 | ಲಕ್ಷ್ಮಣ ಮುಚ್ಚೂರು | 264 |
| 115 | ಲಕ್ಷಣ ಆಚಾರ್ಯ ಎಡಮಂಗಳ | 265 |
| 116 | ವಸಂತ ಕಟೀಲ್ | 266 |
| 117 | ವಸಂತ ಗೌಡ ಕಾಯರ್ತಡ್ಕ | 267 |
| 118 | ವಾಮನ ಕುಮಾರ್ ವಿ.ಎ. | 268 |
| 119 | ವಿಠಲ ಶೆಟ್ಟಿಗಾರ್ ಕಾವೂರ್ | 269 |
| 120 | ವಿಶ್ವನಾಥ ಕಾಯರ್ತಡ್ಕ | 270 |
| 121 | ವಿಶ್ವನಾಥ ನಾಯ್ಕ ಎಡನೀರು | 271 |
| 122 | ವೆಂಕಟೇಶ ಆಚಾರ್ಯ | 272 |
| 123 | ಶಶಿಧರ ಶೆಟ್ಟಿ ಪಂಜಕ್ಯೊಕುಡೆ | 273 |
| 124 | ಶಶಿಧರ ಕುಲಾಲ್. ಎಸ್ | 274 |
| 125 | ಶಿವಣ್ಣ ಆಚಾರ್ಯಕುರ್ನಾಡು | 275 |
| 126 | ಶಿವಶಂಕರ ಆರ್.ಎಸ್. | 276 |
| 127 | ಶಿವಶಂಕರ ಭಟ್ ಅಂಬೆಮೂಲೆ | 277 |
| 128 | ಶಂಭು ಕುಮಾರ್ ಕೊಡೆತ್ತೂರು ಕಿನ್ನಿಗೋಳಿ | 278 |
| 129 | ಶ್ರೀಪತಿ ಭಟ್ ಮಜೂರು | 279 |
| 130 | ಶ್ರೀನಿವಾಸ ಸುವರ್ಣ | 280 |
| 131 | ಶ್ರೀಧರ ಮಲ್ಲೂರು ಕುಟ್ಟಿಕಲಾ | 281 |
| 132 | ಶ್ರೀನಿವಾಸ ಕಡಬ | 282 |
| 133 | ಶಂಕರನಾರಾಯಣ ಕಾರಂತ ಸರಪಾಡಿ | 283 |
| 134 | ಸತ್ಯನಾರಾಯಣ ಪುಣಿಚಿತ್ತಾಯ | 284 |
| 135 | ಸತೀಶ್ ಶೆಟ್ಟಿ ಬೋಂದೆಲ್ | 285 |
| 136 | ಸೀತರಾಮ್ ಮಿಜಾರ್ | 286 |
| 137 | ಸುಬ್ರಹ್ಮಣ್ಯ ಭಟ್ ದೇಲಂತ ಮಜಲು | 287 |
| 138 | ಸುಬ್ರಹ್ಮಣ್ಯ ಭಟ್ ಶೇಣಿ | 288 |
| 139 | ಸುಬ್ರಹ್ಮಣ್ಯ ಎಸ್. ಸಜಿಪ | 289 |
| 140 | ಸುಬ್ರಹ್ಮಣ್ಯ ಕುಂದರ್ | 290 |
| 141 | ಸುನೀಲ್ ಕುಮಾರ್ ಪುತ್ತೂರು | 291 |
| 142 | ಸುರೇಂದ್ರ ಮಲ್ಲಿ, ಗುರುಪುರ | 292 |
| 143 | ಸುದರ್ಶನ ವಿ ಶೆಟ್ಟಿ ಪೊಳಲಿ | 293 |
| 144 | ಸೋಮಶೇಖರ ಕೆ. ಭಟ್ | 294 |
| 145 | ಸಂತೋಷ ನಾಯ್ಕ ಎಡನೀರು | 295 |
| 146 | ಸಂತೋಷ ಶೀನ ಶೆಟ್ಟಿ | 296 |
| 147 | ಸಾಂತಪ್ಪ ಆರ್. ಕಡಬ | 297 |
| 148 | ಹರೀಶ್ ಕುಲಾಲ್, ವೇಣೂರು | 298 |
| 149 | ಹರೀಶ್ ಬಂಗಾಡಿ | 299 |
| 150 | ಹೊನ್ನಪ್ಪ ಕುಂಬಾರ | 300 |

# ಬಡಗುತಿಟ್ಟಿನ ಕಲಾವಿದರು



# ಅಣ್ಣಪ್ಪ ಗಾಣಿಗ ಹಾರಾಡಿ

*ಅಂಚೆ : ಸಾಲಿಕೇರಿ, ಉಡುಪಿ ತಾಲೂಕು*
*ಉಡುಪಿ ಜಿಲ್ಲೆ*

ಬಡಗುತಿಟ್ಟು ಯಕ್ಷಗಾನ ರಂಗಭೂಮಿ ಕಂಡ ಪರಂಪರೆಯ ಅಗ್ರಮಾನ್ಯ ಭಾಗವತ ಹಾರಾಡಿ ಅಣ್ಣಪ್ಪ ಗಾಣಿಗ.

ಉಡುಪಿ ಜಿಲ್ಲೆಯ ಹಾರಾಡಿ ಎಂಬಲ್ಲಿ 1945 ರಲ್ಲಿ ಜನಿಸಿದ ಅಣ್ಣಪ್ಪ ಗಾಣಿಗರು ಸುಬ್ಬಗಾಣಿಗ-ಲಚ್ಚ ಗಾಣಿಗ ದಂಪತಿಯ ಸುಪುತ್ರ.

ಇವರ ಓದು ಐದನೇ ತರಗತಿಯವರೆಗೆ ಮಾತ್ರ. ಚಿಕ್ಕಂದಿನಿಂದಲೇ ಯಕ್ಷಕಲೆಯ ಕುರಿತು ಅನ್ಯಾದೃಶ ಆಸಕ್ತಿಯನ್ನು ಮೈಗೂಡಿಸಿಕೊಂಡಿದ್ದ ಅಣ್ಣಪ್ಪ ಗಾಣಿಗರು ತನ್ನ ಮಾವಂದಿರಾದ ಹಾರಾಡಿ ಕುಷ್ಟಗಾಣಿಗ ಹಾಗೂ ಹಾರಾಡಿ ನಾರಾಯಣ ಗಾಣಿಗರ ಕಲಾ ಸಿದ್ಧಿ-ಪ್ರಸಿದ್ಧಿಯಿಂದ ಪ್ರಭಾವಿತರಾಗಿ 12ರ ಹರೆಯದಲ್ಲೇ ಬಣ್ಣದ ಬದುಕು ಕಂಡರು.

ಭಾಗವತ ಅಣ್ಣಪ್ಪ ಗಾಣಿಗರಿಗೆ ಮಾವ ಕುಷ್ಟಗಾಣಿಗರೇ ಆರಂಭಿಕ ಗುರುಗಳು. ಆಮೇಲೆ ಕೋಟ ಮಹಾಬಲ ಕಾರಂತ, ಅಂಪಾರು ವೈದ್ಯರು, ಗುಂಡ್ಮಿ ರಾಮಚಂದ್ರ ನಾವಡರು ಗುರುಗಳಾಗಿ ದೊರೆತು ರಂಗಜ್ಞಾನ, ರಾಗ, ತಾಳಗಳ ಅಭ್ಯಾಸವನ್ನು ಕ್ರಮಬದ್ಧವಾಗಿ ಮುಂದುವರಿಸಲು ಸಾಧ್ಯವಾಯಿತು.

ಹಾರಾಡಿ ರಾಮ ಗಾಣಿಗ, ಕುಷ್ಟ ಗಾಣಿಗ, ಗುರು ವೀರಭದ್ರನಾಯ್ಕ್, ಹೆರಂಜಾಲು ವೆಂಕಟರಮಣ, ಹಿರಿಯಡಕ ಗೋಪಾಲರಾವ್ ಮೊದಲಾದವರ ಒಡನಾಟದಲ್ಲಿ ಬಡಗಿನ ಸಾಂಪ್ರದಾಯಿಕ ಕಲಾ ಮೌಲ್ಯಗಳನ್ನು ರಂಗ ಜೀವನದಲ್ಲಿ ಅಳವಡಿಸಿಕೊಂಡು ಬೆಳೆದ ಗಾಣಿಗರು ವೃತ್ತಿರಂಗದಲ್ಲಿ ಶ್ರೇಷ್ಠ ಭಾಗವತರಾಗಿ ಅಪಾರ ಜನಮಾನ್ಯತೆ ಕಂಡುಕೊಂಡರು.

ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಪೆರ್ಡೂರು, ಕೊಲ್ಲೂರು, ಗೋಳಿಗರಡಿ, ಗುತ್ಯಮ್ಮ, ಹಾಲಾಡಿ, ಕಮಲಶಿಲೆ ಮೇಳಗಳಲ್ಲಿ ಇವರ ಸುದೀರ್ಘ ಕಲಾಯಾತ್ರೆ 53 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.


ಹಾರಾಡಿ ಅಣ್ಣಪ್ಪ ಗಾಣಿಗರು ಸವ್ಯಸಾಚಿ ಕಲಾವಿದರು. ಇವರು ಸಮರ್ಥ ಭಾಗವತರು ಮಾತ್ರವಲ್ಲ, ಪ್ರಬುದ್ಧ ಚಂಡೆ-ಮದ್ದಳೆ ವಾದಕರೂ ಹೌದು. ಯೋಗ್ಯ ವೇಷಧಾರಿಯೂ ಕೂಡ.

ಎಲ್ಲಾ ಪೌರಾಣಿಕ ಪ್ರಸಂಗಗಳ ಕುರಿತು ಅಪಾರ ಅನುಭವವನ್ನು ಹೊಂದಿ ಯಕ್ಷಗಾನದ ಸನಾತನ ಪಾರಂಪರಿಕತೆಯ ನಿಜ ಸೊಗಡನ್ನು ಸಾಕ್ಷಾತ್ಕರಿಸುವ ಹಾರಾಡಿ ಅಣ್ಣಪ್ಪಗಾಣಿಗರು ಅದಮ್ಯ ಕಲೋತ್ಸಾಹದಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

ಹಾರಾಡಿ ಅಣ್ಣಪ್ಪ ಗಾಣಿಗರು ಶಾಂತಾ ಗಾಣಿಗ ಎಂಬರನ್ನು ವರಿಸಿ ಸುರೇಶ, ಸುಖೇಶ, ಸುಜಾತ ಎನ್ನುವ ಮೂರು ಮಂದಿ ಮಕ್ಕಳನ್ನು ಪಡೆದಿದ್ದಾರೆ.

ಭಾಗವತ ಅಣ್ಣಪ್ಪ ಗಾಣಿಗ ಅವರಿಗೆ ಉಡುಪ ಯಕ್ಷಗಾನ ಕಲಾರಂಗದ ವತಿಯಿಂದ ಶ್ರೀ ಐರೋಡಿ ರಾಮಗಾಣಿಗ ಪ್ರಶಸ್ತಿ ದೊರಕಿರುತ್ತದೆ. ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ಪುರಸ್ಕಾರ, ಬೆಂಗಳೂರು, ಹಾರಾಡಿ, ಗರಡಿಮಜಲು ಮೊದಲಾದ ಕಡೆಗಳಲ್ಲಿ ಇವರಿಗೆ ಗೌರವ ಪೂರ್ವಕ ಸಂಮಾನವೂ ಸಂದಿರುತ್ತದೆ.

ಶ್ರೀ ಅಣ್ಣಪ್ಪ ಗಾಣಿಗರು ಇತ್ತೀಚೆಗೆ (2011) ದೈವಾಧೀನರಾಗಿರುತ್ತಾರೆ.



## ಅಣ್ಣಪ್ಪಶೆಟ್ಟಿ ನಗರ

*ಮುಂಡಕೋಡು, ಅಂಚೆ : ನಗರ,*
*ಹೊಸನಗರ ತಾಲೂಕು ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9480543178*

ರಂಗರಸಿಕರ ಕರ್ಣಾಂಗಣಕ್ಕೆ ಇಂಪಿನ ಗಾನಾಮೃತದ ತಂಪೆರೆದ ಪ್ರತಿಭಾವಂತ ಯುವ ಭಾಗವತ ನಗರ ಅಣ್ಣಪ್ಪ ಶೆಟ್ಟಿ.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಗರ ಎಂಬಲ್ಲಿ ನರಸಿಂಹ ಶೆಟ್ಟಿ-ಗಿರಿಜಮ್ಮ ಶೆಡ್ತಿ ದಂಪತಿಯ ಸುಪುತ್ರನಾಗಿ 1-6-1975ರಲ್ಲಿ ಜನಿಸಿದ ಅಣ್ಣಪ್ಪ ಶೆಟ್ಟರು ಎಂಟನೆ ತರಗತಿಯ ಬಳಿಕ ಯಕ್ಷಬದುಕಿಗೆ ಅಂಟಿಕೊಂಡರು.

ನಗರ ಪ್ರಕಾಶ್ ಶೆಟ್ಟಿಯವರ ತುಂಬು ಪ್ರೋತ್ಸಾಹದೊಂದಿಗೆ ಯಕ್ಷಗಾಯನ ಜೀವನ ಯಾನಕ್ಕೆ ಮನಸ್ವೀ ಮುಂದಾದ ಅಣ್ಣಪ್ಪ ಶೆಟ್ಟರು ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಸೇರ್ಪಡೆಗೊಂಡರು. ಅಲ್ಲಿ ದಿ. ಚಂದ್ರಹಾಸ ಪುರಾಣಿಕ ಅವರಲ್ಲಿ ಶಾಸ್ತ್ರೋಕ್ತ ಭಾಗವತಿಕೆ ಶಿಕ್ಷಣ ಪಡೆದು ಯಕ್ಷಲೋಕದ ಹಾಡುಹಕ್ಕಿಯಾದರು. ನೀಲಾವರ ಲಕ್ಷ್ಮೀನಾರಾಯಣಯ್ಯ, ಬನ್ನಂಜೆ ಸಂಜೀವ ಸುವರ್ಣ, ಎ.ಪಿ. ಫಾಟಕ್ ಮೊದಲಾದ ಗುರುಗಳಿಂದಲೂ ಸಮರ್ಪಕ ಕಲಾವಿದ್ಯೆಯನ್ನು ಬೋಧಿಸಿಕೊಂಡರು.

ಕಮಲಶಿಲೆ ಮೇಳದಲ್ಲಿ 8 ವರ್ಷ ಹಾಗೂ ಮಂದಾರ್ತಿ ಮೇಳದಲ್ಲಿ 5 ವರ್ಷ ಕಲಾವ್ಯವಸಾಯ ನಡೆಸಿದ ಶೆಟ್ಟರು ಸಾರ್ಥಕ 13 ವರ್ಷಗಳ ರಂಗಯಾತ್ರೆಯಲ್ಲಿ ಅಪಾರ ಜನಪ್ರಿಯತೆ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಭಾಗವತ ಶೆಟ್ಟರದು ಸುಖವಾದ ಶಾರೀರ. ಪ್ರತೀ ಶ್ರುತಿಯ ಗತಿಯಲ್ಲೂ ಹಿತವೆನಿಸುವ ಸ್ಥಾಯೀ ಭೇದ, ರಾಗಗಳ ಮೇಲೆ ವಿಶೇಷ ಪ್ರಭುತ್ವ, ಪ್ರಖರ ಕವಿತಾಶಕ್ತಿ, ಗರಿಷ್ಠ ರಂಗತಂತ್ರ, ಅಪಾರ ಪ್ರಸಂಗಾನುಭವ, ನಟನ ಪಾತ್ರಾಭಿವ್ಯಕ್ತಿಗೆ ಅನುಕೂಲಕರ ರಂಗಸಾರಥಿಯಾಗುವ ಅಣ್ಣಪ್ಪ ಶೆಟ್ಟರು ಎಲ್ಲಾ ಪುರಾಣ ಕತಾಮೃತಗಳನ್ನು ಸರ್ವ ಸಮರ್ಥವಾಗಿ ಆಡಿಸಬಲ್ಲ ಯೋಗ್ಯತಾಸಂಪನ್ನ ಭಾಗವತರು.

ಅಣ್ಣಪ್ಪ ಶೆಟ್ಟರು ಆಟ-ಕೂಟಗಳೆರಡರಲ್ಲೂ ವಿಜೃಂಭಿಸಬಲ್ಲ ಭಾಗವತರು. ಹೆಜ್ಜೆಗಾರಿಕೆ ಹಾಗೂ ಮದ್ದಳೆಗಾರಿಕೆಯ ಬಗೆಗೂ ಪರಿಣತಿ ಹೊಂದಿದವರು. ಹವ್ಯಾಸಿ ಯಕ್ಷಗಾನ ಸಂಘ-ಸಂಸ್ಥೆಗಳಲ್ಲಿ ಭಾಗವತನಾಗಿ ಭಾಗವಹಿಸುವವರು. ಸಂಪೆಕಟ್ಟೆ ಎಂಬಲ್ಲಿ ಭಾಗವತಿಕೆ ತರಗತಿ ನಡೆಸಿ ಡಾ. ಗಣೇಶ್ ಹಾಗೂ ಧನಂಜಯ ಕುಮಾರ್ ಮೊದಲಾದ ಪ್ರತಿಭಾನ್ವಿತ ಶಿಷ್ಯರನ್ನು ರೂಪಿಸಿದವರು.

ಶ್ರೀಯುತರ ಸಹಧರ್ಮಿಣಿ ಶ್ರೀಮತಿ ಸುಜಾತ. ಓರ್ವ ಸುಪುತ್ರ ನೂತನ್. ಚಿಕ್ಕ ಸಂಸಾರ, ತೃಪ್ತ ಜೀವನ.

ನಿಟ್ಟೂರು, ಹೊಸನಗರ, ಸಂಪೆಕಟ್ಟೆ ಮೊದಲಾದ ಕಡೆಗಳಲ್ಲಿ ಭಾಗವತ ಅಣ್ಣಪ್ಪ ಶೆಟ್ಟರು ಮಾನ-ಸಂಮಾನಕ್ಕೆ ಪಾತ್ರರಾಗಿದ್ದಾರೆ.



## ಅನಂತ ಭಟ್ ಮಾವಿನಮನೆ

*ಅಂಚೆ : ಬಾಸಲ್, ಯಲ್ಲಾಪುರ ತಾಲ್ಲೂಕು*
*ಉತ್ತರಕನ್ನಡ*

ಸೃಷ್ಟಿಶೀಲ ಮದ್ದಳೆಗಾರಿಕೆಯಲ್ಲಿ ದಿಟ್ಟ ಕಲಾವಂತಿಕೆಯನ್ನು ಮೆರೆಯುವ ಪ್ರಬುದ್ಧ ಪ್ರತಿಭೆ ಅನಂತ ಭಟ್ ಮಾವಿನಮನೆ.

ಯಲ್ಲಾಪುರ ತಾಲೂಕಿನ ಮಾವಿನಮನೆ ಎಂಬಲ್ಲಿ 1973ರಲ್ಲಿ ಜನಿಸಿದ ಅನಂತಭಟ್ಟರು, ಕೇಶವ ಭಟ್-ನಾಗವೇಣಿ ದಂಪತಿಯ ಸುಪುತ್ರ. ಹತ್ತನೆ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದ ಇವರು ಸ್ವಯಂ ಪ್ರೇರಣೆ ಹಾಗೂ ಅದಮ್ಯ ಕಲಾಸಕ್ತಿಯಿಂದ ಯಕ್ಷಗಾನ ಲೋಕಕ್ಕೆ ಹೆಜ್ಜೆ ಹಾಕಿದರು.

ಹಿರಿಯ ಭಾಗವತ ಕೆ.ಪಿ. ಹೆಗಡೆಯವರ ಶಿಷ್ಯನಾಗಿ ಸಾಂಪ್ರದಾಯಿಕ ಯಕ್ಷಶಿಕ್ಷಣವನ್ನು ಪಡೆದ ಇವರು ವೃತ್ತಿರಂಗದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದರು. ತದನಂತರ ಮದ್ದಳೆ ವಾದನವನ್ನು ಅಭ್ಯಸಿಸಿ ಮದ್ದಳೆವಾದಕರಾಗಿ ಮುಂದುವರಿದು ಯಶಸ್ಸು ಕಂಡರು.


ಮಂದಾರ್ತಿ, ಮಡಾಮಕ್ಕಿ, ಹಾಲಾಡಿ, ಬಗ್ವಾಡಿ, ಗುತ್ಯಮ್ಮ, ಕಮಲಶಿಲೆ, ಸಿಗಂಧೂರು.... ಮೊದಲಾದ ಮೇಳಗಳಲ್ಲಿ 13 ವರ್ಷ ಕಲಾವ್ಯವಸಾಯ ಮಾಡಿದ ಇವರು ಪ್ರಸ್ತುತ ಅಮೃತೇಶ್ವರಿ ಮೇಳದ ಪ್ರಧಾನ ಮದ್ದಳೆಗಾರರಾಗಿ ಕಲಾಸೇವೆಯಲ್ಲಿದ್ದಾರೆ.

ಪುರಾಣ ಪ್ರಸಂಗಗಳ ಕುರಿತು ವಿಶೇಷ ಅನುಭವವನ್ನು ಹೊಂದಿದ ಇವರು ಪಾತ್ರಗಳ ಔಚಿತ್ಯವನ್ನು ಅರಿತು ಗಾನಪೋಷಕವಾಗಿ ಮದ್ದಳೆಯನ್ನು ನುಡಿಸುವವರು. ರಂಗಾವರಣ ಮುಕ್ಕಾಗದಂತಹ ಸೃಜನಾತ್ಮಕ ಪೆಟ್ಟು-ಮಟ್ಟುಗಳಲ್ಲಿ ರಂಗಸ್ಥಳಕ್ಕೆ ನಾದ ನಿನಾದದ ರಂಗು ತುಂಬುವವರು.

ಮದ್ದಳೆ ವಾದನ ಹಾಗೂ ಭಾಗವತಿಕೆಯ ಕುರಿತು ಪರಿಣತಿಯನ್ನು ಹೊಂದಿದ ಇವರಿಗೆ ಯಕ್ಷಗಾನ ನರ್ತನವೂ ತಿಳಿದಿದೆ.

ಅನಂತ ಭಟ್ ಅವರು ಪ್ರೇಮಾ ಎಂಬವರನ್ನು ವರಿಸಿ ಅಭಿಷೇಕ ಎನ್ನುವ ಸುಪುತ್ರನನ್ನು ಪಡೆದಿರುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿದೆ.



## ಅನಂತ ವೆಂಕಟರಮಣ ಹೆಗಡೆ, ದಂತಳಿಗೆ

*ಅಂಚೆ : ಮಾಗೋಡು ಕಾಲನಿ*
*ಯಲ್ಲಾಪುರ ತಾಲೂಕು, ಉತ್ತರ ಕನ್ನಡ*
*ದೂರವಾಣಿ : 08419-238350*
*9480141322*

ಇನಿದನಿಯ ಪ್ರತಿಭಾವಂತ ಯುವ ಭಾಗವತ ಅನಂತ ಹೆಗಡೆ. ಉತ್ತರ ಕನ್ನಡ ದಂತಳಿಗೆ ಎಂಬಲ್ಲಿ 30-6-1976ರಲ್ಲಿ ಜನಿಸಿದ ಇವರು ವೆಂಕಟರಮಣ ಹೆಗಡೆ ಹಾಗೂ ಕಾವೇರಿ ಹೆಗಡೆ ದಂಪತಿಯ ಸುಪುತ್ರ.

ಅನಂತ ಹೆಗಡೆಯವರ ಚಿಕ್ಕಪ್ಪ ಲಕ್ಷ್ಮೀನಾರಾಯಣ ಹೆಗಡೆಯವರು ಮೃದಂಗವಾದಕರಾಗಿದ್ದರು. ಹಾಗಾಗಿ ಯಕ್ಷಗಾನೀಯ ಹಿನ್ನೆಲೆಯೆಂಬುದು ಈ ಬಗೆಯಲ್ಲೂ ಅನಂತ ಹೆಗಡೆಯವರಿಗೆ ದಕ್ಕಿತು.

ಸ್ವಯಂ ಆಸಕ್ತಿ ಹಾಗೂ ಅಣ್ಣನ ಪ್ರೋತ್ಸಾಹದಿಂದ ಕಲಾಕಲಿಕೆಗೆ ಮುಂದಾದ ಅನಂತ ಹೆಗಡೆ, ವಿದ್ವಾನ್ ಗಣಪತಿ ಭಟ್ಟ, ಕೆರೆಮನೆ ಶಂಭು ಹೆಗಡೆ, ಎ.ಪಿ. ಫಾಟಕ್ ಹಾಗೂ ಭಾಸ್ಕರ ದೇವಾಡಿಗ ಅವರ ಗುರುತನದಲ್ಲಿ ಕಲಾವಿದ್ಯೆಯನ್ನು ತನ್ನದಾಗಿಸಿಕೊಂಡರು.

ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸದ ತರುವಾಯ, ತನ್ನ 20ರ ಹರೆಯದಲ್ಲೇ ಯಕ್ಷಲೋಕ ಪ್ರವೇಶಿಸಿದ ಅನಂತ ಹೆಗಡೆ ಶ್ರೀ ಇಡಗುಂಜಿ ಮೇಳವೊಂದರಲ್ಲೇ ಹತ್ತು ವಸಂತಗಳನ್ನು ಕಳೆದಿರುವುದು ಗಮನಾರ್ಹ.

ಭಾಗವತಿಕೆಯೊಂದಿಗೆ ನೃತ್ಯಕಲೆಯನ್ನು ಇವರು ಬಲ್ಲವರಾಗಿದ್ದು ಧ್ರುವ ಚರಿತ್ರೆಯ ವಿಷ್ಣು, ಗದಾಯುದ್ಧದ ನಕುಲ, ಕಾರ್ತವೀರ್ಯದ ದತ್ತಾತ್ರೆಯ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಖಚಿತ ತಾಳಗಾರಿಕೆ ಹಾಗೂ ಲಯಗಾರಿಕೆಯನ್ನು ಹೊಂದಿದ ಉತ್ಸಾಹಿ ಭಾಗವತ ಹೆಗಡೆಯವರ ರಾಗಶುದ್ಧಿ, ಸಾಹಿತ್ಯ ಸಂಸ್ಕಾರ ಗರಿಷ್ಠ ಮಟ್ಟದ್ದು.

ಅನಂತ ಹೆಗಡೆಯವರ ಧರ್ಮಪತ್ನಿ ಜಯಲಕ್ಷ್ಮೀ ಹೆಗಡೆ. ಓರ್ವ ಸುಪುತ್ರ ಚಿನ್ಮಯ. ಚಿಕ್ಕ-ಚೊಕ್ಕ ಸಂಸಾರಸ್ಥ.

ಶ್ರೀಯುತರ ಸಂಪನ್ನ ಗಾನ ಪ್ರತಿಭೆಗೆ ಶರಣಾದ ಅನೇಕ ಸಂಘ-ಸಂಸ್ಥೆಗಳು ಗೌರವ ಸಂಮಾನದಲ್ಲಿ ಸತ್ಕರಿಸಿವೆ.



## ಅಶ್ವತ್ಥನಾರಾಯಣ ಎಂ.ಪಿ. ಮಾಕರಸು

*ಅಂಚೆ : ದರೆಕೊಪ್ಪ, ಶೃಂಗೇರಿ ತಾಲೂಕು*
*ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 08265-255622*
*9448641525*

ವೈವಿಧ್ಯಮಯ ಪಾತ್ರ ನಿರ್ವಹಣೆಯಲ್ಲಿ ಪ್ರತಿಭಾಪೂರ್ಣತೆಯನ್ನು ಸಾಕಾರಗೊಳಿಸುವ ಸಮರ್ಥ ವೇಷಧಾರಿ ಎಂ.ಪಿ. ಅಶ್ವತ್ಥ ನಾರಾಯಣ.

ಶೃಂಗೇರಿ ತಾಲೂಕಿನ ಮಾಕರಸು ಎಂಬ ಊರಿನಲ್ಲಿ 25-10-1972ರಂದು ಪರಮೇಶ್ವರಯ್ಯ-ಜಯಲಕ್ಷ್ಮೀ ದಂಪತಿಯ ಸುಪುತ್ರನಾಗಿ ಜನಿಸಿದ ಇವರು ಎಸ್.ಎಸ್.ಎಲ್.ಸಿ.ಯ ವರೆಗೆ ವಿದ್ಯಾಭ್ಯಾಸ ಮಾಡಿ ತನ್ನ 24ನೇ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿದರು.

ಎಂ.ಕೆ. ರಮೇಶ ಆಚಾರ್ಯ ಅವರ ಪ್ರೋತ್ಸಾಹ-ಪ್ರೇರಣೆಯಿಂದ ಕಲಾಬದುಕಿಗೆ ಮನವಾಂತ ಅಶ್ವತ್ಥನಾರಾಯಣ ಅವರು ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ಲಕ್ಷ್ಮೀನಾರಾಯಣಯ್ಯ, ಬನ್ನಂಜೆ ಸಂಜೀವ ಸುವರ್ಣ, ಎ.ಪಿ. ಫಾಟಕ್, ಚಂದ್ರಹಾಸ ಪುರಾಣಿಕ ಮೊದಲಾದ ಗುರುಗಳಲ್ಲಿ ಸಶಕ್ತ ರಂಗಶಿಕ್ಷಣ ಪಡೆದರು.

ಶಿರಸಿ, ಮಡಾಮಕ್ಕಿ, ಕಮಲಶಿಲೆ, ಬಗ್ವಾಡಿ, ನಾಗರಕೊಡಿಗೆ, ಮೇಗರವಳ್ಳಿ, ಗುತ್ತಿಯಡೆಹಳ್ಳಿ, ಸಾಲಿಗ್ರಾಮ ಮೊದಲಾದ ಮೇಳಗಳಲ್ಲಿ ಇವರ ಕಲಾಸೇವೆ 15 ವರ್ಷ ಕಂಡಿದೆ.

ವೃತ್ತಿರಂಗಭೂಮಿಯಲ್ಲಿ ಅಶ್ವತ್ಥನಾರಾಯಣರು ಸ್ತ್ರೀವೇಷಧಾರಿಯಾಗಿ, ಪುಂಡುವೇಷಧಾರಿಯಾಗಿ, ರಾಜವೇಷಧಾರಿಯಾಗಿ ರಂಗವಾಳಿದವರು.

ಇವರು ನಿರ್ವಹಿಸಿದ ಮೀನಾಕ್ಷಿ, ಶ್ರೀದೇವಿ, ಶಶಿಪ್ರಭೆ, ದ್ರೌಪದಿ, ಸುಭದ್ರೆ ಮೊದಲಾದ ಸ್ತ್ರೀ ಭೂಮಿಕೆಗಳು, ಅಭಿಮನ್ಯು, ಬಬ್ರುವಾಹನ ಮೊದಲಾದ ಪುಂಡುವೇಷಗಳು, ಕಂಸ, ಮಾಗಧ, ಜಲಂಧರ ಮೊದಲಾದ ಎರಡನೇ ವೇಷಸ್ಥಾನದ ಪ್ರಸಂಗದ ಪ್ರಧಾನ ಪಾತ್ರಗಳು ಜನಮನ ರಂಜಿಸುವಲ್ಲಿ ವಿಶೇಷ ಯಶಸ್ಸು ಪಡೆದಿವೆ.

ತನ್ನಲ್ಲಿರುವ ಕಲಾವಿದ್ಯೆಯನ್ನು ಧಾರೆಯೆರೆದು ಅನೇಕ ಎಳೆಯರನ್ನು ಕಲಾವಿದರನ್ನಾಗಿಸಿದ ಹಿರಿಮೆಯೂ ಇವರಿಗಿದೆ.

ಅಶ್ವತ್ಥನಾರಾಯಣ ಅವರು ಸ್ವರ್ಣ ಎಂಬುವರನ್ನು ವರಿಸಿ ಘನ್ನಗ ಹಾಗೂ ಪ್ರಮೋದ ಎಂಬ ಉಭಯ ಮಕ್ಕಳನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಪ್ರಬುದ್ಧ ಪ್ರತಿಭೆಗೆ ತಲೆಬಾಗಿ ಸಂಮಾನ ಸಲ್ಲಿಸಿವೆ.



## ಆನಂದ ದೇವಾಡಿಗ ಕಮಲಶಿಲೆ

*ತಟ್ಟೆಗುಳಿ, ಕಮಲಶಿಲೆ-ಅಂಚೆ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಆನಂದಮಯ ರಂಗ ಕರ್ಮದಲ್ಲಿ ಮುಂಡುವೇಷಗಳಿಗೆ ಚೈತನ್ಯಪೂರ್ಣ ಪ್ರತಿಭೆಯ ಪ್ರಾಣ ನೀಡಿ, ಗಂಡುಕಲೆಯ ಪ್ರೇಕ್ಷಕ ಬಂಧುಗಳಿಗೆ ರಸಭಾವಾನಂದದ ಹೊಸ ಅನುಭೂತಿಯನ್ನು ನೀಡುವ ಸಮರ್ಥ ಯುವ ಕಲಾವಿದ ಆನಂದ ದೇವಾಡಿಗ ಕಮಲಶಿಲೆ.

ಕುಂದಾಪುರ ತಾಲೂಕಿನ ಕಮಲಶಿಲೆ-ತಟ್ಟೆಗುಳಿ ಎಂಬಲ್ಲಿ ಮಂಜು ದೇವಾಡಿಗ-ಅಕ್ಕಯ್ಯ ದಂಪತಿಯ ಪುತ್ರನಾಗಿ ಜನಿಸಿದ ಆನಂದ ದೇವಾಡಿಗರು ಇದೀಗ 42ರ ವಯೋಮಾನದಲ್ಲಿದ್ದಾರೆ.

ನಾಕಕ್ಕೇ ಓದು ಸಾಕೆನಿಸಿಕೊಂಡ ಆನಂದ ದೇವಾಡಿಗರು 15ನೇ ವರ್ಷದಲ್ಲಿ ಯಕ್ಷರಂಗದ ಹಾದಿ ತುಳಿದವರು. ಹಿರಿಯ ಭಾಗವತ ಆರ್ಗೋಡು ಗೋವಿಂದರಾಯ ಶೆಣೈಯವರು ಇವರ ಕಲಾಬದುಕಿಗೆ ಪ್ರೇರಣಾ ಶಕ್ತಿಯಾಗಿ ಹಾಗೂ ಗುರುವಾಗಿ ಒದಗಿದವರು.

ಆನಂದ ದೇವಾಡಿಗರ ಅಣ್ಣ ಹಿರಿಯ ಹಾಸ್ಯಗಾರ ಕಮಲಶಿಲೆ ಮಹಾಬಲ ದೇವಾಡಿಗರು. ಅವರ ರಂಗಾನುಭವ, ಬೋಧನೆಯೂ ಇವರಿಗೆ ದೊರಕಿರುತ್ತದೆ.

ಹಿರಿಯಡಕ-1, ಮಾರಣಕಟ್ಟೆ-10, ಶಿರಸಿ-ಮಾರಿಕಾಂಬಾ-3, ಮಂದಾರ್ತಿ-1, ಸಾಲಿಗ್ರಾಮ-1, ಸೌಕೂರು-5, ಹಾಲಾಡಿ-4, ಆಜ್ರಿ-ಚೋನಮನೆ-2... ಹೀಗೆ 27 ವರ್ಷಗಳ ಕಲಾಕೃಷಿ ಕಂಡ ದೇವಾಡಿಗರು ಪ್ರಸ್ತುತ ಆಜ್ರಿ ಚೋನಮನೆ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಮುಂಡುವೇಷ-ಪುರುಷವೇಷಗಳಲ್ಲಿ ಆನಂದ ದೇವಾಡಿಗರ ರಂಗವುುಖದ ಕೆಚ್ಚು-ಕಿಚ್ಚು ಕಲಾರಸಿಕರನ್ನು ಮೆಚ್ಚಿಸಿದೆ. ಅಭಿಮನ್ಯು, ಲವ-ಕುಶ, ಮೈಂದ-ದ್ವಿವಿದ, ಬಬ್ರುವಾಹನ, ವೃಷಸೇನ, ಪ್ರಸೇನ, ಲೋಹಿತನೇತ್ರ ಮೊದಲಾದ ಬಡಗಿನ ಮೂರನೇ ವೇಷಗಳಲ್ಲಿ ಆನಂದ ದೇವಾಡಿಗರು ರಂಗಸ್ಥಳದಲ್ಲಿ ಕಲಾಸತ್ವದ ಹುಡಿ ಹಾರಿಸಿದ್ದಾರೆ. ಹಾಗೆಯೇ ಸುಧನ್ವ, ಅರ್ಜುನ, ಶ್ವೇತಕುಮಾರ, ಈಶ್ವರ... ಮೊದಲಾದ ಭೂಮಿಕೆಗಳಲ್ಲೂ ಕಲಾರಸಿಕರಿಂದ ಮನ್ನಣೆಯನ್ನು ಪಡೆದಿದ್ದಾರೆ.

ಲಯಬದ್ಧವಾದ ಚುರುಕಿನ ನೃತ್ಯಗತಿ, ಭಾವಪೂರ್ಣ ಅಭಿನಯ ಕೌಶಲ, ಅನುಭವಪೂರ್ಣ ರಂಗ ವ್ಯವಹಾರ ಹಾಗೂ ಸಾಮ್ಯೃದ್ಧಿಕ ವಚೋಚಮತ್ಕಾರ ಇವರಲ್ಲಿ ಗುರುತಿಸಬಹುದಾಗಿದೆ.

ಆನಂದ ದೇವಾಡಿಗರ ಧರ್ಮಪತ್ನಿ ಬಾಬಿ ಯಾನೆ ಭಾಗ್ಯ. ಪುತ್ರ ಅಕ್ಷಯ, ಪುತ್ರಿ ಅಮೃತ. ಚಿಕ್ಕ-ಚೊಕ್ಕ ಸಂಸಾರ.

ಸ್ಥಳೀಯ ಸಂಘ-ಸಂಸ್ಥೆಗಳಿಂದ ದೇವಾಡಿಗರು ಸಂಮಾನ, ಗೌರವವನ್ನು ಪಡೆದಿರುತ್ತಾರೆ.



## ಈಶ್ವರ ಗೌಡ, ಬುಕ್ಕಡಿಬೈಲು

*ಅಂಚೆ : ನೆಮ್ಮಾರು, ಶೃಂಗೇರಿ ತಾಲೂಕು*
*ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 9242926164*

ಮಾತು, ನೃತ್ಯ, ಅಭಿನಯ, ವೇಷಗಳಲ್ಲಿ ಅಪೂರ್ವ ಸಾಮರಸ್ಯವನ್ನು ಸಾಧಿಸಿ, ಪ್ರಜ್ವಲ ಕಲಾವಂತಿಕೆಯಿಂದ ಪೌರಾಣಿಕ ಕಥಾಭಾಗಗಳ ಪೀಠಿಕಾ ರಾಜವೇಷಗಳನ್ನು ಹಾಗೂ ಮುಂಡಾಸು ವೇಷಗಳನ್ನು ಸರ್ವ ಸಮರ್ಥವಾಗಿ ನಿರ್ವಹಿಸುವ ಅನುಭವಿ ಕಲಾವಿದ ಈಶ್ವರಗೌಡ, ಬುಕ್ಕಡಿ ಬೈಲು.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಮೇಗರವಳ್ಳಿ-ಮುತ್ಥಾನ ಎಂಬಲ್ಲಿ 28-2-1976ರಲ್ಲಿ ಜನಿಸಿದ ಈಶ್ವರಗೌಡ ಅವರು ದೇವಪ್ಪಗೌಡ-ಲಕ್ಷ್ಮಮ್ಮ ದಂಪತಿಯ ಸುಪುತ್ರ.

ಆರ್ಥಿಕ ಅನಾನುಕೂಲತೆಯಿಂದ ಕುಟುಂಬ ನಿರ್ವಹಣೆಯ ಘನ ಜವಾಬ್ದಾರಿಯನ್ನು ಹೊತ್ತ ಇವರು 5ನೇ ತರಗತಿಗೆ ಶರಣು ಹೊಡೆದು 23ರ ಹರೆಯದಲ್ಲೇ ಬಣ್ಣದ ಬದುಕನ್ನು ಆತ್ಮೀಯವಾಗಿಸಿಕೊಂಡರು.

ಮೇಗರವಳ್ಳಿ ರಾಮನಾಯ್ಕ ಎಂಬವರ ಪ್ರೇರಣೆ-ಪ್ರೋತ್ಸಾಹವನ್ನು ಪಡೆದು ವೃತ್ತಿರಂಗವನ್ನು ಪ್ರವೇಶಿಸಿದ ಈಶ್ವರ ಗೌಡರು ಯಕ್ಷಗಾನ ರಂಗಸ್ಥಳವನ್ನೇ ರಂಗಶಾಲೆಯಾಗಿಸಿಕೊಂಡು ಹಿರಿಯ ಕಲಾವಿದರ ಒಡನಾಟದಲ್ಲಿ ಕಲಾವಿದ್ಯೆಯನ್ನು ಗಳಿಸಿಕೊಂಡರು.

ಮೇಗರವಳ್ಳಿ, ಮಡಾಮಕ್ಕಿ, ಅಮೃತೇಶ್ವರಿ, ಮಂದಾರ್ತಿ ಮೇಳಗಳಲ್ಲಿ ಇವರ ಕಲಾವ್ಯವಸಾಯ 12 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುತ್ತದೆ. ಮೇಗರವಳ್ಳಿ ಮೇಳದ ಯಜಮಾನರಾಗಿ 1 ವರ್ಷ ದುಡಿದ ಅನುಭವವೂ ಈಶ್ವರ ಗೌಡರಿಗಿದೆ.

ಉತ್ತಮ ವಾಕ್ ಪಾಂಡಿತ್ಯ, ಚುರುಕಿನ ನೃತ್ಯವೈಖರಿ, ಸುಸ್ಪಷ್ಟ ಅಭಿನಯ ಕೌಶಲದಿಂದ ನಿರ್ವಹಣಾ ಪಾತ್ರಗಳಿಗೆ ಇವರು ಜೀವ ತುಂಬುತ್ತಾರೆ.

ಎಲ್ಲಾ ಪೌರಾಣಿಕ-ಹೊಸ ಪ್ರಸಂಗಗಳ ಪೀಠಿಕಾ ರಾಜವೇಷಗಳಲ್ಲಿ ಇವರ ಕಲಾಭಿವ್ಯಕ್ತಿ ಗಮನೀಯ. ಹಾಗೆಯೇ ಕೆಂಪು ಮಂಡಾಸಿನ ವೇಷಗಳಲ್ಲಿ ಇವರ ಕಲಾಪ್ರತಿಭಾ ಪ್ರಕಟಣೆ ರಸರಂಜನೀಯ.

ದೇವೇಂದ್ರ, ಕಮಲಭೂಪ, ಹಂಸಧ್ವಜ, ಕೌರವ, ಕೌಂಡ್ಲೀಕ, ವಿದ್ಯುನ್ಮಾಲಿ, ಪ್ರದ್ಯುಮ್ನ, ಮದನ ಮೊದಲಾದ ಪಾತ್ರಗಳಲ್ಲಿ ಈಶ್ವರ ಗೌಡರ ಅಭಿನಯ ಮನೋಜ್ಞ.

ಅನುಭವಿ ಯಕ್ಷನಟ ಈಶ್ವರ ಗೌಡರ ಧರ್ಮಪತ್ನಿ ಹೇಮಾವತಿ. ಪ್ರಜ್ವಲ್ ಹಾಗೂ ಪ್ರತೀಕ್ ಇವರ ಉಭಯ ಪುತ್ರರು.

ಅನೇಕ ಸ್ಥಳೀಯ ಸಂಘ-ಸಂಸ್ಥೆಗಳಿಂದ ಈಶ್ವರಗೌಡ ಅವರು ಗೌರವಪೂರ್ಣ ಸಂಮಾನಗಳನ್ನು ಪಡೆದಿರುತ್ತಾರೆ.



## ಈಶ್ವರ ನಾಯ್ಕ ಮಂಕಿ

*ಅಂಚೆ : ಅನಂತ ವಾಡಿ*
*ಹೊನ್ನಾವರ ತಾಲೂಕು (ಉತ್ತರ ಕನ್ನಡ)*
*ದೂರವಾಣಿ : 08387-287090*
*9900801866*

ಸಮಷ್ಟಿ ಕಲೆಯ ಸಮುಜ್ವಲ ಪ್ರತಿಭೆಯಾಗಿ ಸಮರ್ಪಕ ಪಾತ್ರ ಪೋಷಣೆಯಿಂದ ಸಮರ್ಥ ವೇಷಧಾರಿಯಾಗಿ ಗುರುತಿಸಿಕೊಂಡ ಯುವ ಕಲಾವಿದ ಮಂಕಿ ಈಶ್ವರ ನಾಯ್ಕ.

ಉತ್ತರಕನ್ನಡದ ಮಂಕಿ-ಶೇಡಿಮಲೆ ಎಂಬಲ್ಲಿ ಹನುಮಂತ ನಾಯ್ಕ-ಲಕ್ಷ್ಮೀ ದಂಪತಿಯ ಸುಪುತ್ರನಾಗಿ 1-4-1977ರಲ್ಲಿ ಜನಿಸಿದ ಈಶ್ವರನಾಯ್ಕ ಅವರು ಎಳವೆಯಲ್ಲಿಯೇ ಯಕ್ಷಕಲೆಯ ಕುರಿತು ಅದಮ್ಯ ಆಸಕ್ತಿ ಮೈಗೂಡಿಸಿಕೊಂಡವರು.

ಪಿ.ಯು.ಸಿ. ವ್ಯಾಸಂಗದ ಬಳಿಕ ತನ್ನ 20ರ ಹರೆಯದಲ್ಲೇ ಯಕ್ಷಗಾನ ಬದುಕು ಕಂಡ ಇವರು ಪೆರಂಜಾಲು ಗೋಪಾಲ ಗಾಣಿಗ, ದೇವದಾಸ್‌ರಾವ್ ಕೂಡ್ಲಿ ಮೊದಲಾದವರ ಗುರುತನದಲ್ಲಿ ಸುಯೋಗ್ಯ ಕಲಾವಿದರಾಗಿ ರೂಪುಗೊಂಡರು.

ಗುಂಡಬಾಳ, ಅಮೃತೇಶ್ವರಿ, ಬಗ್ವಾಡಿ, ಸಾಲಿಗ್ರಾಮ, ಪೆರ್ಡೂರು ಮೇಳಗಳಲ್ಲಿ ಇವರ ಕಲಾಯಾತ್ರೆ 13 ವರ್ಷಗಳನ್ನು ಪೂರೈಸಿರುತ್ತದೆ.

ಪರಿಶೋಭಿತ ವೇಷ ವೈಭವ, ಪರಿಶ್ರಮಿಕ ಕಲಾಕೃಷಿ, ಪರಿಮಾಣಯುಕ್ತ ನೃತ್ಯಾಭಿನಯ, ಪರಿಣಾಮಕಾರಿ ಪಾತ್ರ ಪೋಷಣೆ, ಪರಿಧಿ ಮೀರಿದ ರಂಗವ್ಯವಹಾರ, ಪರಿಪುಷ್ಟಕರ ಸಾಹಿತ್ಯ, ಹಾಗೂ ಪರಿಶುದ್ಧ ವಾಗ್ಮಿತೆಯಿಂದ ಯಕ್ಷರಂಗಸ್ಥಳದಲ್ಲಿ ವಿಜೃಂಭಿಸುವ ಈಶ್ವರನಾಯ್ಕರು ಬಡಗುತಿಟ್ಟಿನ ಸಮರ್ಥ ಮೂರನೇ ವೇಷಧಾರಿಯಾಗಿ ಅಪಾರ ಜನಮಾನ್ಯತೆ ಪಡೆದವರು.

ಅಭಿಮನ್ಯು, ಬಬ್ರುವಾಹನ, ಲವ-ಕುಶ, ಪುಷ್ಕಳ, ವೃಷಸೇನ... ಮೊದಲಾದ ಪುಂಡುವೇಷಗಳಲ್ಲಿ ರಂಗಮಂಚದಲ್ಲಿ ಅಗ್ನಿಚೆಂಡಾಗುವ ನಾಯ್ಕರು ಶ್ರೀಕೃಷ್ಣ ಪಾತ್ರಧಾರಿಯಾದರೆ ಮಧುರ ಮಂದಾಕಿನಿಯ ಮಂಜುಳ ಲಾಸ್ಯ. ಹಂಸಧ್ವಜ, ಪ್ರತಾಪಸೇನ, ಭೂಮಿಕೆಯಲ್ಲಿದ್ದರೆ ಗಂಭೀರ ರಾಜಪೋಷಕತ್ವ. ಶ್ರೀರಾಮ, ಸುಧನ್ವ, ಚಂದ್ರಹಾಸ, ದೇವವ್ರತನಾದರೆ ಪರಮೋಚ್ಚ ಕಲಾಪ್ರತಿಭೆಯ ಪೌರುಷೇಯ ವರ್ಚಸ್ಸು ರಸಪೂರ್ಣವಾಗಿ ಪ್ರಕಟಪಡಿಸುತ್ತಾರೆ.

ಚಂದ್ರಕಲಾ ಎಂಬವರನ್ನು ವರಿಸಿದ ಈಶ್ವರನಾಯ್ಕರು ಮೇಘರಾಜ ಹಾಗೂ ಮಾನಸ ಎಂಬ ಉಭಯ ಮಕ್ಕಳನ್ನು ಪಡೆದಿರುತ್ತಾರೆ.

ಈಗಾಗಲೇ ಇವರಿಗೆ ಪೂರ್ಣಚಂದ್ರ ಪ್ರತಿಷ್ಠಾನದ ವತಿಯಿಂದ 'ಕೊಂಡದಕುಳಿ ರಾಮ-ಲಕ್ಷ್ಮಣ ಹೆಗಡೆ ಜನ್ಮ ಶತಮಾನೋತ್ಸವ ಪ್ರಶಸ್ತಿ' ಸೇರಿದಂತೆ ಹಲವಾರು ಸಂಮಾನ-ಗೌರವಗಳು ದೊರಕಿವೆ.



# ಉದಯ ಕುಮಾರ್ ಬಾರ್ಕೂರು

*'ಜನನಿ- ಅಮೃತೇಶ್ವರಿ ಕೃಪಾ'*
*ಹೊಸಾಳ ಗ್ರಾಮ, ಅಂಚೆ : ಬಾರ್ಕೂರು,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9740541694*

ಸಾಮೃದ್ಧಿಕ ಸ್ವರ, ಸಶಕ್ತ ರಂಗತಂತ್ರ, ಸುಸಂಸ್ಕೃತ ಪ್ರಸಂಗಾನುಭವ ಹಾಗೂ ಸುಯೋಗ್ಯ ಪೌರಾಣಿಕ ಪ್ರಜ್ಞೆಯಲ್ಲಿ ಸದಭಿರುಚಿಯ ಯಕ್ಷಪ್ರೇಕ್ಷಕರ ಮನಗೆದ್ದ ಸಮರ್ಥ ಯುವ ಭಾಗವತ ಉದಯ ಕುಮಾರ್ ಬಾರ್ಕೂರು.

ಉಡುಪಿ ತಾಲೂಕಿನ ಬಾರ್ಕೂರು-ಹೊಸಾಳ ಎಂಬಲ್ಲಿ 11-10-1983ರಲ್ಲಿ ಜನಿಸಿದ ಉದಯಕುಮಾರ್ ಅವರು ಮಾಧವ ಪೂಜಾರಿ ಹಾಗೂ ಗಿರಿಜಾ ದಂಪತಿಯ ಸುಪುತ್ರ. ಎಸ್.ಎಸ್.ಎಲ್.ಸಿ. ವ್ಯಾಸಂಗದ ಬಳಿಕ ಅಂದರೆ ತನ್ನ 16ನೇ ವಯಸ್ಸಿನಲ್ಲಿಯೇ ಇವರು ಯಕ್ಷಗಾನ ಲೋಕಕ್ಕೆ ಪಾದಾರ್ಪಣೆ ಮಾಡಿದರು.

ತಂದೆ-ತಾಯಿಯ ಪ್ರೇರಣೆ ಹಾಗೂ ಹಿರಿಯ ಕಲಾವಿದ ಐರೋಡಿ ಗೋವಿಂದಪ್ಪನವರ ಸಹಕಾರದೊಂದಿಗೆ ವೃತ್ತಿರಂಗದ ಹಾದಿ ಹಿಡಿದ ಇವರು ಕೆ.ಪಿ. ಹೆಗಡೆಯವರ ಶಿಷ್ಯನಾಗಿ ತಾಳದೀಕ್ಷೆ ಪಡೆದು ಭಾಗವತಿಕೆ ಶಿಕ್ಷಣ ಪಡೆದರು.

ಐರೋಡಿ ಗೋವಿಂದಪ್ಪ, ದಿ. ವೇದವ್ಯಾಸ ಶೆಣೈ, ಗಣೇಶ ಭಂಡಾರಿ ಹಾಗೂ ಭಾಗವತ ನಾರಾಯಣ ಶಬರಾಯ ಮೊದಲಾದವರಿಂದ ಯಕ್ಷಮಾರ್ಗದರ್ಶನ, ಅನುಭವ ದ್ರವ್ಯವನ್ನು ಗಳಿಸಿಕೊಂಡ ಇವರು ಸುಯೋಗ್ಯ ಭಾಗವತರಾಗಿ ಗುರುತಿಸಿಕೊಂಡವರು.

ಹಳೇ ಪ್ರಸಂಗಕ್ಕೆ ಒಪ್ಪುವ, ನವೀನ ಪ್ರಸಂಗಗಳಿಗೆ ಒಗ್ಗುವ ಉದಯಕುಮಾರ್ ಅವರ ಭಾಗವತಿಕೆ ಪ್ರೌಢ ಕಳೆಯೊಂದಿಗೆ ರಂಗಸ್ಥಳದಲ್ಲಿ ರಸಾತ್ಮಕ ವಾತಾವರಣವನ್ನು ಸೃಷ್ಟಿಮಾಡುತ್ತದೆ. ಪಾತ್ರಗಳನ್ನು ಗರಿಷ್ಠಮಟ್ಟದಲ್ಲಿ ರಂಗಸ್ಥಳದಲ್ಲಿ ಮೆರೆಸುವ ಇವರ ಭಾಗವತಿಕೆಯಿಂದ ಪ್ರಸಂಗಕ್ಕೆ, ಒಂದು ಸಮುಚಿತ ಹದ ಹಾಗೂ ಪ್ರೇಕ್ಷಕರಿಗೂ ಸ್ವಾದಿಷ್ಟ ಮುದ ದೊರಕುತ್ತದೆ.

ಅಮೃತೇಶ್ವರಿ ಮೇಳದ ಮೂಲಕವೇ ವೃತ್ತಿ ಬದುಕು ಆರಂಭಿಸಿ ಈಗ ಅದೇ ಮೇಳದಲ್ಲಿ ಮುಂದುವರಿಯುತ್ತಿರುವ ಉದಯಕುಮಾರ್ ಅವರು ಕಲಾವ್ಯವಸಾಯದಲ್ಲಿ ಸಾರ್ಥಕ ಹತ್ತು ವರ್ಷಗಳನ್ನು ಪ್ರಗತಿಪೂರ್ಣವಾಗಿ ಕಳೆದಿದ್ದಾರೆ.

ಶ್ರೀ ಅಮೃತೇಶ್ವರಿ ಮೇಳದ ಭಾಗವತರಾಗಿಯೂ, ಮೆನೇಜರರಾಗಿಯೂ ಪ್ರಸ್ತುತ ಇವರು ಕಾರ್ಯ ನಿರತರಾಗಿದ್ದಾರೆ.

ದೂರದ ಮುಂಬೈ, ಬೆಂಗಳೂರು ಸೇರಿದಂತೆ ಹಲವಾರು ನಗರ ಪ್ರದೇಶಗಳಲ್ಲಿ ಇವರ ಗಾನಪ್ರತಿಭೆ ಪ್ರಕಾಶಮಾನವಾಗಿದೆ. ಅನೇಕ ಆಟ-ಕೂಟಗಳಲ್ಲೂ, ಹವ್ಯಾಸೀ ಸಂಘ-ಸಂಸ್ಥೆಗಳ ತರಬೇತಿದಾರರಾಗಿಯೂ ಇವರು ಭಾಗವಹಿಸುತ್ತಿದ್ದಾರೆ.

ಡಾ. ರಾಜ್ ಕುಮಾರ್ ಸಂಸ್ಮರಣ ಸಮಿತಿ, ಬೆಂಗಳೂರು, ಉಡುಪಿ ಬಿಲ್ಲವ ಯಕ್ಷ ಕಲೋತ್ಸವ, ಹೇರಾಡಿ-ಅತುಲ ಯುವಕ ಸಂಘ, ಮಾಸ್ತಿ ದುರ್ಗಾ ಚಿಣ್ಣರ ಬಳಗ ಧರ್ಮಶಾಲೆ ಬಾರ್ಕೂರು, ಬಿಲ್ಲವ ಸಂಘ ಬಾರ್ಕೂರು ಸೇರಿದಂತೆ ಹಲವಾರು ಸಂಘ-ಸಂಸ್ಥೆಗಳು ಪ್ರತಿಭಾನ್ವಿತ ಭಾಗವತ ಉದಯ ಕುಮಾರ್ ಬಾರ್ಕೂರು ಅವರನ್ನು ಸಂಮಾನಿಸಿವೆ.



## ಉದಯ ಕುಮಾರ್ ತಾರೆಕೊಡ್ಲು

*ಅಂಚೆ : ಸಿದ್ಧಾಪುರ, ಕುಂದಾಪುರ ತಾಲ್ಲೂಕು*
*ಉಡುಪಿ ಜಿಲ್ಲೆ*
*ದೂರವಾಣಿ : 9482041040*

ದಣಿವಿರದ ರಂಗ ದುಡಿಮೆಯಲ್ಲಿ ಉತ್ಸಾಹಭರಿತ ಕಲಾಪ್ರತಿಭೆಯನ್ನು ಮೆರೆಸುವ ಯುವ ಕಲಾವಿದ ಉದಯಕುಮಾರ್ ತಾರೆಕೊಡ್ಲು.

ಕುಂದಾಪುರ ತಾಲೂಕಿನ ತಾರೆಕೊಡ್ಲು ಎಂಬ ಊರಿನಲ್ಲಿ 7-8-1974ರಲ್ಲಿ ಜನಿಸಿದ ಉದಯಕುಮಾರ್ ಅವರು ಮಂಜುನಾಥ ರಾವ್-ವೇದಾವತಿ ದಂಪತಿಯ ಸುಪುತ್ರ.

6ನೇ ತರಗತಿಯವರೆಗೆ ಶಾಲಾ ಶಿಕ್ಷಣವನ್ನು ಪಡೆದ ಇವರು ತನ್ನ 17ರ ಹರೆಯದಲ್ಲಿ ಯಕ್ಷಗಾನ ರಂಗಲೋಕವನ್ನು ಪ್ರವೇಶಿಸಿದರು.

ಪರಿಸರದಲ್ಲಿ ಜರುಗುತ್ತಿದ್ದ ಬಯಲಾಟಗಳ ನಿರಂತರ ನೋಟದಿಂದ ಕಲಾಸಕ್ತಿಯನ್ನು ಕುದುರಿಸಿಕೊಂಡ ಇವರು ಹಾಸ್ಯಕಲಾವಿದ ಮಹಾಬಲ ದೇವಾಡಿಗ, ಸುದರ್ಶನ ಐತಾಳ್, ಕೃಷ್ಣಮೂರ್ತಿ ಭಟ್, ಸಿದ್ಧಾಪುರ ಹಾಗೂ ಜನಸಾಲೆ ನಾರಾಯಣ ಶೆಟ್ಟರ ಪ್ರೋತ್ಸಾಹ-ಪ್ರೇರಣೆಯೊಂದಿಗೆ ವ್ಯವಸಾಯ ರಂಗಮುಖಿಯಾದರು.

ಮಹಾಬಲ ದೇವಾಡಿಗ, ಹೆನ್ನಾಬೈಲು ಸಂಜೀವಶೆಟ್ಟಿ ಹಾಗೂ ಸುದರ್ಶನ ಐತಾಳರು ಇವರಿಗೆ ಸಮರ್ಪಕ ಕಲಾವಿದ್ಯೆಯನ್ನು ನೀಡಿ ಕಲಾವಿದನನ್ನಾಗಿ ಮಾಡಿದರು.

ಮಡಾಮಕ್ಕಿ ಮೇಳದಲ್ಲಿ 1 ವರ್ಷ, ಕಲಾವ್ಯಸಾಯ ಮಾಡಿದ ಉದಯ ಕುಮಾರ್ ಇದೀಗ 17 ವರ್ಷಗಳಿಂದ ಕಮಲಶಿಲೆ ಮೇಳದ ಕಲಾವಿದರಾಗಿ ದುಡಿಯುವುದರೊಂದಿಗೆ ಕಲಾಪ್ರಪಂಚದಲ್ಲಿ 18 ವರ್ಷಗಳ ರಂಗ ಕೃಷಿಯನ್ನು ಕಂಡು ಉತ್ತಮ ಹೆಸರು ಗಳಿಸಿದ್ದಾರೆ.

ಶ್ರೀಕೃಷ್ಣ, ಅಭಿಮನ್ಯು, ಶ್ರೀರಾಮ, ಚಂದ್ರಹಾಸ, ಬಬ್ರುವಾಹನ, ಇಂದ್ರಜಿತು, ಪುಷ್ಕಳ, ಲವ-ಕುಶ, ವೃಷಸೇನ, ಶ್ವೇತ ಕುಮಾರ, ಬಾಲಕಂಸ, ಅರ್ಜುನ... ಮೊದಲಾದ ಪುಂಡುವೇಷ ಹಾಗೂ ಪುರುಷ ವೇಷಗಳ ನಿರ್ವಹಣೆ ಇವರನ್ನು ಗುರುತಿಸುವಂತೆ ಮಾಡಿದೆ.

ಉದಯಕುಮಾರ್ ಅವರ ಸಹಧರ್ಮಿಣಿ ಸುಮಲತಾ. ಸಚಿನ್ ಹಾಗೂ ಉಲ್ಲಾಸ್ ಇವರ ಉಭಯ ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



# ಉದಯ ಕುಮಾರ ಶೆಟ್ಟಿ ಆಜ್ರಿ

*ಕೆಲಾ ಬಡಾಬೆಟ್ಟು ಮನೆ,*
*ಅಂಚೆ : ಅಮವಾಸ್ಯೆ ಬೈಲು,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9741509162*

ಪ್ರಖರ ಪ್ರತಿಭೆಯ ಪುರುಷವೇಷಧಾರಿಯಾಗಿ ಬಡಗುತಿಟ್ಟು ಯಕ್ಷರಂಗಸ್ಥಳದಲ್ಲಿ ಪ್ರಜ್ವಲಿಸುವ ಯುವ ಕಲಾವಿದ ಆಜ್ರಿ ಉದಯಕುಮಾರ ಶೆಟ್ಟಿ.

ಕುಂದಾಪುರ ತಾಲೂಕಿನ ಆಜ್ರಿ ಎಂಬಲ್ಲಿ 22-4-1974ರಲ್ಲಿ ಜನಿಸಿದ ಉದಯ ಕುಮಾರ ಶೆಟ್ಟರು ರಘುರಾಮ ಶೆಟ್ಟಿ-ಪಾರ್ವತಿ ಶೆಡ್ತಿ ದಂಪತಿಯ ಸುಪುತ್ರ.

ಬಾಲ್ಯದಿಂದಲೇ ಯಕ್ಷಗಾನ ಕಲೆಯ ಕುರಿತು ಅನ್ಯಾದೃಶ ಆಸಕ್ತಿಯನ್ನು ಮೈತುಂಬಿಕೊಂಡ ಉದಯ ಕುಮಾರ್ ಅವರು ಕಲಾವಿದರಾಗಿದ್ದ ತನ್ನ ಮಾವ ಆಜ್ರಿ ವಿಠಲ ಶೆಟ್ಟಿಯವರ ಪ್ರೋತ್ಸಾಹ ಮಾರ್ಗದರ್ಶನದಲ್ಲಿ ವೃತ್ತಿರಂಗವನ್ನು ಪ್ರವೇಶಿಸಿದರು.

5ನೇ ತರಗತಿಗೇ ಓದಿಗೆ ಶರಣು ಹೊಡೆದು 11ನೇ ವಯಸ್ಸಿನಲ್ಲೇ ಕಲಾಜೀವನದ ಹಾದಿ ಹಿಡಿದ ಇವರಿಗೆ ಹಿರಿಯ ವೇಷಧಾರಿ ಆರ್ಗೋಡು ಮೋಹನದಾಸ ಶೆಣೈಯವರು ಯಕ್ಷ ವಿದ್ಯೆಯನ್ನು ಬೋಧಿಸಿದರು.

ಕಮಲಶಿಲೆ-10, ಸೌಕೂರು-1, ಮಾರಣಕಟ್ಟೆ-1, ಮಂದಾರ್ತಿ-12, ಬಚ್ಚಗಾರು-1... ಹೀಗೆ ಆಜ್ರಿ ಉದಯಕುಮಾರರ ಕಲಾಬದುಕು ಸಾರ್ಥಕ ರಜತ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಪಸ್ತುತ ಶೆಟ್ಟರು ಮಂದಾರ್ತಿ ಮೇಳದ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸದೃಢ ಆಳಂಗ, ಗಂಭೀರ ಸ್ವರಭಾರ, ಸುಂದರ ವೇಷಾಲಂಕಾರ, ಸುಲಲಿತ ನೃತ್ಯಾಭಿನಯ ಹಾಗೂ ಅನುಭವಬದ್ಧ ರಂಗ ವೈಖರಿಯಲ್ಲಿ ಕಂಗೊಳಿಸುವ ಉದಯಕುಮಾರ ಶೆಟ್ಟರು ಖಳ ಸ್ವಭಾವದ ಪೌರಾಣಿಕ ಪಾತ್ರಗಳ ನಿರ್ವಹಣೆಯಲ್ಲಿ ವಿಶೇಷವಾಗಿ ಗಮನ ಸೆಳೆಯುತ್ತಾರೆ.

ರುದ್ರಕೋಪ, ಚಂದ್ರಹಾಸ, ಸಾಲ್ವ, ಕೌರವ, ವಿಭೀಷಣ, ಮಹಿಷಾಸುರ, ವೀರಮಣಿ, ರಾವಣ, ಜರಾಸಂಧ, ಕೀಚಕ... ಮೊದಲಾದ ಭೂಮಿಕೆಗಳಿಗೆ ಉದಯಕುಮಾರ ಶೆಟ್ಟರು ತನ್ನದೇ ವಿಶಿಷ್ಟ ಮೆರುಗು ನೀಡಿ ಜನಮಾನ್ಯತೆ ಗಳಿಸಿದ್ದಾರೆ.

ಆಜ್ರಿ ಉದಯಕುಮಾರ ಶೆಟ್ಟರ ಸಹಧರ್ಮಿಣಿ ಜ್ಯೋತಿ ಶೆಡ್ತಿ. ಪ್ರೀತಿ, ಸ್ವಾತಿ, ಕಾಂತಿ ಇವರ ಪುತ್ರಿಯರು.

ಸ್ಥಳೀಯ ಸಂಘ ಸಂಸ್ಥೆಗಳಿಂದ ಯುವ ಕಲಾವಿದ ಆಜ್ರಿ ಉದಯಕುಮಾರ ಶೆಟ್ಟರು ಸಂಮಾನಿತರಾಗಿದ್ದಾರೆ.



## ಉದಯ ಕುಮಾರ ಶೆಟ್ಟಿ, ಚೌಕುಳುಮಕ್ಕಿ

*ಅಂಚೆ : ಆಜ್ರಿ, ಕುಂದಾಪುರ ತಾಲೂಕು*
*ಉಡುಪಿ ಜಿಲ್ಲೆ*
*ದೂರವಾಣಿ : 9900768632*

ಮೂರನೇ ವೇಷದ ವೀರತನದಲ್ಲಿ ರಂಗಸ್ಥಳದಲ್ಲಿ ಕಲಾಪ್ರತಿಭೆಯ ರಂಗು ತುಂಬುವ ಯುವ ಕಲಾವಿದ ಉದಯಕುಮಾರ ಶೆಟ್ಟಿ.

ಕುಂದಾಪುರ ತಾಲೂಕಿನ ಆಜ್ರಿ-ಚೌಕುಳು ಮಕ್ಕಿ ಎಂಬಲ್ಲಿ ಕುಷ್ಟಪ್ಪ ಶೆಟ್ಟಿ-ಕೊರಗಮ್ಮ ಶೆಡ್ತಿ ದಂಪತಿಯ ಸುಪುತ್ರನಾಗಿ ಜನಿಸಿದ ಉದಯ ಕುಮಾರ ಶೆಟ್ಟರಿಗೆ ಇದೀಗ 29ರ ಹರೆಯ.

7ನೇ ತರಗತಿಯವರೆಗೆ ಶಾಲಾ ವಿದ್ಯಾಭ್ಯಾಸಮಾಡಿ 15ನೇ ವಯಸ್ಸಿನಲ್ಲೇ ಕಲಾಜೀವನಕ್ಕೆ ಅಡಿಯಿಕ್ಕಿದ ಇವರಿಗೆ ತಂದೆ-ತಾಯಿಯೇ ಪ್ರೇರಣಾಶಕ್ತಿ.

ಹಿರಿಯ ಕಲಾವಿದ ಹಳ್ಳಾಡಿ ಕುಷ್ಟನವರ ಶಿಷ್ಯನಾಗಿ ಉನ್ನತ ಯಕ್ಷವಿದ್ಯೆಯನ್ನು ಗಳಿಸಿಕೊಂಡ ಇವರು ವೃತ್ತಿರಂಗದಲ್ಲಿ ಸಮರ್ಥ ಮುಂಡುವೇಷಧಾರಿಯಾಗಿ ಜನಪ್ರಿಯತೆ ಕಂಡವರು.

ಮಾರಣಕಟ್ಟೆ ಹಾಗೂ ಹಾಲಾಡಿ ಮೇಳಗಳಲ್ಲಿ ದುಡಿದ ಇವರ ವೃತ್ತಿ ತಿರುಗಾಟ 15 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಪ್ರಸ್ತುತ ಉದಯಕುಮಾರ್ ಮಾರಣಕಟ್ಟೆ ಮೇಳದ ಕಲಾವಿದರಾಗಿ ಕಲಾಸೇವೆಗೈಯ್ಯುತ್ತಿದ್ದಾರೆ.

ಚುರುಕಿನ ನೃತ್ಯ ವಿಧಾನದಲ್ಲಿ ಮೂರನೇ ವೇಷಗಳ ರಂಗನಡೆಯನ್ನು ಪಾತ್ರೋಚಿತವಾಗಿ ನಿರೂಪಿಸುವ ಉದಯ ಕುಮಾರರ ವೃಷಸೇನ, ಅಭಿಮನ್ಯು, ಶ್ರೀಕೃಷ್ಣ, ಬಬ್ರುವಾಹನ ಮೊದಲಾದ ಭೂಮಿಕೆಗಳು ಕಲಾರಸಿಕರ ಮೆಚ್ಚುಗೆ ಗಳಿಸಿವೆ.

ಮುಂಡುವೇಷಧಾರಿಯಾದ ಇವರು ಪ್ರಸಂಗೋಚಿತವಾಗಿ ಎಲ್ಲಾ ಬಗೆಯ ಪಾತ್ರಗಳನ್ನೂ ಸಮರ್ಥವಾಗಿ ನಿರ್ವಹಿಸುವ ರಂಗಕೌಶಲವನ್ನು ಹೊಂದಿದ್ದಾರೆ.

ಉದಯಕುಮಾರ ಶೆಟ್ಟರು ಉಷಾ ಎಂಬುವರನ್ನು ವರಿಸಿದ್ದಾರೆ.

ಸ್ಥಳೀಯ ಸಂಘ ಸಂಸ್ಥೆಗಳು ಈ ಪ್ರತಿಭಾನ್ವಿತ ಯುವ ಕಲಾವಿದರನ್ನು ಗುರುತಿಸಿ ಗೌರವಿಸಿವೆ.



# ಉದಯ ಪುಂಡಲೀಕ ಸೇರಿಗಾರ್

*ಅಂಚೆ : ಹೊಸಪಟ್ಟಣ*
*ಹೊನ್ನಾವರ ತಾಲೂಕು, (ಉ.ಕ)*

ಪೌರಾಣಿಕ ಆಖ್ಯಾನಗಳಲ್ಲಿರುವ ರಾಜವೇಷ, ಮುಂಡಾಸುವೇಷ, ಪುರುಷ ವೇಷ ಹಾಗೂ ಪೋಷಕ ವೇಷಗಳನ್ನು ಸಮರ್ಥವಾಗಿ ನಿರ್ವಹಿಸುವ ಕಲಾವಿದ ಸಂಪನ್ನ ಉದಯ ಸೇರಿಗಾರ್.

ಹೊನ್ನಾವರ ತಾಲೂಕಿನ ಹೊಸಪಟ್ಟಣ ಇವರ ಹುಟ್ಟೂರು. 18-12-1969ರಲ್ಲಿ ಉದಯ ಸೇರಿಗಾರ ಅವರ ಜನನ. ಪುಂಡಲೀಕ ಸೇರಿಗಾರ್-ಹಾಗೂ ಲಕ್ಷ್ಮೀ ಇವರ ತಂದೆ-ತಾಯಿ. 7ನೇ ತರಗತಿಗೆ ಓದು ನಿಲ್ಲಿಸಿ ತನ್ನ 15ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ಉದಯ ಶೇರಿಗಾರ್ ಚಿಕ್ಕಂದಿನಿಂದಲೇ ಯಕ್ಷಗಾನ ಕಲೆಯ ಕುರಿತು ಅದಮ್ಯ ಆಸಕ್ತಿಯನ್ನು ಮೈಗೂಡಿಸಿಕೊಂಡಿದ್ದರು. ಪ್ರಸಿದ್ಧ ಕಲಾವಿದ ಮಾಳ್ಕೋಡು ಜಗದೀಶ ಹೆಗಡೆಯವರಿಂದ ಇವರಿಗೆ ವೃತ್ತಿರಂಗದ ಸಂಪರ್ಕ ಸುಲಭ ಸಾಧ್ಯವಾಯಿತು.

ಉದಯ ಸೇರಿಗಾರರ ತಂದೆ ಹವ್ಯಾಸಿ ಕಲಾವಿದರಾಗಿದ್ದರು. ಹೀಗಾಗಿ ಯಕ್ಷಗಾನ ಕಲಾಸಾಂಗತ್ಯ ಎಳವೆಯಲ್ಲೇ ಮೈಮನಕ್ಕಿಳಿಯುವಂತಾಯಿತು. ಪಿ.ವಿ, ಹಾಸ್ಯಗಾರ್, ಕರ್ಕಿ ಅವರಲ್ಲಿ ಯೋಗ್ಯ ರಂಗಶಿಕ್ಷಣ ಪಡೆದ ಸೇರಿಗಾರರು ವೃತ್ತಿ ಮೇಳಗಳಲ್ಲಿ ಪ್ರದರ್ಶಿಸಿದ ಕಲಾಪ್ರತಿಭೆ ಪ್ರೇಕ್ಷಕಬಾಂಧವರನ್ನು ಹಾರ್ದಿಕವಾಗಿ ಮೆಚ್ಚಿಸುವಲ್ಲಿ ಶಕ್ತವಾಯಿತು.

ಗುಂಡಬಾಳ-8, ಮಂದಾರ್ತಿ-10, ಕಳವಾಡಿ-2, ಹಾಲಾಡಿ-3, ಕಮಲಶಿಲೆ-2.... ಹೀಗೆ ಮೇಳದ ತಿರುಗಾಟಗಳಲ್ಲಿ ಸೇರಿಗಾರರು ರಜತ ಸಂಭ್ರಮವನ್ನು ಸಂತೃಪ್ತಿಯಿಂದ ಆಚರಿಸಿದ್ದಾರೆ. ಪ್ರಸ್ತುತ ಸೌಕೂರು ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಧರ್ಮರಾಯ, ಭೀಮ, ಬಲರಾಮ, ಶ್ರೀಕೃಷ್ಣ, ಜಾಂಬವ, ದಮನ, ಕೌಂಡ್ಲೀಕ, ಹನುಮಂತ, ಶ್ರೀರಾಮ, ಸುಗ್ರೀವ... ಮೊದಲಾದ ಪಾತ್ರಗಳಲ್ಲಿ ಉದಯ ಸೇರಿಗಾರರ ಉನ್ನತ ಪ್ರತಿಭೆ ಯಕ್ಷರಂಗದಲ್ಲಿ ವಿಶೇಷವಾಗಿ ಬೆಳಗುವಂತಾಗಿದೆ.

ಉದಯ ಸೇರಿಗಾರರ ಸಹಧರ್ಮಿಣಿ ಮೀರಾ. ಮಣಿಕಂಠ ಹಾಗೂ ಶೃತಿ ಇವರ ಉಭಯ ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಇವರಿಗೆ ಗೌರವಪೂರ್ವ ಸಂಮಾನಗಳು ದೊರಕಿರುತ್ತವೆ.



## ಉದಯ ಮೆಂಡನ್, ಕೋಟ

*ಪಡುಕರೆ, ಅಂಚೆ: ಕೋಟ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 9740966630*

ಸಮರ್ಥ ಮುಂಡುವೇಷಧಾರಿ ಹಾಗೂ ಮಂಡಾಸುವೇಷಧಾರಿಯಾಗಿ ಕಲಾಭಿಮಾನಿಗಳ ಹಾರ್ದಿಕ ಹಾರೈಕೆಗೆ ಪಾತ್ರರಾದ ಯುವ ಯಕ್ಷನಟ ಕೋಟ ಉದಯ ಮೆಂಡನ್.

ಉಡುಪಿ ತಾಲ್ಲೂಕಿನ ಕೋಟ-ಪಡುಕರೆಯಲ್ಲಿ ಜನಿಸಿದ ಉದಯ ಮೆಂಡನ್. ಅವರು ಪ್ರಸಿದ್ಧ ಕಲಾವಿದ ಮೊಳಹಳ್ಳಿ ಹೆರಿಯ ನಾಯ್ಕ್-ಬುಡ್ಡು ಮರಕಾಲ್ತಿ ದಂಪತಿಯ ಸುಪುತ್ರ. ಇವರಿಗೆ 35 ವರ್ಷ. 6ನೇ ತರಗತಿಯವರೆಗೆ ಶೈಕ್ಷಣಿಕ ಸಂಸ್ಕಾರ ಪಡೆದ ಇವರಿಗೆ ಎಳವೆಯಲ್ಲೇ ತಂದೆಯವರ ಕಲಾಕೀರ್ತಿಯೇ ವೃತ್ತಿರಂಗದ ಬದುಕಿಗೆ ಸ್ಫೂರ್ತಿಯಾಯಿತು. ತಂದೆಯವರ ಗುರುತನ ಮಾರ್ಗದರ್ಶನ ಬಣ್ಣದ ಬದುಕಿನ ಬಣ್ಣ-ಬಣ್ಣದ ಕನಸುಗಳನ್ನು ಸಾಕಾರಗೊಳಿಸಿತು.

ಅಮೃತೇಶ್ವರಿ, ಮಂದಾರ್ತಿ, ಶಿರಸಿ, ಮಾರಣಕಟ್ಟೆ, ಸೌಕೂರು, ಕಮಲಶಿಲೆ ಮೇಳಗಳಲ್ಲಿ ಕಲಾವ್ಯವಸಾಯ ಮಾಡಿದ ಉದಯ ಮೆಂಡನ್ ವೃತ್ತಿರಂಗಭೂಮಿಯಲ್ಲಿ ಸಾರ್ಥಕ ವಿಂಶತಿ ವರ್ಷಗಳನ್ನು ಪೂರೈಸಿದ್ದಾರೆ. ಪ್ರಸ್ತುತ ಇವರು ಮಾರಣಕಟ್ಟೆ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಪಾತ್ರೋಚಿತ ನೃತ್ಯ, ಅಭಿನಯ, ವೇಷ, ಭಾಷೆ, ರಂಗವೈಖರಿಯಲ್ಲಿ ಕಲಾಪ್ರತಿಭೆಯನ್ನು ರಂಗಮುಖದಲ್ಲಿ ಸರ್ವಸುಂದರವಾಗಿ ಅಭಿವ್ಯಕ್ತಿಸುವ ಉದಯ ಮೆಂಡನ್ ಅವರು ಬಡಗುತಿಟ್ಟಿನಲ್ಲಿ ಗುರುತಿಸಲ್ಪಡುವ ಸಮರ್ಥ ಯುವ ಮಂಡಾಸುವೇಷಧಾರಿಯಾಗಿದ್ದಾರೆ.

ಕೌಂಡ್ಲಿಕ, ಶಲ್ಯ, ವಿದ್ಯುನ್ಮಾಲಿ, ಬಲಿ, ಶೂರಸೇನ, ಭದ್ರಸೇನ, ವೃಷಕೇತು, ಬಭ್ರುವಾಹನ, ಶ್ರೀಕೃಷ್ಣ... ಮೊದಲಾದ ಭೂಮಿಕೆಗಳು ಉದಯ ಮೆಂಡನ್ ಅವರ ರಂಗಪ್ರಸ್ತುತಿಯಲ್ಲಿ ಕಲಾಪ್ರೇಕ್ಷಕರಿಂದ ಸೈ ಅನ್ನಿಸಿಕೊಂಡಿವೆ.

ಉಡುಪಿ ಹಾಗೂ ಕುಂದಾಪುರದಲ್ಲಿ ಸಂಪನ್ನಗೊಂಡ 'ಮೊಗವೀರ ಯಕ್ಷ ಕಲೋತ್ಸವ'ದಲ್ಲಿ ಉದಯ ಮೆಂಡನ್ ಸಮಾಜದ ಗಣ್ಯವ್ಯಕ್ತಿಗಳಿಂದ ಸಂಮಾನಿತರಾಗಿದ್ದಾರೆ.



## ಉದಯ ಹೆಗಡೆ ಮಾಳ್ಕೋಡು

*ಅಂಚೆ : ಕೆಳಗಿನ ಇಡಗುಂಜಿ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9843526384*
*9481053059*

ಪುರುಷ ಪಾತ್ರಗಳಲ್ಲಿ ಪೌರುಷವನ್ನು ಪ್ರಕಟಿಸುವ ಸಮರ್ಥ ಯುವ ಕಲಾವಿದ ಉದಯ ಹೆಗಡೆ ಮಾಳ್ಕೋಡು.

ಹೊನ್ನಾವರ ತಾಲೂಕಿನ ಮಾಳ್ಕೋಡು ಇವರ ಹುಟ್ಟೂರು. ಜನನ 6-3-1976ರಲ್ಲಿ. ತಂದೆ ನಾರಾಯಣ ಹೆಗಡೆ, ತಾಯಿ ನಾಗವೇಣಿ. 9ನೇ ತರಗತಿಯವರೆಗೆ ವಿದ್ಯಾಭ್ಯಾಸ. 14ರ ಹರೆಯದಲ್ಲೇ ಯಕ್ಷಗಾನ ಲೋಕಕ್ಕೆ ಹೆಜ್ಜೆ-ಗೆಜ್ಜೆ.

ಕೌಟುಂಬಿಕವಾದ ಕಲಾಹಿನ್ನೆಲೆ ಯಾವುದೂ ಇಲ್ಲವಾದರೂ ಎಳವೆಯಲ್ಲೇ ವ್ಯೈಮನದಲ್ಲಿ ಸುಳಿಯುತ್ತಿದ್ದ ಅದಮ್ಯ ಯಕ್ಷಕಲಾಸಕ್ತಿಯೇ ಇವರ ಯಕ್ಷಬಾಳುವೆಗೆ ಪ್ರೇರಣೆಯ ಅಂತಶ್ಶಕ್ತಿಯಾಯಿತು.

ದೇವದಾಸರಾವ್ ಕೂಡ್ಲಿ ಹಾಗೂ ಕೃಷ್ಣಯಾಜಿ ಇಡಗುಂಜಿಯವರ ಶಿಷ್ಯನಾಗಿ ಕಲಾವಿದ್ಯೆಯನ್ನು ಸುಪುಷ್ಟವಾಗಿ ಒಲಿಸಿಕೊಂಡ ಉದಯ ಹೆಗಡೆ ಪೌರಾಣಿಕ ಪ್ರಸಂಗಗಳಲ್ಲಿ ಬರುವ ಎಲ್ಲಾ ಗುಣಧರ್ಮದ ಪಾತ್ರಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸಬಲ್ಲರು.

ಅಭಿಮನ್ಯು, ಬಬ್ರುವಾಹನ, ಸುಧನ್ವ, ಶ್ರೀಕೃಷ್ಣ, ಅರ್ಜುನ, ಭಸ್ಮಾಸುರ, ಈಶ್ವರ, ಚಂದ್ರಹಾಸ, ಮದನ, ರಾವಣ... ಹೀಗೆ ಉದಯ ಹೆಗಡೆಯವರ ಪಾತ್ರ ನಿರ್ವಹಣೆ ವೈವಿಧ್ಯಮಯವಾಗಿ ಕಲಾಪ್ರಿಯರ ಮನ ಮೆಚ್ಚಿಸಿದೆ.

ಚುರುಕಿನ ನೃತ್ಯಗತಿಯಲ್ಲಿ ನೈಪುಣ್ಯವನ್ನು ಸಾಧಿಸಿದ ಹೆಗಡೆ ಹೆಚ್ಚಾಗಿ ಪುಂಡುವೇಷಗಳಲ್ಲೇ ರಂಗವಾಳುವವರು. ಉತ್ತಮ ಭಾಷಾಪ್ರಜ್ಞೆ, ಅಭಿನಯ ಕೌಶಲ, ಪ್ರಸಂಗ ನಡೆಯುನ್ನು ಉದಯ ಹೆಗಡೆಯವರಲ್ಲಿ ಗುರುತಿಸಬಹುದಾಗುತ್ತದೆ.

ಗುಂಡ ಬಾಳ-8, ಕಳವಾಡಿ-1, ಬಗ್ವಾಡಿ-1, ಸಿಗಂಧೂರು-1, ನಾಗರಕೊಡಿಗೆ-1, ಗೋಳಿಗರಡಿ-1, ಕೆರೆಮನೆ-5.... ಹೀಗೆ 18 ವರ್ಷಗಳ ವೃತ್ತಿ ತಿರುಗಾಟದಲ್ಲಿ ಉದಯ ಹೆಗಡೆ ಸಾರ್ಥಕ ಕೀರ್ತಿ, ಗೌರವವನ್ನು ಪಡೆದಿರುತ್ತಾರೆ.

ಸಮರ್ಥ ವೇಷಧಾರಿಯಾದ ಹೆಗಡೆಯವರಿಗೆ ಭಾಗವತಿಕೆ ಹಾಗೂ ಯಕ್ಷಗಾನ ಪ್ರಸಾಧನ ರಂಗಕರ್ಮದ ಪರಿಣತಿಯೂ ಇದೆ. ಪ್ರಸ್ತುತ ಕೆರೆಮನೆ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಉದಯ ಹೆಗಡೆಯವರ ಧರ್ಮಪತ್ನಿ ಪಲ್ಲವಿ. ಚಿನ್ಮಯ ಹಾಗೂ ಚಿಂತನ ಇವರ ಉಭಯ ಮಕ್ಕಳು.

ಅನೇಕ ಸಂಘ-ಸಂಸ್ಥೆಗಳಿಂದ ಹೆಗಡೆಯವರು ಸಂಮಾನಿತರು.



## ಕೃಷ್ಣ ಚಿಕ್ಕಯ್ಯ ಪೂಜಾರಿ

*ಸರನ ಗದ್ದೆ, ವಾನಳ್ಳಿ-ಅಂಚೆ,*
*ಶಿರಸಿ ತಾಲೂಕು (ಉ.ಕ)*
*ದೂರವಾಣಿ : 9481049026*
*9590042331*

ಬಡಾಬಡಗಿನ ಯಕ್ಷಗಾನ ಪ್ರಾದೇಶಿಕ ಸೊಗಡಿನಲ್ಲಿ ಪೌರಾಣಿಕ ಭೂಮಿಕೆಗಳಿಗೆ ಕಲಾವಂತಿಕೆಯ ಜೀವ ನೀಡುವ ಯುವ ಕಲಾವಿದ ಕೃಷ್ಣ ಚಿಕ್ಕಯ್ಯ ಪೂಜಾರಿ.

ಶಿರಸಿಯ ವಾನಳ್ಳಿ ಎಂಬಲ್ಲಿ 19-7-1980ರಲ್ಲಿ ಜನಿಸಿದ ಕೃಷ್ಣ ಅವರು ಚಿಕ್ಕಯ್ಯ ಪೂಜಾರಿ-ಸುಬ್ಬಿ ದಂಪತಿಯ ಸುಪುತ್ರ. 7ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಇವರು ತನ್ನ 18ರ ಹರೆಯದಲ್ಲೇ ಯಕ್ಷಕ್ಷೇತ್ರಕ್ಕೆ ಹೆಜ್ಜೆ ಹಾಕಿದವರು. ವಿ.ಆರ್. ಹೆಗಡೆಯವರ ಪ್ರೇರಣೆ-ಪ್ರೋತ್ಸಾಹದೊಂದಿಗೆ ಬಣ್ಣದ ಬದುಕಿಗೆ ಬಾಲ್ಯದ ಬಯಕೆಯನ್ನು ನನಸಾಗಿಸಿಕೊಂಡ ಕೃಷ್ಣ ಪೂಜಾರಿಯವರು ಎ.ಪಿ. ಫಾಟಕ್, ವಿದ್ವಾನ್ ಗಣಪತಿ ಭಟ್ಟ ಹಾಗೂ ಭಾಸ್ಕರ ಭಂಡಾರಿ ಅವರ ಶಿಷ್ಯನಾಗಿ ಸುಯೋಗ್ಯ ಯಕ್ಷ ಶಿಕ್ಷಣ ಪಡೆದವರು.

ಅಮೃತೇಶ್ವರಿ-5, ಗೋಳಿಗರಡಿ-1, ಸೌಕೂರು-1, ಗುಂಡಬಾಳ-3.... ಹೀಗೆ 10 ವರ್ಷಗಳ ಕಲಾವ್ಯವಸಾಯ ಇವರಿಗೆ ತೃಪ್ತಿ ನೀಡಿದೆ.

ಎಲ್ಲಾ ಬಗೆಯ ಪುರುಷ ಪಾತ್ರಗಳನ್ನೂ ಕೃಷ್ಣ ಅವರು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ವಾಲಿ, ಸುಗ್ರೀವ, ಶೂರಸೇನ, ಈಶ್ವರ, ಅರ್ಜುನ, ಹಂಸಧ್ವಜ, ಬಲರಾಮ, ಕುಳಿಂದ... ಮೊದಲಾದ ಪೌರಾಣಿಕ ಭೂಮಿಕೆಗಳಿಗೆ ಕೃಷ್ಣ ಅವರು ತನ್ನದೇ ವಿಶಿಷ್ಟ ಕಲಾ ಚೈತನ್ಯದಿಂದ ಜೀವ ತುಂಬಿದ್ದಾರೆ.

ಉತ್ತಮ ಮಾತುಗಾರಿಕೆ, ನೃತ್ಯ-ಅಭಿನಯ ವೈಖರಿ, ರಂಗಮಾಹಿತಿಯನ್ನು ಹೊಂದಿದ ಇವರು ಉತ್ಸಾಹಿ ಕಲಾವಿದರಾಗಿ ಪ್ರಸ್ತುತ ಗುಂಡಬಾಳ ಮೇಳದಲ್ಲಿ ದುಡಿಯುತ್ತಿದ್ದಾರೆ.

ಬಿಡುವಿನ ವೇಳೆಯಲ್ಲಿ ಕೃಷಿರಂಗದ ಕಾಯಕದಲ್ಲಿ ಇವರು ತೊಡಗಿಕೊಳ್ಳುತ್ತಾರೆ.

ಅನೇಕ ಸಂಘ ಸಂಸ್ಥೆಗಳಿಂದ ಕೃಷ್ಣ ಪೂಜಾರಿಯವರು ಸಂಮಾನಿತರಾಗಿದ್ದಾರೆ.



## ಕೃಷ್ಣದಾಸ್ ಮರವಂತೆ

*ಬಿನ್ ಶ್ರೀನಿವಾಸ್ ಮರವಂತೆ,*
*ಅಂಚೆ : ಮರವಂತೆ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ-576 261*
***ದೂರವಾಣಿ : 08254-255068***

ಮನೆತನದಿಂದ ಬಂದ ಯಕ್ಷಗಾನ ಭಾಗವತಿಕೆ ಪರಂಪರೆಯನ್ನು ಮುಂದುವರಿಸುತ್ತಿರುವ ಭಾಗವತ ಕೃಷ್ಣದಾಸ್ ಮರವಂತೆ.

ಕುಂದಾಪುರ ತಾಲೂಕಿನ ಮರವಂತೆ ಇವರ ಜನ್ಮಸ್ಥಳ. 1-6-1971ರಲ್ಲಿ ಇವರ ಜನನವಾಯಿತು. ತಂದೆ ಹಿರಿಯ ಭಾಗವತ ದಿ. ಶ್ರೀನಿವಾಸದಾಸ್ ಮರವಂತೆ. ತಾಯಿ ಮಹಾಲಕ್ಷ್ಮೀ ದಾಸ್. 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಕೃಷ್ಣದಾಸ್ ತನ್ನ 27ನೇ ವಯಸ್ಸಿನಲ್ಲಿ ಯಕ್ಷಗಾನ ರಂಗಭೂಮಿಗೆ ಪಾದಾರ್ಪಣೆ ಮಾಡಿದರು.

ಇವರ ತಂದೆ ಶ್ರೀನಿವಾಸ ದಾಸ್ ಹಾಗೂ ದೊಡ್ಡ ತಂದೆ ರಾಜ್ಯ ಪ್ರಶಸ್ತಿ ಪುರಸ್ಕೃತ ಮರವಂತೆ ನರಸಿಂಹದಾಸ್ ಬಡಗುತಿಟ್ಟು ಯಕ್ಷಗಾನ ರಂಗಭೂಮಿ ಕಂಡ ಮೇರು ಭಾಗವತರು. ಹಾಗಾಗಿ ಕೃಷ್ಣದಾಸ್ ಅವರಿಗೆ ಯಕ್ಷಕಲೆಯ ನಂಟು ಆನುವಂಶಿಕ ಹಿನ್ನೆಲೆಯಲ್ಲಿ ಬಲಿಷ್ಠವಾಗಿಯೇ ದೊರಕಿತು.

ದೊಡ್ಡಪ್ಪ ನರಸಿಂಹದಾಸರ ಪ್ರೇರಣೆಯಂತೆ ವೃತ್ತಿರಂಗವನ್ನು ಪ್ರವೇಶಿಸಿದ ಇವರಿಗೆ ಅಣ್ಣ ರಾಮದಾಸ್ ಮರವಂತೆ ಹಾಗೂ ವಿದ್ವಾನ್ ಗಣಪತಿ ಭಟ್ ಕಲಾಗುರುಗಳು.

ಸಾಂಪ್ರದಾಯಿಕ ಶೈಲೀಕೃತ ಹಾಡುಗಾರಿಕೆಯನ್ನು ರೂಢಿಸಿಕೊಂಡ ಕೃಷ್ಣದಾಸ್ ಹಾಲಾಡಿ ಮೇಳದಲ್ಲಿ 1 ವರ್ಷ ಹಾಗೂ ಮಾರಣಕಟ್ಟೆ ಮೇಳದಲ್ಲಿ 9 ವರ್ಷ ರಂಗಕೃಷಿ ಮಾಡಿರುತ್ತಾರೆ. ಮಾರಣಕಟ್ಟೆ ಮೇಳದಲ್ಲಿ ಭಾಗವತರಾಗಿ ಮುಂದುವರಿಯುತ್ತಿರುವ ಕೃಷ್ಣದಾಸ್ ಉತ್ತಮ ಪ್ರಸಂಗಾನುಭವ ಹೊಂದಿರುತ್ತಾರೆ.

ಹಿರಿಯರಿಂದ ಗಳಿಸಿದ ಕಲಾವಿದ್ಯೆಯನ್ನು ಸಾಂಪ್ರದಾಯಿಕ ಬದ್ಧತೆಗನುಗುಣವಾಗಿ ತನ್ನತನದಲ್ಲಿ ಪ್ರದರ್ಶಿಸುವ ಇವರ ಉತ್ತಮ ಕಂಠಶ್ರೀ, ರಂಗಮಾಹಿತಿ ಸಮೃದ್ಧವಾಗಿ ಗಮನ ಸೆಳೆಯುತ್ತದೆ.

ಕೃಷ್ಣದಾಸ್ ಮರವಂತೆ ಅವರ ಸಹಧರ್ಮಿಣಿ ವಿಜಯಾ. ಓರ್ವ ಸುಪುತ್ರ ವಿವೇಕ್, ಚಿಕ್ಕ-ಚೊಕ್ಕ ಸಂಸಾರಸ್ಥ.

ಅನೇಕ ಸಂಘ ಸಂಸ್ಥೆಗಳು ಕೃಷ್ಣದಾಸ್ ಅವರನ್ನು ಗುರುತಿಸಿ ಗೌರವಿಸಿವೆ.



# ಕೃಷ್ಣ ಮಂಜ ಭಂಡಾರಿ

*ಅಂಚೆ : ಗುಣವಂತೆ, ಹೊನ್ನಾವರ ತಾಲೂಕು*
*ಗುಣವಂತೆ-ಬೆಳಗೋಡು (ಉ.ಕ)*
*ದೂರವಾಣಿ : 9480074043*

ಭಾಗವತಿಕೆ, ಮದ್ದಳೆಗಾರಿಕೆ, ಚಂಡೆಗಾರಿಕೆ ಹಾಗೂ ವೇಷಗಾರಿಕೆಯ ಸರ್ವಾಂಗೀಣ ಪ್ರತಿಭೆಯಾಗಿ ಗುರುತಿಸಿಕೊಂಡ ಹಿರಿಯ ಕಲಾವಿದ ಕೃಷ್ಣ ಮಂಜ ಭಂಡಾರಿ.

ಹೊನ್ನಾವರ ತಾಲೂಕಿನ ಗುಣವಂತೆ ಎಂಬಲ್ಲಿ 22-5-1961ರಲ್ಲಿ ಇವರ ಜನನ. ಮಂಜಭಂಡಾರಿ-ಸುಬ್ಬಿ ಇವರ ತಂದೆ-ತಾಯಿ.

5ನೇ ತರಗತಿಗೆ ಶರಣು ಹೊಡೆದು ತನ್ನ 14ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ಕೃಷ್ಣ ಭಂಡಾರಿಯವರು ಕಲಾವಂತ ಮನೆತನದ ಬಲಿಷ್ಠ ಹಿನ್ನೆಲೆಯನ್ನು ಹೊಂದಿದವರು. ಇವರ ಅಜ್ಜ ವೇಷಧಾರಿ, ತಂದೆ ಮದ್ದಳೆವಾದಕರು, ಅಣ್ಣ ಚಂಡೆಗಾರರು ಹಾಗಾಗಿ ಕಲಾವಂತಿಕೆಯೆಂಬುದು ಇವರಿಗೆ ಪರಿಪೂರ್ಣವಾಗಿ ಮೈಗೂಡಿತು.

ಇವರ ಗುರುಪರಂಪರೆಯೂ ಮೌಲಿಕ. ಜಾನುವಾರು ಕಟ್ಟೆ ಗೋಪಾಲಕೃಷ್ಣ ಭಾಗವತರು, ಹಿರಿಯಡಕ ಗೋಪಾಲರಾಯರು, ಹೆರಂಜಾಲು ವೆಂಕಟರಮಣ ಗಾಣಿಗರು ಹಾಗೂ ಕೆರೆಮನೆ ಮಹಾಬಲ ಹೆಗಡೆಯವರು ಇವರ ಗುರುಗಳಾಗಿ ಕಲಾವಿ[illegible]ತ್ತು ಹರಸಿದ್ದಾರೆ.

ಇಡಗುಂಜಿ-8, ಮಾರಣಕಟ್ಟೆ-2, ಕಳವಾಡಿ-1, ಕಮಲಶಿಲೆ-2, ಹಾಲಾಡಿ-8, ಪೆರ್ಡೂರು-2... ಹೀಗೆ 23 ವರ್ಷಗಳ ಕಲಾಯಾತ್ರೆ ಇವರದ್ದಾಗಿದೆ. ಪ್ರಸ್ತುತ ಕೃಷ್ಣಭಂಡಾರಿಯವರು ಹವ್ಯಾಸಿ ಯಕ್ಷಗಾನ ರಂಗದಲ್ಲಿ ಕ್ರಿಯಾಶೀಲರಾಗಿದ್ದಾರೆ.

ಉತ್ತಮ ಹಿಮ್ಮೇಳ ಕಲಾವಿದರಾದ ಕೃಷ್ಣಭಂಡಾರಿಯವರು ಸುಸಮರ್ಥ ಮುಮ್ಮೇಳ ಕಲಾವಿದರಾಗಿಯೂ ಮೆರೆದವರು. ಇವರ ಚಂದ್ರಹಾಸ, ಮೋಹಿನಿ, ಅರ್ಜುನ, ಶ್ರೀಕೃಷ್ಣ, ಬಲರಾಮ... ಮೊದಲಾದ ಭೂಮಿಕೆಗಳೂ ಜನಪ್ರಿಯತೆ ಕಂಡಿವೆ.

ಇವರೇ ತಿಳಿಸಿರುವಂತೆ ಸುಮಾರು 1500 ಮಂದಿ ಯಕ್ಷಕಲಾ ವಿದ್ಯಾರ್ಥಿಗಳನ್ನು ರೂಪಿಸಿದ ಹೆಗ್ಗಳಿಕೆ ಭಂಡಾರಿಯವರದ್ದು.

ಕೃಷ್ಣಭಂಡಾರಿಯವರ ಸಹಧರ್ಮಿಣಿ ನಾಗವೇಣಿ. ನಾಗರಾಜ ಹಾಗೂ ರಂಜನಾ ಇವರ ಉಭಯ ಮಕ್ಕಳು.

ಸ್ಥಳೀಯ ಸಂಘ ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



## ಕೃಷ್ಣನಾಯ್ಕ, ಮುಂಡಾಡಿ

*ಅಂಚೆ : ಮಂದಾರ್ತಿ, ಕಾಡೂರು ಗ್ರಾಮ*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9480292791*

ಪ್ರತಿಭಾನ್ವಿತ ಪುಂಡುವೇಷಧಾರಿಯಾಗಿ ಬಡಗುತಿಟ್ಟು ಯಕ್ಷಗಾನ ರಂಗಸ್ಥಳದಲ್ಲಿ ಸೃಜನ ಶೀಲ ಕಲಾವಂತಿಕೆಯ ಸೊಗಸು ಮೆರೆಯುವ ಯುವ ಕಲಾವಿದ ಕೃಷ್ಣ ನಾಯ್ಕ, ಮುಂಡಾಡಿ.

ಉಡುಪಿ ತಾಲೂಕಿನ ಮಂದಾರ್ತಿ ಸಮೀಪದ ಮುಂಡಾಡಿ ಎಂಬಲ್ಲಿ ಪುರುಷನಾಯ್ಕ-ಕಾಳಿ ಬಾಯಿ ದಂಪತಿಯ ಸುಪುತ್ರನಾಗಿ ಜನಿಸಿದ ಇವರಿಗೆ ಈಗ 33ರ ಹರೆಯ.

ಆರ್ಥಿಕ ಅನಾನುಕೂಲತೆಯಿಂದ ಕುಟುಂಬ ನಿರ್ವಹಣೆಯ ಘನತರ ಜವಾಬ್ದಾರಿ ಹೆಗಲ ಮೇಲೆ ಎಳವೆಯಲ್ಲಿಯೇ ಬಿದ್ದ ಕಾರಣ ಇವರು ಏಳನೇ ತರಗತಿಗೆ ಓದು ನಿಲ್ಲಿಸಿ ತನ್ನ 15ರ ಹರೆಯದಲ್ಲೇ ಬಣ್ಣದ ಬದುಕಿಗೆ ಶರಣಾದರು.

ತಂದೆಯವರ ಪ್ರೋತ್ಸಾಹ-ಪ್ರೇರಣೆಯೊಂದಿಗೆ ವೃತ್ತಿರಂಗಕ್ಕೆ ಅಭಿಮುಖವಾದ ಕೃಷ್ಣನಾಯ್ಕರು ಮಂಜುನಾಥ ಶೆಟ್ಟಿಗಾರ್ ಎಂಬವರಲ್ಲಿ ಯಕ್ಷಶಿಕ್ಷಣ ಪಡೆದು ರಂಗವೇರಿದರು.

ಮಂದಾರ್ತಿ ಮೇಳದಲ್ಲಿ 16 ವರ್ಷ, ಕಮಲಶಿಲೆ 1 ವರ್ಷ, ಹಾಲಾಡಿ 1 ವರ್ಷ... ಹೀಗೆ ಇವರ ರಂಗವ್ಯವಸಾಯ 18 ವರ್ಷಗಳನ್ನು ಪೂರೈಸಿದೆ.

ಅಭಿಮನ್ಯು, ಬಬ್ರುವಾಹನ, ಲವ, ಕುಶ, ಮೈಂದ-ದ್ವಿವಿದ.... ಮೊದಲಾದ ಪುಂಡುವೇಷಗಳನ್ನು ಸಮರ್ಥವಾಗಿ ನಿರ್ವಹಿಸುವ ಕೃಷ್ಣ ನಾಯ್ಕರು, ವಿದ್ಯುನ್ಮಾಲಿ, ಕೌಂಡ್ಲಿಕ, ವಿಭೀಷಣ, ವೃಷಕೇತು, ಪ್ರದ್ಯುಮ್ನ, ಸಾಲ್ವ, ಶಲ್ಯ.... ಮೊದಲಾದ ಮುಂಡಾಸು ವೇಷಗಾರಿಕೆಯಿಂದಲೂ ಸೈ ಅನ್ನಿಸಿಕೊಂಡವರು.

ಕೃಷ್ಣನಾಯ್ಕ ಅವರು ಶ್ರೀಲತಾ ಎಂಬವರನ್ನು ವರಿಸಿ ಸಾತ್ವಿಕ್ ಎಂಬ ಪುತ್ರನನ್ನು ಪಡೆದಿದ್ದಾರೆ.

ಯಕ್ಷಗಾನ ವ್ಯವಸಾಯವೇ ಬದುಕಿನ ವೃತ್ತಿ-ಉಪವೃತ್ತಿಯಾಗಿಸಿಕೊಂಡ ಕೃಷ್ಣ ನಾಯ್ಕರು ಸ್ಥಳೀಯ ಸಂಘ-ಸಂಸ್ಥೆಗಳ ಗೌರವ ಸಂಮಾನಗಳಿಗೆ ಭಾಜನರಾಗಿದ್ದಾರೆ.



## ಕೃಷ್ಣಮೂರ್ತಿ ಎನ್.ಕೆ.

*ಅಂಚೆ : ನಾಗರಕೊಡಿಗೆ,*
*ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9731607702*

ಭಾಗವತಿಕೆಗೆ ಪೂರಕವಾಗಿ, ಮುಮ್ಮೇಳದ ಕಲಾವಂತಿಕೆಗೆ ಪ್ರೇರಕವಾಗಿ, ರಂಗ ಸಾಂವಿಧಾನಿಕತೆಗೆ ಪೋಷಕವಾಗಿ ಸಹೃದಯ ಪ್ರೇಕ್ಷಕರ ಭಾವರಸ ಪ್ರಚೋದಕವಾಗಿ ಚಂಡೆ-ಮದ್ದಳೆಯ ವಾದನ ವಿಧಾನದ ನಾದಲೀಲೆಯನ್ನು, ರಂಗ-ಪ್ರಸಂಗಗಳಲ್ಲಿ ಮೊರೆದು ಮೆರೆಯುವ ಸಮರ್ಥ ಹಿಮ್ಮೇಳ ಕಲಾವಿದ ಕೃಷ್ಣಮೂರ್ತಿ ಎನ್.ಕೆ.

ಇವರ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ನಾಗರಕೊಡಿಗೆ. ತಂದೆ ಕಾಯ ನಾಯ್ಕ, ತಾಯಿ ಲಚ್ಚಮ್ಮ. 7ನೇತರಗತಿಗೆ ಶರಣು ಹೊಡೆದು 15ನೇ ವಯಸ್ಸಿನಲ್ಲೇ ಯಕ್ಷಗಾನ ವ್ಯವಸಾಯಕ್ಕೆ ಮುಂದಾದ ಇವರಿಗೆ ಮದ್ದಳೆವಾದಕ ಅಗ್ರಜನ ಅನನ್ಯ ಕಲಾಪ್ರತಿಭಾ ಪ್ರದರ್ಶನವೇ ರಂಗಬದುಕಿಗೆ ಪ್ರೇರಣೆ ನೀಡಿತು.

ಮದ್ದಳೆಗಾರ ಹಳಕ ರಮೇಶ್ ಭಟ್ ಹಾಗೂ ಭಾಗವತ ಕೆ.ಪಿ. ಹೆಗಡೆಯವರ ಗುರುತನದಲ್ಲಿ ಯಕ್ಷವಿದ್ಯಾ ಪಾರಂಗತರಾದ ಇವರು ವ್ಯವಸಾಯ ರಂಗದಲ್ಲಿ ಉತ್ತಮ ಚಂಡೆ-ಮದ್ದಳೆಗಾರರಾಗಿ ಗುರುತಿಸಿಕೊಂಡವರು.

ಕಳವಾಡಿ-2, ಕಮಲಶಿಲೆ-2, ಬಗ್ವಾಡಿ-3, ಮಡಾಮಕ್ಕಿ-2, ಹಾಲಾಡಿ-1, ಮೇಗರವಳ್ಳಿ-2, ಗುತ್ಯಮ್ಮ-8... ಹೀಗೆ ವಿಂಶತಿ ಕಲಾಯಾತ್ರೆಯಲ್ಲಿ ಇವರು ಸುಯೋಗ್ಯ ಹೆಸರು ಗಳಿಸುವಲ್ಲಿ ಯಶಸ್ಸು ಕಂಡವರು.

ಚಂಡೆ-ಮದ್ದಳೆ ವಾದನದ ಗುರುವಾಗಿ ಹಲವಾರು ಶಿಷ್ಯರನ್ನು ಹಿಮ್ಮೇಳ ವಾದನಕರ್ಮಿಗಳಾಗಿ ರೂಪಿಸಿದ ಹೆಗ್ಗಳಿಕೆಯೂ ಇವರಿಗಿದೆ.

ಕೃಷ್ಣಮೂರ್ತಿ ಎನ್.ಕೆ. ಅವರ ಸಹಧರ್ಮಿಣಿ ಜಯಲಕ್ಷ್ಮೀ. ಅಂಕಿತ ಹಾಗೂ ಅಂಕುಶ ಇವರ ಉಭಯ ಮಕ್ಕಳು.

ಸ್ಥಳೀಯ ಸಂಘ ಸಂಸ್ಥೆಗಳಿಂದ ಕೃಷ್ಣ ಮೂರ್ತಿಯವರಿಗೆ ಸಂಮಾನ ದೊರಕಿರುತ್ತದೆ.



## ಕೃಷ್ಣ ಮೊಗವೀರ, ಮೊಳಹಳ್ಳಿ

*ಮಣಿಯಾಡಿ, ಅಂಚೆ : ಮೊಳಹಳ್ಳಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9972918443*

ಪೌರಾಣಿಕ ಕಲಾಕುಸುಮಗಳಲ್ಲಿ ಸಮೃದ್ಧ ಪ್ರತಿಭೆಯ ನರುಗಂಪು ಪಸರಿಸುವ ಸ್ತ್ರೀವೇಷಧಾರಿ ಮೊಳಹಳ್ಳಿ ಕೃಷ್ಣ ಮೊಗವೀರ.

ಕುಂದಾಪುರ ತಾಲೂಕಿನ ಮೊಳಹಳ್ಳಿ-ಮಣಿಯಾಡಿಯಲ್ಲಿ ಜನಿಸಿದ ಕೃಷ್ಣಮೊಗವೀರ ಅವರು ಶೀನ ಮೊಗವೀರ-ಚಂದು ಮೋಗೇರ್ತಿ ದಂಪತಿಯ ಸುಪುತ್ರ. ಪಸ್ತುತ ಕೃಷ್ಣ ಅವರಿಗೆ 50 ವರ್ಷ.

6ನೇ ತರಗತಿಯವರೆಗಿನ ಅಕ್ಷರ ಶಿಕ್ಷಣ ಪಡೆದು 15ರ ಹರೆಯದಲ್ಲೇ ಯಕ್ಷಲೋಕಕ್ಕೆ ಹೆಜ್ಜೆ ಹಾಕಿದ ಕೃಷ್ಣ ಮೊಗವೀರರಿಗೆ ಸ್ವಯಂ ಪ್ರೇರಣೆಯೇ ಬಣ್ಣದ ಬದುಕಿಗೆ ಕಾರಣವಾಯಿತು. ಇವರ ಮಾವ ಪ್ರಸಿದ್ಧ ಯಕ್ಷಗಾನ ಕಲಾವಿದ ಮೊಳಹಳ್ಳಿ ಹೆರಿಯ ನಾಯ್ಕರಾಗಿದ್ದು, ಕೌಟುಂಬಿಕ ಯಕ್ಷಕಲಾ ವಾತಾವರಣವೂ ಸ್ಫೂರ್ತಿನೀಡಿತು.

ಮೊಳಹಳ್ಳಿ ಕೃಷ್ಣ ಮೊಗವೀರ ಅವರು ಗುರುಬಲದಲ್ಲೇ ಧನ್ಯಾತ್ಮರಾದವರು. ದಶಾವತಾರಿ ಗುರು ವೀರಭದ್ರನಾಯಕ್, ಕೋಟ ವೈಕುಂಠ ಹಾಗೂ ಹಳ್ಳಾಡಿ ಮಂಜಯ್ಯ ಶೆಟ್ಟರು ಇವರಿಗೆ ಕಲಾವಿದ್ಯೆಯನ್ನು ಧಾರೆಯೆರೆದವರು.

ಮಂದಾರ್ತಿ-8, ಅಮೃತೇಶ್ವರಿ-7, ಬಗ್ವಾಡಿ-2, ಸಾಲಿಗ್ರಾಮ-1, ಇಡಗುಂಜಿ-5, ಮಾರಣಕಟ್ಟೆ-12... ಹೀಗೆ ಕಲಾವ್ಯವಸಾಯದಲ್ಲಿ ಸಾರ್ಥಕ 35 ವರ್ಷಗಳನ್ನು ಪೂರೈಸಿದ ಕೃಷ್ಣ ಮೊಗವೀರ ಅವರು ಪ್ರಸ್ತುತ ಮಾರಣಕಟ್ಟೆ ಮೇಳದ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಸೌಮ್ಯ ಹಾಗೂ ಗಂಭೀರ ನಡೆಯ ಸ್ತ್ರೀ ಪಾತ್ರಗಳನ್ನು ಸಮಾನ ಸಾಮರ್ಥ್ಯದೊಂದಿಗೆ ಪೋಷಿಸುವ ಕೃಷ್ಣ ಅವರ ಪೌರಾಣಿಕ ಜ್ಞಾನವೂ ಸಂಪದ್ಭರಿತ.

ದ್ರೌಪದಿ, ಸುಭದ್ರೆ, ಶಶಿಪ್ರಭೆ, ಮೀನಾಕ್ಷಿ, ಚಿತ್ರಾಂಗದೆ, ಅಂಬೆ, ಭ್ರಮರಕುಂತಳೆ, ಚಂದ್ರಮತಿ, ಸೀತೆ, ಮಂಡೋದರಿ, ಮಾಯಾ ಹಿಡಿಂಬೆ, ಮೋಹಿನಿ, ಪಾರ್ವತಿ, ದೇವಯಾನಿ, ಚಂದ್ರಾವಳಿ... ಮೊದಲಾದ ಸ್ತ್ರೀಭೂಮಿಕೆಗಳಿಗೆ ಕೃಷ್ಣ ಮೊಗವೀರರು ಉನ್ನತ ಕಲಾವಂತಿಕೆಯ ಮೆರುಗು ನೀಡಿದ್ದಾರೆ.

ಕೃಷ್ಣ ಮೊಗವೀರರ ಧರ್ಮಪತ್ನಿ ಗಂಗಾ. ಇವರ ಉಪವೃತ್ತಿ ಕೃಷಿರಂಗ.

ಅನುಭವಿ ಸ್ತ್ರೀ ವೇಷಧಾರಿ ಕೃಷ್ಣ ಮೊಗವೀರ ಅವರು ಅನೇಕ ಸಂಘ ಸಂಸ್ಥೆಗಳಿಂದ ಸಂಮಾನ ಪಡೆದಿರುತ್ತಾರೆ.



# ಕೃಷ್ಣಯ್ಯ ಆಚಾರ್ಯ ಬಿದ್ಕಲ್‌ಕಟ್ಟೆ

*ಅಂಚೆ : ಬಿದ್ಕಲ್ ಕಟ್ಟೆ, ಹಾರ್ದಳ್ಳಿ-ಮಂಡಳ್ಳಿ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9741826109*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯ ಸರ್ವಾಂಗೀಣ ಕಲಾವಿದರಾಗಿ ಗುರುತಿಸಿಕೊಂಡವರು ಬಿದ್ಕಲ್‌ಕಟ್ಟೆ ಕೃಷ್ಣಯ್ಯ ಆಚಾರ್ಯ.

ಕುಂದಾಪುರ ತಾಲೂಕಿನ ಬಿದ್ಕಲ್‌ಕಟ್ಟೆ ಎಂಬಲ್ಲಿ 1962ರಲ್ಲಿ ಜನಿಸಿದ ಇವರು ಬಿ. ನಾರಾಯಣ ಆಚಾರ್ಯ-ಗಿರಿಜಮ್ಮ ದಂಪತಿಯ ಸುಪುತ್ರ.

ಎಳವೆಯಲ್ಲಿಯೇ ಯಕ್ಷಗಾನ ರಂಗಕಲೆಯ ಕುರಿತ ಅನ್ಯಾದೃಶ ಆಸಕ್ತಿಯನ್ನು ಹೊಂದಿದ ಕೃಷ್ಣಯ್ಯ ಆಚಾರ್ಯರಿಗೆ ಇಂತಹ ಕಲೆಯ ನಂಟು ಎನ್ನುವುದು ಆನುವಂಶಿಕ ಬಳುವಳಿಯಾಗಿ ಒದಗಿತು. ಇವರ ತಂದೆ ನಾರಾಯಣ ಆಚಾರ್ಯ ಹಾಗೂ ಅಣ್ಣ ನರಸಿಂಹ ಆಚಾರ್ಯರು ಯಕ್ಷಗಾನ ಕಲಾವಿದರಾಗಿದ್ದರು. ದ್ವಿತೀಯ ಪಿ.ಯು.ಸಿ. ವ್ಯಾಸಂಗದ ಬಳಿಕ ಯಕ್ಷಗಾನ ಕಲಿಕೆಗೆ ಮುಂದಾದ ಇವರು ತಂದೆವರಿಂದಲೇ ಯಕ್ಷಗಾನದ ಕುರಿತು ಪ್ರಾಥಮಿಕ ಪಾಠ ಪಡೆದರು. ತದನಂತರ ಗುರು ನಾರ್ಣಪ್ಪ ಉಪ್ಪೂರ, ಅಣ್ಣ ನರಸಿಂಹ ಆಚಾರ್ಯ ಹಾಗೂ ದಾಮೋದರ ಉಪ್ಪೂರರಿಂದ ಭಾಗವತಿಕೆ ಶಿಕ್ಷಣ ಸಂಪನ್ನರಾದರು. ಮದ್ದಳೆಯ ಮೋಡಿಗಾರ ದುರ್ಗಪ್ಪ ಗುಡಿಗಾರರಲ್ಲಿ ಮದ್ದಳೆ ವಾದನ ಕಲಿತರು. ಹಿರಿಯ ವೇಷಧಾರಿ ಕೋಟ ವೈಕುಂಠನವರಲ್ಲಿ ನೃತ್ಯಾಭ್ಯಾಸ ಮಾಡಿದರು. ಭಾಗವತಿಕೆ, ಚಂಡೆ-ಮದ್ದಳೆಗಾರಿಕೆ ಹಾಗೂ ವೇಷಗಾರಿಕೆಯಲ್ಲಿ ಸಮರ್ಥ ಕಲಾ ಪ್ರಾವೀಣ್ಯವನ್ನು ಗಳಿಸಿದ ಇವರು ವೃತ್ತಿರಂಗದಲ್ಲಿ ಸುಯೋಗ್ಯ ಭಾಗವತರಾಗಿ ಗುರುತಿಸಿಕೊಂಡರು.


ಹಳೇ ಹಿರಿಯಡಕ ಮೇಳ, ಅಮೃತೇಶ್ವರಿ, ಕಳವಾಡಿ, ಸಾಲಿಗ್ರಾಮ, ಕಮಲಶಿಲೆ ಹಾಗೂ ಮಂದಾರ್ತಿ ಮೇಳಗಳಲ್ಲಿ ಕಲಾವ್ಯವಸಾಯ ಮಾಡಿದ ಇವರ ವೃತ್ತಿಸೇವಾವಧಿ ಹತ್ತು ವಸಂತಗಳನ್ನು ಪೂರೈಸಿವೆ.

ಯಾವುದೇ ಪೌರಾಣಿಕ ಪ್ರಸಂಗವನ್ನು ಲೀಲಾಜಾಲವಾಗಿ ಆಡಿಸುವ ಯೋಗ್ಯತೆಯನ್ನು ಹೊಂದಿದ ಅನುಭವಿ ಭಾಗವತ ಕೃಷ್ಣಯ್ಯ ಆಚಾರ್ಯರು ಅನೇಕ ಹವ್ಯಾಸಿ ಸಂಘ-ಸಂಸ್ಥೆಗಳ ಗುರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಇವರು ಹಂಗಾರಕಟ್ಟೆ ಯಕ್ಷಕಲಾಕೇಂದ್ರದ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಿಡುವಿನ ವೇಳೆಯಲ್ಲಿ ವೆಲ್ಡಿಂಗ್ ವೃತ್ತಿಯಲ್ಲಿ ಇವರು ತೊಡಗಿ ಬದುಕಿನ ಬುತ್ತಿಯನ್ನು ತುಂಬಿಸಿಕೊಳ್ಳುತ್ತಾರೆ.

ಬಹುಮುಖಿ ಪ್ರತಿಭೆಯ ಕೃಷ್ಣಯ್ಯ ಆಚಾರ್ಯರು ಯಶೋಧಾ ಎಂಬುವರನ್ನು ವರಿಸಿ ಅಕ್ಷಯ ಹಾಗೂ ಆಗ್ನೇಯ ಎಂಬುಭಯ ಪುತ್ರರನ್ನು ಪಡೆದಿದ್ದಾರೆ.

ನೂಜಿ ಚಟ್ಟರೆಕಲ್ಲು ಶ್ರೀ ಸಿದ್ಧಿವಿನಾಯಕ ಕಲಾಸಂಘ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಇವರ ಉನ್ನತ ಪ್ರತಿಭೆಗೆ ಶಿರಬಾಗಿ ಸಂಮಾನಿಸಿವೆ.



## ಕೃಷ್ಣಯ್ಯ ಆಚಾರ್ಯ, ತೆಂಕಬೆಟ್ಟು

*ಕಂಬದ ಕೋಣೆ ಅಂಚೆ ಮತ್ತು ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9611053002*

ಉತ್ತಮ ಪೌರಾಣಿಕ ಜ್ಞಾನ ಸಂಪತ್ತಿನೊಂದಿಗೆ ಸಮರ್ಥ ರಂಗತಂತ್ರವನ್ನು ಬಲ್ಲ ಭಾಗವತ ಮತ್ತು ವೇಷಧಾರಿ ಕೃಷ್ಣಯ್ಯ ಆಚಾರ್ಯ ತೆಂಕಬೆಟ್ಟು.

ಕುಂದಾಪುರ ತಾಲೂಕಿನ ತೆಂಕಬೆಟ್ಟು ಎಂಬಲ್ಲಿ ಜನಿಸಿದ ಕೃಷ್ಣಯ್ಯ ಆಚಾರ್ಯರು ಸುರೇಶ ಆಚಾರ್ಯ-ಸೀತಾ ಆಚಾರ್ತಿ ದಂಪತಿಯ ಸುಪುತ್ರ. ಶ್ರೀಯುತರಿಗೆ ಈಗ 38 ವರ್ಷ.

ಹೆರಂಜಾಲು ಗೋಪಾಲ ಗಾಣಿಗ ಹಾಗೂ ಮನೆಯವರ ಪ್ರೇರಣೆ-ಪ್ರೋತ್ಸಾಹವನ್ನು ಪಡೆದು ರಂಗಭೂಮಿಗೆ ಪದವಿರಿಸಿದ ಆಚಾರ್ಯರು ಹಿರಿಯ ಕಲಾವಿದ ವೆಂಕಟರಮಣ ಗಾಣಿಗರ ಶಿಷ್ಯನಾಗಿ ಶಾಸ್ತ್ರೋಕ್ತ ಯಕ್ಷಗಾನ ಶಿಕ್ಷಣವನ್ನು ಹೊಂದಿದವರು.

7ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಕೃಷ್ಣಯ್ಯ ಆಚಾರ್ಯರು 18ನೇ ವಯಸ್ಸಿನಲ್ಲೇ ವೃತ್ತಿರಂಗವನ್ನು ಪ್ರವೇಶಿಸಿದ್ದರು.

ಗೋಳಿಗರಡಿ-3, ಮಾರಣಕಟ್ಟೆ-7, ಹಾಲಾಡಿ-3, ಅಮೃತೇಶ್ವರಿ-3, ಬಗ್ವಾಡಿ-2.... ಹೀಗೆ 18 ವರ್ಷಗಳ ಕಲಾಕೃಷಿಯಲ್ಲಿ ಆಚಾರ್ಯರು ಧನ್ಯತೆ ಕಂಡಿದ್ದಾರೆ.

ಯೋಗ್ಯ ಭಾಗವತರಾಗಿ ಗುರುತಿಸಿಕೊಂಡ ಆಚಾರ್ಯರು ಒಳ್ಳೆಯ ಸ್ತ್ರೀವೇಷಧಾರಿಯೂ ಹೌದು. ಸುಭದ್ರೆ, ರುಕ್ಮಿಣಿ, ಮಾಯಾ ಶೂರ್ಪನಖಿ, ಸೀತೆ, ಮಂಡೋದರಿ, ತಾರೆ, ಅಹಲ್ಯೆ, ದ್ರೌಪದಿ... ಮೊದಲಾದ ಸ್ತ್ರೀ ಭೂಮಿಕೆಗಳನ್ನೂ ನಿರ್ವಹಿಸಿ ಇವರು ಜನಮೆಚ್ಚುಗೆ ಗಳಿಸಿದ್ದಾರೆ.

ಕೃಷ್ಣಯ್ಯ ಆಚಾರ್ಯ ಅವರ ಸಹಧರ್ಮಿಣಿ ಮಾಲಿನಿ. ರಚನಾ, ಅನನ್ಯ, ರೋಹನ ಇವರ ಮೂರು ಮಂದಿ ಮಕ್ಕಳು.

ಅನುಭವಿ ಕಲಾವಿದರಾದ ಆಚಾರ್ಯರು ಅನೇಕ ಸಂಘ ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ.



## ಕೇಶವ ನಾಯಕ್, ಎಳ್ಳಂಪಳ್ಳಿ

*'ಪಾವನ ನಿಲಯ', ನೀಲಾವರ ಗ್ರಾಮ ಹಾಗೂ ಅಂಚೆ,*
*ಉಡುಪಿ ತಾಲೂಕು ಹಾಗೂ ಜಿಲ್ಲೆ – 576259*
*ದೂರವಾಣಿ : 9481517275*

ಪ್ರಜ್ವಲ ಕಲಾಶ್ರೀಯಿಂದ ಬಡಗುತಿಟ್ಟಿನ ಭರವಸೆಯ ಮದ್ದಳೆಗಾರರಾಗಿ ಗುರುತಿಸಿಕೊಂಡವರು ಕೇಶವ ನಾಯಕ್, ಎಳ್ಳಂಪಳ್ಳಿ.

ಉಡುಪಿ ತಾಲೂಕಿನ ನೀಲಾವರ ಸನಿಹದ ಎಳ್ಳಂಪಳ್ಳಿ ಎಂಬಲ್ಲಿ ಶೀನ ನಾಯಕ್–ರುಕ್ಮಿಣಿ ದಂಪತಿಯ ಸುಪುತ್ರನಾಗಿ ಜನಿಸಿದ ಇವರಿಗೀಗ 28ರ ಹರೆಯ.

ಎಂಟನೇ ತರಗತಿಯ ಬಳಿಕ ಯಕ್ಷಕಲಾ ಬದುಕಿಗೆ ಅಂಟಿಕೊಂಡ ಕೇಶವ ನಾಯಕ್ ತನ್ನ 15ರ ಹರೆಯದಲ್ಲೇ ರಂಗಜೀವನದ ಹಾದಿ ಹಿಡಿದವರು.

ಎಳವೆಯಲ್ಲಿಯೇ ಯಕ್ಷಕಲೆಯ ಕುರಿತು ವಿಶೇಷ ಗೌರವ, ಆಸಕ್ತಿಯನ್ನು ಹೊಂದಿದ ಇವರು ಎಳ್ಳಂಪಳ್ಳಿ ಜಗನ್ನಾಥ ಆಚಾರ್ ಹಾಗೂ ಎಳ್ಳಂಪಳ್ಳಿ ವಿಠಲ ಆಚಾರ್ ಅವರ ಪ್ರೇರಣೆ–ಪ್ರೋತ್ಸಾಹದಲ್ಲಿ ವೃತ್ತಿರಂಗಕ್ಕೆ ಧುಮುಕಿದವರು.

ಪ್ರಸಿದ್ಧ ಹಾಸ್ಯನಟ ಕುಂಜಾಲು ರಾಮಕೃಷ್ಣಯ್ಯನವರು ಇವರಿಗೆ ಸಂಬಂಧಿಯಾಗಿದ್ದು ಅವರ ಕಲಾನುಭವೂ ಕೇಶವರಿಗೆ ದೊರಕಿರುತ್ತದೆ.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಗುರು ಬನ್ನಂಜೆ ಸಂಜೀವ ಸುವರ್ಣ ಅವರಿಂದ ನೃತ್ಯಗಾರಿಕೆ, ನೀಲಾವರ ಲಕ್ಷ್ಮೀನಾರಾಯಣಯ್ಯ ಅವರಿಂದ ತಾಳಗಾರಿಕೆ, ಬಗ್ವಾಡಿ ಕೃಷ್ಣಮೂರ್ತಿ ಭಟ್ಟ ಹಾಗೂ ದೇವದಾಸ್ ರಾವ್ ಕೂಡ್ಲಿ ಅವರಲ್ಲಿ ಮದ್ದಳೆ ವಾದನವನ್ನು ಕರಗತ ಮಾಡಿಕೊಂಡ ಇವರು ವೃತ್ತಿರಂಗದಲ್ಲಿ ಪ್ರಗತಿಯ ಪಥದಲ್ಲಿದ್ದಾರೆ.

ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ ಹಾಗೂ ಕಮಲಶಿಲೆ ಮೇಳಗಳಲ್ಲಿ 14 ವರ್ಷಗಳ ಕಲಾಕೃಷಿ ನಡೆಸಿದ ಇವರು ಪ್ರಸ್ತುತ ಕಮಲಶಿಲೆ ಮೇಳದ ಸಹ ಮದ್ದಳೆಗಾರರಾಗಿ ದುಡಿಯುತ್ತಿದ್ದಾರೆ.

ಆರಂಭಿಕ ವೃತ್ತಿರಂಗದಲ್ಲಿ ಸ್ತ್ರೀವೇಷಧಾರಿಯಾಗಿ ಕಲಾವ್ಯವಸಾಯ ಮಾಡಿದ ಇವರು ಮತ್ತೆ ಸಶಕ್ತ ಪರಿಣತಿಯಲ್ಲಿ ಮದ್ದಳೆಗಾರಿಕೆಯಲ್ಲಿ ತೊಡಗಿಕೊಂಡವರು.

ಹೂವಿನ ಕೋಲು, ಚಿಕ್ಕ ಮೇಳಗಳ ಮದ್ದಳೆಗಾರರಾಗಿಯೂ ಕೇಶವ ತೊಡಗಿಸಿಕೊಂಡವರು. ಉಪವೃತ್ತಿಯಾಗಿ ಕೃಷಿಕರ್ಮವನ್ನು ಅವಲಂಬಿಸುವವರು.

ಸ್ಥಳೀಯ ಸಂಘ ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



## ಗಜಾನನ ನಾರಾಯಣ ಭಂಡಾರಿ, ಬೋಳ್ಗೆರೆ

*ಅಂಚೆ : ಅರೆ ಅಂಗಡಿ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 08387-262692*
*9343322640*

ಕರ್ಣ ರಸಾಯನಕಾರಕ ಮಾಧುರ್ಯದ ಮೆಲುನುಡಿಯನ್ನು ಶಾಸ್ತ್ರೋಕ್ತ ಪರಿಣತಿಯ ಶುದ್ಧ ಹಸ್ತದಲ್ಲಿ ಮದ್ದಳೆಯ ಮೂಲಕ ಕೇಳಿಸುವ ಪ್ರಬುದ್ಧ ಮದ್ದಳೆಗಾರ ಗಜಾನನ ಭಂಡಾರಿ, ಬೋಳ್ಗೆರೆ.

ಉತ್ತರ ಕನ್ನಡದ ಹೊನ್ನಾವರ ತಾಲೂಕಿನ ಬೋಳ್ಗೆರೆ ಎಂಬಲ್ಲಿ 1-11-1959ರಲ್ಲಿ ಜನಿಸಿದ ಗಜಾನನ ಭಂಡಾರಿ ಅವರು ನಾರಾಯಣ ಭಂಡಾರಿ-ಸುಬ್ಬಿ ಭಂಡಾರಿ ದಂಪತಿಯ ಸುಪುತ್ರ. ಚಿಕ್ಕಂದಿನಿಂದಲೇ ಯಕ್ಷಗಾನದ ರಂಗಕಲೆಯ ಮೇಲಣ ಅನ್ಯಾದೃಶ ಆಸಕ್ತಿಯನ್ನು ಮೈಗೂಡಿಸಿಕೊಂಡಿದ್ದ ಗಜಾನನ ಭಂಡಾರಿ ಅವರು ಮೂರನೇ ತರಗತಿಗೆ ಶರಣು ಹೊಡೆದು ತನ್ನ 20ರ ಹರೆಯದಲ್ಲೇ ಕಲೆಯನ್ನು ಬದುಕಾಗಿಸಿಕೊಂಡವರು.

ಪ್ರಸಿದ್ಧ ಮದ್ದಳೆಗಾರ ದಿ. ದುರ್ಗಪ್ಪ ಗುಡಿಗಾರ್ ಹಾಗೂ ನಾರ್ಣಪ್ಪ ಉಪ್ಪೂರರ ಕಲಾಗರಡಿಯಲ್ಲಿ ಯಕ್ಷಗಾನ ವಿದ್ಯೆಯನ್ನು ಸಂಪಾದಿಸಿದ ಗಜಾನನ ಭಂಡಾರಿ ಅವರು ಚಿಕ್ಕಪ್ಪ ಕರ್ಕಿ ಪ್ರಭಾಕರ ಭಂಡಾರಿ ಅವರ ಕಲಾನುಭವವನ್ನು ಪಡೆದವರು.

ಹಾಲಾಡಿ-4 ವರ್ಷ, ಕಳವಾಡಿ-1 ವರ್ಷ, ಶೃಂಗೇರಿ -1 ವರ್ಷ, ಅಮೃತೇಶ್ವರಿ-2 ವರ್ಷ, ಮಂದಾರ್ತಿ-1 ವರ್ಷ, ಪೆರ್ಡೂರು-11 ವರ್ಷ, ಮಾರಣಕಟ್ಟೆ-9 ವರ್ಷ... ಹೀಗೆ ಗಜಾನನ ಭಂಡಾರಿಯವರ ಕಲಾವ್ಯವಸಾಯ ಸಾರ್ಥಕ 29 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುತ್ತದೆ.

ಯಾವುದೇ ಕಾರ್ಕಶ್ಯವಿಲ್ಲದ ಪೆಟ್ಟುಗಳನ್ನು ಸ್ಫುಟವಾಗಿ ಮದ್ದಳೆಯಲ್ಲಿ ಕೇಳಿಸುವ ಭಂಡಾರಿ ಅವರು ಪದ್ಯದ ರಸ-ಭಾವಾನುಗುಣವಾದ ವಾದನ ಪದ್ಧತಿಯನ್ನು ಅನುಸರಿಸುವವರು. ಮುಮ್ಮೇಳದ ರಂಗನಟನ ಚೈತನ್ಯಶೀಲ ಅಭಿವ್ಯಕ್ತಿಗೆ ವಾದನದ ಮೂಲಕ ನವಹುರುಪು ತುಂಬುವವರು.

ಇವರ ಪೌರಾಣಿಕ ಅನುಭವ ಅಪಾರ. ಪ್ರತೀ ಪೌರಾಣಿಕ ಪ್ರಸಂಗಗಳ ರಂಗನಡೆಯನ್ನು ಸಂಪೂರ್ಣ ಬಲ್ಲ ಭಂಡಾರಿ ಅವರು ಕಥಾಮೃತದ ಶಾಖೋಪ ಶಾಖೆಗಳಲ್ಲಿ ಮದ್ದಳೆ ವಾದನದ ನಾದಪೂರ್ಣ ಕಳೆಗಟ್ಟಿಸುವವರು.

ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದಲ್ಲಿ 2 ವರ್ಷ ಮದ್ದಳೆ ವಾದನದ ಗುರುವಾಗಿ ಅನೇಕ ಪ್ರತಿಭಾವಂತ ಶಿಷ್ಯರನ್ನು ಹಿಮ್ಮೇಳ ಕಲಾವಿದರನ್ನಾಗಿ ರೂಪಿಸಿದ್ದಾರೆ.

ಸಮರ್ಥ ಮದ್ದಳೆಗಾರರಾದ ಇವರು ಚಂಡೆವಾದನ ಕಲೆಯನ್ನು ಬಲ್ಲರು.

ನಯನ ಭಂಡಾರಿ ಎಂಬುವರನ್ನು ವರಿಸಿದ ಗಜಾನನ ಭಂಡಾರಿ ಅವರು ಸುಷ್ಮಾ, ಸ್ಮಿತಾ ಎನ್ನುವ ಉಭಯ ಹೆಣ್ಣುಮಕ್ಕಳನ್ನು ಪಡೆದಿರುತ್ತಾರೆ.

ಕೆರೆಕೋಣಲು ಸಂಘ ಹಾಗೂ ಶ್ರೀಕ್ಷೇತ್ರ ಮಾರಣಕಟ್ಟೆಯ ಗ್ರಾಮಸ್ಥರಿಂದ ಇವರಿಗೆ ಗೌರವ ಪೂರ್ವಕ ಸಂಮಾನ ನಡೆದಿದೆ.



## ಗಜಾನನ ವೆಂಕಟರಮಣ ಹೆಗಡೆ

*ಅಂಚೆ : ಮಾರೂರು (ಹೊಸೂರು),*
*ಕುಮಟ ತಾಲೂಕು (ಉ.ಕ)*
*ದೂರವಾಣಿ : 9448896435*

ರಂಗ ಧಾರ್ಮಿಕತೆ ಮುಕ್ಕಾಗದಂತೆ, ಗಾಯನ ಹಾಗೂ ಮದ್ದಳೆವಾದನದ ಹಿಮ್ಮೇಳದ ಸುಗಮ್ಯಕ್ಕೆ ವಾದನ ಕ್ರಮದಲ್ಲಿ ಸಿಕ್ಕಬಲ್ಲೆಯಾಗದೆ ಪ್ರಸಂಗ ಹಾಗೂ ಪಾತ್ರಗಳಿಗೆ ಅಕ್ಕರೆಯ ವಾದನ ಸಂಗಾತಿಯಾಗುವ ಅನುಭವಿ ಚಂಡೆವಾದಕ ಗಜಾನನ ಹೆಗಡೆ.

ಉತ್ತರ ಕನ್ನಡದ ಕುಮಟಾ ತಾಲೂಕಿನ ಮೂರೂರು ಇವರ ಹುಟ್ಟೂರು. 24-4-1964ರಲ್ಲಿ ಹೆಗಡೆಯವರ ಜನನ. ತಂದೆ ವೆಂಕಟರಮಣ ಹೆಗಡೆ, ತಾಯಿ ಭವಾನಿ ಹೆಗಡೆ.

ಹತ್ತನೆ ತರಗತಿಯವರೆಗೆ ಅಕ್ಷರ ಶಿಕ್ಷಣವನ್ನು ಪಡೆದ ಗಜಾನನ ಹೆಗಡೆ ಹದಿನಾರರ ಹರೆಯದಲ್ಲೇ ಕಲಾಜೀವನಕ್ಕೆ ಮನಮಾಡಿದವರು.

ಚಿಕ್ಕಂದಿನಿಂದಲೇ ಯಕ್ಷಗಾನ ರಂಗಭೂಮಿಯ ಕುರಿತು ವಿಶೇಷ ಒಲವು ಹೊಂದಿದ್ದ ಹೆಗಡೆಯವರು ಮೂರೂರು ದೇವರು ಹೆಗಡೆಯವರ ಪ್ರೇರಣೆ-ಪ್ರೋತ್ಸಾಹದೊಂದಿಗೆ ರಂಗಬದುಕಿನ ಹಾದಿ ಹಿಡಿದವರು.

ಹೊಸ್ತೋಟ ಮಂಜುನಾಥ ಭಾಗವತ, ಕೃಷ್ಣಯಾಜಿ ಇಡಗುಂಜಿ, ಕೆ.ಪಿ. ಹೆಗಡೆ, ಶ್ರೀಧರ ಷಡಕ್ಷರಿ, ಚಾರ್ಗಲ್ ವಿಶ್ವನಾಥ ಭಾಗವತರ ಗುರುತನದಲ್ಲಿ ಇವರಿಗೆ ಸಮರ್ಪಕ ಯಕ್ಷವಿದ್ಯೆ ಸಂಪ್ರಾಪ್ತಿಯಾಗಿದೆ. ಇವರ ತಂದೆಯವರು ಮದ್ದಳೆಗಾರರಾಗಿದ್ದುದರಿಂದ ವಾದನವಿದ್ಯೆ ಎನ್ನುವುದು ಇವರಿಗೆ ರಕ್ತಗತ ಬಳುವಳಿಯಾಗಿಯೂ ಒದಗುವಂತಾಗಿದೆ.

ಹಾಲಾಡಿ ಮೇಳ-3, ಬಗ್ವಾಡಿ-3, ಕಳವಾಡಿ-3, ಅಮೃತೇಶ್ವರಿ-3, ಶಿರಸಿ-2, ಇಡಗುಂಜಿ-5... ಹೀಗೆ 19 ವರ್ಷಗಳ ಕಲಾಯಾತ್ರೆಯಲ್ಲಿ ಗಜಾನನ ಹೆಗಡೆ ಸಾರ್ಥಕ ಹೆಸರು ಗಳಿಸಿದ್ದಾರೆ. ಪ್ರಸ್ತುತ ಇವರು ಇಡಗುಂಜಿ ಮೇಳದ ಚಂಡೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಮರ್ಥ ಗುರುವಾಗಿಯೂ ಗುರುತಿಸಿಕೊಂಡ ಇವರು ಹಿಮ್ಮೇಳ ವಿಭಾಗದಲ್ಲಿ ಹಲವಾರು ಶಿಷ್ಯರನ್ನು ರೂಪಿಸಿದ್ದಾರೆ.

ಗಜಾನನ ಹೆಗಡೆ ಅವರ ಧರ್ಮಪತ್ನಿ ಸರೋಜಾ. ವಿಷ್ಣುಮೂರ್ತಿ ಹಾಗೂ ಕೀರ್ತಿ ಇವರ ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳು ಆದರದಿಂದ ಇವರನ್ನು ಸಂಮಾನಿಸಿವೆ.



## ಗಣಪತಿ ಗೋವಿಂದ ನಾಯ್ಕ, ಕುಮಟಾ

*ಕುಮಟಾ ತಾಲೂಕು,*
*ಕಾರವಾರ ಜಿಲ್ಲೆ (ಉ.ಕ)*
*ದೂರವಾಣಿ : 9164940464*

ಸೌಮ್ಯದ್ಧಿಕ ಪ್ರತಿಭಾ ವರ್ಚಸ್ಸಿನಿಂದ ಬಡಗಿನ ಯಕ್ಷಪಾತ್ರಗಳಿಗೆ ನ್ಯಾಯೋಚಿತ ಸ್ಥಾನ ನೀಡುವ ಉಜ್ವಲ ಯಕ್ಷ ನಕ್ಷತ್ರ ಗಣಪತಿ ಗೋವಿಂದ ನಾಯ್ಕ ಕುಮಟಾ.

ಉತ್ತರ ಕನ್ನಡದ ಕುಮಟಾ ಇವರ ಹುಟ್ಟೂರು. 6-7-1966ರಲ್ಲಿ ಜನನ. ಪ್ರಸಿದ್ಧ ಯಕ್ಷಗಾನ ವೇಷಧಾರಿ ಕುಮಟಾ ಗೋವಿಂದ ನಾಯ್ಕ ಇವರ ತಂದೆ. ತಾಯಿ ಸಾವಿತ್ರಿ.

ಎಸ್.ಎಸ್.ಎಲ್.ಸಿ. ಬಳಿಕ ಯಕ್ಷಲೋಕವನ್ನು ಪ್ರವೇಶಿಸಿದ ಗಣಪತಿ ನಾಯ್ಕರಿಗೆ ತಂದೆಯವರೇ ವೃತ್ತಿ ಬದುಕಿಗೆ ಪ್ರೇರಣಾಶಕ್ತಿಯಾದವರು.

ಕಲಾವಿದ ಹೊನ್ನಪ್ಪ ಗೋಕರ್ಣರ ಶಿಷ್ಯನಾಗಿ ಯಕ್ಷಗಾನ ಶಿಕ್ಷಣವನ್ನು ಪಡೆದ ಇವರು ರಂಗಲೋಕದಲ್ಲಿ ಯೋಗ್ಯ ವೇಷಧಾರಿಯಾಗಿ ಗುರುತಿಸಿಕೊಂಡವರು.

ಕುಮಟಾ, ಅಮೃತೇಶ್ವರಿ, ಬಗ್ವಾಡಿ, ಸಾಲಿಗ್ರಾಮ ಪೆರ್ಡೂರು, ಗೋಳಿಗರಡಿ ಮೇಳಗಳಲ್ಲಿ ಇವರ ಕಲಾಯಾತ್ರೆ 19 ವರ್ಷಗಳನ್ನು ಪೂರೈಸಿರುತ್ತದೆ.

ಇವರ ತಂದೆ ಕುಮಟಾ ಗೋವಿಂದನಾಯ್ಕರು ಯಕ್ಷಗಾನ ರಂಗದಲ್ಲಿ 'ಹನುಮಂತ'ನ ಭೂಮಿಕೆಯಲ್ಲಿ ಅಪಾರ ಜನಪ್ರಿಯತೆ ಕಂಡವರು. ಅವರ ಸುಪುತ್ರನಾದ ಗಣಪತಿ ನಾಯ್ಕರನ್ನು ಕೂಡ ಆ ಪಾತ್ರವೇ ಕಲಾಜಗತ್ತು ಹೆಚ್ಚು ಗುರುತಿಸುವಂತೆ ಮಾಡಿದೆ. ಅಪ್ಪನ ಪಾತ್ರ ಪೋಷಣೆಯ ವಿಶಿಷ್ಟ ಛಾಪು ಮಗನಲ್ಲೂ ಯಥಾವತ್ತಾಗಿ ಅನುಕರಣ-ಅನುಸರಣಾ ಸ್ವರೂಪದಲ್ಲಿ ಆ ಭೂಮಿಕೆಯಲ್ಲಿ ಪಡಿಮೂಡಿ ಪ್ರೇಕ್ಷಕರನ್ನು ಮೋಡಿಮಾಡಿದೆ.

ಅಂತೆಯೇ ಉಗ್ರಸೇನ, ಕಂಸ, ಕೌರವ, ಸಾಲ್ವ, ಭೀಮಸೇನ, ಶ್ರೀರಾಮ, ಬಲರಾಮ, ಘಟೋತ್ಕಚ, ಅಶ್ವತ್ಥಾಮ, ಅರ್ಜುನ... ಮೊದಲಾದ ಪಾತ್ರಗಳೂ ಇವರಿಗೆ ಅಪಾರ ಜನಪ್ರೀತಿಯನ್ನು ದೊರಕಿಸಿಕೊಟ್ಟಿವೆ.

ಇವರ ಧರ್ಮಪತ್ನಿ ಜಯಲಕ್ಷ್ಮೀ. ವೃತ್ತಿಮೇಳದ ವ್ಯವಸ್ಥಾಪಕರೂ, ಕಲಾವಿದರೂ ಆಗಿರುವ ಗಣಪತಿ ನಾಯ್ಕರಿಗೆ ಯಕ್ಷಕಲಾವ್ಯವಸಾಯವೇ ಬದುಕಿನ ಬಂಡವಾಳ. ಬೆಂಗಳೂರು, ಕುಮಟಾ, ಮಣೂರು, ಬರ್ಗಿ ಮೊದಲಾದ ಕಡೆಗಳಲ್ಲಿಯೂ ವಿವಿಧ ಸಂಘ-ಸಂಸ್ಥೆಗಳಿಂದ ಇವರು ಸಂಮಾನಿತರಾಗಿದ್ದಾರೆ.

ಡಾ. ರಾಜ್‌ಕುಮಾರ್ ಸಂಸ್ಮರಣಾ ಯಕ್ಷೋತ್ಸವ, ಬಿಲ್ಲವ ಕಲಾವಿದರ ಸಮಾವೇಶದಲ್ಲಿ ಗಣಪತಿ ನಾಯ್ಕರಿಗೆ ಗೌರವಪೂರ್ವಕ ಮಾನ-ಸಂಮಾನ ದೊರಕಿರುತ್ತದೆ.



## ಗಣಪತಿ ಪಿ. ಬೈಲಗದ್ದೆ

*ಅಂಚೆ : ಉಪ್ಪೋಣಿ*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9448941912*

ಪೌರಾಣಿಕ ಪ್ರಸಂಗಗಳಲ್ಲಿ ಬರುವ ಪ್ರಧಾನ ಪೋಷಕ ಪಾತ್ರಗಳನ್ನು ಸರ್ವಸಮರ್ಥವಾಗಿ ಪೋಷಿಸುವ ಯುವ ಪ್ರತಿಭಾನ್ವಿತ ಕಲಾವಿದ ಗಣಪತಿ ಬೈಲಗದ್ದೆ.

ಹೊನ್ನಾವರ ತಾಲೂಕಿನ ಬೈಲಗದ್ದೆ ಎಂಬಲ್ಲಿ ಜನಿಸಿದ ಗಣಪತಿಯವರು ಪುರುಷೋತ್ತಮ-ಗೌರಿ ದಂಪತಿಯ ಸುಪುತ್ರ. ಗಣಪತಿ ಅವರಿಗೆ ಈಗ ಇಪ್ಪತ್ತಾರರ ಹರೆಯ.

ತೀರ್ಥರೂಪರ ಪ್ರೇರಣೆ-ಪ್ರೋತ್ಸಾಹದೊಂದಿಗೆ ಕಲಾಜೀವನ ಸಾಗಿಸುವ ಮನ ಮಾಡಿದ ಬೈಲಗದ್ದೆ, 9ನೇ ತರಗತಿಗೆ ವಿದಾಯ ಹೇಳಿ, 15ನೇ ವಯಸ್ಸಿನಲ್ಲೇ ಯಕ್ಷರಂಗಮಂಚಕ್ಕೆ ಹೆಜ್ಜೆಯೂರಿದರು.

ಹೆರಂಜಾಲು ಗೋಪಾಲ ಗಾಣಿಗರ ಗುರುತನವನ್ನು ಪಡೆದ ಬೈಲಗದ್ದೆ ಅವರು ವೃತ್ತಿ ಮೇಳಗಳ ಪೀಠಿಕಾ ರಾಜವೇಷಧಾರಿಯಾಗಿ ವಿಶೇಷ ಜನಪ್ರಿಯತೆ ಕಂಡವರು.

ಗುಂಡಬಾಳ, ಬಗ್ವಾಡಿ, ಮಡಾಮಕ್ಕಿ, ಸಾಲಿಗ್ರಾಮ, ಪೆರ್ಡೂರು... ಮೇಳಗಳಲ್ಲಿ ಇವರ ಕಲಾಕೃಷಿ 11 ವರ್ಷ ಕಂಡಿರುತ್ತದೆ. ಪ್ರಸ್ತುತ ಪೆರ್ಡೂರು ಮೇಳದಲ್ಲಿ ಇವರ ರಂಗವ್ಯವಸಾಯ ಮುಂದುವರಿದಿದೆ.

ಉತ್ತಮ ಪೌರಾಣಿಕ ಜ್ಞಾನ ಪೂರ್ಣವಾದ ಅರ್ಥಗಾರಿಕೆಯಲ್ಲಿ ನಿರ್ವಹಣಾ ಪಾತ್ರಗಳಿಗೆ ನ್ಯಾಯಕಲ್ಪಿಸುವ ಪರಿ ಮೇಲ್ಮಟ್ಟದಲ್ಲಿ ಸಾಗುತ್ತದೆ. ಇವರ ಸುಲಲಿತವಾದ ಭಾಷಾ ಪಾಂಡಿತ್ಯ ಪ್ರೇಕ್ಷಕರಿಗೆ ಬಹಳ ಮುದ ನೀಡುತ್ತದೆ.

ಧರ್ಮರಾಯ, ಶಿಶುಪಾಲ, ದೇವೇಂದ್ರ, ಕೌರವ, ಸತ್ರಾಜಿತ, ನಾರದ, ಕಮಲಭೂಪ, ಹಂಸಧ್ವಜ... ಮೊದಲಾದ ಪಾತ್ರಗಳಲ್ಲಿ ಇವರ ಅಭಿನಯ ಮನೋಜ್ಞ.

ಯುವ ಕಲಾವಿದ ಗಣಪತಿ ಬೈಲಗದ್ದೆ ಸ್ಥಳೀಯ-ಸಂಘ ಸಂಸ್ಥೆಗಳಿಂದ ಗೌರವ-ಸಂಮಾನಗಳನ್ನು ಪಡೆದಿರುತ್ತಾರೆ.



## ಗಣಪತಿ ಶೆಟ್ಟಿ, ಮಡಾಮಕ್ಕಿ

*ಅಂಚೆ : ಮಡಾಮಕ್ಕಿ, ಮಡಾಮಕ್ಕಿ ಗ್ರಾಮ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9741995285*

ಕರ್ಣ ರಸಾಯನಕಾರಕ ಯಕ್ಷಗಾಯನದಲ್ಲಿ ಗುರುತಿಸಿಕೊಂಡ ಯುವ ಭಾಗವತ ಗಣಪತಿ ಶೆಟ್ಟಿ, ಮಡಾಮಕ್ಕಿ.

ಕುಂದಾಪುರ ತಾಲೂಕಿನ ಮಡಾಮಕ್ಕಿ-ಬೆಪ್ಡೆ ಎಂಬಲ್ಲಿ 8-4-1981ರಲ್ಲಿ ಜನಿಸಿದ ಗಣಪತಿ ಶೆಟ್ಟಿಯವರು ಚಂದ್ರಶೇಖರ ಶೆಟ್ಟಿ-ಪ್ರೇಮಾ ಶೆಟ್ಟಿ ದಂಪತಿಯ ಸುಪುತ್ರ.

9ನೇ ತರಗತಿಯವರೆಗೆ ಅಕ್ಷರ ಶಿಕ್ಷಣ ಪಡೆದು, 19ನೇ ವಯಸ್ಸಿನಲ್ಲೇ ಯಕ್ಷಲೋಕಕ್ಕೆ ಹೆಜ್ಜೆ ಹಾಕಿದ ಗಣಪತಿ ಶೆಟ್ಟರಿಗೆ ಎಳವೆಯಲ್ಲೇ ಭಾಗವತನಾಗುವ ಕನಸು ಕಲ್ಪನೆಗಳು ಮೈಮನಸ್ಸಿನಲ್ಲಿ ಸುತ್ತಿ ಸುಳಿಯುತ್ತಿದ್ದುವು. ಅವರ ಆಕಾಂಕ್ಷೆಗೆ ಊರಿನ ಕಲಾಭಿಮಾನಿ ಮಿತ್ರರು ಪ್ರೋತ್ಸಾಹ-ಸಹಕಾರದ ನೀರೆರೆದು ಬಣ್ಣದ ಬದುಕಿನ ಸುಗಮ ಪಥವನ್ನು ತೋರಿಸಿದರು.

ಹಿರಿಯ ಭಾಗವತ ಕೆ.ಪಿ. ಹೆಗಡೆಯವರ ಶಿಷ್ಯನಾಗಿ ತಾಳದೀಕ್ಷೆಯನ್ನು ಪಡೆದ ಗಣಪತಿ ಶೆಟ್ಟರು ಪೌರಾಣಿಕ ಹಾಗೂ ನವ್ಯ ಪ್ರಸಂಗಗಳನ್ನು ರಸಾತ್ಮಕವಾಗಿ ಆಡಿಸಬಲ್ಲರು.

ಮಂದಾರ್ತಿ-6, ಪೆರ್ಡೂರು-3, ಹಿರಿಯಡಕ-3... ಹೀಗೆ 12 ವರ್ಷಗಳ ವೃತ್ತಿ ತಿರುಗಾಟ ಇವರದ್ದಾಗಿದೆ.

ಹವ್ಯಾಸಿ ಯಕ್ಷಗಾನ ಮಂಡಳಿಗಳ ಭಾಗವತನಾಗಿಯೂ, ಯಕ್ಷಗಾನದ ಸಂಬಂಧಿತ ಕಾರ್ಯಕ್ರಮಗಳಲ್ಲೂ ಶ್ರೀಯುತರು ಭಾಗವಹಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಯುವ ಭಾಗವತ ಗಣಪತಿ ಶೆಟ್ಟರು ಅನೇಕ ಸಂಘ-ಸಂಸ್ಥೆಗಳಿಂದ ಸಂಮಾನ, ಗೌರವವನ್ನು ಪಡೆದಿರುತ್ತಾರೆ.



# ಗಣೇಶ ದೇವಾಡಿಗ, ಉಪ್ಪುಂದ

*ಹೊಳೆಬಾಗಿಲು, ಬೈಲುಮನೆ,*
*ಅಂಚೆ : ಉಪ್ಪುಂದ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ. ದೂರವಾಣಿ : **9448770794***

ಪ್ರಸಂಗಗಳ ಅಂತರಂಗಕ್ಕಿಳಿದು, ಪಾತ್ರಗಳ ಧರ್ಮ-ಮರ್ಮವನ್ನು ಅರ್ಥೈಸಿಕೊಂಡು ಔಚಿತ್ಯಪೂರ್ಣವಾಗಿ ರಂಗಮುಖದಲ್ಲಿ ಕಾಣಿಸುವ ಅನುಭವಿ ಸ್ತ್ರೀವೇಷಧಾರಿ ಗಣೇಶ ದೇವಾಡಿಗ ಉಪ್ಪುಂದ.

ಕುಂದಾಪುರ ತಾಲೂಕಿನ ಉಪ್ಪುಂದದಲ್ಲಿ 5-6-1967ರಲ್ಲಿ ಜನಿಸಿದ ಗಣೇಶ ದೇವಾಡಿಗ ಅವರು ದುರ್ಗಾ ದೇವಾಡಿಗ ಹಾಗೂ ಅಮ್ಮಕ್ಕ ದೇವಾಡಿಗ ಅವರ ಸುಪುತ್ರ.

7ನೇ ತರಗತಿಯವರೆಗೆ ಶಾಲಾ ಜೀವನ ಸಾಗಿಸಿದ ಗಣೇಶ್ 14ರ ಹರೆಯದಲ್ಲೇ ಬಣ್ಣದ ಬದುಕಿಗೆ ಮುಖಮಾಡಿದರು.

ಪರಿಸರದ ಹೂವಿನಕೋಲು ತಿರುಗಾಟ, ಕಳವಾಡಿ ಕಲಾಸಂಘದಲ್ಲಿ ಯಕ್ಷಗಾನ ಪಾತ್ರ ನಿರ್ವಹಣೆ ಹಾಗೂ ಉಪ್ಪುಂದ ನಾಗೇಂದ್ರರಾವ್ ಅವರ ಪ್ರೋತ್ಸಾಹ ಗಣೇಶರ ಕಲಾಬದುಕಿಗೆ ಸ್ಫೂರ್ತಿ ನೀಡಿದವು.

ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಶಾಸ್ತ್ರೀಯ ಯಕ್ಷಶಿಕ್ಷಣವನ್ನು ಪಡೆದ ಶ್ರೀಯುತರು ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಅಪಾರ ಕಲಾನುಭವವನ್ನು ಹೊಂದಿದವರು.

ಇಡಗುಂಜಿ-2, ಕಮಲಶಿಲೆ-1, ಸಾಲಿಗ್ರಾಮ-7, ಪೆರ್ಡೂರು-7, ಮಂದಾರ್ತಿ-3, ಸೌಕೂರು-2, ಮಾರಣಕಟ್ಟೆ-2, ಸಿಗಂಧೂರು-3, ಗೋಳಿಗರಡಿ-1... ಹೀಗೆ 28 ವರ್ಷಗಳ ಕಲಾವ್ಯವಸಾಯದಲ್ಲಿ ಗಣೇಶ್ ಕಲಾವಲಯದಲ್ಲಿ ಚಿರಪರಿಚಿತರಾಗಿ ಜನಪ್ರಿಯತೆ ಗಳಿಸಿದ್ದಾರೆ.

ಶೃಂಗಾರ, ಗರತಿ, ಗಯ್ಯಾಳಿ... ಹೀಗೆ ಬಹುವ್ಯಕ್ತಿತ್ವದ ಸ್ತ್ರೀಪಾತ್ರಗಳಿಗೂ ಗಣೇಶರ ಕಲಾಪ್ರತಿಭೆ ನ್ಯಾಯ ದೊರಕಿಸಿಕೊಟ್ಟಿದೆ.

ದ್ರೌಪದಿ, ಸೀತೆ, ಶಶಿಪ್ರಭೆ, ಮೀನಾಕ್ಷಿ, ಅಂಬೆ, ಸತ್ಯಭಾಮೆ, ಪ್ರಭಾವತಿ, ಸುಗರ್ಭೆ, ಮಂಡೋದರಿ ಮೊದಲಾದ ಸ್ತ್ರೀ ಭೂಮಿಕೆಗಳಿಗೂ ಶ್ರೀಕೃಷ್ಣ, ಅಭಿಮನ್ಯು, ವೃಷಸೇನ ಮೊದಲಾದ ಪುರುಷ ವೇಷಗಳಿಗೂ ಗಣೇಶ್ ಉಪ್ಪುಂದ ಅವರು ಉನ್ನತ ಕಲಾವಂತಿಕೆಯ ರೂಪನೀಡಿ ಸೈ ಅನ್ನಿಸಿಕೊಂಡಿದ್ದಾರೆ. ಪ್ರಸ್ತುತ ಶ್ರೀಯುತರು ಗೋಳಿಗರಡಿ ಮೇಳದ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಮೂಕಾಂಬಿಕಾ ಎಂಬವರನ್ನು ವರಿಸಿ ರಶ್ಮಿತಾ, ರಕ್ಷಿತ ಹಾಗೂ ರಂಜಿತಾ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಅನೇಕ ಸಂಘ-ಸಂಸ್ಥೆಗಳ ಸಂಮಾನವೂ ಇವರಿಗೆ ದೊರಕಿರುತ್ತದೆ.



## ಗಣೇಶ ಬಳೆಗಾರ ಜನ್ನಾಡಿ

*ಯಡಾಡಿ-ಮತ್ಯಾಡಿ, ಗುಡ್ಡೆ ಅಂಗಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9480250181*

ಖಚಿತ ಲಯಗಾರಿಕೆಯಲ್ಲಿ ಮಿಳಿತವಾದ ಚುರುಕಿನ ನರ್ತನ, ಸೊಗಸಾದ ವೇಷ, ಶ್ರುತಿ ಸುಭಗ ಅರ್ಥ ವೈಖರಿ, ಸಮರ್ಪಕ ರಂಗಪ್ರಜ್ಞೆಯಲ್ಲಿ ಬಡಗುತಿಟ್ಟಿನ ಸಮರ್ಥ ಮುಂಡುವೇಷಧಾರಿಯಾಗಿ ಗುರುತಿಸಿಕೊಂಡ ಉತ್ಸಾಹಿ ಕಲಾವಿದ ಜನ್ನಾಡಿ ಗಣೇಶ ಬಳೆಗಾರ.

ಕುಂದಾಪುರ ತಾಲೂಕಿನ ಜನ್ನಾಡಿ ಎಂಬಲ್ಲಿ 22-2-1971ರಲ್ಲಿ ಜನಿಸಿದ ಗಣೇಶ್ ಅವರು ಬಸವ ಬಳೆಗಾರ್-ಗುಲಾಬಿ ದಂಪತಿಯ ಸುಪುತ್ರ.

ನಾಕಕ್ಕೆ ಓದು ಸಾಕೆನಿಸಿಕೊಂಡ ಗಣೇಶ ಬಳೆಗಾರರು ತನ್ನ 13ರ ಹರೆಯದಲ್ಲೇ ಯಕ್ಷಗಾನ ರಂಗಭೂಮಿಗೆ ಹೆಜ್ಜೆ ಹಾಕಿದರು. ಇವರ ತಂದೆ ಯಕ್ಷಗಾನ ಕಲಾವಿದರಾದುದರಿಂದ ಯಕ್ಷಕಲೆಯ ನಂಟು ಬಾಲ್ಯದಲ್ಲಿಯೇ ಇವರನ್ನು ಬೆಸೆದುಕೊಂಡಿತು.

ತಂದೆಯವರಿಂದಲೇ ಯಕ್ಷಶಿಕ್ಷಣ ಪಡೆದ ಗಣೇಶ ಬಳೆಗಾರರು ವೃತ್ತಿರಂಗದಲ್ಲಿ ಸುಯೋಗ್ಯ ಕಲಾವಿದನಾಗಿ ರೂಪುಗೊಳ್ಳುವಲ್ಲಿ ಯಶಸ್ವಿಯಾದರು.

ಮಂದಾರ್ತಿ-18, ಶಿರಸಿ-2, ಶೃಂಗೇರಿ-1, ರಂಜದಕಟ್ಟೆ-5.... ಹೀಗೆ 26 ವರ್ಷಗಳ ಕಲಾವ್ಯವಸಾಯ ಇವರದ್ದಾಗಿದ್ದು ಸಾರ್ಥಕತೆಯನ್ನು ಕಂಡುಕೊಂಡಿದೆ.


ಶ್ರೀಕೃಷ್ಣ ಅಭಿಮನ್ಯು, ಬಬ್ರುವಾಹನ, ಲವ-ಕುಶ, ಪ್ರಸೇನ, ಮೈಂದ-ದ್ವಿವಿದ, ವೃಷಸೇನ.... ಮೊದಲಾದ ಮೂರನೇ ವೇಷಗಳು ಇವರನ್ನು ಕಲಾಲೋಕದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿದೆ.

ಜೋಡಾಟಗಳಲ್ಲಿ ಇವರು ಹುರುಪಿನ ರಂಗಕರ್ಮದಲ್ಲಿ ಪಾತ್ರಗಳ ಮೂಲಕ ರಂಗಸ್ಥಳದಲ್ಲಿ ಬೆರಗು ಹುಟ್ಟಿಸುವವರು.

ಉಪವೃತ್ತಿಯಾಗಿ ಬಳೆಗಾರಿಕೆ ಹಾಗೂ ಯಕ್ಷಗಾನ ವೇಷ ಸಾಮಗ್ರಿ ತಯಾರಿಕೆಯಲ್ಲಿ ಗಣೇಶ್ ತೊಡಗಿಸಿಕೊಳ್ಳುತ್ತಾರೆ.

ಗಣೇಶ್ ಬಳೆಗಾರರು ಉಷಾ ಎಂಬರನ್ನು ವರಿಸಿ ಅನುಷ ಹಾಗೂ ಆದರ್ಶ ಎನ್ನುವ ಉಭಯ ಮಕ್ಕಳನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಕಲಾಪ್ರತಿಭೆಗೆ ಗೌರವಪೂರ್ವಕ ಮಾನ-ಸಂಮಾನವನ್ನು ಅರ್ಪಿಸಿವೆ.



## ಗೋಪಾಲ ಕೃಷ್ಣಯ್ಯ ಎಚ್.ಎಸ್.

*ಹೊನ್ನೆ ಕುಡಿಗೆ, ಅಂಚೆ : ಗಂಡಗಟ್ಟ,*
*ಶೃಂಗೇರಿ ತಾಲೂಕು, ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 08265-290517*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯಲ್ಲಿ ಸಾಂಪ್ರದಾಯಿಕ ಶೈಲೀಕೃತ ಮದ್ದಳೆವಾದನದಲ್ಲಿ ಯೋಗ್ಯ ಖ್ಯಾತಿಯನ್ನು ಪಡೆದ ಹಿರಿಯ ಮದ್ದಳೆಗಾರ ಗೋಪಾಲಕೃಷ್ಣಯ್ಯ ಎಚ್.ಎಸ್.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಹೊನ್ನೆ ಕುಡಿಗೆ ಇವರ ಹುಟ್ಟೂರು. ಶೀನಪ್ಪಯ್ಯ-ನಾಗವೇಣಿ ದಂಪತಿಯ ಸುಪುತ್ರನಾಗಿ 22-8-1943ರಲ್ಲಿ ಜನಿಸಿದ ಗೋಪಾಲಕೃಷ್ಣಯ್ಯ ಅವರು 8ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ ತನ್ನ 15ರ ಹರೆಯದಲ್ಲೇ ಯಕ್ಷಗಾನ ಲೋಕವನ್ನು ಪ್ರವೇಶಿಸಿದರು.

ಇವರ ಅಜ್ಜ ಸುಬ್ಬಣ್ಣಯ್ಯ ಚಿಕಳಿಮನೆ ಯಕ್ಷಗಾನ ಕಲಾವಿದರು. ತಂದೆಯವರು ತಾಳಮದ್ದಳೆ ಅರ್ಥಧಾರಿಗಳು. ಹಾಗಾಗಿ ಕಲೆಯ ಸಾಂಗತ್ಯ ಇವರಿಗೆ ಆನುವಂಶಿಕ ಹಿನ್ನೆಲೆಯಲ್ಲಿ ಬಲಿಷ್ಠವಾಗಿಯೇ ಒದಗುವಂತಾಯಿತು.

ಎನ್.ಕೆ. ಸುಬ್ಬರಾವ್ ಇವರ ಪ್ರೇರಣೆ-ಪ್ರೋತ್ಸಾಹದೊಂದಿಗೆ ವೃತ್ತಿರಂಗಕ್ಕೆ ಧುಮುಕಿದ ಗೋಪಾಲಕೃಷ್ಣಯ್ಯ ಅವರು ತನ್ನ ಅಜ್ಜನಿಂದಲೇ ಯಕ್ಷ ಶಿಕ್ಷಣ ಪಡೆದವರು.


ಕಿಗ್ಗ, ಮಡಾಮಕ್ಕಿ, ಮೇಗರವಳ್ಳಿ, ಮಂದಾರ್ತಿ, ಸಾಗರ-ಹೆಗ್ಗೋಡು, ಸೀತೂರು, ಗೋಳಿಗರಡಿ, ಕಮಲಶಿಲೆ, ಅಮೃತೇಶ್ವರಿ, ಹಾಲಾಡಿ, ರಂಜದಕಟ್ಟೆ, ಬಾಳೇಹೊಳೆ, ಕೊಡವೂರು, ಪೆರ್ಡೂರು, ಮಾರಣಕಟ್ಟೆ.... ಮೊದಲಾದ ವೃತ್ತಿಮೇಳಗಳಲ್ಲಿ ಸುದೀರ್ಘ ನಾಲ್ಕು ದಶಕಗಳ ರಂಗವ್ಯವಸಾಯ ಮಾಡಿದ ಹಿರಿಮೆಯನ್ನು ಹೊಂದಿದ ಇವರು ಪ್ರಸ್ತುತ ವಿಶ್ರಾಂತ ಜೀವನವನ್ನು ಸಾಗಿಸುತ್ತಿದ್ದಾರೆ.

ಅನನ್ಯ ಯಕ್ಷ ಕಲಾನುಭವದ ಕಣಜವಾಗಿರುವ ಸಮರ್ಥ ಮದ್ದಳೆಗಾರ ಗೋಪಾಲಕೃಷ್ಣಯ್ಯ ಅವರು ಪ್ರಬುದ್ಧ ಚಂಡೆವಾದಕರೂ ಹೌದು. ವೇಷಧಾರಿಯೂ ಕೂಡ. ಅನೇಕ ವೇಷಗಳನ್ನು ಧರಿಸಿದ ಅನುಭವವೂ ಇವರಿಗಿದೆ.

ಯೋಗ್ಯ ಗುರುವಾಗಿ ಅನೇಕ ಪ್ರತಿಭಾವಂತ ಕಲಾವಿದರನ್ನು ಯಕ್ಷಗಾನರಂಗಕ್ಕೆ ನೀಡಿದ ಹೆಗ್ಗಳಿಕೆಯೂ ಇವರದ್ದಾಗಿದೆ.

ಧರ್ಮಪತ್ನಿ ನಾಗರತ್ನಾ ಎಂಬವರಲ್ಲಿ ವೀಣಾ, ರಘುಕುಮಾರ್, ಪದ್ಮನಾಭ ಹಾಗೂ ಗುರುಪ್ರಸಾದ್ ಎಂಬ ನಾಲ್ಕು ಮಂದಿ ಮಕ್ಕಳನ್ನು ಪಡೆದಿರುತ್ತಾರೆ.

ಶೃಂಗೇರಿ ಕನ್ನಡ ಸಾಹಿತ್ಯ ಪರಿಷತ್, ಶ್ರೀರಾಮಚಂದ್ರಾಪುರ ಮಠ, ಬಾಳೆಹೊಳೆ, ಹರಿಹರಪುರ ಮಠ, ಹೊರನಾಡು ದೇವಳದ ವತಿಯಿಂದ ಇವರನ್ನು ಗೌರವಪೂರ್ವಕವಾಗಿ ಸಂಮಾನಿಸಲಾಗಿದೆ.



## ಗೋಪಾಲ ನಾಯ್ಕ ಜಡ್ಕಲ್

*ಕಾನ್ಕಿ-ದಪ್ತಿ, ಅಂಚೆ : ಜಡ್ಕಲ್, ಜಡ್ಕಲ್ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 0254-259363*

ಯಕ್ಷಗಾನದ ಖಳನಾಯಕ ಪಾತ್ರಗಳಲ್ಲಿ ತನ್ನ ಸೃಜನಾತ್ಮಕ ಕಲಾವಂತಿಕೆಯನ್ನು ದರ್ಶಿಸುವ ಉತ್ಸಾಹಿ ಕಲಾವಿದ ಜಡ್ಕಲ್ ಗೋಪಾಲನಾಯ್ಕ.

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕಾನ್ಕಿ-ದಪ್ತಿ ಎಂಬಲ್ಲಿ 1980ರಲ್ಲಿ ಜನಿಸಿದ ಗೋಪಾಲನಾಯ್ಕ ಬಾಬು ನಾಯ್ಕ-ಇಂದಿರಾ ದಂಪತಿಯ ಸುಪುತ್ರ.

7ನೇ ತರಗತಿಯವರೆಗೆ ಶಾಲಾ ವಿದ್ಯಾಭ್ಯಾಸ ಮಾಡಿ ಸ್ವಯಂ ಪ್ರೇರಣೆಯಿಂದ ತನ್ನ 14ನೇ ವಯಸ್ಸಿನಲ್ಲೇ ಇವರು ಯಕ್ಷಗಾನ ರಂಗಕ್ಕೆ ಧುಮುಕಿದವರು.


ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ಲಕ್ಷ್ಮೀನಾರಾಯಣಯ್ಯ ಗುರು ಸಂಜೀವ ಸುವರ್ಣರ ಶಿಷ್ಯನಾಗಿ ಸಮರ್ಪಕ ಯಕ್ಷ ಶಿಕ್ಷಣ ಪಡೆದು ವೃತ್ತಿರಂಗವಲ್ಲಿ ಯೋಗ್ಯ ವೇಷಧಾರಿಯಾಗಿ ಗುರುತಿಸಿಕೊಂಡರು.

ಅಮೃತೇಶ್ವರಿ-3, ಕಮಲಶಿಲೆ-7, ಸೌಕೂರು-4.... ಹೀಗೆ 14 ವರ್ಷಗಳ ಕಲಾತಿರುಗಾಟದಲ್ಲಿ ಜಡ್ಕಲ್ ಗೋಪಾಲರವರು ಪ್ರಗತಿ-ಪುರೋಗತಿಯ ಯಕ್ಷಪಥದಲ್ಲಿ ಸಾಗುತ್ತಿದ್ದಾರೆ.

ರಂಗಸ್ಥಳದಲ್ಲಿ ಹುರುಪು ತುಂಬಿದ ಕಲಾಭಿವ್ಯಕ್ತಿ ಇವರದ್ದು. ಸಮಕಾಲೀನ ರಂಗಭೂಮಿಯ ವಿಜೃಂಭಿತ ರಂಗವಿಲಾಸ ಇವರ ಸೃಷ್ಟಿಶೀಲ ಕಲಾ ಕರ್ಮದಲ್ಲಿ ಪ್ರಕಟಗೊಂಡು ಪ್ರೇಕ್ಷಕರ ಮನ ಮುದಗೊಳಿಸುತ್ತದೆ.

ಕೌರವ, ಕೀಚಕ, ದುಶ್ಯಾಸನ, ಶಕುನಿ, ಸಾಲ್ವ, ಕಂಸ, ಮಾಗಧ... ಮೊದಲಾದ ಪೌರಾಣಿಕ ಪಾತ್ರಗಳಿಗೆ ಈ ಯುವಕಲಾವಿದ ತನ್ನದೇ ಆದ ಕಲಾಪ್ರತಿಭೆಯಲ್ಲಿ ಜೀವತುಂಬುವಲ್ಲಿ ಸಾಫಲ್ಯ ಕಂಡಿದ್ದಾರೆ. ಉತ್ತಮ ವೈನೋದಿಕ ಪ್ರಜ್ಞೆಯೂ ಇವರಿಗಿದ್ದು, ಇವರ ನಿರ್ವಹಣಾ ಭೂಮಿಕೆಗಳು ಅಂತಹ ಗುಣಾಂಶಗಳೊಂದಿಗೆ ಮೆರುಗುಗೊಂಡು ಕಲಾರಸಿಕರಿಗೆ ಭಿನ್ನರಸ-ರುಚಿಯನ್ನು ಕಟ್ಟಿಕೊಡುತ್ತವೆ.

ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ ಸಮ್ಮಾನಿತರಾಗಿರುವ ಪ್ರತಿಭಾಶಾಲಿ ಯುವ ಕಲಾವಿದ ಜಡ್ಕಲ್ ಗೋಪಾಲನಾಯ್ಕರು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದಲೂ ಗೌರವ ಪಡೆದಿರುತ್ತಾರೆ.



# ಗೋಪಾಲಮೂರ್ತಿ ಎಚ್.ಆರ್.

*ಹೆಬ್ಬೈಲು, ಅಂಚೆ : ಪುರಪ್ಪೆಮನೆ*
*ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9945153547*
*9663090974*

ಭಾಗವತರಾಗಿಯೂ, ವೇಷಧಾರಿಯಾಗಿಯೂ, ಮದ್ದಳೆವಾದಕರಾಗಿಯೂ ಮಾತ್ರವಲ್ಲ, ವೃತ್ತಿ ಮೇಳಗಳ ಯಜಮಾನರಾಗಿಯೂ ಗುರುತಿಸಲ್ಪಡುವ ಪ್ರತಿಭಾವಂತರಾಗಿ, ಎಚ್.ಆರ್. ಗೋಪಾಲ ಮೂರ್ತಿಯವರು ಬಡಗಿನ ಯಕ್ಷಗಾನ ರಂಗದಲ್ಲಿ ಸೇವಾ ತತ್ಪರರಾಗಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಹೆಬ್ಬೈಲು ಎಂಬ ಹಳ್ಳಿಯೇ ಗೋಪಾಲ ಮೂರ್ತಿಯವರ ಹುಟ್ಟೂರು. ಜಿ. ರಾಮಪ್ಪ ಹಾಗೂ ಗೌರಮ್ಮ ದಂಪತಿಯ ಪುತ್ರನಾಗಿ 5-1-1970ರಲ್ಲಿ ಜನಿಸಿದ ಇವರು ಯಕ್ಷಗಾನ ಕ್ಷೇತ್ರದಲ್ಲಿ ನಾಲ್ಕು ದಶಕಗಳ ಕಾಲ ಸ್ತ್ರೀವೇಷಧಾರಿಯಾಗಿ ದುಡಿದ ತಂದೆ ಜಿ. ರಾಮಪ್ಪನವರ ಪ್ರೋತ್ಸಾಹ, ಪ್ರೇರಣೆ ಹಾಗೂ ಪ್ರಾಥಮಿಕ ಗುರುತನವನ್ನು ಪಡೆದು, ಎಸ್.ಎಸ್.ಎಲ್.ಸಿ. ಶಿಕ್ಷಣವನ್ನು ಮುಗಿಸಿ ತನ್ನ 18ರ ಹರೆಯದಲ್ಲೇ ವೃತ್ತಿರಂಗಭೂಮಿಗೆ ಹೆಜ್ಜೆ ಹಾಕಿದರು.

ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಸಮರ್ಪಕ ಯಕ್ಷಶಿಕ್ಷಣವನ್ನು ಪಡೆದ ಶ್ರೀಯುತರು ರಂಜದ ಕಟ್ಟೆ, ನಾಗರಕೊಡಿಗೆ, ಗೋಳಿಗರಡಿ, ಮಂದಾರ್ತಿ, ಮಾರಣಕಟ್ಟೆ, ಸಾಲಿಗ್ರಾಮ, ಮಡಾಮಕ್ಕಿ, ಮೇಗರವಳ್ಳಿ, ಬಗ್ವಾಡಿ.... ಹೀಗೆ 21 ವರ್ಷಗಳ ಕಾಲ ರಂಗಕೃಷಿ ನಡೆಸಿದ್ದಾರೆ.

ಬಗ್ವಾಡಿ ಮೇಳದ ವ್ಯವಸ್ಥಾಪಕರಾಗಿ ಗುರುತಿಸಿಕೊಂಡ ಗೋಪಾಲ ಮೂರ್ತಿಯವರು ರಂಗಭೂಮಿಯ ಹಿಮ್ಮೇಳ ಮುಮ್ಮೇಳದ ಕಲೆಗಾರಿಕೆಯನ್ನು ದ್ವಿತೀಯವಾಗಿಸಿಕೊಂಡು ವೃತ್ತಿಮೇಳದ ಯಜಮಾನಿಕೆಯ ಸಂಘಟಕತನದಲ್ಲಿ ಮುಂದುವರಿಯುತ್ತಿದ್ದಾರೆ.

ಶ್ರೀಕೃಷ್ಣ, ಅರ್ಜುನ ಮೊದಲಾದ ಭೂಮಿಕೆಗಳು ಇವರ ಸಶಕ್ತ ನಿರ್ವಹಣೆಯಲ್ಲಿ ಜನಪ್ರೀತಿಗಳಿಸಿವೆ. ಐದು ಸಂಘ ಸಂಸ್ಥೆಗಳ ಗುರುವಾಗಿಯೂ ಯಕ್ಷಗಾನ ತರಬೇತಿಯನ್ನು ನೀಡಿ ಯುವ ಕಲಾವಿದರನ್ನು ರಂಗಭೂಮಿಗೆ ಪರಿಚಯಿಸುತ್ತಿದ್ದಾರೆ.

ಗೋಪಾಲ ಮೂರ್ತಿಯವರ ಧರ್ಮಪತ್ನಿ ಕೆ. ಎಸ್. ಲತಾ. ಯಕ್ಷ ಋತುವಿನಲ್ಲಿ ಮೇಳದ ವ್ಯವಸ್ಥಾಪಕತ್ವ, ಮಳೆಗಾಲದಲ್ಲಿ ವ್ಯವಸಾಯ ಶ್ರೀಯುತರ ವೃತ್ತಿ-ಉಪವೃತ್ತಿಯಾಗಿದೆ. ಅನೇಕ ಸಂಘ ಸಂಸ್ಥೆಗಳಿಂದ ಶ್ರೀ ಗೋಪಾಲ ಮೂರ್ತಿಯವರಿಗೆ ಸಂಮಾನ-ಗೌರವ ದೊರಕಿದೆ.



## ಗೋಪಾಲ ಸೌಡ

*ಗಂಗಮಕ್ಕಿ, ಅಂಚೆ : ಸೌಡ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9740557993*

ಪುರಾಣ ಕಥಾನಕಗಳ ಸರ್ವನಡೆಯು ಪಾತ್ರಗಳನ್ನು ಧರಿಸಿ ಸರ್ವಾಂಗ ಸುಂದರವಾಗಿ ನಿರೂಪಿಸುವ ಸಮರ್ಥ ಕಲಾವಿದ ಸೌಡ ಗೋಪಾಲ.

ಕುಂದಾಪುರ ತಾಲೂಕಿನ ಸೌಡ–ಗಂಗಾಮಕ್ಕಿ ಎಂಬಲ್ಲಿ 6–1–1971ರಲ್ಲಿ ಜನಿಸಿದ ಗೋಪಾಲ ಅವರು ಕಾಳನಾಯ್ಕ ಹಾಗೂ ಸೀತಾ ದಂಪತಿಯ ಸುಪುತ್ರ.

5ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ 17ನೇ ವಯಸ್ಸಿನಲ್ಲೇ ಕಲಾಜೀವನದ ದಾರಿ ತುಳಿದ ಇವರಿಗೆ ಹಿರಿಯ ಕಲಾವಿದ ಮೊಳಹಳ್ಳಿ ಹೆರಿಯ ನಾಯ್ಕರು ವೃತ್ತಿಬದುಕಿನ ಪ್ರೇರಣ–ಪ್ರೋತ್ಸಾಹಕ ಶಕ್ತಿಯಾದರು.

ಆರ್ಗೋಡು ಮೋಹನದಾಸ ಶೆಣೈ ಹಾಗೂ ಹಾರಾಡಿ ಸರ್ವೋತ್ತಮ ಗಾಣಿಗ ಅವರಲ್ಲಿ ಯಕ್ಷಕಲಾಶಿಕ್ಷಣವನ್ನು ಪಡೆದ ಗೋಪಾಲರು ವೃತ್ತಿರಂಗದಲ್ಲಿ ಯೋಗ್ಯ ಕಲಾವಿದನಾಗಿ ರೂಪುಗೊಂಡರು.

ಹಾಲಾಡಿ–1, ಮಂದಾರ್ತಿ–4, ಅಮೃತೇಶ್ವರಿ–1, ಕಮಲಶಿಲೆ–16.... ಹೀಗೆ 22 ವರ್ಷಗಳ ಕಲಾತಿರುಗಾಟದಲ್ಲಿ ಗೋಪಾಲ ಅವರು ಅಪಾರ ಪ್ರೇಕ್ಷಕರ ಆದರಕ್ಕೆ ಪಾತ್ರರಾಗಿದ್ದಾರೆ.

ಧೀರೋದಾತ್ತ ನಡೆಯ ರಾಜವೇಷಗಳನ್ನು, ಗಂಭೀರ ಭಾವ–ಸ್ವಭಾವದ ಮಂಡಾಸುವೇಷಗಳನ್ನು, ಪ್ರಸಂಗ ಪ್ರಧಾನವಾದ ಪೋಷಕ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಇವರು ಮೇಳಗಳಲ್ಲಿ ಸರ್ವಾಂಗೀಣ ಕಲಾವಿದರು.

ದೇವೇಂದ್ರ, ಶಲ್ಯ, ಪರಶುರಾಮ, ವಿಭೀಷಣ, ಧರ್ಮರಾಯ, ಭೀಮ, ಸಾಲ್ವ, ಅರ್ಜುನ, ಶೂರಸೇನ, ಮಹಿಷಾಸುರ, ಕಿರಾತ... ಹೀಗೆ ಎಲ್ಲಾ ಬಗೆಯ ವೇಷಗಳಲ್ಲಿ ಸೌಡ ಗೋಪಾಲರ ಅದ್ಭುತ ಕಲಾವಂತಿಕೆ ರಂಗಮಂಚದಲ್ಲಿ ಎದ್ದು ಕಾಣುತ್ತದೆ.

ಉತ್ತಮ ಅರ್ಥಗಾರಿಕೆಯ ಪರಿಣತಿಯನ್ನು ಹೊಂದಿದ ಇವರು ಪೌರಾಣಿಕ ಜ್ಞಾನ ಸಂಪತ್ತಿನಲ್ಲಿ ಪಾತ್ರಗಳ ಅಂತಃಸತ್ವವನ್ನು ಮೊಗೆಮೊಗೆದು ಅಭಿವ್ಯಕ್ತಿಸುತ್ತಾರೆ.

ಸೌಡ ಗೋಪಾಲ ಅವರ ಸಹಧರ್ಮಿಣಿ ಸವಿತಾ, ಓರ್ವ ಸುಪುತ್ರ ಸುಮಂತ.

ಕರ್ಕಿ ನಾರಾಯಣಶೆಟ್ಟಿ ಪ್ರಶಸ್ತಿ ಹಾಗೂ ಕರಾವಳಿ ಮೈತ್ರಿ ಸಂಘ ಹೈದರಾಬಾದ್ ಇವರ ವತಿಯಿಂದ ಗೌರವಪೂರ್ವಕ ಸಂಮಾನ ಇವರಿಗೆ ದೊರಕಿರುತ್ತದೆ.



## ಗೋವಿಂದ ದೇವಾಡಿಗ, ಸಾಲೆಮಕ್ಕಿ

*ಅಂಚೆ : ಬಿಜೂರು, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 9480055372*

ಮನೋರಂಜಿತವಾದ ತಿಳಿಹಾಸ್ಯದ ಸೊಗಸಿನಲ್ಲಿ ಸೃಜನಶೀಲ ಕಲಾಪ್ರತಿಭೆಯನ್ನು ಮೆರೆಯುವ ಯುವ ಹಾಸ್ಯ ಕಲಾವಿದ ಗೋವಿಂದ ದೇವಾಡಿಗ, ಸಾಲೆಮಕ್ಕಿ.

ಕುಂದಾಪುರ ತಾಲೂಕಿನ ಬಿಜೂರು-ಸಾಲೆಮಕ್ಕಿ ಎಂಬಲ್ಲಿ ಅಣ್ಣಪ್ಪ ದೇವಾಡಿಗ-ಚಂದು ದಂಪತಿಯ ಸುಪುತ್ರನಾಗಿ ಜನಿಸಿದ ಗೋವಿಂದ ದೇವಾಡಿಗರಿಗೆ ಈಗ ಮೂವತ್ತರ ಹರೆಯ.

ನಾಕಕ್ಕೆ ಅಕ್ಷರವಿದ್ಯೆ ಸಾಕೆನಿಸಿಕೊಂಡ ಇವರು ತನ್ನ ಹದಿನಾಲ್ಕರ ಹರೆಯದಲ್ಲೇ ಯಕ್ಷಗಾನರಂಗ ಪ್ರವೇಶಿಸಿದರು.

ಬಿಜೂರು ವಿಶ್ವೇಶ್ವರ ಅಡಿಗ ಅವರು ಇವರ ಕಲಾಜೀವನದ ಪ್ರೋತ್ಸಾಹಕರಾಗಿ, ಯಕ್ಷವಿದ್ಯಾ ಗುರುವಾಗಿ ಹರಸಿದರು.

ಕಳವಾಡಿ, ಬಗ್ವಾಡಿ, ಹಾಲಾಡಿ, ಮಾರಣಕಟ್ಟೆ ಮೇಳಗಳಲ್ಲಿ ಇವರ ರಂಗವ್ಯವಸಾಯ 17 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಪೌರಾಣಿಕ ಪ್ರಸಂಗಗಳಲ್ಲಿ ಕಂಡುಬರುವ ಎಲ್ಲಾ ನಡೆಯ ಹಾಸ್ಯ ಭೂಮಿಕೆಗಳನ್ನು ಸರ್ವಸಮರ್ಥವಾಗಿ ನಿರ್ವಹಿಸುವ ಇವರು ವಿಜಯ, ಪಾಪಣ್ಣ, ಬೇಹು ಚಾರಕ, ದಾರುಕ, ವಿದ್ಯುಜ್ಜಿಹ್ವ... ಮೊದಲಾದ ಪಾತ್ರಗಳಿಗೆ ಜೀವ ತುಂಬಿದ್ದಾರೆ.

ವೇಷ, ಭಾಷೆ, ಹಾವ-ಭಾವ, ನೃತ್ಯ-ಅಭಿನಯ ಎಲ್ಲದರಲ್ಲೂ ಹಾಸ್ಯ ರಸಾತ್ಮಕವಾದ ಕಲಾವಂತಿಕೆ ಮೆರೆಯುವ ದೇವಾಡಿಗರು ಪ್ರಸ್ತುತ ಮಾರಣಕಟ್ಟೆ ಮೇಳದಲ್ಲಿ ಕಲಾಕಾರ್ಯತತ್ಪರರಾಗಿದ್ದಾರೆ.

ಪ್ರತಿಭಾವಂತ ಕಲಾವಿದ ಗೋವಿಂದ ದೇವಾಡಿಗ ಅವರ ಬಾಳಸಂಗಾತಿ ಶಾಂತ. ಓರ್ವ ಸುಪುತ್ರ ಬ್ರಹ್ಮಾನಂದ, ಸಂತೃಪ್ತ ಸಂಸಾರ.

ಸ್ಥಳೀಯ ಸಂಘ-ಸಂಸ್ಥೆಗಳಿಂದ ದೇವಾಡಿಗರು ಸಂಮಾನಿತರಾಗಿದ್ದಾರೆ.



## ಗೋವಿಂದ ಮೊಗವೀರ, ವಂಡಾರು

*ಅಂಚೆ/ಗ್ರಾಮ : ವಂಡಾರು,*
*ಉಡುಪಿ ಜಿಲ್ಲೆ/ತಾಲೂಕು*

ಅತ್ಯಾಕರ್ಷಕ ರೂಪಸಿರಿ, ಬಳುಕುವ ಮೈಮಾಟ, ಮಾಧುರ್ಯತೆಯ ಕಂಠ ಸಂಪತ್ತು, ಲಾಲಿತ್ಯಪೂರ್ಣ ನೃತ್ಯಾಭಿನಯ ಹಾಗೂ ಗರಿಷ್ಠಮಟ್ಟದ ಭಾವಾಭಿವ್ಯಕ್ತಿಯ ಸ್ತ್ರೀವೇಷದಲ್ಲಿ ಕಂಗೊಳಿಸುವ ಯುವ ಕಲಾವಿದ ಗೋವಿಂದ ಮೊಗವೀರ, ವಂಡಾರು.

ಉಡುಪಿಜಿಲ್ಲೆಯ ವಂಡಾರು ಗ್ರಾಮದ ಮಾರ್ವಿ ಎಂಬ ಹಳ್ಳಿಯಲ್ಲಿ ಬೋಳು ಮರಕಾಲ-ಗೌರಿ ಮರಕಾಲ್ತಿ ದಂಪತಿಯ ಸುಪುತ್ರನಾಗಿ 20-11-1985ರಲ್ಲಿ ಜನಿಸಿದ ಗೋವಿಂದ ಅವರು ಸ್ವಯಂ ಕಲಾಸಕ್ತಿಯೊಂದಿಗೆ ಹೆತ್ತವರ ಪ್ರೇರಣೆ ಪ್ರೋತ್ಸಾಹವನ್ನು ಪಡೆದು ಯಕ್ಷಗಾನ ಬಣ್ಣದ ಬದುಕಿಗೆ ಮುಖ ಮಾಡಿದರು.

6ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಇವರು ತನ್ನ 13ರ ಹರೆಯದಲ್ಲೇ ಯಕ್ಷಪ್ರಪಂಚಕ್ಕೆ ತೆರೆದುಕೊಂಡವರು.

ಸುರೇಶ ಉಪ್ಪೂರ, ಹಾಲಾಡಿ ಕೃಷ್ಣ ನಾಯ್ಕ ಹಾಗೂ ಆವರ್ಸೆ ಚಂದ್ರ ಕುಲಾಲ್ ಅವರ ಗುರುತನದಲ್ಲಿ ಸಶಕ್ತ ಯಕ್ಷ ಶಿಕ್ಷಣವನ್ನು ಪಡೆದ ಗೋವಿಂದ ಮೊಗವೀರ ಅವರು ಬಡಗಿನ ಸಮರ್ಥ ಸ್ತ್ರೀವೇಷಧಾರಿಯಾಗುವಲ್ಲಿ ಕ್ಷಿಪ್ರಪ್ರಗತಿ ಕಂಡವರು.

ಹಾಲಾಡಿ(5), ಮಾರಣಕಟ್ಟೆ (5), ಹಿರಿಯಡಕ (2)... ಮೇಳಗಳಲ್ಲಿ 12 ವರ್ಷಗಳ ಕಲಾವ್ಯವಸಾಯ ಪೂರೈಸಿದ ಗೋವಿಂದ್ ಪ್ರಸ್ತುತ ಹಿರಿಯಡಕ ಮೇಳದ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ನಿರ್ವಹಣಾ ಸ್ತ್ರೀಭೂಮಿಕೆಗಳನ್ನು ಅನನ್ಯ ಕಲಾಭಿವ್ಯಕ್ತಿಯಲ್ಲಿ ಜೀವಂತವಾಗಿ ನಿರೂಪಿಸುವ ಪ್ರತಿಭಾವಂತ ಕಲಾವಿದರಾದ ಇವರ ಭ್ರಮರ ಕುಂತಳೆ, ಪ್ರಭಾವತಿ, ಮೀನಾಕ್ಷಿ, ಪ್ರಮೀಳೆ, ಮದನಾಕ್ಷಿ, ಮೋಹಿನಿ, ಮಾಯಾ ಹಿಡಿಂಬೆ, ದೇವಯಾನಿ.... ಮೊದಲಾದ ಪಾತ್ರಗಳು ಕಲಾರಸಿಕರ ಹಾರ್ದಿಕ ಮೆಚ್ಚುಗೆಗೆ ಪಾತ್ರವಾಗಿವೆ.

ಬಡಗುತಿಟ್ಟಿನ ಭರವಸೆಯ ಸ್ತ್ರೀವೇಷಧಾರಿ ಎಂಬುದನ್ನು ಕಲಾತಿರುಗಾಟದ ಅಲ್ಪವರ್ಷಗಳಲ್ಲೇ ಯಕ್ಷಲೋಕದಲ್ಲಿ ಜಾಹೀರುಗೊಳಿಸಿದ ಪ್ರತಿಭಾನ್ವಿತ ಕಲಾವಿದ ಗೋವಿಂದ ಅವರು ಅನೇಕ ಸಂಘ-ಸಂಸ್ಥೆಗಳಿಂದ ಗೌರವ ಸಂಮಾನ ಪಡೆದಿರುತ್ತಾರೆ.



## ಚಂದ್ರನಾಯ್ಕ, ಕೊಡ್ಗಿಜೆಡ್ಡು

*ಹೆಗ್ಗುಂಜೆ ಗ್ರಾಮ, ಅಂಚೆ : ಮಂದಾರ್ತಿ*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 9449123021*

ಚುರುಕಿನ ನೃತ್ಯ ವೈಖರಿಯಲ್ಲಿ ರಂಗಸ್ಥಳದಲ್ಲಿ ಉರಿಯುಂಡೆಯಂತೆ ಕಲಾಪ್ರತಿಭೆಯಲ್ಲಿ ಪ್ರಜ್ವಲಿಸುವ ಬಡಗುತಿಟ್ಟಿನ ಉತ್ಸಾಹಿ ಮುಂಡುವೇಷಧಾರಿ ಚಂದ್ರನಾಯ್ಕ ಕೊಡ್ಗಿಜೆಡ್ಡು.

ಉಡುಪಿ ತಾಲೂಕಿನ ಮಂದಾರ್ತಿಯ ಹೆಗ್ಗುಂಜೆ ಎಂಬ ಹಳ್ಳಿಯಲ್ಲಿ 20–4–1969ರಲ್ಲಿ ಜನಿಸಿದ ಚಂದ್ರನಾಯ್ಕರು ಭೀಮನಾಯ್ಕ–ಬೆಳ್ಳಿ ಬ್ಯಾ ದಂಪತಿಯ ಸುಪುತ್ರ. ಇವರು ಓದಿದ್ದು 2ನೇ ತರಗತಿಯವರೆಗೆ ಮಾತ್ರ. ಹದಿಮೂರನೇ ವಯಸ್ಸಿನಲ್ಲೇ ಬಣ್ಣದ ಬದುಕನ್ನು ಅಪ್ಪಿಕೊಂಡ ಇವರು ತನ್ನ ಮಾವನಿಂದ ಕಲಾಪ್ರೋತ್ಸಾಹವನ್ನು ಪಡೆದರು. ಕಾಳಿಂಗನಾವಡರ ಗುರುತನದಲ್ಲಿ ಸಶಕ್ತ ಕಲಾವಿದ್ಯೆಯನ್ನು ಗಳಿಸಿಕೊಂಡ ಚಂದ್ರನಾಯ್ಕರಿಗೆ ನಾವಡರೇ ವೃತ್ತಿಮೇಳದ ಪ್ರವೇಶಕ್ಕೆ ಮಾರ್ಗದರ್ಶಕರಾದರು.

ಪುರಾಣ ಪ್ರಸಂಗಗಳ ಮುಂಡುವೇಷಗಳಲ್ಲಿ ಇವರ ಪಾದರಸ ಸದೃಶ ರಂಗವ್ಯವಹಾರ ಉತ್ಕೃಷ್ಟವಾದುದು. ಪಾತ್ರದ ಆದಿಯಿಂದ ಅಂತ್ಯದವರೆಗೂ ಇವರು ಕಾಪಿಟ್ಟುಕೊಳ್ಳುವ ಉತ್ಸಾಹ ಗಮನೀಯ.

ಮಂದಾರ್ತಿ ಮೇಳದಲ್ಲಿ 22 ವರ್ಷ, ಇಡಗುಂಜಿ ಮೇಳದಲ್ಲಿ 1 ವರ್ಷ, ಸಾಲಿಗ್ರಾಮ ಮೇಳದಲ್ಲಿ 5 ವರ್ಷ.... ಹೀಗೆ ನಾಯ್ಕರ ಒಟ್ಟು ಕಲಾತಿರುಗಾಟ 28 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುತ್ತದೆ. ಪ್ರಸ್ತುತ ಮಂದಾರ್ತಿ ಮೇಳದ ಕಲಾವಿದರಾಗಿ ಕಲಾಸೇವೆಗೈಯ್ಯುತ್ತಿದ್ದಾರೆ.

ವೃಷಸೇನ, ಬಬ್ರುವಾಹನ, ಪ್ರಸೇನ, ಲವ–ಕುಶ ಚಿತ್ರವಾಹನ, ಮೈಂದ–ದ್ವಿವಿದ, ಅಂಗದ, ದುಶ್ಯಾಸನ.... ಮೊದಲಾದ ಪಾತ್ರಗಳಲ್ಲಿ ಇವರು ಕಾಣಿಸುವ ಮೂರನೇ ವೇಷದ ಕೆಚ್ಚು–ಕಿಚ್ಚು ರಂಗಸ್ಥಳವನ್ನು ಬೆಳಗಿ, ಕಲಾರಸಿಕರನ್ನು ಬೆರಗುಗೊಳಿಸಿದೆ.

ಮುಂಡುವೇಷಧಾರಿಯಾದ ಚಂದ್ರನಾಯ್ಕರು ಉತ್ತಮ ಹಾಸ್ಯಪಟುವೂ ಹೌದು. ಸಾಂದರ್ಭಿಕವಾಗಿ ವೃತ್ತಿರಂಗದಲ್ಲಿ ಇವರು ಹಾಸ್ಯಗಾರರಾಗಿಯೂ ರಂಜಿಸುತ್ತಾರೆ.

ಜೋಡಾಟಗಳಲ್ಲಿ ಮರಿಕೇಸರಿಂಯಾಗಿ ವಿಜೃಂಭಿಸುವ ನಾಯ್ಕರ ಮುಂಡಿ ಕುಣಿತ ಬೆರಗುಹುಟ್ಟಿಸುತ್ತದೆ.

ಚಂದ್ರನಾಯ್ಕರ ಸಹಧರ್ಮಿಣಿ ಶ್ಯಾಮಲಾ. ಸಂಗೀತಾ, ಸಂತೋಷ, ಗೀತಾ ಇವರ ಮೂವರು ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಇವರು ಸಂಮಾನಿತರಾಗಿದ್ದಾರೆ.



## ಚಂದ್ರಶೇಖರ ಆಚಾರಿ, ಹಾರೆಕೊಪ್ಪ

*ಮಹಿಷಿ ಪೋಸ್ಟ್, ತೀರ್ಥಹಳ್ಳಿ ತಾಲೂಕು,*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ : 08181-290509*

ಬಡಗುತಿಟ್ಟು ಯಕ್ಷಗಾನ ರಂಗದಲ್ಲಿ ಚಂಡೆ-ಮದ್ದಳೆ ವಾದನದ ಹಿರಿಯ ಪ್ರತಿಭೆಯಾಗಿ ಗುರುತಿಸಿಕೊಂಡವರು ಚಂದ್ರಶೇಖರ ಆಚಾರಿ ಹಾರೇಕೊಪ್ಪ.

ತೀರ್ಥಹಳ್ಳಿ ತಾಲೂಕಿನ ಕೊಕ್ಕಡ್ತಿ ಎಂಬ ಹಳ್ಳಿಯಲ್ಲಿ ಶ್ರೀನಿವಾಸ ಆಚಾರಿ-ಲಕ್ಷ್ಮೀ ದಂಪತಿಯ ಸುಪುತ್ರನಾಗಿ 15-5-1955ರಲ್ಲಿ ಜನಿಸಿದ ಇವರು 5ನೇ ತರಗತಿಗೆ ಶರಣು ಹೊಡೆದು, ತನ್ನ 20ನೇ ವಯಸ್ಸಿನಲ್ಲೇ ಕಲಾಬದುಕು ಕಂಡರು.

ಚಿಕ್ಕಂದಿನಿಂದಲೇ ಯಕ್ಷಗಾನ ರಂಗಕಲೆಯ ಕುರಿತು ವಿಶೇಷ ಒಲವು ಹೊಂದಿದ್ದ ಆಚಾರ್ ಅವರು ತಂದೆ-ತಾಯಿಯ ಪ್ರೇರಣೆ-ಪ್ರೋತ್ಸಾಹ, ಹರಕೆ-ಹಾರೈಕೆಯಂತೆ ಕಲಾರಂಗವನ್ನು ಪ್ರವೇಶಿಸಿದರು.

ಇವರ ತಂದೆಯವರು ಯಕ್ಷಗಾನ ವೇಷಧಾರಿಯಾದುದರಿಂದ ಕಲೆಯೆಂಬುದು ಇವರಿಗೆ ರಕ್ತಗತ ಬಳುವಳಿಯಾಗಿಯೇ ಒದಗುವಂತಾಯಿತು.

ಬಚ್ಚನ ಕೊಡಿಗೆ ನರಸಿಂಹ ಆಚಾರಿ, ಪೇತ್ರಿ ಹಿರಿಯ ಭಂಡಾರಿ ಅವರ ಶಿಷ್ಯನಾಗಿ ವಾದನಕಲೆಯನ್ನು ಸುಪುಷ್ಟವಾಗಿ ಹಸ್ತಗತವಾಗಿಸಿಕೊಂಡ ಇವರು ವೃತ್ತಿರಂಗದಲ್ಲಿ ಸುಯೋಗ್ಯ ಚಂಡೆ-ಮದ್ದಳೆವಾದಕರಾಗಿ ಮಾನ್ಯತೆ ಕಂಡರು.


ಮಡಾಮಕ್ಕಿ, ಮಂದಾರ್ತಿ, ಮಾರಣಕಟ್ಟೆ, ಮೂಲ್ಕಿ, ಪೆರ್ಡೂರು.... ಮೇಳಗಳಲ್ಲಿ ಸುದೀರ್ಘ 35 ವರ್ಷಗಳ ಕಲಾವ್ಯವಸಾಯ ನಡೆಸಿದ ಇವರು ವಾದನದ ಪ್ರಬುದ್ಧ ಪ್ರತಿಭೆಯಾಗಿ ವಿರಾಜಿಸಿದವರು.

ಗಾಯನದ ಭಾವ-ಬಂಧವನ್ನು ತುಂಡರಿಸದ ಸುಸ್ಪಷ್ಟವಾದ ಇವರ ಚಂಡೆ-ಮದ್ದಳೆಗಾರಿಕೆ ಕಥಾನಕಗಳಿಗೆ ಜೀವತುಂಬುತ್ತದೆ. ಕಲಾವಿದರಿಗೆ ಸ್ಫೂರ್ತಿದಾಯಕವಾಗುತ್ತದೆ.

ಇವರ ಪ್ರಸಂಗಾನುಭವ ಹಾಗೂ ರಂಗತಂತ್ರವೂ ಗಮನೀಯ. ಪ್ರಸಂಗ, ಪಾತ್ರಗಳ ಪ್ರತೀ ನಡೆಯನ್ನೂ ಇವರು ದೃಢವಾಗಿ ಬಲ್ಲರು. ಸ್ವಪ್ರತಿಷ್ಠೆಯ ಗುಂಗಿನಲ್ಲಿ ವಾದನಕ್ರಮದಲ್ಲಿ ವಿಭಕ್ತವಾಗದೆ ಸಮಷ್ಟಿ ಪ್ರಜ್ಞೆಯಲ್ಲಿ ರಂಗಧರ್ಮವನ್ನು ಪಾಲಿಸುವ ಆಚಾರ್ ಅವರು ಪ್ರಸ್ತುತ ಮಡಾಮಕ್ಕಿ ಮೇಳದಲ್ಲಿ ರಂಗ ಕೃಷಿ ನಡೆಸುತ್ತಿದ್ದಾರೆ.

ಇವರ ಬಾಳ ಸಂಗಾತಿ ಲೀಲಾವತಿ. ಜ್ಯೋತಿ, ಛಾಯಾ ಹಾಗೂ ಸುಧೀರ ಇವರ ಮೂವರು ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳು ಚಂದ್ರಶೇಖರ ಆಚಾರ್ ಅವರ ಸಮೃದ್ಧ ಕಲಾಪ್ರತಿಭೆಗೆ ಶರಣಾಗಿ ಸಂಮಾನಿಸಿವೆ.



# ಚಂದ್ರಶೇಖರ ಉಡುಪ

*ಗಣೇಶ ನಿಲಯ, ಅಂಚೆ : ಬಿಳಾಲುಕೊಪ್ಪ,*
*ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 08263-216721*
*9449294102*

ಸಮೃದ್ಧ ಯಕ್ಷಪ್ರತಿಭೆಯಾಗಿ ಪುರಾಣಾಖ್ಯಾನಗಳ ಪಾತ್ರ ಪ್ರಪಂಚವನ್ನು ಬೆಳಗುವ ದಕ್ಷ ಕಲಾವಿದ ಚಂದ್ರಶೇಖರ ಉಡುಪ.

ಚಿಕ್ಕಮಗಳೂರು ಜಿಲ್ಲೆಯ ಅತ್ತಿಕುಡಿಗೆ-ಬಿಳಾಲುಕೊಪ್ಪ ಎಂಬಲ್ಲಿ 10-4-1963ರಲ್ಲಿ ಜನಿಸಿದ ಚಂದ್ರಶೇಖರ ಉಡುಪರು ವೆಂಕಟರಮಣ ಉಡುಪ-ಮೀನಾಕ್ಷಮ್ಮ ದಂಪತಿಯ ಸುಪುತ್ರ. ಎಸ್.ಎಸ್.ಎಲ್.ಸಿ. ವರೆಗೆ ಅಕ್ಷರ ಶಿಕ್ಷಣ ಪಡೆದ ಉಡುಪರು ಸಂಸ್ಕೃತ, ಸಾಹಿತ್ಯ, ವೇದ ಸಂಪನ್ನರಾಗಿ ವ್ಯಕ್ತಿತ್ವಕ್ಕೆ ಶ್ರೇಷ್ಠ ಕಳೆ ತಂದುಕೊಂಡವರು.

ಚಂದ್ರಶೇಖರ ಉಡುಪರ ತಂದೆ ಹಾಗೂ ದೊಡ್ಡಪ್ಪನವರು ತಾಳಮದ್ದಳೆ ಅರ್ಥಧಾರಿಗಳಾದುದರಿಂದ ಯಕ್ಷಕಲೆಯ ಹಿನ್ನೆಲೆ ಇವರಿಗೆ ಬಲಿಷ್ಠವಾಗಿಯೇ ಒದಗಿತು. ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ರಾಮಕೃಷ್ಣಯ್ಯ, ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗರಲ್ಲಿ ಶಾಸ್ತ್ರೋಕ್ತ ಯಕ್ಷ ಶಿಕ್ಷಣವನ್ನು ಪಡೆದ ಉಡುಪರು 18ರ ಹರೆಯದಲ್ಲೇ ಬಣ್ಣದ ಬದುಕಿಗೆ ಅಂಟಿಕೊಂಡರು.

ಶೃಂಗೇರಿ-2, ಕಳವಾಡಿ-1, ನಾಗರಕೊಡಿಗೆ-3, ಅಮೃತೇಶ್ವರಿ-3, ಕಮಲಶಿಲೆ-4, ಸಾಲಿಗ್ರಾಮ-2.... ಹೀಗೆ ಉಡುಪರ ಕಲಾಯಾತ್ರೆ ಹದಿನೈದು ವಸಂತಗಳನ್ನು ಸಾರ್ಥಕವಾಗಿ ಪೂರೈಸಿದೆ. ಪ್ರಸ್ತುತ ಇವರು ಶ್ರೀ ಚನ್ನಕೇಶವ ಯಕ್ಷಗಾನ ಮಂಡಳಿ, ಬಾಳೆಹೊಳೆ ಇದರ ಕಲಾವಿದರು.

ಸಮರ್ಥ ಪುರುಷವೇಷಧಾರಿಯಾಗಿ, ಎರಡನೇ ವೇಷಧಾರಿಯಾಗಿ ಗುರುತಿಸಿಕೊಂಡ ಚಂದ್ರಶೇಖರ ಉಡುಪರು ಸತ್ಯಹರಿಶ್ಚಂದ್ರ, ಭೀಷ್ಮ, ರಾಮ, ಜಾಂಬವ, ಜಮದಗ್ನಿ, ಶುಂಭಾಸುರ, ಕಂಸ, ಉಗ್ರಸೇನ, ಶತ್ರುಘ್ನ, ಕೌರವ, ಚಂದ್ರಹಾಸ, ಸುಧನ್ವ, ರಾವಣ.... ಮೊದಲಾದ ಪೌರಾಣಿಕ ಭೂಮಿಕೆಗಳಿಗೆ ರಂಗನ್ಯಾಯ ಕಲ್ಪಿಸಿ ಜನಮಾನ್ಯತೆ ಗಳಿಸಿದ್ದಾರೆ.

ವೇಷಧಾರಿಯಾದ ಉಡುಪರಿಗೆ ಭಾಗವತಿಕೆ ಹಾಗೂ ತಾಳಮದ್ದಳೆ ಅರ್ಥಗಾರಿಕೆಯ ಪ್ರಾವೀಣ್ಯವೂ ಇದೆ.

ಚಂದ್ರಶೇಖರ ಉಡುಪರ ಸಹಧರ್ಮಿಣಿ ಸುಮಂಗಲಾ. ಸುಶ್ಮಿತಾ ಹಾಗೂ ವೆಂಕಟರಮಣ ಇವರ ಉಭಯ ಮಕ್ಕಳು.

ವಿದ್ಯಾಗಣಪತಿ ಮಹೋತ್ಸವ ಸಮಿತಿ, ಕಳಸ, ಲಕ್ಷ್ಮೀವೆಂಕಟರಮಣ ಯಕ್ಷಗಾನ ಸಂಘ ಶೃಂಗೇರಿ, ಭೀಮನಕಟ್ಟೆ ಮಠ ತೀರ್ಥಹಳ್ಳಿ, ಸೇರಿದಂತೆ ಹಲವು ಸಂಘ-ಸಂಸ್ಥೆಗಳು ಉಡುಪರನ್ನು ಸಂಮಾನಿಸಿವೆ.



## ಚಂದ್ರಶೇಖರ ಕುಲಾಲ, ಆವರ್ಸೆ

*ಆವರ್ಸೆ–ಹೊದಮನೆ ಮಕ್ಕಿ,*
*ಅಂಚೆ : ಆವರ್ಸೆ, ಆವರ್ಸೆ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಬಡಗುತಿಟ್ಟು ಯಕ್ಷಗಾನದ ಹಾಸ್ಯರಂಗದಲ್ಲಿ ಗುಣಾತ್ಮಕ ವೈನೋದಿಕತೆಯನ್ನು ಮೆರೆಸಿ ಅನುಭವಿ ಹಾಸ್ಯಗಾರರಾಗಿ ರೂಪುಗೊಂಡವರು ಚಂದ್ರಶೇಖರ ಕುಲಾಲ್, ಆವರ್ಸೆ.

ಉಡುಪಿ ತಾಲೂಕಿನ ಆವರ್ಸೆ ಎಂಬಲ್ಲಿ 15–7–1965ರಲ್ಲಿ ಪುಟ್ಟ ಕುಲಾಲ–ಕೊರತಿ ಕುಲಾಲ್ತಿ ದಂಪತಿಯ ಸುಪುತ್ರರಾಗಿ ಹುಟ್ಟಿದ ಚಂದ್ರಶೇಖರ ಕುಲಾಲ ಅವರು 6ನೇ ತರಗತಿಗೆ ಶರಣು ಹೊಡೆದು ತನ್ನ 27ನೇ ವರ್ಷದಲ್ಲಿ ಕಲಾಬದುಕು ಕಂಡರು.

ಪರಿಸರದಲ್ಲಿ ಜರುಗುತ್ತಿರುವ ಯಕ್ಷಗಾನ ಬಯಲಾಟಗಳನ್ನು ಶಾಲಾದಿನಗಳಲ್ಲಿ ನಿರಂತರವಾಗಿ ನೋಡುತ್ತಿದ್ದ ಇವರಿಗೆ ಬಾಲ್ಯದಲ್ಲಿಯೇ ರಂಗಜೀವನದ ಹೊಂಗನಸು ಮನದಲ್ಲಿ ಮನೆ ಮಾಡಿತ್ತು.

ದಾಮೋದರಯ್ಯ ಹಾಗೂ ದಯಾನಂದ ನಾಗೂರು ಅವರ ಶಿಷ್ಯನಾಗಿ ಕಲಾವಿದ್ಯಾ ಪಾರಂಗತರಾದ ಕುಲಾಲ್ ಅವರು ವೃತ್ತಿರಂಗದಲ್ಲಿ ಪ್ರಧಾನ ಹಾಸ್ಯಗಾರರಾಗಿ ವಿಜೃಂಭಿಸಿದರು.

ಮಂದಾರ್ತಿ–12, ಸೌಕೂರು–3, ಹಾಲಾಡಿ–4... ಹೀಗೆ 19 ವರ್ಷಗಳ ರಂಗಯಾತ್ರೆ ಇವರಿಗೆ ಸುಯೋಗ್ಯ ಹೆಸರು ನೀಡಿದೆ.

ವೃದ್ಧ ಭೂಸುರ, ಮೇದೋಹೋತ, ಬಾಗಿಲ ದೂತ, ಬೇಹಿನ ಚಾರಕ, ಕೈಲಾಸ ಶಾಸ್ತ್ರಿ, ಗುರುಮಠದ ದಡ್ಡ, ಕಂದರ, ಚಂದಗೋಪ.... ಮೊದಲಾದ ಇವರ ಪುರಾಣ ಪಾತ್ರಗಳು ಕಲಾರಸಿಕ ಬಾಂಧವರ ಹಾರ್ದಿಕ ಮೆಚ್ಚುಗೆಗೆ ಪಾತ್ರವಾಗುವಲ್ಲಿ ನಿಚ್ಚಳ ಗೆಲುವು ಕಂಡಿವೆ.

ಹಾಸ್ಯಕಲಾವಿದರಾದ ಚಂದ್ರಶೇಖರ ಕುಲಾಲರು ಮುಂಡಾಸು ವೇಷಧಾರಿಯಾಗಿಯೂ, ಸಹ–ಭಾಗವತರಾಗಿಯೂ ರಂಗಮುಖದಲ್ಲಿ ಕಾಣಿಸಿಕೊಂಡಿದ್ದಾರೆ.

ಉನ್ನತ ಯಕ್ಷವಿದ್ಯೆಯನ್ನು ಉತ್ತಮ ಕಲಾಗುರುವಾಗಿ ಉತ್ಸಾಹಿಗಳಿಗೆ ಧಾರೆಯೆರೆದು ಪ್ರತಿಭಾವಂತ ಶಿಷ್ಯರನ್ನಾಗಿ ರೂಪಿಸಿದ ಹಿರಿಮೆಯೂ ಇವರಿಗಿದೆ.

ಚಂದ್ರಶೇಖರ ಕುಲಾಲರ ಸಹಧರ್ಮಿಣಿ ಭಾರತಿ. ಭಾಗ್ಯಶ್ರೀ ಹಾಗೂ ನವ್ಯಶ್ರೀ ಇವರ ಉಭಯ ಪುತ್ರಿಯರು.

ಹಲವಾರು ಸಂಘ–ಸಂಸ್ಥೆಗಳ ಗೌರವಪೂರ್ವಕ ಸಂಮಾನಗಳು ಇವರಿಗೆ ಸಂದಿವೆ.



# ಚಂದ್ರಶೇಖರ ಶೆಟ್ಟಿ ಬಿಜೂರು

*ಅಂಚೆ : ಬಿಜೂರು, ತ್ರಾಸಿಮನೆ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9739054337*

ಸಿರಿವೇಷಕ್ಕೊಪ್ಪುವ ಸರ್ವಕಲಾ ಸಲ್ಲಕ್ಷಣಗಳಿಂದ ಪರಿಶೋಭಾಯಮಾನವಾದ ಪ್ರಬುದ್ಧ ಪ್ರತಿಭೆಯ ಉತ್ಸಾಹಿ ಸ್ತ್ರೀವೇಷಧಾರಿ ಚಂದ್ರಶೇಖರ ಶೆಟ್ಟಿ ಬಿಜೂರು.

ಕುಂದಾಪುರ ತಾಲೂಕಿನ ಬಿಜೂರು ಎಂಬ ಹಳ್ಳಿಯಲ್ಲಿ 26-3-1967ರಲ್ಲಿ ಜನಿಸಿದ ಚಂದ್ರಶೇಖರ ಶೆಟ್ಟರು ಮಹಾಬಲಶೆಟ್ಟಿ ಮತ್ತು ಮುತ್ತು ಶೆಡ್ತಿ ದಂಪತಿಯ ಸುಪುತ್ರ. 5ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ ಹನ್ನೆರಡರ ಹರೆಯದಲ್ಲೇ ಯಕ್ಷಲೋಕಕ್ಕೆ ಪಾದಾರ್ಪಣೆ ಮಾಡಿದ ಚಂದ್ರಶೇಖರ ಶೆಟ್ಟರು ಎಳವೆಯಲ್ಲಿಯೇ ಅದಮ್ಯ ಯಕ್ಷಗಾನಾಸಕ್ತಿಯನ್ನು ಮೈಗೂಡಿಸಿಕೊಂಡಿದ್ದರು. ಇವರ ಕಲಾಭಿರುಚಿ ಹಾಗೂ ಬಣ್ಣದ ಬದುಕಿನ ಬಯಕೆಯನ್ನು ಅರಿತ ದ್ಯಾವಪ್ಪ ಬಿಜೂರು ಎಂಬವರು ಕಲಾಜೀವನದ ಪ್ರೇರಣಾಶಕ್ತಿಯಾಗಿ ಪ್ರೋತ್ಸಾಹ ನೀಡಿದರು.

ಹಿರಿಯ ಪ್ರಸಂಗಕರ್ತ ಡಾ. ವೈ. ಚಂದ್ರಶೇಖರ ಶೆಟ್ಟರ ಗುರುತನದಲ್ಲಿ ಸಶಕ್ತ ಯಕ್ಷವಿದ್ಯಾ ಪಾರಂಗತರಾದ ಇವರು ವೃತ್ತಿರಂಗಭೂಮಿಯಲ್ಲಿ ಸಮರ್ಥ ಸ್ತ್ರೀವೇಷಧಾರಿಯಾಗಿ ಗುರುತಿಸಿಕೊಂಡವರು.

ನಾಗರಕೊಡಿಗೆ-1, ಕಳವಾಡಿ-1, ಸಾಲಿಗ್ರಾಮ-3, ಗೋಳಿಗರಡಿ-1, ಹಾಲಾಡಿ-3, ಮಂದಾರ್ತಿ-1 ಹಾಗೂ ಮಾರಣಕಟ್ಟೆ ಮೇಳದಲ್ಲಿ 11 ವರ್ಷಗಳ ಕಲಾಕೃಷಿ ಮುಂದುವರಿದಿದ್ದು, ಇವರ ಒಟ್ಟು ರಂಗವ್ಯವಸಾಯ 21 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಮೀನಾಕ್ಷಿ, ಪ್ರಭಾವತಿ, ಸೀತೆ, ಭ್ರಮರ ಕುಂತಳೆ, ವಿದ್ಯಾಧರೆ, ಸಂಧ್ಯಾವಳಿ, ಸುಭದ್ರೆ, ದ್ರೌಪದಿ, ಮಾಯಾಶೂರ್ಪನಖಿ, ರುಕ್ಮಿಣಿ... ಮೊದಲಾದ ಸ್ತ್ರೀಭೂಮಿಕೆಗಳ ಮೂಲಕ ಇವರು ಕಲಾರಸಿಕರ ಮನ ಮೆಚ್ಚಿಸಿದ್ದಾರೆ.

ಶೃಂಗಾರ ರಸಪೂರ್ಣವೂ, ಗರತಿ ಭಾವ ಭರಿತವೂ, ಗಂಭೀರ ಸ್ವರೂಪಯುಕ್ತವೂ ಆಗಿರುವಂತಹ ಎಲ್ಲಾ ನಡೆಯ ಸ್ತ್ರೀಭೂಮಿಕೆಗಳನ್ನೂ ಇವರು ನಿರ್ವಹಿಸಿ ಗೆಲುವು ಕಂಡಿದ್ದಾರೆ. ಶೆಟ್ಟರ ವೇಷ, ಭಾಷೆ, ನೃತ್ಯಾಭಿನಯ, ಪ್ರಸಂಗಾನುಭವ ಎಲ್ಲವೂ ಯಕ್ಷಗಾನೀಯತೆಯ ಗಟ್ಟಿತನದಿಂದ ಕೂಡಿದೆ.

ಚಂದ್ರಶೇಖರ ಶೆಟ್ಟರು ನಾಗರತ್ನಾ ಎಂಬವರನ್ನು ವರಿಸಿ ನಾಗರಾಜ, ಸಚಿನ್, ಪ್ರದೀಪ, ಕಿರಣ ಹಾಗೂ ಜ್ಯೋತಿ ಎಂಬ ಐದು ಮಂದಿ ಮಕ್ಕಳನ್ನು ಪಡೆದಿದ್ದಾರೆ.

ಬಂಟರ ಸಂಘದ ವತಿಯಿಂದ ಇವರಿಗೆ ಗೌರಪೂರ್ವಕ ಮಾನ-ಸಂಮಾನ ದೊರಕಿರುತ್ತದೆ.



# ಚಂದ್ರಶೇಖರ ಶೆಟ್ಟಿ ಬೆದ್ರಳ್ಳಿ

*ಅಂಚೆ : ಹೊಸಂಗಡಿ, ಹೊಸಂಗಡಿ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9902196987*

ಪಾತ್ರನಿಷ್ಠವಾಗಿ ಗರಿಷ್ಟ ಮಟ್ಟದ ಹಾಸ್ಯರಸಾಭಿವ್ಯಕ್ತಿಯಲ್ಲಿ ರಂಜಿಸುವ ಅನುಭವಿ ಹಾಸ್ಯಗಾರ ಬೆದ್ರಳ್ಳಿ ಚಂದ್ರಶೇಖರ ಶೆಟ್ಟಿ.

ಕುಂದಾಪುರ ತಾಲೂಕಿನ ಹೊಸಂಗಡಿ ಗ್ರಾಮದ ಬೆದ್ರಳ್ಳಿ ಎಂಬ ಹಳ್ಳಿಯಲ್ಲಿ 1965ರಲ್ಲಿ ಜನಿಸಿದ ಚಂದ್ರಶೇಖರ ಶೆಟ್ಟಿ ಅವರು ಕೊರಗಯ್ಯ ಶೆಟ್ಟಿ-ಲಚ್ಚಮ್ಮ ಶೆಡ್ತಿ ದಂಪತಿಯ ಸುಪುತ್ರ.

5ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ ಶೆಟ್ಟರು ತಮ್ಮ 16ರ ಹರೆಯದಲ್ಲೇ ಯಕ್ಷಗಾನ ಲೋಕವನ್ನು ಪ್ರವೇಶಿಸಿದರು.

ಇವರ ತಂದೆ ಹವ್ಯಾಸಿ ಕಲಾವಿದರಾಗಿದ್ದರು. ಹಾಗಾಗಿ ಕಲೆಯ ನೆಂಟತನ ಎಂಬುದು ತೀರ್ಥರೂಪರ ಹಾರ್ದಿಕ ಪ್ರೋತ್ಸಾಹ-ಪ್ರೇರಣೆಯಿಂದ ಶೆಟ್ಟರಿಗೆ ಸುಲಭಸಾಧ್ಯವಾಯಿತು.

ಹಿರಿಯ ಹಾಸ್ಯ ಕಲಾವಿದ ನಾಗಯ್ಯ ಶೆಟ್ಟಿ ದರಲೆಹಾಡಿ ಅವರಲ್ಲಿ ಯಕ್ಷಗಾನ ಶಿಕ್ಷಣವನ್ನು ಪಡೆದ ಚಂದ್ರಶೇಖರ ಶೆಟ್ಟರು ವೃತ್ತಿರಂಗದಲ್ಲಿ ಸುಯೋಗ್ಯ ಹಾಸ್ಯಗಾರರಾಗಿ ಗುರುತಿಸಿಕೊಂಡರು.

ಸೌಕೂರು-5, ಕಳವಾಡಿ-2, ಅಮೃತೇಶ್ವರಿ-2, ಸಿಗಂಧೂರು-2, ಮಡಾಮಕ್ಕಿ-9, ಕಮಲಶಿಲೆ-9... ಹೀಗೆ 29 ವರ್ಷಗಳ ಕಲಾತಿರುಗಾಟದಲ್ಲಿ ಶೆಟ್ಟರು ಸಾರ್ಥಕ ಕೀರ್ತಿ ಸಂಪಾದಿಸಿದ್ದಾರೆ.


ಹಾಸ್ಯಭೂಮಿಕೆಗೊಪ್ಪುವ ವೇಷ, ಭಾಷೆ, ನೃತ್ಯ, ಆಂಗಿಕಾಭಿನಯ ಹಾಗೂ ರಂಗನಡೆಯನ್ನು ಹೊಂದಿದ ಚಂದ್ರಶೇಖರ ಶೆಟ್ಟರು ಲಲಿತ-ಗಂಭೀರ ಹಾಸ್ಯಗಾರಿಕೆಯಲ್ಲಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲುವಂತೆ ಮಾಡಬಲ್ಲರು.

ಬಾಹುಕ, ಕಾಶೀಮಾಣಿ, ಕಂದರ, ಚಂದಗೋಪ... ಮೊದಲಾದ ಭೂಮಿಕೆಗಳು ಶೆಟ್ಟರಿಗೆ ಒಳ್ಳೆಯ ಹೆಸರು ತಂದುಕೊಟ್ಟಿವೆ.

ಪ್ರತಿಭಾಶಾಲಿ ಹಾಸ್ಯಗಾರ ಶೆಟ್ಟರು ಸಮರ್ಥ ಗುರುವಾಗಿ ಹಲವಾರು ಶಿಷ್ಯರನ್ನು ಕಲಾವಿದರನ್ನಾಗಿ ರೂಪಿಸಿದ್ದಾರೆ. ಚಂದ್ರಶೇಖರ ಶೆಟ್ಟರ ಮತ್ತೊಂದು ಹವ್ಯಾಸವೆಂದರೆ ಪ್ರಸಂಗ ರಚನೆ. ಹಲವಾರು ನೂತನ ಪ್ರಸಂಗಗಳನ್ನು ಬರೆದು ವೃತ್ತಿಮೇಳಗಳಲ್ಲಿ ಪ್ರದರ್ಶಿಸಿ ಗೆಲುವು ಕಂಡಿದ್ದಾರೆ.

ಚಂದ್ರಶೇಖರ ಶೆಟ್ಟರ ಧರ್ಮಪತ್ನಿ ಜ್ಯೋತಿ. ರಾಘವೇಂದ್ರ, ಅಮರ, ಅರವಿಂದ, ಆಶ್ರಿತಾ ಇವರ ನಾಲ್ವರು ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಶೆಟ್ಟರು ಸಂಮಾನಿತರಾಗಿದ್ದಾರೆ.



## ಚಂದ್ರಶೇಖರ ಹೆಗಡೇಕರ್

*ಅಂಚೆ : ಕಡತೋಕಾ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9481018469*

ಸಾಂಪ್ರದಾಯಿಕ ಶೈಲೀಕೃತ ಮದ್ದಳೆವಾದನದಲ್ಲಿ ಪರಿಪಕ್ವ ಪ್ರತಿಭೆಯಾಗಿ ಗುರುತಿಸಿಕೊಂಡ ಅನುಭವಿ ಮದ್ದಳೆಗಾರ ಚಂದ್ರಶೇಖರ ಹೆಗಡೇಕರ್.

ಹೊನ್ನಾವರ ಕಡತೋಕಾ ಎಂಬಲ್ಲಿ ಹುಟ್ಟಿ ಬೆಳೆದ ಚಂದ್ರಶೇಖರ ಅವರು ಕೃಷ್ಣ ಹಾಗೂ ಶೇಷಿ ದಂಪತಿಯ ಸುಪುತ್ರ. ಪ್ರಸ್ತುತ ಹೆಗಡೇಕರ್ 51ರ ಹರಿತನದಲ್ಲಿರುವ ಹಿಮ್ಮೇಳ ಕಲಾವಿದರು.

9ನೇ ತರಗತಿಯ ಅಕ್ಷರಾಭ್ಯಾಸಕ್ಕೆ ಶುಭಮಂಗಳ ಕೋರಿ, ತನ್ನ 17ನೇ ವಯಸ್ಸಿನಲ್ಲೇ ಕಲಾಬದುಕನ್ನು ಆಲಂಗಿಸಿದ ಇವರು ಸ್ವಂತ ಪ್ರೇರಣೆಯಿಂದಲೇ ಬಣ್ಣದ ಲೋಕದ ಯಾತ್ರೆಯನ್ನು ಆರಿಸಿಕೊಂಡವರು.

ಕರ್ಕಿ ಪ್ರಭಾಕರ ಭಂಡಾರಿ ಅವರಲ್ಲಿ ಪಾರಂಪರಿಕ ಮದ್ದಳೆಗಾರಿಕೆಯನ್ನು ಕರಗತ ಮಾಡಿಕೊಂಡ ಚಂದ್ರಶೇಖರ ಹೆಗಡೇಕರ್ ಅವರು ವೃತ್ತಿಮೇಳಗಳಲ್ಲಿ ಅನನ್ಯ ಅನುಭವದ ಕಲಾ ಸಂಪುಟವಾಗಿ ಸಂಪನ್ನತೆಯನ್ನು ಗಳಿಸಿದವರು.

ಇಡಗುಂಜಿ, ಅಮೃತೇಶ್ವರಿ, ಬಚ್ಚಗಾರು, ಸಾಲಿಗ್ರಾಮ, ಕುಮಟಾ, ಮಂದಾರ್ತಿ... ಮೇಳಗಳಲ್ಲಿ ಸುದೀರ್ಘ 33 ವರ್ಷಗಳ ಕಲಾಯಾತ್ರೆಯನ್ನು ಪೂರೈಸಿದ ಇವರು ಮಂದಾರ್ತಿ ಮೇಳದ ಪ್ರಧಾನ ಮದ್ದಳೆಗಾರರಾಗಿ ಅಪಾರ ಜನಪ್ರಿಯತೆಯೊಂದಿಗೆ ವೃತ್ತಿ ಮುಂದುವರಿಸುತ್ತಿದ್ದಾರೆ.

ಸಮರ್ಥ ಮದ್ದಳೆಗಾರರಾಗಿರುವ ಹೆಗಡೇಕರ್ ಸಮರ್ಥ ಚಂಡೆವಾದಕರೂ ಹೌದು. ಕೋಟ ಯಕ್ಷಗಾನ ಕಲಿಕಾ ಕೇಂದ್ರದಲ್ಲಿ 2 ವರ್ಷ ಗುರುವಾಗಿ ಅನೇಕ ಶಿಷ್ಯರನ್ನು ರೂಪಿಸಿದ ಹಿರಿಮೆಯೂ ಹೆಗಡೇಕರ್ ಅವರಿಗಿದೆ.

ಉತ್ತಮ ಪ್ರಸಂಗ ಮಾಹಿತಿ ಹಾಗೂ ಸಶಕ್ತ ರಂಗತಂತ್ರವನ್ನು ಹೊಂದಿದ ಮದ್ದಳೆಗಾರ ಚಂದ್ರಶೇಖರ್ ಹೆಗಡೇಕರ್ ಅವರು ಆಟ–ಕೂಟಗಳೆರಡರಲ್ಲೂ ವಾದನ ಪ್ರತಿಭೆಯನ್ನು ತೋರುವವರು.

ಚಂದ್ರಶೇಖರ್ ಹೆಗಡೇಕರ್ ಅವರು ಲಕ್ಷ್ಮೀ ಎಂಬವರನ್ನು ವರಿಸಿ ಸುಶಾಂತ, ಪ್ರಶಾಂತ ಎಂಬ ಉಭಯ ಮಕ್ಕಳನ್ನು ಪಡೆದಿರುತ್ತಾರೆ.

ಅನೇಕ ಸಂಘ–ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



# ತೇಜ ಆಲೂರು

*ಹಾಡಿ ಮನೆ, ಬೀಜಾಡಿ ಗ್ರಾಮ,*
*ಅಂಚೆ : ಕೋಟ್ರೇಶ್ವರ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಬಡಗುತಿಟ್ಟಿನ ಯಕ್ಷಗಾನ ರಂಗಭೂಮಿಯ ಪರಂಪರಾನುಗತ ಕಲಾಶೈಲಿಯ ಅಗ್ರಮಾನ್ಯ ಕಲಾವಿದರಾಗಿ ಗುರುತಿಸಿಕೊಂಡವರು, ಆಲೂರು ತೇಜ.

ಕುಂದಾಪುರ ತಾಲೂಕಿನ ಆಲೂರು ಎಂಬಲ್ಲಿ 3–6–1946ರಲ್ಲಿ ಜನಿಸಿದ ತೇಜ ಅವರು ನಾಗಯ್ಯ ಹಾಗೂ ವೆಂಕಿ ದಂಪತಿಯ ಸುಪುತ್ರ.

ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ತನ್ನ 16ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ಆಲೂರು ತೇಜನವರು ದಶಾವತಾರಿ ಗುರು ವೀರಭದ್ರನಾಯಕರಲ್ಲಿ ಹೆಜ್ಜೆಗಾರಿಕೆಯನ್ನು ಕಲಿತು ಅವರ ಪ್ರೇರಣೆ–ಪ್ರೋತ್ಸಾಹವನ್ನು ಪಡೆದು ಯಕ್ಷಲೋಕಕ್ಕೆ ಹೆಜ್ಜೆ ಹಾಕಿದವರು.

ಆಲೂರು ತೇಜ ಅವರ ಕಲಾಭಿವ್ಯಕ್ತಿ ನೂರಕ್ಕೆ ನೂರು ಯಕ್ಷಗಾನೀಯವಾದದ್ದು. ಸಂಪ್ರದಾಯದ ಅಂತಃಸತ್ವವನ್ನು ಗಂಭೀರವಾಗಿ ಹೀರಿಕೊಂಡು ಬೆಳೆದ ಅವರ ಪ್ರತೀ ಪಾತ್ರಗಳು ಸನಾತನ ಯಕ್ಷಸೊಗಡಿನಲ್ಲಿ ರಂಗಸ್ಥಳದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಸಚೇತನ ರಂಗಶಿಲ್ಪಗಳಾಗಿ ಕಂಗೊಳಿಸಿ ಸಹೃದಯಿ ಪ್ರೇಕ್ಷಕರ ಮನ ಮೆಚ್ಚಿಸಿವೆ.

ಪುರುಷವೇಷಗಳ ಭಿನ್ನ–ಭಿನ್ನ ಸ್ಥಾನಗಳಲ್ಲೂ ಆಲೂರು ಅವರು ಮೆರೆದವರು. ಮುಂಡಾಸು ವೇಷಗಳಲ್ಲಂತೂ ಅವರಿಗವರೇ ಸಾಟಿಯಂಬಂತೆ ರಂಗವಾಳಿದವರು.

ಕರ್ಣ, ಶಲ್ಯ, ವೀರಮಣಿ, ದಕ್ಷ, ಕೌಂಡ್ಲಿಕ, ವೃಷಕೇತು, ಪ್ರದ್ಯುಮ್ನ, ತಾಮ್ರಧ್ವಜ, ಹಂಸಧ್ವಜ, ಮಯೂರಧ್ವಜ, ಪರಶುರಾಮ, ಭೀಷ್ಮ, ದ್ರೋಣ, ಋತುಪರ್ಣ... ಮೊದಲಾದ ಪೌರಾಣಿಕ ಭೂಮಿಕೆಗಳಲ್ಲಿ ಅವರು ತೋರಿದ ಪ್ರತಿಭಾ ಸಂಪನ್ನತೆಯನ್ನು ಕಲಾಜಗತ್ತು ಇಂದಿಗೂ ಮೆಲುಕು ಹಾಕುತ್ತಿದೆ.

ಮಂದಾರ್ತಿ–22, ಕೊಲ್ಲೂರು–3, ಸುರತ್ಕಲ್–1, ಕಮಲಶಿಲೆ–1, ಮಾರಣಕಟ್ಟೆ–5, ಇಡಗುಂಜಿ–1, ಪೆರ್ಡೂರು–2... ಹೀಗೆ ವೃತ್ತಿರಂಗದಲ್ಲಿ ಸಾರ್ಥಕ 35 ವರ್ಷಗಳನ್ನು ಪೂರೈಸಿ ಧನ್ಯತೆಯನ್ನೂ, ಅಪಾರ ಜನಪ್ರಿಯತೆಯನ್ನೂ ಕಂಡ ಶ್ರೇಷ್ಠ ಕಲಾವಿದ ಆಲೂರು ತೇಜ ಪ್ರಸ್ತುತ ವಿಶ್ರಾಂತಿ ಜೀವನದಲ್ಲಿದ್ದಾರೆ.

ಅನೇಕ ಶಿಷ್ಯರನ್ನು ರೂಪಿಸಿ ರಂಗಭೂಮಿಗೆ ನೀಡಿದ ಹಿರಿಮೆಯೂ ಇವರಿಗಿದೆ.

ಆಲೂರು ತೇಜ ಅವರ ಧರ್ಮಪತ್ನಿ ಗುಲಾಬಿ. ಜಯಂತಿ, ವಸಂತ, ಸುಜಾತ, ಯೋಗೀಶ, ಮಂಜುನಾಥ, ಸಂತೋಷ, ಸುಖಾನಂದ ಇವರ ಏಳು ಮಂದಿ ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಆಲೂರು ತೇಜನವರು ಸಂಮಾನಿತರಾಗಿದ್ದಾರೆ.



## ದಿನಕರ ಕುಂದರ್, ನಡೂರು

*ಅಂಚೆ : ನಡೂರು,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*

ಪೌರಾಣಿಕ ಜಗತ್ತಿನ ಸ್ತ್ರೀಯರನ್ನು ಯಕ್ಷಗಾನ ರಂಗಭೂಮಿಯಲ್ಲಿ ಕಲಾತ್ಮಕ ವೇಷಗಾರಿಕೆ, ರಸಾತ್ಮಕ ಮಾತುಗಾರಿಕೆ, ಲಲಿತ ಮಧುರ ನೃತ್ಯಗಾರಿಕೆ ಹಾಗೂ ಗುಣಾತ್ಮಕ ರಂಗವ್ಯವಹಾರಿಕತೆಯಲ್ಲಿ ದರ್ಶಿಸುವ ಯುವ ಕಲಾವಿದ ದಿನಕರ ಕುಂದರ್, ನಡೂರು.

ಉಡುಪಿ ತಾಲೂಕಿನ ನಡೂರು ಇವರ ಹುಟ್ಟೂರು. ಮಾಧವ-ತುಂಗಾ ದಂಪತಿಯ ಸುಪುತ್ರನಾಗಿ 5-5-1981ರಲ್ಲಿ ಜನಿಸಿದ ದಿನಕರ ಕುಂದರ್ 7ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ ತನ್ನ 15ರ ಹರೆಯದಲ್ಲೇ ಯಕ್ಷರಂಗಮುಖಿಯಾದರು.

ಯಕ್ಷಲೋಕದ ಸೀಮಾಪುರುಷ ದಿ. ಶಿರಿಯಾರ ಮಂಜುನಾಯ್ಕರು ಇವರಿಗೆ ಸಂಬಂಧದಲ್ಲಿ ದೊಡ್ಡಪ್ಪ. ಇಂತಹ ಬಲಿಷ್ಠ ಕಲಾ ಹಿನ್ನೆಲೆಯನ್ನು ಹೊಂದಿದ ಇವರು ತಂದೆಯವರ ಪ್ರೇರಣೆ ಪ್ರೋತ್ಸಾಹದಲ್ಲಿ ಕಲಾಬದುಕಿಗೆ ಅಂಟಿಕೊಂಡರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ರಾಜ್ಯಪ್ರಶಸ್ತಿ ವಿಜೇತ ಗುರು ಬನ್ನಂಜೆ ಸಂಜೀವ ಸುವರ್ಣ ಅವರಲ್ಲಿ ಶಾಸ್ತ್ರೋಕ್ತ ನಾಟ್ಯಾಭ್ಯಾಸ ಮಾಡಿ ವೃತ್ತಿರಂಗಭೂಮಿಯಲ್ಲಿ ಸುಯೋಗ್ಯ ಸ್ತ್ರೀ ವೇಷಧಾರಿಯಾಗಿ ಜನಪ್ರಿಯತೆ ಕಂಡರು.

ಮಂದಾರ್ತಿ, ಮಾರಣಕಟ್ಟೆ, ಹಾಗೂ ಕಮಲಶಿಲೆ ಮೇಳಗಳಲ್ಲಿ ಇವರ ಕಲಾ ತಿರುಗಾಟ 15 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುತ್ತದೆ.

ದಿನಕರ ಕುಂದರ್ ಅವರು ನಿರ್ವಹಿಸಿದ ಕೈಕೇಯಿ, ಮೀನಾಕ್ಷಿ, ಪ್ರಮೀಳೆ, ಮದನಾಕ್ಷಿ, ಭ್ರಮರಕುಂತಳೆ, ವಿಷಯೆ, ತ್ರಿಲೋಕಸುಂದರಿ, ಸುಭದ್ರೆ ಮೊದಲಾದ ಪೌರಾಣಿಕ ಸ್ತ್ರೀಪಾತ್ರಗಳು ಕಲಾಭಿಮಾನಿಗಳ ಹೃದಯಪೂರ್ವಕ ಶ್ಲಾಘನೆಗೆ ಪಾತ್ರವಾಗಿವೆ.

ದಿನಕರ್ ಕುಂದರ್ ಅವರ ಬಾಳಸಂಗಾತಿ ರೇಖಾ. ಓರ್ವ ಸುಪುತ್ರ ದೀಕ್ಷಿತ್ ಕುಮಾರ್, ಚಿಕ್ಕ-ಚೊಕ್ಕ ಸಂಸಾರ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಕಲಾವಂತಿಕೆಯನ್ನು ಗುರುತಿಸಿ ಗೌರವಿಸಿವೆ.



## ದೇವರಾಜ್‌ದಾಸ್ ಭಾಗವತ್

*'ನರಸಿಂಹ ಕೃಪ' ಕುಂದಾಪುರ ತಾಲೂಕು,*
*ಮರವಂತೆ-ಅಂಚೆ, ಉಡುಪಿ ಜಿಲ್ಲೆ*
*ದೂರವಾಣಿ : 9481445059*

ಬಡಗುತಿಟ್ಟಿನ ಸಾಂಪ್ರದಾಯಿಕ ಭಾಗವತಿಕೆಯ ಮರವಂತೆ ಮನೆತನದ ಯುವ ಪ್ರತಿಭಾನ್ವಿತ ಭಾಗವತ ದೇವರಾಜ್‌ದಾಸ್.

ಕುಂದಾಪುರ ತಾಲೂಕಿನ ಮರವಂತೆಯೇ ದೇವರಾಜ್ ದಾಸ್ ಅವರ ಹುಟ್ಟೂರು. ಇವರ ತಂದೆ ಯಕ್ಷಲೋಕ ಕಂಡ ಸುಪ್ರಸಿದ್ಧ ಪರಂಪರೆಯ ಹಿರಿಯ ಭಾಗವತ ನರಸಿಂಹದಾಸ್ ಭಾಗವತ್ ಮರವಂತೆ. ತಾಯೀ ಸೀತಾದಾಸ್. ತೀರ್ಥರೂಪರ ಗಾನಲೋಕದ ಪ್ರಸಿದ್ಧಿಯೇ ದೇವರಾಜ್ ದಾಸರನ್ನು ಈ ರಂಗಭೂಮಿಯ ಕಲಾಯಾನಕ್ಕೆ ಸಹಜವಾಗಿಯೇ ಎಳೆದು ತಂದುದರಲ್ಲಿ ಅಚ್ಚರಿಯೇನಿಲ್ಲ. ಎಂಟನೇ ತರಗತಿಗೇ ಓದಿಗೆ ವಿದಾಯ ಹೇಳಿ ತನ್ನ 17ರ ಹರೆಯದಲ್ಲೇ ತಾಳ ಹಿಡಿಯುವ ಕನಸು ಕಂಡ ದೇವರಾಜ ದಾಸ್ ಅವರಿಗೆ ಕಲಾಜೀವನಕ್ಕೆ ತಂದೆಯೇ ಪ್ರೇರಣಾವ್ಯಕ್ತಿ-ಪೋಷಣಾ ಶಕ್ತಿಯಾದರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಸೇರ್ಪಡೆಗೊಂಡ ದಾಸ್, ಅಲ್ಲಿ ನೀಲಾವರ ಲಕ್ಷ್ಮೀನಾರಾಯಣಯ್ಯ, ಬನ್ನಂಜೆ ಸಂಜೀವಸುವರ್ಣ ಹಾಗೂ ಚಂದ್ರಹಾಸ ಪುರಾಣಿಕರಲ್ಲಿ ಯಕ್ಷಗಾನ ಶಿಕ್ಷಣವನ್ನು ಪಡೆದು ರಂಗಾಭಿಮುಖಿವಾದರು.

ಮಾರಣಕಟ್ಟೆ-5, ಮಂದಾರ್ತಿ-5, ಕಮಲಶಿಲೆ-3, ಬಗ್ವಾಡಿ-1, ಗೋಳಿಗರಡಿ-2... ಹೀಗೆ ದೇವರಾಜದಾಸ್ ಭಾಗವತ್ ಅವರ ರಂಗವ್ಯವಸಾಯ ಸಾಗಿದೆ.

ಉತ್ತಮ ಭಾಗವತರಾದ ದೇವರಾಜದಾಸ್ ನೃತ್ಯಕಲೆಯನ್ನೂ ಬಲ್ಲರು. ಮದ್ದಳೆ ವಾದನದ ಕಿರು ಪರಿಣತಿಯನ್ನೂ ಹೊಂದಿದವರು.

ದೇವರಾಜದಾಸ್ ಭಾಗವತರ ಇಂಪಿನ ದನಿಯ ಭಾಗವತಿಕೆಯಲ್ಲಿ ಎದ್ದು ಕಾಣುವ ಸಶಕ್ತ ಅಂಶವೆಂದರೆ ರಂಗತಂತ್ರ. ಕಥಾನಕಗಳ ಸೂತ್ರವನ್ನು ಸುಸೂತ್ರವಾಗಿಸುವ ಜಾಣ್ಮೆ ಅವರ ಗಾನ ವಿಧಾನದಲ್ಲಿ ಗಮನಿಸಬಹುದಾಗಿದೆ.

ದೇವರಾಜ್ ಅವರ ಧರ್ಮಪತ್ನಿ ವಿಜಯಾದಾಸ್, ಒಬ್ಬಳೇ ಸುಪುತ್ರಿ ಚಿನ್ಮಯಿ ದಾಸ್.

ಪ್ರತಿಭಾಶಾಲಿ ಭಾಗವತ ದೇವರಾಜ ದಾಸ್ ಅವರು ಅನೇಕ ಸಂಘ-ಸಂಸ್ಥೆಗಳಿಂದ ಗೌರವ ಸಂಮಾನಗಳನ್ನು ಪಡೆದಿರುತ್ತಾರೆ.



# ದೇವರಾಜ ಪುಂಡಲೀಕ ಅಂಬಿಗ

*ಕುಮಟಾ ತಾಲೂಕು, ಸಂಡಳ್ಳಿ*
*(ಉ.ಕ)*

ಪೌರಾಣಿಕ ಯಕ್ಷಾಖ್ಯಾನಗಳಲ್ಲಿ ಕಂಡುಬರುವ ಎಲ್ಲಾ ಸ್ಥಾನದ, ನಡೆಯ ವೈವಿಧ್ಯಮಯ ವೇಷಗಳಲ್ಲಿ ಸಂಪನ್ನ ಕಲಾಪ್ರತಿಭೆಯನ್ನು ಮೆರೆಯುವ ಪ್ರಬುದ್ಧ ಕಲಾವಿದ ದೇವರಾಜ ಅಂಬಿಗ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಸಂಡಳ್ಳಿ ಎಂಬಲ್ಲಿ ಪುಂಡಲಿಕ ಅಂಬಿಗ–ಲಕ್ಷ್ಮೀ ದಂಪತಿಯ ಸುಪುತ್ರನಾಗಿ 22–4–1972ರಲ್ಲಿ ಜನಿಸಿದ ದೇವರಾಜ ಅವರು 7ನೇ ತರಗತಿಗೆ ಶರಣು ಹೊಡೆದು ಯಕ್ಷಬದುಕಿನ ಪಥವನ್ನು ಅನುಸರಿಸಿದರು.

ಹಿರಿಯ ವೇಷಧಾರಿ ಜಂಬೂರು ರಾಮಚಂದ್ರ ಶಾನುಭಾಗ್ ಹಾಗೂ ಬೈಲೂರು ಮಾಧವ ಭಾಗವತ್ ಅವರಲ್ಲಿ ಯಕ್ಷಕಲಾ ಶಿಕ್ಷಣವನ್ನು ಪಡೆದ ಇವರು ತಂದೆಯವರ ಪ್ರೋತ್ಸಾಹ–ಪ್ರೇರಣೆಯಂತೆ ವೃತ್ತಿರಂಗವನ್ನು ಪ್ರವೇಶಿಸಿದವರು.

ಕೆರೆಮನೆ, ಶಿರಸಿ–ಪಂಚಲಿಂಗ, ಸೌಕೂರು, ಸಾಲಿಗ್ರಾಮ, ಕುಮಟಾ, ಸಿಗಂಧೂರು, ಗೋಳಿಗರಡಿ ಮೇಳಗಳಲ್ಲಿ ಸುದೀರ್ಘ 23 ವರ್ಷಗಳ ರಂಗವ್ಯವಸಾಯವನ್ನು ಪೂರೈಸಿದ ಇವರು ಪ್ರಸ್ತುತ ಗೋಳಿಗರಡಿ ಮೇಳದಲ್ಲಿ ದುಡಿಯುತ್ತಿದ್ದಾರೆ.

ಶ್ರೀಕೃಷ್ಣ, ಅರ್ಜುನ, ಪುಷ್ಕಳ, ಸುಧನ್ವ, ಕೌರವ, ಮದನ, ಜಾಂಬವ, ಕಾರ್ತವೀರ್ಯ, ಧರ್ಮಾಂಗದ... ಮೊದಲಾದ ಭಿನ್ನ–ಭಿನ್ನ ನಡೆಯ ಪುರುಷ ಪಾತ್ರಗಳಲ್ಲಿ ಇವರ ಕಲಾಭಿವ್ಯಕ್ತಿ ರಂಗರಸಿಕರ ಮನಮೆಚ್ಚಿಸಿದೆ.

ದೇವರಾಜ ಅಂಬಿಗ ಅವರು ಸ್ತ್ರೀವೇಷಗಳನ್ನೂ, ಹಾಸ್ಯ ಪಾತ್ರಗಳನ್ನೂ, ಬಣ್ಣದ ವೇಷಗಳನ್ನೂ ನಿರ್ವಹಿಸಿ ಗೆಲುವು ಕಂಡಿದ್ದಾರೆ.

ಇವರ ಪುರಾಣಜ್ಞಾನಪೂರ್ಣ ನಿರರ್ಗಳ ವಾಗ್ಮಿತೆ, ಸುಲಲಿತ ನೃತ್ಯಾಭಿನಯ, ಗರಿಷ್ಠಮಟ್ಟದ ರಂಗತಂತ್ರ ಪ್ರೇಕ್ಷಕರ ಮನ ಮುದಗೊಳಿಸುತ್ತದೆ.

ದೇವರಾಜ್ ಅಂಬಿಗ ಅವರು ಗೀತಾ ಎಂಬವರನ್ನು ವರಿಸಿದ್ದಾರೆ. ಮಣಿಕಂಠ, ದಾಕ್ಷಾಯಿಣಿ, ನೀಲಕಂಠ ಎಂಬ ಮೂವರು ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳಲ್ಲಿ ಇವರು ಸಂಮಾನಿತರಾಗಿದ್ದಾರೆ.



## ನರಸಿಂಹ ರಾಮಚಂದ್ರ ಹೆಗಡೆ ಚಿಟ್ಟಾಣಿ

*ಅಂಚೆ : ಹೆರಂಗಡಿ, ಗುಡೇಕೇರಿ,*
*ಹೊನ್ನಾವರ ತಾಲೂರು (ಉ.ಕ)*
*ದೂರವಾಣಿ : 08387-261816*

ತುಂಬುಕಲೋತ್ಸಾಹದ ಗರಿಗೆದರಿ, ರಂಗಸ್ಥಳದಲ್ಲಿ ಯಕ್ಷ ನವಿಲಾಗಿ ನರ್ತಿಸುವ ಬಡಾಬಡಗಿನ ಸೃಜನಶೀಲ ನಟ ಸಂಪನ್ನ ಚಿಟ್ಟಾಣಿ ನರಸಿಂಹ ಹೆಗಡೆ.

ಹೊನ್ನಾವರ ತಾಲೂಕಿನ ಗುಡೇಕೇರಿ ಎಂಬಲ್ಲಿ 1967ರಲ್ಲಿ ಜನಿಸಿದ ನರಸಿಂಹ ಹೆಗಡೆಯವರು ವಿಖ್ಯಾತ ಯಕ್ಷಗಾನ ಕಲಾವಿದ. ಚಿಟ್ಟಾಣಿ ರಾಮಚಂದ್ರ ಹೆಗಡೆ-ಸುಶೀಲಾ ದಂಪತಿಯ ಸುಪುತ್ರ.

ಎಂಟನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ, ಹದಿನೈದರ ಹರೆಯದಲ್ಲೇ ಯಕ್ಷಕಲೆಯ ನೆಂಟತನವನ್ನು ಬಯಸಿದ ನರಸಿಂಹ ಹೆಗಡೆಯವರಿಗೆ ಕಲೆಯೆಂಬುದು ರಕ್ತಗತ ಬಳುವಳಿಯಾಯಿತು. ತಂದೆಯವರ ಪ್ರೋತ್ಸಾಹ, ಮಾರ್ಗದರ್ಶನವೇ ಇವರ ಕಲಾಬದುಕಿಗೆ ಸ್ಫೂರ್ತಿ. ಅಣ್ಣ ಸುಬ್ರಹ್ಮಣ್ಯ ಹೆಗಡೆಯವರ ಸಹಕಾರ ಕಲಾವಿದತ್ವಕ್ಕೊಂದು ಸಾವಯವ ಶಕ್ತಿ.

ಗೋವಿಂದ ಭಟ್ ಹಾಗೂ ತಂದೆ ಚಿಟ್ಟಾಣಿಯವರಿಂದ ಯಕ್ಷಗಾನ ಅಭ್ಯಾಸ ಮಾಡಿದ ನರಸಿಂಹ ಹೆಗಡೆ ಗುಂಡಬಾಳ, ಸಾಲಿಗ್ರಾಮ, ಪೆರ್ಡೂರು, ಸೌಕೂರು, ಅಮೃತೇಶ್ವರಿ, ಮಂದಾರ್ತಿ, ಹಾಲಾಡಿ ಮೇಳಗಳಲ್ಲಿ 21 ವರ್ಷಗಳ ಕಲಾಯಾತ್ರೆಯಲ್ಲಿ ಸಾರ್ಥಕ ಕೀರ್ತಿ ಸಂಪಾದಿಸಿದ್ದಾರೆ.

ಯಕ್ಷಗಾನ ಲೋಕದಲ್ಲಿ ತನ್ನದೇ ವಿಶಿಷ್ಟ ಶೈಲಿ ಸ್ಥಾಪಿಸಿ ಪರ್ವತ ಪ್ರಾಯ ಪ್ರತಿಭೆಯಾಗಿ ಮೆರೆದ ಚಿಟ್ಟಾಣಿಯವರ ತದ್ವತ್ ಅನುಕರಣೆ ಅವರ ಸುಪುತ್ರರಾದ ನರಸಿಂಹ ಹೆಗಡೆಯವರಲ್ಲಿ ಕಲಾರಸಿಕರು ಗುರುತಿಸಿದ್ದಾರೆ.

ಆಕರ್ಷಕ ವೇಷಗಾರಿಕೆ ಹಾಗೂ ಸೃಷ್ಟಿಶೀಲ ನೃತ್ಯಗಾರಿಕೆಯ ಸೊಗಸು-ಸೌಂದರ್ಯದಲ್ಲಿ ನಿರ್ವಹಣಾ ಭೂಮಿಕೆಗಳಲ್ಲಿ ಕಂಗೊಳಿಸುವ ನರಸಿಂಹ ಚಿಟ್ಟಾಣಿಯವರು ಜನಪ್ರಿಯ ಪುರುಷ ವೇಷಧಾರಿಯಾಗಿ ರಂಗನೆಲವನ್ನು ಬೆಳಗುತ್ತಿದ್ದಾರೆ.

ಖಳ ಭಾವಪೂರ್ಣ ಪೌರಾಣಿಕ ಪಾತ್ರಗಳಲ್ಲಿ ನರಸಿಂಹ ಹೆಗಡೆಯವರ ಪ್ರತಿಭಾಶೀಲತೆ ಎದ್ದು ಕಾಣುತ್ತದೆ. ನಾಯಕ, ಪ್ರತಿನಾಯಕ, ಖಳನಾಯಕ ಭೂಮಿಕೆಗಳಲ್ಲಿ ರಸೋತ್ಕೃಷ್ಟ ಕಲಾವಂತಿಕೆಯನ್ನು ತೋರುವ ಇವರ ಕೀಚಕ, ಭಸ್ಮಾಸುರ, ಅರ್ಜುನ, ಸುಧನ್ವ, ಹನುಮಂತ, ರಾವಣ... ಮೊದಲಾದ ಪಾತ್ರಗಳು 'ಚಿಟ್ಟಾಣಿ'ಯವರ ಹುಡುಗಾಟಿಕೆಯ ಕಾಲಘಟ್ಟವನ್ನು ನೆನಪಿಸುತ್ತದೆ.

ನರಸಿಂಹ ಚಿಟ್ಟಾಣಿಯವರ ಧರ್ಮಪತ್ನಿ ಶೈಲಾ, ಓರ್ವ ಸುಪುತ್ರ ರಾಮಚಂದ್ರ.

ಅನೇಕ ಸಂಘ-ಸಂಸ್ಥೆಗಳಿಂದ ಚಿಟ್ಟಾಣಿ ನರಸಿಂಹ ಹೆಗಡೆ ಗೌರವಪೂರ್ಣ ಮಾನ-ಸಂಮಾನಗಳನ್ನು ಪಡೆದಿರುತ್ತಾರೆ.



# ನಾಗರಾಜ ಭಂಡಾರಿ, ಹಿರೇಬೈಲು

*ಅಂಚೆ : ಮುಟ್ಟಾ, ಹೊನ್ನಾವರ ತಾಲೂಕು*
*ಹಿರೇಬೈಲು, ಕಾರವಾರ ಜಿಲ್ಲೆ*
*ದೂರವಾಣಿ : 08387-296088 / 9480106600*

ರಂಗ-ಪ್ರಸಂಗ ರಸರಂಜಿತ, ಪ್ರೇಕ್ಷಕ-ಶ್ರಾವಕ ರೋಮಾಂಚಕ ಹೊರಳಿಕೆ-ಬೆರಳುಗಾರಿಕೆಯ ಸ್ಪಷ್ಟ ನುಡಿಸಾಣಿಕೆಯಲ್ಲಿ ಸಮರ್ಥ ವಾದನ ಪಟುವಾಗಿ ಗುರುತಿಸಿಕೊಂಡ ಯುವ ಮದ್ದಳೆಗಾರ ನಾಗರಾಜ ಭಂಡಾರಿ, ಹಿರೇಬೈಲು.

ಹೊನ್ನಾವರ ತಾಲೂಕಿನ ಪುಟ್ಟ ಹಳ್ಳಿಯಾದ ಹಿರೇಬೈಲು ಇವರ ಹುಟ್ಟೂರು. ನಾಗೇಶ ಭಂಡಾರಿ-ಸಾವಿತ್ರಿ ದಂಪತಿಯ ಸುಪುತ್ರನಾಗಿ 7-4-1983ರಲ್ಲಿ ಜನಿಸಿದ ನಾಗರಾಜ ಭಂಡಾರಿಯವರು 9ನೇ ತರಗತಿ ವ್ಯಾಸಂಗವನ್ನು ಪೂರೈಸಿ, ತನ್ನ 15ರ ಹರೆಯದಲ್ಲೇ ವೃತ್ತಿರಂಗವನ್ನು ಪ್ರವೇಶಿಸಿದರು.

ಕಲಾಜೀವನ ಯಾನಕ್ಕೆ ತೀರ್ಥರೂಪರ ಪ್ರೇರಣೆ-ಪ್ರೋತ್ಸಾಹವನ್ನು ಪಡೆದ ನಾಗರಾಜ ಭಂಡಾರಿಯವರು ಎ.ಪಿ. ಫಾಟಕ್, ಕೃಷ್ಣಯಾಜಿ ಇಡಗುಂಜಿ, ಕಪ್ಪೆಕೆರೆ ಸುಬ್ರಾಯ ಭಾಗವತ್, ವಿದ್ವಾನ್ ಗಣಪತಿ ಭಟ್ಟ, ಪರಮೇಶ್ವರ ಭಂಡಾರಿ, ಕರ್ಕಿ.. ಮೊದಲಾದವರ ಗುರುತನವನ್ನು ಪಡೆದು ಪರಿಪಕ್ವ ವಾದನಪ್ರತಿಭೆಯಾಗಿ ಮದ್ದಳೆಗಾರಿಕೆಯಲ್ಲಿ ಎದ್ದುಕಂಡರು.

ಗುಂಡಬಾಳ ಮೇಳದಲ್ಲಿ 6 ವರ್ಷ, ಸಾಲಿಗ್ರಾಮ ಮೇಳದಲ್ಲಿ 6 ವರ್ಷ... ಹೀಗೆ ಯಶಸ್ವೀ 12 ವರ್ಷಗಳ ಕಲಾಯಾತ್ರೆಯಲ್ಲಿ ಭಂಡಾರಿಯವರು ಯಕ್ಷಲೋಕದಲ್ಲಿ ಸುಪರಿಚಿತ ಮದ್ದಳೆಗಾರರಾಗಿ ಪ್ರಗತಿ ಕಂಡಿದ್ದಾರೆ. ಪ್ರಸ್ತುತ ಇವರು ಸಾಲಿಗ್ರಾಮ ಮೇಳದ ಸಹ ಮದ್ದಳೆಗಾರರಾಗಿ ದುಡಿಯುತ್ತಿದ್ದಾರೆ.

ಯುವ ಮದ್ದಳೆಗಾರ ನಾಗರಾಜ ಭಂಡಾರಿಯವರ ಮದ್ದಳೆವಾದನದ ಕರ ಚಮತ್ಕೃತಿ ಬೆರಗುಗೊಳಿಸುತ್ತದೆ. ಖಚಿತ ಲಯಗಾರಿಕೆಯೊಂದಿಗೆ ಮೇಳೈಸಿದ ಇವರ ವಿಲಂಬ-ತೀವ್ರ ನಡೆಯ ಪೆಟ್ಟು-ಮಟ್ಟುಗಳ ವಾದನ ಶೈಲಿ ರಂಗಸ್ಥಳಕ್ಕೆ ಸಚೇತನ ಕಳೆಯನ್ನು ಕಟ್ಟಿಕೊಡುವಲ್ಲಿ ಗೆಲುವು ಕಾಣುತ್ತದೆ.

ನಾಗರಾಜ ಭಂಡಾರಿಯವರು ನಿವೇದಿತಾ ಎಂಬವರನ್ನು ವರಿಸಿ ಸಂತೃಪ್ತ ಗೃಹಸ್ಥನಾಗಿದ್ದಾರೆ.

ಅನೇಕ ಸಂಘ-ಸಂಸ್ಥೆಗಳಿಂದ ಭಂಡಾರಿಯವರು ತನ್ನ ಪ್ರತಿಭಾವಿಶೇಷತೆಗೆ ಗೌರವಪೂರ್ವ ಸಂಮಾನವನ್ನು ಪಡೆದಿರುತ್ತಾರೆ.



## ನಾಗೇಶ್ ಗಣಪಯ್ಯ ಗೌಡ

*ಅಂಚೆ : ಮೇಲಿನ ಇಡಗುಂಜಿ,*
*ಕುಳಿಮನೆ, ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9480603465 / 9538821790*

ರಂಗಸ್ಥಳದಲ್ಲಿ ನವೋಲ್ಲಾಸದ ನವ್ವಾಲೆಯಾಗಿ ಉತ್ಸಾಹದ ಗರಿಗೆದರಿ ನರ್ತಿಸುವ ಪ್ರತಿಭಾವಂತ ತರುಣ ಕಲಾವಿದ ನಾಗೇಶ ಗೌಡ.

ಉತ್ತರ ಕನ್ನಡದ ಕುಳಿಮನೆ ಎಂಬಲ್ಲಿ 30-7-1981ರಲ್ಲಿ ಗಣಪಯ್ಯ ಗೌಡ-ದೇವಿ ದಂಪತಿಯ ಮಗನಾಗಿ ಜನಿಸಿದ ನಾಗೇಶ್ ಎಂಟನೇ ತರಗತಿಯವರೆಗೆ ಅಕ್ಷರಬದುಕು ನಡೆಸಿ 14ರ ಹರೆಯದಲ್ಲೇ ಯಕ್ಷಬಾಳುವೆಗೆ ಅಂಟಿಕೊಂಡವರು.

ತಂದೆಯವರ ಪೂರ್ಣ ಪ್ರೋತ್ಸಾಹ, ಹಾರೈಕೆಯೊಂದಿಗೆ ರಂಗಭೂಮಿಗೆ ಹೆಜ್ಜೆ ಹಾಕಿದ ಇವರು ವಿದ್ವಾನ್ ಗಣಪತಿ ಭಟ್ಟ, ಎ.ಪಿ. ಫಾಟಕ್ ಹಾಗೂ ಹೆರಂಜಾಲು ಗೋಪಾಲ ಗಾಣಿಗರ ಶಿಷ್ಯವೃತ್ತಿಯಲ್ಲಿ ಸಮರ್ಪಕ ಕಲಾವಿದ್ಯೆಯನ್ನು ಆರ್ಜಿಸಿಕೊಂಡವರು.

ಅಮೇತೇಶ್ವರಿ-3, ಬಗ್ವಾಡಿ-2, ಮಡಾಮಕ್ಕಿ-1, ಮಾರಣಕಟ್ಟೆ-2, ಗುಂಡಬಾಳ-2.... ಹೀಗೆ ಹತ್ತುವರ್ಷಗಳ ಕಲಾಯಾತ್ರೆ ಇವರದ್ದಾಗಿದ್ದು, ಪ್ರಸ್ತುತ ನಾಗೇಶ್ ಗುಂಡಬಾಳ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಪುಂಡುವೇಷಧಾರಿಯಾಗಿ ನಿರ್ವಹಣಾ ಭೂಮಿಕೆಗಳನ್ನು ರಂಗಸ್ಥಳದಲ್ಲಿ ಸಮೃದ್ಧ ಪ್ರತಿಭೆಯಿಂದ ಮೆರೆಸುವ ಇವರ ವೃಷಸೇನ, ಲವ-ಕುಶ, ಬಬ್ರುವಾಹನ, ಸುಧನ್ವ, ಅಭಿಮನ್ಯು, ಕಲಾಧರ, ಮದನ.... ಮೊದಲಾದ ಪಾತ್ರಗಳು ಜನಮೆಚ್ಚುಗೆ ಗಳಿಸಿವೆ.

ಯುವ ಕಲಾವಿದ ನಾಗೇಶ್ ಅವರು ಸವಿತಾ ಎಂಬವರನ್ನು ವರಿಸಿರುತ್ತಾರೆ. ಉಪವೃತ್ತಿಯಾಗಿ ಕೃಷಿಕರ್ಮವನ್ನು ಅವಲಂಬಿಸಿದ್ದಾರೆ.

ಅನೇಕ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



## ನಾಗೇಶ್ ಎನ್. ದೇವಾಡಿಗ

*ಅಂಚೆ : ಬಿಜೂರು, ಮೂರ್ತಿಮನೆ,*
*ಸಾಲೆಮಕ್ಕಿ, ಕುಂದಾಪುರ ತಾಲೂಕು*
*ಉಡುಪಿ ಜಿಲ್ಲೆ*

ಬಡಗುತಿಟ್ಟಿನ ಸಮರ್ಥ ಮುಂಡಾಸು ವೇಷಧಾರಿಯಾಗಿ ರಂಗಮಂಚದಲ್ಲಿ ವಿಜೃಂಭಿಸುವ ಯುವ ಪ್ರತಿಭೆ ನಾಗೇಶ್ ದೇವಾಡಿಗ.

ಕುಂದಾಪುರ ತಾಲೂಕಿನ ಬಿಜೂರು-ಸಾಲೆಮಕ್ಕಿ ಎಂಬಲ್ಲಿ ನಾರಾಯಣ ದೇವಾಡಿಗ-ಮಂಜಿ ದೇವಾಡಿಗ ದಂಪತಿಯ ಸುಪುತ್ರನಾಗಿ ಜನಿಸಿದ ನಾಗೇಶ್ ಅವರಿಗೆ ಪ್ರಸ್ತುತ 29ರ ಹರೆಯ.

ಎಳವೆಯಲ್ಲಿಯೇ ಯಕ್ಷಕಲೆಯ ಕುರಿತು ಉತ್ಕಟ ಅಭಿಮಾನ, ಗೌರವ, ಆಸಕ್ತಿಯನ್ನು ಹೊಂದಿದ್ದ ನಾಗೇಶ್ 6ನೇ ತರಗತಿಗೇ ಓದಿಗೆ ಮಂಗಳ ಹಾಡಿ ಯಕ್ಷಲೋಕದ ಹಾದಿ ಹಿಡಿದು ಕಲೆಯನ್ನೇ ವೃತ್ತಿಧರ್ಮದ ನೆಲೆಯಾಗಿಸಿಕೊಂಡರು.

ಕೆಂಜಿ ರಘುರಾಮ್ ಹಾಗೂ ಸುಬ್ರಮಣ್ಯ ಸಾಲೆಮಕ್ಕಿ ಅವರಲ್ಲಿ ಯಕ್ಷ ಶಿಕ್ಷಣವನ್ನು ಪಡೆದು ಮೇಳ ಜೀವನದಲ್ಲಿ ಸಾರ್ಥಕ್ಯ, ಸಂತೃಪ್ತಿಯನ್ನು ಕಂಡುಕೊಂಡರು.

ಬಗ್ವಾಡಿ, ಮಡಾಮಕ್ಕಿ ಮೇಳಗಳಲ್ಲಿ ಒಂದೊಂದು ತಿರುಗಾಟವನ್ನು ಮಾಡಿದ ನಾಗೇಶ್ ಮಾರಣಕಟ್ಟೆ ಮೇಳದಲ್ಲಿ 12ನೇ ವರ್ಷದ ಯಕ್ಷಬಾಳುವೆಯಲ್ಲಿದ್ದಾರೆ. ಹದಿನಾಲ್ಕು ವರ್ಷಗಳ ಆಟದ ತಿರುಗಾಟ ಅವರನ್ನು ಪ್ರಗತಿಯ ಸೋಪಾನದತ್ತ ಕರೆದೊಯ್ಯುತ್ತಾ ಇದೆ.

ವೃಷಕೇತು, ಪ್ರದ್ಯುಮ್ನ, ಕೌಂಡ್ಲೀಕ, ದಮನ, ಶೂರಸೇನ, ಸಾಲ್ವ, ಕರ್ಣ, ಘಟೋತ್ಕಚ, ಭೀಮಸೇನ, ರಕ್ತಜಂಘ ಮೊದಲಾದ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಗೆಲುವು ಕಂಡ ನಾಗೇಶ್ ದೇವಾಡಿಗ ರಂಗಸ್ಥಳದಲ್ಲಿ ಹುರುಪು ತುಂಬಿದ ಕಸುವು ತೋರುವ ಉತ್ಸಾಹಿ ತರುಣ ಕಲಾವಿದ.

ನಾಗೇಶ್ ದೇವಾಡಿಗರ ಕೈಹಿಡಿದ ಬಾಳ ಸಂಗಾತಿ ರೇಖಾ. ವೃತ್ತಿರಂಗವಾದ ಯಕ್ಷಗಾನವೇ ಉಸಿರು. ಮಳೆಗಾಲದಲ್ಲಿ ಕೃಷಿರಂಗವೇ ಉಪವೃತ್ತಿಯಾಗಿ ಬಾಳ ಬಯಲಿನ ಹಸಿರು.

ಅನೇಕ ಸಂಘ-ಸಂಸ್ಥೆಗಳಿಂದ ನಾಗೇಶ್ ಸಂಮಾನಿತರಾಗಿದ್ದಾರೆ.



## ಎನ್.ಜಿ. ಹೆಗಡೆ, ಯಲ್ಲಾಪುರ

*ಅಂಚೆ : ಚಂದಗುಳಿ,*
*ಯಲ್ಲಾಪುರ ತಾಲ್ಲೂಕು (ಉ.ಕ)*
*ದೂರವಾಣಿ : 9448700024*

ಸೃಜನಾತ್ಮಕ ಹಾಗೂ ಸಾಂಪ್ರದಾಯಿಕ ನುಡಿಸಾಣಿಕೆಯಲ್ಲಿ ಸಮೃದ್ಧ ಪ್ರತಿಭೆಯಾಗಿ ಜನಪ್ರಿಯತೆ ಗಳಿಸಿದ ಯುವ ಮದ್ದಳೆವಾದಕ ಎನ್.ಜಿ. ಹೆಗಡೆ ಯಲ್ಲಾಪುರ. ಅರ್ಥಾತ್ ನಾರಾಯಣ ಗೋಪಾಲ ಹೆಗಡೆ.

ಉತ್ತರಕನ್ನಡದ ಯಲ್ಲಾಪುರ ಇವರ ಹುಟ್ಟೂರು. ಗೋಪಾಲ ಹೆಗಡೆ-ನಾಗವೇಣಿ ಹೆಗಡೆ ದಂಪತಿಯ ಸುಪುತ್ರನಾಗಿ 30-5-1979ರಲ್ಲಿ ಜನಿಸಿದ ಎನ್.ಜಿ. ಹೆಗಡೆ ಅವರು 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿ ತನ್ನ 16ರ ಹರೆಯದಲ್ಲೇ ಯಕ್ಷಗಾನ ರಂಗಭೂಮಿಯನ್ನು ಪ್ರವೇಶಿಸಿದರು.

ಇವರ ಅಜ್ಜ ಸುಬ್ರಾಯ ಹೆಗಡೆಯವರು ಯಕ್ಷಗಾನ ರಂಗದ ಹೆಸರಾಂತ ವೇಷಧಾರಿಯಾಗಿದ್ದರು. ತಂದೆಯವರು ಮದ್ದಳೆಗಾರರು. ಹಾಗಾಗಿ ಯಕ್ಷಕಲೆಯ ಸಾಂಗತ್ಯ ಇವರಿಗೆ ಆನುವಂಶೀಯವಾಗಿ ದೊರಕುವಂತಾಯಿತು. ಕಲಾಜೀವನ ಯಾತ್ರೆಗೆ ತಂದೆಯವರ ಪ್ರೇರಣೆ-ಪ್ರೋತ್ಸಾಹವನ್ನೇ ಸ್ಫೂರ್ತಿ ಮಂತ್ರವಾಗಿಸಿಕೊಂಡ ಎನ್.ಜಿ. ಹೆಗಡೆಯವರು ಇಡಗುಂಜಿಯ ಶ್ರೀ ಮಯಾ ಕಲಾಕೇಂದ್ರದಲ್ಲಿ ವಿದ್ಯಾರ್ಥಿಯಾಗಿ ಇವರು ವಿದ್ವಾನ್ ಗಣಪತಿ ಭಟ್ಟ, ಎ.ಪಿ. ಫಾಟಕ್, ಹೆರಂಜಾಲು ಗೋಪಾಲ ಗಾಣಿಗ ಅವರಲ್ಲಿ ಸಶಕ್ತ ಕಲಾಶಿಕ್ಷಣ ಪಡೆದವರು. ದಿ. ಕೆರೆಮನೆ ಶಂಭು ಹೆಗಡೆಯವರ ಗುರುತನ ಹಾಗೂ ಕಲಾ ಮಾರ್ಗದರ್ಶನವೂ ಇವರಿಗೆ ದೊರಕಿರುತ್ತದೆ.

ರಂಗನಟನ ಭಾವಪೂರ್ಣ ಅಭಿವ್ಯಕ್ತಿಗೆ ಮದ್ದಳೆಯ ಮಧುರ ನುಡಿಗಾರಿಕೆಯ ಮೆರುಗು ನೀಡುವ ಎನ್.ಜಿ. ಹೆಗಡೆ ಪಾರಂಪರಿಕ ಮಟ್ಟುಗಳನ್ನೂ, ಸೃಜನಶೀಲ ಪೆಟ್ಟುಗಳನ್ನೂ ಮದ್ದಳೆಯಲ್ಲಿ ಕೇಳಿಸುವವರು. ಇವರ ಪ್ರಸಂಗಾನುಭವ, ರಂಗವಾಹಿತಿಯೂ ಸಮೃದ್ಧವಾದದ್ದು. ಖಚಿತ ಲಯಗಾರಿಕೆಯೊಂದಿಗೆ ಸೊಗಯಿಸುವ ಇವರ ಮದ್ದಳೆಯ ನುಡಿತ-ಭಣಿತಗಳ ನಾದ-ಮೋದ ಸಹೃದಯ ಸಂತರ್ಪಣವಾಗಿ ರಂಗದಲ್ಲಿ ಗುಂಗು ಸೃಜಿಸಿದೆ.

ಸಮರ್ಥ ಮದ್ದಳೆವಾದಕರಾದ ಹೆಗಡೆಯವರಿಗೆ ಚಂಡೆ ವಾದನ ಹಾಗೂ ಭಾಗವತಿಕೆಯ ಪರಿಣತಿಯೂ ಇದೆ. ಹಾಗೆಯೇ ಇವರೊಬ್ಬ ಸುಯೋಗ್ಯ ವೇಷಧಾರಿಯೂ ಹೌದು. ಇಡಗುಂಜಿ ಮೇಳದಲ್ಲಿ ಹೆಗಡೆಯವರು ಸ್ತ್ರೀವೇಷಗಳನ್ನು ನಿರ್ವಹಿಸಿ ಕಲಾಪ್ರೇಕ್ಷಕರನ್ನು ರಂಜಿಸಿದ್ದೂ ಇದೆ.

ಇಡಗುಂಜಿ, ಮಂದಾರ್ತಿ, ಕಮಲಶಿಲೆ, ಸಾಲಿಗ್ರಾಮ... ಮೊದಲಾದ ಮೇಳಗಳಲ್ಲಿ ಇವರ ಕಲಾತಿರುಗಾಟ 14 ವರ್ಷಗಳನ್ನು ಪೂರೈಸಿರುತ್ತದೆ. ಪ್ರಸ್ತುತ ಹೆಗಡೆ ಮಂದಾರ್ತಿ ಮೇಳದ ಪ್ರಧಾನ ಮದ್ದಳೆಗಾರರು.

ಕೋಟ-ಹಂಗಾರಕಟ್ಟೆ ಯಕ್ಷಕಲಾಕೇಂದ್ರ, ಇಡಗುಂಜಿ ಶ್ರೀಮಯ ಕಲಾಕೇಂದ್ರ ಹಾಗೂ ಮಂದಾರ್ತಿ ಯಕ್ಷಗಾನ ಕೇಂದ್ರದ ಮದ್ದಳೆ-ಚಂಡೆವಾದನದ ಗುರುಗಳಾಗಿಯೂ ಸೇವೆ ಸಲ್ಲಿಸಿ ಅನೇಕ ಶಿಷ್ಯರನ್ನು ರೂಪಿಸಿದ ಹಿರಿಮೆ ಹೆಗಡೆಯವರದ್ದು.

ಬಹುಮುಖ ಪ್ರತಿಭೆಯಾಗಿ ಯಕ್ಷಗಾನ ಕೃಷಿಯಲ್ಲಿ ಸಮೃದ್ಧ ಕೀರ್ತಿಯ ಫಸಲು ಕಂಡ ಎನ್.ಜಿ. ಹೆಗಡೆಯವರು ಮಂಜುಳಾ ಎಂಬವರನ್ನು ವರಿಸಿ ಸಾಕೇತ ಎನ್ನುವ ಸುಪುತ್ರನನ್ನು ಪಡೆದಿದ್ದಾರೆ.

ನಿಟ್ಟೂರು, ಯಲ್ಲಾಪುರ... ಮೊದಲಾದ ಕಡೆಗಳಲ್ಲಿ ಇವರನ್ನು ಸಂಮಾನಿಸಲಾಗಿದೆ.



## ನಾರಾಯಣ ಗೌಡ, ಎಳಜಿತ್

*ಅಂಚೆ : ಎಳಜಿತ್, ಕಾಶಿಕೊಡ್ಲು ಮನೆ,*
*ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*

ಬಡಗುತಿಟ್ಟಿನ ಸಂಪ್ರದಾಯದ ವರ್ಣರಂಜಿತ ಪ್ರತಿಭಾ ಪ್ರೌಢಿಮೆಯಲ್ಲಿ ಬಣ್ಣದ ವೇಷಗಳನ್ನು ಕಲಾಪ್ರಿಯರ ಕಣ್ಮನ ರಂಜನೀಯವಾಗಿ ದರ್ಶಿಸುವ ಅನುಭವಿ ವೇಷಧಾರಿ ನಾರಾಯಣ ಗೌಡ ಎಳಜಿತ್.

ಕುಂದಾಪುರ ತಾಲೂಕಿನ ಕಾಶಿಕೊಡ್ಲು ಎಂಬಲ್ಲಿ ಕಾಳಿಂಗಗೌಡ–ಗೌರಿ ದಂಪತಿಯ ಸುಪುತ್ರರಾಗಿ ಜನಿಸಿದ ನಾರಾಯಣ ಗೌಡರಿಗೀಗ 51ರ ಹರಯ.

ಏಳಕ್ಕೆ ಅಕ್ಷರ ಬಾಳು ಸಾಕೆನಿಸಿಕೊಂಡು, ಹದಿನೈದರ ಹರೆಯದಲ್ಲೇ ಯಕ್ಷಗಾನ ವೃತ್ತಿಬದುಕಿಗೆ ಮುಖಮಾಡಿದ ಗೌಡರು ಚಿಕ್ಕಂದಿನಿಂದಲೇ ಕಲೆಯ ಕುರಿತು ಅನ್ಯಾದೃಶ ಆಸಕ್ತಿಯನ್ನು ಹೊಂದಿದವರು.

ಬಾಬುರಾಯ ಶೆಣೈಯವರು ಹಾಗೂ ತನ್ನ ಮನೆಯವರ ತುಂಬು ಪ್ರೋತ್ಸಾಹದಿಂದ ಹೆಜ್ಜೆ–ಗೆಜ್ಜೆಯ ಬಾಲ್ಯಕನಸನ್ನು ನನಸಾಗಿಸಿಕೊಂಡ ಇವರು ಹಿರಿಯ ವೇಷಧಾರಿ ಕೊಪ್ಪಾಟೆ ಮುತ್ತ ಹಾಗೂ ಅನುಭವಿ ಮದ್ದಳೆಗಾರ ವೈ. ಸದಾನಂದ ಪ್ರಭು ಅವರಲ್ಲಿ ರಂಗ ಶಿಕ್ಷಣವನ್ನು ಪಡೆದವರು.

ಮಾರಣಕಟ್ಟೆ, ಅಮೃತೇಶ್ವರಿ, ಬಗ್ವಾಡಿ, ಸಾಲಿಗ್ರಾಮ, ಸೌಕೂರು, ಹಾಲಾಡಿ ಮೇಳಗಳಲ್ಲಿ ಕಲಾಸೇವೆ ಸಲ್ಲಿಸಿದ ನಾರಾಯಣ ಗೌಡರು ವೃತ್ತಿರಂಗದಲ್ಲಿ ಸಾರ್ಥಕ 28 ವರ್ಷಗಳನ್ನು ಪೂರ್ಣಗೊಳಿಸಿದ್ದಾರೆ. ಪ್ರಸ್ತುತ ಸೌಕೂರು ಮೇಳದ ಬಣ್ಣದ ವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಪುರಾಣ ಪ್ರಸಂಗಗಳ ಎಲ್ಲಾ ನಡೆಯ ಗಂಡು ಬಣ್ಣ ಹಾಗೂ ಹೆಣ್ಣು ಬಣ್ಣಗಳನ್ನು ಗೌಡರು ಸಮರ್ಥವಾಗಿ ನಿರ್ವಹಿಸುತ್ತಾರೆ. ಕ್ಷೇತ್ರ ಮಹಾತ್ಮೆ ಪ್ರಸಂಗಗಳ ವೈವಿಧ್ಯಮಯ ದೈವ ಭೂಮಿಕೆಗಳ ನಿರ್ವಹಣೆಯಲ್ಲಿ ಇವರ ಉನ್ನತ ಕಲಾವಂತಿಕೆ ಪ್ರೇಕ್ಷಕರಿಗೆ ಬಲುಪ್ರಿಯವಾಗಿದೆ.

ಹಿಡಿಂಬಾಸುರ, ಮಹಿಷಾಸುರ, ಸೂರ್ಯವರ್ಮ, ರಾವಣ, ವಿದ್ಯುಲ್ಲೋಚನ... ಮೊದಲಾದ ಬಣ್ಣದ ವೇಷಗಳು ಇವರಿಗೆ ಸಂತೃಪ್ತಿ ಹಾಗೂ ಜನಪ್ರೀತಿಯನ್ನು ನೀಡಿವೆ.

ಪ್ರಸಂಗ ಸಂದರ್ಭೋಚಿತವಾಗಿ ಗೌಡರು ರಾಜವೇಷಗಳನ್ನು, ಕಿರಾತ ಮತ್ತಿತರ ವೇಷಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ.

ನಾರಾಯಣಗೌಡರ ಸಹಧರ್ಮಿಣಿ ಗಿರಿಜಾ. ಚಂದ್ರಶೇಖರ, ರವಿಚಂದ್ರ, ಚಂದ್ರರೇಖಾ, ಶಶಿಧರ, ಶ್ರೀಧರ ಇವರ ಐದುಮಂದಿ ಮಕ್ಕಳು.

ಅನೇಕ ಸಂಘ–ಸಂಸ್ಥೆಗಳಿಂದ ಕಲಾವಿದ ನಾರಾಯಣಗೌಡರು ಸಂಮಾನಿತರಾಗಿದ್ದಾರೆ.



## ಪ್ರಕಾಶನಾವಡ ಜಿ.ಎಸ್. ಗುಂಡ್ಮಿ

*ನಾವಡರ ಬೆಟ್ಟು, ಗುಂಡ್ಮಿ ಗ್ರಾಮ, ಅಂಚೆ : ಸಾಸ್ತಾನ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9980692131*

ಬಡಗಿನ ಭಾಗವತಿಕೆ ಹಾಗೂ ಚಂಡೆಗಾರಿಕೆಯಲ್ಲಿ ಪ್ರಬುದ್ಧ ಪ್ರತಿಭೆಯಾಗಿ ಗುರುತಿಸಿಕೊಂಡವರು ಜಿ.ಎಸ್. ಪ್ರಕಾಶ ನಾವಡ ಗುಂಡ್ಮಿ.

ಉಡುಪಿ ತಲೂಕಿನ ಗುಂಡ್ಮಿ ಎಂಬಲ್ಲಿ 16-11-1958ರಲ್ಲಿ ಜನಿಸಿದ ಪ್ರಕಾಶ ನಾವಡ ಅವರು ಜಿ. ಶ್ರೀನಿವಾಸ ನಾವಡ, ಜಿ. ನಾಗರತ್ನಮ್ಮ ದಂಪತಿಯ ಸುಪುತ್ರ.

ಆ ಕಾಲದಲ್ಲಿ ದ್ವಿತೀಯ ಪಿ.ಯು.ಸಿ. ವ್ಯಾಸಂಗ ಮಾಡಿ ಸರಕಾರಿ ಉದ್ಯೋಗದ ದಾರಿ ಕಾಣಲು ಮನಮಾಡದೆ ಗುಂಡ್ಮಿ ಸದಾನಂದ ಐತಾಳರ ಪ್ರೇರಣೆಯಂತೆ ಕಲೆಯನ್ನೇ ಬದುಕಾಗಿಸಿಕೊಂಡ ಪ್ರಕಾಶ ನಾವಡರು ವೃತ್ತಿರಂಗದಲ್ಲಿ ಭಾಗವತರಾಗಿ, ಚಂಡೆಗಾರರಾಗಿ ಸೇವೆಸಲ್ಲಿಸುತ್ತಾ ಬಂದವರು.

ಇವರ ದೊಡ್ಡಪ್ಪ ಹಿರಿಯ ಭಾಗವತ ಗುಂಡ್ಮಿ ರಾಮಚಂದ್ರ ನಾವಡರು. ಅವರ ಮಗ ಕಾಳಿಂಗ ನಾವಡರು ಇವರ ಅಣ್ಣ. ಅವರೀರ್ವರ ಗುರುತರ ಮಾರ್ಗದರ್ಶನವೂ ಇವರಿಗೆ ದೊರಕಿರುತ್ತದೆ.

ದಿ. ನಾರ್ಣಪ್ಪ ಉಪ್ಪೂರ ಹಾಗೂ ಸದಾನಂದ ಐತಾಳರ ಶಿಷ್ಯನಾಗಿ ಕಲಾವಿದ್ಯೆಯನ್ನು ಆರ್ಜಿಸಿಕೊಂಡ ಪ್ರಕಾಶನಾವಡರು, ಗೋಳಿಗರಡಿ-5, ಮಂದಾರ್ತಿ-3, ಅಮೃತೇಶ್ವರಿ-5, ಕಳವಾಡಿ-3, ಬಗ್ವಾಡಿ-4, ಹಾಲಾಡಿ-7, ಸೌಕೂರು-3 ಮೇಳಗಳಲ್ಲಿ ಮೂರು ದಶಕಗಳ ಕಲಾವ್ಯವಸಾಯ ಪೂರೈಸಿದ್ದಾರೆ.

ಉತ್ತಮ ಪ್ರಸಂಗ ಮಾಹಿತಿ, ರಂಗತಂತ್ರ, ಪೌರಾಣಿಕ ಜ್ಞಾನ ಸಂಪನ್ನರಾದ ಪ್ರಕಾಶನಾವಡರು ಪ್ರಸ್ತುತ ಗೋಳಿಗರಡಿ ಮೇಳದ ಚಂಡೆವಾದಕರಾಗಿ ದುಡಿಯುತ್ತಿದ್ದಾರೆ.

ಪ್ರಕಾಶ ನಾವಡ ಅವರ ಧರ್ಮಪತ್ನಿ ಗಾಯಿತ್ರಿ ನಾವಡ. ಕಾರ್ತಿಕ ಹಾಗೂ ಕೌಶಿಕ ಇವರ ಉಭಯ ಗಂಡುಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ ನಾವಡರು ಸಂಮಾನಿತರಾಗಿದ್ದಾರೆ.



## ಪ್ರಭಾಕರ ಶೆಟ್ಟಿ, ಮಡಾಮಕ್ಕಿ

*ಮಡಿವಾಳ ಮಕ್ಕಿ, ಬಡಾಕೇರಿ, ಅಂಚೆ : ನಾವುಂದ,*
*ಕುಂದಾಪುರ ತಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9008856940*

ಬಡಗುತಿಟ್ಟಿನ ಯಕ್ಷಗಾನ ಕ್ಷೇತ್ರದ ಅನುಭವಿ ಕಲಾವಿದರಾಗಿ ಪೌರಾಣಿಕ ಕಥಾಭಾಗಗಳಲ್ಲಿ ಕಂಡುಬರುವ ಪ್ರಧಾನ ಪೋಷಕ ಪಾತ್ರಗಳನ್ನು ವಿಶೇಷ ಪ್ರತಿಭಾ ಪ್ರೌಢಿಮೆಯಲ್ಲಿ ಪೋಷಿಸುವ ಹಿರಿಯ ವೇಷಧಾರಿ ಪ್ರಭಾಕರ ಶೆಟ್ಟಿ ಮಡಾಮಕ್ಕಿ.

ಕುಂದಾಪುರ ತಾಲೂಕಿನ ಮಡಾಮಕ್ಕಿ ಎಂಬ ಪುಟ್ಟಹಳ್ಳಿಯೇ ಶೆಟ್ಟರ ಹುಟ್ಟೂರು. 6–4–1960ರಲ್ಲಿ ಇವರ ಜನನ. ಚಂದ್ರಶೇಖರ ಶೆಟ್ಟಿ–ಪುಟ್ಟಮ್ಮ ಇವರ ತಂದೆ ತಾಯಿ. ಹತ್ತನೇ ತರಗತಿಯವರೆಗೆ ಅಕ್ಷರ ಜೀವನ. ಮೂವತ್ತನೆಯ ವರ್ಷದಲ್ಲಿ ಯಕ್ಷಲೋಕಕ್ಕೆ ಪಯಣ.

ಎಳವೆಯಲ್ಲೇ ಹುರಿಗಟ್ಟಿದ ಅದಮ್ಯ ಯಕ್ಷಕಲಾಸಕ್ತಿಯನ್ನೇ ವೃತ್ತಿ ಬದುಕಿನ ಪ್ರೇರಣಾ ಶಕ್ತಿಯಾಗಿಸಿಕೊಂಡು ಸಾಗಿದ ಶೆಟ್ಟರು ಕೊಪ್ಪಾಟೆ ಮುತ್ತನವರಲ್ಲಿ ಕಲಾಶಿಕ್ಷಣ ಪಡೆದು ರಂಗಭೂಮಿಗೆ ಮುಖವೊಡ್ಡಿದರು.

ಮಡಾಮಕ್ಕಿ, ಗೋಳಿಗರಡಿ, ಬಗ್ವಾಡಿ, ಮಾರಣಕಟ್ಟೆ ಮೇಳಗಳಲ್ಲಿ ಪ್ರಭಾಕರ ಶೆಟ್ಟರು ಇಪ್ಪತ್ತು ವರ್ಷಗಳ ಕಲಾವ್ಯವಸಾಯ ಪೂರೈಸಿದ್ದಾರೆ.

ಉತ್ತಮ ವಾಗ್ಮಿಯಾಗಿ ಪುರಾಣಜ್ಞಾನ ಸಂಪತ್ತಿನಲ್ಲಿ ಪಾತ್ರಗಳನ್ನು ಜೀವಂತವಾಗಿಸುವ ಶೆಟ್ಟರು ನಿರ್ವಹಿಸಿದ ನಾರದ, ಧರ್ಮರಾಯ, ಶಕುನಿ, ಕಮಲಭೂಪ, ದೇವೇಂದ್ರ... ಮೊದಲಾದ ಪೌರಾಣಿಕ ಭೂಮಿಕೆಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿವೆ.

ಪ್ರಭಾಕರ ಶೆಟ್ಟರ ಧರ್ಮಪತ್ನಿ ಪಾರ್ವತಿ. ಸೌಜನ್ಯ, ಪೃಥ್ವಿರಾಜ, ಪುಷ್ಪರಾಜ, ಪ್ರತಿಮಾ ಇವರ ನಾಲ್ಕು ಮಂದಿ ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳು ಹಿರಿಯ ಕಲಾವಿದ ಪ್ರಭಾಕರ ಶೆಟ್ಟರ ಪ್ರಬುದ್ಧ ಪ್ರತಿಭೆಯನ್ನು ಗುರುತಿಸಿ ಗೌರವಿಸಿವೆ.



## ಪ್ರವೀಣ ಗಾಣಿಗ, ಕೆಮ್ಮಣ್ಣು

*ಅಂಚೆ : ಬಡಾನಿಡಿಯೂರು, ಬಡಾನಿಡಿಯೂರು ಗ್ರಾಮ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9880820989*

ಬಡಗುತಿಟ್ಟಿನ ಪ್ರಖರ ಪ್ರತಿಭೆಯ ಪ್ರಸಿದ್ಧ ಪುಂಡುವೇಷಧಾರಿಯಾಗಿ ಯಕ್ಷರಂಗಮಂಚದಲ್ಲಿ ಪ್ರಜ್ವಲಿಸುವ ಪ್ರಬುದ್ಧ ಯುವ ಕಲಾವಿದ ಪ್ರವೀಣ ಗಾಣಿಗ ಕೆಮ್ಮಣ್ಣು.

ಉಡುಪಿ ತಾಲೂಕಿನ ಬ್ರಹ್ಮಾವರ ಸಮೀಪದ ಹಾರಾಡಿ ಇವರ ಹುಟ್ಟೂರು. ತಂದೆ ಆನಂದ ಗಾಣಿಗ, ತಾಯಿ ಪಾರ್ವತಿ, ಜನಿಸಿದ್ದು 1–10–1978ರಲ್ಲಿ.

ಪ್ರವೀಣ ಗಾಣಿಗರ ರಂಗಜೀವನ 8ನೇ ತರಗತಿಯ ತರುವಾಯ ಅಂದರೆ ಅವರ 15ರ ಹರೆಯದಲ್ಲೇ ಆರಂಭವಾಯಿತು. ಮನೆತನದಿಂದ ಬಂದ ಕಲಾಪರಂಪರೆಯೇ ಇವರಿಗೆ ಯಕ್ಷಲೋಕಕ್ಕೆ ಮಾರ್ಗಸೂಚಿಯಾಯಿತು. ಬಡಗುತಿಟ್ಟಿನ ದಂತಕತೆಗಳಾದ ಹಾರಾಡಿ ರಾಮಗಾಣಿಗ ಹಾಗೂ ಹಾರಾಡಿ ಕುಷ್ಠ ಗಾಣಿಗ ಶ್ರೀ ಪ್ರವೀಣ ಗಾಣಿಗರ ಅಜ್ಜಂದಿರು. ಹಾರಾಡಿ ಮಹಾಬಲ ಗಾಣಿಗ ಹಾಗೂ ನಾರಾಯಣ ಗಾಣಿಗ ಇವರ ಸಂಬಂಧಿಕ ಬಂಧುಗಳು.

ತೋನ್ಸೆ ಜಯಂತ ಕುಮಾರ್, ಬಡಾ ನಿಡಿಯೂರು ಕೇಶವರಾವ್ ಅವರ ಶಿಷ್ಯನಾಗಿ ರಂಗಶಿಕ್ಷಣ ಸಂಪನ್ನರಾದ ಪ್ರವೀಣ ಗಾಣಿಗರು ಸೌಕೂರು, ಸಾಲಿಗ್ರಾಮ, ಮಂದಾರ್ತಿ, ಮಾರಣಕಟ್ಟೆ, ಪೆರ್ಡೂರು, ಹಿರಿಯಡಕ ಮೇಳಗಳಲ್ಲಿ 17 ವರ್ಷಗಳ ರಂಗತಿರುಗಾಟವನ್ನು ನಡೆಸಿರುತ್ತಾರೆ.

ಕಥಾನಾಯಕ ಪಾತ್ರಗಳನ್ನು ನಿರ್ವಹಿಸುವ ಪ್ರವೀಣ್ ಪುರುಷ ವೇಷ ಹಾಗೂ ಪುಂಡುವೇಷಗಳ ಅಪೂರ್ವ ಸಂಗಮದ ಅನನ್ಯ ಪ್ರತಿಭೆಯನ್ನು ಹೊಂದಿದವರು.

ಚುರುಕುಗತಿಯ ಸ್ಫುಟವಾದ ನೃತ್ಯಾಭಿನಯ ವೈಖರಿ, ಶುದ್ಧ, ಹೃದ್ಯ ವಾಗ್ವಿಲಾಸ, ಆಕರ್ಷಕ ವೇಷ ವಿಧಾನ, ದಣಿವರಿಯದ ರಂಗ ದುಡಿಮೆ... ಇವರಲ್ಲಿ ಕಾಣುವ ಕಲಾಮೌಲಿಕ ಗುಣಗಳು.

ಶ್ರೀಕೃಷ್ಣ, ಅಭಿಮನ್ಯು, ಬಬ್ರುವಾಹನ, ಸುಧನ್ವ, ವೃಷಸೇನ, ದೇವವ್ರತ, ಶ್ರೀರಾಮ, ಪುಷ್ಕಳ, ಲವ–ಕುಶ, ಮನ್ಮಥ.... ಮೊದಲಾದ ಪಾತ್ರನಿರ್ವಹಣೆಯಲ್ಲಿ ಜನಮಾನಸವನ್ನು ಗೆದ್ದ ಗಾಣಿಗರು ಜೋಡಾಟದಲ್ಲಿ ಇದಿರಾಳಿ ಕೆದಕಿದರೆ ಕೆರಳಿದ ಸರ್ಪ. ಗುರಿಯಿಟ್ಟರೆ ಗಾಯದ ಹುಲಿ.

ಪ್ರತಿಭಾನ್ವಿತ ಪ್ರವೀಣ ಗಾಣಿಗರ ಧರ್ಮಪತ್ನಿ ಯಶೋದಾ. ಪಲ್ಲವಿ ಹಾಗೂ ಪ್ರಿಯಾಲಕ್ಷ್ಮೀ ಇವರ ಉಭಯ ಮಕ್ಕಳು.

ಅನೇಕ ಸಂಘ–ಸಂಸ್ಥೆಗಳಿಂದ ಮಾನ–ಸಂಮಾನಗಳನ್ನು ಶ್ರೀಯುತರು ಪಡೆದಿರುತ್ತಾರೆ.



## ಪ್ರಸಾದ ಹೆಗಡೆ, ಗೋಡೆ

*ಅಂಚೆ : ಸಂಪಗೋಡು*
*ಸಿದ್ಧಾಪುರ ತಾಲೂಕು (ಉ.ಕ)*

ಇಂಪಾದ ಯಕ್ಷರಸಗಾಯನದ ಮೂಲಕ ಪ್ರೇಕ್ಷಕರ ಶ್ರವಣೇಂದ್ರಿಯಗಳನ್ನು ತಂಪಾಗಿಸುವ ಯುವ ಭಾಗವತ ಗೋಡೆ ಪ್ರಸಾದ ಹೆಗಡೆ.


ಉತ್ತರ ಕನ್ನಡ ಸಿದ್ಧಾಪುರ ತಾಲೂಕಿನ ಕಲಗಾರು ಇವರ ಹುಟ್ಟೂರು. ತಂದೆ ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ಗೋಡೆ ನಾರಾಯಣ ಹೆಗಡೆ, ತಾಯಿ ಅನಸೂಯ ಹೆಗಡೆ.

ತಂದೆಯವರು ವೇಷಧಾರಿಯಾದುದರಿಂದ ಪ್ರಸಾದ ಹೆಗಡೆಯವರಿಗೆ ಕಲೆಯು ಬಳುವಳಿ ರಕ್ತಗತವಾಗಿಯೇ ಬಂದಿದೆ. ಹತ್ತನೆ ತರಗತಿಯವರೆಗೆ ಅಕ್ಷರಾಭ್ಯಾಸ ನಡೆಸಿದ ಪ್ರಸಾದ್, ತೀರ್ಥರೂಪರ ಪ್ರೇರಣೆ, ಪ್ರೋತ್ಸಾಹದೊಂದಿಗೆ 22ನೇ ವಯಸ್ಸಿನಲ್ಲೇ ರಂಗಬದುಕಿಗೆ ಓನಾಮ ಹಾಡಿದರು.

ವಿದ್ವಾನ್ ಗಣಪತಿ ಭಟ್ಟ ಹಾಗೂ ಹೆರಂಜಾಲು ಗೋಪಾಲ ಗಾಣಿಗರ ಶಿಷ್ಯನಾಗಿ ಗಾನ ಶಿಕ್ಷಣವನ್ನು ಪಡೆದ ಪ್ರಸಾದ ಹೆಗಡೆಯವರು ಗುಂಡಬಾಳ, ಮಂದಾರ್ತಿ, ಸಾಲಿಗ್ರಾಮ.... ಮೊದಲಾದ ಮೇಳಗಳಲ್ಲಿ ಹತ್ತು ವರ್ಷಗಳ ಕಲಾವ್ಯವಸಾಯವನ್ನು ಪೂರೈಸಿದ್ದಾರೆ. ಪ್ರಸ್ತುತ ಹೆಗಡೆ ಅವರು ಕೆರೆಮನೆ ಯಕ್ಷಕಲಾಕೇಂದ್ರದಲ್ಲಿ ಭಾಗವತಿಕೆ ಶಿಕ್ಷಕರಾಗಿ ಸೇವಾತತ್ಪರರಾಗಿದ್ದಾರೆ.

ಒಳ್ಳೆಯ ಪುರಾಣ ಜ್ಞಾನ, ಪ್ರಸಂಗ ಮಾಹಿತಿ ಹಾಗೂ ರಾಗಶುದ್ಧಿಯನ್ನು ಹೊಂದಿದ ಪ್ರಸಾದ ಹೆಗಡೆಯವರು ಪೌರಾಣಿಕ ಪ್ರಸಂಗಗಳೆಲ್ಲವನ್ನೂ ಸಮರ್ಪಕವಾಗಿ ಆಡಿಸಬಲ್ಲರು.

ಯುವ ಪ್ರತಿಭಾವಂತ ಭಾಗವತರಾದ ಇವರನ್ನು ಸ್ಥಳೀಯ ಸಂಘ-ಸಂಸ್ಥೆಗಳು ಗುರುತಿಸಿ ಗೌರವಿಸಿವೆ.



## ಬಸವ ಮರಕಾಲ, ಮುಂಡಾಡಿ

*ಅಂಚೆ : ಕಾಡೂರು, ಕಾಡೂರು ಗ್ರಾಮ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08259-280599*

ಬಡಗುತಿಟ್ಟು ಯಕ್ಷಗಾನ ರಂಗದಲ್ಲಿ ಸರ್ವಾಂಗದಲ್ಲೂ ಪರಿಣತಿಯನ್ನು ಸಾಧಿಸಿ ವೃತ್ತಿಮೇಳದಲ್ಲಿ ಚಂಡೆವಾದಕರಾಗಿ ಕಲಾಕಾರ್ಯತತ್ಪರರಾದ ಬಹುಮುಖ ಪ್ರತಿಭಾ ಸಂಪನ್ನ ಬಸವ ಮರಕಾಲ, ಮುಂಡಾಡಿ.

ಉಡುಪಿ ಜಿಲ್ಲೆಯ ಮುಂಡಾಡಿಯ ನಿವಾಸಿಯಾಗಿರುವ ಬಸವ ಮರಕಾಲರು ಹುಟ್ಟಿದ್ದು ಶೃಂಗೇರಿ ತಾಲೂಕಿನ ಹೊಸಕೊಪ್ಪದಲ್ಲಿ. 7-8-1965ರಲ್ಲಿ ಇವರ ಜನನವಾಯಿತು. ತಂದೆ ಲಕ್ಷ್ಮಣ ಮರಕಾಲ ಗಾವಳಿ, ತಾಯಿ ಕರಿಯಮ್ಮ ಮರಕಾಲ್ತಿ ಮುಂಡಾಡಿ. ಎಸ್.ಎಸ್.ಎಲ್.ಸಿ.ಯವರೆಗೆ ಅಕ್ಷರಾಭ್ಯಾಸ ಮಾಡಿದ ಬಸವ ಮರಕಾಲರು ಎಳವೆಯಲ್ಲಿಯೇ ಯಕ್ಷಗಾನರಂಗಭೂಮಿ ಕಂಡರು.

ಪರಿಸರದಲ್ಲಿ ನಡೆಯುತ್ತಿದ್ದ ಬಯಲಾಟಗಳನ್ನು ನಿರಂತರ ನೋಡುತ್ತಿದ್ದ ಬಸವನವರು ಬಾಲ್ಯದಲ್ಲಿಯೇ ಬಣ್ಣದ ಬದುಕಿನ ಹೊಂಗನಸು ಕಂಡರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ರಾಮಕೃಷ್ಣಯ್ಯ, ಕೋಟ ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗ ಅವರ ಶಿಷ್ಯರಾಗಿ ಶಾಸ್ತ್ರೋಕ್ತ ಯಕ್ಷವಿದ್ಯೆಯನ್ನು ಸುಪುಷ್ಟವಾಗಿ ತನ್ನದಾಗಿಸಿಕೊಂಡ ಇವರು ಸುರಗಿಕಟ್ಟೆ ಬಸವ ಗಾಣಿಗರ ಗುರುತನವನ್ನೂ ಪಡೆದವರು.

ಯಕ್ಷಗಾನ ಕೇಂದ್ರದ ವ್ಯವಸಾಯಿ ಮೇಳವಾದ 'ಯಕ್ಷರಂಗ' ತಂಡದ ಕಲಾವಿದನಾಗಿ ಡಾ. ಶಿವರಾಮ ಕಾರಂತರ ಕಲಾಗರಡಿಯಲ್ಲಿ ಪಳಗಿ ಸುಯೋಗ್ಯ ನಟನಾಗಿ ರೂಪುಗೊಂಡರು. ಡಾ. ಕಾರಂತರೊಂದಿಗೆ 'ಯಕ್ಷರಂಗ'ದ ಕಲಾವಿದನಾಗಿ ಭಾರತದಾದ್ಯಂತವಲ್ಲದೆ ರಷ್ಯಾ, ದುಬೈ, ಅಬುದಾಬಿ, ಲಂಡನ್, ದ.ಅಮೆರಿಕಾ, ಜರ್ಮನಿ, ಸ್ವೀಡನ್... ಮೊದಲಾದ ವಿದೇಶಗಳಲ್ಲೂ ತನ್ನ ಅನನ್ಯ ಕಲಾಪ್ರತಿಭೆಯನ್ನು ಮೆರೆದವರು.

ವೃತ್ತಿ ಮೇಳವನ್ನು ಸೇರಿದ ಇವರು ಕಮಲಶಿಲೆ ಮೇಳದಲ್ಲಿ 1 ವರ್ಷ ರಂಗ ವ್ಯವಸಾಯ ನಡೆಸಿ ಹದಿಮೂರು ವರ್ಷಗಳಿಂದ ಮಂದಾರ್ತಿ ಮೇಳದ ಪ್ರಧಾನ ಚಂಡೆಗಾರರಾಗಿ ಅಪಾರ ಜನಮಾನ್ಯತೆಯನ್ನು ಗಳಿಸಿದ್ದಾರೆ.

ಭಾಗವತಿಕೆ, ವೇಷಗಾರಿಕೆ, ಚಂಡೆಗಾರಿಕೆ, ಮದ್ದಳೆಗಾರಿಕೆ, ತರಬೇತುಗಾರಿಕೆ... ಹೀಗೆ ಬಹುಸ್ತರಗಳಲ್ಲೂ ಬಸವರಮರಕಾಲರ ಯಕ್ಷಕಲಾ ನೈಪುಣ್ಯ ಬೆಳಗಿದೆ.

ಪೌರಾಣಿಕ ಪ್ರಸಂಗಗಳ ಕುರಿತ ಇವರ ಅನುಭವ ವಿಶೇಷವಾಗಿದೆ. 'ಯಕ್ಷರಂಗ' ತಂಡದಲ್ಲಿ ವ್ಯವಸಾಯ ಮಾಡಿದ ನಿಮಿತ್ತ ಇವರ ವಾದನ ಶೈಲಿಯಲ್ಲಿ ಭಾವಪ್ರಧಾನವಾದ ಗುಣವಿರುವುದನ್ನು ಗುರುತಿಸಬಹುದಾಗಿದೆ.

ಹಂಗಾರಕಟ್ಟೆ ಯಕ್ಷಗಾನ ಕೇಂದ್ರದ ಗುರುವಾಗಿಯೂ ಸೇವೆ ಸಲ್ಲಿಸಿ ಅನೇಕ ಶಿಷ್ಯರನ್ನು ರೂಪಿಸಿದ ಹಿರಿಮೆಯೂ ಇವರಿಗಿದೆ.

ಪ್ರತಿಭಾನ್ವಿತ ಕಲಾವಿದ ಬಸವ ಮರಕಾಲರು ಗಿರಿಜಾ ಎಂಬುವರನ್ನು ವರಿಸಿ ಪೂರ್ಣೇಶ್, ಪ್ರಜ್ವಲ್ ಎಂಬ ಉಭಯ ಗಂಡುಮಕ್ಕಳನ್ನು ಪಡೆದಿದ್ದಾರೆ.

ದೇಶ-ವಿದೇಶಗಳಲ್ಲಿ ಇವರ ಉನ್ನತ ಕಲಾವಂತಿಕೆಗೆ ಗೌರವ ಸಂಮಾನ ದೊರಕಿರುತ್ತದೆ.



# ಬಸವ ಹಟ್ಟಿಯಂಗಡಿ

*ಹಾಡಿ ಬೆಟ್ಟು, ಅಂಚೆ : ಹಟ್ಟಿಯಂಗಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*

ಪಾತ್ರನಿಷ್ಠ ರಂಗ ವ್ಯವಹಾರದಲ್ಲಿ ಯಕ್ಷಗಾನದ ರಾಜವೇಷಗಳಿಗೆ ವ್ಯವಸ್ಥಿತ ನಿರ್ವಹಣೆ–ನಿರೂಪಣೆಯ ಮೂಲಕ ನ್ಯಾಯ ಕಲ್ಪಿಸಿಕೊಡುವ ಕಲಾವಿದ ಸಂಪನ್ನ ಬಸವ ಹಟ್ಟಿಯಂಗಡಿ.

ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ಎಂಬಲ್ಲಿ 1963ರಲ್ಲಿ ಜನಿಸಿದ ಇವರು ಕುಷ್ಟ ಪೂಜಾರಿ–ನಾಗು ಪೂಜಾರ್ತಿ ದಂಪತಿಯ ಸುಪುತ್ರ, 6ನೇ ತರಗತಿಗೆ ಶಾಲಾ ಕಲಿಕೆಗೆ ವಿದಾಯ ಹೇಳಿ 20ನೇ ವಯಸ್ಸಿನಲ್ಲಿ ಕಲಾಪ್ರಪಂಚಕ್ಕೆ ಅಡಿಯಿಕ್ಕಿದ ಬಸವನವರು ಕಲಾವಿದ ಹೆಮ್ಮಾಡಿ ರಾಮಚಂದ್ರ ಭಟ್ ಅವರ ಪ್ರೇರಣೆ ಪ್ರೋತ್ಸಾಹದೊಂದಿಗೆ ಕಲಾಸ್ಫೂರ್ತಿ ಪಡೆದವರು.

ಭಾಗವತ, ಯಕ್ಷಶಿಕ್ಷಕ ಹೆಮ್ಮಾಡಿ ಪ್ರಭಾಕರ ಆಚಾರ್ಯ ಅವರ ಶಿಷ್ಯನಾಗಿ ನೃತ್ಯಾಭಿನಯ ಶಿಕ್ಷಣವನ್ನು ಪಡೆದ ಇವರು ವೃತ್ತಿಮೇಳದಲ್ಲಿ ಸಮರ್ಥ ಕಲಾವಿದರಾಗಿ ಗುರುತಿಸಿಕೊಂಡರು.


ಅಮೃತೇಶ್ವರಿ, ಗೋಳಿಗರಡಿ, ಮೇಗರವಳ್ಳಿ, ಮಡಾಮಕ್ಕಿ, ಬಗ್ವಾಡಿ, ಆಜ್ರಿ–ಜೋನಮನೆ ಹಾಗೂ ಕಳವಾಡಿ ಮೇಳಗಳಲ್ಲಿ ಹಟ್ಟಿಯಂಗಡಿ ಬಸವನವರ ಇಪ್ಪತ್ತೈದು ವರ್ಷಗಳ ಕಲಾತಿರುಗಾಟ ಯಶಸ್ವಿಯಾಗಿ ನಡೆದಿರುತ್ತದೆ.

ಪ್ರಸಂಗಗಳ ಚೌಕಟ್ಟನ್ನು ಮೀರದೆ, ತನ್ನಲ್ಲಿರುವ ಕಲಾಸತ್ವದಿಂದ ಪಾತ್ರಗಳಿಗೆ ಜೀವಕಳೆ ನೀಡುವ ಹಟ್ಟಿಯಂಗಡಿ ಬಸವ ಅವರು ಪೀಠಿಕಾ ರಾಜವೇಷಗಳನ್ನು ರಂಗನೆಲದಲ್ಲಿ ವಿರಾಜಿಸುವ ಪ್ರತಿಭಾನ್ವಿತರಾಗಿ ಹೆಚ್ಚು ಜನಪ್ರಿಯರು.

ಹಂಸಧ್ವಜ, ಕಮಲಭೂಪ, ಶತ್ರುಘ್ನ, ದೇವೇಂದ್ರ, ಪ್ರತಾಪಸೇನ, ಬಲರಾಮ... ಮೊದಲಾದ ಪೌರಾಣಿಕ ಪಾತ್ರಗಳು ಇವರಿಗೆ ಸಂತೃಪ್ತಿ ದೊರಕಿಸಿಕೊಟ್ಟಿದೆ.

ಇವರ ಧರ್ಮಪತ್ನಿ ಪ್ರೇಮಾ. ಪ್ರದೀಪ, ಪ್ರವೀಣ, ಪ್ರಶಾಂತ ಇವರ ಮೂವರು ಗಂಡುಮಕ್ಕಳು.

ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ಇವರಿಗೆ ಸಂಮಾನ, ಗೌರವವೂ ದೊರಕಿರುತ್ತದೆ.



## ಬಾಲಕೃಷ್ಣ ನಾಯಕ್, ಪೇತ್ರಿ

*ಮಂಚಿ ಕುಮೇರಿ, ಅಂಚೆ : ಕುಂಜಿಬೆಟ್ಟು*
*ಉಡುಪಿ ಜಿಲ್ಲೆ*
*ದೂರವಾಣಿ : 9945716518*

ದೃಢವಾದ ಆಳಂಗದಲ್ಲಿ ಕಂಗೊಳಿಸುವ ವೇಷಗಾರಿಕೆ, ಪಾತ್ರೋಚಿತವಾಗಿ ಪಡಿಮೂಡುವ ಹೆಜ್ಜೆಗಾರಿಕೆ, ಶೃತಿ ಸುಭಗ ಅರ್ಥಗಾರಿಕೆ ಹಾಗೂ ಅನುಭವ ಪೂರ್ಣ ಪ್ರಸಂಗ ನಡೆಯನ್ನು ಹೊಂದಿದ ಧೀಮಂತ ಕಲಾವಂತಿಕೆ ಸೃಜನಾತ್ಮಕವಾಗಿ ತೋರಿಗೊಡುವ ಪ್ರತಿಭಾವಂತ ಕಲಾವಿದ ಪೇತ್ರಿ ಬಾಲಕೃಷ್ಣ ನಾಯಕ್.

ಉಡುಪಿ ಜಿಲ್ಲೆಯ ಕರ್ಜೆ ಎಂಬ ಹಳ್ಳಿಯಲ್ಲಿ 1-2-1964ರಲ್ಲಿ ಜನಿಸಿದ ಬಾಲಕೃಷ್ಣ ನಾಯಕ್ ಅವರು ವಿಠಲನಾಯಕ್-ಶಾಂತಾಬಾಯಿ ದಂಪತಿಯ ಸುಪುತ್ರ.

5ನೇ ತರಗತಿಗೇ ಓದಿಗೆ ಶರಣುಹೊಡೆದು ಯಕ್ಷಗಾನರಂಗವನ್ನೇ ವೃತ್ತಿರಂಗವಾಗಿಸಿಕೊಂಡ ಬಾಲಕೃಷ್ಣ ನಾಯಕ್ ಅವರು ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಮಹಾಬಲ ಕಾರಂತ, ಹೆರಂಜಾಲು ವೆಂಕಟರಮಣ ಗಾಣಿಗರಲ್ಲಿ ಯಕ್ಷ ಶಿಕ್ಷಣವನ್ನು ಪಡೆದವರು.

ಮಾರಣಕಟ್ಟೆ ಮೇಳದಲ್ಲಿ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದ ನಾಯಕ್ ಅವರು ಕಳವಾಡಿ, ಅಮೃತೇಶ್ವರಿ, ಮಂದಾರ್ತಿ, ಹಾಲಾಡಿ, ಮೇಗರವಳ್ಳಿ, ಮಡಾಮಕ್ಕಿ, ಹಿರಿಯಡಕ ಮೇಳಗಳಲ್ಲಿ 20 ವರ್ಷಗಳ ಕಲಾಯಾತ್ರೆಯನ್ನು ಪೂರೈಸಿದವರು.

ಪೌರಾಣಿಕ ಪ್ರಸಂಗಗಳಲ್ಲಿ ಬರುವ ವೈವಿಧ್ಯಮಯ ನಡೆಯ ಎಲ್ಲಾ ಪುರುಷ ಪಾತ್ರಗಳನ್ನೂ ನಿರ್ವಹಿಸುವ ಕಲಾಪ್ರೌಢಿಮೆ ಇವರಲ್ಲಿ ಗುರುತಿಸಬಹುದಾಗಿದೆ.

ಶನೀಶ್ವರ ಮಹಾತ್ಮೆಯ ಶನೀಶ್ವರ-ವಿಕ್ರಮಾದಿತ್ಯ, ಭಸ್ಮಾಸುರ ಮೋಹಿನಿಯ ಭಸ್ಮಾಸು, ಈಶ್ವರ, ದೇವಿಮಹಾತ್ಮೆಯ ಮಹಿಷಾಸುರ.... ಇವರಿಗೆ ಸಂತೃಪ್ತಿ ನೀಡಿದ ಪೌರಾಣಿಕ ಪಾತ್ರಗಳು. ಖಳನಾಯಕ, ಪ್ರತಿನಾಯಕ ಹಾಗೂ ಪೋಷಕ ಪಾತ್ರಗಳ ನಿರ್ವಹಣೆಯಲ್ಲಿ ಬಾಲಕೃಷ್ಣ ನಾಯಕರ ಕಲಾವಂತಿಕೆ ಪ್ರಶಂಸನೀಯ.

ಬಾಲಕೃಷ್ಣ ನಾಯಕ್ ಅವರ ಸಹಧರ್ಮಿಣಿ ಇಂದಿರಾ. ಇವರ ಸುಪುತ್ರ ಸಂದೇಶ, ಸುಕುಮಾರಿ ಶುಭಶ್ರೀ.

ವೃತ್ತಿರಂಗದ ಹಗಲು ಬದುಕಿನಲ್ಲಿ ಆಟೋ ಚಾಲಕರಾಗಿ ದುಡಿಮೆ ನಡೆಸುವ ಬಾಲಕೃಷ್ಣ ನಾಯಕ್ ಪ್ರಸಾಧನ ಕಲಾವಿದರಾಗಿಯೂ ಭಾಗವಹಿಸುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಅನೇಕ ಸಂಮಾನಗಳನ್ನು ಪಡೆದ ಪೇತ್ರಿ ಬಾಲಕೃಷ್ಣ ನಾಯಕರಿಗೆ ಭಾಗವತ ಘೋರ್ಪಾಡಿ ವಿಠಲ ಪಾಟೀಲ್ ಸ್ಮಾರಕ ಪ್ರಶಸ್ತಿಯೂ ದೊರಕಿರುತ್ತದೆ.



# ಭಾಸ್ಕರ ಶೆಟ್ಟಿ ಆಂಜ್ರಿ–ರಾಮನಕೊಡ್ಲು

*ಅಂಚೆ : ಆಜ್ರಿ, ಕುಂದಾಪುರ ತಾಲೂಕು*
*ಉಡುಪಿ ಜಿಲ್ಲೆ*
***ದೂರವಾಣಿ : 966325692***

ಯಕ್ಷಗಾನದ ರಂಗ ಚೌಕಟ್ಟು ಮೀರದ ಸುಸಂಸ್ಕೃತವಾದ ಸೃಜನಾತ್ಮಕ ಕಲಾಭಿವ್ಯಕ್ತಿಯಲ್ಲಿ ವೈನೋದಿಕ ರಸೋತ್ಪತ್ತಿ ಮಾಡುವ ಅನುಭವಿ ಹಾಸ್ಯಗಾರ ಭಾಸ್ಕರ ಶೆಟ್ಟಿ ಆಜ್ರಿ–ರಾಮನಕೊಡ್ಲು.

ಕುಂದಾಪುರ ತಾಲೂಕಿನ ಆಜ್ರಿಯ ರಾಮನಕೊಡ್ಲು ಎಂಬ ಹಳ್ಳಿಯಲ್ಲಿ ರಾಮಣ್ಣ ಶೆಟ್ಟಿ–ನಾಗಮ್ಮ ಶೆಡ್ತಿ ದಂಪತಿಯ ಸುಪುತ್ರನಾಗಿ ಜನಿಸಿದ ಭಾಸ್ಕರ ಶೆಟ್ಟಿಯವರು ಇದೀಗ 39ರ ಹರೆಯದಲ್ಲಿದ್ದಾರೆ.

ನಾಕಕ್ಕೇ ಅಕ್ಷರವಿದ್ಯೆ ಸಾಕೆನಿಸಿಕೊಂಡ ಇವರು ತನ್ನ 17ನೇ ವಯಸ್ಸಿನಲ್ಲೇ ಯಕ್ಷಜೀವನದ ಹಾದಿ ಹಿಡಿದರು.

ಕೌಟುಂಬಿಕವಾಗಿ ಯಾವುದೇ ಕಲಾಹಿನ್ನೆಲೆ ಎಂಬುದು ಇವರಿಗಿಲ್ಲವಾದರೂ ಎಳವೆಯಲ್ಲೇ ಮೈಮನ ತುಂಬಿಕೊಂಡ ಅದಮ್ಯ ಕಲಾಭಿರುಚಿಯನ್ನೇ ವೃತ್ತಿಬದುಕಿಗೆ ಪ್ರೇರಣೆಯಾಗಿಸಿಕೊಂಡ ಶೆಟ್ಟರು ಹಿರಿಯ ಕಲಾವಿದ ಆರ್ಗೋಡು ಮೋಹನದಾಸ ಶೆಣೈಯವರ ಶಿಷ್ಯನಾಗಿ ಯಕ್ಷ ಶಿಕ್ಷಣವನ್ನು ಪಡೆದು ರಂಗವೇರಿದರು.

ಹಾಸ್ಯ ಪಾತ್ರಕ್ಕೊಪ್ಪುವ ವೇಷಗಾರಿಕೆ, ನೃತ್ಯಗಾರಿಕೆ, ಮಾತುಗಾರಿಕೆಯಲ್ಲಿ ಸೊಗಯಿಸುವ ಶೆಟ್ಟರು ಪುರಾಣ ಪ್ರಸಂಗಗಳ ಹಾಸ್ಯ ಭೂಮಿಕೆಗಳಿಗೆ ಉನ್ನತ ಕಲಾವಂತಿಕೆಯಿಂದ ಸಚೇತನದ ಕಳೆ ನೀಡುತ್ತಾರೆ.

ಪೆರ್ಡೂರು, ಹಾಲಾಡಿ, ಮಡಾಮಕ್ಕಿ, ಕಮಲಶಿಲೆ, ಅಮೃತೇಶ್ವರಿ, ಗೋಳಿಗರಡಿ, ಮಾರಣಕಟ್ಟೆ... ಮೊದಲಾದ ಮೇಳಗಳಲ್ಲಿ ಇವರ 18 ವರ್ಷಗಳ ಕಲಾತಿರುಗಾಟ ಸಾರ್ಥಕ್ಯವನ್ನು ಕಂಡಿದೆ.

ಪಾಪಣ್ಣ, ಕಾಶೀಮಾಣಿ, ವಿಜಯ, ಕಾಳಿದಾಸ, ಚಂದಗೋಪ, ವಿದ್ಯುಜ್ಜಿಹ್ವ.... ಮೊದಲಾದ ಪಾತ್ರಗಳನ್ನು ರಸಿಕ ಜನಮನ ರಂಜನೀಯವಾಗಿ ನಿರೂಪಿಸಿ ಗೆಲುವುಕಂಡ ಶೆಟ್ಟರು ರಾಜ ಹಾಸ್ಯಗಾರಿಕೆಗೆ ಆಪ್ತವಾಗುವವರು.

ಭಾಸ್ಕರ ಶೆಟ್ಟರ ಧರ್ಮಪತ್ನಿ ರುಕ್ಮಿಣಿ. ಇವರಿಗೆ ಅರ್ಚನಾ ಹಾಗೂ ಸುದರ್ಶನ ಎಂಬ ಉಭಯ ಮಕ್ಕಳಿದ್ದಾರೆ.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಅನುಭವಿ ಹಾಸ್ಯಗಾರ ಭಾಸ್ಕರ ಶೆಟ್ಟರು ಸಂಮಾನಿತರಾಗಿದ್ದಾರೆ.



## ಭೋಜು ಮೊಗವೀರ, ಶಿರಿಯಾರ

*ಅಂಚೆ/ಗ್ರಾಮ : ಶಿರಿಯಾರ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9972985732*

ರಂಗಶುದ್ಧ, ಕಲಾನುಭವ ಬದ್ಧ ಸಹಜ ಹಾಸ್ಯಗಾರಿಕೆಯ ಸೊಗಸಿನಲ್ಲಿ ಯಕ್ಷರಸಿಕರಿಗೆ ರಂಜನೆಯ ವ್ಯಂಜನವನ್ನುಣಿಸುವ ಹಿರಿಯ ಹಾಸ್ಯಗಾರ ಭೋಜು ಮೊಗವೀರ ಶಿರಿಯಾರ.

ಕುಂದಾಪುರ ತಾಲೂಕಿನ ಶಿರಿಯಾರ-ಕೊಕ್ಕೆ ಬೈಲು ಎಂಬಲ್ಲಿ 1975ರಲ್ಲಿ ಜನಿಸಿದ ಇವರು ದೂಮ ಮರಕಾಲ-ಮಂಜಿ ದಂಪತಿಯ ಸುಪುತ್ರ.

7ನೇ ತರಗತಿಗೇ ಓದಿಗೆ ಶರಣುಹೊಡೆದು ತನ್ನ 15ರ ಹರೆಯದಲ್ಲೇ ಯಕ್ಷ ಬಾಳುವೆ ಕಂಡ ಇವರು ಹಿರಿಯ ಕಲಾವಿದ ಮಾನ್ಯ ನರಸಿಂಹ ಅವರ ಗುರುತನ ಹಾಗೂ ಮಾರ್ಗದರ್ಶನದಲ್ಲಿ ವೃತ್ತಿರಂಗವನ್ನು ಪ್ರವೇಶಿಸಿದರು.


ಮಂದಾರ್ತಿ, ಮಾರಣಕಟ್ಟೆ, ಕಮಲಶಿಲೆ, ಆಜ್ರಿ-ಚೋನಮನೆ, ಅಮೃತೇಶ್ವರಿ, ಹಾಲಾಡಿ, ಗೋಳಿಗರಡಿ, ಮಡಾಮಕ್ಕಿ ಮೇಳಗಳಲ್ಲಿ ಬೋಜು ಮೊಗವೀರರ ಕಲಾಯಾತ್ರೆ ಮೂರು ದಶಕಗಳನ್ನು ಯಶಸ್ವಿಯಾಗಿ ಪೂರೈಸಿದೆ. ಪ್ರಸ್ತುತ ಅಮೃತೇಶ್ವರಿ ಮೇಳದ ಪ್ರಧಾನ ಹಾಸ್ಯ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಪುರಾಣ ಪ್ರಸಂಗಗಳಲ್ಲಿರುವ ಹಾಸ್ಯಭೂಮಿಕೆಗಳಿಗೆ ತನ್ನದೇ ವಿಶಿಷ್ಟ ಕಲಾಭಿವ್ಯಕ್ತಿಯಲ್ಲಿ ಜೀವತುಂಬುವ ಬೋಜು ಅವರು ಸದಭಿರುಚಿಯ ವೈನೋದಿಕ ಕ್ರಿಯೆಯಲ್ಲಿ ಪ್ರೇಕ್ಷಕರಿಗೆ ಇಷ್ಟವಾಗುತ್ತಾರೆ. ಇವರ ವೇಷ, ಭಾಷೆ, ಭಾವ, ನಟನೆ ಎಲ್ಲವೂ ಹಾಸ್ಯ ಪಾತ್ರಗಳನ್ನು ಗರಿಷ್ಠಮಟ್ಟದಲ್ಲಿ ರಂಗನೆಲದಲ್ಲಿ ಮೆರೆಸುತ್ತದೆ.

ಬಾಹುಕ, ಪಾಪಣ್ಣ, ಕಂದರ, ವಿಜಯ, ಬ್ರಾಹ್ಮಣ, ಅಡುಗೂಲಜ್ಜಿ.... ಮೊದಲಾದ ಪಾತ್ರಗಳು ಇವರನ್ನು ಕಲಾಜಗತ್ತು ಗುರುತಿಸುವಂತೆ ಮಾಡಿದೆ.

ಇವರ ಧರ್ಮಪತ್ನಿ ಗುಲಾಬಿ. ಪಲ್ಲವಿ, ದೀಪಾ, ಪ್ರತಿಮಾ ಎನ್ನುವ ಮೂವರು ಹೆಣ್ಣುಮಕ್ಕಳು.

ಭೂತಾಕಾರವಾಗಿ ಕಾಡುವ ಬಡತನದಲ್ಲಿ ಸಾಂಪ್ರದಾಯಿಕ ಶೈಲೀಕೃತ ಹಾಸ್ಯಗಾರಿಕೆಯಲ್ಲಿ ಕಲಾಬದುಕು ಸಾಗಿಸುತ್ತಿರುವ ಹಿರಿಯ ಕಲಾವಿದ ಬೋಜು ಮೊಗವೀರ ಅವರು ಸ್ಥಳೀಯ ಸಂಘ-ಸಂಸ್ಥೆಗಳಿಂದ ಗೌರವ-ಸಂಮಾನ ಪಡೆದಿರುತ್ತಾರೆ.



## ಮಧುಕರ ಭಟ್ ಕೆ.

*ಹೊಸಗದ್ದೆ, ಬಸವನಗದ್ದೆ ಗ್ರಾಮ,*
*ಅಂಚೆ : ಹಣಗೇರಿ ಕಟ್ಟೆ, ತೀರ್ಥಹಳ್ಳಿ ತಾಲೂಕು,*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ : 08181–204126*

ಬಡಗುತಿಟ್ಟಿನ ವೈವಿಧ್ಯಮಯ ಪಾತ್ರ ನಿರ್ವಹಣೆಯಲ್ಲಿ ಸಾಂಪ್ರದಾಯಿಕ ಬೆಡಗು ತೋರುವ ಹಿರಿಯ ಕಲಾವಿದ ಕೆ. ಮಧುಕರ ಭಟ್.

ತೀರ್ಥಹಳ್ಳಿ ಹೊಸಗದ್ದೆ–ಬಸವನಗದ್ದೆ ಗ್ರಾಮದ ನಿವಾಸಿಯಾಗಿರುವ ಭಟ್ಟರು ಹುಟ್ಟಿದ್ದು ಉಡುಪಿ ತಾಲೂಕಿನ 34ನೇ ಕುದಿ ಕಲ್ಗೋಳಿ ಎಂಬಲ್ಲಿ. 25–12–1961ರಲ್ಲಿ ಇವರ ಜನನ. ಕೆ.ಆನಂದ ರಾವ್–ಕಮಲಮ್ಮ, ಭಟ್ಟರ ತಂದೆ–ತಾಯಿ.

ಉದರಂಬಾಗದ ಹವಿಸ್ಸಿಗಾಗಿ ನಾಲ್ಕನೆ ತರಗತಿಗೇ ಓದಿಗೆ ಶರಣು ಹೊಡೆದು 12ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ಮಧುಕರ ಭಟ್ಟರ ಮುತ್ತಾತ ಯಕ್ಷಗಾನ ಕಲಾವಿದರಾದುದರಿಂದ ಇವರಿಗೆ ಕಲೆಂಬುದು ಕೌಟುಂಬಿಕ ಬಳುವಳಿಯಾಗಿಯೇ ಒದಗುವಂತಾಯಿತು.

ಮಧುಕರ ಭಟ್ಟರ ಗುರುಪರಂಪರೆ ಬಲಿಷ್ಠವಾದದ್ದು. ಉಡುಪಿ ಬಸವ, ಹೆರಂಜಾಲು ವೆಂಕಟರಮಣ ಗಾಣಿಗ, ನೀಲಾವರ ರಾಮಕೃಷ್ಣಯ್ಯ ಹಾಗೂ ಮಹಾಬಲ ಕಾರಂತರು ಇವರಿಗೆ ಯಕ್ಷವಿದ್ಯೆಯನ್ನು ಬೋಧಿಸಿದ ಗುರುಗಳು.


ಮಂದಾರ್ತಿ ಮೇಳದಲ್ಲೇ 18 ವರ್ಷ ಕಲಾವ್ಯವಸಾಯ ಮಾಡುವುದರೊಂದಿಗೆ ಈಗ ಅದೇ ಮೇಳದ ಕಲಾವಿದರಾಗಿ ದುಡಿಮೆಯಲ್ಲಿರುವ ಭಟ್ಟರು ಪೆರ್ಡೂರು, ಗೋಳಿಗರಡಿ, ಸಾಲಿಗ್ರಾಮ ಹಾಗೂ ಹಾಲಾಡಿ ಮೇಳಗಳಲ್ಲೂ ರಂಗಕೃಷಿ ನಡೆಸಿದ್ದಾರೆ. ಭಟ್ಟರ ಒಟ್ಟು ಕಲಾತಿರುಗಾಟ 29 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಪೌರಾಣಿಕ ಪ್ರಸಂಗಗಳ ರಂಗನಡೆಯಲ್ಲಿ ವಿಶೇಷ ಅನುಭವವನ್ನು ಹೊಂದಿದ ಮಧುಕರ ಭಟ್ಟರು ಪ್ರಧಾನ ಹಾಗೂ ಪೋಷಕ ಪಾತ್ರಧಾರಿಯಾಗಿ ಗುರುತಿಸಲ್ಪಟ್ಟವರು. ಸಂದರ್ಭೋಚಿತವಾಗಿ ಪ್ರಸಂಗದ ಎಲ್ಲಾ ಬಗೆಯ ಪಾತ್ರಗಳನ್ನೂ ನಿರ್ವಹಿಸುವ ಕಲಾಕೌಶಲ ಭಟ್ಟರಲ್ಲಿ ಸಮೃದ್ಧವಾಗಿ ಹರಳುಗಟ್ಟಿದೆ.

ಶತ್ರುಘ್ನ, ದಮನ, ಜಾಂಬವ, ಬಲರಾಮ, ನಾರದ, ಈಶ್ವರ, ಶೂರಸೇನ, ದೇವೇಂದ್ರ, ನಂದಿ, ಸತ್ರಾಜಿತ, ಹನುಮಂತ, ಧರ್ಮರಾಯ, ವಿಷ್ಣು... ಮೊದಲಾದ ವಿವಿಧ ಗುಣ, ಭಾವದ ಪುರಾಣ ಭೂಮಿಕೆಗಳಿಗೆ ಮಧುಕರ ಭಟ್ಟರು ವಿಶೇಷ ಕಲಾಶಕ್ತಿಯನ್ನು ತುಂಬಿ ರಂಗದಲ್ಲಿ ಮೆರೆದಿದ್ದಾರೆ.

ಮಧುಕರ ಭಟ್ಟರ ಬಾಳಸಂಗಾತಿ ಇಂದಿರಾ. ಮಧುರಶ್ರೀ ಹಾಗೂ ಸಿಂಧೂರ ಇವರ ಉಭಯ ಹೆಣ್ಣುಮಕ್ಕಳು.

ಅನೇಕ ಸಂಘ–ಸಂಸ್ಥೆಗಳಿಂದ ಇವರಿಗೆ ಗೌರವ ಸಂಮಾನ ಸಂದಿವೆ.



## ಮನೋಹರ ರಾವ್ ಕೆ.ಜಿ., ಸೀತೂರು

*ಅಂಚೆ : ಸೀತೂರು, ಎನ್.ಆರ್. ಪುರ ತಾಲೂಕು*
*ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 08265-231139*

ಸ್ತುತ್ಯರ್ಹ ಕಲಾಭಿವ್ಯಕ್ತಿಯಲ್ಲಿ ಎತ್ತರದ ಪ್ರತಿಭೆಯಾಗಿ ಬೆಳೆದ ಅನುಭವಿ ಯಕ್ಷನಟ ಕೆ.ಜಿ. ಮನೋಹರ ರಾವ್.

ಮಲೆನಾಡಿನ ಕೆಡಲಸರ ಎಂಬ ಹಳ್ಳಿಯಲ್ಲಿ 18-6-1962ರಲ್ಲಿ ಜನಿಸಿದ ಮನೋಹರ ರಾವ್ ಅವರು ಗೋವಿಂದರಾವ್-ತಾರಮ್ಮ ದಂಪತಿಯ ಸುಪುತ್ರ.

ಹತ್ತನೆ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದ ಇವರು ತನ್ನ ಹದಿನಾರರ ಹರೆಯದಲ್ಲೇ ಯಕ್ಷಗಾನ ಬದುಕಿಗೆ ಶ್ರೀಕಾರ ಹಾಡಿದರು.

ಇವರ ಅಜ್ಜ, ತಂದೆ, ಸೋದರಮಾವ, ಯಕ್ಷಗಾನ ತಾಳಮದ್ದಳೆ ಅರ್ಥಧಾರಿಗಳಾಗಿ ಪ್ರಸಿದ್ಧರು. ಹೀಗಾಗಿ ಇವರಿಗೆ ಕಲೆಯೆಂಬುದು ಆನುವಂಶಿಕವಾಗಿ ಬಲಿಷ್ಠವಾಗಿ ಸಿದ್ಧಿಸುವಂತಾಯಿತು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ರಾಮಕೃಷ್ಣಯ್ಯ, ಹೆರಂಜಾಲು ವೆಂಕಟರಮಣ ಗಾಣಿಗ ಮೊದಲಾದ ಶ್ರೇಷ್ಠ ಗುರುಗಳಿಂದ ಸಾಂಪ್ರದಾಯಿಕ ರಂಗಶಿಕ್ಷಣವನ್ನು ಪಡೆದ ಇವರು ವೃತ್ತಿರಂಗದಲ್ಲಿ ಸುಯೋಗ್ಯ ವೇಷಧಾರಿಯಾಗಿ ರೂಪುಗೊಂಡು ಕಲಾರಸಿಕರಿಂದ ಶಹಭಾಸ್ ಗಿಟ್ಟಿಸಿಕೊಂಡವರು.

ಶೃಂಗೇರಿ, ಮೂಲ್ಕಿ, ಗುತ್ಯಮ್ಮ, ಬಂಬಳಾಪುರ, ಸೀತೂರು ಮೊದಲಾದ ಮೇಳಗಳಲ್ಲಿ ಸುದೀರ್ಘ 25 ವರ್ಷಗಳ ಕಲಾವ್ಯವಸಾಯ ಪೂರೈಸಿದ ಮನೋಹರ ರಾವ್ ಅವರು ಪ್ರಸ್ತುತ ಸೀತೂರು ಮೇಳದ ಪ್ರಧಾನ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಪೌರಾಣಿಕ ಕಥಾನಕಗಳಲ್ಲಿ ಕಂಡುಬರುವ ಎಲ್ಲಾ ಬಗೆಯ ಪ್ರಧಾನ ಪುರುಷವೇಷ, ಎರಡನೇ ವೇಷಗಳನ್ನು ಇವರು ಸಮರ್ಥವಾಗಿ ನಿರ್ವಹಿಸಬಲ್ಲರು.

ಇವರ ಕಲಾಪ್ರತಿಭೆಯ ಉತ್ಕೃಷ್ಟ ನಿರೂಪಣೆಯಲ್ಲಿ ಅರ್ಜುನ, ಬಲರಾಮ, ಘಟೋತ್ಕಚ, ಭೀಷ್ಮ, ಸಾಲ್ವ, ದುರ್ಜಯ, ಭೀಮ, ಮಧು... ಮೊದಲಾದ ಪುರಾಣ ಭೂಮಿಕೆಗಳು ರಂಗಸ್ಥಳದಲ್ಲಿ ಜೀವಂತವಾಗಿ ಮೈದಾಳಿವೆ.

ಹೆಚ್ಚಾಗಿ ಇವರು ಖಳಸ್ವಭಾವಪೂರ್ಣ ಪಾತ್ರಗಳಲ್ಲಿ, ಪ್ರತಿನಾಯಕ ಭೂಮಿಕೆಗಳಲ್ಲಿ ಪ್ರಬುದ್ಧ ರಂಗವರ್ಚಸ್ಸನ್ನು ದರ್ಶಿಸುವವರು.

ಹಲವಾರು ಮಂದಿಗೆ ತನ್ನ ಯಕ್ಷಗಾನ ವಿದ್ಯೆಯನ್ನು ಧಾರೆಯೆರೆದು ಕಲಾವಿದರನ್ನಾಗಿ ರೂಪಿಸಿದ ಹೆಗ್ಗಳಿಗೆಯೂ ಇವರದ್ದಾಗಿದೆ.

ಮನೋಹರ ರಾವ್ ಪುಷ್ಪಾ ಎಂಬುವರನ್ನು ಮದುವೆಯಾಗಿ ಶ್ವೇತಾ ಹಾಗೂ ವಿನಾಯಕ ಎನ್ನುವ ಉಭಯ ಮಕ್ಕಳನ್ನು ಪಡೆದಿರುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳ ಗೌರವ-ಸಂಮಾನಗಳಿಗೂ ಇವರು ಭಾಜನರಾಗಿದ್ದಾರೆ.



## ಮನೋಹರ ಹೆಗ್ಡೆ, ಕಳ್ತೂರು

*ಅಂಚೆ : ಸಂತೆಕಟ್ಟೆ,*
*ವಯಾ : ಚೇರ್ಕಾಡಿ, ಉಡುಪಿ ತಾಲೂಕು*
*ದೂರವಾಣಿ : **9448314255***

ಸಶಕ್ತ ಪೌರಾಣಿಕ ಜ್ಞಾನವನ್ನು ಹೊಂದಿ, ರಸಾತ್ಮಕ ಯಕ್ಷಗಾಯನದ ಮೂಲಕ ಪ್ರಸಂಗಗಳನ್ನು ರಂಗಮಂಚದಲ್ಲಿ ಕಳೆಗಟ್ಟಿಸುವ ಅನುಭವಿ ಭಾಗವತ ಮನೋಹರ ಹೆಗ್ಡೆ, ಕಳ್ತೂರು.

ಉಡುಪಿ ತಾಲೂಕಿನ ಸಂತೆಕಟ್ಟೆ ಸಮೀಪದ ಕಳ್ತೂರು ಎಂಬಲ್ಲಿ 23-4-1963ರಲ್ಲಿ ಜನಿಸಿದ ಮನೋಹರ ಹೆಗ್ಡೆಯವರು ಸಂಕಯ್ಯ ಹೆಗ್ಡೆ-ಅಕ್ಕಯ್ಯ ಹೆಗ್ಡೆ ದಂಪತಿಯ ಸುಪುತ್ರ. ಎಸ್.ಎಸ್.ಎಲ್.ಸಿ.ಯ ವರೆಗೆ ಶಾಲಾ ವಿದ್ಯಾಭ್ಯಾಸ ಮಾಡಿದ ಇವರು 22ನೇ ವಯಸ್ಸಿನಲ್ಲಿ ಯಕ್ಷಲೋಕಕ್ಕೆ ಪಾದಾರ್ಪಣೆ ಮಾಡಿದರು. ಸುತ್ತಮುತ್ತಲಿನ ಬಯಲಾಟಗಳ ಪ್ರೇರಣೆ, ಸಂಗೀತದ ಮೇಲಿನ ಅದಮ್ಯ ಆಸಕ್ತಿ, ಯಕ್ಷಗಾನ ಕಲೆಯ ಕುರಿತ ವಿಶೇಷ ಅಭಿಮಾನ ಇವರನ್ನು ವೃತ್ತಿರಂಗಮುಖಿಯಾಗಿಸಿದುವು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ಲಕ್ಷ್ಮೀನಾರಾಯಣ ರಾವ್, ಮಹಾಬಲ ಕಾರಂತ, ವಿದ್ವಾನ್ ಗಣಪತಿ ಭಟ್, ಬನ್ನಂಜೆ ಸಂಜೀವ ಸುವರ್ಣ ಅವರಲ್ಲಿ ಸಾಂಪ್ರದಾಯಿಕ ರಂಗ ಶಿಕ್ಷಣ ಪಡೆದ ಇವರು ವೃತ್ತಿಮೇಳಗಳಲ್ಲಿ ಸಮರ್ಥ ಭಾಗವತಿಕೆಯಲ್ಲಿ ಜನಪ್ರೀತಿ ಗಳಿಸಿದರು.

ಮಡಾಮಕ್ಕಿ, ಮಾರಣಕಟ್ಟೆ, ಮಂದಾರ್ತಿ, ಹಾಲಾಡಿ, ಕಳವಾಡಿ ಮೇಳಗಳಲ್ಲಿ 15 ವರ್ಷಗಳ ವ್ಯವಸಾಯ ಪೂರೈಸಿದ ಇವರು ಪ್ರಸ್ತುತ ಮಾರಣಕಟ್ಟೆ ಮೇಳದಲ್ಲಿ ದುಡಿಯುತ್ತಿದ್ದಾರೆ.

ಭಾಗವತರಾದ ಇವರು ಉತ್ತಮ ವೇಷಧಾರಿಯೂ ಹೌದು. ಧರ್ಮಾಂಗದ, ಚಂದ್ರಹಾಸ, ಅರ್ಜುನ, ಸುನೇತ್ರ (ಕಿರಾತ)... ಮೊದಲಾದ ಭೂಮಿಕೆಗಳನ್ನೂ ನಿರ್ವಹಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದಾರೆ.

ಮನೋಹರ ಹೆಗ್ಡೆಯವರು ಸಮರ್ಥ ಸಂಘಟಕರೂ, ಸಂಚಾಲಕರೂ ಆಗಿ ವೃತ್ತಿಮೇಳಗಳಲ್ಲಿ ಗುರುತಿಸಿಕೊಂಡವರು.

ಮನೋಹರ ಹೆಗ್ಡೆಯವರ ಬಾಳ ಸಂಗಾತಿ ಅನಿತಾ ಹೆಗ್ಡೆ, ಓರ್ವ ಸುಪುತ್ರ ಸುಯೋಗ.

ಅಲೆವೂರು-ಮಂಚಿ ಗ್ರಾಮಸ್ಥರಿಂದ, ಹಿರಿಯಡಕ-ಗುಡ್ಡೆಯಂಗಡಿ ಕಲಾಭಿಮಾನಿಗಳಿಂದ ಇವರಿಗೆ ಮಾನ-ಸಂಮಾನ ದೊರಕಿದೆ.



# ಮಹಮ್ಮದ್ ಗೌಸ್, ಕಾವ್ರಾಡಿ

*ಕಾವ್ರಾಡಿ, ಕಂಡ್ಲೂರು, ಅಂಚೆ : ನೆಲ್ಲಿಕಟ್ಟೆ*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9902176517*

ಗೋಕುಲಾಷ್ಟಮಿಗೂ ಇಮಾಂ ಸಾಬಿಗೂ ಸಂಬಂಧವೇ ಎಂಬುದಾಗಿ ಗಾದೆಕಟ್ಟಿ ಅಂತರ ಕಲ್ಪಿಸುವ ಮಂದಿಯೆಲ್ಲರೂ ಬೆರಳುಕಚ್ಚುವಂತೆ ಸಮಷ್ಟಿಕಲೆ ಯಕ್ಷಗಾನ ರಂಗಭೂಮಿಯನ್ನೇ ತನ್ನ ವ್ಯವಸಾಯರಂಗವಾಗಿಸಿಕೊಂಡು ಕಲಾಜೀವನ ನಡೆಸುವ ಬಡಗುತಿಟ್ಟಿನ ಅಪರೂಪದ ಮುಸ್ಲಿಂ ಬಂಧು-ಕಲಾವಿದ ಸಂಪನ್ನ ಮಹಮ್ಮದ್ ಗೌಸ್ ಕಾವ್ರಾಡಿ.

ಕುಂದಾಪುರ ತಾಲೂಕಿನ ಕಾವ್ರಾಡಿ ಎಂಬಲ್ಲಿ ಜನಿಸಿದ ಮಹಮ್ಮದ್ ಗೌಸ್ ಅವರು ಶೇಕ್ ಬುಡಾನ್ ಸಾಹೇಬ್-ಬೀಬಿ ಮಾಬಿಬಿ ದಂಪತಿಯ ಸುಪುತ್ರ. ಇವರಿಗೀಗ 48 ವರ್ಷ.

ಧರ್ಮಭಿನ್ನವಾದರೂ ಕಲಾಧರ್ಮದಲ್ಲಿ ಐಕಮತ್ಯವನ್ನು ಸಾಧಿಸಿ, ಸಾಮರಸ್ಯ ಕಂಡುಕೊಳ್ಳಬಹುದು ಎಂಬುದಕ್ಕೆ ಗೌಸ್ ಅವರು ಉಜ್ವಲ ನಿದರ್ಶನವಾಗಬಲ್ಲರು. ಸುತ್ತ ಮುತ್ತಲಿನ ಬಯಲಾಟಗಳ ಪ್ರೇರಣೆ, ಸಂಗೀತದ ಮೇಲಣ ತೀವ್ರ ಆಸಕ್ತಿ, ಹರಿಕಥೆ, ಭಜನೆ ಮೊದಲಾದ ಧಾರ್ಮಿಕ ವಿಧಿ-ವಿಧಾನಗಳ ಕಾರ್ಯಕ್ರಮಗಳ ಕುರಿತ ವಿಶೇಷ ಗೌರವ ಇವರನ್ನು ಯಕ್ಷಗಾನರಂಗಭೂಮಿಗೆ ಎಳೆದುತಂದಿತು. ಆ ಸಲುವಾಗಿಯೇ ವಿದ್ಯೆ ಏಳಕ್ಕೇ ಮುಗಿಯಿತು. ಹದಿಮೂರಕ್ಕೆ ಬಣ್ಣದ ಲೋಕಕ್ಕೆ ಜೀವ ಜಿಗಿಯಿತು.

ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಹಾಗೂ ವಂಡ್ಸೆ ಮುತ್ತ ಗಾಣಿಗರ ಗುರುತನದಲ್ಲಿ ಸಾಂಪ್ರದಾಯಿಕ ಯಕ್ಷಶಿಕ್ಷಣ ಪಡೆದು ರಂಗವುಂಚವೇರಿದ ಮಹಮ್ಮದ್ ಗೌಸ್ ರಂಜದಕಟ್ಟೆ, ಹಾಲಾಡಿ, ಸಿಗಂಧೂರು, ಬಗ್ವಾಡಿ, ಮಡಾಮಕ್ಕಿ... ಮೇಳಗಳಲ್ಲಿ ಸಾರ್ಥಕ 12 ವರ್ಷದ ಕಲಾಯಾತ್ರೆ ಪೂರೈಸಿ ವೃತ್ತಿರಂಗದ ಯಶಸ್ವೀ ಪಥದಲ್ಲಿ ಮುನ್ನಡೆಯುತ್ತಿದ್ದಾರೆ.

ಮಹಮ್ಮದ್ ಗೌಸ್ ಅವರು ಮಹಾಭಾರತ, ರಾಮಾಯಣ, ಭಾಗವತಾದಿ ಪುರಾಣ ಕಥಾಭಾಗಗಳನ್ನು ತಲಸ್ಪರ್ಶಿ ಅಧ್ಯಯನದಿಂದ ಪೌರಾಣಿಕ ಪ್ರಸಂಗಗಳಲ್ಲಿ ಬರುವ ನಾಯಕ, ಪ್ರತಿನಾಯಕ, ಖಳನಾಯಕ ಭೂಮಿಕೆಗಳಿಗೆ ತನ್ನದೇ ಸೃಜನಶೀಲತೆಯಿಂದ ವಿಶೇಷ ಆಯಾಮ ನೀಡಿದರು.

ಪ್ರತಿಭಾನ್ವಿತ ಕಲಾವಿದ ಗೌಸ್ ಅವರು ನಿರ್ವಹಿಸಿದ ಕೌರವ, ರಾವಣ, ದುಷ್ಟಬುದ್ಧಿ, ಕಂಸ, ಭಸ್ಮಾಸುರ, ಸಾಲ್ವ, ಶನಿ, ಜಯಂತ, ವಿಕ್ರಮಾದಿತ್ಯ, ಅರ್ಜುನ... ಮೊದಲಾದ ಪಾತ್ರಗಳು ಯಕ್ಷಗಾನೀಯ ಕಲಾವೌಲ್ಯದಲ್ಲಿ ಜೀವಂತಿಕೆಯನ್ನು ತಳೆದು ಕಲಾರಸಿಕರ ಹಾರ್ದಿಕ ಮೆಚ್ಚುಗೆ ಗಳಿಸುವಲ್ಲಿ ಗೆಲುವು ಕಂಡಿವೆ.

ಸಮರ್ಥ ವೇಷಧಾರಿಯಾದ ಮಹಮ್ಮದ್ ಗೌಸ್ ಅವರು ಉತ್ತಮ ಸಂಘಟಕ-ಸಂಚಾಲಕರಾಗಿಯೂ ಗುರುತಿಸಲ್ಪಟ್ಟವರು. ಮಳೆಗಾಲದ ಯಕ್ಷಗಾನ ತಿರುಗಾಟದಲ್ಲಿ ಇವರ ನೇತೃತ್ವದ ಕಲಾತಂಡಗಳು ಜಿಲ್ಲೆ-ಜಿಲ್ಲೆಗಳಲ್ಲಿ ಯಕ್ಷಗಾನ ಕಲೆಯ ನರುಗಂಪು ಸೂಸಿವೆ. ಅಪಾರ ಜನಮನ್ನಣೆ ಕಂಡಿವೆ.

ಸ್ನೇಹಶೀಲ ಕಲಾವಿದ ಮಹಮ್ಮದ್ ಗೌಸ್ ಅವರ ಸಹಧರ್ಮಿಣಿ ಬೀಬಿ ಆಯಿಷಾ. ನವೀದ್ ಹಾಗೂ ನೇಹಾ ಬೇಗಂ ಇವರ ಉಭಯ ಮಕ್ಕಳು.

ದಾವಣಗೆರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ ಉಡುಪಿ ಸೇರಿದಂತೆ ಅನೇಕಾನೇಕ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ. ಮುಂಬೈ, ಬೆಂಗಳೂರು, ಹೈದರಾಬಾದ್, ಮೈಸೂರು.... ಮೊದಲಾದ ಕಡೆಗಳಲ್ಲಿ ಮಾನ್ಯ ಗೌಸ್ ಅವರು ವಿಶೇಷ ಗೌರವ-ಸಂಮಾನ ಪಡೆದಿರುತ್ತಾರೆ.



## ಮಹಾಬಲೇಶ್ವರ ಭಟ್ಟ, ಇಟಗಿ

*258, 'ವೈಜಯಂತಿ', ಅಂಚೆ : ಇಟಗಿ,*
*ಸಿದ್ಧಾಪುರ ತಾಲೂಕು (ಉ.ಕ)*
*ದೂರವಾಣಿ : 08389-283316 / 9449454043*

ಸಮೃದ್ಧ ಕಲಾ ಪ್ರೌಢಿಮೆಯಿಂದ ಸ್ತ್ರೀವೇಷ ಹಾಗೂ ಪುಂಡುವೇಷಗಳನ್ನು ಸೊಗಸಾಗಿ ನಿರ್ವಹಿಸುವ ಅನುಭವಿ ವೇಷಧಾರಿ ಇಟಗಿ ಮಹಾಬಲೇಶ್ವರ ಭಟ್ಟ.

ಉತ್ತರ ಕನ್ನಡ ಸಿದ್ಧಾಪುರ ತಾಲೂಕಿನ ಇಟಗಿ ಎಂಬಲ್ಲಿ 1-6-1968ರಲ್ಲಿ ಜನಿಸಿದ ಇವರು ವೇದಮೂರ್ತಿ ರಾಮಕೃಷ್ಣ ಭಟ್ಟ-ಸರಸ್ವತಿ ಭಟ್ಟ ದಂಪತಿಯ ಸುಪುತ್ರ.

ಪಿ.ಯು.ಸಿ. ವ್ಯಾಸಂಗದ ಬಳಿಕ ತನ್ನ 23ನೇ ವಯಸ್ಸಿನಲ್ಲಿ ಬಣ್ಣದ ಬದುಕು ಕಂಡ ಇವರು ಕೋಳ್ಯೂರು ರಾಮಚಂದ್ರರಾವ್, ಕೆರೆಮನೆ ಶಂಭು ಹೆಗಡೆ ಹಾಗೂ ಹೆರಂಜಾಲು ವೆಂಕಟರಮಣ ಗಾಣಿಗರಿಂದ ಯಕ್ಷಕಲಾವಿದ್ಯೆಯನ್ನು ಸಂಪಾದಿಸಿದರು.

ಕಟೀಲು ಮೇಳ-1, ಮಂದಾರ್ತಿ-3, ಇಡಗುಂಜಿ-1, ಗುಂಡಬಾಳ-4, ಮಾರಣಕಟ್ಟೆ-2, ಪೂರ್ಣಚಂದ್ರ ಮೇಳ-5.... ಹೀಗೆ 16 ವರ್ಷಗಳ ಕಲಾತಿರುಗಾಟ ಇವರದ್ದಾಗಿದೆ.

ಸುಲಲಿತವಾದ ನೃತ್ಯಗಾರಿಕೆ, ಸುಸಂಸ್ಕೃತ ಮಾತುಗಾರಿಕೆ, ಸುಂದರ ವೇಷಗಾರಿಕೆ ಹಾಗೂ ಸಮರ್ಪಕ ರಂಗಧಾರ್ಮಿಕತೆಯಿಂದ ನಿರ್ವಹಣಾ ಭೂಮಿಕೆಗಳಿಗೆ ಪ್ರಾಣಕಳೆ ನೀಡುವ ಮಹಾಬಲೇಶ್ವರ ಭಟ್ಟರು ಸ್ತ್ರೀವೇಷಧಾರಿಯಾಗಿಯೂ, ಪುಂಡುವೇಷಧಾರಿಯಾಗಿಯೂ ರಂಗದಲ್ಲಿ ಸೈ ಅನ್ನಿಸಿಕೊಂಡವರು.

ಕೈಕೇಯಿ, ಸುಭದ್ರೆ, ಅಂಬೆ, ಶ್ರೀಕೃಷ್ಣ, ಶ್ರೀರಾಮ, ಅಭಿಮನ್ಯು, ದೇವಯಾನಿ, ವಿದುರ, ಅಶ್ವತ್ಥಾಮ, ಸೀತೆ, ದ್ರೌಪದಿ.... ಮೊದಲಾದ ಸ್ತ್ರೀ-ಪುರುಷ ಭೂಮಿಕೆಗಳು ಇವರಿಗೆ ಕಲಾಪ್ರಶಂಸೆ ದೊರಕಿಸಿಕೊಟ್ಟಿವೆ.

ಮಹಾಬಲೇಶ್ವರ ಭಟ್ಟರು ಹುಟ್ಟೂರು ಇಟಗಿಯಲ್ಲಿ ನಿರಂತರ ಯಕ್ಷಗಾನ ತರಬೇತಿಗಳನ್ನು ನಡೆಸಿ ಅನೇಕ ಶಿಷ್ಯರನ್ನು ಕಲಾವಿದರನ್ನಾಗಿ ರೂಪಿಸಿದ್ದಾರೆ.

ಶಿವಮೊಗ್ಗದ ವಸುಧಾ ವೈಶಾಲಿ ಜನ್ಮದಿನೋತ್ಸವ ಸಮಿತಿಯ ವತಿಯಿಂದ ಹಾಗೂ ಅನೇಕ ಕಡೆಗಳಲ್ಲಿ ಇವರಿಗೆ ಗೌರವ ಸಂಮಾನ ದೊರಕಿರುತ್ತದೆ.



## ಮಹೇಶ ಕುಮಾರ್, ಮಂದಾರ್ತಿ

*ಹೊನ್ನೆಕುಂಬ್ರಿ, ಹೆಗ್ಗುಂಜೆ ಗ್ರಾಮ, ಅಂಚೆ : ಮಂದಾರ್ತಿ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9008158076 / 0820-2568996*

ಬಿಡಗುತಿಟ್ಟು ಯಕ್ಷಗಾನ ರಂಗಭೂಮಿಯ ಸರ್ವಾಂಗೀಣ ಪ್ರತಿಭೆಯಾಗಿ ಸುಯೋಗ್ಯ ಹೆಸರು ಗಳಿಸಿದ ಯುವ ಕಲಾವಿದ ಮಹೇಶ ಕುಮಾರ್ ಮಂದಾರ್ತಿ.

ಉಡುಪಿ ತಾಲೂಕಿನ ಮಂದಾರ್ತಿಯಲ್ಲಿ ನರಸಿಂಹ ಮರಕಾಲ-ಕಾಳು ಮರಕಾಲ್ತಿ ದಂಪತಿಯ ಸುಪುತ್ರನಾಗಿ 2-2-1984ರಲ್ಲಿ ಜನಿಸಿದ ಮಹೇಶ್ ಹತ್ತನೆ ತರಗತಿಯ ವಿದ್ಯಾಭ್ಯಾಸದ ಬಳಿಕ ತನ್ನ 16ರ ಹರೆಯದಲ್ಲೇ ಕಲಾಬದುಕು ಕಂಡರು.

ಮಹೇಶ್ ಕುಮಾರ್ ಅವರಿಗೆ ಎಳವೆಯಲ್ಲಿಯೇ ಯಕ್ಷರಂಗಭೂಮಿಯ ಕುರಿತು ಅದಮ್ಯ ಆಸಕ್ತಿಯಿತ್ತು. ಇವರ ತಂದೆಯವರು ಈ ರಂಗದ ನೇಪಥ್ಯ ಕಲಾವಿದರಾದುದರಿಂದ ಇವರ ಬಾಲ್ಯದ ಕನಸು ಚಿಗುರಲು ಸುಲಭಸಾಧ್ಯವಾಯಿತು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ಲಕ್ಷ್ಮೀನಾರಾಯಣ ರಾವ್, ಬನ್ನಂಜೆ ಸಂಜೀವ ಸುವರ್ಣ, ಸತೀಶ ಕೆದ್ಲಾಯ, ದೇವದಾಸ ರಾವ್, ಕೃಷ್ಣಮೂರ್ತಿ ಭಟ್ ಅವರ ಗುರುತನದಲ್ಲಿ ಸಾಂಪ್ರದಾಯಿಕ ಯಕ್ಷ ಶಿಕ್ಷಣವನ್ನು ಪಡೆದ ಮಹೇಶ ಕುಮಾರ್ ಚಂಡೆ-ಮದ್ದಳೆ ವಾದನಕಲೆಯಲ್ಲಿ ವಿಶೇಷ ನೈಪುಣ್ಯವನ್ನು ಸಾಧಿಸಿ ಕಲಾಲೋಕದಲ್ಲಿ ನಿಚ್ಚಳ ಗೆಲುವು ಕಂಡರು.

ಮಂದಾರ್ತಿ, ಗೋಳಿಗರಡಿ... ಮೇಳಗಳಲ್ಲಿ ಇವರ ಕಲಾಯಾತ್ರೆ 11 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುತ್ತದೆ. ಪ್ರಸ್ತುತ ಮಹೇಶ್ ಮಂದಾರ್ತಿ ಮೇಳದ ಪ್ರಧಾನ ಚಂಡೆಗಾರರಾಗಿ ದುಡಿಯುತ್ತಿದ್ದಾರೆ.

ತಾಳಗಾರಿಕೆಯಲ್ಲಿ ದೃಢತೆ, ಲಯಗಾರಿಕೆಯಲ್ಲಿ ಖಚಿತತೆ, ಚಂಡೆ-ಮದ್ದಳೆ ನುಡಿಸಾಣಿಕೆಯಲ್ಲಿ ತೋರುವ ವಿಲಂಬ-ತೀವ್ರಗತಿಯ ಸೃಜನಾತ್ಮಕ ಕಲಾವಂತಿಕೆ ರಂಗ-ಪ್ರಸಂಗಕ್ಕೆ ರಂಗು ನೀಡುತ್ತದೆ.

ಸಮರ್ಥ ಚಂಡೆ-ಮದ್ದಳೆಗಾರರಾದ ಇವರು ಉತ್ತಮ ಕಂಠಶ್ರೀಯನ್ನು ಹೊಂದಿ ಪ್ರಸಂಗ ಪ್ರಭುತ್ವ ಸಾಧಿಸಿದ ಭಾಗವತರೂ ಹೌದು. ನರ್ತನ ಕಲೆಯೂ ಇವರಿಗೆ ಸಿದ್ಧಿಸಿದೆ.

ಹವ್ಯಾಸೀ ಸಂಘ-ಸಂಸ್ಥೆಗಳಿಗೆ ಯಕ್ಷಗಾನ ತರಬೇತಿದಾರರಾಗಿಯೂ ಇವರು ಭಾಗವಹಿಸಿದ್ದಾರೆ. ಶಾಲಾ ಮಕ್ಕಳಿಂದ ಅನೇಕ ಯಕ್ಷಪ್ರದರ್ಶನಗಳನ್ನು ಏರ್ಪಡಿಸಿ ಯಶಸ್ವಿಯಾಗಿದ್ದಾರೆ.

ಸಾಧನೆಯ ಬೆನ್ನಟ್ಟುವ ಛಲಗಾರನಾಗಿ ಕಲಾದೇವತೆಯನ್ನು ಒಲಿಸಿಕೊಂಡು ಯಕ್ಷಗಾನರಂಗದ ಉಜ್ವಲ ಪ್ರತಿಭೆಯಾಗಿ ಬೆಳಗುತ್ತಿರುವ ಮಹೇಶ್ ಕುಮಾರ್, ಮಂಗಳೂರು ಆಕಾಶವಾಣಿ ಕಲಾವಿದರೂ ಹೌದು.

ಯಕ್ಷಗಾನ ವೃತ್ತಿರಂಗದ ಬಿಡುವಿನ ವೇಳೆಯಲ್ಲಿ ಡೋಲಕ್ ವಾದನ ಕಲಾವಿದರಾಗಿ ಇವರು ಭಾಗವಹಿಸುತ್ತಾರೆ.

ಉಡುಪಿ, ಕುಂದಾಪುರ, 'ಮೊಗವೀರ ಕಲೋತ್ಸವ', ಹೈದರಾಬಾದ್ ಕರ್ನಾಟಕ ಕರಾವಳಿ ಮೈತ್ರಿ ಸಂಘ, ದುರ್ಗಾಪರಮೇಶ್ವರಿ ಪ್ರಾಥಮಿಕ ಶಾಲೆ, ಮಂದಾರ್ತಿ ಸೇರಿದಂತೆ ಹಲವು ಕಡೆಗಳಲ್ಲಿ ಇವರನ್ನು ಸಂಮಾನಿಸಲಾಗಿದೆ.



## ಮೂರ್ತಿಗೌಡ ಬಿ.ಎಚ್.

*ಬೆಟ್ಟಲಿಂಗಿ, ಅಂಚೆ : ಗುಡ್ಡೇಕೇರಿ,*
*ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9449142784*

ಪ್ರಖರ ಪ್ರತಿಭಾ ಪ್ರೌಢಿಮೆಯಲ್ಲಿ ಪೌರಾಣಿಕ ಪ್ರಸಂಗಗಳ ಪ್ರಧಾನ ಪಾತ್ರಗಳನ್ನು ಪೋಷಿಸಿ ಪ್ರೇಕ್ಷಕ ಬಾಂಧವರ ಪ್ರಶಂಸೆಗಳಿಸಿದ ಪ್ರಬುದ್ಧ ಕಲಾವಿದ ಬಿ.ಎಚ್. ಮೂರ್ತಿಗೌಡ.

ಮಲೆನಾಡಿನ ತೀರ್ಥಹಳ್ಳಿಯ ಬೆಟ್ಟಲಿಂಗಿ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಮೂರ್ತಿಗೌಡರು ಜೀವನ ರಂಗಸ್ಥಳದಲ್ಲಿ ಸುವರ್ಣ ವರ್ಷದಲ್ಲಿರುವ ಸಂಪನ್ನ ಯಕ್ಷನಟ.

ಇವರ ತಂದೆ ಹಿರಿಯಣ್ಣ ಗೌಡ, ತಾಯಿ ಸಾವಿತ್ರಮ್ಮ. 9ನೇ ತರಗತಿಗೆ ಓದಿಗೆ ಶರಣು ಹೊಡೆದು, 15ನೇ ವಯಸ್ಸಿನಲ್ಲಿ ಬಣ್ಣದ ಬದುಕಿಗೆ ಮುಖ ಮಾಡಿದ ಇವರಿಗೆ ಎಳವೆಯಲ್ಲಿಯೇ ಯಕ್ಷಕಲಾಸಕ್ತಿ ಅದಮ್ಯವಾಗಿತ್ತು.

ರಾಮ ಭಟ್ ಹಾಗೂ ಎಂ. ಎಂ. ಹೆಗಡೆಯವರ ಗುರುತನದಲ್ಲಿ ಯೋಗ್ಯ ಕಲಾವಿದನಾಗಿ ರೂಪುಗೊಂಡ ಗೌಡರು ವೃತ್ತಿಮೇಳಗಳಲ್ಲಿ ಎರಡನೇ ವೇಷಧಾರಿಯಾಗಿ ಗುರುತಿಸಿಕೊಂಡಿದ್ದಾರೆ.

ರಂಜದಕಟ್ಟೆ–1, ಕಿಗ್ಗ–2, ಬಗ್ವಾಡಿ–3, ಮಾರಣಕಟ್ಟೆ–13, ಹಾಲಾಡಿ–5, ಹೊಸಳ್ಳಿ–6.... ಮೊದಲಾದ ಬಡಗಿನ ಮೇಳಗಳಲ್ಲಿ ಸಾರ್ಥಕ ಮೂರು ದಶಕಗಳ ಕಲಾಯಾತ್ರೆಯಲ್ಲಿ ಅಪಾರ ಜನಮಾನ್ಯತೆ ಗಳಿಸಿದ್ದಾರೆ.

ಆಖ್ಯಾನಗಳ ನಾಯಕ, ಪ್ರತಿನಾಯಕ ಹಾಗೂ ಖಳನಾಯಕ ಭೂಮಿಕೆಗಳಿಗೆ ತನ್ನದೇ ವಿಶೇಷ ಕಲಾವಂತಿಕೆಯ ಮೆರುಗು ನೀಡುವ ಗೌಡರು ಸುಧನ್ವ, ಕೃಷ್ಣ, ಕಂಸ, ಸಾಲ್ವ, ಬಲರಾಮ, ಶುಂಭಾಸುರ, ರಕ್ತಬೀಜಾಸುರ... ಮೊದಲಾದ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಾರೆ. ಪ್ರಸ್ತುತ ಇವರು ಗುತ್ಯಮ್ಮ ಮೇಳದ ಪ್ರಧಾನ ಕಲಾವಿದರಾಗಿ ರಂಗವ್ಯವಸಾಯ ಮಾಡುತ್ತಿದ್ದಾರೆ.

ತನ್ನಲ್ಲಿರುವ ಕಲಾವಿದ್ಯೆಯನ್ನು ನಿಸ್ವಾರ್ಥವಾಗಿ ಬೋಧಿಸಿ ಹಲವಾರು ಶಿಷ್ಯರನ್ನು ಯಕ್ಷರಂಗಭೂಮಿಗೆ ನೀಡಿದ ಹಿರಿಮೆಯೂ ಗೌಡರಿಗಿದೆ. ವೇಷಧಾರಿಯಾದ ಇವರಿಗೆ ಚಂಡೆ–ಮದ್ದಳೆವಾದನದ ಪರಿಣತಿಯೂ ಇದೆ.

ಮೂರ್ತಿಗೌಡರ ಸಹಧರ್ಮಿಣಿ ಕಮಲಾಕ್ಷಿ. ಪ್ರಾರ್ಥನಾ ಹಾಗೂ ವಿದ್ಯಾರಾಣಿ ಇವರ ಉಭಯ ಹೆಣ್ಣುಮಕ್ಕಳು.

ತೀರ್ಥಹಳ್ಳಿ ಕನ್ನಡ ಸಾಹಿತ್ಯ ಪರಿಷತ್ತು, ಗುಡ್ಡೆಕೊಪ್ಪ ಶಾಲೆ ಹಾಗೂ ಚಂದನ ಟಿ.ವಿ. ವಾಹಿನಿಯ ವತಿಯಿಂದ ಇವರನ್ನು ಸಂಮಾನಿಸಲಾಗಿದೆ.



## ಮಂಜು ನಾಗಪ್ಪ ಗೌಡ

*ಮೇಲಿನ ಹಕ್ಕಲಕೇರಿ, ಅಂಚೆ : ಗುಣವಂತೆ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 08387-258071/9449886172*

ಬಡಾಬಡಗಿನ ಯಕ್ಷಪ್ರತಿಭೆಯಾಗಿ ಬಣ್ಣದ ವೇಷದ ಬೆಡಗು ಹಾಗೂ ಪೋಷಕ ಪಾತ್ರಗಳ ಸೊಬಗು ದರ್ಶಿಸುವ ಅನುಭವಿ ಕಲಾವಿದ ಮಂಜು ನಾಗಪ್ಪ ಗೌಡ.

ಹೊನ್ನಾವರ ತಾಲೂಕಿನ ಹಕ್ಕಲಕೇರಿ ಎಂಬಲ್ಲಿ 11-7-1960ರಲ್ಲಿ ಜನಿಸಿದ ಇವರು ನಾಗಪ್ಪ ಗೌಡ-ಸಣ್ಣಮ್ಮ ದಂಪತಿಯ ಸುಪುತ್ರ. ಎಳವೆಯಲ್ಲಿಯೇ ವಿಶೇಷ ಯಕ್ಷಕಲಾಸಕ್ತಿ ಹೊಂದಿದ್ದ ಮಂಜು ಗೌಡರು 5ನೇ ತರಗತಿಗೇ ಓದಿಗೆ ಶರಣು ಹೊಡೆದು ತನ್ನ 22ನೇ ವಯಸ್ಸಿನಲ್ಲಿ ಯಕ್ಷಗಾನ ಮಾಧ್ಯಮವನ್ನೇ ವೃತ್ತಿ ಬದುಕಾಗಿಸಿಕೊಂಡರು. ಭಾಗವತ ಹನುಮಂತಗೌಡ ಅವರ ಕಲಾಪ್ರೇರಣೆ-ಪ್ರೋತ್ಸಾಹವನ್ನು ಪಡೆದು ರಂಗಭೂಮಿಗೆ ಮುಖ ಮಾಡಿದ ಮಂಜುಗೌಡರು ಕೊಪ್ಪದ ಮಕ್ಕಿ ಈರಪ್ಪ ಭಾಗವತರಲ್ಲಿ ಸಮರ್ಪಕ ಯಕ್ಷ ಶಿಕ್ಷಣವನ್ನು ಪಡೆದು ರಂಗಮಂಚದಲ್ಲಿ ಹೆಜ್ಜೆಹಾಕಿದರು.

ಉತ್ತರಕನ್ನಡದ ಬಂಗಾರಮಕ್ಕಿ ಮೇಳದಲ್ಲಿ 10 ವರ್ಷ, ಗುಂಡಬಾಳ ಮೇಳದಲ್ಲಿ 2 ವರ್ಷ, ಇಡಗುಂಜಿ ಮೇಳದಲ್ಲಿ 1 ವರ್ಷ ಕಲಾವ್ಯವಸಾಯ ಮಾಡಿದ ಗೌಡರ ಒಟ್ಟು ರಂಗಕಾಯಕದ ಅವದಿ 13 ವರ್ಷ.

ಬಡಾಬಡಗಿನ ಪರಂಪರೆಯ ಬಣ್ಣದ ವೇಷಗಳನ್ನು ಗೌಡರು ಯಶಸ್ವಿಯಾಗಿ ನಿರ್ವಹಿಸುತ್ತಾರೆ. ಹಾಗೆಯೇ ಪ್ರಸಂಗದ ಪೋಷಕ ಪಾತ್ರಗಳನ್ನೂ ಸರ್ವಸಮರ್ಥವಾಗಿ ನಿರ್ವಹಿಸುತ್ತಾರೆ.

ಭೀಮ, ಲಂಕಿಣಿ, ರಕ್ತಕೇಶಿ, ಧ್ರುಮಿಳ ರಾಕ್ಷಸ, ಹಂಸಧ್ವಜ, ದೇವೇಂದ್ರ, ಬಲಿಚಕ್ರವರ್ತಿ, ಪ್ರತಾಪಸೇನ... ಮೊದಲಾದ ಪೌರಾಣಿಕ ಪಾತ್ರಗಳನ್ನು ಮಂಜುಗೌಡರು ಪ್ರಸಂಗ ನಿಷ್ಠವಾಗಿ ನಿರ್ವಹಿಸಿ ಪ್ರೇಕ್ಷಕರ ಮನ ಗೆದ್ದಿರುತ್ತಾರೆ.

ಉತ್ತಮ ವೇಷಧಾರಿಯಾದ ಮಂಜುಗೌಡರು ಯಕ್ಷಗಾನ ಕ್ಷೇತ್ರದ ಪರಿಣತ ಪ್ರಸಾಧನ ರಂಗ ಕರ್ಮಿಯೂ ಹೌದು. ಯಕ್ಷಗಾನ ವೇಷಗಳ ಮುಖವರ್ಣಿಕೆ, ವೇಷವಿನ್ಯಾಸ ಹಾಗೂ ವೇಷಭೂಷಣಗಳ ತಯಾರಿಕಾ ಕಾಯಕದಲ್ಲಿ ಗೌಡರು ನಿಷ್ಣಾತರಾಗಿ ಪ್ರಸಿದ್ಧಿ ಪಡೆದಿರುತ್ತಾರೆ.

ಮಂಜು ಗೌಡರ ಸಹಧರ್ಮಿಣಿ ದೇವಿ. ಪ್ರದೀಪ, ಪ್ರಸನ್ನ ಹಾಗೂ ಪ್ರಮೋದ ಇವರ ಮೂವರು ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಗೌಡರು ಗೌರವಿಸಲ್ಪಟ್ಟಿದ್ದಾರೆ.



## ಮಂಜುನಾಥ ಕೊಠಾರಿ

*'ರಾಮಚಂದ್ರ ನಿಲಯ', ನಾಯ್ಕನ ಕಟ್ಟೆ,*
*ಕೆರ್ಗಾಲ್, ಕುಂದಾಪುರ ತಾಲೂಕು*
*ದೂರವಾಣಿ : 9945666793*

ಬಡಗುತಿಟ್ಟಿನ ಯಕ್ಷಗಾನರಂಗದಲ್ಲಿ ಉನ್ನತ ಪ್ರತಿಭೆಯಾಗಿ ದಿಟ್ಟ ಹೆಜ್ಜೆಗಳನ್ನಿರಿಸಿ ಗಟ್ಟಿ ಸ್ಥಾನವನ್ನು ಪಡೆದ ಅನುಭವಿ ಯಕ್ಷನಟ ಮಂಜುನಾಥ ಕೊಠಾರಿ.

ಮುತ್ತ ಕೊಠಾರಿ-ಗಿರಿಜಾ ದಂಪತಿಯ ಸುಪುತ್ರರಾಗಿ ಕುಂದಾಪುರದ ನಾಯ್ಕನಕಟ್ಟೆ ಎಂಬಲ್ಲಿ 1969ರಲ್ಲಿ ಜನಿಸಿದ ಮಂಜುನಾಥ ಕೊಠಾರಿಯವರು ದ್ವಿತೀಯ ಪಿ.ಯು.ಸಿ. ವ್ಯಾಸಂಗದ ಬಳಿಕ ತನ್ನ 27ನೇ ವಯಸ್ಸಿನಲ್ಲಿ ಬಣ್ಣದ ಬದುಕು ಕಂಡವರು.

ಸುಪ್ರಸಿದ್ಧ ಕಲಾವಿದ ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಸಾಂಪ್ರದಾಯಿಕ ಯಕ್ಷಶಿಕ್ಷಣವನ್ನು ಪಡೆದ ಕೊಠಾರಿಯವರು ವೃತ್ತಿರಂಗದಲ್ಲಿ ಸಮರ್ಥ ಸ್ತ್ರೀವೇಷಧಾರಿ ಹಾಗೂ ಪುರುಷ ವೇಷಧಾರಿಯಾಗಿ ವಿಜೃಂಭಿಸಿದವರು.

ಕಳುವಾಡಿ, ಬಗ್ವಾಡಿ, ಗೋಳಿಗರಡಿ, ಸೌಕೂರು ಹಾಗೂ ಹಾಲಾಡಿ ಮೇಳಗಳಲ್ಲಿ 17 ವರ್ಷಗಳ ಕಲಾತಿರುಗಾಟವನ್ನು ನಡೆಸಿದ ಕೊಠಾರಿಯವರು ನಿರ್ವಹಣಾ ಭೂಮಿಕೆಗಳನ್ನು ರಂಗಸ್ಥಳದಲ್ಲಿ ಜೀವಂತವಾಗಿ ನಿರೂಪಿಸಿ ಗೆಲುವು ಕಂಡವರು.

ನಾಟ್ಯ, ಅಭಿನಯ, ವೇಷ, ಭಾಷೆ, ಭಾವ ಹಾಗೂ ರಂಗ ಪ್ರಸಂಗ ಮಾಹಿತಿಯಲ್ಲಿ ವಿಶೇಷ ಪ್ರತಿಭೆಯನ್ನು ಹೊಂದಿದ ಕೊಠಾರಿಯವರ ಅಂಬೆ, ಪ್ರಭಾವತಿ, ಮೀನಾಕ್ಷಿ, ದೇವಿ, ಶಶಿಪ್ರಭೆ, ಗುಣಸುಂದರಿ, ದಯಮಂತಿ ಮೊದಲಾದ ಸ್ತ್ರೀಪಾತ್ರಗಳು, ರಾವಣ, ಅರ್ಜುನ, ಕೀಚಕ, ಕಮಲಭೂಪ ಮೊದಲಾದ ಪುರುಷ ಪಾತ್ರಗಳು ಕಲಾಭಿಮಾನಿಗಳ ಹಾರ್ದಿಕ ಶ್ಲಾಘನೆಗೆ ಪಾತ್ರವಾಗಿವೆ.

ಪ್ರತಿಭೆ, ಪರಿಶ್ರಮಗಳಿಂದ ರಂಗಭೂಮಿಯ ಯೋಗ್ಯ ಕಲಾವಿದರಾಗಿ ರೂಪುಗೊಂಡ ಕೊಠಾರಿಯವರು ಗುರುವಾಗಿಯೂ ಅನೇಕ ಎಳೆಯ ಕಲಾವಿದರನ್ನು ಕಲಾರಂಗಕ್ಕೆ ನೀಡಿದ್ದಾರೆ.

ಕೊಠಾರಿಯವರ ಬಾಳಸಂಗಾತಿ ಲಲಿತಾ. ನಮಿತಾ ಹಾಗೂ ನಮ್ರತಾ ಇವರ ಉಭಯ ಹೆಣ್ಣುಮಕ್ಕಳು.

ಅನೇಕ ಸಂಘ-ಸಂಸ್ಥೆಗಳು ಇವರ ಶ್ರೀಮಂತ ಪ್ರತಿಭೆಗೆ ತಲೆಬಾಗಿ ಸಂಮಾನಿಸಿವೆ.



## ಮಂಜುನಾಥ ನಾವಡ, ಕಟ್ಕೆರೆ

*ಅಂಚೆ : ಕೋಟೇಶ್ವರ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9481763488*

ಸೃಜನಾತ್ಮಕ ನುಡಿತ-ಭಣಿತಗಳ ಮೂಲಕ ಚಂಡೆವಾದನದಲ್ಲಿ ಸುಸಮರ್ಥ ಪಟುವಾಗಿ ಗುರುತಿಸಿಕೊಂಡವರು ಮಂಜುನಾಥ ನಾವಡ.

ಕುಂದಾಪುರ ತಾಲೂಕು ಕಟ್ಕೆರೆ ಎಂಬಲ್ಲಿ ಮಹಾಬಲೇಶ್ವರ ನಾವಡ-ಸುಶೀಲಾ ದಂಪತಿಯ ಸುಪುತ್ರನಾಗಿ ಜನಿಸಿದ ಇವರಿಗೆ ಇದೀಗ 33ರ ಹರೆಯ.

7ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಮಂಜುನಾಥ ನಾವಡರು ತನ್ನ 20ರ ಹರೆಯದಲ್ಲೇ ಕಲಾಜೀವನಕ್ಕೆ ಮುಂದಾದವರು.

ಹಿರಿಯ ಚಂಡೆವಾದಕರಾದ ಮಣೂರು ಮಾಧವ ಹಾಗೂ ಮಂದಾರ್ತಿ ರಾಮಕೃಷ್ಣ ಅವರ ಗುರುತನದಲ್ಲಿ ಚಂಡೆವಾದನ ಕಲೆಯನ್ನು ಪರಿಪೂರ್ಣವಾಗಿ ಹಸ್ತಗತವಾಗಿಸಿಕೊಂಡು ವೃತ್ತಿರಂಗದಲ್ಲಿ ಸೈ ಅನ್ನಿಸಿಕೊಂಡ ನಾವಡರು, ತನ್ನ ಕಲಾಪ್ರತಿಭೆಯನ್ನು ಆಟ-ಕೂಟಗಳೆರಡರಲ್ಲೂ ಸಮರ್ಥವಾಗಿ ಪ್ರಕಟಿಸಿ ಗೆಲುವು ಕಂಡಿದ್ದಾರೆ.

ಹಾಲಾಡಿ, ಬಗ್ವಾಡಿ, ಸಾಲಿಗ್ರಾಮ, ಪೆರ್ಡೂರು ಮೇಳಗಳಲ್ಲಿ ಸುಮಾರು 15 ವರ್ಷಗಳ ಇವರ ಕಲಾತಿರುಗಾಟ ಯಶಸ್ಸಿನ ಹಾದಿಯಲ್ಲಿ ಮುಂದುವರಿದಿದೆ. ಪ್ರಸ್ತುತ ನಾವಡರು ಪೆರ್ಡೂರು ಮೇಳದ ಚಂಡೆವಾದಕರಾಗಿ ದುಡಿಯುತ್ತಿದ್ದಾರೆ.

ಭಾಗವತರ ಪದ್ಯ ಸಾಹಿತ್ಯ ಮುಕ್ಕಾಗದಂತೆ ಶ್ರವಣ ಮಂಜುಳ ವಿಧಾನದಲ್ಲಿ ಚಂಡೆ ವಾದನದಲ್ಲಿ ತೊಡಗುವ ಮಂಜುನಾಥ ನಾವಡರು ರಂಗಸ್ಥಳದಲ್ಲಿ ಸೃಷ್ಟಿಶೀಲ ಪೆಟ್ಟು-ಮಟ್ಟುಗಳಲ್ಲಿ ವೇಷಗಳನ್ನು ಕುಣಿಸಿ ಪ್ರೇಕ್ಷಕರ ಮನ ಮುಟ್ಟುವವರು.

ಪ್ರತಿಭಾನ್ವಿತ ಚಂಡೆಗಾರರಾದ ನಾವಡರು ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜು ಹಾಗೂ 'ಯಕ್ಷ ದೇಗುಲ' ಬೆಂಗಳೂರು ವತಿಯಿಂದ ಸಂಮಾನಿತರಾಗಿದ್ದಾರೆ.



# ಮಂಜುನಾಥ ಭಂಡಾರಿ, ಕರ್ಕಿ

*ಅಂಚೆ : ಕರ್ಕಿ, ಹೊನ್ನಾವರ ತಾಲೂಕು*
*'ಭೂಸ್ವರ್ಗಕೇರಿ' – ಮೊಕ್ಕಾಂ*
*(ಉ.ಕ) – 581341*

ಮದ್ದಳೆವಾದನದ ಪ್ರಬುದ್ಧ ಪ್ರತಿಭೆಯಾಗಿ ರಂಗಸ್ಥಳದಲ್ಲಿ ಹಿಮ್ಮೇಳ–ಮುಮ್ಮೇಳ ಪ್ರೇರಕ–ಪೂರಕವಾಗಿ ಯಕ್ಷನಾದ ವೈಭವ ತೋರುವ ಪ್ರತಿಭಾ ಸಂಪನ್ನ ಮಂಜುನಾಥ ಭಂಡಾರಿ ಕರ್ಕಿ.

ಹೊನ್ನಾವರ ತಾಲೂಕಿನ ಕರ್ಕಿ ಎಂಬಲ್ಲಿ 20–7–1966ರಲ್ಲಿ ಜನಿಸಿದ ಇವರು ಸುಪ್ರಸಿದ್ಧ ಮದ್ದಳೆಗಾರರಾದ ಕರ್ಕಿ ಪ್ರಭಾಕರ ಭಂಡಾರಿ–ಶಾರದಾ ದಂಪತಿಯ ಸುಪುತ್ರ.

7ನೇ ತರಗತಿಯ ವ್ಯಾಸಂಗದ ಬಳಿಕ ತನ್ನ 15ರ ಹರೆಯದಲ್ಲೇ ಕಲಾಬದುಕನ್ನು ಅಪ್ಪಿಕೊಂಡ ಮಂಜುನಾಥ ಭಂಢಾರಿಯವರು ಯಕ್ಷಲೋಕದ ಪರಿಣತ ಮದ್ದಳೆವಾದಕರಾಗಿ ಜನಪ್ರಿಯತೆ ಗಳಿಸಿದ್ದಾರೆ.

ಮಂಜುನಾಥ ಭಂಡಾರಿಯವರ ಅಜ್ಜ ಪಾಂಡುರಂಗ ಭಂಡಾರಿಯವರು, ತಂದೆಯವರಾದ ಪ್ರಭಾಕರ ಭಂಡಾರಿಯವರು ಹೆಸರಾಂತ ಮದ್ದಳೆಗಾರರಾಗಿ ವೃತ್ತಿರಂಗದಲ್ಲಿ ಮೆರೆದವರು. ಇವರ ದೊಡ್ಡ ತಂದೆ ಸತ್ಯನಾರಾಯಣ ಭಂಡಾರಿಯವರೂ ಚಂಡೆ ವಾದನದಲ್ಲಿ ಖ್ಯಾತನಾಮರು. ಹಾಗಾಗಿ ಬಲಿಷ್ಠ ಪರಂಪರೆ ಎಂಬುದು ಇವರ ಬೆನ್ನಹಿಂದೆಯೇ ಇರುವಾಗ ಇವರೊಬ್ಬ ಸಮರ್ಥ ಮದ್ದಳೆಗಾರರಾಗಿ ವಿಖ್ಯಾತಿ ಪಡೆದುದರಲ್ಲಿ ಅಚ್ಚರಿ ಕಾಣಿಸಲಾರದು. ತಂದೆಯವರಿಂದಲೇ ಮದ್ದಳೆ ವಾದನ ಕಲೆಯನ್ನು ಕಲಿತ ಮಂಜುನಾಥ ಭಂಡಾರಿಯವರು ಇಡಗುಂಜಿ, ಪೆರ್ಡೂರು, ಸಾಲಿಗ್ರಾಮ, ಹಾಲಾಡಿ..... ಮೊದಲಾದ ಮೇಳಗಳಲ್ಲಿ 20 ವರ್ಷಗಳ ಕಲಾಯಾತ್ರೆಯನ್ನು ಪೂರೈಸಿರುತ್ತಾರೆ.

ಸ್ಪಷ್ಟವಾದ ಹೊರಳಿಕೆ, ಸ್ಫುಟವಾದ ಬೆರಳುಗಾರಿಕೆ, ಸುಪ್ತ ನಾದವನ್ನು ನವಿರಾದ ಹಸ್ತತಾಡನದಲ್ಲಿ ಮುಕ್ತವಾಗಿಸುವ ವಾದನಾಪಟುತ್ವ, ಸಶಕ್ತ ಪುರಾಣ ಪ್ರಜ್ಞೆಯನ್ನು ಹೊಂದಿದ ಮದ್ದಳೆಗಾರ ಮಂಜುನಾಥ ಭಂಡಾರಿಯವರು ಸಾಂಪ್ರದಾಯಿಕ–ಸೃಜನಾತ್ಮಕ ಮಟ್ಟು–ಪೆಟ್ಟುಗಳನ್ನು ಬಲ್ಲ ನಿಷ್ಣಾತ ಮದ್ದಳೆವಾದಕರು.

ಪ್ರಸ್ತುತ ವೃತ್ತಿರಂಗದಿಂದ ಭಂಡಾರಿಯವರು ದೂರವಾಗಿದ್ದು ಹವ್ಯಾಸಿ ಸಂಘ–ಸಂಸ್ಥೆಗಳ ಮದ್ದಳೆಗಾರರಾಗಿ ಸಕ್ರಿಯರಾಗಿದ್ದಾರೆ. ಮೃಣ್ಮಯ ಗಣಪತಿ ಮೂರ್ತಿ ರಚನೆ ಹಾಗೂ ಮದ್ದಳೆಯ ನಿರ್ಮಾಣ ಇವರ ವೃತ್ತಿ–ಪ್ರವೃತ್ತಿಯಾಗಿದೆ.

ಮಂಜುನಾಥ ಭಂಡಾರಿಯವರ ಮನದನ್ನೆ ಮಂಗಳಾ. ಮಧುರಾ ಹಾಗೂ ಮಾನಸ ಇವರ ಉಭಯ ಪುತ್ರಿಯರು.

ಸ್ಥಳೀಯ ಸಂಘ–ಸಂಸ್ಥೆಗಳು ಭಂಡಾರಿಯವರ ಕಲಾವಂತಿಕೆಯನ್ನು ಗುರುತಿಸಿ ಗೌರವಿಸಿವೆ.



## ಮಂಜಯ್ಯ ಜೈನ್

*ಜನ್ನೆತ್‌ಗಲ್ಲಿ – 2ನೇ ತಿರುವು*
*ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9480020428*

ಪ್ರಬುದ್ಧ ಪ್ರತಿಭೆಯಾಗಿ ಬಡಗುತಿಟ್ಟಿನ ಚಂಡೆವಾದನದಲ್ಲಿ ಗರಿಷ್ಠಮಟ್ಟದ ಪರಿಣತಿಯಲ್ಲಿ ಪಳಗಿರುವ ಅನುಭವಿ ಚಂಡೆಗಾರ ಮಂಜಯ್ಯ ಜೈನ್.

ಇವರ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ಸಾಗರ. 4-3-1972ರಲ್ಲಿ ಓಂಕಾರಪ್ಪ ಜೈನ್-ನಾಗಮ್ಮ ದಂಪತಿಯ ಸುಪುತ್ರನಾಗಿ ಜನಿಸಿದ ಮಂಜಯ್ಯ ಜೈನ್ ಅವರು ಎಸ್.ಎಸ್.ಎಲ್.ಸಿ. ಯವರೆಗೆ ಅಕ್ಷರ ಶಿಕ್ಷಣವನ್ನು ಪಡೆದು ತನ್ನ 18ರ ಹರೆಯದಲ್ಲಿ ಕಲಾಬದುಕಿನೆಡೆಗೆ ಸಾಗಿದರು.

ಕೌಟುಂಬಿಕವಾಗಿ ಯಕ್ಷಗಾನದ ಯಾವುದೇ ಹಿನ್ನೆಲೆಯನ್ನೂ ಹೊಂದದ ಇವರು ಬಾಲ್ಯದಿಂದಲೇ ಮೈಮನ ಆವರಿಸಿದ್ದ ಅನ್ಯಾದೃಶ ಕಲಾಸಕ್ತಿಯನ್ನೇ ಕೇಂದ್ರವಾಗಿಸಿಕೊಂಡು ಕಾರ್ಗಲ್ ಚೂಡಾರತ್ನ ಜೈನ್ ಎಂಬವರಲ್ಲಿ ಚಂಡೆವಾದನದ ಯಕ್ಷ ಶಿಕ್ಷಣವನ್ನು ಪಡೆದರು.

ಸೌಕೂರು, ಗೋಳಿಗರಡಿ, ಬಗ್ವಾಡಿ, ಕಮಲಶಿಲೆ, ಸಿಗಂಧೂರು ಮೇಳಗಳಲ್ಲಿ ಸುಮಾರು 20 ವರ್ಷಗಳ ರಂಗಕೃಷಿ ಮಾಡಿದ ಜೈನ್, ಪ್ರಸ್ತುತ ಸಿಗಂಧೂರು ಮೇಳಗಳ ಪ್ರಧಾನ ಚಂಡೆವಾದಕರಾಗಿ ಕಲಾಸೇವೆಯಲ್ಲಿ ಮುಂದುವರಿಯುತ್ತಿದ್ದಾರೆ.

ಪೌರಾಣಿಕ ಪ್ರಸಂಗಗಳ ಕುರಿತು ಅನನ್ಯ ಕಲಾನುಭವವನ್ನು ಗಳಿಸಿದ ಇವರು ಸಾಂಪ್ರದಾಯಿಕ ಹಾಗೂ ಸೃಜನಾತ್ಮಕ ಪೆಟ್ಟು-ಮಟ್ಟುಗಳಲ್ಲಿ ಚಂಡೆವಾದನದ ಮಧುರ ನುಡಿಯನ್ನು ರಂಗನೆಲದಲ್ಲಿ ಹೊರ ಹೊಮ್ಮಿಸುತ್ತಾರೆ.

ಮಂಜಯ್ಯ ಜೈನ್ ಅವರು ಹೇಮಲತಾ ಎಂಬವರನ್ನು ಮದುವೆಯಾಗಿ ಪೂಜಾ, ಪ್ರಿಯಾ, ಪ್ರಜ್ವಲ್ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಈ ಅನುಭವಿ ಚಂಡೆಗಾರನ ಕಲಾವಂತಿಕೆಯನ್ನು ಮೆಚ್ಚಿ ಗುರುತಿಸಿ ಗೌರವಿಸಿವೆ.



## ರಘುರಾಮಗೌಡ ಕೆಂಜಿ

*ಅಂಚೆ : ಗೋಳಿಹೊಳೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9481921613*

ಯಕ್ಷಗಾನದ ಸಾಂಪ್ರದಾಯಿಕ ಇತಿ-ಮಿತಿಯಲ್ಲಿ ಪೌರಾಣಿಕ ಪ್ರಸಂಗಗಳ ವೈವಿಧ್ಯಮಯ ಪಾತ್ರಗಳನ್ನು ರಸಪೂರ್ಣವಾಗಿ ಪೋಷಿಸುವ ಅನುಭವಿ ಕಲಾವಿದ ಕೆಂಜಿ ರಘುರಾಮಗೌಡ.

ಕುಂದಾಪುರ ತಾಲೂಕಿನ ಗೋಳಿಹೊಳೆ ಎಂಬ ಪುಟ್ಟ ಹಳ್ಳಿಯಲ್ಲಿ 1960ರಲ್ಲಿ ಹುಟ್ಟಿದ ರಘುರಾಮ ಗೌಡರು ಮಂಜಯ್ಯ ಗೌಡ-ಬಚ್ಚಿ ದಂಪತಿಯ ಸುಪುತ್ರ.

7ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಇವರು 15ನೇ ವಯಸ್ಸಿನಲ್ಲಿ ಬಣ್ಣದ ಬದುಕು ಕಂಡವರು. ಇವರ ಅಣ್ಣ ನಾಗಯ್ಯಗೌಡರು ಯಕ್ಷಗಾನ ರಂಗದಲ್ಲಿ ವ್ಯವಸಾಯ ಮಾಡಿದವರು. ಹೀಗಾಗಿ ಕಲೆಯ ಸಂಪರ್ಕ-ಸಾಂಗತ್ಯ ಇವರಿಗೆ ಈ ಬಗೆಯಲ್ಲೂ ದೊರಕುವಂತಾಯಿತು. ಹಿರಿಯ ವೇಷಧಾರಿ ಕೊಪ್ಪಾಟೆ ಮುತ್ತನವರ ಶಿಷ್ಯನಾಗಿ ಯಕ್ಷಗಾನ ಕಲಾವಿದ್ಯೆಯನ್ನು ಸುಪುಷ್ಟವಾಗಿ ಆರ್ಜಿಸಿಕೊಂಡು ಮುತ್ತನವರ ಪ್ರೇರಣೆ-ಪ್ರೋತ್ಸಾಹದೊಂದಿಗೆ ಗೌಡರು ರಂಗಲೋಕವನ್ನು ಪ್ರವೇಶಿಸಿದ್ದರು.

ಮಾರಣಕಟ್ಟೆ, ಮಂದಾರ್ತಿ, ಕಮಲಶಿಲೆ, ಹಾಲಾಡಿ, ಸೌಕೂರು ಮೇಳಗಳಲ್ಲಿ ಸುದೀರ್ಘ 35 ವರ್ಷಗಳ ಕಲಾತಿರುಗಾಟ ನಡೆಸಿದ ಹಿರಿಮೆ ಗೌಡರದ್ದು. ಪ್ರಸ್ತುತ ಇವರು ಮಂದಾರ್ತಿ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಆರಂಭಿಕ ವೃತ್ತಿರಂಗಭೂಮಿಯಲ್ಲಿ ಕೆಂಜಿ ರಘುರಾಮ ಗೌಡರು ಉತ್ತಮ ಮೂರನೇ ವೇಷಧಾರಿಯಾಗಿ ಗುರುತಿಸಲ್ಪಟ್ಟವರು. ಆ ಕಾಲದಲ್ಲಿ ಇವರ ಬಬ್ರುವಾಹನ, ಅಭಿಮನ್ಯು, ವೃಷಸೇನ, ಪ್ರಸೇನ... ಮೊದಲಾದ ಪುಂಡುವೇಷಗಳು ರಂಗಸ್ಥಳದಲ್ಲಿ ಪರಂಪರೆಯ ಹುಡಿ ಹಾರಿಸಿ ಪ್ರೇಕ್ಷಕರ ಮನ ಸೂರೆಗೊಂಡಿದ್ದವು. ತದನಂತರ ರಾಜವೇಷಧಾರಿಯಾಗಿ, ಪುರುಷವೇಷಧಾರಿಯಾಗಿ, ಮುಂಡಾಸುವೇಷಧಾರಿಯಾಗಿ ಗೌಡರು ರಂಗ ನೆಲವನ್ನು ಪ್ರತಿಭಾಪೂರ್ಣತೆಯಲ್ಲಿ ಬೆಳಗಿಸಿ ಗೆಲುವು ಕಂಡಿದ್ದಾರೆ.

ನಿರರ್ಗಳ ವಚೋಪಾಂಡಿತ್ಯವನ್ನು ಹೊಂದಿದ ಗೌಡರು ಪಾತ್ರೋಚಿತ ನೃತ್ಯ, ಅಭಿನಯ ಹಾಗೂ ವೇಷಗಾರಿಕೆಯಲ್ಲಿ ಕಂಗೊಳಿಸುವವರು.

ಕೆಂಜಿ ರಘುರಾಮಗೌಡರು ಗಿರಿಜಾ ಎಂಬವರನ್ನು ವರಿಸಿ ಅಶೋಕ, ಯಶೋಧಾ, ಅನುಪಮಾ ಎಂಬ ಮೂವರು ಮಕ್ಕಳನ್ನು ಪಡೆದಿರುತ್ತಾರೆ.

ಅನೇಕ ಸಂಘ-ಸಂಸ್ಥೆಗಳ ಗೌರವಪೂರ್ಣ ಮಾನ-ಸಂಮಾನ ಇವರಿಗೆ ದೊರಕಿರುತ್ತದೆ.



## ರಮಾಕಾಂತ ಮಡಿವಾಳ

*ಅಂಚೆ : ಮೂರೂರು, ಕುಮಟಾ ತಾಲೂಕು*
*ಕಾರವಾರ ಜಿಲ್ಲೆ (ಉ.ಕ)*
*ದೂರವಾಣಿ : **9481143590***

ಲಲಿತ–ಕೋಮಲ ಒನಪು–ವೈಯ್ಯಾರ, ಲತಾ ಸದೃಶ ಬಾಗು–ಬಳುಕು, ಶೃತಿಮಧುರ ಸ್ವರಸಿರಿ, ಲಾವಣ್ಯಯುಕ್ತ ನೃತ್ಯ–ಅಭಿನಯ, ನೈರ್ಮಲ್ಯಪೂರ್ಣ ರಂಗ ವೈಖರಿ ಯಕ್ಷಗಾನದ ಸ್ತ್ರೀವೇಷಗಳಲ್ಲಿ ಕಲಾತ್ಮಕವಾಗಿ ದರ್ಶಿಸುವ ಯುವ ಕಲಾವಿದ ರಮಾಕಾಂತ ಮಡಿವಾಳ.

ಉತ್ತರ ಕನ್ನಡದ ಕುಮಟಾ–ಮೂರೂರು ಇವರ ಹುಟ್ಟೂರು. ಮಹಾದೇವ ಮಡಿವಾಳ–ಕಮಲಾ ದಂಪತಿಯ ಸುಪುತ್ರನಾಗಿ 25–1–1967ರಲ್ಲಿ ಜನಿಸಿದ ರಮಾಕಾಂತ ಅವರು ಹತ್ತನೆ ತರಗತಿಗೆ ವ್ಯಾಸಂಗ ಮುಗಿಸಿ ಹತ್ತೊಂಬತ್ತರ ಹರೆಯದಲ್ಲೇ ಯಕ್ಷಗಾನ ಪ್ರಪಂಚಕ್ಕೆ ಪಾದಾರ್ಪಣೆ ಮಾಡಿದರು.

ಇವರ ಕಲಾಜೀವನಕ್ಕೆ ಸ್ಫೂರ್ತಿಯ ಸೆಲೆಯಾದದ್ದು ವಿನೂತನ ಕಥಾಮೃತ 'ನಾಗಶ್ರೀ' ಹಾಗೂ ಭಾಗವತ ಕಾಳಿಂಗನಾವಡರ ಯಕ್ಷಗಾಯನ.

ಹಾಸ್ಯಗಾರ ಮೂರೂರು ರಮೇಶ್ ಭಂಡಾರಿ ಅವರ ಶಿಷ್ಯನಾಗಿ ಯಕ್ಷರಂಗ ಶಿಕ್ಷಣವನ್ನು ಪಡೆದು ವೃತ್ತಿರಂಗವನ್ನು ಪ್ರವೇಶಿಸಿದ ಇವರು ಹಂತ–ಹಂತವಾಗಿ ಬೆಳೆದು ಯೋಗ್ಯ ಸ್ತ್ರೀವೇಷಧಾರಿಯಾಗಿ ಜನಪ್ರಿಯತೆ ಕಂಡರು.

ಗುಂಡಬಾಳ–4, ಶಿರಸಿ–1, ಹಾಲಾಡಿ–2, ಸೌಕೂರು–2, ಮಂದಾರ್ತಿ–16... ಹೀಗೆ ಕಲಾವ್ಯವಸಾಯದಲ್ಲಿ ಸಂಭ್ರಮದ ಬೆಳ್ಳಿಹಬ್ಬವನ್ನು ಆಚರಿಸಿ ಮಂದಾರ್ತಿ ಮೇಳದ ಪ್ರಧಾನ ಸ್ತ್ರೀವೇಷಧಾರಿಯಾಗಿ ಮುಂದುವರಿದಿದ್ದಾರೆ.

ಶ್ರೀದೇವಿ, ಶಶಿಪ್ರಭೆ, ಪ್ರಭಾವತಿ, ಚಿತ್ರಾಂಗದೆ, ಸೀತೆ, ಸಾವಿತ್ರಿ, ಮಂಡೋದರಿ, ಕೈಕೇಯಿ, ಸುಭದ್ರೆ, ದ್ರೌಪದಿ.... ಮೊದಲಾದ ಪೌರಾಣಿಕ ಸ್ತ್ರೀಭೂಮಿಕೆಗಳಿಗೆ ತನ್ನ ಅನನ್ಯ ಕಲಾಪ್ರೌಢಿಮೆಯಿಂದ ಜೀವತುಂಬಿದ ಸಂತೃಪ್ತಿ ಇವರಿಗಿದೆ.

ಮೃಣ್ಮಯ ಗಣೇಶ ವಿಗ್ರಹ ರಚನೆ ಹಾಗೂ ಯಕ್ಷಗಾನ ಪ್ರಸಾಧನ ನಿರ್ಮಾಣ ಇವರ ಉಪವೃತ್ತಿಯಾಗಿದೆ.

ರಮಾಕಾಂತ ಮಡಿವಾಳರ ಬಾಳ ಸಂಗಾತಿ ಜಾನಕಿ. ಪ್ರಿಯಾ ಹಾಗೂ ನಾಗೇಂದ್ರ ಇವರ ಉಭಯ ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳಿಂದ ರಮಾಕಾಂತ ಅವರು ಸಂಮಾನ ಪಡೆದಿರುತ್ತಾರೆ.



## ರಮೇಶ ಕುಮಾರ್, ಕಾವ್ರಾಡಿ

*ಕಾವ್ರಾಡಿ ಗ್ರಾಮ, ಅಂಚೆ : ನೆಲ್ಲಿಕಟ್ಟೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9481142893*

ಲಲನೆಯರನ್ನೂ ನಾಚಿಸಬಲ್ಲ ಹೆಣ್ತನದ ಸಹಜ ಲಾವಣ್ಯದಿಂದ ಪ್ರತಿಭಾವಂತ ಸ್ತ್ರೀವೇಷಧಾರಿಯಾಗಿ ಗುರುತಿಸಿಕೊಂಡ ಯುವ ಕಲಾವಿದ ರಮೇಶ ಕುಮಾರ್, ಕಾವ್ರಾಡಿ.

ಕುಂದಾಪುರ ತಾಲೂಕಿನ ಕಾವ್ರಾಡಿ ಎಂಬಲ್ಲಿ 1983ರಲ್ಲಿ ಜನಿಸಿದ ರಮೇಶ್ ಅನಂತ ದೇವಾಡಿಗ–ಗಿರಿಜಾ ದಂಪತಿಯ ಸುಪುತ್ರ.

ಹಿರಿಯ ಅರ್ಥಧಾರಿ ಶಂಕರನಾರಾಯಣ ಸರ್ವೋತ್ತಮ ಶೇಟ್ ಅವರ ಪ್ರೇರಣೆಯೊಂದಿಗೆ ವೃತ್ತಿ ಬದುಕಿಗೆ ಮನ ಮಾಡಿದ ಇವರು ಎಂಟನೇ ತರಗತಿ ವಿದ್ಯಾಭ್ಯಾಸದ ಬಳಿಕ, ತನ್ನ 16ನೇ ವಯಸ್ಸಿನಲ್ಲೇ ಬಣ್ಣದ ಬದುಕಿಗೆ ಮುಖ ಮಾಡಿದವರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ಲಕ್ಷ್ಮೀನಾರಾಯಣ ರಾವ್, ಬನ್ನಂಜೆ ಸಂಜೀವ ಸುವರ್ಣ, ದೇವದಾಸ ರಾವ್, ಕೂಡ್ಲಿ, ಸತೀಶ ಕೆದ್ಲಾಯ ಮೊದಲಾದವರ ಗುರುತನದಲ್ಲಿ ಸಶಕ್ತ ಯಕ್ಷಶಿಕ್ಷಣವನ್ನು ಪಡೆದ ರಮೇಶ್ ವೃತ್ತಿಮೇಳಗಳಲ್ಲಿ ಸಮರ್ಥ ಸ್ತ್ರೀ ವೇಷಧಾರಿಯಾಗಿ ಜನಪ್ರಿಯತೆ ಕಂಡವರು.

ಮಾರಣಕಟ್ಟೆ, ಮಂದಾರ್ತಿ, ಗುತ್ಯಮ್ಮ, ಅಜ್ರಿ, ಅಮೃತೇಶ್ವರಿ... ಮೊದಲಾದ ಮೇಳಗಳಲ್ಲಿ 12 ವರ್ಷಗಳ ಇವರ ಕಲಾಸೇವೆ ಸಾರ್ಥಕ್ಯ ಕಂಡಿದೆ.

ಮೋಹಿನಿ, ಮೀನಾಕ್ಷಿ, ಆಲೋಲಿಕೆ, ಸುಭದ್ರೆ, ದ್ರೌಪದಿ, ಮದನಾಕ್ಷಿ, ಚಿತ್ರಾಕ್ಷಿ... ಮೊದಲಾದ ಪುರಾಣ ಭೂಮಿಕೆಗಳಲ್ಲಿ ಇವರ ಮನೋಜ್ಞ ಅಭಿನಯ ಕಲಾರಸಿಕರ ಮನ ಮೆಚ್ಚಿಸಿದೆ.

ಹೊಸ ಪ್ರಸಂಗಗಳಲ್ಲಂತೂ ಯುವ ಕಲಾವಿದ ರಮೇಶ್ ಕಾವ್ರಾಡಿ ಅವರ ಕಲಾಪ್ರತಿಭೆ ರಂಗಪ್ರೇಮಿಗಳಿಗೆ ತೀರಾ ಆಪ್ತವಾಗಿದೆ.

ಸ್ಥಳೀಯ ಸಂಘ–ಸಂಸ್ಥೆಗಳ ಗೌರವ–ಸಂಮಾನಕ್ಕೂ ಇವರು ಭಾಜನರಾಗಿದ್ದಾರೆ.



## ರಮೇಶ ಗಾಣಿಗ, ಹಾರಾಡಿ

*ಅಂಚೆ : ಸುರಗಿಕಟ್ಟೆ, ಮಂದಾರ್ತಿ,*
*ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 9449936657*

ಸಮನ್ವಯಶೀಲ ರಂಗಕಲೆ ಯಕ್ಷಗಾನದ ಬಡಗುತಿಟ್ಟಿನಲ್ಲಿ ಶಾಸ್ತ್ರೋಕ್ತ ಯಕ್ಷಶಿಕ್ಷಣದ ಪೆಂಪಿನಲ್ಲಿ ಸಮರ್ಥ ಸ್ತ್ರೀವೇಷಧಾರಿಯಾಗಿ ಕಲಾರಸಿಕರ ಅಭಿಮಾನಕ್ಕೆ ಪಾತ್ರರಾದವರು ಹಾರಾಡಿ ರಮೇಶ ಗಾಣಿಗ.

ಉಡುಪಿ ಜಿಲ್ಲೆಯ ಬಾರ್ಕೂರು ರಮೇಶ ಗಾಣಿಗರ ಹುಟ್ಟೂರು. ಇವರ ತಂದೆ ನರಸಿಂಹ ಗಾಣಿಗ, ತಾಯಿ ಪದ್ಮಾವತಿ. ಶ್ರೀಯುತರಿಗೆ ಈಗ 45 ವರ್ಷ ಪ್ರಾಯ.

ಕುಟುಂಬದಲ್ಲಿ ಎಳವೆಯಲ್ಲಿ ಹಿರಿಯರು ಹೇಳಿಕೊಂಡ ಯಕ್ಷಗಾನ 'ಗೆಜ್ಜೆಸೇವೆ' ಎಂಬ ಹರಕೆಯೇ ಇವರ ಕಲಾಬದುಕಿಗೆ ಪ್ರೇರಣಾಶಕ್ತಿ. ಹಿರಿಯ ಕಲಾವಿದ ಹಾರಾಡಿ ಸರ್ವೋತ್ತಮ ಗಾಣಿಗರೇ ಇವರಿಗೆ ರಂಗಲೋಕದ ಪ್ರೋತ್ಸಾಹಕ ವ್ಯಕ್ತಿ.

5ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ 16ರ ಹರೆಯದಲ್ಲೇ ಯಕ್ಷಪ್ರಪಂಚಕ್ಕೆ ಹೆಜ್ಜೆ ಹಾಕಿದ ಗಾಣಿಗರ ಕುಟುಂಬದಲ್ಲಿ ಸುರಗಿಕಟ್ಟೆ ಬಸವಗಾಣಿಗ ಹಾಗೂ ಬಿರ್ತಿ ಬಾಲಕೃಷ್ಣ ಅವರು ಅನುಭವಿ ಹಿರಿಯ ಮದ್ದಳೆಗಾರರಾಗಿದ್ದರು. ಹಾಗಾಗಿ ಕಲಾಸಾಂಗತ್ಯ ಇವರಿಗೆ ಪ್ರತ್ಯೇಕ ಸೃಷ್ಟಿಶೀಲವಾಗಿರದೆ, ಸಹಜವಾಗಿಯೇ ಒದಗುವಂತಾಯಿತು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಹೆರಂಜಾಲು ವೆಂಕಟರಮಣ ಗಾಣಿಗ, ಮಹಾಬಲ ಕಾರಂತ ಹಾಗೂ ನೀಲಾವರ ರಾಮಕೃಷ್ಣಯ್ಯನವರ ಶಿಷ್ಯನಾಗಿ ಸಮರ್ಪಕ ಕಲಾವಿದ್ಯೆಯನ್ನು ಮೈಗೂಡಿಸಿಕೊಂಡ ಗಾಣಿಗರು ಹೆಣ್ತನದ ಸಹಜ ಲಾಲಿತ್ಯ, ಪ್ರತಿಭಾ ಸಾಮರ್ಥ್ಯದೊಂದಿಗೆ ಬಹುಬೇಗನೆ ಸ್ತ್ರೀವೇಷಧಾರಿಯಾಗಿ ಜನಪ್ರಿಯರಾದರು.

ಮಂದಾರ್ತಿ, ಅಮೃತೇಶ್ವರಿ, ಮೂಲ್ಕಿ, ಶಿರಸಿ.... ಮೇಳಗಳಲ್ಲಿ ಸುಮಾರು 28 ವರುಷಗಳ ಕಲಾವ್ಯವಸಾಯವನ್ನು ಪೂರ್ಣಗೊಳಿಸಿದ ಇವರು ಪ್ರಸ್ತುತ ಮಂದಾರ್ತಿ ಮೇಳದ ಪ್ರಧಾನ ಸ್ತ್ರೀವೇಷಧಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶೃಂಗಾರ, ಗರತಿ ಹಾಗೂ ಕಸೆ ಸ್ತ್ರೀವೇಷಗಳಲ್ಲಿ ಇವರ ಕಲಾಪ್ರತಿಭೆ ಅಸಾಧಾರಣವಾಗಿ ಅಭಿವ್ಯಕ್ತವಾಗುತ್ತದೆ. ಮೀನಾಕ್ಷಿ, ಮದನಾಕ್ಷಿ, ಪ್ರಮೀಳೆ, ಅಂಬೆ, ಚಿತ್ರಾಂಗದೆ, ಶ್ರೀದೇವಿ, ಭ್ರಮರಕುಂತಳೆ, ಶಶಿಪ್ರಭೆ ಮೊದಲಾದ ಸ್ತ್ರೀವೇಷಗಳಲ್ಲಿ ಇವರ ಅಭಿನಯ ಮನೋಜ್ಞ. ಪ್ರಬುದ್ಧ ಸ್ತ್ರೀಪಾತ್ರಧಾರಿಯಾದ ಇವರು ಶ್ರೀಕೃಷ್ಣ, ಅಭಿಮನ್ಯು, ಬಬ್ರುವಾಹನ, ಮೊದಲಾದ ಪುರುಷವೇಷಗಳನ್ನು ನಿರ್ವಹಿಸಿ ಗೆಲುವು ಕಂಡಿದ್ದಾರೆ.

ಭಾಗವತಿಕೆ, ಚಂಡೆ, ಮದ್ದಳೆಯ ಪರಿಣತಿಯೂ ರಮೇಶ ಗಾಣಿಗರಿಗಿದೆ. ಲಾಲಿತ್ಯಪೂರ್ಣ ನೃತ್ಯಾಭಿನಯ, ಮಾಧುರ್ಯಮಯ ಕಂಠಸಿರಿ, ಪ್ರೌಢ ರಂಗಮಾಹಿತಿ, ನಿರರ್ಗಳ ವಚೋಸಂಪತ್ತಿನೊಂದಿಗೆ ನಿರ್ವಹಣಾ ಪಾತ್ರಗಳಿಗೆ ಜೀವತುಂಬುವ ಬಡಗಿನ ಭರವಸೆಯ ಸ್ತ್ರೀವೇಷಧಾರಿಯಾದ ರಮೇಶ ಗಾಣಿಗರು ಮಂದಾರ್ತಿ ದೇವಳದ ಯಕ್ಷಕಲಿಕಾ ಕೇಂದ್ರದ ನೃತ್ಯ ಶಿಕ್ಷಕರಾಗಿ ಅನೇಕ ಪ್ರತಿಭಾವಂತರನ್ನು ರಂಗಭೂಮಿಗೆ ನೀಡಿದ್ದಾರೆ.

ಪ್ರತಿಭಾವಂತ ಕಲಾವಿದ ರಮೇಶ ಗಾಣಿಗರ ಶ್ರೀಮತಿಯೇ ಶ್ರೀಮತಿ. ಸೌಮ್ಯ ಹಾಗೂ ಸೌಜನ್ಯ ಇವರ ಉಭಯ ಹೆಣ್ಮಕ್ಕಳು.

ಶ್ರೀಯುತರು ಅನೇಕ ಸಂಘ-ಸಂಸ್ಥೆಗಳಿಂದ ಗೌರವಪೂರ್ಣ ಮಾನ-ಸಂಮಾನವನ್ನು ಪಡೆದಿರುತ್ತಾರೆ.



## ರಮೇಶ ಭಂಡಾರಿ, ಮೂರೂರು

*ಅಂಚೆ : ಮೂರೂರು, ಕೆರೋಡಿ,*
*ಕುಮಟಾ ತಾಲೂಕು (ಉ.ಕ)*
*ದೂರವಾಣಿ : 9448611344*

ಸಮಕಾಲೀನ ಯಕ್ಷಗಾನ ರಂಗಭೂಮಿಯಲ್ಲಿ ಸಾಂಪ್ರದಾಯಿಕ ಕಲಾಸತ್ವಗಳನ್ನು ಅರಗಿಸಿಕೊಂಡು ಸೃಜನಾತ್ಮಕವಾದ ಸದಭಿರುಚಿಯ ಹಾಸ್ಯಗಾರಿಕೆಯಲ್ಲಿ ತನ್ನದೇ ಅಪಾರ ಪ್ರೇಕ್ಷಕವಲಯವನ್ನು ಸೃಷ್ಟಿಸಿಕೊಂಡು ವಿಖ್ಯಾತಿಯ ಶೃಂಗ ಸಾರ್ಥಕ್ಯವನ್ನು ಕಂಡ ಬಡಗುತಿಟ್ಟಿನ ಧೀಮಂತ ಹಾಸ್ಯಗಾರ ಮೂರೂರು ರಮೇಶ ಭಂಡಾರಿ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಮೂರೂರು ಎಂಬಲ್ಲಿ ಜಯರಾಮ ಭಂಡಾರಿ-ಸುಬ್ಬಿ ದಂಪತಿಗೆ 1967ರ ಜುಲೈ 21ರಂದು ಜ್ಯೇಷ್ಠ ಪುತ್ರನಾಗಿ ಜನಿಸಿದ ರಮೇಶ ಭಂಡಾರಿ ಅವರು 9ನೇ ತರಗತಿಯ ಬಳಿಕ ಯಕ್ಷಗಾನ ರಂಗಕ್ಕೆ ಹೆಜ್ಜೆ ಹಾಕಿದವರು.

ಇವರ ತಂದೆಯವರು ಹಾಗೂ ಚಿಕ್ಕಪ್ಪ ರಾಮದಾಸ ಭಂಡಾರಿ ಅವರು ಯಕ್ಷಗಾನ ಕಲಾವಿದರಾದುದರಿಂದ ಎಳೆವೆಯಲ್ಲಿಯೇ ಇಂತಹ ಕಲಾಸಾಂಗತ್ಯ ಭಂಡಾರಿ ಅವರಿಗೆ ಸುಲಭಸಾಧ್ಯವಾಯಿತು. ಯಕ್ಷಗಾನದ ಕುರಿತ ಪ್ರಾಥಮಿಕ ಶಿಕ್ಷಣ ಅವರೀರ್ವರಿಂದಲೇ ದೊರಕುವಂತಾಯಿತು. ಪ್ರಸಿದ್ಧ ವೇಷಧಾರಿ ಮೂರೂರು ದೇವರು ಹೆಗಡೆ ಅವರಿಂದ ಕಲಾತರಬೇತಿಯನ್ನು ಪಡೆದು ವೃತ್ತಿರಂಗವನ್ನು ಪ್ರವೇಶಿಸಿದ ರಮೇಶ ಭಂಡಾರಿ ಅವರು ಆರಂಭಿಕ ವೃತ್ತಿಕ್ಷೇತ್ರದಲ್ಲಿ ಪುಂಡುವೇಷಧಾರಿಯಾಗಿ ಜನಮನ ರಂಜಿಸಿದರು.

ಪೆರ್ಡೂರು ಮೇಳದಲ್ಲಿ ಕಲಾವ್ಯವಸಾಯ ಮಾಡುತ್ತಿದ್ದ ರಮೇಶ್ ಭಂಡಾರಿ ಸಣ್ಣ ಅಪಘಾತಕ್ಕೊಳಗಾಗಿ ಪುಂಡುವೇಷ ಮಾಡಲು ಅಸಾಧ್ಯ ಎಂಬುದನ್ನು ಮನಗಂಡು ಮೇಳದ ಯಜಮಾನ ವೈ. ಕರುಣಾಕರ ಶೆಟ್ಟರು ಹಾಗೂ ಭಾಗವತ ಸುಬ್ರಹ್ಮಣ್ಯ ಧಾರೇಶ್ವರರ ಸೂಚನೆಯಂತೆ ಹಾಸ್ಯಭೂಮಿಕೆಗಳಲ್ಲಿ ಕಾಣಿಸಿಕೊಂಡು ಆ ವಿಭಾಗದಲ್ಲೇ ಮುಂದುವರಿದು ಯಶಸ್ಸುಕಂಡರು.

ಹಾಸ್ಯಗಾರಿಕೆಗೆ ಬೇಕಾದ ಸರ್ವಗುಣಗಳನ್ನೂ ಸುಪುಷ್ಟವಾಗಿ ಮೈಗೂಡಿಸಿಕೊಂಡ ಅವರು ಸಾಲ್ಕೋಡು ಗಣಪತಿ ಭಟ್ ಹಾಗೂ ಕುಂಜಾಲು ರಾಮಕೃಷ್ಣ ಅವರಿಂದಲೂ ಹಾಸ್ಯ ಪಾತ್ರಗಳಿಗೆ ಬೇಕಾದ ವಿಶೇಷ ಅನುಭವವನ್ನು ಹೊಂದಿದ್ದಾರೆ. ಯಾರ ಅನುಕರಣೆಯೂ ಇಲ್ಲದೆ ಸ್ವಂತ ಶೈಲಿಯನ್ನು ರೂಢಿಸಿಕೊಂಡ ರಮೇಶ್ ಭಂಡಾರಿ ಅವರ ಹಾವ-ಭಾವ, ನೃತ್ಯ, ಅಭಿನಯ, ಹಾಸ್ಯ ಪಾತ್ರಕ್ಕೆ ಸಮುಚಿತವಾದದ್ದು. ಅವರ ವಾಗ್ವೈಖರಿ, ಪ್ರತ್ಯುತ್ಪನ್ನ ಮತಿತ್ವ ಗರಿಷ್ಠಮಟ್ಟದ್ದು.

ಮೂಲ್ಕಿ ಮೇಳದಲ್ಲಿ 2 ವರ್ಷ, ಶಿರಸಿ-ಪಂಚಲಿಂಗ ಮೇಳದಲ್ಲಿ 2 ವರ್ಷ ಕಲಾವ್ಯವಸಾಯ ಮಾಡಿದ ರಮೇಶ ಭಂಡಾರಿ ಸುದೀರ್ಘ 24 ವರ್ಷಗಳ ಕಾಲ ಪೆರ್ಡೂರು ಮೇಳದಲ್ಲಿ ದುಡಿದವರು. ಪ್ರಸ್ತುತ ಇವರು ಸಾಲಿಗ್ರಾಮ ಮೇಳದಲ್ಲಿ ದುಡಿಯುತ್ತಿದ್ದು ಇವರ ಒಟ್ಟು ರಂಗಕೃಷಿ 28 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಲವ-ಕುಶ ಹಾಗೂ ಭೂಕೈಲಾಸದ ಮಾಣಿ, ಬೇಡರಕಣ್ಣಪ್ಪದ ಕಾಶೀಮಾಣಿ-ಕೈಲಾಸ ಶಾಸ್ತ್ರೀ ಪಟ್ಟಾಭಿಷೇಕದ ಮಂಥರೆ, ಕಾಳಿದಾಸದ ಕಾಳ, ಬಬ್ರುವಾಹನ ದೂತ, ಶನಿಮಹಾತ್ಮೆಯ ನಂದಿ ಶೆಟ್ಟಿ, ಕುದುರೆ ವ್ಯಾಪಾರಿ, ಶಶಿಪ್ರಭೆಯ ಅಜ್ಜಿ, ಕೀಚಕವಧೆಯ ವಿಜಯ, 'ಚಂದ್ರಾವಳಿ' ಯ ಅತ್ತೆ ಮೊದಲಾದ ಭೂಮಿಕೆಗಳಲ್ಲಿ ರಮೇಶ್ ಭಂಡಾರಿಯವರ ಹಾಸ್ಯ ಪ್ರತಿಭೆ ಕಲಾರಸಿಕರನ್ನು ರಸಾವಿಷ್ಟರನ್ನಾಗಿಸಿದೆ.

ರಮೇಶ್ ಭಂಡಾರಿಯವರು ಅಂಬಿಕಾ ಎಂಬವರನ್ನು ವರಿಸಿ ಶ್ರೇಯಸ್ ಹಾಗೂ ಶರಣ್ಯ ಎಂಬ ಉಭಯ ಮಕ್ಕಳನ್ನು ಪಡೆದಿದ್ದಾರೆ.

ಪೌರಾಣಿಕ ರಂಗ ಮೌಲ್ಯ ಸಂಪನ್ನರಾಗಿ ಪಾತ್ರಗಳಿಗೆ ನವೀನ ಆಯಾಮ ನೀಡುವ ಪ್ರತಿಭಾನ್ವಿತ ರಮೇಶ ಭಂಡಾರಿ ಅವರನ್ನು ಬೆಂಗಳೂರು ಅಭಿಮಾನಿ ಬಳಗದವರು ಹಾಗೂ ಡಾ. ಕಟೀಲು ಲಕ್ಷ್ಮೀನಾರಾಯಣ ಅಸ್ರಣ್ಣರು ಗೌರವಪೂರ್ವಕವಾಗಿ ಸಂಮಾನಿಸಿದ್ದಾರೆ. ನೂರಕ್ಕೂ ಮಿಕ್ಕ ಸಂಮಾನಗಳು ಇವರಿಗೆ ಸಂದಿವೆ.



## ರಮೇಶ್ ವಂಡಾರು

*ಅಂಚೆ : ವಂಡಾರು, ವಂಡಾರು ಗ್ರಾಮ, ಉಡುಪಿ ತಾಲೂಕು*

ರಮಣೀಯ ವೇಷ ವೈಭವದಲ್ಲಿ ಲತಾ ಬಳುಕಿನ ಲಾಲಿತ್ಯದ ನೃತ್ಯವಿಲಾಸವನ್ನು ತೋರಿ, ನಿರರ್ಗಳ ವಚೋವಿಧಾನದಲ್ಲಿ ನಿರ್ವಹಣಾ ಪಾತ್ರಗಳನ್ನು ಪೋಷಿಸುವ ಬಡಗಿನ ಸ್ತ್ರೀವೇಷಧಾರಿ ರಮೇಶ್ ವಂಡಾರು.

ಉಡುಪಿ ತಾಲೂಕಿನ ವಂಡಾರು ಎಂಬ ಹಳ್ಳಿಯಲ್ಲಿ ಅಣ್ಣಪ್ಪ ಮಡಿವಾಳ-ತುಂಗಾ ಮಡಿವಾಳ್ತಿ ದಂಪತಿಯ ಸುಪುತ್ರನಾಗಿ 3-2-1970ರಲ್ಲಿ ಜನಿಸಿದ ರಮೇಶ್, ಹಿರಿಯ ಯಕ್ಷಗಾನ ವೇಷಧಾರಿ ವಂಡಾರು ಬಸವ ನ್ಯಾರಿಯವರ ಗುರುತನ ಹಾಗೂ ಕಲಾಪ್ರೇರಣೆ-ಪ್ರೋತ್ಸಾಹದೊಂದಿಗೆ ರಂಗಲೋಕ ಪ್ರವೇಶಿಸಿದವರು.

ನಾಕಕ್ಕೇ ಓದು ಸಾಕೆನಿಸಿಕೊಂಡ ರಮೇಶ್ ಹದಿನಾಲ್ಕರಲ್ಲೇ ವೃತ್ತಿ ಬದುಕಿಗೆ ಸನಿಹವಾದವರು.

ಸಾಲಿಗ್ರಾಮ(10), ಹಾಲಾಡಿ (2), ಮಾರಣಕಟ್ಟೆ (5), ಮಂದಾರ್ತಿ (7), ನಾಗರಕೊಡಿಗೆ (1).... ಮೊದಲಾದ ಮೇಳಗಳಲ್ಲಿ ರಮೇಶ್ ವಂಡಾರು ಅವರ ಕಲಾಯಾತ್ರೆ ರಜತ ಪರ್ವವನ್ನು ಕಂಡಿದೆ.

ಪೌರಾಣಿಕ ಪ್ರಸಂಗಗಳಲ್ಲಿ ಬರುವ ವೈವಿಧ್ಯಮಯ ಭಾವ, ಗುಣಭರಿತ ಸ್ತ್ರೀ ಪಾತ್ರಗಳೆಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸುವ ರಮೇಶ್ ವಂಡಾರು ಅವರಿಗೆ ಮೀನಾಕ್ಷಿ, ಸುಭದ್ರೆ, ರುಚಿಮತಿ, ತಾರಾವಳಿ, ಸುಧೇಷ್ಣೆ, ವಿಷಯೆ, ರುಕ್ಮಿಣಿ, ಸತ್ಯಭಾಮೆ... ಮೊದಲಾದ ಭೂಮಿಕೆಗಳು ಸಂತೃಪ್ತಿ ನೀಡಿವೆ.

ಸ್ತ್ರೀವೇಷಕ್ಕೆ ಸೂಕ್ತವಾದ ಮಾರ್ದವತೆ ಅವರ ಕಲಾವ್ಯಕ್ತಿತ್ವದಲ್ಲಿ ನಿಚ್ಚಳವಾಗಿ ಗುರುತಿಸಬಹುದಾಗಿದೆ. ಕೋಮಲ ಕಂಠಸಿರಿಯಂತೂ ಈ ಬಗೆಯ ಪಾತ್ರ ನಿರ್ವಹಣೆಗೆ ಬಲ್ಸೊಗಸಾಗುತ್ತದೆ.

ರಮೇಶ್ ವಂಡಾರು ಅವರ ಸಹಧರ್ಮಿಣಿ ಸರೋಜಾ. ಓರ್ವ ಸುಪುತ್ರಿ ಸಂಪ್ರೀತಾ.

ಶ್ರೀಯುತರು ಅನೇಕ ಸಂಘ-ಸಂಸ್ಥೆಗಳಿಂದ ಸಂಮಾನ, ಗೌರವವನ್ನೂ ಪಡೆದಿರುತ್ತಾರೆ.



## ರವಿಚಂದ್ರ, ನೀಲಾವರ

*ಮಧ್ಯಸ್ಥರ ಬೆಟ್ಟು, ಅಂಚೆ : ನೀಲಾವರ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9741488919*

ಹೆಣ್ತನದ ಸಹಜ ಸೌಂದರ್ಯವನ್ನು ಯಕ್ಷಗಾನ ಸ್ತ್ರೀಭೂಮಿಕೆಗಳಲ್ಲಿ ರಸಪೂರ್ಣವಾಗಿ ನಿರೂಪಿಸುವ ಯುವ ಪ್ರತಿಭಾವಂತ ಕಲಾವಿದ ರವಿಚಂದ್ರ ನೀಲಾವರ.

ಉಡುಪಿಜಿಲ್ಲೆಯ ನೀಲಾವರ ಇವರ ಜನ್ಮಸ್ಥಳ. ವೀರಭದ್ರನಾಯಕ್ ಹಾಗೂ ಸುಶೀಲಾ ಇವರ ತಂದೆ-ತಾಯಿ. ಪ್ರಸ್ತುತ ಇವರಿಗೆ 29 ವರ್ಷ.

ಎಳವೆಯಲ್ಲೇ ಯಕ್ಷಗಾನ ಕಲಾಸಕ್ತಿಯನ್ನು ಹೊಂದಿದ್ದ ರವಿಚಂದ್ರರಿಗೆ ಎಳ್ಳಂಪಳ್ಳಿ ಜಗನ್ನಾಥ ಆಚಾರ್ಯರೇ ಕಲಾಜೀವನಕ್ಕೆ ಪ್ರೇರಣೆಯಾದವರು.

ಹತ್ತನೇ ತರಗತಿಯ ವ್ಯಾಸಂಗದ ಬಳಿಕ ಯಕ್ಷಗಾನಲೋಕಕ್ಕೆ ಮನಸ್ವೀ ಅರ್ಪಣೆಗೊಂಡ ಇವರು ಉತ್ತಮ ಸ್ತ್ರೀವೇಷಧಾರಿಯಾಗಿ ಕಲಾರಸಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮಂದಾರ್ತಿ ಮೇಳವೊಂದರಲ್ಲೇ ಸುಮಾರು 15 ವರ್ಷಗಳ ಕಲಾವ್ಯವಸಾಯವನ್ನು ಪೂರೈಸಿ ಅಲ್ಲಿಯೇ ಮುಂದುವರಿಯುತ್ತಿದ್ದಾರೆ.

ಉತ್ತಮ ಭಾಷಾ ಪ್ರಜ್ಞೆ, ಲಾಲಿತ್ಯಪೂರ್ಣ ನೃತ್ಯಾಭಿನಯ, ಸುಂದರ ವೇಷಗಾರಿಕೆ ಇವರ ಕಲಾವ್ಯಕ್ತಿತ್ವದಲ್ಲಿ ಗುರುತಿಸಬಹುದಾಗುತ್ತದೆ.

ಆದಿಮಾಯೆ, ಮಾಲಿನಿ, ಸುಧೇಷ್ಣೆ, ಸತ್ಯಭಾಮೆ, ರುಕ್ಮಿಣಿ, ಮದನಾಕ್ಷಿ... ಮೊದಲಾದ ಸ್ತ್ರೀಪಾತ್ರಗಳನ್ನು ಯಶಸ್ವಿ ನಿರ್ವಹಣೆಯಿಂದ ಪೋಷಿಸಿದವರು.

ಸ್ತ್ರೀವೇಷದ ಜತೆಜತೆಗೆ ಪ್ರಸಂಗದ ಕೆಲವೊಂದು ಪುರುಷವೇಷಗಳನ್ನೂ ರವಿಚಂದ್ರ ನಿರ್ವಹಿಸುತ್ತಾರೆ. ಶ್ರೀಕೃಷ್ಣ, ನಾರದ, ಶ್ರೀರಾಮ ಮೊದಲಾದ ಅವರ ಗಂಡುಪಾತ್ರಗಳೂ ಸೈ ಅನ್ನಿಸಿಕೊಂಡಿವೆ.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಕೆಲವು ಸಂಮಾನಗಳನ್ನು ಇವರು ಪಡೆದಿರುತ್ತಾರೆ.



## ರವೀಂದ್ರ ಆಚಾರ್, ಕಾಡೂರು

*ಅಂಚೆ : ಕಾಡೂರು, ಕಾಡೂರು ಗ್ರಾಮ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 8105877253*

ಹಿಮ್ಮೇಳದ ಗಾನ ಹಾಗೂ ಮದ್ದಳೆವಾದನದೊಂದಿಗೆ ಸಾಮರಸ್ಯವನ್ನು ಸಾಧಿಸಿ ಮುಮ್ಮೇಳದ ರಸಭಾವಗಳ ಉತ್ಕೃಷ್ಟ ಅಭಿವ್ಯಕ್ತಿಗೆ ಮಧುರ ನುಡಿಸಾಣಿಕೆಯ ಹದವಾದ ಮೆರುಗು ನೀಡುವ ಪ್ರತಿಭಾನ್ವಿತ ಯುವ ಚಂಡೆವಾದಕ ರವೀಂದ್ರ ಆಚಾರ್ಯ, ಕಾಡೂರು.

ಉಡುಪಿ ತಾಲೂಕಿನ ಕಾಡೂರು ಎಂಬಲ್ಲಿ 1980ರಲ್ಲಿ ಚಂದ್ರಯ್ಯ ಆಚಾರ್-ಗಿರಿಜಾ ದಂಪತಿಯ ಸುಪುತ್ರರಾಗಿ ಜನಿಸಿದ ರವೀಂದ್ರ ಅವರು 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿ ತನ್ನ 10ರ ಕಿರು ಹರೆಯದಲ್ಲೇ ಯಕ್ಷಗಾನ ಲೋಕಕ್ಕೆ ಹೆಜ್ಜೆ ಹಾಕಿದರು.

ಚಿಕ್ಕಂದಿನಿಂದಲೇ ಯಕ್ಷಗಾನ ಕಲೆಯ ಕುರಿತು ವಿಶೇಷ ಒಲವು ಹೊಂದಿದ ರವೀಂದ್ರ ಆಚಾರ್ ಹಿರಿಯ ಚಂಡೆಗಾರ ಮಂದಾರ್ತಿ ರಾಮಕೃಷ್ಣ ಅವರ ಶಿಷ್ಯನಾಗಿ ಚಂಡೆವಾದನ ವಿದ್ಯೆಯನ್ನು ಸುಪುಷ್ಟವಾಗಿ ಸಂಪಾದಿಸಿದರು.

ಮಂದಾರ್ತಿ, ಅಮೃತೇಶ್ವರಿ, ಸೌಕೂರು, ಹಾಲಾಡಿ, ಪೆರ್ಡೂರು... ಮೊದಲಾದ ಮೇಳಗಳಲ್ಲಿ ಸುಮಾರು 23 ವರ್ಷ ಕಲಾಕೃಷಿ ನಡೆಸಿದ ಇವರು ಪ್ರಸ್ತುತ ಅಮೃತೇಶ್ವರಿ ಮೇಳದ ಪ್ರಧಾನ ಚಂಡೆವಾದಕರಾಗಿ ಕಲಾಸೇವೆ ಸಲ್ಲಿಸುತ್ತಿದ್ದಾರೆ.

ಭಾಗವತರ ಪದ್ಯಸಾಹಿತ್ಯದ ಸೊಲ್ಲು ಸುಸ್ಪಷ್ಟವಾಗಿ ಕೇಳಿಸುವಂತೆ ನವಿರಾಗಿ ಚಂಡೆಯನ್ನು ನುಡಿಸುವ ರವೀಂದ್ರ ಆಚಾರ್ ರಂಗಸ್ಥಳದ ವೇಷಧಾರಿಗಳ ನಟನಾ ವೈಖರಿಗೆ ಹುರುಪು ಹುಮ್ಮಸ್ಸು ಕಲ್ಪಿಸುವ ಚಂಡೆಗಾರಿಕೆಯಲ್ಲಿ ಕೌಶಲ ಸಾಧಿಸಿದವರು.

ಸಮರ್ಥ ಚಂಡೆವಾದಕರಾದ ಇವರು ಮದ್ದಳೆಗಾರರೂ ಆಗಿದ್ದಾರೆ. ಉತ್ತಮ ಕಂಠಶ್ರೀಯನ್ನು ಹೊಂದಿದ ಆಚಾರ್ ಕೆಲವೊಮ್ಮೆ ವೃತ್ತಿರಂಗದಲ್ಲಿ ಸಹಭಾಗವತಿಕೆಯನ್ನೂ ಮಾಡುತ್ತಾರೆ. ಇವರಿಗೆ ನೃತ್ಯಗಾರಿಕೆಯ ಪರಿಣತಿಯೂ ಇದೆ.

ತನ್ನಲ್ಲಿರುವ ಕಲಾವಿದ್ಯೆಯನ್ನು ಧಾರೆಯೆರೆದು ಅನೇಕ ಪ್ರತಿಭಾವಂತ ಶಿಷ್ಯರನ್ನು ರೂಪಿಸಿದ ಹೆಗ್ಗಳಿಕೆಯೂ ಇವರಿಗಿದೆ.

ಸ್ಥಳೀಯ ಸಂಘ-ಸಂಸ್ಥೆಗಳ ಸಂಮಾನಗಳು ಇವರಿಗೆ ಸಂದಿವೆ.



## ರವೀಂದ್ರ ಪೂಜಾರಿ, ಸೆಳ್ಕೋಡು

*ಜರ್ಕಲ್ ಗ್ರಾಮ ಹಾಗೂ ಅಂಚೆ, ಗೋಳಿಗುಡ್ಡೆಮನೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08254–311683 / 9663437674*

ಕ್ರಿಯಾಶೀಲ ಕಲಾಕಸುವು ಮೈತುಂಬಿಕೊಂಡು ಪುರಾಣ ಕಥಾನಕಗಳ ಮೂರನೇ ವೇಷ ಹಾಗೂ ವೈವಿಧ್ಯಮಯ ವೇಷಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಯುವ ಕಲಾವಿದ ರವೀಂದ್ರ ಪೂಜಾರಿ, ಸೆಳ್ಕೋಡು.

ಕುಂದಾಪುರ ತಾಲೂಕಿನ ಸೆಳ್ಕೋಡು–ಗೋಳಿಗುಡ್ಡೆ ಎಂಬಲ್ಲಿ 5–1–1980ರಲ್ಲಿ ಜನಿಸಿದ ರವೀಂದ್ರ ಅವರು ಕುಷ್ಟ ಪೂಜಾರಿ ಸರ್ವಶ್ರೀ ದಂಪತಿಯ ಸುಪುತ್ರ.

6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ 16ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ಇವರು ಹಿರಿಯ ಭಾಗವತರಾದ ವಿಶ್ವೇಶ್ವರ ಸೋಮಯಾಜಿಯವರ ಗುರುತನವನ್ನೂ, ಮಾರ್ಗದರ್ಶನವನ್ನೂ ಪಡೆದು ರಂಗವೇರಿದವರು.

ಬಗ್ವಾಡಿ, ಪೆರ್ಡೂರು, ಸಾಲಿಗ್ರಾಮ ಹಾಗೂ ಶಿರಸಿ ಮೇಳಗಳಲ್ಲಿ ಕಲಾವ್ಯವಸಾಯ ನಡೆಸಿದ ರವೀಂದ್ರ ಪೂಜಾರಿ 14 ವರ್ಷಗಳ ರಂಗವಸಂತಗಳಲ್ಲಿ ಸಾರ್ಥಕ ಕೀರ್ತಿ ಸಂಪಾದಿಸಿದ್ದಾರೆ.

ಕರ್ಣ, ಅಭಿಮನ್ಯು, ಶ್ರೀಕೃಷ್ಣ, ಲವಕುಶ, ಸುದರ್ಶನ, ಅರ್ಜುನ, ಪ್ರಹ್ಲಾದ, ಭಸ್ಮಾಸುರ, ಅಯ್ಯಪ್ಪ, ಚಂದ್ರಹಾಸ, ದೇವೇಂದ್ರ, ನರಸಿಂಹ... ಮೊದಲಾದ ಪಾತ್ರಗಳನ್ನು ತನ್ನದೇ ಕಲಾಪ್ರತಿಭೆಯಲ್ಲಿ ಪೋಷಿಸಿ ಕಲಾರಸಿಕರ ಮನಮೆಚ್ಚಿಸಿದ್ದಾರೆ.

ಖಳ ಸ್ವಭಾವಪೂರ್ಣ ಪೌರಾಣಿಕ ಪಾತ್ರಗಳ ನಿರ್ವಹಣೆಯಲ್ಲಿ ರವೀಂದ್ರ ಅವರು ಅತೀವ ಕಲಾನಂದವನ್ನು ಹೊಂದುತ್ತಾರೆ.

ಇವರ ನೃತ್ಯ, ಅಭಿನಯ, ಮಾತುಗಾರಿಕೆ ಹಾಗೂ ವೇಷಗಾರಿಕೆ ಪ್ರಗತಿಪೂರ್ಣವಾಗಿದೆ.

ಮೂಕಾಂಬೆ ಎಂಬುವರನ್ನು ವರಿಸಿದ ಇವರು ಆಶ್ರಿತಾ ಹಾಗೂ ಆದರ್ಶ ಎಂಬ ಮಕ್ಕಳೀರ್ವರನ್ನು ಪಡೆದಿದ್ದಾರೆ.

ಕಲೆಯನ್ನೇ ಬಾಳಿನ ಬಂಡವಾಳವಾಗಿಸಿಕೊಂಡ ರವೀಂದ್ರ ಪೂಜಾರಿ ಸ್ಥಳೀಯ ಸಂಘ–ಸಂಸ್ಥೆಗಳಿಂದ ಸಂಮಾನ ಪಡೆದಿರುತ್ತಾರೆ.



# ರವೀಂದ್ರ ಶೆಟ್ಟಿ, ವಾಟಾರು

*ಕಮಲಶಿಲೆ, ಯಡಮೊಗೆ ಗ್ರಾಮ,*
*ಅಂಚೆ : ಯಡಮೊಗೆ, ಕುಂದಾಪುರ ತಾಲೂಕು*
*ದೂರವಾಣಿ : 9663531024*

ಸೊಗಸಾದ ವೇಷವಿಧಾನ, ಸುಸಂಸ್ಕೃತ ನೃತ್ಯಾಭಿನಯ ವಿಲಾಸ, ಸಮರ್ಪಕ ರಂಗಪ್ರಜ್ಞೆ, ಸಶಕ್ತ ಪೌರಾಣಿಕ ಮಾಹಿತಿಯಲ್ಲಿ ಪುರುಷವೇಷ ಹಾಗೂ ಪುಂಡುವೇಷಗಳನ್ನು ಸುಪುಷ್ಟ ಪ್ರತಿಭೆಯಲ್ಲಿ ಪ್ರದರ್ಶಿಸುವ ಯುವ ಕಲಾವಿದ ರವೀಂದ್ರ ಶೆಟ್ಟಿ ವಾಟಾರು.

ಕುಂದಾಪುರ ತಾಲೂಕಿನ ಕಮಲಶಿಲೆ ಸನಿಹದ ವಾಟಾರು ಎಂಬ ಹಳ್ಳಿಯಲ್ಲಿ 1975ರಲ್ಲಿ ಜನಿಸಿದ ರವೀಂದ್ರ ಶೆಟ್ಟಿ ಅವರು ಶಿವರಾಮ ಶೆಟ್ಟಿ-ಜಲಜ ಶೆಡ್ತಿ ದಂಪತಿಯ ಸುಪುತ್ರ.

ಬಾಲ್ಯದಿಂದಲೇ ಅದಮ್ಯ ಯಕ್ಷಕಲಾಸಕ್ತಿ ಮೈಗೂಡಿಸಿಕೊಂಡಿದ್ದ ಇವರು ನಾಲ್ಕನೇ ತರಗತಿಗೆ ಓದಿಗೆ ವಿದಾಯ ಹೇಳಿ ಸ್ವಯಂ ಪ್ರೇರಣೆಯಿಂದ ತನ್ನ 17ನೇ ವಯಸ್ಸಿಗೆ ವೃತ್ತಿರಂಗವನ್ನು ಪ್ರವೇಶಿಸಿದರು.

ಹಿರಿಯ ಕಲಾವಿದ ಕೊಕ್ಕಾಡಿ ರಾಮ ದೇವಾಡಿಗರಲ್ಲಿ ಯಕ್ಷಗಾನ ರಂಗಶಿಕ್ಷಣವನ್ನು ಪಡೆದ ಇವರು ವೃತ್ತಿಮೇಳಗಳಲ್ಲಿ ಸುಯೋಗ್ಯ ವೇಷಧಾರಿಯಾಗಿ ರೂಪುಗೊಂಡರು.

ಕಮಲಶಿಲೆ-3, ಮಡಾಮಕ್ಕಿ-5, ಮಂದಾರ್ತಿ-5, ಮಾರಣಕಟ್ಟೆ-4... ಮೇಳಗಳಲ್ಲಿ 17 ವರ್ಷಗಳ ಸಂಪನ್ನ ಕಲಾಯಾತ್ರೆ ಕಂಡ ಶೆಟ್ಟರು ಪ್ರಸ್ತುತ ಮಾರಣಕಟ್ಟೆ ಮೇಳದಲ್ಲಿ ದುಡಿಯುತ್ತಿದ್ದಾರೆ.

ಇವರು ನಿರ್ವಹಿಸಿದ ಅಭಿಮನ್ಯು, ಧರ್ಮಾಂಗದ, ಬಬ್ರುವಾಹನ, ಸುಧನ್ವ, ರುದ್ರಕೋಪ, ಚಂದ್ರಹಾಸ, ಶ್ರೀಕೃಷ್ಣ ಮೊದಲಾದ ಭೂಮಿಕೆಗಳು ಕಲಾರಸಿಕರ ಹಾರ್ದಿಕ ಮೆಚ್ಚುಗೆಗಳಿಸುವಲ್ಲಿ ಯಶಸ್ವಿಯಾಗಿವೆ.

ರಂಗದಲ್ಲಿರುವಷ್ಟು ಹೊತ್ತು ದಣಿವಿಲ್ಲದ ದುಡಿಮೆಯಲ್ಲಿ ಪಾತ್ರಗಳನ್ನು ಪೋಷಿಸುವ ಕಲಾವಂತಿಕೆಯನ್ನು ಹೊಂದಿದ ರವೀಂದ್ರ ಶೆಟ್ಟರು ಸೃಜನಾತ್ಮಕ ನಾಟ್ಯವೈವಿಧ್ಯದಲ್ಲಿ ರಂಗಭೂಮಿಯಲ್ಲಿ ವಿಜೃಂಭಿಸುವವರು. ಲಯಪೂರ್ಣವಾದ ಇವರ ಚುರುಕಿನ ನೃತ್ಯಗತಿ ಮೂರನೇ ವೇಷಗಳನ್ನು ಪ್ರಸಂಗಗಳಲ್ಲಿ ಯಾವತ್ತೂ ಗೆಲ್ಲಿಸಿ ರಂಗನ್ಯಾಯ ಕಲ್ಪಿಸಿಕೊಟ್ಟಿದೆ.

ರವೀಂದ್ರ ಶೆಟ್ಟಿ ವಾಟಾರು ಅವರ ಧರ್ಮಪತ್ನಿ ಅಂಬಿಕಾ ಶೆಟ್ಟಿ, ಓರ್ವ ಸುಪುತ್ರಿ ಧನ್ಯಾ.

ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ ಶೆಟ್ಟರು ಸಂಮಾನಿತರಾಗಿದ್ದಾರೆ.



## ರವೀಂದ್ರ ಶೆಟ್ಟಿ, ಹಕ್ಲಾಡಿ

*'ಶ್ರೀ ಬ್ರಹ್ಮಲಿಂಗೇಶ್ವರ ನಿಲಯ'*
*ಗಾಣದರ ಹಕ್ಲು-ಹಕ್ಲಾಡಿ, ಅಂಚೆ : ಹಕ್ಲಾಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9980377078*

ಮನಮೋಹಕ ರೂಪ ಸಂಪತ್ತು, ಮಾದಕ ಮೈಕಟ್ಟು, ಮಧುರ ಕಂಠ, ಮಾರ್ದವತೆಯ ನೃತ್ಯಾಭಿನಯ ಹಾಗೂ ಹಿತ-ಮಿತ ವಾಗ್ವೈಖರಿಯಿಂದ ಕಲಾಪ್ರೇಮಿಗಳ ಹಾರ್ದಿಕ ಹಾರೈಕೆಗೆ ಪಾತ್ರರಾದ ಯುವ ಸ್ತ್ರೀವೇಷಧಾರಿ ಹಕ್ಲಾಡಿ ರವೀಂದ್ರ ಶೆಟ್ಟಿ.

ಕುಂದಾಪುರ ತಾಲೂಕಿನ ಹಕ್ಲಾಡಿ ಎಂಬಲ್ಲಿ ಮಹಾಬಲ ಶೆಟ್ಟಿ-ಸಾಧಮ್ಮ ಶೆಟ್ಟಿ ದಂಪತಿಯ ಪುತ್ರನಾಗಿ ಜನಿಸಿದ ರವೀಂದ್ರ ಶೆಟ್ಟಿ ಇದೀಗ 28ರ ಹರೆಯದ ಸ್ಫುರದ್ರೂಪಿ ಯಕ್ಷನಟ.

ಶಾಲಾ ದಿನಗಳಲ್ಲೇ ಬಣ್ಣದ ಗೀಳು ಹೊಂದಿದ ಹಕ್ಲಾಡಿ ರವೀಂದ್ರ ಶೆಟ್ಟಿ ಅವರಿಗೆ ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳೇ ವೃತ್ತಿ ಬದುಕಿಗೆ ಪ್ರೇರಣೆ ನೀಡಿದವು. ಕೊಳಲಿ ಕೃಷ್ಣ ಶೆಟ್ಟಿ ಅವರಲ್ಲಿ ಯಕ್ಷಗಾನ ತರಬೇತಿ ಪಡೆದು ಯಕ್ಷಲೋಕ ಪ್ರವೇಶಿಸಿದ ಹಕ್ಲಾಡಿ ಅವರು ಮಾರಣಕಟ್ಟೆ ಮೇಳದಲ್ಲಿ 6 ವರ್ಷ ಸ್ತ್ರೀಪಾತ್ರಧಾರಿಯಾಗಿ ಸೇವೆ ಸಲ್ಲಿಸಿದರು. 'ಹಕ್ಲಾಡಿ ರವೀಂದ್ರ ಶೆಟ್ಟಿ' ಎಂಬ ಯುವ ಪ್ರತಿಭೆಯ ಹೆಸರು ಪೂರ್ಣಪ್ರಮಾಣದಲ್ಲಿ ಬೆಳಕಿಗೆ ಬಂದದ್ದು ಡೇರೆ ಮೇಳವಾದ ಸಾಲಿಗ್ರಾಮವನ್ನು ಸೇರಿದಾಗಲೇ ಎನ್ನಬಹುದು. ಪ್ರಸ್ತುತ ಹಕ್ಲಾಡಿ ಸಾಲಿಗ್ರಾಮ ಮೇಳದ ಸ್ತ್ರೀವೇಷಧಾರಿಯಾಗಿ ಸಾರ್ಥಕ 5 ವರ್ಷವನ್ನು ಪೂರೈಸಿ ರಂಗಜೀವನದ 12ನೇ ವರ್ಷದಲ್ಲಿದ್ದಾರೆ.

ತ್ರಿಲೋಕಸುಂದರಿ, ಭ್ರಮರಕುಂತಳೆ, ರತ್ನಾವತಿ, ಪ್ರಭಾವತಿ, ಚಿತ್ರಾಂಗದೆ, ಶಿವೆ, ತಾರಾವಳಿ, ರೇಣುಕೆ, ಪದ್ಮಗಂಧಿ, ರೇವತಿ, ಸುಭದ್ರೆ, ದೇವಕಿ, ಯಶೋದೆ... ಮೊದಲಾದ ಪೌರಾಣಿಕ ಸ್ತ್ರೀಭೂಮಿಕೆಗಳಲ್ಲಿ ಹಕ್ಲಾಡಿಯವರ ಮನೋಜ್ಞ ಅಭಿನಯ ಕಲಾಭಿಮಾನಿಗಳ ಮನಸೂರೆಗೊಂಡಿದೆ. ನವೀನ ಪ್ರಸಂಗಗಳ ಸ್ತ್ರೀಭೂಮಿಕೆಗಳ ನಿರ್ವಹಣೆಯಂತೂ ಹಕ್ಲಾಡಿಯವರ ಕಲಾವಂತಿಕೆಯನ್ನು ಹೆಚ್ಚು ಹೊರಗೆಡಹುತ್ತದೆ.

ಬಡಗುತಿಟ್ಟಿನ ಭವಿತವ್ಯದ ಪ್ರಜ್ವಲ ಪ್ರತಿಭೆಯಾಗಿ ಬೆಳಗುವ ಭರವಸೆ ಹುಟ್ಟಿಸಿದ ಜನಪ್ರಿಯ ಯುವ ಸ್ತ್ರೀವೇಷಧಾರಿ ಹಕ್ಲಾಡಿ ರವೀಂದ್ರ ಶೆಟ್ಟಿ ಅವರು ಸ್ಥಳೀಯ ಸಂಘ-ಸಂಸ್ಥೆಗಳಿಂದ ಅನೇಕ ಸಂಮಾನ-ಪುರಸ್ಕಾರವನ್ನು ಪಡೆದಿರುತ್ತಾರೆ.



## ರವೀಂದ್ರ ಎಸ್.ಎ., ಶೃಂಗೇರಿ

*ಅಂಚೆ : ಕಮಲಶಿಲೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9731990700*

ಖಚಿತ ಲಯಗಾರಿಕೆಯಲ್ಲಿ ನಾದೋತ್ಪತ್ತಿ ಮಾಡುವ ಬೆರಳುಗಾರಿಕೆ, ವಿಲಂಬ–ತೀವ್ರಗತಿಯಲ್ಲಿ ಸ್ಫುಟವಾಗುವ ಹೊರಳಿಕೆ, ಹಿಮ್ಮೇಳದೊಂದಿಗೆ ಮಧುರವಾದ ಹೊಂದಾಣಿಕೆ, ಮುಮ್ಮೇಳದ ಕಲಾಭಿವ್ಯಕ್ತಿಯನ್ನು ಚೈತನ್ಯಶೀಲವಾಗಿಸುವ ನುಡಿಸಾಣಿಕೆ ಮದ್ದಳೆಗಾರಿಕೆಯಲ್ಲಿ ಶುದ್ಧ, ಹೃದ್ಯವಾಗಿ ನಿರೂಪಿಸುವ ಪ್ರಬುದ್ಧ ಮದ್ದಳೆವಾದಕ ಎಸ್.ಎ. ರವೀಂದ್ರ ಶೃಂಗೇರಿ.

ಅಪ್ಪು ಪೂಜಾರಿ–ಲಿಂಗಮ್ಮ ದಂಪತಿಯ ಸುಪುತ್ರರಾಗಿ ಶೃಂಗೇರಿಯಲ್ಲಿ ಜನಿಸಿದ ರವೀಂದ್ರ ಅವರಿಗೀಗ 54ರ ಹರೆಯ. 7ನೇ ತರಗತಿಗೆ ತನ್ನ ಔಪಚಾರಿಕ ಅಕ್ಷರ ಶಿಕ್ಷಣವನ್ನು ಕೊನೆಗೊಳಿಸಿ 16ರ ಹರೆಯದಲ್ಲೇ ಯಕ್ಷಗಾನಲೋಕವನ್ನು ಪ್ರವೇಶಿಸಿದ ಇವರಿಗೆ ರಂಗಭೂಮಿಯ ಪ್ರೇರಣಾಶಕ್ತಿಯಾಗಿ, ಕಲಾವಿದ್ಯೆಯನ್ನು ಬೋಧಿಸಿದವರು ಹಿರಿಯ ಭಾಗವತ ದಿ. ನೆಲ್ಲೂರು ಮರಿಯಪ್ಪ ಆಚಾರ್ಯರು.

ರಂಜದಕಟ್ಟೆ–4, ಕಿಗ್ಗ–1, ಕಳವಾಡಿ–2, ಅಮೃತೇಶ್ವರಿ–6, ಶೃಂಗೇರಿ–5, ಮಡಾಮಕ್ಕಿ–1, ಮೇಗರವಳ್ಳಿ–2, ಬಗ್ವಾಡಿ–2, ಕಮಲಶಿಲೆ–15... ಮೊದಲಾದ ಮೇಳಗಳಲ್ಲಿ 38 ವರ್ಷಗಳ ಸುದೀರ್ಘ ಕಲಾಕೃಷಿ ನಡೆಸಿದ ರವೀಂದ್ರ ಶೃಂಗೇರಿ ವೃತ್ತಿರಂಗದ ಅನುಭವಿ ಮದ್ದಳೆಗಾರರಾಗಿ ಹೆಸರುಗಳಿಸಿದವರು.

ಸಮರ್ಥ ಮದ್ದಳೆಗಾರರಾದ ಇವರಿಗೆ ಭಾಗವತಿಕೆ ಹಾಗೂ ಚಂಡೆವಾದನದ ಪರಿಣತಿಯೂ ಇದೆ. ಆಟ–ಕೂಟಗಳೆರಡರಲ್ಲೂ ಇವರು ಕ್ರಿಯಾಶೀಲ ಹಿಮ್ಮೇಳ ಕಲಾವಿದರು.

ಯಕ್ಷಗಾನ ರಂಗ ವ್ಯವಸಾಯದ ಬಿಡುವಿನ ಅವಧಿಯಲ್ಲಿ ಚಂಡೆ–ಮದ್ದಳೆಯ ನಿರ್ಮಾಣ, ಯಕ್ಷಗಾನ ವೇಷಭೂಷಣ ಸಾಮಗ್ರಿಗಳ ತಯಾರಿ ಇವರ ಉಪವೃತ್ತಿಯಾಗಿದೆ.

ತನ್ನ ಅನನ್ಯ ವಿದ್ಯಾನುಭವವನ್ನು ಅನೇಕ ಕಿರಿಯರಿಗೆ ಧಾರೆಯೆರೆದು ಪ್ರತಿಭಾವಂತ ಕಲಾವಿದರನ್ನಾಗಿ ರೂಪಿಸಿದ ಹೆಗ್ಗಳಿಕೆಯೂ ಇವರಿಗಿದೆ.

ರವೀಂದ್ರ ಶೃಂಗೇರಿ ಅವರ ಸಹಧರ್ಮಿಣಿ ಶೈಲಶ್ರೀ. ಶ್ರೀಶ ಹಾಗೂ ಶ್ರೀಜಾ ಇವರ ಉಭಯ ಮಕ್ಕಳು.

ಕೊಲ್ಲೂರು, ಕುಂದಾಪುರ, ಶೃಂಗೇರಿ ಹಾಗೂ ದೂರದ ಹೈದರಾಬಾದ್‌ನ ಕಲಾಸಂಘಟನೆಗಳಲ್ಲಿ ಇವರು ಸಂಮಾನಿತರಾಗಿದ್ದಾರೆ.



## ರಾಘವೇಂದ್ರ ಆಚಾರ್, ಸಿದ್ಧಾಪುರ

*ಮೇಲ್‌ಜಡ್ಡು, ಸಿದ್ಧಾಪುರ, ಅಂಚೆ : ಜನಸಾಲೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9880477703*

ಸುಶ್ರಾವ್ಯ ಕಂಠಸಿರಿಯ ಭಾವತಿಕೆಯಲ್ಲಿ ಸಾಧನೆಯ ಹಾದಿಯಲ್ಲಿರುವ ಯುವ ಭಾಗವತ ರಾಘವೇಂದ್ರ ಆಚಾರ್ ಸಿದ್ಧಾಪುರ.

ಕುಂದಾಪುರ ತಾಲೂಕಿನ ಸಿದ್ಧಾಪುರ-ಮೇಲ್‌ಜಡ್ಡು ಎಂಬಲ್ಲಿ ಲಕ್ಷ್ಮಣ ಆಚಾರ್-ಜಾನಕಿ ದಂಪತಿಯ ಸುಪುತ್ರನಾಗಿ 14 ಅಕ್ಟೋಬರ್ 1982ರಲ್ಲಿ ಜನಿಸಿದ ರಾಘವೇಂದ್ರ ಆಚಾರ್ ಹತ್ತನೆ ತರಗತಿಗೆ ಅಕ್ಷರ ಮಂಗಳ ಹಾಡಿ 16ರ ಹರೆಯದಲ್ಲೇ ಯಕ್ಷಬದುಕಿಗೆ ಶ್ರೀಕಾರ ಹಾಡಿದರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಹಿರಿಯ ಭಾಗವತ ಗೋರ್ಪಾಡಿ ವಿಠಲ ಪಾಟೀಲರ ಗುರುತನದಲ್ಲಿ 2 ವರ್ಷ ಭಾಗವತಿಕೆ ಶಿಕ್ಷಣ ಪಡೆದ ಇವರು ಗುರು ಬನ್ನಂಜೆ ಸಂಜೀವ ಸುವರ್ಣ, ನೀಲಾವರ ಲಕ್ಷ್ಮೀನಾರಾಯಣಯ್ಯ, ದೇವದಾಸರಾವ್ ಕೂಡ್ಲಿ, ಕೃಷ್ಣಮೂರ್ತಿ ಭಟ್ ಮೊದಲಾದ ಗುರುಗಳಿಂದ ಸುಯೋಗ್ಯ ಕಲಾವಿದ್ಯೆಯನ್ನು ಸಂಪಾದಿಸಿದರು.


2000ನೇ ಇಸವಿಯಲ್ಲಿ ಮಾರಣಕಟ್ಟೆ ದೇವಳದ ಧರ್ಮದರ್ಶಿ ಚಿತ್ತೂರು ಮಂಜಯ್ಯ ಶೆಟ್ಟರ ಯಜಮಾನಿಕೆಯ ಮಾರಣಕಟ್ಟೆ ಮೇಳವನ್ನು ಸೇರಿದ ಇವರು 2 ವರ್ಷ ಸಂಗೀತಗಾರನಾಗಿ, 5 ವರ್ಷ ಸಹಭಾಗವತನಾಗಿ ಮತ್ತೆ ಪ್ರಧಾನ ಭಾಗವತಿಕೆಯ ಸ್ಥಾನ ಮಾನ್ಯತೆಯಿಂದ ಅದೇ ಮೇಳದಲ್ಲಿ ವೃತ್ತಿ ತಿರುಗಾಟದ ಹತ್ತು ವಸಂತಗಳನ್ನು ಕಳೆದು ಯಶಸ್ವಿ ಭಾಗವತನಾಗಿ ಮುಂದುವರಿಯುತ್ತಿದ್ದಾರೆ.

ಶಾಲಾ ದಿನಗಳಲ್ಲಿ ದಿ. ಕಾಳಿಂಗ ನಾವಡರ ಧ್ವನಿಸುರುಳಿಯ ಪ್ರಸಂಗ ಪದ್ಯಗಳನ್ನು ಕೇಳಿ ಅದೇ ಅನುಗಾಲದ ಗುಂಗಿನಿಂದ, ನಾವಡರ ಸ್ವರಾನುಕರಣೆಯ ರಂಗಿನಲ್ಲಿ ವೃತ್ತಿರಂಗದಲ್ಲಿ ವಿಜೃಂಭಿಸುತ್ತಿದ್ದಾರೆ. ನಾವಡರ ಶೈಲಿಯೇ ಇವರ ಕಲಾ ಬದುಕಿನ ಹಾಡು-ಹಾದಿಯಾದರೂ, ಕೇಂದ್ರದ ಶಾಸ್ತ್ರೋಕ್ತ ಶಿಕ್ಷಣದ ಗರಿಮೆ ಹಾಗೂ ಸ್ವಯಂ ಪ್ರತಿಭೆಯ ಹಿರಿಮೆ ಇವರನ್ನು ಸಮರ್ಥ ಭಾಗವತರನ್ನಾಗಿ ರೂಪಿಸಿದೆ.

ತಾಳಜ್ಞಾನ, ಖಚಿತ ಲಯ ಪ್ರಜ್ಞೆ, ರಾಗಶುದ್ಧಿ, ಪ್ರಸಂಗಮಾಹಿತಿ, ರಂಗನಡೆ, ನಿರ್ದೇಶನಾ ಸಾಮರ್ಥ್ಯ, ಮೊದಲಾದ ಯಕ್ಷಗಾಯನದ ಗಂಧರ್ವ ಗುಣಗಳನ್ನು ಗರಿಷ್ಠಮಟ್ಟದ ಪ್ರತಿಭೆಯಲ್ಲಿ ಹರಳುಗಟ್ಟಿಸಿಕೊಂಡ ಈ ತರುಣ ಭಾಗವತ ಪೌರಾಣಿಕ ಹಾಗೂ ವಿನೂತನ ಪ್ರಸಂಗಗಳನ್ನು ಸರ್ವ ಸುಂದರವಾಗಿ ಆಡಿಸುವ ಪ್ರಬುದ್ಧತೆ ಹೊಂದಿದ್ದಾರೆ.

ಅರಾಟೆ ಯಕ್ಷಮೇಳ, ಮಾರಣಕಟ್ಟೆ ಮಳೆಗಾಲದ ತಿರುಗಾಟ ಮೇಳ ಹಾಗೂ ಹವ್ಯಾಸಿ ಕಲಾತಂಡಗಳಲ್ಲಿ ಭಾಗವತನಾಗಿ ಮುಂಬೈ, ಬೆಂಗಳೂರು, ಮಂಡ್ಯ, ಮೈಸೂರು, ಶಿವಮೊಗ್ಗಗಳಲ್ಲಿ ಮಧುರ ಕಂಠಸಿರಿಯಿಂದ ಕಲಾರಸಿಕರನ್ನು ಮೋಡಿಮಾಡಿದ್ದಾರೆ.

ಯುವ ಭಾಗವತ ರಾಘವೇಂದ್ರ ಆಚಾರ್ಯ ಅವರು ಸುಷ್ಮಾ ಆರ್. ಆಚಾರ್ಯ ಎಂಬವರನ್ನು ವರಿಸಿದ್ದಾರೆ. ಇವರಿಗೆ ಭಾಗವತ ಗೋರ್ಪಾಡಿ ವಿಠಲಪಾಟೀಲ್ ಸ್ಮಾರಕ ಪ್ರಶಸ್ತಿ ಸೇರಿದಂತೆ ಅನೇಕ ಗೌರವ-ಸಂಮಾನಗಳು ದೊರಕಿವೆ.



## ರಾಘವೇಂದ್ರ ಸಕ್ಕಟ್ಟು

*'ಲಕ್ಷ್ಮೀ ನಿಲಯ', ಅಂಚೆ : ಗುಲ್ವಾಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08254-271390*

ಬಡಗಿನ ಭಾಗವತಿಕೆ ಹಾಗೂ ಮದ್ದಳೆಗಾರಿಕೆಯಲ್ಲಿ ಸಮರ್ಥ ಕಲಾಪ್ರತಿಭೆಯಾಗಿ ಗುರುತಿಸಲ್ಪಟ್ಟವರು ರಾಘವೇಂದ್ರ ಸಕ್ಕಟ್ಟು.

ಕುಂದಾಪುರ ತಾಲೂಕಿನ ಸೌಕೂರು ಎಂಬಲ್ಲಿ 28-9-1978ರಲ್ಲಿ ಜನಿಸಿದ ರಾಘವೇಂದ್ರ ಅವರು ಸುಪ್ರಸಿದ್ಧ ಹಿರಿಯ ಬಣ್ಣದ ವೇಷಧಾರಿ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಹಾಗೂ ಲಕ್ಷ್ಮೀ ದಂಪತಿಯ ಸುಪುತ್ರ.

ರಾಘವೇಂದ್ರ ಸಕ್ಕಟ್ಟು ಅವರ ಅಜ್ಜ ಹಾಗೂ ತಂದೆಯವರು ಯಕ್ಷಲೋಕದಲ್ಲಿ ಬಹುಮಾನ್ಯತೆ ಪಡೆದ ಕಲಾವಿದರಾಗಿದ್ದು, ಅಂತಹ ಕಲಾವಂತ ಮನೆತನದಲ್ಲಿ ಹುಟ್ಟಿ ಬೆಳೆದ ಇವರಿಗೆ ಕಲೆಯ ಸಂಸರ್ಗವೆನ್ನುವುದು ಆನುವಂಶಿಕ ಹಿನ್ನೆಲೆಯಿಂದ ಬಲಿಷ್ಠವಾಗಿಯೇ ಒಲಿಯಿತು.

ಎಸ್.ಎಸ್.ಎಲ್.ಸಿ. ವರೆಗೆ ಅಕ್ಷರಾಭ್ಯಾಸ ಮಾಡಿ ತನ್ನ 16ನೇ ವಯಸ್ಸಿನಲ್ಲೇ ವೃತ್ತಿರಂಗ ಪ್ರವೇಶಿಸಿದ ಇವರಿಗೆ ಮನೆತನದ ಕಲಾಪರಂಪರೆ ಮುಂದುವರಿಕೆಗಾಗಿ ತಂದೆಯವರೇ ಕಲಾಪ್ರೇರಣೆ ನೀಡಿದರು.

ಗೋರ್ಪಾಡಿ ವಿಠಲ ಪಾಟೀಲ್ ಹಾಗೂ ಕೆ.ಪಿ. ಹೆಗಡೆಯವರ ಶಿಷ್ಯನಾಗಿ ಸಶಕ್ತ ಕಲಾವಿದ್ಯೆಯನ್ನು ಗಳಿಸಿಕೊಂಡ ರಾಘವೇಂದ್ರ ಅವರು ಕೆಲವಾರು ವರ್ಷ ವೃತ್ತಿ ಮೇಳಗಳಲ್ಲಿ ಭಾಗವತರಾಗಿ ಗುರುತಿಸಿಕೊಂಡು ಅನಂತರ ಮದ್ದಳೆಗಾರಿಕೆಯಲ್ಲಿ ತೊಡಗಿ ಯಶಸ್ಸು ಕಂಡರು.

ಸೌಕೂರು, ಅಮೃತೇಶ್ವರಿ, ನಾಗರಕೊಡಿಗೆ, ಹಾಲಾಡಿ ಮೇಳಗಳಲ್ಲಿ ಇವರ ಕಲಾತಿರುಗಾಟ 13 ವರ್ಷಗಳನ್ನು ಕಂಡಿದೆ.

ಆಕಾಶವಾಣಿ, ದೂರದರ್ಶನಗಳಲ್ಲೂ ಇವರ ಮದ್ದಳೆವಾದನದ ಪ್ರತಿಭೆ ಪ್ರಸಾರವಾಗಿದೆ. ಯಕ್ಷಗಾನ ಪ್ರಭೇದಗಳಾದ ಹೂವಿನ ಕೋಲು, ಚಿಕ್ಕಮೇಳ ಹಾಗೂ ತಾಳಮದ್ದಳೆಗಳಲ್ಲೂ ಇವರ ಕ್ರಿಯಾಶೀಲ ಕಲಾವ್ಯಕ್ತಿತ್ವ ಪ್ರಕಟಗೊಂಡಿದೆ.

ರಾಘವೇಂದ್ರ ಸಕ್ಕಟ್ಟು ಅವರು ಯಮುನಾ ಎಂಬವರನ್ನು ವರಿಸಿ ಸಿಂಚನಾ ಎಂಬ ಓರ್ವ ಸುಪುತ್ರಿಯನ್ನು ಪಡೆದಿದ್ದಾರೆ.

ಅನೇಕ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರಿರವಿಸಿವೆ.



## ರಾಜು ಕುಲಾಲ್ ಬಿ.ಎಸ್.

*ಬಳವಾಡಿ, ಬೊಂಬ್ಲಾಪುರ ಅಂಚೆ,*
*ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 9480595019*

ಬಡಗು ಬಣ್ಣದ ಲೋಕದ ಬಣ್ಣದ ವೇಷಧಾರಿಯಾಗಿ ಗುರುತಿಸಿಕೊಂಡ ಯೋಗ್ಯ ಕಲಾವಿದ ಬಿ.ಎಸ್. ರಾಜು ಕುಲಾಲ್.

ಚಿಕ್ಕಮಗಳೂರು ಜಿಲ್ಲೆಯ ಬಳವಾಡಿ–ಬೊಂಬ್ಲಾಪುರ ಎಂಬಲ್ಲಿ 11–4–1969ರಲ್ಲಿ ಜನಿಸಿದ ರಾಜು ಕುಲಾಲ್ ಅವರು ಶೀನ ಹಾಂಡ–ಮಂಜಮ್ಮ ದಂಪತಿಯ ಸುಪುತ್ರ.

ಆರ್ಥಿಕ ಅನಾನುಕೂಲತೆಯಿಂದ 6ನೇ ತರಗತಿಗೆ ಓದು ನಿಲ್ಲಿಸಿ, 12ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡ ರಾಜು ಕುಲಾಲರಿಗೆ ಗುಂಡಯ್ಯ, ಅನಂತಯ್ಯ, ಸೀತಾರಾಂಪುರ ಹಾಗೂ ಸೀತಾರಾಮಯ್ಯ, ಸುಬ್ಬರಾವ್ ಮತದಬಾಗಿಲು ಮೊದಲಾದವರು ಯಕ್ಷಲೋಕದ ಪಯಣದ ಹಾದಿಗೆ ಪ್ರೋತ್ಸಾಹದ ವ್ಯಕ್ತಿಗಳಾದರು.

ಹಿರಿಯ ಕಲಾವಿದ ನಿಟ್ಟೂರು ಸುಬ್ರಹ್ಮಣ್ಯ ಭಟ್ಟರ ಶಿಷ್ಯನಾಗಿ ಯಕ್ಷ ದೀಕ್ಷೆಯನ್ನು ಪಡೆದ ರಾಜು ಕುಲಾಲ್ ವೃತ್ತಿರಂಗದಲ್ಲಿ ಬಣ್ಣದ ವೇಷಧಾರಿಯಾಗಿ ಗುರುತಿಸಿಕೊಂಡರೂ ಪ್ರಸಂಗೋಚಿತವಾಗಿ ರಾಜವೇಷ, ಮುಂಡಾಸು ವೇಷ... ಹೀಗೆ ಬಹುವಿಧ ವೇಷಗಳಲ್ಲೂ ರಂಗದಲ್ಲಿ ಕಾಣಿಸಿಕೊಳ್ಳುವವರು.

ಬೊಂಬ್ಲಾಪುರ–2, ಪೆರ್ಡೂರು–1, ಬಚ್ಚಗಾರು–1, ಗೋಳಿಗರಡಿ–3, ಮೇಳಗಳಲ್ಲಿ ದುಡಿದ ಇವರು ಸುಮಾರು 17 ವರ್ಷಗಳಿಂದ ಮಂದಾರ್ತಿ ಮೇಳದಲ್ಲಿ ಕಲಾಸೇವೆ ಮುಂದುವರಿಸುತ್ತಿದ್ದಾರೆ. ಶ್ರೀಯುತರ ಒಟ್ಟು ರಂಗವ್ಯವಸಾಯ ಸಾರ್ಥಕ 24 ವರ್ಷಗಳನ್ನು ಕಂಡಿರುತ್ತದೆ.

ವಿದ್ಯುಲ್ಲೋಚನ, ಮಹಿಷಾಸುರ, ಮಹಿರಾವಣ, ರಕ್ತಕೇಶಿ, ಶೂರ್ಪನಖಿ, ಕರಾಳನೇತ್ರೆ, ಮಹೋದರ... ಮೊದಲಾದ ಭೂಮಿಕೆಗಳಿಗೆ ರಾಜು ಕುಲಾಲರು ಸಮರ್ಪಕ ಕಲಾಪೋಷಣೆ ನೀಡಿದ್ದಾರೆ.

ಲಕ್ಷ್ಮೀ ಜನಾರ್ದನ ಕಲಾಮಂಡಳಿ ಅಂಬಲಪಾಡಿ ಉಡುಪಿ ಯಕ್ಷಗಾನ ಕಲಾರಂಗ ಆಯೋಜಿತ 'ಬಡಗುತಿಟ್ಟು ಬಣ್ಣದ ವೇಷ ಕಮ್ಮಟ' ದಲ್ಲೂ ರಾಜು ಕುಲಾಲರು ಭಾಗಿಯಾಗಿ ಯಕ್ಷಗಾನ ತಜ್ಞರಿಂದ ಸಾಂಪ್ರದಾಯಿಕ ಮುಖವರ್ಣಿಕೆ ವಿಧಾನವನ್ನು ಬೋಧಿಸಿಕೊಂಡಿದ್ದಾರೆ.

ಸುಜಾತ ಎಂಬವರನ್ನು ಲಗ್ನವಾಗಿ ಅರುಣ ಕುಮಾರ್ ಹಾಗೂ ಕಿರಣ ಕುಮಾರ್ ಎಂಬ ಉಭಯ ಗಂಡುಮಕ್ಕಳನ್ನು ಪಡೆದಿರುತ್ತಾರೆ.

ಸ್ಥಳೀಯ ಸಂಘ–ಸಂಸ್ಥೆಗಳ ಮಾನ–ಸಂಮಾನಕ್ಕೂ ಇವರು ಪಾತ್ರರಾಗಿದ್ದಾರೆ.



## ರಾಜು ದೇವಾಡಿಗ, ಕುದ್ರುಕೋಡು

*ಕೆಳಗದ್ದೆ ಮನೆ, ನಾವುಂದ ಗ್ರಾಮ, ಅಂಚೆ : ನಾವುಂದ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9980906573*

ವೀರ ವರ್ಚಸ್ಸಿನ ಮೂರನೇ ವೇಷಧಾರಿಯಾಗಿ ಬಡಗಿನ ರಂಗಮಂಚದಲ್ಲಿ ಚಾರುತರ ಸೊಗಸಿನ ಉಜ್ವಲ ಪ್ರತಿಭಾ ಪೂರ್ಣತೆಯನ್ನು ಸಾರಸತ್ವದಿಂದ ನಿರೂಪಿಸುವ ಸಮರ್ಥ ಯುವ ಕಲಾವಿದ ರಾಜು ದೇವಾಡಿಗ, ಕುದ್ರುಕೋಡು.

ಕುಂದಾಪುರ ತಾಲೂಕಿನ ನಾವುಂದ ಗ್ರಾಮದ ಕುದ್ರುಕೋಡು ಎಂಬ ಪುಟ್ಟಹಳ್ಳಿಯಲ್ಲಿ 1980ರಲ್ಲಿ ಜನಿಸಿದ ಇವರು ಚಿಕ್ಕಯ್ಯ ದೇವಾಡಿಗ-ಸೂರಮ್ಮ ದಂಪತಿಯ ಸುಪುತ್ರ.

7ನೇ ತರಗತಿವರೆಗೆ ಶಾಲಾ ವಿದ್ಯಾಭ್ಯಾಸ ಮಾಡಿ, ಆರ್ಥಿಕ ಅನಾನುಕೂಲತೆ ಹಾಗೂ ಎಳವೆಯಲ್ಲಿಯೇ ಹೊಂದಿದ್ದ ಅನ್ಯಾದೃಶ ಯಕ್ಷಕಲಾಸಕ್ತಿಯಿಂದ 11ನೇ ವಯಸ್ಸಿನಲ್ಲೇ ವೃತ್ತಿ ಬದುಕು ಕಂಡ ರಾಜು ದೇವಾಡಿಗ ಅವರು ಕಲಾಕ್ಷೇತ್ರದಲ್ಲಿ ಸಾರ್ಥಕ ಬೆಳವಣಿಗೆ ಕಂಡಿದ್ದಾರೆ.

ಖ್ಯಾತ ಸ್ತ್ರೀವೇಷಧಾರಿ ಉಳ್ಳೂರು ಶಂಕರ ದೇವಾಡಿಗ ಅವರಲ್ಲಿ ಯಕ್ಷಶಿಕ್ಷಣ ಪಡೆದ ಇವರು ತನ್ನ ಆಳಂಗ, ವೇಷವೈಖರಿ, ವಚೋ ಚಮತ್ಕಾರ ಹಾಗೂ ಚುರುಕಿನ ನೃತ್ಯಾಭಿನಯ ವಿಧಾನದಿಂದ ಸುಯೋಗ್ಯ ಪುಂಡುವೇಷಧಾರಿಯಾಗಿ ಜನಪ್ರಿಯತೆ ಕಂಡವರು.

ಮಾರಣಕಟ್ಟೆ ಮೇಳದಲ್ಲಿ 9 ವರ್ಷಗಳ ಕಾಲ ವ್ಯವಸಾಯ ಮಾಡಿದ ರಾಜು ದೇವಾಡಿಗ ಅವರು ಅಮೃತೇಶ್ವರಿಯಲ್ಲಿ 1 ವರ್ಷ ವೃತ್ತಿ ತಿರುಗಾಟ ನಡೆಸಿ ಈಗ ಅದೇ ಮೇಳದಲ್ಲಿ ಮುಂದುವರಿಯುವುದರೊಂದಿಗೆ ಸಾರ್ಥಕ 10 ವರ್ಷಗಳನ್ನು ಪೂರೈಸಿರುತ್ತಾರೆ.

ಕುಶ, ಲವ, ವೃಷಸೇನ, ಬಬ್ರುವಾಹನ, ದುಶ್ಯಾಸನ, ಪ್ರಸೇನ.... ಮೊದಲಾದ ಮೂರನೇ ವೇಷಗಳನ್ನು ವೀರೋಚಿತ ರಂಗ ವಿಲಾಸದಲ್ಲಿ ಮೆರೆಸಿದ ರಾಜು ದೇವಾಡಿಗ ಅವರು ರಂಗಧಾರ್ಮಿಕ ನಿಷ್ಠರಾಗಿ ನಾವೀನ್ಯತೆಯ ಯಕ್ಷ ಪ್ರತಿಭೆಯನ್ನು ಸರ್ವ ಜನರಂಜನೀಯವಾಗಿ ನಿರೂಪಿಸುತ್ತಾರೆ.

ಹಳೇ ಹಾಗೂ ಹೊಸ ಪ್ರಸಂಗಗಳೆರಡರಲ್ಲೂ ಇವರ ಕಲಾವಂತಿಕೆ ಸಮಾನ ಪ್ರಭುತ್ವದಲ್ಲಿ ಸಂಪನ್ನಗೊಳ್ಳುತ್ತದೆ. ರಂಗದಲ್ಲಿ ದಣಿವರಿಯದ ಉತ್ಸಾಹಿ ವೇಷಧಾರಿಯಾಗಿ ಮೆರೆಯುವ ಇವರು ಉತ್ತಮ ಪ್ರಸಂಗಾನುಭವವನ್ನು ಹೊಂದಿರುತ್ತಾರೆ.

ಪ್ರತಿಭಾನ್ವಿತ ಯುವ ಕಲಾವಿದ ರಾಜು ದೇವಾಡಿಗ ಅವರು ಹೇಮಾ ಎಂಬುವರನ್ನು ವರಿಸಿ ರಮ್ಯಾ ಎನ್ನುವ ಒಬ್ಬಾಕೆ ಸುಪುತ್ರಿಯನ್ನು ಪಡೆದಿರುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳ ಗೌರವ ಸಂಮಾನಗಳು ಇವರಿಗೆ ದೊರಕಿರುತ್ತವೆ.



## ರಾಮ ಕುಲಾಲ, ಮುದ್ದೂರು

*ದರ್ಖಾಸು, ನಾಲ್ಕೂರು ಕಜ್ಕೆ,*
*ಅಂಚೆ : ಮುದ್ದೂರು, ಉಡುಪಿ ತಾಲೂಕು/ಜಿಲ್ಲೆ*
*ದೂರವಾಣಿ : 9980319246*

ಬಡಗುತಿಟ್ಟಿನ ಭರವಸೆಯ ಬಣ್ಣದ ವೇಷಧಾರಿಯಾಗಿ ಸಂಪನ್ನ ಕಲಾವ್ಯಕ್ತಿತ್ವದಲ್ಲಿ ಕಂಗೊಳಿಸುವ ಯುವ ಪ್ರತಿಭಾನ್ವಿತ ಕಲಾವಿದ ರಾಮ ಕುಲಾಲ ಮುದ್ದೂರು.

ಉಡುಪಿ ತಾಲೂಕಿನ ವಾರಾಳಿ ಇವರ ಹುಟ್ಟೂರು. ನಾರಾಯಣ ಕುಲಾಲ–ರಾಧಾ ದಂಪತಿಯ ಸುಪುತ್ರನಾಗಿ 23–7–1977ರಲ್ಲಿ ಜನಿಸಿದ ರಾಮ ಕುಲಾಲರು 7ನೇ ತರಗತಿ ವಿದ್ಯಾಭ್ಯಾಸದ ಬಳಿಕ ತನ್ನ 18ನೇ ವಯಸ್ಸಿನಲ್ಲೇ ಬಣ್ಣದ ಬದುಕು ಕಂಡವರು.

ಮುದ್ದೂರು ಲಕ್ಷ್ಮೀನಾರಾಯಣ ಕಾರಂತರ ಪ್ರೇರಣೆ–ಪ್ರೋತ್ಸಾಹದೊಂದಿಗೆ ರಂಗ ಜೀವನವನ್ನು ಆರಂಭಿಸಿದ ರಾಮ ಕುಲಾಲರು ಶ್ರೀಯುತ ಲಕ್ಷ್ಮೀನಾರಾಯಣ ಕಾರಂತರಿಂದಲೇ ಯಕ್ಷ ಶಿಕ್ಷಣವನ್ನು ಪಡೆದವರು.

ಮಂದಾರ್ತಿ, ವಾರಣಕಟ್ಟೆ, ಸೌಕೂರು, ಅಮೃತೇಶ್ವರಿ ಮೇಳಗಳಲ್ಲಿ 14 ವರ್ಷಗಳ ಕಲಾ ವ್ಯವಸಾಯವನ್ನು ಪೂರೈಸಿದ ಕುಲಾಲರು ಪ್ರಸ್ತುತ ಅಮೃತೇಶ್ವರಿ ಮೇಳದ ಬಣ್ಣದ ವೇಷಧಾರಿಯಾಗಿದ್ದಾರೆ.

ಬಡಗುತಿಟ್ಟಿನ ಬಣ್ಣದ ವೇಷಗಳ ಕುರಿತು ವಿಶೇಷ ಕಲಾಬದ್ಧತೆ, ಕಳಕಳಿಯನ್ನು ಹೊಂದಿದ ಇವರು ಈ ಹಿಂದೆ ಉಡುಪಿ ಯಕ್ಷಗಾನ ಕಲಾರಂಗ ಆಯೋಜಿಸಿದ 'ಬಡಗುತಿಟ್ಟಿನ ಬಣ್ಣದ ವೇಷ ಕಾರ್ಯಾಗಾರ'ದ ಶಿಬಿರಾರ್ಥಿಯಾಗಿ ಭಾಗವಹಿಸಿ ಸಾಂಪ್ರದಾಯಿಕ ಬಣ್ಣದ ವೇಷಗಳ ಒಡ್ಡೋಲಗ ಕ್ರಮ, ನೃತ್ಯ ವೈಖರಿ ಹಾಗೂ ಪಂಚಸುಳಿಗಳ ಚಿತ್ತಾರದ ಪಾರಂಪರಿಕ ಮುಖವರ್ಣಿಕಾ ವಿಧಾನವನ್ನು ಯಕ್ಷಗಾನ ರಂಗತಜ್ಞರಿಂದ ಬೋಧಿಸಿಕೊಂಡು ವೃತ್ತಿರಂಗದಲ್ಲಿ ಅದನ್ನು ಪಾಲಿಸುತ್ತಿದ್ದಾರೆ.

ರಾವಣ, ಹಿಡಿಂಬ, ಕಿಮ್ಮೀರ, ಬಕಾಸುರ, ವೀರಭದ್ರ, ಘೋರರೂಪಿ... ಮೊದಲಾದ ಗಂಡು ಬಣ್ಣದ ವೇಷಗಳನ್ನು, ಶೂರ್ಪನಖಿ, ಹಿಡಿಂಬೆ, ವೃತ್ರಜ್ವಾಲೆ ಮೊದಲಾದ ಹೆಣ್ಣು ಬಣ್ಣದ ವೇಷಗಳನ್ನು ವ್ಯವಸ್ಥಿತ ರಂಗಧರ್ಮದಲ್ಲಿ ಪೋಷಿಸುತ್ತಾರೆ.

ರಾಮ ಕುಲಾಲರು ಹಿಟ್ಟಿನ ಚುಟ್ಟಿಗಳನ್ನೇ ಇರಿಸುವ ಬಣ್ಣದ ವೇಷಗಳ ಪರಂಪರೆಯ ಮುಖವರ್ಣಿಕಾ ಪದ್ಧತಿಯನ್ನು ನೆಚ್ಚಿಕೊಂಡಿದ್ದಾರೆ.

ಉತ್ತಮ ಬಣ್ಣದ ವೇಷಧಾರಿಯಾದ ಇವರು ಒಳ್ಳೆಯ ರಾಜವೇಷಧಾರಿಯಾಗಿಯೂ, ಮುಂಡಾಸು ವೇಷಧಾರಿಯಾಗಿಯೂ ಗುರುತಿಸಿಕೊಂಡಿದ್ದಾರೆ. ನೃತ್ಯ, ಅಭಿನಯ, ವೇಷ, ಭಾಷೆಯಲ್ಲಿ ಗುಣಮಟ್ಟವನ್ನು ಕಾಪಿಟ್ಟುಕೊಂಡು ಉತ್ಸಾಹಿಯಾಗಿ ರಂಗದುಡಿಮೆಯಲ್ಲಿದ್ದಾರೆ.

ಯಕ್ಷಗಾನ ಕಲೆಯನ್ನು ಬದುಕಿನ ಬಂಡವಾಳವಾಗಿಸಿಕೊಂಡ ಯುವ ಕಲಾವಿದ ರಾಮ ಕುಲಾಲರು ಸ್ಥಳೀಯ ಸಂಘ–ಸಂಸ್ಥೆಗಳಿಂದ ಸಂಮಾನಗಳನ್ನು ಪಡೆದಿರುತ್ತಾರೆ.



## ರಾಮ ಕೇಶವ ಗೌಡ, ಗುಣವಂತೆ

*ಅಂಚೆ, ಗುಣವಂತೆ, ದೇವಸ್ಥಾನ ಕೇರಿ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9620315015*

ಸುಂದರ ವೇಷಾಲಂಕಾರ, ಸುಮಧುರ ಶಾರೀರ, ಸುಸಂಸ್ಕೃತ ನೃತ್ಯಾಭಿನಯ ಸಂಸ್ಕಾರ, ಸಮರ್ಪಕ ವಚೋಚಮತ್ಕಾರ ಹಾಗೂ ಸುಯೋಗ್ಯ ರಂಗವ್ಯವಹಾರಗಳಿಂದ ಸಮರ್ಥ ಸ್ತ್ರೀವೇಷಧಾರಿಯಾಗಿ ಗುರುತಿಸಿಕೊಂಡ ಅನುಭವಿ ಯಕ್ಷ ಕಲಾವಿದ ರಾಮಗೌಡ ಗುಣವಂತೆ.

ಹೊನ್ನಾವರ ತಾಲೂಕಿನ ಗುಣವಂತೆ ಇವರ ಹುಟ್ಟೂರು. ಕೇಶವ ಗೌಡ ಹಾಗೂ ಸಣ್ಣಕ್ಕ ಗೌಡ್ತಿ ದಂಪತಿಯ ಸುಪುತ್ರನಾಗಿ 12-12-1959ರಲ್ಲಿ ಜನಿಸಿದ ರಾಮಗೌಡ ಅವರು 7ನೇ ತರಗತಿವರೆಗೆ ಅಕ್ಷರಾಭ್ಯಾಸ ಮಾಡಿ, ದೊಡ್ಡಪ್ಪ ಹಾಗೂ ಮನೆಯ ಸದಸ್ಯರ ಸಂಪೂರ್ಣ ಪ್ರೋತ್ಸಾಹದೊಂದಿಗೆ ತನ್ನ 25ನೇ ವಯಸ್ಸಿನಲ್ಲಿ ಬಣ್ಣದ ಲೋಕವನ್ನು ಪ್ರವೇಶಿಸಿದರು.

ಕೃಷ್ಣ ಭಂಡಾರಿ ಹಾಗೂ ಸುಬ್ರಾಯ ಭಟ್ಟ ಅವರಲ್ಲಿ ಯಕ್ಷಶಿಕ್ಷಣವನ್ನು ಪಡೆದು ರಂಗವೇರಿದ ಇವರು ವೃತ್ತಿರಂಗಭೂಮಿಯಲ್ಲಿ ಸ್ತ್ರೀವೇಷಧಾರಿಯಾಗಿ ಜನಮನ್ನಣೆ ಕಂಡವರು.

ಗುಂಡಬಾಳ-2, ಕಳವಾಡಿ-2, ಕಮಲಶಿಲೆ-4, ಸೌಕೂರು-2, ಅಮೃತೇಶ್ವರಿ-1, ಗುತ್ಯಮ್ಮ-1, ಸಿಗಂಧೂರು-5, ಬಗ್ವಾಡಿ-4, ಗೋಳಿಗರಡಿ-3.... ಮೊದಲಾದ ಮೇಳಗಳಲ್ಲಿ ಸಾರ್ಥಕ 24 ವರ್ಷಗಳ ಕಲಾವ್ಯವಸಾಯವನ್ನು ಪೂರೈಸಿದ್ದಾರೆ. ಪ್ರಸ್ತುತ ಗೋಳಿಗರಡಿ ಮೇಳದಲ್ಲಿ ಇವರು ಕಲಾಸೇವೆ ನಡೆಸುತ್ತಿದ್ದಾರೆ.

ಪೌರಾಣಿಕ ಪ್ರಸಂಗಗಳ ಪ್ರಧಾನ ಸ್ತ್ರೀ ಭೂಮಿಕೆಗಳನ್ನು ಅನುಭವ ಪೂರ್ಣ ಕಲಾವಂತಿಕೆಯಲ್ಲಿ ಪೋಷಿಸಿ ರಂಗದಲ್ಲಿ ಮೆರೆಸುವ ರಾಮಗೌಡರ ಪುರಾಣ ಜ್ಞಾನಸಂಪತ್ತು ಸಮೃದ್ಧವಾದುದು.

ಸೈರೇಂಧ್ರಿ, ಅಂಬೆ, ಮೀನಾಕ್ಷಿ, ಶಶಿಪ್ರಭೆ, ಶಾರದೆ, ಪ್ರಭಾವತಿ, ವಿಷಯ, ಚಿತ್ರಾಂಗದೆ, ಸತ್ಯಭಾಮೆ, ಸುಭದ್ರೆ... ಮೊದಲಾದ ಪಾತ್ರಗಳಿಗೆ ಸಾಂಪ್ರದಾಯಿಕ ರಂಗಪ್ರತಿಭೆಯಿಂದ ಜೀವ ತುಂಬಿದ ಇವರು ಸಾತ್ವಿಕ ಹಾಗೂ ಗಂಭೀರ ವೀರವರ್ಚಸ್ಸಿನ ಸ್ತ್ರೀವೇಷಗಳನ್ನು ಸಮಾನ ಪ್ರಭುತ್ವದಲ್ಲಿ ನಿರೂಪಿಸಬಲ್ಲರು.

ರಾಮಗೌಡ ಅವರು ಲಕ್ಷ್ಮೀ ಎಂಬುವರನ್ನು ವರಿಸಿ ವಂದನಾ, ವರುಣ, ವಸಂತ, ವತ್ಸಲ ಎಂಬ ನಾಲ್ಕು ಮಂದಿ ಮಕ್ಕಳನ್ನು ಪಡೆದಿರುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ರಾಮಗೌಡ ಅವರ ಕಲಾಪ್ರತಿಭೆಯನ್ನು ಗುರುತಿಸಿ ಗೌರವಿಸಿವೆ.



## ರಾಮಚಂದ್ರ ಎಂ. ನಾಯ್ಕ

*ಅಂಚೆ : ಇಡುವಾಣಿ–ಕೆಪ್ಪಿಗೆ*
*ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9449367255*

ಗಮನಾರ್ಹ ಕಲಾಪ್ರತಿಭೆಯಾಗಿ ನಿರ್ವಹಣಾ ಭೂಮಿಕೆಗಳಿಗೆ ಯಥೋಚಿತ ನ್ಯಾಯ ಕಲ್ಪಿಸುವ ಯುವ ಸ್ತ್ರೀವೇಷಧಾರಿ ರಾಮಚಂದ್ರ ನಾಯ್ಕ್.

ಸಾಗರ ತಾಲೂಕಿನ ಇಡುವಾಣಿ ಎಂಬಲ್ಲಿ 11–10–1979ರಲ್ಲಿ ಜನಿಸಿದ ಇವರು ಮಹಾಬಲೇಶ್ವರ ನಾಯ್ಕ–ಬೀರಮ್ಮ ದಂಪತಿಯ ಸುಪುತ್ರ.

ರಾಮಚಂದ್ರ ನಾಯ್ಕ್ ಅವರ ತಂದೆಯವರು ಹವ್ಯಾಸಿ ಯಕ್ಷಗಾನ ಸ್ತ್ರೀವೇಷಧಾರಿಯಾಗಿದ್ದರು. ಹಾಗಾಗಿ ಅವರೇ ರಾಮಚಂದ್ರರಿಗೆ ಕಲಾಬದುಕಿನ ಪ್ರೇರಣ ಶಕ್ತಿಯಾಗಿ ಹುರಿದುಂಬಿಸಿದರು.

7ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ ತನ್ನ 14ನೇ ವಯಸ್ಸಿನಲ್ಲೇ ರಾಮಚಂದ್ರ ನಾಯ್ಕ್ ರಂಗಭೂಮಿಗೆ ಹೆಜ್ಜೆ ಹಾಕಿದವರು. ಮಾವಿನ ಗುಂಡಿ ಶ್ರೀಪಾದ ಹೆಗಡೆಯವರ ಶಿಷ್ಯನಾಗಿ ಯಕ್ಷಗಾನ ಕಲಾ ಶಿಕ್ಷಣವನ್ನು ಪಡೆದ ಇವರು ವೃತ್ತಿ ಮೇಳಗಳಲ್ಲಿ ಉತ್ತಮ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿರುವವರು.

ಶಿರಸಿ (1), ಮೇಗರವಳ್ಳಿ (1), ಶಿವರಾಜಪುರ (2), ಗೋಳಿಗರಡಿ (7), ಮಂದಾರ್ತಿ (3), ಬಗ್ವಾಡಿ (1)... ಮೊದಲಾದ ಮೇಳಗಳಲ್ಲಿ ರಾಮಚಂದ್ರ ನಾಯ್ಕ್ ಅವರ ಕಲಾವ್ಯವಸಾಯ 15 ವರ್ಷ ಪೂರೈಸಿದೆ.

ಹಿರಿಯ ಕಲಾವಿದರ ಒಡನಾಟದಲ್ಲಿ ಒಳ್ಳೆಯ ಪ್ರಸಂಗ ನಡೆಯನ್ನು ಕಲಾಬದುಕಿನಲ್ಲಿ ಕಂಡುಕೊಂಡ ಇವರು ಭವಿಷ್ಯದ ಉಜ್ವಲ ಸ್ತ್ರೀವೇಷಧಾರಿಯಾಗಿ ಕನಸು ಕಲ್ಪನೆಯ ಬದ್ಧತೆಯಲ್ಲಿ ಕಲಾಸೇವೆಯಲ್ಲಿದ್ದಾರೆ.

ಮೀನಾಕ್ಷಿ, ರತಿ, ಸುಭದ್ರೆ, ವಿಷಯ, ಶಿವೆ, ಸತ್ಯಭಾಮೆ, ಮದನಾಕ್ಷಿ, ರತ್ನಾವತಿ, ದ್ರೌಪದಿ, ಪ್ರಮೀಳೆ... ಮೊದಲಾದ ಭೂಮಿಕೆಗಳಲ್ಲಿ ರಾಮಚಂದ್ರ ಗುರುತಿಸಲ್ಪಡುವ ಕಲಾವ್ಯಕ್ತಿತ್ವವನ್ನು ಪ್ರಕಟ ಪಡಿಸಿದವರು.

ಯುವ ಪ್ರತಿಭಾವಂತ ಸ್ತ್ರೀವೇಷಧಾರಿ ರಾಮಚಂದ್ರ ನಾಯ್ಕರು ಸವಿತಾ ಎಂಬುವರನ್ನು ವರಿಸಿ ಯಶವಂತ ಎನ್ನುವ ಪುತ್ರನನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಕೆಲವು ಸಂಮಾನಗಳು ಇವರಿಗೆ ದೊರಕಿರುತ್ತವೆ.



## ರಾಮಚಂದ್ರ ಪರಮೇಶ್ವರ ಹೆಗಡೆ

(ಆರ್.ಪಿ. ಹೆಗಡೆ)

*ಹುಣಸೇಮನೆ, ಅಂಚೆ : ಕುಂದರ್ಗಿ*
*ಯಲ್ಲಾಪುರ ತಾಲೂಕು, (ಉ.ಕ)*
*ದೂರವಾಣಿ : 9481308070*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯಲ್ಲಿ ಸಾಧನೆಯ ಬೆನ್ನೇರಿ ಸಾಗಿ ಸಮೃದ್ಧ ಪ್ರತಿಭೆಯ ಸಂಭಾವಿತ ಸಾಧಕರಾಗಿ ಗುರುತಿಸಿಕೊಂಡ ಸರ್ವಾಂಗೀಣ ಕಲಾವಿದ ರಾಮಚಂದ್ರ ಪರಮೇಶ್ವರ ಹೆಗಡೆ ಕಿರುನಾಮಧೇಯದಲ್ಲಿ ಚಿರಪರಿಚಿತರಾದ ಆರ್.ಪಿ. ಹೆಗಡೆ.

ಉತ್ತರಕನ್ನಡ ಸಿದ್ದಾಪುರ ತಾಲೂಕಿನ ಮೂರೂರು ಎಂಬಲ್ಲಿ 26-1-1954ರಲ್ಲಿ ಜನಿಸಿದ ರಾಮಚಂದ್ರ ಹೆಗಡೆ ಅವರು ಪರಮೇಶ್ವರ ಹೆಗಡೆ-ಲಕ್ಷ್ಮೀ ದಂಪತಿಯ ಸುಪುತ್ರ.

ಎಸ್ಸೆಸ್ಸೆಲ್ಸಿ ವಿದ್ಯಾಭ್ಯಾಸದ ಬಳಿಕ ತನ್ನ 18ನೇ ವಯಸ್ಸಿನಲ್ಲಿ ಯಕ್ಷಲೋಕ ಪ್ರವೇಶಿಸಿದ ಹೆಗಡೆ ಅವರಿಗೆ ತನ್ನೂರಿನಲ್ಲಿ ನಡೆಯುತ್ತಿದ್ದ ಏಕಾದಶಿ ತಾಳಮದ್ದಳೆ ಕೂಟಗಳು ಹಾಗೂ ತಾಳಮದ್ದಳೆ ಅರ್ಥಧಾರಿ ಅಣ್ಣ ಗಣೇಶ ಹೆಗಡೆಯವರ ಹಾರ್ದಿಕ ಪ್ರೋತ್ಸಾಹ ರಂಗಬದುಕಿನ ಪಥಕ್ಕೆ ರಂಗವಲ್ಲಿಯನ್ನು ಬರೆದವು. ಪ್ರೇರಣೆಯ ದಿವ್ಯ ಮಂತ್ರವಾಗಿ ಪರಿಣಮಿಸಿದವು.

ಗುರು ನಾರ್ಣಪ್ಪ ಉಪ್ಪೂರ, ಹೊಸ್ತೋಟ ಮಂಜುನಾಥ ಭಾಗವತ ಹಾಗೂ ಕಪ್ಪೆಕೆರೆ ಸುಬ್ರಾಯ ಭಾಗವತರ ಶಿಷ್ಯನಾಗಿ ಯಕ್ಷಕಲಾ ಶಿಕ್ಷಣವನ್ನು ಗಂಭೀರವಾಗಿ ಪಡೆದುಕೊಂಡ ರಾಮಚಂದ್ರ ಹೆಗಡೆ ಅವರು ವೃತ್ತಿ ಮೇಳಗಳಲ್ಲಿ ಶ್ರೇಷ್ಠ ಭಾಗವತರಾಗಿ ಜನಮಾನ್ಯತೆಯನ್ನು ಕಂಡರು.

ಮಂದಾರ್ತಿಮೇಳ, ಭರತನಹಳ್ಳಿ (ಯಲ್ಲಾಪುರ) ಭ್ರಮರಾಂಬ ಮೇಳ, ಹೆಗ್ಗರಣೆ ಮೇಳ (ಸಿದ್ದಾಪುರ-ಉ.ಕ), ಗಡೀಮನೆ ಮೇಳ (ಶಿರಸಿ), ಕುಂದರ್ಗಿ ಮೇಳ (ಯಲ್ಲಾಪುರ) ಗಣೇಶ ಪಾಲ ಮಹಾಗಣಪತಿ ಮೇಳ (ಶಿರಸಿ),... ಸೇರಿದಂತೆ ಹಲವಾರು ಪ್ರಾದೇಶಿಕ ವೃತ್ತಿ ಮೇಳಗಳಲ್ಲಿ ಹತ್ತು ವರ್ಷಗಳ ಕಲಾವ್ಯವಸಾಯ ಮಾಡಿದ ರಾಮಚಂದ್ರ ಹೆಗಡೆಯವರು ಸಾಂಪ್ರದಾಯಿಕ ಶೈಲೀಕೃತ ಯಕ್ಷಗಾಯನದ ಮೂಲಕ ಸಿದ್ಧಿಯ ಶಿಖರವೇರಿ ಸಾರ್ಥಕ್ಯವನ್ನು ಕಂಡುಕೊಂಡರು.

ರಾಮಚಂದ್ರ ಹೆಗಡೆ ಅವರು ಕೇವಲ ಭಾಗವತರು ಮಾತ್ರವಲ್ಲ. ತಾಳಮದ್ದಳೆ ಅರ್ಥಧಾರಿಯೂ ಆಗಿ ಅನೇಕ ಕೂಟಗಳಲ್ಲಿ ವಾಕ್ ಪ್ರೌಢಿಮೆಯನ್ನು ಮೆರೆದಿದ್ದಾರೆ. ಇವರಿಗೆ ನೃತ್ಯ, ಚಂಡೆ-ಮದ್ದಳೆ, ವಾದನಗಳ ಪರಿಣತಿಯೂ ಇದೆ.

ಹಂಗಾರಕಟ್ಟೆ ಯಕ್ಷಗಾನ ಕೇಂದ್ರದ ಪ್ರಾಚಾರ್ಯರಾಗಿ ದುಡಿದ ಹೆಗಡೆಯವರು ತನ್ನ ಅಗಾಧ ಕಲಾ ವಿದ್ವತ್ತಿನಿಂದ ಅನೇಕ ಪ್ರತಿಭಾವಂತ ಶಿಷ್ಯರನ್ನು ರೂಪಿಸಿ ಯಕ್ಷರಂಗ ಭೂಮಿಗೆ ನೀಡಿದ್ದಾರೆ.

ರಾಮಚಂದ್ರ ಹೆಗಡೆಯವರು ರುಕ್ಮಿಣಿ ಎಂಬವರನ್ನು ವರಿಸಿ, ರವೀಂದ್ರ ಹಾಗೂ ರಂಜನಾ ಎನ್ನುವ ಪುತ್ರ, ಪುತ್ರಿಯನ್ನು ಪಡೆದಿದ್ದಾರೆ. ಇವರ ಸುಪುತ್ರ ರವೀಂದ್ರ ಅವರು ಸಂಗೀತ ನಿರ್ದೇಶಕ, ಗಾಯಕ, ನಟರಾಗಿ ಖ್ಯಾತನಾಮರಾದರೆ, ಸುಪುತ್ರಿ ರಂಜನಾ ಅವರು ಹಿಂದೂಸ್ತಾನಿ ಸುಗಮ ಸಂಗೀತ ಕ್ಷೇತ್ರದ ಉಜ್ವಲ ಹಾಡುಗಾರ್ತಿಯಾಗಿ ಹೆಸರು ಗಳಿಸುತ್ತಿದ್ದಾರೆ. ಒಟ್ಟಿನಲ್ಲಿ ಹೆಗಡೆಯವರದ್ದು ವಿಭಿನ್ನವೆನಿಸುವ ಸಮೃದ್ಧ ಕಲಾಕುಟುಂಬ. ಸಂತೃಪ್ತಿಯ ಸಂಸಾರ ಸರಿಗಮ.

ಅನುಭವಿ ಭಾಗವತ ಹೆಗಡೆಯವರು ಸ್ಥಳೀಯ ಸಂಘ-ಸಂಸ್ಥೆಗಳ ಗೌರವ ಪೂರ್ವಕ ಮಾನ-ಸಂಮಾನಗಳನ್ನು ಪಡೆದಿರುತ್ತಾರೆ.



## ರಾಮ ಸತ್ಯನಾರಾಯಣ ಭಂಡಾರಿ

*'ಭೂಸ್ವರ್ಗ ಕೇರಿ', ಅಂಚೆ : ಕರ್ಕಿ, ಹೊನ್ನಾವರ ತಾಲೂಕು,*
*ಕಾರವಾರ ಜಿಲ್ಲೆ–581341 (ಉ.ಕ)*
*ದೂರವಾಣಿ : 08387–236530*

ಯಕ್ಷಗಾನದ ಹಾಗೂ ಮದ್ದಳೆ ವಾದನದೊಂದಿಗೆ ಅವಿಚ್ಛಿನ್ನವಾದ ವಾದನ ವಿಧಾನದ ಮಧುರ ಬಾಂಧವ್ಯವನ್ನಿರಿಸಿಕೊಂಡು ರಂಗನಟನ ಚೈತನ್ಯಶೀಲ ಅಭಿವ್ಯಕ್ತಿಗೆ ಅನುಕೂಲಕರವಾಗುವಂತಹ ಚಂಡೆಯ ಗಂಡು ಧ್ವನಿಯ ಹಿತಕರ ಸಾರಥ್ಯ ಒದಗಿಸುವ ಅನುಭವಿ ಚಂಡೆಗಾರ ರಾಮ ಸತ್ಯನಾರಾಯಣ ಭಂಡಾರಿ.

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಕರ್ಕಿ ಇವರ ಹುಟ್ಟೂರು. ಸತ್ಯನಾರಾಯಣ ಭಂಡಾರಿ–ಪಾರ್ವತಿ ಇವರ ತಂದೆ–ತಾಯಿ. 6–7–1966ರ ರಾಮಭಂಡಾರಿಯವರ ಹುಟ್ಟು.

6ನೇ ತರಗತಿಯವರೆಗೆ ಶಾಲಾವಿದ್ಯಾಭ್ಯಾಸ ಮಾಡಿ 24ನೇ ವಯಸ್ಸಿನಲ್ಲಿ ವೃತ್ತಿರಂಗ ಮುಖರಾದ ರಾಮಭಂಡಾರಿ ಅವರಿಗೆ ಆನುವಂಶೀಯವಾದ ಕಲಾ ಹಿನ್ನೆಲೆಯಿದೆ. ಇವರ ಅಜ್ಜ ಹಾಗೂ ತಂದೆಯವರು ಈ ರಂಗಭೂಮಿಯ ಹೆಸರಾಂತ ಹಿಮ್ಮೇಳ ವಾದನಕರ್ಮಿಗಳಾಗಿದ್ದರು. ಹಾಗಾಗಿ ಕಲೆಯೆಂಬುದು ಇವರಿಗೆ ಎಳವೆಯಲ್ಲಿಯೇ ಸುಪುಷ್ಟವಾಗಿ ಮೈದುಂಬಿಕೊಂಡು ವಾದನ ಪ್ರಾವೀಣ್ಯತೆ ಕೈಗೂಡುವಂತಾಯಿತು.

ತಂದೆಯವರಿಂದಲೇ ಚಂಡೆವಾದನ ಶಿಕ್ಷಣವನ್ನು ಪಡೆದ ಇವರು ಗೋಳಿಗರಡಿ, ಬಚ್ಚಗಾರ, ಸೌಕೂರು, ಹಾಲಾಡಿ, ಮಾರಣಕಟ್ಟೆ ಮೇಳಗಳಲ್ಲಿ ಸಾರ್ಥಕ 19 ವರ್ಷಗಳ ರಂಗಕಾಯಕವನ್ನು ಪೂರೈಸಿ ಮಾರಣಕಟ್ಟೆ ಮೇಳದ ಚಂಡೆವಾದಕರಾಗಿ ವೃತ್ತಿರಂಗದಲ್ಲಿ ಮುಂದುವರಿಯುತ್ತಿದ್ದಾರೆ.

ಆವೆಮಣ್ಣಿನಿಂದ ಗಣಪತಿ ಮೂರ್ತಿಯನ್ನು ನಿರ್ಮಿಸುವ ಕಲೆಯೂ ಇವರಿಗೆ ಹಸ್ತಗತವಾಗಿ ಉಪವೃತ್ತಿಯಾಗಿದೆ.

ರಾಮಭಂಡಾರಿಯವರು ರೇಖಾ ಎಂಬುವರನ್ನು ವರಿಸಿ ರತನ್ ಹಾಗೂ ರಮ್ಯ ಎಂಬ ಎರಡು ಮಕ್ಕಳ ತಂದೆಯಾಗಿದ್ದಾರೆ.

ಸ್ಥಳೀಯ ಸಂಘ–ಸಂಸ್ಥೆಗಳ ಗೌರವ ಪೂರ್ವಕ ಮಾನ–ಸಂಮಾನಗಳು ಇವರಿಗೆ ದೊರಕಿರುತ್ತವೆ.



## ಲಕ್ಷ್ಮಣ ಕಾಂಚನ್

*ಹೊಸಾಳ ಗ್ರಾಮ, ಅಂಚೆ : ಬಾರ್ಕೂರು,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9242943652*

ಯಕ್ಷಗಾನ ಧಾರ್ಮಿಕತೆಗೆ ಧಕ್ಕೆಯಾಗದಂತೆ ಪೌರಾಣಿಕ ಪಾತ್ರಪುಷ್ಪಗಳನ್ನು ರಂಗಸ್ಥಳದಲ್ಲಿ ಅರಳಿಸಿ ಸಾಂಪ್ರದಾಯಿಕ ಸೌರಭ ಹರಿಸುವ ಅನುಭವಿ ಕಲಾವಿದ ಲಕ್ಷ್ಮಣ ಕಾಂಚನ್.

ಉಡುಪಿ ತಾಲೂಕಿನ ಕೋಟ-ಮಣೂರು ಎಂಬಲ್ಲಿ 1-4-1950ರಲ್ಲಿ ಜನಿಸಿದ ಕಾಂಚನ್, ಕುಷ್ಟ ಬಂಗೇರ-ಚಂದು ಮೊಗೇರ್ತಿ ದಂಪತಿಯ ಪುತ್ರ.

ಹಿರಿಯರು ಹೇಳಿಕೊಂಡ 'ಗೆಜ್ಜೆಸೇವೆ' ಎಂಬ ಹರಕೆಯೇ ಬಣ್ಣದ ಬದುಕಿಗೆ ಹೆಜ್ಜೆ ಹಾಕುವುದಕ್ಕೆ ಇವರಿಗೆ ಪ್ರೇರಣೆ ನೀಡಿತು.

7ನೇ ತರಗತಿಗೇ ಕಲಿಕೆಗೆ ವಿದಾಯ ಹೇಳಿ, 15ನೇ ವಯಸ್ಸಿನಲ್ಲೇ ರಂಗಮಂಚವೇರಿದ ಲಕ್ಷ್ಮಣ್ ಮತ್ತೆ ಹಿಂದಿರುಗಿ ಕಾಣಲಿಲ್ಲ.

ದಶಾವತಾರಿ ಗುರು ವೀರಭದ್ರನಾಯಕ್ ಹಾಗೂ ಮೊಳಹಳ್ಳಿ ಹೆರಿಯ ನಾಯ್ಕರ ಗುರುತನದಲ್ಲಿ ಕಲಾಶಿಕ್ಷಣ ಸಂಪನ್ನರಾದ ಇವರು ಸಮರ್ಥ ವೇಷಧಾರಿಯಾಗಿ ಗುರುತಿಸಿಕೊಂಡರು.

ಅಮೃತೇಶ್ವರಿ-8, ಸಾಲಿಗ್ರಾಮ-1, ಕಮಲಶಿಲೆ-6, ಸೌಕೂರು-2, ಪೆರ್ಡೂರು-3, ಗೋಳಿಗರಡಿ-6, ಮೇಗರವಳ್ಳಿ-3, ಹಾಲಾಡಿ-4, ಮಡಾಮಕ್ಕಿ-1, ಬಗ್ವಾಡಿ-3, ಸಿಗಂಧೂರು-8.... ಹೀಗೆ 45 ವರ್ಷಗಳ ಕಲಾಕೃಷಿ ಕಾಂಚನ್ ಅವರದ್ದಾಗಿದೆ.

ಪೌರಾಣಿಕ ಪ್ರಸಂಗಗಳ ಪುರುಷಪಾತ್ರಗಳನ್ನು ನಿರ್ವಹಿಸುವ ಲಕ್ಷ್ಮಣ್ ಅವರು ಎಲ್ಲಾ ನಡೆಯ ಪಾತ್ರಗಳನ್ನೂ ಸರ್ವಸಮರ್ಥವಾಗಿ ನಿರ್ವಹಿಸಬಲ್ಲರು. ರಾಜವೇಷವಿರಲಿ, ಮುಂಡಾಸಿನ ವೇಷವಿರಲಿ, ಹಾಸ್ಯವಿರಲಿ... ಹೀಗೆ ಎಲ್ಲದರಲ್ಲೂ ಅವರ ಕಲಾಪ್ರತಿಭೆ ಗಮನೀಯವಾಗುತ್ತದೆ.

ಜಾಂಬವ, ವೀರಮಣಿ, ಅರ್ಜುನ, ಲವ, ಕುಶ, ಜಮದಗ್ನಿ, ಸಾಲ್ವ, ಕೌರವ, ಕಮಲಭೂಪ, ಶಂತನು... ಮೊದಲಾದ ಪಾತ್ರಗಳಿಗೆ ಅವರಿಂದ ಸೂಕ್ತ ರಂಗನ್ಯಾಯ ದೊರಕಿದೆ.

ಲಕ್ಷ್ಮಣ್ ಕಾಂಚನ್ ಅವರ ಸಹಧರ್ಮಿಣಿ ಲಕ್ಷ್ಮಿ. ಪ್ರವೀಣ ಹಾಗೂ ಪ್ರತಿಮಾ ಇವರ ಉಭಯ ಮಕ್ಕಳು.

ಹಿರಿಯ ಕಲಾವಿದ ಲಕ್ಷ್ಮಣ್ ಕಾಂಚನ್, ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್, ಬಗ್ವಾಡಿ ಮೊಗವೀರ ಸಂಘ ಹಾಗೂ ಅರಾಟೆ ಯಕ್ಷ ಮಂಡಳಿಯ ವತಿಯಿಂದ ಗೌರವ-ಸಂಮಾನಗಳನ್ನು ಪಡೆದಿರುತ್ತಾರೆ.



## ಲಕ್ಷ್ಮೀನಾರಾಯಣ ಶೆಟ್ಟಿ, ಎಡಮಕ್ಕಿ

*ಅಂಚೆ : ಶಂಕರನಾರಾಯಣ, ಶಂಕರನಾರಾಯಣ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9845749626*

ಬಡಗುತಿಟ್ಟಿನ ಸಮರ್ಥ ಪುಂಡುವೇಷಧಾರಿಯಾಗಿ ಕಲಾಸಾಧನೆಯ ಪಥದಲ್ಲಿರುವ ಯುವ ಕಲಾವಿದ ಲಕ್ಷ್ಮೀನಾರಾಯಣ ಶೆಟ್ಟಿ ಎಡಮಕ್ಕಿ.

ಉತ್ತರಕನ್ನಡದ ಕಡತೋಕಾ ಎಂಬಲ್ಲಿ 1975ರಲ್ಲಿ ಜನಿಸಿದ ಲಕ್ಷ್ಮೀನಾರಾಯಣ ಶೆಟ್ಟಿ ಅವರು ಶಾಂತಾರಾಮ ಶೆಟ್ಟಿ-ಸೀತಮ್ಮ ಶೆಡ್ತಿ ದಂಪತಿಯ ಸುಪುತ್ರ.

ಗೋಕರ್ಣದ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿವರೆಗೆ ಅಕ್ಷರಾಭ್ಯಾಸ ನಡೆಸಿ, ತನ್ನ 12ರ ಹರೆಯದಲ್ಲೇ ಬಣ್ಣ-ಭೂಷಣದ ಬೆಡಗಿಗೆ ಮನಸೋತ ಇವರು ಕೆರೆಮನೆ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ಹಿರಿಯ ಚಂಡೆಗಾರ ಕೃಷ್ಣಯಾಜಿ ಇಡಗುಂಜಿ ಅವರಲ್ಲಿ ಯಕ್ಷಗಾನ ರಂಗಶಿಕ್ಷಣ ಪಡೆದು ಯಕ್ಷಗಾನ ರಂಗಲೋಕಕ್ಕೆ ಉತ್ಸಾಹದಿಂದ ಹೆಜ್ಜೆ ಹಾಕಿದರು.

ಹಾಸ್ಯ ಕಲಾವಿದ ಶೀರೂರು ಅಣ್ಣಪ್ಪ ಅವರ ಪ್ರೇರಣೆ-ಪ್ರೋತ್ಸಾಹದೊಂದಿಗೆ ವೃತ್ತಿರಂಗವನ್ನು ಪ್ರವೇಶಿಸಿದ ಶೆಟ್ಟರು ಶಿರಸಿ-2, ಸೌಕೂರು-4, ಮಂದಾರ್ತಿ-3, ಅಮೃತೇಶ್ವರಿ-4, ಸಾಲಿಗ್ರಾಮ-2, ರಂಜದಕಟ್ಟೆ-4, ಹಾಲಾಡಿ-2, ಕಮಲಶಿಲೆ-3... ಮೊದಲಾದ ಮೇಳಗಳಲ್ಲಿ 23 ವರ್ಷಗಳ ಕಲಾವ್ಯವಸಾಯ ಪೂರೈಸಿ ಪ್ರಸ್ತುತ ಕಮಲಶಿಲೆ ಮೇಳದ ಮೂರನೇ ವೇಷಧಾರಿಯಾಗಿ ರಂಗದುಡಿಮೆಯಲ್ಲಿದ್ದಾರೆ.

ಪಾದರಸ ಚಲನೆಯ ರಂಗನಡೆ, ಲವಲವಿಕೆಯ ನೃತ್ಯವೈಖರಿ, ಹಿತ-ಮಿತವಾದ ಶೃತಿಬದ್ಧ ವಾಗ್ಮಿತೆ, ದಣಿವರಿಯದ ಪಾತ್ರ ನಿರೂಪಣಾ ಕೌಶಲದಿಂದ ಕಂಗೊಳಿಸುವ ಲಕ್ಷ್ಮೀನಾರಾಯಣ ಶೆಟ್ಟಿ ಅವರು ಕುಶ-ಲವ, ಬಭ್ರುವಾಹನ, ಅಭಿಮನ್ಯು, ವೃಷಸೇನ, ಶ್ರೀಕೃಷ್ಣ, ಶಿಶುಪಾಲ, ಕಮಲಧ್ವಜ, ಚಂಡ, ಮುಂಡ... ಮೊದಲಾದ ಭೂಮಿಕೆಗಳಿಗೆ ಜೀವತುಂಬಿದ್ದಾರೆ.

ದೂರದ ಬೆಂಗಳೂರು, ಮುಂಬೈಯಲ್ಲೂ ಕುಣಿದು ಕಲಾರಸಿಕರ ಮನವನ್ನು ತಣಿಸಿದ ಶೆಟ್ಟರು ಉತ್ಸಾಹಪೂರ್ಣ ಕಲಾಭಿವ್ಯಕ್ತಿಯಲ್ಲಿ ರಂಗನೆಲಕ್ಕೆ ಹೊಸ ಕಾವು ಕಲ್ಪಿಸಿಕೊಡುವಲ್ಲಿ ಗೆಲುವು ಕಾಣುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಉಜ್ವಲ ಪ್ರತಿಭೆಯನ್ನು ಗುರುತಿಸಿ ಗೌರವಿಸಿವೆ.



## ವಸಂತ ಭಟ್, ಹಳುವಳ್ಳಿ

*ಅಂಚೆ : ಹಳುವಳ್ಳಿ, ಮಾವಿನಕೆರೆ ಗ್ರಾಮ,*
*ಮೂಡಿಗೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 9449347528*

ಉತ್ಸಾಹಪೂರ್ಣ ರಂಗದುಡಿಮೆಯಲ್ಲಿ ಆಖ್ಯಾನಗಳ ರಾಜವೇಷಗಳಿಗೆ ಸತ್ವಪೂರ್ಣ ಮೆರುಗು ನೀಡುವ ಪ್ರತಿಭಾವಂತ ಕಲಾವಿದ ವಸಂತ ಭಟ್ ಹಳುವಳ್ಳಿ.

ಚಿಕ್ಕಮಗಳೂರು ಜಿಲ್ಲೆಯ ಮಾವಿನಕೆರೆ ಗ್ರಾಮದ ಹಳುವಳ್ಳಿ ಎಂಬ ಹಳ್ಳಿಯಲ್ಲಿ ಕೃಷ್ಣಯ್ಯ-ಗಿರಿಜಮ್ಮ ದಂಪತಿಯ ಸುಪುತ್ರನಾಗಿ ಜನಿಸಿದ ಇವರು ಪ್ರಸ್ತುತ ಮೂವತ್ತೆಂಟರ ಹರೆಯದಲ್ಲಿದ್ದಾರೆ.

ನಾಲ್ಕನೆ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ ವಸಂತ ಭಟ್ ಅವರು ತನ್ನ 20ನೇ ವರ್ಷದಲ್ಲಿ ಕಲಾಕ್ಷೇತ್ರಕ್ಕೆ ಕಾಲಿರಿಸಿದರು.

ಇವರ ತಂದೆಯವರು ಯಕ್ಷಗಾನ ಕಲಾವಿದರಾದುದರಿಂದ ಕಲೆಯ ನೆಂಟತನ ಎನ್ನುವುದು ಇವರಿಗೆ ಎಳವೆಯಲ್ಲಿಯೇ ಬದುಕಿನೊಂದಿಗೆ ಅಂಟಿಕೊಂಡಿತು.

ಕಿಗ್ಗ ಶ್ರೀಕಂಠ ಭಟ್ಟರ ಗುರುತನ ಹಾಗೂ ಮಾರ್ಗದರ್ಶನದೊಂದಿಗೆ ವೃತ್ತಿರಂಗವನ್ನು ಪ್ರವೇಶಿಸಿದ ವಸಂತ ಭಟ್ಟರು ಅಮೃತೇಶ್ವರಿ ಮೇಳದಲ್ಲಿ 4 ವರ್ಷ, ಬಾಳೆಹೊಳೆ ಮೇಳದಲ್ಲಿ 8 ವರ್ಷ, ಗುತ್ಯಮ್ಮ ಮೇಳದಲ್ಲಿ 5 ವರ್ಷ... ಕಲಾಕೃಷಿ ನಡೆಸಿದ್ದಾರೆ.

ದೇವೇಂದ್ರ, ಶತ್ರುಘ್ನ, ಕಮಲಭೂಪ, ಹಂಸಧ್ವಜ, ಬಲರಾಮ... ಮೊದಲಾದ ರಾಜವೇಷಗಳು ಇವರಿಗೆ ಉತ್ತಮ ಹೆಸರು ನೀಡಿವೆ.

ವಸಂತಭಟ್ಟರ ಪೌರಾಣಿಕ ಅನುಭವವೂ ಸಮೃದ್ಧವಾಗಿದ್ದು ಪಾತ್ರೋಚಿತ ರಂಗವ್ಯವಹಾರದಲ್ಲಿ ಇವರು ಸಹೃದಯ ಪ್ರೇಕ್ಷಕರಿಗೆ ಹತ್ತಿರವಾಗಿದ್ದಾರೆ.

ವಸಂತಭಟ್ಟರ ಸಹಧರ್ಮಿಣಿ ವಾಣಿ. ಅನ್ನಪೂರ್ಣ ಹಾಗೂ ಶ್ರೀಲಕ್ಷ್ಮೀ ಇವರ ಉಭಯ ಪುತ್ರಿಯರು.

ಸ್ಥಳೀಯ ಸಂಘ-ಸಂಸ್ಥೆಗಳು ಭಟ್ಟರ ಪ್ರತಿಭೆಯನ್ನು ಗುರುತಿಸಿ ಗೌರವಿಸಿವೆ.



# ವಾಸುದೇವ ಸಾಮಗ ಎಂ.ಆರ್.

*ಬಾಳೆಬೆಟ್ಟು, ಮಣೂರು,*
*ಉಡುಪಿ ತಾಲೂಕು*
*ಸ್ಥಿರ : 0820–2001537 ಚರ : 9448624370*

ಯಕ್ಷಗಾನ ರಂಗಭೂಮಿಯ 'ಕೂಟ' ಕ್ಷೇತ್ರದ ಅಗ್ರಪಂಕ್ತಿಯ ಅರ್ಥಧಾರಿಯಾಗಿ, 'ಆಟ' ದಲ್ಲೊಬ್ಬ ಸರ್ವಶ್ರೇಷ್ಠ ವೇಷಧಾರಿಯಾಗಿ ಉಭಯ ತಿಟ್ಟಿನ ಸಾಧಕ ಕಲಾವಿದನಾಗಿ ಗುರುತಿಸಿಕೊಂಡವರು ಎಂ.ಆರ್. ವಾಸುದೇವ ಸಾಮಗ.

ಕೊಡವೂರು ಗ್ರಾಮದ ಮೂಡುಬೆಟ್ಟು ಎಂಬಲ್ಲಿ 15–6–1948ರಲ್ಲಿ ಜನಿಸಿದ ವಾಸುದೇವ ಸಾಮಗರು 'ಮೌಖಿಕ'ದ ಮಹಾಕವಿ ಮಲ್ಪೆ ಹರಿದಾಸ ರಾಮದಾಸ ಸಾಮಗ ಹಾಗೂ ನಾಗರತ್ನಾ ಆರ್. ಸಾಮಗ ದಂಪತಿಯ ಸುಪುತ್ರ.

ಮಲ್ಪೆಯ ಕಲಾವಂತ ಮನೆತನದ ಉಜ್ವಲ ಪ್ರತಿಭೆಯಾದ ವಾಸುದೇವ ಸಾಮಗರು ಪಿ.ಯು.ಸಿ. ವ್ಯಾಸಂಗದ ಬಳಿಕ ಅಂದರೆ ತನ್ನ ಹತ್ತೊಂಬತ್ತರ ಹರೆಯದಲ್ಲೇ ಬಣ್ಣದ ಬದುಕು ಕಂಡವರು.

ಹಿಮ್ಮೇಳದ ಹೊರತಾಗಿ ಮುಮ್ಮೇಳದ ಅನರ್ಘ್ಯರತ್ನ ಎಂಬಂತೆ ಕಂಗೊಳಿಸುವ ಸಾಮಗರು ಯಕ್ಷಗಾನ ತಾಳಮದ್ದಳೆಯ ಅರ್ಥಗಾರಿಕೆಗೆ ವಿಶಿಷ್ಟ ಆಯಾಮ ನೀಡಿದ ಅಪರೂಪದ ಕಲಾವಿದ್ವಾಂಸರು.

ಸಾಮಗರ ತಂದೆ ರಾಮದಾಸ ಸಾಮಗರು ಹಾಗೂ ದೊಡ್ಡಪ್ಪ ದೊಡ್ಡ ಸಾಮಗರು (ಮಲ್ಪೆ ಶಂಕರನಾರಾಯಣ ಸಾಮಗ) ಯಕ್ಷಲೋಕದ ಜೀವಂತ ದಂತಕತೆಗಳಾಗಿ ಮೇರುಕೀರ್ತಿಯನ್ನು ಪಡೆದ ವಿಚಾರ ಸರ್ವವಿಧಿತ. ಅಂತಹ ಕಲಾವಂತರ ಬಲಿಷ್ಠ ಹಿನ್ನೆಲೆ ವಾಸುದೇವ ಸಾಮಗರ ರಂಗಜೀವನದ ಮೇಲೆ ಪ್ರಭಾವ ಬೀರಿತಾದರೂ ವೃತ್ತಿರಂಗದಲ್ಲಿ ಇವರು 'ಕೇಳಿ ತಿಳಿ–ನೋಡಿ ಕಲಿ' ಎಂಬುದನ್ನೇ ಕಲಾವಿದ್ಯಾರ್ಜನೆಯ ಸೂತ್ರವಾಗಿಸಿಕೊಂಡು, 'ಅರಿವೇ ಗುರು' ಎಂಬುದನ್ನು ಕಂಡುಕೊಂಡು ಎತ್ತರದ ಪ್ರತಿಭೆಯಾಗಿ ಮೆರೆದವರು.

ಸಾಮಗರ ಮಾತು ಸ್ಫುಟ, ಸ್ಪಷ್ಟ, ವ್ಯಾಕರಣ ನಿಷ್ಠ. ಸರಳವಾದ ವಾಕ್ಯಬಂಧ ಅವರ ವಿಶೇಷತೆ. ಪ್ರಸಂಗ, ಪಾತ್ರಗಳನ್ನು ತಲಸ್ಪರ್ಶಿ ಅಧ್ಯಯನದ ಮೂಲಕ ತನ್ನದೇ ಶೈಲೀಕೃತ ವರ್ಚಸ್ಸಿನಲ್ಲಿ ಪ್ರತಿಷ್ಠಾಪಿಸುವ ಪ್ರಭುತ್ವ, ಹಿರಿ–ಕಿರಿಯ ಕಲಾವಿದರೊಂದಿಗೆ ಹೊಂದಿಕೊಂಡು ಹೋಗುವ ದೊಡ್ಡಗುಣ ಅವರಲ್ಲಿ ಎದ್ದು ಕಾಣುತ್ತದೆ.

ಅಮೃತೇಶ್ವರಿ, ಪೆರ್ಡೂರು, ಧರ್ಮಸ್ಥಳ, ಕದ್ರಿ, ಸಾಲಿಗ್ರಾಮ, ಶಿರಸಿ, ಸುರತ್ಕಲ್... ಮೊದಲಾದ ತೆಂಕು–ಬಡಗಿನ ಮೇಳಗಳಲ್ಲಿ ಸುಮಾರು 38 ವರ್ಷಗಳ ಸುದೀರ್ಘ ಕಲಾವ್ಯವಸಾಯ ಮಾಡಿದ ವಾಸುದೇವ ಸಾಮಗರು ವೃತ್ತಿಮೇಳಗಳ ಸಂಚಾಲಕರಾಗಿಯೂ ದುಡಿದವರು. ಪ್ರಕೃತ ವ್ಯವಸಾಯಿ ಮೇಳಗಳಿಂದ ದೂರವಾಗಿ ಸ್ವಯಂ ಸ್ಥಾಪಕತ್ವದ 'ಸಂ.ಯ.ಮಂ' ಎನ್ನುವ ತಾಳಮದ್ದಳೆ ತಂಡದೊಂದಿಗೆ ರಂಗಸೇವೆಯಲ್ಲಿದ್ದಾರೆ.

ಸಾಮಗರು ನಿರ್ವಹಿಸದ ಪಾತ್ರಗಳೇ ಇಲ್ಲವೇನೋ. ಅವರ ಅದ್ಭುತ ಕಲಾಪ್ರತಿಭೆಯಲ್ಲಿ ಅರಳಿದ ಭೂಮಿಕೆಗಳೆಲ್ಲವೂ ಸಾಟಿಯಿಲ್ಲದಂತೆ ಮೆರೆದಿವೆ. ಶನೀಶ್ವರ ಮಹಾತ್ಮೆಯ ವಿಕ್ರಮಾದಿತ್ಯನಿರಲಿ, ಮಧುರಾ ಮಹೀಂದ್ರದ ಉಗ್ರಸೇನನಿರಲಿ, ಶ್ರೀಕೃಷ್ಣನಿರಲಿ, ಕೌರವನಿರಲಿ, ರಾಮನಿರಲಿ, ಅರ್ಜುನನಿರಲಿ, ಋತುಪರ್ಣನಿರಲಿ... ಹೀಗೆ ಯಾವುದೇ ಪಾತ್ರಗಳು ಇಂದಿಗೂ ರಂಗನೆಲದಲ್ಲಿ ಜೀವಂತ ಶಿಲ್ಪಗಳಾಗಿ ಕಂಗೊಳಿಸುತ್ತಿವೆ. ಅವು ಯಾರದ್ದೋ ನಕಲಲ್ಲ. ಯಾವುದೋ ಛಾಯಾರೂಪಗಳಲ್ಲ.

ಸೋಲರಿಯದ ತರ್ಕ ಕೌಶಲ, ಸಮಕಾಲೀನ ವಾಸ್ತವತೆಯನ್ನು ಔಚಿತ್ಯಪೂರ್ಣವಾಗಿ ಬಳಸುವ ವಾಗ್ಮಿತೆ ಹಾಗೂ ಅಸಾಧಾರಣ ಆಶುಪಟುತ್ವ ಕಲಾಪ್ರಿಯರನ್ನು ಮೋಡಿಮಾಡುವಲ್ಲಿ ಗೆಲುವು ಕಂಡಿದೆ. ಅವರ ಪ್ರತ್ಯುತ್ಪನ್ನ ಮತಿತ್ವ ವರ್ಣಿಸಲಸದಳ. ಅವರು ಅರ್ಥಗಾರಿಕೆಯಲ್ಲಿ ಕೆದಕುವುದಿಲ್ಲ. ಅವರನ್ನು ಕೆದಕಿದರೆ 'ಬ್ರಹ್ಮಕಪಾಲ' ಹಿಡಿದಂತೆ.

ಮುಮ್ಮೇಳದ ಸರ್ವಾಂಗೀಣ ಪ್ರತಿಭೆಯಾಗಿ, ತಾಳಮದ್ದಳೆಯ ಮಾತಿನ ಮಾಂತ್ರಿಕನಾಗಿ, ವೃತ್ತಿಮೇಳಗಳ ಯಜಮಾನರಾಗಿ ಅನೇಕ ಹಿರಿ–ಕಿರಿಯ ಕಲಾವಿದರ ಮಾರ್ಗದೀಪವಾಗಿ ಬೆಳಗಿದ ವಾಸುದೇವ ಸಾಮಗರು ಸರಕಾರಿ ನೆಲೆಯಲ್ಲಿ ಯಾವುದೇ ಮಾನ–ಸಂಮಾನ ಪಡೆಯದೆ, ಅಭಿಮಾನಿಗಳ ಕಟ್ಟಕ್ಕರೆಯ ಅಭಿಮಾನದ ಮೂರ್ತರೂಪವಾಗಿ ಬೆಳೆದವರು.

ವಾಸುದೇವ ಸಾಮಗರ ಸಹಧರ್ಮಿಣಿ ಮೀರಾ ವಿ. ಸಾಮಗ, ಓರ್ವ ಸುಪುತ್ರ ಪ್ರದೀಪ ವಿ. ಸಾಮಗ. ಚಿಕ್ಕ ಚೊಕ್ಕ ಸಂತೃಪ್ತ ಸಂಸಾರ.

ಶ್ರೀಯುತರು ಕಾಲಮಿತಿಯ ತಾಳಮದ್ದಳೆಯ ಎಪ್ಪತ್ತು ಪೌರಾಣಿಕ ಪ್ರಸಂಗಗಳ ಸಂಚಯವನ್ನು ಪ್ರಕಟಿಸಿರುತ್ತಾರೆ.



# ವೀರಭದ್ರ ಗೌಡ

*ತಡಗಳಲೆ, ಅಂಚೆ : ತಡಗಳಲೆ*
*ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9663759024*

ಸುಲಲಿತ ನೃತ್ಯಾಭಿನಯ ಕೌಶಲದೊಂದಿಗೆ ನಿರ್ವಹಣಾ ಭೂಮಿಕೆಗಳನ್ನು ರಂಗಮಂಚದಲ್ಲಿ ಮೆರೆಸುವ ಉತ್ಸಾಹಿ ಸ್ತ್ರೀವೇಷಧಾರಿ ವೀರಭದ್ರ ಗೌಡ.

ಶಿವಮೊಗ್ಗ ಜಿಲ್ಲೆಯ ಹಾರೆಕೊಪ್ಪ ಇವರ ಹುಟ್ಟೂರು. ದುರ್ಗಾ ಗೌಡ–ಸುಬ್ಬಮ್ಮ ದಂಪತಿಯ ಸುಪುತ್ರರಾದ ವೀರಭದ್ರ ಗೌಡರಿಗೆ ಈಗ ಮೂವತ್ತೇಳು ವರ್ಷ ಪ್ರಾಯ.

7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ವೀರಭದ್ರ ಗೌಡರು 22ನೇ ವಯಸ್ಸಿನಲ್ಲಿ ಕಲಾಜೀವನಕ್ಕೆ ಮನಮಾಡಿದರು.

ಎಳವೆಯಲ್ಲಿಯೇ ಯಕ್ಷಕಲೆಯ ಕುರಿತ ಅದಮ್ಯ ಆಸಕ್ತಿ ಹೊಂದಿದ್ದ ಇವರು ಈಶ್ವರ ಗೌಡ ಎಂಬವರಲ್ಲಿ ಯಕ್ಷ ಶಿಕ್ಷಣ ಪಡೆದು ವೃತ್ತಿರಂಗವನ್ನು ಪ್ರವೇಶಿಸಿದರು.

ಮಾರಣಕಟ್ಟೆ–5, ಗುಂಡಬಾಳ–2, ನಾಗರಕೊಡಿಗೆ–2, ಅಮೃತೇಶ್ವರಿ–5.... ಹೀಗೆ 14 ವರ್ಷಗಳ ಕಲಾವ್ಯವಸಾಯ ಇವರದ್ದಾಗಿದೆ.

ಪೌರಾಣಿಕ ಪ್ರಸಂಗಗಳ ಸಹಸ್ತ್ರೀವೇಷಗಳನ್ನು ಸರ್ವಾಂಗ ಸುಮಧುರವಾಗಿ ರಂಗಭೂಮಿಯಲ್ಲಿ ದರ್ಶಿಸುವ ವೀರಭದ್ರ ಗೌಡರು ಸಮಕಾಲೀನ ಯಕ್ಷಗಾನ ರಂಗದ ಸೃಜನಾತ್ಮಕ ರಂಗವೈಖರಿಯಲ್ಲಿ ವಿಜೃಂಭಿಸಿ ಕಲಾರಸಿಕರ ಮನ ಮುದಗೊಳಿಸುವವರು.

ಸುಭದ್ರೆ, ಮಾಲಿನಿ, ಮೋಹಿನಿ, ಪಾರ್ವತಿ, ಪದ್ಮಗಂಧಿನಿ, ಶಚಿ, ಕುಂತಿ, ಮಾದ್ರಿ, ಶಾರದೆ, ರಂಭೆ... ಮೊದಲಾದ ಪುರಾಣ ಸ್ತ್ರೀಪಾತ್ರಗಳಿಗೆ ಕಲಾವಂತಿಕೆಯ ಸುಂದರ ಸ್ವರೂಪ ನೀಡಿದ ಗೌಡರು ಪ್ರಸ್ತುತ ಮಾರಣಕಟ್ಟೆ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ವೀರಭದ್ರಗೌಡರು ಮಹಾಲಕ್ಷ್ಮೀ ಎಂಬವರನ್ನು ವರಿಸಿ ಗೃಹಸ್ಥ ಜೀವನ ಸಾಗಿಸುತ್ತಿದ್ದು ಇವರಿಗೆ ಯಕ್ಷಕಲಾ ಸೇವೆಯೇ ಬದುಕಿನ ಬಂಡವಾಳವಾಗಿದೆ.

ಸ್ಥಳೀಯ ಸಂಘ–ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



# ವಿಠ್ಠಲ ಕುಲಾಲ್ ಚೋರಾಡಿ

*ವಿಳಾಸ : ಆವರ್ಸೆ, ಉಡುಪಿ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 9945170813*

ನಡುಬಡಗಿನ ಶುದ್ಧ ನಡೆಯಲ್ಲಿ ಸಾಂಪ್ರದಾಯಿಕ ರಂಗಬದ್ಧತೆಯನ್ನು ಉಳುಹಿಕೊಂಡ ಅನನ್ಯ ಅನುಭವದ ಪ್ರಬುದ್ಧ ಕಲಾವಿದ ಚೋರಾಡಿ ವಿಠ್ಠಲ ಕುಲಾಲ್.

ಉಡುಪಿ ತಾಲೂಕಿನ ಚೋರಾಡಿ ಇವರ ಹುಟ್ಟೂರು. 8–10–1961ರಲ್ಲಿ ಜನನ. ತಂದೆ–ಅನಂತ ಕುಲಾಲ್, ತಾಯಿ ತುಂಗಾ.

ಎಂಟನೇ ತರಗತಿಯ ಬಳಿಕ ಹದಿನಾರರ ಹರೆಯದಲ್ಲೇ ಯಕ್ಷಬದುಕಿನ ನೆಂಟತನ ಬಯಸಿದ ವಿಠಲ ಕುಲಾಲ್ ಚೋರಾಡಿ ಸದಾಶಿವ ಹೆಗ್ಡೆಯವರ ಪ್ರೇರಣೆ–ಪ್ರೋತ್ಸಾಹದಲ್ಲಿ ರಂಗವೇರಿದವರು.

ವೀರಭದ್ರನಾಯಕ್ ಹಾಗೂ ದಾಮೋದರ ಉಪ್ಪೂರ ಅವರ ಶಿಷ್ಯನಾಗಿ ಶಾಸ್ತ್ರೋಕ್ತ ಯಕ್ಷ ಶಿಕ್ಷಣವನ್ನು ಪಡೆದ ವಿಠಲಕುಲಾಲ್, ವೃತ್ತಿ ಮೇಳಗಳಲ್ಲಿ ಪುರುಷವೇಷಧಾರಿಯಾಗಿ ಜನಪ್ರಿಯತೆ ಗಳಿಸಿದವರು.

ಅಮೃತೇಶ್ವರಿ–5. ಕಮಲಶಿಲೆ–1, ಪೆರ್ಡೂರು–1, ಗೋಳಿಗರಡಿ–1, ಹಾಲಾಡಿ–1, ಮೂಲ್ಕಿ–1, ಶಿರಸಿ–1, ಮಂದಾರ್ತಿ ಮೇಳದಲ್ಲಿ–21... ಹೀಗೆ 32 ವರ್ಷಗಳ ಸುದೀರ್ಘ ಕಲಾತಿರುಗಾಟದಲ್ಲಿ ಸಾರ್ಥಕ್ಯ ಕಂಡ ವಿಠಲ ಕುಲಾಲ್ ಪ್ರಸ್ತುತ ಅಮೃತೇಶ್ವರಿ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಆಕರ್ಷಕ ವೇಷಗಾರಿಕೆ, ಶೃತಿ ಸುಭಗ–ಸುಲಲಿತ ಅರ್ಥಗಾರಿಕೆ, ಲಲಿತ–ಮಧುರ ಹೆಜ್ಜೆಗಾರಿಕೆ ಹಾಗೂ ಅಪಾರ ಪ್ರಸಂಗ ಜ್ಞಾನ ವಿಠ್ಠಲ ಕುಲಾಲರಲ್ಲಿ ಗುರುತಿಸಬಹುದಾಗಿದೆ.

ಸೌಮ್ಯ, ಸಾತ್ವಿಕ ಸ್ವಭಾವದ ಪುರುಷವೇಷಗಳ ನಿರ್ವಹಣೆಯಲ್ಲಿ ವಿಶೇಷ ಕಲಾವಂತಿಕೆಯನ್ನು ಹೊಂದಿದ ವಿಠ್ಠಲ ಕುಲಾಲರು ನಗುಮೊಗದ ಶ್ರೀಕೃಷ್ಣ ಭೂಮಿಕೆಗಳನ್ನು ರಂಗನೆಲದಲ್ಲಿ ಕಲಾಪ್ರತಿಭೆಯಲ್ಲಿ ಪ್ರದರ್ಶಿಸುವ ಪರಿ ನಿಜಕ್ಕೂ ಬಲ್ಲೊಗಸು. ಅಂತೆಯೇ ಶ್ರೀರಾಮ, ರುದ್ರಕೋಪ, ವಿಷ್ಣು, ಬಲರಾಮ... ಮೊದಲಾದ ಪಾತ್ರಗಳಲ್ಲೂ ಇವರ ಅಭಿನಯ ಮನ ಮುಟ್ಟುವಂತಹುದು.

ಪ್ರತಿಭಾನ್ವಿತ ಕಲಾವಿದ ಚೋರಾಡಿ ವಿಠ್ಠಲ ಕುಲಾಲರು ಯಶೋದಾ ಎಂಬುವರನ್ನು ವರಿಸಿ ಲೋಕೇಶ, ಮಹೇಶ ಎಂಬ ಉಭಯ ಗಂಡುಮಕ್ಕಳನ್ನೂ, ಅಕ್ಷತಾ ಎಂಬ ಪುತ್ರಿಯನ್ನೂ ಪಡೆದಿರುತ್ತಾರೆ.

ಅನೇಕ ಸಂಘ–ಸಂಸ್ಥೆಗಳಿಂದ ಇವರಿಗೆ ಸಂಮಾನ–ಗೌರವ ದೊರಕಿರುತ್ತದೆ.



## ವಿಠಲ ನಾಯ್ಕ ಶಂಕರನಾರಾಯಣ

*ಒಡ್ಡನ ಬೇರು ಮನೆ, ಅಂಚೆ : ಶಂಕರನಾರಾಯಣ*
*ಕುಂದಾಪುರ ತಾಲೂಕು*
*ದೂರವಾಣಿ : 9481750296*

ಸುಲಲಿತ ನೃತ್ಯರೇಖೆ, ಸುಸ್ಪಷ್ಟ ಅಭಿನಯ ಕೌಶಲ, ಸುಮಧುರ ಅರ್ಥವೈಭವದೊಂದಿಗೆ ನಿರ್ವಹಣಾ ಭೂಮಿಕೆಗಳಿಗೆ ನ್ಯಾಯಕಲ್ಪಿಸುವ ಯುವ ಸ್ತ್ರೀವೇಷಧಾರಿ ವಿಠಲ ನಾಯ್ಕ ಶಂಕರನಾರಾಯಣ.

ಕುಂದಾಪುರ ತಾಲೂಕಿನ ತೋಟಾಡಿ ಎಂಬ ಹಳ್ಳಿಯೇ ವಿಠಲ ನಾಯ್ಕರ ಹುಟ್ಟೂರು. ಇವರ ತಂದೆ ಅಣ್ಣಪ್ಪ ನಾಯ್ಕ, ತಾಯಿ ಅಕ್ಕಮ್ಮ.

ಬಾಲ್ಯದಿಂದಲೇ ಯಕ್ಷಗಾನ ಕಲೆಯ ಕುರಿತು ಅತೀವ ಆಸಕ್ತಿಯನ್ನು ಹೊಂದಿದ್ದ ವಿಠಲ ನಾಯ್ಕ ಅವರು ತನ್ನ ಶಾಲಾ ಶಿಕ್ಷಣವನ್ನು ಐದಕ್ಕೇ ಸೀಮಿತಗೊಳಿಸಿ ಕಲೆಯನ್ನೇ ಬದುಕಾಗಿಸಿಕೊಂಡರು. ಇವರ ಅಣ್ಣಂದಿರಾದ ಮಂಜುನಾಥ ನಾಯ್ಕ, ಗಣಪತಿ ನಾಯ್ಕ ಹಾಗೂ ಭಾವ ಜಯಂತ ನಾಯ್ಕ ಯಕ್ಷಗಾನ ವೇಷಧಾರಿಗಳು. ಆದುದರಿಂದ ಯಕ್ಷಗಾನ ಕಲೆಯ ಸಂಪರ್ಕ-ಸಂಸರ್ಗ ಇವರಿಗೆ ಸುಲಭಸಾಧ್ಯವಾಯಿತು.

ಹಿರಿಯ ಸ್ತ್ರೀವೇಷಧಾರಿ ಬೆಳಂಜೆ ಜಯಂತ ನಾಯ್ಕರ ಶಿಷ್ಯನಾಗಿ ನೃತ್ಯಾಭಿನಯ ಶಿಕ್ಷಣ, ರಂಗ ಮಾಹಿತಿಯನ್ನು ಪಡೆದು ಯೋಗ್ಯ ಸ್ತ್ರೀವೇಷಧಾರಿಯಾಗಿ ರೂಪುಗೊಂಡ ವಿಠಲ ಅವರಿಗೆ ಹದಿನಾಲ್ಕರ ಹರೆಯದಲ್ಲೇ ಬಣ್ಣದ ರಂಗದ ಸಾಂಗತ್ಯ ದೊರಕಿತು.

ಹಾಲಾಡಿ (1), ಪೆರ್ಡೂರು (2), ಶಿರಸಿ (1), ಗೋಳಿಗರಡಿ (12), ಬಚ್ಚಗಾರು (2), ಕುಮಟಾ (1) ಮಂದಾರ್ತಿ (3)... ಹೀಗೆ 22 ವರ್ಷಗಳ ಕಲಾವ್ಯವಸಾಯ ಇವರದ್ದಾಗಿದ್ದು ಪ್ರಸ್ತುತ ಮಂದಾರ್ತಿ ಮೇಳದಲ್ಲಿ ಸ್ತ್ರೀಪಾತ್ರಧಾರಿಯಾಗಿ ದುಡಿಯುತ್ತಿದ್ದಾರೆ.

ದ್ರೌಪದಿ, ಸುಭದ್ರೆ, ರುಕ್ಮಿಣಿ, ರತಿ, ಚೈದ್ಯರಾಣಿ, ಶರ್ಮಿಷ್ಠೆ ಮೊದಲಾದ ಪೌರಾಣಿಕ ಸ್ತ್ರೀಭೂಮಿಕೆಗಳ ನಿರ್ವಹಣೆ ಇವರಿಗೆ ತೃಪ್ತಿ ನೀಡಿದೆ. ಸ್ತ್ರೀಪಾತ್ರಗಳನ್ನಲ್ಲದೆ ಸಾಂದರ್ಭಿಕವಾಗಿ, ಪ್ರಾಸಂಗಿಕವಾಗಿ ಪುರುಷವೇಷಗಳನ್ನೂ ಇವರು ನಿರ್ವಹಿಸುವುದೂ ಇದೆ.

ಯುವ ಕಲಾವಿದ ವಿಠಲ ನಾಯ್ಕ ಅವರು ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ ಗೌರವ ಸಂಮಾನವನ್ನು ಪಡೆದಿರುತ್ತಾರೆ.



# ವಿಶ್ವನಾಥ ಆಚಾರ್, ತೊಂಬಟ್ಟು

*ಅಂಚೆ : ಹಂಚಿಕಟ್ಟೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9880972383*

ಬಡಗಿನ ಯಕ್ಷಲೋಕದಲ್ಲಿ ಯುವ ಹರೆಯದಲ್ಲೇ ಕಲಾಸಾಧನೆಯ ಸೋಪಾನವೇರುತ್ತಾ ಸಾಗಿ ಪ್ರಖರ ಪ್ರತಿಭೆಯಿಂದ ಪ್ರಸಿದ್ಧ ಪುಂಡುವೇಷಧಾರಿಯಾಗಿ ರೂಪುಗೊಂಡವರು ವಿಶ್ವನಾಥ ಆಚಾರ್ ತೊಂಬಟ್ಟು.

ಕುಂದಾಪುರ ತಾಲೂಕಿನ ತೊಂಬಟ್ಟು ಎಂಬಲ್ಲಿ ಅಣ್ಣಪ್ಪ ಆಚಾರ್-ಗಿರಿಜಾ ದಂಪತಿಯ ಸುಪುತ್ರನಾಗಿ ಜನಿಸಿದ ವಿಶ್ವನಾಥ ಆಚಾರ್ ಇದೀಗ 28ರ ಹರೆಯದಲ್ಲಿದ್ದಾರೆ.

6ನೇ ತರಗತಿಗೆ ಶರಣು ಹೊಡೆದು ತನ್ನ 11ರ ಹರೆಯದಲ್ಲೇ ಬಣ್ಣದ ಬದುಕಿಗೆ ಮುಖ ಮಾಡಿದ ಇವರು ಕಮಲಶಿಲೆ ರಾಮ ದೇವಾಡಿಗ ಅವರಲ್ಲಿ ಕಲಾಶಿಕ್ಷಣವನ್ನು ಪಡೆದು ಸತತ ಪರಿಶ್ರಮ, ಸ್ವಯಂ ಪ್ರತಿಭೆಯಿಂದ ವೃತ್ತಿರಂಗದಲ್ಲಿ ಉಜ್ವಲ ಪ್ರತಿಭೆಯಾಗಿ ಬೆಳಗಿದರು.

ಕಮಲಶಿಲೆ, ಪೆರ್ಡೂರು, ಸಾಲಿಗ್ರಾಮ ಮೇಳಗಳಲ್ಲಿ 16 ವರ್ಷಗಳ ಕಲಾಯಾತ್ರೆ ನಡೆಸಿದ ವಿಶ್ವನಾಥ ಆಚಾರ್ ಪ್ರಸ್ತುತ ಪೆರ್ಡೂರು ಮೇಳದ ಕಲಾವಿದರಾಗಿ ರಂಗಕಾಯಕ ನಿರತರಾಗಿದ್ದಾರೆ.

ವಿಶ್ವನಾಥ ಆಚಾರ್‌ರ ವೇಷಗಾರಿಕೆ ಮನಮೋಹಕ, ಮಾತುಗಾರಿಕೆ ರಸಾತ್ಮಕ, ಚುರುಕಾದ ಅವರ ನೃತ್ಯ ಲಯಾತ್ಮಕ, ಭಾವ ಸ್ಪಷ್ಟ, ಅಭಿನಯ ಉತ್ಕೃಷ್ಟ. ದಣಿವರಿಯದ ದುಡಿಮೆಯಲ್ಲಿ ಸೊಗಯಿಸುವ ಅವರ ಕಲಾಭಿವ್ಯಕ್ತಿ ಗುಣಮಟ್ಟದಿಂದ ಕೂಡಿರುವಂತಾದ್ದು.

ಪೌರಾಣಿಕ ಪ್ರಸಂಗಗಳಲ್ಲಿ ಕಂಡುಬರುವ ಎಲ್ಲಾ ಪ್ರಧಾನ ಪುಂಡುವೇಷಗಳನ್ನು ಯಕ್ಷ ಪ್ರೇಕ್ಷಕರ ಮನಮುಟ್ಟುವಂತೆ ನಿರೂಪಿಸುವ ವಿಶ್ವನಾಥ ಆಚಾರ್ ಹಳೆ-ಹೊಸ ಪ್ರಸಂಗಗಳೆರಡರಲ್ಲೂ ಗೆಲ್ಲುವ ಕುದುರೆ.

ಅವರು ನಿರ್ವಹಿಸುವ ಅಭಿಮನ್ಯು, ಬಭ್ರುವಾಹನ, ವೃಷಸೇನ, ಲವ-ಕುಶ, ಧರ್ಮಾಂಗದ, ಶ್ವೇತಕುಮಾರ, ಕಮಲಧ್ವಜ... ಮೊದಲಾದ ಭೂಮಿಕೆಗಳು ಜೀವಂತವಾಗಿ ರಂಗನೆಲದಲ್ಲಿ ಕಾಣಿಸಿಕೊಂಡು ಸರ್ವ ಕಲಾರಸಿಕರ ಶ್ಲಾಘನೆಗೆ ಪಾತ್ರವಾಗಿದೆ. ದೂರದ ಮುಂಬೈ, ಬೆಂಗಳೂರು ಮೊದಲಾದ ಕಡೆಗಳಲ್ಲೂ ಇವರ ಕಲಾಪ್ರತಿಭೆಯನ್ನು ಕೊಂಡಾಡುವ ಮಂದಿ ಅಸಂಖ್ಯ.

ಸಾಧನೆಯಿಂದ ಕಲಾಮಾತೆಯ ಅನುಗ್ರಹ ಪಡೆದು ತಾರಾಮೌಲ್ಯವನ್ನು ಗಳಿಸಿಕೊಂಡ ಈ ಯುವ ಕಲಾವಿದ ಅನೇಕ ದೃಶ್ಯ, ಶ್ರಾವ್ಯ ಮುದ್ರಿಕೆಗಳಲ್ಲೂ ಮನೆಮಾತಾಗಿದ್ದಾರೆ.

ಇವರ ಸಹಧರ್ಮಿಣಿ ಸೌಮ್ಯ ಆಚಾರ್. ಓರ್ವ ಸುಪುತ್ರಿ ತೇಜಸ್ವಿನಿ. ಸ್ಥಳೀಯ ಸಂಘ-ಸಂಸ್ಥೆಗಳು ಇವರ ಉನ್ನತ ಕಲಾವಂತಿಕೆಗೆ ಶರಣಾಗಿ ಸಂಮಾನ ಸಲ್ಲಿಸಿವೆ.



# ವೆಂಕಟೇಶ ನ್ಯಾರಿ

*ಕಾರ್ತಟ್ಟು, ಚಿತ್ರಪಾಡಿ ಗ್ರಾಮ,*
*ಅಂಚೆ : ಸಾಲಿಗ್ರಾಮ,*
*ಉಡುಪಿ ತಾಲೂಕು-ಜಿಲ್ಲೆ*

ಝೇಂಕರಿಸುವ ಸುಶ್ರಾವ್ಯ ಕಂಠಸಿರಿಯಲ್ಲಿ ಬಡಗುತಿಟ್ಟಿನ ರಂಗಸ್ಥಳವನ್ನು ಗಾನವಿಲಾಸದೊಂದಿಗೆ ಬೆಳಗುವ ಯುವ ಭಾಗವತ ವೆಂಕಟೇಶ ನ್ಯಾರಿ.

ಉಡುಪಿ ಜಿಲ್ಲೆಯ ಚಿತ್ರಪಾಡಿ ಗ್ರಾಮದ ಕಾರ್ತಟ್ಟು ಎಂಬಲ್ಲಿ ಶ್ರೀನಿವಾಸ ನ್ಯಾರಿ-ಪದ್ಮಾವತಿ ದಂಪತಿಯ ಸುಪುತ್ರರಾಗಿ ಜನಿಸಿದ ವೆಂಕಟೇಶ ನ್ಯಾರಿ ಅವರು ಇದೀಗ 35ರ ಹರೆಯದ ಪ್ರತಿಭಾನ್ವಿತ ಕಲಾವಿದ.

ಕಾಳಿಂಗನಾವಡರ ಭಾಗವತಿಕೆಗೆ ಮರುಳಾಗಿ ಯಕ್ಷಗಾನವನದ ಹಾಡುಹಕ್ಕಿಯಾಗುವ ಕನಸು ಕಂಡ ವೆಂಕಟೇಶ್ ನ್ಯಾರಿ ಅವರು ಎಂಟನೇ ತರಗತಿಗೆ ಓದಿಗೆ ಮಂಗಳ ಹಾಡಿ 14ರ ಹರೆಯದಲ್ಲೇ ಯಕ್ಷ ಜೀವನಕ್ಕೆ ಓನಾಮ ಹಾಡಿದರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಮಹಾಬಲ ಕಾರಂತ ಹಾಗೂ ಚಂದ್ರಹಾಸ ಪುರಾಣಿಕ ಅವರಿಂದ ಯಕ್ಷಗಾನ ಶಿಕ್ಷಣವನ್ನು ಪಡೆದ ಇವರು ಸೌಕೂರು, ಸಾಲಿಗ್ರಾಮ ಅಮೃತೇಶ್ವರಿ... ಮೇಳಗಳಲ್ಲಿ ಸುಮಾರು 18 ವರ್ಷ ಕಲಾಕೃಷಿ ನಡೆಸಿದ್ದಾರೆ.

ಪ್ರಸ್ತುತ ನ್ಯಾರಿಯುವರು ವ್ಯಾಪಾರ-ಉದ್ಯಮದಲ್ಲಿದ್ದು ಆಮಂತ್ರಿಸಿದ ವೃತ್ತಿ ಮೇಳಗಳಿಗೆ ಹಾಗೂ ಸಂಘ-ಸಂಸ್ಥೆಗಳಿಗೆ ಭಾಗವತರಾಗಿ ಭಾಗವಹಿಸುತ್ತಾರೆ.

ರಂಗ ತುಂಬುವ ಇಂಪಿನ ಭಾಗವತಿಕೆಯಲ್ಲಿ ಆಟವನ್ನು ಕಳೆಗಟ್ಟಿಸುವ ಗಾನ ಕೌಶಲ ಇವರದ್ದಾಗಿದ್ದು ಎಲ್ಲಾ ಪೌರಾಣಿಕ ಪ್ರಸಂಗಗಳ ನಡೆಯನ್ನು ಗಂಭೀರವಾಗಿ ಅರಿತುಕೊಂಡಿದ್ದಾರೆ. ಕಾಳಿಂಗ ನಾವಡರ ಭಾಗವತಿಕೆ ಹೇಗೆ ವೃತ್ತಿ ಬದುಕಿಗೆ ಪ್ರೇರಣೆಯಾಯಿತೋ, ಅವರ ಗಾನಾನುಕರಣೆಯೂ ಇವರ ಹಾಡಿಕೆಯಲ್ಲಿ ಹಾಸುಹೊಕ್ಕಾಯಿತು ಎಂದೇ ಹೇಳಬಹುದಾಗಿದೆ.

ಸಮರ್ಥ ಭಾಗವತರಾದ ನ್ಯಾರಿಯವರು ಉತ್ತಮ ನೃತ್ಯಪಟುವೂ ಹೌದು. ಪೌರಾಣಿಕ ಪ್ರಸಂಗಗಳ ಕೆಲವು ಸ್ತ್ರೀಭೂಮಿಕೆಗಳನ್ನೂ ಇವರು ನಿರ್ವಹಿಸಿದ್ದಿದೆ. ಉ.ಜಿ.ಪಂ.ಹಿ.ಪ್ರಾ. ಶಾಲೆ ಕೋಟತಟ್ಟು ಇಲ್ಲಿನ ವಿದ್ಯಾರ್ಥಿಗಳಿಗೆ ಸಾಪ್ತಾಹಿಕ ಯಕ್ಷಗಾನ ತರಬೇತಿಯನ್ನು ಶ್ರೀಯುತ ನ್ಯಾರಿಯವರು ನೀಡುತ್ತಿದ್ದಾರೆ.

ವೆಂಕಟೇಶ ನ್ಯಾರಿಯವರ ಸಹಧರ್ಮಿಣಿ ಲಲಿತಾ. ವೀಣಾ ಹಾಗೂ ವಾಣಿ ಇವರ ಉಭಯ ಹೆಣ್ಮಕ್ಕಳು.

ಅನೇಕ ಸಂಘ-ಸಂಸ್ಥೆಗಳಿಂದ ಭಾಗವತ ನ್ಯಾರಿಯವರಿಗೆ ಸಂಮಾನ-ಗೌರವ ದೊರಕಿರುತ್ತದೆ.



## ಶಶಿಧರ ಪಡುಕೋಣೆ

*ಹಾಲಿಮಕ್ಕಿ ಮನೆ-ಪಡುಕೋಣೆ,*
*ಅಂಚೆ : ಹಡವು, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 9980281340*

ವೋಹಕ ರೂಪಿನ ಯುಕ್ಷ ವೋಹನಾಂಗಿಯಾಗಿ ಬಡಗುತಿಟ್ಟಿನ ಯುಕ್ಷ ಲೋಕದಲ್ಲಿ ಸಾಧನಾಪಥದಲ್ಲಿರುವ ಯುವ ಸ್ತ್ರೀವೇಷಧಾರಿ ಶಶಿಧರ ಪಡುಕೋಣೆ.

ಕುಂದಾಪುರ ತಾಲೂಕಿನ ಪಡುಕೋಣೆಯಲ್ಲಿ 18-4-1979ರಲ್ಲಿ ಜನಿಸಿದ ಇವರು ಮಾಧವ ಪೂಜಾರಿ-ಸೀತಾ ದಂಪತಿಯ ಸುಪುತ್ರ. ಎಳವೆಯಲ್ಲಿಯೇ ಯಕ್ಷಗಾನ ಕಲೆಯ ಕುರಿತು ಅದಮ್ಯ ಆಸಕ್ತಿಯನ್ನು ಹೊಂದಿದ್ದ ಶಶಿಧರ್ ಹತ್ತನೆ ತರಗತಿಯ ಅಕ್ಷರ ಶಿಕ್ಷಣದ ಬಳಿಕ, ತನ್ನ 19ನೇ ವಯಸ್ಸಿನಲ್ಲಿ ಬಣ್ಣದ ಬದುಕಿಗೆ ಅಂಟಿಕೊಂಡರು.

ಹೆರಂಜಾಲು ವೆಂಕಟರಮಣ ಗಾಣಿಗ, ಗುಂಡ್ಮಿ ರಘುರಾಮ್, ಜಯಾನಂದ ಹೊಳೆಕೊಪ್ಪ ಹಾಗೂ ಕಾರ್ಕಳ ಶಶಿಕಾಂತ ಶೆಟ್ಟಿ ಅವರ ಗುರುತನದಲ್ಲಿ ಕಲಾ ಶಿಕ್ಷಣವನ್ನು ಪಡೆದ ಶಶಿಧರ ಪಡುಕೋಣೆ ಯಕ್ಷ ಸ್ತ್ರೀವೇಷಕ್ಕೊಪ್ಪುವ ರೂಪ, ಸ್ವರ, ಲಾಲಿತ್ಯ, ನೃತ್ಯಾಭಿನಯ, ರಂಗವೈಖರಿಯಿಂದ ಯೋಗ್ಯ ಸ್ತ್ರೀವೇಷಧಾರಿಯಾಗಿ ಗುರುತಿಸಿಕೊಂಡವರು.

ಹಾಲಾಡಿ, ಸೌಕೂರು, ಅಮೃತೇಶ್ವರಿ, ಮಡಾಮಕ್ಕಿ... ಮೊದಲಾದ ವೃತ್ತಿಮೇಳಗಳಲ್ಲಿ 12 ವರ್ಷ ಕಲಾವ್ಯವಸಾಯ ಪೂರೈಸಿದ ಪಡುಕೋಣೆ ಅವರು ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿ(ರಿ) ಇದರ ಕಲಾವಿದರಾಗಿಯೂ 4 ವರ್ಷ ರಂಗದುಡಿಮೆ ನಡೆಸಿದವರು.

ಪೌರಾಣಿಕ ಹಾಗೂ ನವ್ಯ ಕಥಾನಕಗಳಲ್ಲಿ ಬರುವ ಪ್ರಮುಖ ಸ್ತ್ರೀವೇಷಗಳನ್ನು ಜನಮನ ರಂಜಿಸುವಂತೆ ನಿಭಾಯಿಸುವ ಕಲಾಪ್ರತಿಭೆಯನ್ನು ಹೊಂದಿದ ಪಡುಕೋಣೆ ಅವರಿಗೆ ಮಾಲಿನಿ, ಭ್ರಮರ ಕುಂತಳೆ, ಮೀನಾಕ್ಷಿ, ಪದ್ಮಗಂಧಿನಿ, ಮೋಹಿನಿ, ತ್ರಿಲೋಕಸುಂದರಿ, ಸುಭದ್ರೆ... ಮೊದಲಾದ ಪೌರಾಣಿಕ ಸ್ತ್ರೀಭೂಮಿಕೆಗಳು ನಿರ್ವಹಣೆಯಲ್ಲಿ ಸಂತೃಪ್ತಿ ನೀಡಿವೆ.

ಸಮಕಾಲೀನ ಯಕ್ಷರಂಗಭೂಮಿಯ ಹೊಸತನಕ್ಕೆ ಒಗ್ಗಿಕೊಳ್ಳುವ ವಿಶೇಷ ಪ್ರತಿಭೆ ಇವರಲ್ಲಿ ಎದ್ದು ಕಾಣುತ್ತದೆ. ಬಡಗಿನ ಭರವಸೆಯ ಸ್ತ್ರೀವೇಷಧಾರಿಯಾಗಿ ಜನಪ್ರಿಯತೆ ಕಾಣುತ್ತಿರುವ ಶಶಿಧರ್ ಪಡುಕೋಣೆ ಸ್ಥಳೀಯ ಸಂಘ-ಸಂಸ್ಥೆಗಳ ಗೌರವ ಸಂಮಾನಗಳನ್ನು ಪಡೆದಿರುತ್ತಾರೆ.



## ಶಂಕರ ನಾಯ್ಕ ಉಳ್ಳೂರು-74

*ಚೌಕ ಜಡ್ಡು ಮನೆ, ಅಂಚೆ : ಉಳ್ಳೂರು,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 94008613608*

ಉತ್ಕೃಷ್ಟ ಕಲಾಪ್ರತಿಭೆಯಲ್ಲಿ ಯಕ್ಷಗಾನದ ಹಾಸ್ಯಗಾರಿಕೆಯ ಸಹಜ ಸತ್ವವನ್ನು ಮೆರೆಯುವ ಯುವ ಹಾಸ್ಯಕಲಾವಿದ ಶಂಕರ ನಾಯ್ಕ ಉಳ್ಳೂರು.

ಕುಂದಾಪುರ ತಾಲೂಕಿನ 74ನೇ ಉಳ್ಳೂರು ಇವರ ಹುಟ್ಟೂರು. 1972ರಲ್ಲಿ ಜನಿಸಿದ ಇವರು ರಾಮನಾಯ್ಕ-ಬಚ್ಚಿ ದಂಪತಿಯ ಸುಪುತ್ರ.

ಆರ್ಥಿಕ ಅನಾನುಕೂಲತೆಯಿಂದ ಇವರ ಓದು ಐದಕ್ಕೇ ಕೈದಾಯಿತು. ಹದಿಮೂರರ ಹರೆಯದಲ್ಲೇ ಶಂಕರ ನಾಯ್ಕರು ಬದುಕಿನ ಬುತ್ತಿಯನ್ನು ತುಂಬಿಸಿಕೊಳ್ಳುವುದಕ್ಕೆ ಯಕ್ಷಗಾನ ವೃತ್ತಿರಂಗಭೂಮಿಗೆ ಹೆಜ್ಜೆ ಹಾಕಬೇಕಾಯಿತು.

ಎಳವೆಯಲ್ಲಿಯೇ ಯಕ್ಷಕಲೆಯ ಕುರಿತು ಗಾಢ ಆಸಕ್ತಿಯನ್ನು ಕುದುರಿಸಿಕೊಂಡಿದ್ದ ಇವರಿಗೆ ದೇವಪ್ಪ ಗಾಣಿಗ ಹಾಗೂ ಕೋಟ ಸುರೇಶ ಬಂಗೇರರ ಗುರುತನ ದೊರಕಿ ಸುಯೋಗ್ಯ ಕಲಾವಿದನಾಗಿ ರೂಪುಗೊಳ್ಳುವುದಕ್ಕೆ ಸಹಕಾರಿಯಾಯಿತು.

ಕಮಲಶಿಲೆ-3, ನಾಗರಕೊಡಿಗೆ-3, ಸೌಕೂರು-19... ಹೀಗೆ ಶಂಕರ ನಾಯ್ಕರ ರಂಗವ್ಯವಸಾಯ ಸಾರ್ಥಕ ರಜತಪರ್ವವನ್ನು ಯಶಸ್ವಿಯಾಗಿ ಆಚರಿಸಿರುತ್ತದೆ.

ಪೌರಾಣಿಕ ಆಖ್ಯಾನದ ಎಲ್ಲಾ ವಿಧದ ಹಾಸ್ಯ ಭೂಮಿಕೆಗಳನ್ನು ಸರ್ವ ಸಮರ್ಥವಾಗಿ ನಿರ್ವಹಿಸುವ ಇವರು ಪ್ರಸಂಗೋಚಿತವಾಗಿ ಬಣ್ಣದ ವೇಷಗಳನ್ನು ಧರಿಸಿ ಪ್ರೇಕ್ಷಕರಿಂದ ಸೈ ಅನ್ನಿಸಿಕೊಂಡಿದ್ದಾರೆ.

ಭೀಷ್ಮ ವಿಜಯದ ಬ್ರಾಹ್ಮಣ, ಕೃಷ್ಣಲೀಲೆಯ ವಿಜಯ, ನಳದಮಯಂತಿಯ ಬಾಹುಕ, ಶೂರ್ಪನಖಾ ವಿವಾಹದ ವಿದ್ಯುಜ್ಜಿಹ್ವ, ಚಂದ್ರಾವಳಿಯ ಚಂದಗೋಪ, ಭೀಷ್ಮ ಪ್ರತಿಜ್ಞೆಯ ಕಂದರ... ಮೊದಲಾದ ಭೂಮಿಕೆಗಳು ಹಾಸ್ಯಗಾರ ಶಂಕರನಾಯ್ಕರ ಉಜ್ವಲ ಪ್ರತಿಭೆಯನ್ನು ಸಾಕಾರಗೊಳಿಸಿ ಗೆಲುವಿನ ಮುದ್ರೆಯನ್ನು ಒತ್ತಿಕೊಂಡಿವೆ.

ಶಂಕರನಾಯ್ಕರು ರತ್ನಾ ಎನ್ನುವವರನ್ನು ವರಿಸಿ, ಶರತ್, ವಿನುತಾ, ರಂಜಿತಾ, ರಶ್ಮಿತಾ ಎನ್ನುವ ನಾಲ್ಕು ಮಂದಿ ಮಕ್ಕಳನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳ ಮಾನ-ಸಂಮಾನ ಇವರಿಗೆ ದೊರಕಿರುತ್ತದೆ.



## ಶಂಕರ ನಾಯ್ಕ ಬೇಳಂಜೆ

*ಅಂಚೆ : ಬೇಳಂಜೆ,*
*ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9008158382*

ಚುರುಕು ನಡೆಯ ಮೂರನೇ ವೇಷಗಳನ್ನು ಹಾಗೂ ಪೋಷಕ ವೇಷಗಳನ್ನು ಸುಪುಷ್ಟವಾಗಿ ಪೋಷಿಸಿ ಗೆಲುವು ಕಾಣುವ ಉತ್ಸಾಹಿ ಯುವ ಕಲಾವಿದ ಶಂಕರ ನಾಯ್ಕ ಬೇಳಂಜೆ.

ಕಾರ್ಕಳ ತಾಲೂಕಿನ ಬೇಳಂಜೆ ಕಪ್ಚೆಕೆರೆ ಎಂಬಲ್ಲಿ ರಾಮನಾಯ್ಕ-ಸುಶೀಲಾ ಬಾಯಿ ದಂಪತಿಯ ಸುಪುತ್ರನಾಗಿ ಜನಿಸಿದ ಶಂಕರ ಅವರಿಗೆ ಇದೀಗ 25ರ ಹರೆಯ.

ಶಾಲಾದಿನಗಳಲ್ಲೇ ಅದಮ್ಯ ಕಲಾಸಕ್ತಿ ಮೈಗೂಡಿಸಿಕೊಂಡ ಶಂಕರ ನಾಯ್ಕರು ಎಂಟನೇ ತರಗತಿಗೆ ವಿದಾಯ ಹೇಳಿ ತನ್ನ 14ರ ಹರೆಯದಲ್ಲೇ ಯಕ್ಷಬದುಕಿಗೆ ಅಂಟಿಕೊಂಡರು.

ಹಿರಿಯ ಕಲಾವಿದ ಬುಕ್ಕಿಗುಡ್ಡೆ ಮಹಾಬಲ ನಾಯ್ಕ ಅವರ ಗುರುತನ ಹಾಗೂ ಮಾರ್ಗದರ್ಶನದೊಂದಿಗೆ ಯಕ್ಷಲೋಕಕ್ಕೆ ಹೆಜ್ಜೆ ಹಾಕಿದ ಇವರು ತನ್ನ ಸೃಜನಾತ್ಮಕ ಕಲಾವಿಲಾಸದ ಪ್ರಕಟಣೆಯಿಂದ ಸಮರ್ಥ ಪುಂಡುವೇಷಧಾರಿಯಾಗಿ ಗುರುತಿಸಿಕೊಂಡರು.

ಮಂದಾರ್ತಿ ಮೇಳದಲ್ಲಿ 9 ವರ್ಷ ಕಲಾ ತಿರುಗಾಟ ಮಾಡಿದ ಶಂಕರ ನಾಯ್ಕ ಅವರು 4 ವರ್ಷ ಮಾರಣಕಟ್ಟೆ ಮೇಳದಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ಅಮೃತೇಶ್ವರಿ ಮೇಳದ ಕಲಾವಿದರಾಗಿ ದುಡಿಮೆ ನಡೆಸುವುದರೊಂದಿಗೆ ರಂಗಜೀವನದಲ್ಲಿ 13 ವರ್ಷ ಪೂರೈಸಿದ್ದಾರೆ.

ಸುಂದರ ವೇಷ, ಸಶಕ್ತ ನೃತ್ಯಾಭಿನಯ ವೈಖರಿ ಹಾಗೂ ಸಮುಚಿತ ಪೌರಾಣಿಕ ಮಾಹಿತಿಯನ್ನು ಹೊಂದಿದ ಶಂಕರ ನಾಯ್ಕರು ಪ್ರಸಂಗದ ಪ್ರಧಾನ ಪುಂಡುವೇಷಗಳ ನಿರ್ವಹಣೆಯೊಂದಿಗೆ ಜನಮನರಂಜಿಸುವವರು. ಹಾಗೆಯೇ ಪುರುಷವೇಷ ಸ್ಥಾನದಲ್ಲೂ ತನ್ನತನವನ್ನು ಮೆರೆಯುವವರು.

ಶ್ರೀ ಕೃಷ್ಣ, ಅಭಿಮನ್ಯು, ದುಶ್ಯಾಸನ, ಸುಧನ್ವ, ಬಬ್ರುವಾಹನ, ಚಂದ್ರಹಾಸ... ಮೊದಲಾದ ಪೌರಾಣಿಕ ಪಾತ್ರಗಳು ಇವರಿಗೆ ನಿರ್ವಹಣಾ ತೃಪ್ತಿ ನೀಡಿವೆ.

ಪ್ರತಿಭಾನ್ವಿತ ಕಲಾವಿದ ಶಂಕರ ನಾಯ್ಕರು ಸ್ಥಳೀಯ ಸಂಘ-ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ.



## ಶಂಕರ ರಾವ್, ಜನ್ನಾಡಿ

*ಅಂಚೆ : ಹಾರ್ದಳ್ಳಿ-ಮಂಡಳ್ಳಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9482041789*

ಯಕ್ಷರಸಿಕ ಮನಮೋಹಕ ರೂಪ, ಸುಮಧುರ ಕಂಠಶ್ರೀ, ಪ್ರಬುದ್ಧ ನೃತ್ಯಾಭಿನಯ ವೈಖರಿ, ಅನುಭವ ಪೂರ್ಣ ವಚೋಚಮತ್ಕೃತಿ ಹಾಗೂ ಉತ್ತಮ ಪೌರಾಣಿಕ ಜ್ಞಾನ ಸಂಪನ್ನತೆಯೊಂದಿಗೆ ಯಕ್ಷ ಸ್ತ್ರೀಭೂಮಿಕೆಗಳಿಗೆ ಪ್ರತಿಭೆಯ ಪ್ರಾಣ ನೀಡುವ ಸಮರ್ಥ ಕಲಾವಿದ ಶಂಕರ ರಾವ್ ಜನ್ನಾಡಿ.

ಕುಂದಾಪುರ ತಾಲೂಕಿನ ಜನ್ನಾಡಿ ಎಂಬಲ್ಲಿ 1-1-1964ರಲ್ಲಿ ಜನಿಸಿದ ಶಂಕರ ರಾವ್ ಮಹಾಬಲ ಹಾಗೂ ಜಲಜ ದಂಪತಿಯ ಸುಪುತ್ರ.

ಸುತ್ತಮುತ್ತಲಿನ ಬಯಲಾಟಗಳೇ ಇವರ ಕಲಾಜೀವನಕ್ಕೆ ಸ್ಫೂರ್ತಿ, ಪ್ರೇರಣೆಯಾದುದರಿಂದ ಓದು ಹತ್ತನೆ ತರಗತಿಗೆ ಸೀಮಿತವಾಯಿತು. ಸದಾನಂದ ಐತಾಳ್ ಹಾಗೂ ಬನ್ನಂಜೆ ಸಂಜೀವ ಸುವರ್ಣರಿಂದ ಯಕ್ಷಗಾನ ಕಲಾವಿದ್ಯೆಯನ್ನು ಸಂಪಾದಿಸಿದ ಶಂಕರ್‌ರಾವ್ ಅವರು ತಂದೆ ಹಾಗೂ ಚಿಕ್ಕಪ್ಪನವರಿಂದ ಯಕ್ಷಗಾನ ಸಂಬಂಧಿತ ಅನನ್ಯ ಅನುಭವದ್ರವ್ಯವನ್ನು ಗಳಿಸಿಕೊಂಡವರು.

ರಂಜದಕಟ್ಟೆ, ಮೇಗರವಳ್ಳಿ, ಕಮಲಶಿಲೆ, ಮಂದಾರ್ತಿ, ಹಾಲಾಡಿ, ಕಳವಾಡಿ ಹಾಗೂ ಮಡಾಮಕ್ಕಿ ಮೇಳಗಳಲ್ಲಿ ಇವರ ಕಲಾಯಾತ್ರೆ 13 ವರ್ಷಗಳನ್ನು ಪೂರೈಸಿದೆ. ಪ್ರಸ್ತುತ ಶಂಕರರಾವ್, ಮಡಾಮಕ್ಕಿ ಮೇಳದ ಪ್ರಧಾನ ಸ್ತ್ರೀವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಪೌರಾಣಿಕ ಪ್ರಸಂಗದ ಎಲ್ಲಾ ಬಗೆಯ ಸ್ತ್ರೀವೇಷಗಳನ್ನೂ ನಿರ್ವಹಿಸಿ ಸೈ ಅನ್ನಿಸಿಕೊಂಡ ಇವರಿಗೆ ಅಂಬೆ, ದ್ರೌಪದಿ, ಸುಭದ್ರೆ, ಚಿತ್ರಾಂಗದೆ, ತಾರೆ, ವಿಷಯೆ, ರುಚಿಮತಿ, ದಾಕ್ಷಾಯಿಣಿ, ಸೈರೇಂಧ್ರಿ, ರೇಣುಕೆ... ಮೊದಲಾದ ಪಾತ್ರಗಳು ಸಂತೃಪ್ತಿ ನೀಡಿವೆ.

ಶಂಕರರಾವ್ ಅವರ ಸಹಧರ್ಮಿಣಿ ರಾಜೀವಿ. ಧನ್ಯ ಹಾಗೂ ಚೈತನ್ಯ ಇವರ ಉಭಯ ಮಕ್ಕಳು.

'ನೀನಾಸಂ' ಹೆಗ್ಗೋಡು ಇದರ ವತಿಯಿಂದ ಹಾಗೂ ಅನೇಕ ಸಂಘ-ಸಂಸ್ಥೆಗಳಿಂದ ಶ್ರೀಯುತರು ಸಂಮಾನಿತರಾಗಿದ್ದಾರೆ.



## ಶಂಕರ ಮರಕಾಲ ಮೊಗೆಬೆಟ್ಟು

*ಬೇಳೂರು ಗ್ರಾಮ, ಅಂಚೆ : ದೇವಸ್ಥಾನಬೆಟ್ಟು,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9880800587*

ಬಣ್ಣದ ವೇಷದ ಅಲೌಕಿಕ ಭವ್ಯತೆಯನ್ನು ಬಡಗುತಿಟ್ಟು ಯಕ್ಷಗಾನ ರಂಗಮಂಚದಲ್ಲಿ ವರ್ಣರಂಜಿತ ವೈಭವದಲ್ಲಿ ದರ್ಶಿಸುವ ಪ್ರತಿಭಾನ್ವಿತ ಕಲಾವಿದ ಶಂಕರ ಮರಕಾಲ ಮೊಗೆಬೆಟ್ಟು.

ಕುಂದಾಪುರ ತಾಲೂಕು ಬೇಳೂರು ಗ್ರಾಮದ ಮೊಗೆಬೆಟ್ಟು ಎಂಬಲ್ಲಿ ಅಣ್ಣಪ್ಪ ಮರಕಾಲ-ಗುಜ್ಜಿ ದಂಪತಿಯ ಸುಪುತ್ರರಾಗಿ ಜನಿಸಿದ ಶಂಕರ ಮರಕಾಲರು ಇದೀಗ 45ರ ಹರೆಯದಲ್ಲಿದ್ದಾರೆ.

ನೂಜಿಯ ಹಿ.ಪ್ರಾ. ಶಾಲೆಯಲ್ಲಿ 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಇವರು ಸುತ್ತ-ಮುತ್ತ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳಿಂದ ಪ್ರೇರಿತರಾಗಿ ತನ್ನ 15ನೇ ವಯಸ್ಸಿನಲ್ಲಿ ಬಣ್ಣದ ಬದುಕು ಬಯಸಿದರು. ಹಿರಿಯ ಕಲಾವಿದ ಮಜ್ಜಿಗೆಬೈಲು ಆನಂದ ಶೆಟ್ಟಿಯವರು ಇವರನ್ನು ವೃತ್ತಿಮೇಳಕ್ಕೆ ಸೇರ್ಪಡೆಗೊಳಿಸಿದರು.

ವೃತ್ತಿರಂಗವನ್ನು ಪ್ರವೇಶಿಸಿದ ಶಂಕರ ಮರಕಾಲರಿಗೆ ಹಾರಾಡಿ ಸರ್ವೋತ್ತಮ ಗಾಣಿಗರು ಹೆಜ್ಜೆಗಾರಿಕೆ ಕಲಿಸಿದರು. ತದನಂತರ ಸತತ ಪ್ರಯತ್ನ, ಪರಿಶ್ರಮ, ಪ್ರತಿಭೆಯಿಂದ ಶಂಕರರು ಯಕ್ಷಲೋಕದಲ್ಲಿ ಕಲಾವಿದನಾಗಿ ರೂಪುಗೊಂಡರು.

ಮಂದಾರ್ತಿ, ಸಾಲಿಗ್ರಾಮ, ಮಾರಣಕಟ್ಟೆ, ಹಿರಿಯಡಕ ಮೇಳಗಳಲ್ಲಿ ಶಂಕರ ಮರಕಾಲರ ಕಲಾತಿರುಗಾಟ ಯಶಸ್ವೀ 23 ವರ್ಷಗಳನ್ನು ಪೂರೈಸಿರುತ್ತದೆ. ಪ್ರಸ್ತುತ ಇವರು ಮಂದಾರ್ತಿ ಮೇಳದ ಬಣ್ಣದ ವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಹಿಡಿಂಬ, ಬಕಾಸುರ, ರಾವಣ, ವಿದ್ಯುಲ್ಲೋಚನ, ಕಿಮ್ಮೀರ, ಘಟೋತ್ಕಚ, ವೀರಭದ್ರ, ಘೋರರೂಪಿ... ಮೊದಲಾದ ಗಂಡುಬಣ್ಣದ ವೇಷಗಳಲ್ಲಿ ಶೂರ್ಪನಖಿ, ಹಿಡಿಂಬಿ, ಕರಾಳನೇತ್ರೆ, ವೃತ್ರಜ್ವಾಲೆ... ಮೊದಲಾದ ಹೆಣ್ಣು ಬಣ್ಣದ ವೇಷಗಳಲ್ಲಿ ಶಂಕರ ಮರಕಾಲರ ದೈತ್ಯ ಪ್ರತಿಭೆಯ ಬಣ್ಣದ ಪ್ರಭೆ ರಂಗಸ್ಥಳದಲ್ಲಿ ಪ್ರಖರವಾಗಿ ಬೆಳಗಿದೆ. ಉತ್ತಮ ಬಣ್ಣದ ವೇಷಧಾರಿಯಾದ ಇವರು ಹಂಸಧ್ವಜ, ಶತ್ರುಘ್ನ, ದೇವೇಂದ್ರ, ಧರ್ಮರಾಯ ಮೊದಲಾದ ರಾಜವೇಷಗಳನ್ನೂ, ಕರ್ಣ, ಶಲ್ಯ, ವೃಷಕೇತು, ಪ್ರದ್ಯುಮ್ನ ಮುಂತಾದ ಮುಂಡಾಸು ವೇಷಗಳನ್ನೂ ಸಮರ್ಥವಾಗಿ ನಿರ್ವಹಿಸುತ್ತಾರೆ.

ಉಡುಪಿ ಯಕ್ಷಗಾನ ಕಲಾರಂಗ ಆಯೋಜಿತ 'ಬಡಗುತಿಟ್ಟು ಬಣ್ಣದ ವೇಷ ಕಾರ್ಯಾಗಾರ' ದಲ್ಲಿ ಭಾಗವಹಿಸಿ ಯಕ್ಷಗಾನ ತಜ್ಞರಿಂದ ಬಣ್ಣದ ವೇಷಗಳ ಸಾಂಪ್ರದಾಯಿಕ ನೃತ್ಯಕ್ರಮ ಹಾಗೂ ಮುಖವರ್ಣಿಕಾ ಪದ್ಧತಿಯನ್ನು ಬೋಧಿಸಿಕೊಂಡಿದ್ದಾರೆ.

ಶಂಕರ ಮರಕಾಲರ ಧರ್ಮಪತ್ನಿ ಬೇಬಿ. ಸುಮನ ಹಾಗೂ ಸೌಮ್ಯ ಇವರ ಉಭಯ ಹೆಣ್ಣು ಮಕ್ಕಳು.

ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಗೌರವಧನ, ಕುಂದಾಪುರ ಮೊಗವೀರ ಸಂಘದ ವತಿಯಿಂದ ಸಂಮಾನವನ್ನು ಇವರು ಪಡೆದಿರುತ್ತಾರೆ.



## ಶಂಕರ ವಿಶ್ವನಾಥ ಹೆಗಡೆ

*ಅಂಚೆ : ನೀಲ್ಕೋಡು*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9449615715 / 08387-262558*

ಬಡಗುತಿಟ್ಟು ಯಕ್ಷಗಾನ ರಂಗದ ಉಜ್ವಲ ತಾರೆಯಾಗಿ, ಸ್ತ್ರೀತ್ವದ ಸಹಜತೆಯನ್ನು ಯಕ್ಷ ಸ್ತ್ರೀಭೂಮಿಕೆಗಳಲ್ಲಿ ಅನನ್ಯ ಕಲಾಪ್ರತಿಭೆಯ ಮೂಲಕ ಕಾಣಿಸಿ ವಿಶೇಷ ತಾರಾಮೌಲ್ಯವನ್ನು ಗಳಿಸಿಕೊಂಡ ಪ್ರತಿಭಾನ್ವಿತ ಯುವ ಸ್ತ್ರೀವೇಷಧಾರಿ ನೀಲ್ಕೋಡು ಶಂಕರ ಹೆಗಡೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗುಬ್ಬಿಮನೆ ಎಂಬಲ್ಲಿ ವಿಶ್ವನಾಥ ಹೆಗಡೆ-ಪಾರ್ವತಿ ಹೆಗಡೆ ಅವರ ಸುಪುತ್ರರಾಗಿ ಜನಿಸಿದ ಇವರಿಗೀಗ ಮೂವತ್ತರ ಹರೆಯ.

ಕೌಟುಂಬಿಕವಾಗಿ ಯಾವುದೇ ಕಲಾ ಹಿನ್ನೆಲೆಯಿಲ್ಲದ ಇವರು ಕೆರೆಮನೆ ಮೇಳ ಹಾಗೂ ಅಲ್ಲಿನ ಕಲಾವಿದರ ಸಂಪರ್ಕದಿಂದ ಪರಿಪೂರ್ಣ ಕಲಾವಿದರಾಗಿ ರೂಪುಗೊಂಡರು.

ಪಿ.ಯು.ಸಿ. ವರೆಗೆ ವ್ಯಾಸಂಗ ಮಾಡಿದ ನೀಲ್ಕೋಡು ಗುಣವಂತೆಯ ಶ್ರೀಮಯ ಯಕ್ಷಗಾನ ಕೇಂದ್ರದಲ್ಲಿ ಹೆರಂಜಾಲು ಗೋಪಾಲ ಗಾಣಿಗ, ವಿದ್ವಾನ್ ಗಣಪತಿ ಭಟ್ಟ ಹಾಗೂ ಎ.ಪಿ. ಫಾಟಕ್ ಅವರಲ್ಲಿ ಸಶಕ್ತ ಯಕ್ಷಶಿಕ್ಷಣವನ್ನು ಪಡೆದವರು.

ಇಡಗುಂಜಿ, ಗುಂಡಬಾಳ, ಮಂದಾರ್ತಿ, ಕಮಲಶಿಲೆ, ಪೆರ್ಡೂರು ಮೇಳಗಳಲ್ಲಿ ಇವರ ಸಾರ್ಥಕ ಕಲಾಕೃಷಿ 12 ವರ್ಷಗಳನ್ನು ಪೂರೈಸಿರುತ್ತದೆ. 1998-99ರಲ್ಲಿ ವಿದೇಶ ಯಾತ್ರೆಯನ್ನು ಕೈಗೊಂಡ ಇವರು ಸಿಂಗಾಪುರ್, ಮಲೇಷಿಯಾ, ಫಿಲಿಪ್ಪಿನ್ಸ್, ಬರ್ಮಾ ಮೊದಲಾದ ವಿದೇಶಗಳಲ್ಲಿ ಸಮೃದ್ಧ ಕಲಾವಂತಿಕೆಯನ್ನು ಪ್ರದರ್ಶಿಸಿ ಗೆಲುವು ಕಂಡಿದ್ದಾರೆ.


ಸುಂದರ ಶರೀರ, ಸುಮಧುರ ಶಾರೀರ, ಲಾಲಿತ್ಯಪೂರ್ಣ ನೃತ್ಯಾಭಿನಯ, ಶೃತಿ ಸುಭಗ ಅರ್ಥಗಾರಿಕೆ, ಲವಲವಿಕೆಯ ರಂಗನಡೆ, ಚೆಲುವಾಂತ ವೇಷವೈಖರಿಯ ಸ್ತ್ರೀಪಾತ್ರಗಳಲ್ಲಿ ವಿಜೃಂಭಿಸುವ ನೀಲ್ಕೋಡು ಶಂಕರ ಹೆಗಡೆ ಅವರು ಯಕ್ಷಗಾನ ರಂಗಭೂಮಿಯಲ್ಲಿ ಕ್ಷಿಪ್ರ ಪ್ರಗತಿಯನ್ನು ಕಂಡ ಪ್ರತಿಭಾವಂತ ಕಲಾವಿದರು.

ಶೃಂಗಾರ ಪ್ರಧಾನವಾದ ಸ್ತ್ರೀಭೂಮಿಕೆಗಳ ಮೂಲಕ ರಂಗರಸಿಕರ ಮನದಂಗಳಕ್ಕೆ ಲಗ್ಗೆ ಹಾಕುವ ಕಲಾಮೋಹಿನಿ ನೀಲ್ಕೋಡು ಅವರು ಪೌರಾಣಿಕ ಅನುಭವ ಸಂಪತ್ತಿನಲ್ಲಿ ಪಾತ್ರಗಳನ್ನು ಸೃಜನಾತ್ಮಕವಾಗಿ ನಿರೂಪಿಸುವವರು. ಸಮಕಾಲೀನ ರಂಗದ ಹೊಸ ಪ್ರಸಂಗಗಳಿಗಂತೂ ಇವರು ಅನಿವಾರ್ಯ ಎನಿಸಬಹುದಾದ ಸೃಷ್ಟಿಶೀಲ ಕಲಾ ವರ್ಚಸ್ವಿ ಸ್ತ್ರೀವೇಷಧಾರಿ.

ಇವರ ಮಾಯಾ ಶೂರ್ಪನಖಿ, ಚಂದ್ರಾವಳಿ, ಭ್ರಮಕುಂತಳೆ, ವಿಷಯೆ, ಪ್ರಭಾವತಿ, ಮೋಹಿನಿ, ತ್ರಿಲೋಕ ಸುಂದರಿ... ಮೊದಲಾದ ಪಾತ್ರಗಳು ಸಾಟಿಯಿಲ್ಲದಂತೆ ರಂಗದಲ್ಲಿ ಸೊಗಯಿಸಿವೆ.

ಸಮರ್ಥ ಸ್ತ್ರೀವೇಷಧಾರಿಯಾದ ಇವರು ಶ್ರೀಕೃಷ್ಣ, ಹನುಮಂತ, ಸಾಲ್ವ, ಕಾರ್ತವೀರ್ಯ ಮೊದಲಾದ ಪುರುಷ ಪಾತ್ರಗಳನ್ನೂ ನಿರ್ವಹಿಸಿ ಸೈ ಅನ್ನಿಸಿಕೊಂಡಿದ್ದಾರೆ.

ನೀಲ್ಕೋಡು ಶಂಕರ ಹೆಗಡೆ ಅವರು ತೃಪ್ತಿ ಹೆಗಡೆ ಎಂಬುವರನ್ನು ವರಿಸಿದ್ದಾರೆ. ಮುಂಬೈ, ಉಡುಪಿ, ಬೆಂಗಳೂರು ಸೇರಿದಂತೆ ಅನೇಕ ನಗರಗಳಲ್ಲಿ ಹಾಗೂ ಕರಾವಳಿ-ಮಲೆನಾಡಿನ ಹಲವಾರು ಸಂಘ-ಸಂಸ್ಥೆಗಳಲ್ಲಿ ಇವರು ಸಂಮಾನಿತರಾಗಿದ್ದಾರೆ.



## ಶಂಭು ಕುಮಾರ್, ಬೆದ್ರಾಡಿ

*'ಸರಸ್ವತಿ ನಿಲಯ', ಅಂಚೆ : ಮೊಳಹಳ್ಳಿ,*
*ಕುಂದಾಪುರ ತಾಲೂಕು*
*ದೂರವಾಣಿ : 9611200059*

ಸಾಂಸ್ಕೃತಿಕ ಸಮುನ್ನತಿಯನ್ನು ಸಾರುವ ಸಮಷ್ಟಿಕಲೆ ಯಕ್ಷಗಾನದ ಬಡಗುತಿಟಿನ ರಂಗಮಂಚದಲ್ಲಿ ಚೈತನ್ಯ ಪೂರ್ಣ ಕಲಾಭಿವ್ಯಕ್ತಿಯಲ್ಲಿ ಪೌರಾಣಿಕ ಪಾತ್ರಗಳಿಗೆ ತನ್ನದೇ ವಿಶಿಷ್ಟ ಮೆರುಗು ನೀಡುವ ಉತ್ಸಾಹಿ ಕಲಾವಿದ ಶಂಭುಕುಮಾರ್, ಬೆದ್ರಾಡಿ.

ಕುಂದಾಪುರ ತಾಲೂಕಿನ ಬೆದ್ರಾಡಿ ಎಂಬಲ್ಲಿ 7–8–1967ರಲ್ಲಿ ಜನಿಸಿದ ಶಂಭು ಕುಮಾರ್, ರಾಮನಾಯ್ಕ–ಸಂಕಮ್ಮ ದಂಪತಿಯ ಸುಪುತ್ರ.

ಪರಿಸರದಲ್ಲಿ ನಡೆಯುತ್ತಿದ್ದ ಬಯಲಾಟಗಳಿಂದ ಬಣ್ಣದ ಲೋಕದ ಕಲಾವಿಹಾರಕ್ಕೆ ಕನಸು ಕಟ್ಟಿಕೊಂಡ ಶಂಭು ಕುಮಾರ್ 7ನೇ ತರಗತಿಯ ಬಳಿಕ ಬಾಲ್ಯದ ಬಯಕೆಯನ್ನು ನನಸಾಗಿಸಿಕೊಂಡರು. ಭಾಗವತ ಎಡೂರು ಮೂರ್ತಿಗೌಡ ಅವರ ಪ್ರೇರಣೆ, ಸಹೋದರ ಕಲಾವಿದ ಬೆದ್ರಾಡಿ ನರಸಿಂಹ ನಾಯ್ಕರ ಪ್ರೋತ್ಸಾಹ ಇವರ ಯಕ್ಷಜೀವನದ ಹಾದಿಗೆ ಸ್ಫೂರ್ತಿ ದೀವಿಗೆಯಾಯಿತು.

ಸೌಕೂರು, ಬಗ್ವಾಡಿ, ಶಿರಸಿ, ರಂಜದಕಟ್ಟೆ, ಮಡಾಮಕ್ಕಿ, ಗೋಳಿಗರಡಿ, ನಾಗರಕೊಡಿಗೆ.. ಮೊದಲಾದ ಮೇಳಗಳಲ್ಲಿ 15 ವರ್ಷಗಳ ಕಾಲ ವೃತ್ತಿತಿರುಗಾಟವನ್ನು ಮಾಡಿದ ಶಂಭುಕುಮಾರ್ ತನ್ನ ನಿರ್ವಹಣೆಯ ಪ್ರತೀ ಪಾತ್ರಗಳನ್ನೂ ರಂಗದಲ್ಲಿ ಗೆಲ್ಲಿಸಿದ್ದಾರೆ.

ಪೌರಾಣಿಕತೆಯ ಜ್ಞಾನ ಸಂಪನ್ನತೆ ಶಂಭುಕುಮಾರ್ ಅವರಲ್ಲಿ ತುಂಬಿಕೊಂಡಿದ್ದರೂ ಸಮಕಾಲೀನತೆಯ ರಂಗ ಸ್ಥಿತ್ಯಂತರಗಳಿಗೆ ಹೆಚ್ಚು ಸ್ಪಂದಿಸುವವರು.

ಪ್ರಸಂಗದ ಎಲ್ಲಾ ನಡೆಯ ಪುರುಷಪಾತ್ರಗಳನ್ನು ನಿರ್ವಹಿಸುವ ಪ್ರತಿಭಾಶಕ್ತಿ ಹೊಂದಿದ ಇವರು ಪ್ರತಿನಾಯಕ, ಖಳನಾಯಕ ಪಾತ್ರಗಳಲ್ಲಿ ವಿಶೇಷವಾಗಿ ರಂಜಿಸುವವರು.

ಬೇಡರ ಕಣ್ಣಪ್ಪದ 'ದಿಣ್ಣ' ಇವರಿಗೆ ಹೆಸರು ತಂದಿತ್ತ ಪಾತ್ರಗಳಲ್ಲೊಂದು. ಆ ವೇಷ, ಭಾಷೆ, ನಟನೆ, ಭಾವನೆ ಎಲ್ಲವೂ ಅವರದೇ ವಿಶಿಷ್ಟ ಛಾಪಿನಿಂದ ಕೂಡಿರುವಂತಾದ್ದು. ಹಾಗೆಯೇ ಭಸ್ಮಾಸುರ, ಜಮದಗ್ನಿ, ರಕ್ತಜಂಘ, ಗದಾಪರ್ವದ ಭೀಮ, ಭೀಷ, ಕಂಸ, ಉಗ್ರಸೇನ, ಮಾಗಧ... ಮೊದಲಾದ ಪೌರಾಣಿಕ ಪಾತ್ರಗಳಲ್ಲಿ ಶಂಭುಕುಮಾರರ ಅಭಿನಯ ಮನೋಜ್ಞ.

ಸಮರ್ಥ ವೇಷಧಾರಿಯಾದ ಇವರು ಸೃಜನಶೀಲ ಪ್ರಸಂಗ ಕರ್ತರೂ ಹೌದು. ಪ್ರಸ್ತುತ ವೃತ್ತಿಮೇಳದಿಂದ ದೂರವಾಗಿ ಸ್ವಯಂ ಉದ್ಯೋಗದಲ್ಲಿ ಬದುಕಿನ ರಥವನ್ನು ಸಾಗಿಸುತ್ತಿದ್ದಾರೆ.

ಬೆದ್ರಾಡಿ ಶಂಭುಕುಮಾರರ ಸಹಧರ್ಮಿಣಿ ಪಾರ್ವತಿ. ಓರ್ವ ಸುಪುತ್ರ ಶರತ್.

ಮುಂಬೈ ಮೊಗವೀರ ಮಹಾಜನ ಸಂಘ, ಉಡುಪಿ–ಕುಂದಾಪುರ ಮೊಗವೀರ ಯಕ್ಷೋತ್ಸವ ಸಮಿತಿಯ ವತಿಯಿಂದ ಹಾಗೂ ಮಡಿಕಲ್ಲು, ಹುಲಿಕಲ್ಲು, ಹಾಲಾಡಿ, ಬಗ್ವಾಡಿ, ಮಡಾಮಕ್ಕಿ.... ಮೊದಲಾದ ಕಡೆಗಳಲ್ಲಿ ಇವರಿಗೆ ಸಂಮಾನ–ಗೌರವ ದೊರಕಿರುತ್ತದೆ.



## ಶಾಂತಾರಾಮ ಭಂಡಾರಿ

*ಅಂಚೆ : ಉಪ್ಪಿನಪಟ್ಟಣ, ಮಲವಳ್ಳಿ,*
*ಕುಮಟಾ ತಾಲೂಕು (ಉ.ಕ)*
*ದೂರವಾಣಿ : 9379970429*

ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ತನ್ನ ಅನನ್ಯ ವಾದನವಿದ್ಯಾ ಪ್ರೌಢಿಮೆಯನ್ನು ಮೆರೆದು ಅನುಭವಿ ಚಂಡೆಗಾರರಾಗಿ ಗುರುತಿಸಿಕೊಂಡವರು ಶಾಂತಾರಾಮ ಭಂಡಾರಿ.

ಉತ್ತರ ಕನ್ನಡದ ಕುಮಟಾ ತಾಲೂಕಿನ ಉಪ್ಪಿನ ಪಟ್ಟಣ ಎಂಬಲ್ಲಿ 1-8-1958ರಲ್ಲಿ ಜನಿಸಿದ ಶಾಂತಾರಾಮ ಭಂಡಾರಿ ಅವರು ಲಕ್ಷ್ಮಣ ಭಂಡಾರಿ-ಲೀಲಾವತಿ ದಂಪತಿಯ ಸುಪುತ್ರ.

10ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿದ ಇವರು ತಮ್ಮ 23ನೇ ವಯಸ್ಸಿನಲ್ಲಿ ಯಕ್ಷಲೋಕಕ್ಕೆ ಪಾದಾರ್ಪಣೆ ಮಾಡಿದರು. ಇವರ ತಂದೆಯವರು ಮದ್ದಳೆವಾದಕರಾಗಿದ್ದುದರಿಂದ ವಾದನಾಸಕ್ತಿ ಎಂಬುವುದು ಇವರಿಗೆ ಸಹಜವಾಗಿಯೇ ಒಲಿಯುವಂತಾಯಿತು.

ದಿ. ನಾರ್ಣಪ್ಪ ಉಪ್ಪೂರ ಹಾಗೂ ಬೇಳಂಜೆ ತಿಮ್ಮಪ್ಪ ನಾಯ್ಕರ ಶಿಷ್ಯರಾಗಿ ಕಲಾವಿದ್ಯೆಯನ್ನು ಗಳಿಸಿದ ಶಾಂತಾರಾಮ ಭಂಡಾರಿಯವರು ವೃತ್ತಿರಂಗದಲ್ಲಿ ಸಮರ್ಥ ಚಂಡೆಗಾರರಾಗಿ ಜನಪ್ರಿಯತೆಯನ್ನು ಕಂಡುಕೊಂಡರು.

ಅಮೃತೇಶ್ವರಿ, ಇಡಗುಂಜಿ, ಸಾಲಿಗ್ರಾಮ, ಮೂಲ್ಕಿ, ಶಿರಸಿ, ಪೆರ್ಡೂರು, ಕುಮಟಾ, ಹಾಲಾಡಿ, ಸೌಕೂರು, ಗುತ್ಯಮ್ಮ, ಸಿಗಂಧೂರು, ಗೋಳಿಗರಡಿ, ಮಡಾಮಕ್ಕಿ ಮೊದಲಾದ ಮೇಳಗಳಲ್ಲಿ ಸುದೀರ್ಘ ಮೂರು ದಶಕಗಳ ಕಲಾಯಾತ್ರೆಯನ್ನು ಪೂರೈಸಿದ ಹಿರಿಮೆ ಇವರದ್ದಾಗಿದೆ.

ಸಮರ್ಥ ಚಂಡೆವಾದಕರಾಗಿ ಬಹುಮಾನ್ಯತೆಯನ್ನು ಗಳಿಸಿದ ಶಾಂತಾರಾಮ ಭಂಡಾರಿಯವರಿಗೆ ಭಾಗವತಿಕೆ, ಮದ್ದಳೆಗಾರಿಕೆ ಹಾಗೂ ವೇಷಗಾರಿಕೆಯ ಕುರಿತೂ ಪರಿಣತಿ ಇದೆ. ಹಾಗಾಗಿ ಇವರು ಯಕ್ಷಗಾನರಂಗದಲ್ಲಿ ಸರ್ವಾಂಗೀಣ ಕಲಾವಿದರಾಗಿದ್ದಾರೆ.

ಉತ್ತಮ ಗುರುವಾಗಿ ಅನೇಕ ಪ್ರತಿಭಾವಂತ ಶಿಷ್ಯ ಕಲಾವಿದರನ್ನು ರಂಗಭೂಮಿಗೆ ನೀಡಿದ ಶಾಂತಾರಾಮ ಭಂಡಾರಿ ಪ್ರಸ್ತುತ ಗೋಳಿಗರಡಿ ಮೇಳದ ಪ್ರಧಾನ ಚಂಡೆವಾದಕರಾಗಿ ಕಲಾಸೇವೆ ಸಲ್ಲಿಸುತ್ತಿದ್ದಾರೆ.

ಶಾಂತಾರಾಮ ಭಂಡಾರಿ ಅವರ ಬಾಳಸಂಗಾತಿ ಭಾಗೀರಥಿ. ದಿವ್ಯಾ ಹಾಗೂ ಆಶಾ ಇವರ ಉಭಯ ಹೆಣ್ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಉನ್ನತ ಕಲಾವಂತಿಕೆಗೆ ಶರಣಾಗಿ ಗೌರವ ಸಂಮಾನ ನೀಡಿವೆ.



## ಶ್ಯಾಮ ನಾಯ್ಕ

*ಮೂಡು ವಾರಣಾಸಿ, ಅಂಚೆ : ಪೇತ್ರಿ,*
*ಚೇರ್ಕಾಡಿ ಗ್ರಾಮ, ಉಡುಪಿ ತಾಲೂಕು,*
*ಉಡುಪಿ ಜಿಲ್ಲೆ*

ಸಮರ್ಥ ಪೋಷಕ ಪಾತ್ರಧಾರಿಯಾಗಿ ಪೌರಾಣಿಕ ಪಾತ್ರಗಳಿಗೆ ಸುಸಂಸ್ಕೃತ ಕಲಾವರ್ಚಸ್ಸಿನ ಪೋಷಾಕು ತೊಡಿಸುವ ಹಿರಿಯ ಯಕ್ಷನಟ ಶ್ಯಾಮನಾಯ್ಕ.

ಉಡುಪಿ ತಾಲೂಕಿನ ಚೇರ್ಕಾಡಿ ಎಂಬಲ್ಲಿ ಸೋಮನಾಯ್ಕ-ಕಮಲಾ ಬಾಯಿ ದಂಪತಿಯ ಸುಪುತ್ರರಾಗಿ ಜನಿಸಿದ ಶ್ಯಾಮನಾಯ್ಕ ಅವರು ಇದೀಗ ಜೀವನರಂಗಸ್ಥಳದಲ್ಲಿ ಸುವರ್ಣ ಸಂಭ್ರಮದ ವರ್ಷದಲ್ಲಿದ್ದಾರೆ.

ಹಿರಿಯ ಯಕ್ಷಗಾನ ವೇಷಧಾರಿ ಚೇರ್ಕಾಡಿ ರಾಧಾಕೃಷ್ಣ ನಾಯ್ಕ ಅವರ ಪ್ರೇರಣೆ ಹಾಗೂ ಗುರುತನದಲ್ಲಿ ಯಕ್ಷ ವಿದ್ಯಾ ಪಾರಂಗತರಾದ ಶ್ಯಾಮನಾಯ್ಕರು ಆರನೇ ತರಗತಿಗೆ ಓದಿಗೆ ಶರಣು ಹೊಡೆದು 13ರ ಹರೆಯದಲ್ಲೇ ಕಲಾಜೀವನವನ್ನು ಆಲಂಗಿಸಿಕೊಂಡವರು.

ಅಮೃತೇಶ್ವರಿ-1, ಸಾಲಿಗ್ರಾಮ-1, ಇಡಗುಂಜಿ-5, ಬಗ್ವಾಡಿ-3, ಸೌಕೂರು-3, ಹಾಲಾಡಿ-6 ಮೇಳಗಳಲ್ಲಿ ಸೇವೆ ಸಲ್ಲಿಸಿ ಇದೀಗ ಮಂದಾರ್ತಿ ಮೇಳದಲ್ಲಿ 18ನೇ ವರ್ಷದ ತಿರುಗಾಟದಲ್ಲಿರುವ ಶ್ಯಾಮನಾಯ್ಕ ವೃತ್ತಿರಂಗದಲ್ಲಿ ಒಟ್ಟು 37 ಕಲಾವಸಂತವನ್ನು ಸಾರ್ಥಕ್ಯದಿಂದ ಕಳೆದಿದ್ದಾರೆ.

ಪಾತ್ರೋಚಿತವಾದ ನೃತ್ಯ, ಅಭಿನಯ, ಭಾಷೆ, ಭಾವನೆ ಹಾಗೂ ರಂಗನಡೆಯಲ್ಲಿ ಕಂಗೊಳಿಸುವ ಶ್ಯಾಮನಾಯ್ಕರು ದೇವೇಂದ್ರ, ಧರ್ಮರಾಯ, ಬ್ರಹ್ಮ, ನಾರದ, ವಿಷ್ಣು, ಕಮಲಭೂಪ, ಬಲರಾಮ.... ಮೊದಲಾದ ಪೌರಾಣಿಕ ಪಾತ್ರಗಳಲ್ಲಿ ವಿಶೇಷ ಕಲಾವಂತಿಕೆಯನ್ನು ಮೆರೆಯುತ್ತಾರೆ.

ಸಹೃದಯ ಕಲಾವಿದ ಶ್ಯಾಮನಾಯ್ಕ್ ಅವರ ಸಹಧರ್ಮಿಣಿ ಶಾರದಾಬಾಯಿ. ಪೂರ್ಣಿಮಾ, ಪ್ರಶಾಂತ, ಪವಿತ್ರಾ ಇವರ ಮೂವರು ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಇವರಿಗೆ ಗೌರವ ಪೂರ್ವಕ ಅನೇಕ ಸಂಮಾನಗಳು ಸಂದಿರುತ್ತವೆ.



## ಶಿವಶಂಕರ್ ಎಚ್.ಜಿ.

*ಮತ್ತಾನೆ, ಹರಿಹರಪುರ, ಕೊಪ್ಪ ತಾಲೂಕು,*
*ಚಿಕ್ಕಮಗಳೂರು ಜಿಲ್ಲೆ – 577126*
*ದೂರವಾಣಿ : 08265–274130*

ಇಂಪಿನ ಸುಖಸ್ವರ ಶ್ರೀಮಂತಿಕೆಯಲ್ಲಿ ಯಕ್ಷಗಾನ ರಂಗಶ್ರಾವಕರ ಕರ್ಣಾಂಗಣಕ್ಕೆ ತಂಪಿನ ಗಾನಾಮೃತವನ್ನು ಸುರಿಯುವ ಪ್ರತಿಭಾನ್ವಿತ ಭಾಗವತ ಎಚ್.ಜಿ. ಶಿವಶಂಕರ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಹರಿಹರ ಪುರದ ಶಿವಶಂಕರ್ ಗಣೇಶಯ್ಯ–ಸಾವಿತ್ರಮ್ಮ ದಂಪತಿಯ ಸುಪುತ್ರರಾಗಿ 23–1–1962ರಲ್ಲಿ ಜನಿಸಿದವರು.

ಕೌಟುಂಬಿಕವಾಗಿ ಯಕ್ಷಗಾನದ ಯಾವುದೇ ಹಿನ್ನೆಲೆಯನ್ನು ಹೊಂದಿರದ ಶಿವಶಂಕರ ಅವರಿಗೆ ಗಾನಗಾರುಡಿಗ ಕಾಳಿಂಗ ನಾವಡರ ಭಾಗವತಿಕೆಯೇ ಗಾನ ಜೀವನಕ್ಕೆ ಪ್ರೇರಣಾಶಕ್ತಿಯಾಯಿತು. ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸದ ಬಳಿಕ 19ನೇ ವಯಸ್ಸಿನಲ್ಲೇ ಯಕ್ಷಗಾನ ಪ್ರಪಂಚದ ಹಾದಿ ಹಿಡಿದ ಶಿವಶಂಕರ್ ಅವರು 'ಬೋಧನಾ ಪ್ರವೀಣ' ಬಿರುದಾಂಕಿತ ಹಿರಿಯ ಭಾಗವತ ಘೋರ್ಪಾಡಿ ವಿಠಲ ಪಾಟೀಲ್‌ರಲ್ಲಿ ಭಾಗವತಿಕೆ ಶಿಕ್ಷಣ ಪಡೆದವರು.

ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ, ಮೇಗರವಳ್ಳಿ ಹಾಗೂ ಶ್ರೀ ಗುತ್ಯಮ್ಮ ಪ್ರಸಾದಿತ ಯಕ್ಷಗಾನ ಮಂಡಳಿ ಗುತ್ತಿ ಎಡೇಹಳ್ಳಿ ಇದರ ಪ್ರಧಾನ ಭಾಗವತರಾಗಿ 12 ವರ್ಷಗಳ ತಿರುಗಾಟ ಕಂಡ ಶಿವಶಂಕರ ಭಾಗವತ್ ಅನೇಕಾನೇಕ ಹವ್ಯಾಸಿ ಸಂಘ–ಸಂಸ್ಥೆಗಳ ಭಾಗವತರಾಗಿ ದುಡಿಯುತ್ತಿದ್ದಾರೆ.

ಸಶಕ್ತ ಪ್ರಸಂಗ ಮಾಹಿತಿ, ಸಮರ್ಪಕ ರಂಗಪರಿಣತಿಯಲ್ಲಿ ರಂಗನೆಲದ ಕಲಾವಿದರನ್ನು ಪಾತ್ರೋಚಿತವಾಗಿ ದುಡಿಸಿಕೊಳ್ಳುವ ಅನುಭವಿ ಭಾಗವತರಾದ ಶಿವಶಂಕರ್ ಅವರು ಪ್ರಸ್ತುತ ಗುತ್ತಿ ಎಡೇಹಳ್ಳಿ ಮೇಳದ ಪ್ರಧಾನ ಭಾಗವತರು.

ಶಿವಶಂಕರ ಭಾಗವತ್ ಅವರ ಧರ್ಮಪತ್ನಿ ಲತಾ. ಹರ್ಷ ಹಾಗೂ ವೆಂಕಟೇಶ ಇವರ ಉಭಯ ಪುತ್ರರು.

ನಿಗರ್ವಿ, ಸ್ನೇಹಜೀವಿ ಭಾಗವತ ಶಿವಶಂಕರರ ಉನ್ನತ ಗಾನಪ್ರತಿಭೆ ಗುರುತಿಸಿ ನಾಡಿನ ಅನೇಕ ಸಂಘ–ಸಂಸ್ಥೆಗಳು ಸಂಮಾನಿಸಿ ಗೌರವಿಸಿವೆ.



## ಶ್ರೀಕಂಠ ಭಟ್, ಕಿಗ್ಗ

*ಶೃಂಗೇರಿ ತಾಲೂಕು,*
*ಚಿಕ್ಕಮಗಳೂರು ಜಿಲ್ಲೆ*
***ದೂರವಾಣಿ : 9663265691 / 9481922382***

ಕಥಾನಕಗಳ ಪಾತ್ರ, ಕಾಲ, ಸನ್ನಿವೇಶ ಹಾಗೂ ರಂಗಧರ್ಮದ ಸ್ಪಷ್ಟ ಪರಿಣತಿಯೊಂದಿಗೆ ಭಾಗವತರ ಗಾನ ವಿಧಾನಕ್ಕೆ ಸುಯೋಗ್ಯ ಸಾಂಗತ್ಯ ನೀಡುವ ಸಮರ್ಥ ಚಂಡೆವಾದಕ ಶ್ರೀಕಂಠ ಭಟ್, ಕಿಗ್ಗ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಕಿಗ್ಗ ಎಂಬ ಪುಟ್ಟ ಹಳ್ಳಿಯಲ್ಲಿ ಇವರ ಜನನ. ಕೆ. ಮಂಜಯ್ಯ ದಫೇದಾರ್-ಲಕ್ಷ್ಮಮ್ಮ ದಫೇದಾರ್ ಇವರ ತಂದೆ-ತಾಯಿ. ಭಟ್ಟರು ಇದೀಗ ಸುವರ್ಣ ವರ್ಷದಲ್ಲಿರುವ ಸಂಪನ್ನ ಕಲಾವಿದ.

ಶ್ರೀಕಂಠಭಟ್ಟರ ತಂದೆಯವರು ಕಿಗ್ಗ ಮೇಳದಲ್ಲಿ ವೇಷಧಾರಿಯಾಗಿ ಗುರುತಿಸಿಕೊಂಡಿದ್ದರು. ಹಾಗಾಗಿ ಕಲಾವಂತಿಕೆಯೆಂಬುದು ಇವರಿಗೆ ಜನ್ಮಜಾತ ಬಳುವಳಿಯೂ ಹೌದು.

ತಮ್ಮ 26ರ ಹರೆಯದಲ್ಲಿ ಯಕ್ಷಲೋಕ ಪ್ರವೇಶಿಸಿದ ಶ್ರೀಕಂಠ ಭಟ್ ವೃತ್ತಿರಂಗದಲ್ಲಿ ಸುಯೋಗ್ಯ ಚಂಡೆಗಾರರಾಗಿ ಹೆಸರು ಗಳಿಸಿದರು.

ಬಗ್ವಾಡಿ, ಮಡಾಮುಕ್ಕಿ, ಅಮೃತೇಶ್ವರಿ, ಕಮಲಶಿಲೆ, ಮಂದಾರ್ತಿ, ಶಿರಸಿ, ಆಜ್ರಿ-ಚೋನಮನೆ, ಸೀತೂರು... ಮೊದಲಾದ ಬಡಗಿನ ಮೇಳಗಳಲ್ಲಿ ಇವರ ಕಲಾತಿರುಗಾಟ ಸಾರ್ಥಕ 21 ವರ್ಷಗಳನ್ನು ಪೂರೈಸಿರುತ್ತದೆ. ಪ್ರಸ್ತುತ ಭಟ್ಟರು ಆಜ್ರಿ ಮೇಳದ ಪ್ರಧಾನ ಚಂಡೆವಾದಕರಾಗಿ ರಂಗ ವ್ಯವಸಾಯದಲ್ಲಿದ್ದಾರೆ.

ಸ್ಪಷ್ಟ ಹೊರಳಿಕೆ, ದಸ್ತನ್ನೇ ಪ್ರತಿಧ್ವನಿಸುವ ನುಡಿಸಾಣಿಕೆ, ಗರಿಷ್ಠ ರಂಗತಂತ್ರ ಹಾಗೂ ವಿಶೇಷ ಪ್ರಸಂಗ ಮಾಹಿತಿಯನ್ನು ಹೊಂದಿದ ಶ್ರೀಕಂಠ ಭಟ್ಟರ ಚಂಡೆವಾದನದ ಸೂಕ್ತ ಸಾರಥ್ಯ ಹಿಮ್ಮೇಳ-ಮುಮ್ಮೇಳ ಎರಡಕ್ಕೂ ಉಲ್ಲಾಸಪ್ರದವಾಗಿ ರಂಗನೆಲಕ್ಕೆ ಗಂಡುಧ್ವನಿಯ ಗುಂಗು ತುಂಬುತ್ತದೆ.

ಶ್ರೀಕಂಠ ಭಟ್ಟರ ಧರ್ಮಪತ್ನಿ ರೇಣುಕಾ. ಸುಪ್ರಿಯಾ ಹಾಗೂ ಸುಮಂತ ಇವರ ಈರ್ವರು ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಭಟ್ಟರು ಸಂಮಾನಿತರಾಗಿದ್ದಾರೆ.



## ಶ್ರೀಧರ ಕುಮಾರ್, ಮಾನ್ಯ

*ಮಾವಿನ ಮನೆ, ಹೊಸಂಗಡಿ, ಅಂಚೆ : ಹೊಸಂಗಡಿ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9945232887*

ಬಡಗುತಿಟ್ಟು ಯಕ್ಷರಂಗಮಂಚದಲ್ಲಿ ಪುಂಡುವೇಷದ ಗಂಡುತನದಲ್ಲಿ ವಿಜೃಂಭಿಸುವ ಯುವ ಕಲಾವಿದ ಮಾನ್ಯ ಶ್ರೀಧರ ಕುಮಾರ್.

ಕುಂದಾಪುರ ತಾಲೂಕಿನ ಮಾನ್ಯ ಎಂಬ ಊರಿನಲ್ಲಿ ಮಂಜುನಾಥ ಕುಲಾಲ-ಚೀರು ದಂಪತಿಯ ಸುಪುತ್ರರಾಗಿ ಜನಿಸಿದ ಶ್ರೀಧರ್ ಇದೀಗ 35ರ ಹರೆಯದಲ್ಲಿದ್ದಾರೆ.

ಚಿಕ್ಕಂದಿನಿಂದಲೇ ಯಕ್ಷಗಾನ ಕಲೆಯ ಕುರಿತು ಅಪಾರ ಒಲವು ಹೊಂದಿದ್ದ ಇವರು ನಾಲ್ಕನೆ ತರಗತಿಗೆ ಕಲಿಕೆಗೆ ಶರಣು ಹೊಡೆದು 12ರ ಹರೆಯದಲ್ಲೇ ಕಲೆಯನ್ನು ಬದುಕಾಗಿಸಿಕೊಂಡರು.

ತಂತ್ರಾಡಿ ಹಿರಿಯಣ್ಣ ಶೆಟ್ಟಿಗಾರ್, ತೀರ್ಥಹಳ್ಳಿ ಗೋಪಾಲ ಆಚಾರ್ಯ ಹಾಗೂ ಉಪ್ಪುಂದ ನಾಗೇಂದ್ರ ರಾವ್ ಅವರ ಗುರುತನ-ಮಾರ್ಗದರ್ಶನವನ್ನು ಪಡೆದ ಶ್ರೀಧರ ಕುಮಾರ್ ವೃತ್ತಿರಂಗದಲ್ಲಿ ಸಾರ್ಥಕ ಹೆಸರುಗಳಿಸುತ್ತಿದ್ದಾರೆ.

ಮಂದಾರ್ತಿ–10, ಪೆರ್ಡೂರು–4, ಸಾಲಿಗ್ರಾಮ–4, ಮಾರಣಕಟ್ಟೆ–1, ಹಾಲಾಡಿ–3, ಕಮಲಶಿಲೆ–3... ಹೀಗೆ ಶ್ರೀಧರ ಕುಮಾರರ ಕಲಾಬದುಕು ರಜತಪರ್ವ ಕಂಡಿರುತ್ತದೆ. ಪ್ರಸ್ತುತ ಹಾಲಾಡಿ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ವೃತ್ತಿ ಮೇಳಗಳ ಉತ್ತಮ ಪುಂಡುವೇಷಧಾರಿಯಾಗಿ ಗುರುತಿಸಿಕೊಂಡ ಇವರು ಆ ವೇಷಕ್ಕೊಪ್ಪುವ ಆಳಂಗ, ಸ್ವರ ಚೈತನ್ಯ, ವೇಷ ವೈಖರಿ ಹಾಗೂ ಚುರುಕಾದ ನೃತ್ಯವಿಧಾನದಲ್ಲಿ ಗಮನ ಸೆಳೆಯುತ್ತಾರೆ. ಶ್ರೀ ಕೃಷ್ಣ, ಅಭಿಮನ್ಯು, ಬಬ್ರುವಾಹನ, ಲವ-ಕುಶ, ಪ್ರಸೇನ, ವೃಷಸೇನ... ಮೊದಲಾದ ಭೂಮಿಕೆಗಳನ್ನು ಇವರು ಯಶಸ್ವಿಯಾಗಿ ನಿರ್ವಹಿಸುತ್ತಾರೆ.

ಜೋಡಾಟಗಳಲ್ಲಿ ಶ್ರೀಧರ ಕುಮಾರ ಅವರ ಮೂರನೇ ವೇಷದ ಬಿರುಸು-ಬೆರಗಿನ ವೀರತನ ಪ್ರೇಕ್ಷಕರನ್ನು ರೋಮಾಂಚನಗೊಳಿಸುತ್ತದೆ.

ಮಾನ್ಯ ಶ್ರೀಧರ ಕುಮಾರ್ ಧರ್ಮಪತ್ನಿ ಜ್ಯೋತಿಯವರೊಂದಿಗೆ ಹೊಸಂಗಡಿಯ ಮಾವಿನಮನೆ ಎಂಬಲ್ಲಿ ವಾಸ್ತವ್ಯ ಕಂಡಿದ್ದಾರೆ. ಯುವ ಪ್ರತಿಭೆ ಶ್ರೀಧರ ಕುಮಾರ್ ಸ್ಥಳೀಯ ಸಂಘ-ಸಂಸ್ಥೆಗಳಿಂದ ಸಂಮಾನವನ್ನೂ ಪಡೆದಿದ್ದಾರೆ.



# ಶ್ರೀಧರ ಗಾಣಿಗ, ಉಪ್ಪುಂದ

*ಅಂಚೆ : ಉಪ್ಪುಂದ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9945736830*

ಸೊಬಗು ತುಂಬಿದ ವೇಷಗಾರಿಕೆ, ಸೊಗಸು ತೋರುವ ಹೆಜ್ಜೆಗಾರಿಕೆ, ಮಧುರ ಕಂಠದ ಮಾತುಗಾರಿಕೆ ಹಾಗೂ ಉತ್ಸಾಹಪೂರ್ಣ ರಂಗ ಕಸುಬುಗಾರಿಕೆ ಬಡಗುತಿಟ್ಟಿನ ಸ್ತ್ರೀ ಭೂಮಿಕೆಗಳನ್ನು ನಿರೂಪಿಸುವ ಉದಯೋನ್ಮುಖ ಯುವ ಕಲಾವಿದ ಶ್ರೀಧರ ಗಾಣಿಗ ಉಪ್ಪುಂದ.

ಕುಂದಾಪುರ ತಾಲೂಕಿನ ಉಪ್ಪುಂದವೇ ಶ್ರೀಧರ ಗಾಣಿಗರ ಜನ್ಮಸ್ಥಳ. ಇವರ ತಂದೆ ರಾಮಗಾಣಿಗ, ತಾಯಿ ಗಿರಿಜಾ. 1973ರ ಸೆಪ್ಟೆಂಬರ್ 9ರಂದು ಇವರ ಹುಟ್ಟು.

ಶ್ರೀಧರ ಗಾಣಿಗರ ಅಜ್ಜ ನಾಗಪ್ಪ ಗಾಣಿಗ ಈ ಕ್ಷೇತ್ರದ ಹವ್ಯಾಸಿ ವೇಷಧಾರಿ. ಹಾಗಾಗಿ ಕಲೆಯ ನಂಟತನ ಕೌಟುಂಬಿಕವಾಗಿಯೇ ಶ್ರೀಧರರಿಗೆ ಅಂಟಿಕೊಂಡಿತು.

ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ಹೆರಂಜಾಲು ಸುಬ್ಬಣ್ಣ ಗಾಣಿಗರ ಶಿಷ್ಯನಾಗಿ ಕಲಾವಿದ್ಯೆಯನ್ನು ಆರ್ಜಿಸಿಕೊಂಡು ಈ ಗುರುದ್ವಯರ ಪ್ರೇರಣೆ-ಪ್ರೋತ್ಸಾಹದಿಂದಲೇ ರಂಗಬಾಳುವೆಗೆ ಗಾಣಿಗರು ಮುಖ ಮಾಡಿದರು.

7ನೇ ತರಗತಿಯ ತರುವಾಯ 15ರ ಹರೆಯದಲ್ಲೇ ವೃತ್ತಿಬದುಕು ಕಂಡ ಶ್ರೀಧರ ಗಾಣಿಗರು ಮಂದಾರ್ತಿ–8, ಸೌಕೂರು–3, ಅಮೃತೇಶ್ವರಿ–1, ಮಾರಣಕಟ್ಟೆ–5.... ಹೀಗೆ 17 ವರ್ಷಗಳನ್ನು ಯಕ್ಷಗಾನ ತಿರುಗಾಟದಲ್ಲಿ ಕಳೆದಿದ್ದಾರೆ.

ಪಾತ್ರಗಳ ಔಚಿತ್ಯವನ್ನು ಅರ್ಥವಿಸಿಕೊಂಡು, ಉತ್ತಮ ರಂಗ ತಯಾರಿಯಲ್ಲಿ ಕಲಾವಂತಿಕೆಯನ್ನು ನಿರೂಪಿಸುವ ಶ್ರೀಧರ ಗಾಣಿಗರ ಮೀನಾಕ್ಷಿ, ಸುಭದ್ರೆ, ದ್ರೌಪದಿ, ಮೋಹಿನಿ, ಮದನಾಕ್ಷಿ, ಭ್ರಮರಕುಂತಳೆ, ಯೋಜನಗಂಧಿ... ಮೊದಲಾದ ಪುರಾಣ ಸ್ತ್ರೀಪಾತ್ರಗಳು ಕಲಾರಸಿಕರ ಶ್ಲಾಘನೆಗೆ ಪಾತ್ರವಾಗಿವೆ.

ಉತ್ತಮ ಸ್ತ್ರೀವೇಷಧಾರಿಯಾದ ಇವರು ಪ್ರಸಂಗ ಸಂದರ್ಭೋಚಿತವಾಗಿ ಪುರುಷವೇಷಗಳನ್ನೂ ನಿರ್ವಹಿಸಿ ಸೈ ಅನ್ನಿಸಿಕೊಂಡವರು.

ಶ್ರೀಧರ ಗಾಣಿಗರ ಬಾಳ ಸಂಗಾತಿ ಸುಮಿತ್ರಾ. ಶ್ರೇಯಾ ಹಾಗೂ ಚಿರಾಗ್ ಇವರ ಉಭಯ ಮಕ್ಕಳು.

ಪ್ರತಿಭಾನ್ವಿತ ಕಲಾವಿದ ಶ್ರೀಧರ ಗಾಣಿಗರು ಹಲವಾರು ಸಂಘ-ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ.



## ಶ್ರೀಧರ ಡಿ. ನಾಯ್ಕ, ಹಾರ್ಸಿಕಟ್ಟಾ

*ಅಂಚೆ : ಅಜೆಕಾರು, ಕಾರ್ಕಳ ತಾಲೂಕು,*
*ಉಡುಪಿ ಜಿಲ್ಲೆ*
*ದೂರವಾಣಿ : 9741824975*

ಉತ್ತಮ ಕಂಠಶ್ರೀ ಸಂಪನ್ನ ಯುವ ಭಾಗವತ ಶ್ರೀಧರ ನಾಯ್ಕ ಹಾರ್ಸಿಕಟ್ಟಾ.

ಉತ್ತರಕನ್ನಡ ಸಿದ್ದಾಪುರ ತಾಲೂಕಿನ ಹಾರ್ಸಿಕಟ್ಟಾ ಎಂಬಲ್ಲಿ ದುರ್ಗ ನಾಯ್ಕ-ಕನ್ಯೆ ನಾಯ್ಕ ದಂಪತಿಯ ಸುಪುತ್ರನಾಗಿ 1-1-1975ರಲ್ಲಿ ಜನಿಸಿದ ಶ್ರೀಧರ ನಾಯ್ಕ ಅವರು 7ನೇ ತರಗತಿವರೆಗೆ ಓದಿ, ತನ್ನ 18ನೇ ವಯಸ್ಸಿನಲ್ಲಿ ಯಕ್ಷಗಾನ ಬದುಕು ಕಂಡರು.

ಬಾಲ್ಯದಿಂದಲೇ ಬಣ್ಣದ ಬದುಕಿನ ಹಂಬಲ ಹೊಂದಿದ್ದ ಇವರಿಗೆ ದಿ॥ ಜಿ.ಆರ್. ಕಾಳಿಂಗ ನಾವಡರ ಪದ್ಯಗಳೇ ವೃತ್ತಿರಂಗದ ಪಾದಾರ್ಪಣೆಗೆ ಸ್ಫೂರ್ತಿಯಾದುವು.

ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ಕೆ.ಪಿ. ಹೆಗಡೆಯವರ ಶಿಷ್ಯನಾಗಿ ಕಲಾವಿದ್ಯೆಯನ್ನು ಗಳಿಸಿಕೊಂಡ ಶ್ರೀಧರ ನಾಯ್ಕ ಸುಮಧುರ ಶಾರೀರ ಸಂಪತ್ತಿನೊಂದಿಗೆ ಭಾಗವತಿಕೆಯಲ್ಲಿ ಗುರುತಿಸಿಕೊಂಡವರು.

ಸಾಲಿಗ್ರಾಮ-1, ಬಗ್ವಾಡಿ-2, ಮಡಾಮಕ್ಕಿ-8, ಅಮೃತೇಶ್ವರಿ-1, ಸಿಗಂಧೂರು-1... ಹೀಗೆ 13 ವರ್ಷಗಳ ಕಲಾತಿರುಗಾಟ ಇವರದ್ದಾಗಿದೆ.

ಪೌರಾಣಿಕ ಪ್ರಸಂಗಾನುಭವ ಇವರಿಗಿದ್ದರೂ ನವೀನ ಪ್ರಸಂಗಗಳಲ್ಲಿ ಇವರ ಗಾನಪ್ರತಿಭೆ ಗರಿಷ್ಠಮಟ್ಟದಲ್ಲಿ ನಿರೂಪಿಸಲ್ಪಡುತ್ತದೆ.

ಭಾಗವತರಾದ ಶ್ರೀಧರ ನಾಯ್ಕರು ನೃತ್ಯಾಭ್ಯಾಸವನ್ನು ಮಾಡಿದ್ದಾರೆ. ಹಲವಾರು ವೇಷಗಳನ್ನೂ ನಿರ್ವಹಿಸಿದ ಅನುಭವ ಇವರಿಗಿದೆ. ಹವ್ಯಾಸೀ ಸಂಘ ಸಂಸ್ಥೆಗಳ ಭಾಗವತನಾಗಿ ಇವರು ಭಾಗವಹಿಸುತ್ತಾರೆ.

ಶ್ರೀಧರ ನಾಯ್ಕ ಅವರು ಶಕುಂತಲಾ ಎಂಬವರನ್ನು ವರಿಸಿ ಕಲಾಶ್ರೀ ಹಾಗೂ ಕಾವ್ಯಶ್ರೀ ಎಂಬ ಉಭಯ ಹೆಣ್ಣು ಮಕ್ಕಳ ತಂದೆಯಾಗಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಪ್ರತಿಭೆಯನ್ನು ಗುರುತಿಸಿ ಗೌರವಿಸಿವೆ.



## ಶ್ರೀಧರ ದತ್ತಾತ್ರೇಯ ಭಟ್ಟ ಕತಗಾಲ

*ಅಂಚೆ : ಕತಗಾಲ (ಉ.ಕ.)*
*ದೂರವಾಣಿ : 08386-264593*
*9481511058*

ಸುಮಧುರ ಸ್ವರಸಿರಿಯೊಂದಿಗೆ ಸಶಕ್ತ ರಂಗ ತಾಂತ್ರಿಕತೆಯನ್ನು ಕೈಗೂಡಿಸಿಕೊಂಡ ಯುವ ಭಾಗವತ ಶ್ರೀಧರ ದತ್ತಾತ್ರೇಯ ಭಟ್ಟ, ಕತಗಾಲ.

ಉತ್ತರ ಕನ್ನಡ ಅಳಕೋಡ ಗ್ರಾಮದ ಕತಗಾಲವೇ ಶ್ರೀಧರ ಭಟ್ಟರ ಹುಟ್ಟೂರು. 22-7-1971ರಲ್ಲಿ ಜನಿಸಿದ ಇವರು ದತ್ತಾತ್ರೇಯ ಭಟ್ಟ ಹಾಗೂ ಗಂಗು ಬಾಯಿ ಭಟ್ ದಂಪತಿಯ ಸುಪುತ್ರ. ಎಳವೆಯಲ್ಲಿಯೇ ಯಕ್ಷಕಲೆಯ ಸೆಳೆತ ಹೊಂದಿದ್ದ ಇವರಿಗೆ ಊರಿನ ಮಿತ್ರರ ಸಹಕಾರ-ಪ್ರೇರಣೆ ಎಂಬುದು ರಂಗಭೂಮಿಯ ಹಾದಿ ಹಿಡಿಸಿತು.

ದ್ವಿತೀಯ ಪಿ.ಯು.ಸಿ. ವ್ಯಾಸಂಗದ ಬಳಿಕ ಅಂದರೆ ತನ್ನ ಹತ್ತೊಂಬತ್ತರ ಹರೆಯದಲ್ಲೇ ಕಲಾಲೋಕ ಪ್ರವೇಶಿಸಿದ ಶ್ರೀಧರ ಭಟ್ಟರು ಹಿರಿಯ ಭಾಗವತ ಗೋಳಗೋಡ ಕೆ.ಪಿ. ಹೆಗಡೆಯವರ ಶಿಷ್ಯನಾಗಿ ಭಾಗವತಿಕೆಯ ಒಳ-ಹೊರಗನ್ನು ಸಶಕ್ತವಾಗಿ ಪಡೆದುಕೊಂಡರು.

ಸಾಲಿಗ್ರಾಮ-4, ಬಚ್ಚಗಾರು-4, ಮಂದಾರ್ತಿ-2, ಹಿರಿಯಡಕ (ಹೊಸ)-2... ಹೀಗೆ 12 ವರ್ಷಗಳ ಕಲಾತಿರುಗಾಟ ಇವರದ್ದಾಗಿದ್ದು ಪ್ರಸ್ತುತ ಹಿರಿಯಡಕ ಮೇಳದ ಪ್ರಧಾನ ಭಾಗವತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪೌರಾಣಿಕ ಪ್ರಸಂಗಗಳನ್ನು ಹಾಗೂ ನವೀನ ಪ್ರಸಂಗಗಳನ್ನು ಜನಮನ ಮೆಚ್ಚುವಂತೆ ಆಡಿ ತೋರಿಸುವ, ರಂಗದ ವೇಷಧಾರಿಗಳ ನಾಡಿ ಮಿಡಿತವನ್ನರಿತು ಹಾಡಿಕೆಯಲ್ಲಿ ವ್ಯವಹರಿಸುವ ಶ್ರೀಧರ ಭಟ್ಟರು ಅನೇಕ ಕೂಟಗಳಲ್ಲೂ ಭಾಗವಹಿಸಿ ಭಾಗವತಿಕೆ ಮಾಡಿ ಗೆಲುವು ಕಂಡಿದ್ದಾರೆ.

ಧರ್ಮಪತ್ನಿ ರೇಖಾ ಭಟ್ಟ, ಓರ್ವ ಸುಪುತ್ರಿ ಶ್ರೀರಕ್ಷಾ, ಶ್ರೀಧರ ಭಟ್ಟರ ಪುಟ್ಟ ಸಂಸಾರ.

ಹಲವಾರು ಸಂಘ-ಸಂಸ್ಥೆಗಳಿಂದಲೂ ಭಟ್ಟರು ಸಂಮಾನಿತರಾಗಿದ್ದಾರೆ.



## ಶ್ರೀಧರ ಭಂಡಾರಿ, ಭದ್ರಾಪುರ ಮನೆ

*ಅಂಚೆ : ಹೊಸಂಗಡಿ, ಕುಂದಾಪುರ ತಾಲೂಕು*
*ಉಡುಪಿ ಜಿಲ್ಲೆ*
*ದೂರವಾಣಿ : 9844827474*

ಪುರಾಣ ಪಾತ್ರಗಳ ಸತ್ವ–ತತ್ವವನ್ನು ತನ್ನದೇ ವಿಶಿಷ್ಟ ಕಲಾಪ್ರತಿಭೆಯ ಮೊತ್ತದಲ್ಲಿ ಕಲಾಜಗತ್ತಿಗೆ ನೀಡುವ ಪ್ರತಿಭಾ ಸಂಪನ್ನ ಯಕ್ಷಗಾನ ಕಲಾವಿದ ಶ್ರೀಧರ ಭಂಡಾರಿ ಭದ್ರಾಪುರಮನೆ.

ಕುಂದಾಪುರ ತಾಲೂಕಿನ ಹೊಸಂಗಡಿಯಲ್ಲಿ 20–2–1976ರಲ್ಲಿ ಜನಿಸಿದ ಶ್ರೀಧರ ಭಂಡಾರಿಯವರು ಕೃಷ್ಣ ಭಂಡಾರಿ–ಶಾಂಭವಿ ಭಂಡಾರಿ ದಂಪತಿಯ ಸುಪುತ್ರ.

ಹತ್ತನೆ ತರಗತಿಯವರೆಗೆ ಶೈಕ್ಷಣಿಕ ಸಂಸ್ಕಾರವನ್ನು ಪಡೆದು ತನ್ನ ಇಪ್ಪತ್ತನೆ ವರ್ಷದಲ್ಲಿ ಬಣ್ಣದ ಜೀವನಕ್ಕೆ ಬದ್ಧರಾದ ಭಂಡಾರಿಯವರು ಹಳ್ಳಾಡಿ ಸುಬ್ರಾಯ ಮಲ್ಯರಲ್ಲಿ ಯಕ್ಷ ಶಿಕ್ಷಣವನ್ನು ಪಡೆದವರು.

ಗೋಳಿಗರಡಿ–2, ಮಡಾಮಕ್ಕಿ–2, ಕಮಲಶಿಲೆ–2, ಪೆರ್ಡೂರು–2, ಸೌಕೂರು–4.... ಹೀಗೆ 12 ವರ್ಷಗಳ ಕಲಾಯಾತ್ರೆಯಲ್ಲಿ ಭಂಡಾರಿಯವರ ಉಜ್ವಲ ಪ್ರತಿಭೆ ಯಕ್ಷಲೋಕದಲ್ಲಿ ಬೆಳಗುವಂತಾಯಿತು.

ಖಳನಾಯಕ, ಪ್ರತಿನಾಯಕ ಪಾತ್ರಗಳಲ್ಲಿ ಭಂಡಾರಿಯವರ ಕಲಾವಂತಿಕೆ ಮೇಲ್ತರಗತಿಯಲ್ಲಿ ವಿಜೃಂಭಿಸುತ್ತದೆ.

ಕಂಸ, ಸಾಲ್ವ, ಕೌಂಡ್ಲೀಕ, ರಾವಣ, ಕೌರವ, ಶಕುನಿ, ಘಟೋತ್ಕಚ, ಭೀಮ, ರಾಮ, ಭೀಷ್ಮ, ಶತ್ರುಘ್ನ, ವಿಭೀಷಣ, ಅರ್ಜುನ.... ಮೊದಲಾದ ಪಾತ್ರಗಳ ಮೂಲಕ ಭಂಡಾರಿಯವರು ಅಪಾರ ಜನಮನ್ನಣೆಯನ್ನು ಗಳಿಸಿರುತ್ತಾರೆ.

ವೇಷಗಾರಿಕೆ, ನೃತ್ಯಗಾರಿಕೆ, ಮಾತುಗಾರಿಕೆ ಹಾಗೂ ಪ್ರಸಂಗ ತಾಂತ್ರಿಕತೆ ಇವರ ಒಟ್ಟು ಕಲಾವ್ಯಕ್ತಿತ್ವದಲ್ಲಿ ಸಮೃದ್ಧವಾಗಿ ಹೆಪ್ಪುಗಟ್ಟಿದೆ.

ಶ್ರೀಧರ ಭಂಡಾರಿಯವರ ಸಹಧರ್ಮಿಣಿ ಅಂಬಿಕಾ. ಓರ್ವ ಸುಪುತ್ರ ಶ್ರವಂತ್. ಪುಟ್ಟ ಸಂಸಾರದ ಯಜಮಾನ ಕೃಷಿ ಬದುಕು ಇವರಿಗೆ ಉಪವೃತ್ತಿ.

ಅನೇಕ ಸಂಘ–ಸಂಸ್ಥೆಗಳಿಂದ ಭಂಡಾರಿಯವರಿಗೆ ಗೌರವಪೂರ್ಣ ಮಾನ–ಸಂಮಾನ ದೊರಕಿರುತ್ತದೆ.



## ಶ್ರೀಧರ ಸುಬ್ರಾಯ ಭಂಡಾರಿ

*ಅಂಚೆ : ಹಾಸಣಗಿ, ಯಲ್ಲಾಪುರ ತಾಲೂಕು (ಉ.ಕ).*

ನಾದಮಯ ಹೊರಳಿಕೆ-ಬೆರಳುಗಾರಿಕೆಯ ಪ್ರೌಢ ಪ್ರತಿಭೆಯ ಮದ್ದಳೆಗಾರಿಕೆಯಲ್ಲಿ ಸಾರ್ಥಕ ಕೀರ್ತಿಯನ್ನು ಸಂಪಾದಿಸಿದ ಯುವ ಮದ್ದಳೆವಾದಕ ಶ್ರೀಧರ ಸುಬ್ರಾಯ ಭಂಡಾರಿ.

ಯಲ್ಲಾಪುರ ತಾಲೂಕಿನ ಹಾಸಣಗಿ ಎಂಬಲ್ಲಿ 1974ರಲ್ಲಿ ಜನಿಸಿದ ಶ್ರೀಧರ ಭಂಡಾರಿಯವರು ಹಿರಿಯ ಮದ್ದಳೆಗಾರ ಸುಬ್ರಾಯ ಭಂಡಾರಿ-ಮಹಾದೇವಿ ದಂಪತಿಯ ಸುಪುತ್ರ.

9ನೇ ತರಗತಿಯವರೆಗಿನ ಶೈಕ್ಷಣಿಕ ಸಂಸ್ಕಾರದ ತರುವಾಯ 18ನೇ ವಯಸ್ಸಿನಲ್ಲೇ ರಂಗಜೀವನದ ಹಾದಿ ಹಿಡಿದ ಶ್ರೀಧರ ಭಂಡಾರಿಯವರ ಕುಟುಂಬದ ಕಲಾವಿದರೆಲ್ಲರೂ ಯಕ್ಷಗಾನ ಹಿಮ್ಮೇಳ ವಾದ್ಯಕಲೆಯಲ್ಲಿ ನಿಷ್ಣಾತರಾಗಿ ಹೆಸರು ಪಡೆದವರು. ಹಾಗಾಗಿ ಕಲಾಹಿನ್ನೆಲೆ ಎಂಬುದು ಇವರಿಗೆ ಆನುವಂಶಿಕ ಬಳುವಳಿಯಾಗಿ ವೃತ್ತಿರಂಗದಲ್ಲಿ ಗಟ್ಟಿ ಕಾಯಕಲ್ಪವನ್ನು ನಿರ್ಮಿಸುವಲ್ಲಿ ಶಕ್ತವಾಯಿತು.

ತಂದೆ ಸುಬ್ರಾಯ ಭಂಡಾರಿ ಹಾಗೂ ಮಾವ ಕರ್ಕಿ ಪ್ರಭಾಕರ ಭಂಡಾರಿಯುವರು ಇವರ ಕಲಾಗುರುಗಳಾಗಿಯೂ ವೃತ್ತಿರಂಗದ ನಾದಬದುಕಿಗೆ ನೀರೆರೆದು ಪೋಷಿಸಿದರು.

ಸಾಲಿಗ್ರಾಮ, ಗೋಳಿಗರಡಿ, ಅಮೃತೇಶ್ವರಿ, ಪೆರ್ಡೂರು ಮೇಳಗಳಲ್ಲಿ ಸುಮಾರು 13 ವರ್ಷಗಳ ರಂಗವ್ಯವಸಾಯ ಪೂರೈಸಿದ ಶ್ರೀಧರ ಭಂಡಾರಿಯವರು ಪ್ರಸ್ತುತ ಪೆರ್ಡೂರು ಮೇಳದ ಮದ್ದಳೆಗಾರರಾಗಿ ದುಡಿಯುತ್ತಿದ್ದಾರೆ.

ಮನೆತನದ ಖ್ಯಾತನಾಮರ ಗರಡಿಯಲ್ಲಿ ಮದ್ದಳೆವಾದನದ ಕಲಾವಿದ್ಯೆಯನ್ನು ಸುಪುಷ್ಟವಾಗಿ ಕೈತುಂಬಿಸಿಕೊಂಡ ಶ್ರೀಧರ ಭಂಡಾರಿಯವರ ಅನುಭವಪೂರ್ಣ ಹಿಮ್ಮೇಳದ ಕಸುವು-ಕಸುಬು ಯಕ್ಷಗಾನ ಲೋಕದಲ್ಲಿ ವಿಶೇಷ ಮಾನ್ಯತೆಯನ್ನು ಕಾಣುವಲ್ಲಿ ನಿಚ್ಚಳ ಗೆಲುವು ಕಂಡಿದೆ. ರಂಗಧರ್ಮ, ಪಾತ್ರನ್ಯಾಯ, ಪ್ರಸಂಗಗಳ ಔಚಿತ್ಯವನ್ನು ಸಂಪೂರ್ಣ ಮನಗಂಡು ವಾದನ ವಿಧಾನದಲ್ಲಿ ಪ್ರತಿಭೆ ಮೆರೆಯುವ ಶ್ರೀಧರ ಭಂಡಾರಿಯವರ ಮದ್ದಳೆವಾದನದ ನುಡಿಸಾಣಿಕೆ ಶ್ರವಣ ಮಂಜುಳ, ರಂಗರಸಿಕರಿಗೆ ರುಚಿಭರಿತ ರಸಗವಳ. ನುರಿತ ಮದ್ದಳೆಗಾರಿಕೆಯನ್ನು ಬಲ್ಲ ಇವರಿಗೆ ಚಂಡೆ ವಾದನದ ಪೂರ್ಣ ಪರಿಣತಿಯೂ ಇದೆ.

ಶ್ರೀಧರ ಭಂಡಾರಿಯವರ ಬಾಳಸಂಗಾತಿ ಭಾರತಿ. ಓರ್ವನೇ ಸುಪುತ್ರ ಸಾಗರ.

ಅನೇಕ ಸಂಘ-ಸಂಸ್ಥೆಗಳಲ್ಲಿ ಭಂಡಾರಿಯವರು ಸಂಮಾನಿತರಾಗಿದ್ದಾರೆ.



## ಶ್ರೀಧರ ಸುಬ್ರಾಯ ಭಟ್ಟ, ಕಾಸರಕೋಡ

*ಅಂಚೆ : ಸಾಲಕೋಡ 6,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 08387-262196 / 9448903827*

ಸೃಜನಾತ್ಮಕ ಹಾಸ್ಯಗಾರಿಕೆಯ ರಂಗ ರಂಜನೆಯಲ್ಲಿ ಯಕ್ಷಕಲಾರಸಿಕರಿಗೆ ಪುಷ್ಕಳ ವೈನೋದಿಕ ರಸವ್ಯಂಜನವನ್ನು ಉಣಬಡಿಸುವ ಉಜ್ವಲ ಪ್ರತಿಭೆಯ ಯುವ ಹಾಸ್ಯನಟ ಶ್ರೀಧರ ಭಟ್ಟ ಕಾಸರಕೋಡ.

ಹೊನ್ನಾವರ ತಾಲೂಕಿನ ಕಾಸರಕೋಡ ಎಂಬಲ್ಲಿ 22-11-1975ರಲ್ಲಿ ಜನಿಸಿದ ಶ್ರೀಧರ ಭಟ್ಟರು ಸುಬ್ರಾಯ ಭಟ್ಟ-ಅನಸೂಯಾ ಭಟ್ಟ ದಂಪತಿಯ ಸುಪುತ್ರರಾಗಿದ್ದಾರೆ.

ಹತ್ತನೆ ತರಗತಿಯವರೆಗೆ ಅಕ್ಷರ ಶಿಕ್ಷಣವನ್ನು ಪಡೆದು ತನ್ನ ಹದಿನೆಂಟರ ಹರೆಯದಲ್ಲಿ ಯಕ್ಷಗಾನ ಲೋಕದ ನೆಂಟತನವನ್ನು ಬಯಸಿದ ಇವರು ಕೆರೆಮನೆ ಶಿವರಾಮ ಹೆಗಡೆಯವರು ಹಾಗೂ ದೊಡ್ಡಪ್ಪ ನರಸಿಂಹ ಭಟ್ಟರ ತುಂಬು ಪ್ರೋತ್ಸಾಹ-ಪ್ರೇರಣೆಯೊಂದಿಗೆ ಕಲಾರಂಗಭೂಮಿಯನ್ನು ಆತ್ಮೀಕರಿಸಿಕೊಂಡು ಮುನ್ನಡೆದರು.

ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಸಶಕ್ತ ಕಲಾವಿದ್ಯೆಯನ್ನು ಸಂಪಾದಿಸಿದ ಇವರು ವೃತ್ತಿರಂಗದಲ್ಲಿ ಸಮರ್ಥ ಹಾಸ್ಯಗಾರರಾಗಿ ಮಾನ್ಯತೆ ಕಂಡರು.

ಗುಂಡಬಾಳ, ಸಾಲಿಗ್ರಾಮ, ಮಂದಾರ್ತಿ ಹಾಗೂ ಕೆರೆಮನೆ ಮೇಳಗಳಲ್ಲಿ ದುಡಿದ ಶ್ರೀಧರ ಭಟ್ಟರ ಕಲಾಕೃಷಿ 13 ವರ್ಷ ಕಂಡಿರುತ್ತದೆ.

ಭಾಷೆ, ಧ್ವನಿ, ಭಾವ, ನೃತ್ಯ, ಅಭಿನಯ, ವೇಷ ಹಾಗೂ ರೂಪಗಳ ಮೂಲಕ ಹಾಸ್ಯ ಪ್ರತಿಭೆಯ ಗರಿಷ್ಠ ಸಾಧ್ಯತೆಯನ್ನು ಕಂಡುಕೊಂಡ ಶ್ರೀಧರ ಭಟ್ಟರು ಪಾತ್ರದ ಉದ್ದೇಶಕ್ಕೆ ತಕ್ಕಂತೆ ವ್ಯವಹರಿಸಿ ಹಾಸ್ಯರಸೋತ್ಪತ್ತಿ ಮಾಡುತ್ತಾರೆ.

ಪೌರಾಣಿಕ ಪ್ರಸಂಗಗಳಲ್ಲಿ ಕಂಡುಬರುವ ಎಲ್ಲಾ ಬಗೆಯ ಹಾಸ್ಯಭೂಮಿಕೆಗಳಿಗೂ ತನ್ನತನದ ಛಾಪು ಮೂಡಿಸುವ ಇವರ ಕಲಾಪ್ರೌಢಿಮೆ ವಿಶೇಷವಾದದ್ದು.

ಚಂದಗೋಪ, ರಜಕ, ನಂದಿ ಶೆಟ್ಟಿ, ಬೇಹಿನಚರ, ದಾರುಕ, ಭೀಷ್ಮ ವಿಜಯದ ಬ್ರಾಹ್ಮಣ, ಸಾಲ್ವದೂತ, ಸುಭದ್ರಾ ಕಲ್ಯಾಣದ ಚಾರಕ... ಮೊದಲಾದ ಪೌರಾಣಿಕ ಹಾಸ್ಯ ಪಾತ್ರಗಳಲ್ಲಿ ಭಟ್ಟರ ಪ್ರತಿಭಾಶಾಲಿತ್ವ ಯಕ್ಷಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಾಡುವಂತೆ ಮಾಡಿದೆ.

ಸಮರ್ಥ ಹಾಸ್ಯಕಲಾವಿದರಾದ ಶ್ರೀಧರ ಭಟ್ಟರಿಗೆ ಚಂಡೆವಾದನದ ಪರಿಣತಿಯೂ ಇದೆ. ಪ್ರಸ್ತುತ ಇವರು ಇಡಗುಂಜಿ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಮಂಜುಳಾ ಭಟ್ ಎಂಬವರನ್ನು ವರಿಸಿದ ಭಟ್ಟರು ಗ್ರಹಸ್ಥ ಧಾರ್ಮಿಕರೂ ಹೌದು.

ಸ್ಥಳೀಯ ಸಂಘ-ಸಂಸ್ಥೆಗಳ ಆದರಣೀಯ ಮಾನ-ಸಂಮಾನ ಇವರಿಗೆ ದೊರಕಿರುತ್ತದೆ.



## ಶ್ರೀನಿವಾಸ ನಾಯ್ಕ ಬೇಳಂಜೆ

*ಬುಕ್ಕಿ ಗುಡ್ಡೆ, ಅಂಚೆ : ಪೆರ್ಡೂರು,*
*ಉಡುಪಿ ತಾಲೂಕು*
*ದೂರವಾಣಿ : 0820–2543696*

ಕಲಾವಂತ ಮನೆತನದ ಹಿನ್ನೆಲೆಯಲ್ಲಿ ಬಡಗುತಿಟ್ಟಿನ ಗಾನ ಬದುಕನ್ನು ಆತ್ಮೀಯವಾಗಿಸಿಕೊಂಡ ಯುವ ಭಾಗವತ ಬೆಳಂಜೆ ಶ್ರೀನಿವಾಸ ನಾಯ್ಕ.

ಉಡುಪಿ ತಾಲೂಕಿನ ಬೆಳಂಜೆ ಎಂಬ ಪುಟ್ಟ ಹಳ್ಳಿಯೇ ಶ್ರೀನಿವಾಸ ನಾಯ್ಕರ ಹುಟ್ಟೂರು. ಇವರ ತಂದೆ ಸುಪ್ರಸಿದ್ಧ ಮದ್ದಳೆಗಾರ ಬೆಳಂಜೆ ತಿಮ್ಮಪ್ಪ ನಾಯ್ಕರು, ತಾಯಿ ವೇದಾವತಿ. ಜನಿಸಿದ್ದು 7–2–1962ರಂದು.

ಕೌಟುಂಬಿಕ ಯಕ್ಷಗಾನ ವ್ಯವಸಾಯವೆಂಬುದು ಶ್ರೀನಿವಾಸ ನಾಯ್ಕರ ವೃತ್ತಿಬದುಕಿಗೆ ಪ್ರೇರಣೆಯಾಯಿತು. ಅಣ್ಣಂದಿರಾದ ಜಯಂತ ನಾಯ್ಕ ಹಾಗೂ ಮಹಾಬಲ ನಾಯ್ಕರ ಪ್ರೋತ್ಸಾಹ, ಇವರ ಬಣ್ಣದ ಬಾಳುವೆಗೆ ಸ್ಫೂರ್ತಿಯಾಯಿತು.


ನಾಲ್ಕನೇ ತರಗತಿಗೆ ಓದು ಮುಗಿಸಿ ತನ್ನ 18ನೇ ವಯಸ್ಸಿನಲ್ಲಿ ಯಕ್ಷಗಾನಲೋಕ ಪ್ರವೇಶಿಸಿದ ಇವರಿಗೆ ಹಿರಿಯ ಭಾಗವತ ಕೆ.ಪಿ. ಹೆಗಡೆ ಹಾಗೂ ಸೋದರ ಕಲಾವಿದ ಜಯಂತ ನಾಯ್ಕರು ಗುರುಗಳಾಗಿ ಕಲಾವಿದ್ಯೆ ಬೋಧಿಸಿದರು.

ಶಿವರಾಜಪುರ, ಪೆರ್ಡೂರು, ಮಾರಣಕಟ್ಟೆ, ಹಾಲಾಡಿ, ಅಮೃತೇಶ್ವರಿ, ಮಡಾಮಕ್ಕಿ, ಗೋಳಿಗರಡಿ ಮೇಳಗಳಲ್ಲಿ ಇಪ್ಪತ್ತೈದು ವರ್ಷಗಳ ಕಾಲ ರಂಗಕೃಷಿ ನಡೆಸಿದ ಶ್ರೀನಿವಾಸ ನಾಯ್ಕರು ಪ್ರಸ್ತುತ ಅಂಗಡಿ ಉದ್ಯಮ ನಡೆಸುವುದರೊಂದಿಗೆ ಹವ್ಯಾಸಿ ಯಕ್ಷಗಾನ ಸಂಘ ಸಂಸ್ಥೆಗಳಿಗೆ ಭಾಗವತರಾಗಿ ಭಾಗವಹಿಸುತ್ತಿದ್ದಾರೆ.

ಉತ್ತಮ ಪೌರಾಣಿಕ ಜ್ಞಾನ ಸಂಪತ್ತಿನೊಂದಿಗೆ ಭಾಗವತಿಕೆಯನ್ನು ಸಮರ್ಥವಾಗಿ ನಿಭಾಯಿಸುವ ಶ್ರೀನಿವಾಸ ನಾಯ್ಕರು ವೇಷಧಾರಿಯೂ ಹೌದು. ಸುಭದ್ರೆ, ದ್ರೌಪದಿ, ಪ್ರಭಾವತಿ, ದಿತಿ, ಕಟಕಿ, ಮಾಲಿನಿ, ರತಿ.... ಮೊದಲಾದ ಸ್ತ್ರೀಭೂಮಿಕೆಗಳನ್ನೂ ನಿರ್ವಹಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದಾರೆ.

ಶ್ರೀನಿವಾಸ ನಾಯ್ಕರ ಧರ್ಮಪತ್ನಿ ಸುಲೋಚನ. ವೆಂಕಟೇಶ ಹಾಗೂ ವಾಣಿ ಇವರ ಉಭಯ ಮಕ್ಕಳು.

ಪ್ರತಿಭಾನ್ವಿತ ಯುವ ಭಾಗವತ ಶ್ರೀನಿವಾಸ ನಾಯ್ಕರು ಚಾಮುಂಡೇಶ್ವರಿ ಯಕ್ಷಗಾನ ಕಲಾಸಂಘ ಬುಕ್ಕಿಗುಡ್ಡೆ, ಉಡುಪಿ ರಾಜಾಂಗಣ, ಪೆರ್ಡೂರು ಅನಂತ ಪದ್ಮನಾಭ ದೇವಸ್ಥಾನದ ವತಿಯಿಂದ ಸಂಮಾನ–ಗೌರವ ಪಡೆದಿದ್ದಾರೆ.



# ಶ್ರೀಪಾದ ಮಹಾಬಲೇಶ್ವರ ಹೆಗಡೆ

*ಬಾಳೆಗದ್ದೆ, ಶಿರಸಿ ತಾಲೂಕು,*
*ಅಂಚೆ : ಶಿವಳ್ಳಿ, ಪಂಚಲಿಂಗ (ಉ.ಕ)*

ರಂಗ ತುಂಬುವ, ಪ್ರಸಂಗ ಕಳೆ ಹೊಂದುವ ಸ್ವರ ಶ್ರೀಮಂತಿಕೆಯಲ್ಲಿ ಹಾಗೂ ಪರಿಣತ ರಂಗತಂತ್ರದಲ್ಲಿ ಗುರುತಿಸಲ್ಪಡುವ ಭಾಗವತ ಶ್ರೀಪಾದ ಹೆಗಡೆ.

ಶಿರಸಿ ತಾಲೂಕಿನ ಬಾಳೆಗದ್ದೆ ಇವರ ಹುಟ್ಟೂರು. 2-7-1969ರಲ್ಲಿ ಜನನ. ತಂದೆ ಮಹಾಬಲೇಶ್ವರ ಹೆಗಡೆ, ತಾಯಿ ಮೇನಕೆ.

ಹತ್ತನೆ ತರಗತಿಯವರೆಗೆ ಶಾಲಾ ವಿದ್ಯಾಭ್ಯಾಸ ಮಾಡಿ ಇಪ್ಪತ್ತನೆ ವರ್ಷದಲ್ಲಿ ಕಲಾಬದುಕು ಕಂಡ ಇವರಿಗೆ ಅಣ್ಣನೇ ವೃತ್ತಿರಂಗದ ಪ್ರೇರಣಾ ಶಕ್ತಿ.

ಕೆ.ಪಿ. ಹೆಗಡೆ, ಐನಬೈಲು ಪರಮೇಶ್ವರ ಹೆಗಡೆ ಹಾಗೂ ದೇವದಾಸರಾವ್ ಅವರಲ್ಲಿ ಯಕ್ಷ ಶಿಕ್ಷಣ ಪಡೆದ ಶ್ರೀಪಾದ ಹೆಗಡೆಯವರು ಪೌರಾಣಿಕ ಪ್ರಸಂಗಗಳನ್ನು ಸಮರ್ಥವಾಗಿ ಆಡಿಸಬಲ್ಲರು.

ಬಗ್ವಾಡಿ, ಕಳವಾಡಿ, ಮಂದಾರ್ತಿ, ಅಮೃತೇಶ್ವರಿ ಹಾಗೂ ಗುಂಡಬಾಳ ಮೇಳಗಳಲ್ಲಿ ಇವರ ರಂಗಕೃಷಿ ಹದಿನೈದು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಪ್ರಸ್ತುತ ಹೆಗಡೆಯವರು ಗುಂಡಬಾಳ ಮೇಳದ ಭಾಗವತರಾಗಿ ಕಲಾಸೇವೆಯಲ್ಲಿದ್ದಾರೆ.

ಭಾಗವತ ಶ್ರೀಪಾದ ಹೆಗಡೆಯವರಿಗೆ ಕುಣಿತ, ಮದ್ದಳೆ-ಚಂಡೆ ವಾದನದ ಪರಿಣತಿಯೂ ಇದೆ. ಬಲರಾಮ, ಶ್ರೀಕೃಷ್ಣ, ಮೈಂದ-ದ್ವಿವಿದ ಮೊದಲಾದ ವೇಷಗಳನ್ನೂ ಮಾಡಿ ಕಲಾಪ್ರೇಕ್ಷಕರನ್ನು ರಂಜಿಸಿದ್ದಾರೆ.

ಯಕ್ಷಗಾನರಂಗ ಹಾಗೂ ಕೃಷಿರಂಗ ಇವರ ವೃತ್ತಿ-ಪ್ರವೃತ್ತಿಯಾಗಿದೆ. ಹವ್ಯಾಸಿ ಸಂಘ-ಸಂಸ್ಥೆಗಳಿಗೆ ಇವರು ಭಾಗವತರಾಗಿ ಭಾಗವಹಿಸುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಭಾಗವತ ಶ್ರೀಪಾದ ಹೆಗಡೆಯವರು ಸಂಮಾನ ಪಡೆದಿರುತ್ತಾರೆ.



# ಸಂಜಯ ಕುಮಾರ ಬೆಳೆಯೂರು

*ಅಂಚೆ : ಬೆಳೆಯೂರು, ಸಾಗರ ತಾಲೂಕು*
*ಶಿವಮೊಗ್ಗ ಜಿಲ್ಲೆ – 577 401*
*ದೂರವಾಣಿ : 08183–260010 / 9480018585*

ಧೀರೋದಾತ್ತ ಹಾಗೂ ಧೀರೋದ್ಧತ ಭಾವ–ಸ್ವಭಾವದ ಪೌರಾಣಿಕ ಪಾತ್ರಗಳಿಗೆ ಅನನ್ಯ ಕಲಾ ಪ್ರೌಢಿಮೆಯಿಂದ ಪ್ರಾಣಕಳೆ ನೀಡುವ ಪ್ರತಿಭಾನ್ವಿತ ಕಲಾವಿದ ಸಂಜಯ ಕುಮಾರ ಬೆಳೆಯೂರು.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಬೆಳೆಯೂರು ಇವರ ಹುಟ್ಟೂರು. 17–5–1975ರಲ್ಲಿ ಜನನ. ತಂದೆ ಬಿ. ರಂಗನಾಥ. ತಾಯಿ ಜಯಲಕ್ಷ್ಮೀ. ಪಿ.ಯು.ಸಿ. ವ್ಯಾಸಂಗದ ಬಳಿಕ ತನ್ನ 19ನೇ ವಯಸ್ಸಿನಲ್ಲೇ ಯಕ್ಷಗಾನ ಹೆಜ್ಜೆ–ಗೆಜ್ಜೆ.

ಸಂಜಯಕುಮಾರರ ಕುಟುಂಬದಲ್ಲಿ ವೇಷಧಾರಿಗಳಿದ್ದರು. ಮೇಳದ ಯಜಮಾನಿಕೆಯನ್ನು ವಹಿಸಿದ ಗಣ್ಯರೂ ಇದ್ದರು. ಹೀಗಾಗಿ ಕಲೆಯ ಸಾಂಗತ್ಯ ಇವರಿಗೆ ಎಳವೆಯಲ್ಲೇ ದೊರಕುವಂತಾಯಿತು.

ಯಕ್ಷಗಾನದ ರಸಋಷಿ ಬಿರುದಾಂಕಿತ ಹಿರಿಯ ಭಾಗವತ ಹಸ್ತೋಟ ಮಂಜುನಾಥ ಭಾಗವತರೇ ಇವರಿಗೆ ಗುರುಗಳು. ಹಾಗೆಯೇ ಅನೇಕ ಹಿರಿಯ ಕಲಾವಿದರೂ ಇವರ ಕಲಾವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಸಮರ್ಪಕ ಮಾಹಿತಿ ಮಾರ್ಗದರ್ಶನವನ್ನು ನೀಡಿದ್ದಾರೆ.

ಇಡಗುಂಜಿ ಮೇಳ ಹಾಗೂ ಪೂರ್ಣಚಂದ್ರ ಮೇಳ, ಕುಂಭಾಶಿ ಇದರ ಕಲಾವಿದನಾಗಿ ವೃತ್ತಿ ತಿರುಗಾಟದಲ್ಲಿ ಹತ್ತು ವರ್ಷಗಳನ್ನು ಕಂಡ ಸಂಜಯ ಕುಮಾರ ಕಲಾಕ್ಷೇತ್ರದಲ್ಲಿ ಯಶಸ್ವಿ ಬೆಳವಣಿಗೆ ಕಂಡ ಕಲಾವಿದರು.

ಉತ್ತಮ ಮಾತುಗಾರಿಕೆ, ಸುಲಲಿತವಾದ ನೃತ್ಯಾಭಿನಯ ವೈಖರಿ, ಸುಂದರ ಸುದೃಢ ಆಳಂಗದಲ್ಲಿ ಕಂಗೊಳಿಸುವ ವೇಷವೈಭವ, ಸಶಕ್ತ ಪೌರಾಣಿಕ ಮಾಹಿತಿ... ಎಲ್ಲವನ್ನೂ ಇವರು ಸುಪುಷ್ಟವಾಗಿ ಮೈತುಂಬಿಸಿಕೊಂಡು ಎಲ್ಲಾ ಬಗೆಯ ಪುರುಷಪಾತ್ರಗಳಿಗೆ ಜೀವತುಂಬಬಲ್ಲವರು.

ಶ್ರೀರಾಮ, ಲಕ್ಷ್ಮಣ, ರಾವಣ, ಕುಂಭಕರ್ಣ, ಸುಗ್ರೀವ, ವಾಲಿ, ಧರ್ಮರಾಯ, ಶ್ರೀಕೃಷ್ಣ, ಭೀಮ.... ಮೊದಲಾದ ಪಾತ್ರಗಳಿಗೆ ಸಂಜಯ ಕುಮಾರರು ಉನ್ನತ ಪ್ರತಿಭೆಯಲ್ಲಿ ತನ್ನದೇ ಆಯಾಮ ನೀಡಿ ಜನಪ್ರಿಯತೆ ಗಳಿಸಿರುತ್ತಾರೆ. ತಾಳಮದ್ದಳೆ ಅರ್ಥಧಾರಿಯಾಗಿಯೂ ಇವರು ಗುರುತಿಸಿಕೊಂಡಿದ್ದಾರೆ. ಕೃಷಿ ಪ್ರಧಾನ ಕುಟುಂಬದ ಹಿನ್ನೆಲೆಯನ್ನು ಹೊಂದಿದ ಇವರು ವೃತ್ತಿಬದುಕಿನ ಬಿಡುವಿನ ಅವಧಿಯಲ್ಲಿ ಕೃಷಿರಂಗ ಹಾಗೂ ಯಕ್ಷಗಾನ ಆಹಾರ್ಯ ರಂಗದಲ್ಲಿ ದುಡಿಯುತ್ತಾರೆ. ಯಕ್ಷಗಾನ ಪ್ರಸಾಧನ ರಂಗಕರ್ಮದಲ್ಲಿ ಇವರಿಗೆ ವಿಶೇಷ ಪರಿಣತಿಯೂ ಇದೆ.

ಬೆಳೆಯೂರು ಸಂಜಯ ಕುಮಾರರ ಸಹಧರ್ಮಿಣಿ ಅಂಬಿಕಾ, ಓರ್ವ ಸುಪುತ್ರ ಸುಹಾಸ. ಚಿಕ್ಕ–ಚೊಕ್ಕ ಸಂಸಾರ.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಗೌರವಿಸಲ್ಪಟ್ಟ ಇವರಿಗೆ 2007ರಲ್ಲಿ ಪೂರ್ಣಚಂದ್ರ ಪ್ರತಿಷ್ಠಾನದ ವತಿಯಿಂದ 'ಕೊಂಡದಕುಳಿ ರಾಮ ಹೆಗಡೆ ಪ್ರಶಸ್ತಿ' ಯೂ ದೊರಕಿರುತ್ತದೆ.



## ಸಂಜೀವ ಗಾಣಿಗ, ಹೆರಂಜಾಲು

*ಅಂಚೆ : 11ನೇ ಉಳ್ಳೂರು, ಮೂಡುಮಠ,*
*ಕುಂದಾಪುರ ತಾಲೂಕು, ನೂಜಾಡಿ,*
*ಗುಡ್ಡೆಮನೆ, ಉಡುಪಿ ಜಿಲ್ಲೆ*
*ದೂರವಾಣಿ : 9900459843*

ಬಡಗುತಿಟ್ಟು ಯಕ್ಷಗಾನ ರಂಗದಲ್ಲಿ ಖಳನಾಯಕ, ಪ್ರತಿನಾಯಕ ಪಾತ್ರಗಳಿಗೆ ತನ್ನದೇ ಕಲಾವಂತಿಕೆಯಿಂದ ಜೀವತುಂಬುವ ಯುವ ಕಲಾವಿದ ಸಂಜೀವ ಗಾಣಿಗ, ಹೆರಂಜಾಲು.

ಕುಂದಾಪುರ ತಾಲೂಕಿನ ಹೆರಂಜಾಲು-ನೂಜಾಡಿ ಎಂಬಲ್ಲಿ 16-5-1974ರಲ್ಲಿ ಜನಿಸಿದ ಸಂಜೀವ ಗಾಣಿಗರು ಮಹಾಬಲ ಗಾಣಿಗ-ಸೀತಾ ಗಾಣಿಗ ದಂಪತಿಯ ಸುಪುತ್ರ.

ಪರಿಸರದಲ್ಲಿ ಜರುಗುತ್ತಿದ್ದ ಯಕ್ಷಗಾನ ಬಯಲಾಟಗಳ ಚಂಡೆಯ ನಿನಾದ ಸಂಜೀವ ಗಾಣಿಗರ ಕರ್ಣಾಂಗಣಕ್ಕೆ ಇಳಿದು ಶರೀರದಾದ್ಯಂತ ವ್ಯಾಪಿಸಿದ ತನ್ನಿಮಿತ್ತ ಇವರ ಓದು ನಾಲ್ಕಕ್ಕಿಂತ ಮುಂದೆ ಸಾಗದಾಯಿತು.

16ನೇ ವರ್ಷದಲ್ಲೇ ಬಣ್ಣದ ಬದುಕು ಕಂಡ ಗಾಣಿಗರು ಹೆರಂಜಾಲು ಸುಬ್ಬಣ್ಣ ಗಾಣಿಗರ ಪ್ರೇರಣೆ ಪ್ರೋತ್ಸಾಹ ಹಾಗೂ ಗುರುತನದೊಂದಿಗೆ ಆಟದ ಬದುಕಿಗೆ ಹೊರಳುನೋಟ ಬೀರಿದವರು.

ಹಾಲಾಡಿ, ಕಳವಾಡಿ, ಮಾರಣಕಟ್ಟೆ, ಬಗ್ವಾಡಿ, ಮಂದಾರ್ತಿ ಮೇಳಗಳಲ್ಲಿ ರಂಗಜೀವನದ ವಿಂಶತಿ ವರ್ಷವನ್ನು ಪೂರೈಸಿದ ಸಂಜೀವ ಗಾಣಿಗರು ಪ್ರಸ್ತುತ ಮಂದಾರ್ತಿ ಮೇಳದ ವೇಷಧಾರಿಯಾಗಿ ದುಡಿಯುತ್ತಿದ್ದಾರೆ.

ಚುರುಕಿನ ನಾಟ್ಯ, ಹಿತ-ಮಿತ ಅಭಿನಯ, ಎತ್ತರದ ಸ್ವರಭಾರದಲ್ಲಿ ನಿರ್ವಹಣಾ ಭೂಮಿಕೆಗಳನ್ನು ರಂಗಮಂಚದಲ್ಲಿ ಮೆರೆಸುವ ಗಾಣಿಗರು ಕೆಂಪು ಮುಂಡಾಸಿನ ವೇಷಗಳಲ್ಲಿ ಅಪಾರ ಜನಮಾನ್ಯತೆ ಕಂಡ ಯುವ ಕಲಾವಿದರು.

ಕಾರ್ತವೀರ್ಯ, ಕೀಚಕ, ರಾವಣ, ರುದ್ರಕೋಪ, ಭದ್ರಸೇನ, ಕೌಂಡ್ಲೀಕ, ದುರ್ಜಯ... ಮೊದಲಾದ ಪೌರಾಣಿಕ ಪಾತ್ರಗಳಲ್ಲಿ ಗಾಣಿಗರ ಪ್ರತಿಭೆ ಎದ್ದು ಕಾಣುತ್ತದೆ.

ರಂಗದಲ್ಲಿರುವಷ್ಟು ಹೊತ್ತು ಪಾತ್ರ ನಿರ್ವಹಣೆಯಲ್ಲಿ ಗರಿಷ್ಠಮಟ್ಟವನ್ನು ಕಾಯ್ದುಕೊಳ್ಳುವ ಇವರ ಉತ್ಸಾಹ ಗುರುತರವಾದದ್ದು.

ಸಂಜೀವ ಗಾಣಿಗರ ಧರ್ಮಪತ್ನಿ ಜ್ಯೋತಿ, ಓರ್ವ ಸುಪುತ್ರಿ ಸಂಜನಾ, ಪುಟ್ಟ ಸಂಸಾರ.

ಅನೇಕ ಸಂಘ-ಸಂಸ್ಥೆಗಳಿಂದ ಶ್ರೀ ಗಾಣಿಗರು ಸಂಮಾನಿತರು.



## ಸಂಜೀವ ಶೆಟ್ಟಿ ಎಚ್.

*ಹೊಳಂದೂರು ಬೈಲುಮನೆ,*
*ಅಂಚೆ : ಆಜ್ರಿಹರ, ಕುಂದಾಪುರ ತಾಲೂಕು,*
*ಉಡುಪಿ ಜಿಲ್ಲೆ*
***ದೂರವಾಣಿ : 9980277932 / 9480401748***

ಮಧ್ಯಮ ಬಡಗಿನ ಸಾಂಪ್ರದಾಯಿಕ ರಂಗ ಚೌಕಟ್ಟಿನಲ್ಲಿ ಪೌರಾಣಿಕ ಪಾತ್ರಗಳನ್ನು ಕೂರಿಸಿ, ಅನನ್ಯ ಕಲಾ ಪ್ರೌಢಿಮೆಯಿಂದ ರಂಗಸ್ಥಳವನ್ನು ಬೆಳಗುವ ಅನುಭವಿ ಹಿರಿಯ ಕಲಾವಿದ ಎಚ್. ಸಂಜೀವ ಶೆಟ್ಟಿ.

ಕುಂದಾಪುರ ತಾಲೂಕಿನ ಆಜ್ರಿ–ಹೊಳಂದೂರು ಇವರ ಹುಟ್ಟೂರು. ಅಣ್ಣಪ್ಪ ಶೆಟ್ಟಿ–ಮೂಕಮ್ಮ ಶೆಡ್ತಿ ದಂಪತಿಯ ಸುಪುತ್ರನಾಗಿ 11–10–1951ರಲ್ಲಿ ಜನಿಸಿದ ಸಂಜೀವಶೆಟ್ಟರು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ತನ್ನ 19ರ ಹರೆಯದಲ್ಲಿ ಯಕ್ಷಗಾನ ಲೋಕವನ್ನು ಪ್ರವೇಶಿಸಿದರು.

ಅಣ್ಣ ಹಾಗೂ ಮನೆಯವರ ತುಂಬು ಸಹಕಾರದಿಂದ ಬಣ್ಣದ ಬದುಕಿನ ಹಾದಿಯನ್ನು ಸುಗಮವಾಗಿಸಿಕೊಂಡು ಮುನ್ನಡೆದ ಸಂಜೀವ ಶೆಟ್ಟರು ದಶಾವತಾರಿ ಗುರು ವೀರಭದ್ರ ನಾಯಕ್, ನೀಲಾವರ ರಾಮಕೃಷ್ಣಯ್ಯ ಹಾಗೂ ಹಿರಿಯಡಕ ಗೋಪಾಲರಾವ್ ಅವರ ಶಿಷ್ಯನಾಗಿ ಶಾಸ್ತ್ರೀಯ ಕಲಾ ಶಿಕ್ಷಣವನ್ನು ಕಲಿತು ರಂಗಮಂಚಕ್ಕೆ ಹೆಜ್ಜೆಯೂರಿದವರು.

ಕಮಲಶಿಲೆ, ಸಾಲಿಗ್ರಾಮ, ಪೆರ್ಡೂರು, ಸೌಕೂರು, ಗುತ್ಯಮ್ಮ, ಗೋಳಿಗರಡಿ... ಮೊದಲಾದ ಮೇಳಗಳಲ್ಲಿ ಕಲಾಸೇವೆ ನಡೆಸಿದ ಶೆಟ್ಟರ ರಂಗಕೃಷಿ ವಿಂಶತಿ ವರ್ಷವನ್ನು ಪೂರೈಸಿದೆ. ಪ್ರಸ್ತುತ ಸಂಜೀವ ಶೆಟ್ಟರು ಗೋಳಿಗರಡಿ ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಶ್ರೀರಾಮ, ಶತ್ರುಘ್ನ, ಕೌರವ, ಅರ್ಜುನ, ಧರ್ಮರಾಯ, ಬಲರಾಮ... ಮೊದಲಾದ ಪಾತ್ರಗಳಿಗೆ ನ್ಯಾಯ ಕಲ್ಪಿಸಿದ ಧನ್ಯತೆ ಶೆಟ್ಟರಿಗಿದೆ.

ವೇಷಧಾರಿಯಾದ ಶೆಟ್ಟರು ತಾಳಮದ್ದಳೆ ಅರ್ಥಗಾರಿಕೆಯ ಒಲುಮೆ, ರಾಮಾಯಣ ಪ್ರವಚನ ಮಾಡುವ ಹಿರಿಮೆಯನ್ನು ಹೊಂದಿದವರು.

ಸಂಜೀವ ಶೆಟ್ಟರ ಬಾಳ ಸಂಗಾತಿ ರತಿ ಶೆಡ್ತಿ. ಶೋಭಾ ಹಾಗೂ ಶುಭ ಎಂಬ ಉಭಯ ಹೆಣ್ಣು ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಸಂಜೀವ ಶೆಟ್ಟರು ಸಂಮಾನಿತರಾಗಿದ್ದಾರೆ.



## ಸತ್ಯನಾರಾಯಣ ಪೂಜಾರಿ ಸೌಡ

*ಅಂಚೆ : ಸೌಡ, ಹಾರ್ದಳ್ಳಿ-ಮಂಡಳ್ಳಿ ಗ್ರಾಮ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9880793420*

ಉನ್ನತ ಪ್ರತಿಭಾ ವರ್ಚಸ್ಸಿನಲ್ಲಿ ಯಕ್ಷಗಾನ ಪೌರಾಣಿಕ ಪ್ರಸಂಗಗಳ ಹಾಸ್ಯ ಭೂಮಿಕೆಗಳನ್ನು ಗಂಭೀರ ನಡೆಯ ತಿಳಿ ಹಾಸ್ಯರಸಾಭಿವ್ಯಕ್ತಿಯಲ್ಲಿ ರಂಗ ಮುಖದಲ್ಲಿ ಕಾಣಿಸುವ ಅನುಭವಿ ಕಲಾವಿದ ಸೌಡ ಸತ್ಯನಾರಾಯಣ ಪೂಜಾರಿ.

ಕುಂದಾಪುರ ತಾಲೂಕಿನ ಸೌಡ ಎಂಬಲ್ಲಿ 5–6–1971ರಲ್ಲಿ ಜನಿಸಿದ ಇವರು ಶಂಕರ ಪೂಜಾರಿ–ಪದ್ದು ದಂಪತಿಯ ಸುಪುತ್ರ. ಹತ್ತನೆ ತರಗತಿಯವರೆಗೆ ಅಕ್ಷರ ಶಿಕ್ಷಣವನ್ನು ಪಡೆದು ತನ್ನ ಇಪ್ಪತ್ತನೆ ವಯಸ್ಸಿನಲ್ಲಿ ಯಕ್ಷಗಾನ ಲೋಕವನ್ನು ಪ್ರವೇಶಿಸಿದ ಇವರು ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಗುರು ಬನ್ನಂಜೆ ಸಂಜೀವ ಸುವರ್ಣರಿಂದ ಸಶಕ್ತ ಕಲಾವಿದ್ಯೆಯನ್ನು ಸಂಪಾದಿಸಿದರು.


ಇವರ ಅಜ್ಜ ಸೂರ ಪೂಜಾರಿಯವರು ಹರಿಕಥೆ ದಾಸರಾಗಿದ್ದರು. ಹೀಗಾಗಿ ಸತ್ಯನಾರಾಯಣ ಅವರಿಗೆ ಪೌರಾಣಿಕ ಅನುಭವ, ಮಾಹಿತಿ ಸುಪುಷ್ಟವಾಗಿ ದೊರಕುವಂತಾಯಿತು. ಕಾಳಿಂಗ ನಾವಡರ ಮಧುರ ಕಂಠಸಿರಿಯ ಪದ್ಯಗಳ ಕೇಳ್ಮೆಯಿಂದ ಭಾಗವತನಾಗುವ ಕನಸು ಕಂಡಿದ್ದ ಇವರು ಖಚಿತ ಲಯಗಾರಿಕೆ, ಸಮುಚಿತ ತಾಳಗಾರಿಕೆ ಇದ್ದರೂ ಸ್ವರವೆಂಬುದು ಭಾಗವತಿಕೆಗಿಂತಲೂ ಹಾಸ್ಯಪಾತ್ರಕ್ಕೆ ಅತ್ಯಂತ ಸೂಕ್ತವೆನ್ನುವ ನಿಟ್ಟಿನಲ್ಲಿ ಹಾಸ್ಯಗಾರಿಕೆಗೆ ಮನಮಾಡಿದರು.

ಮೇಗರವಳ್ಳಿ, ಬಚ್ಚಗಾರು, ಅಮೃತೇಶ್ವರಿ, ಬಗ್ವಾಡಿ, ಮಡಾಮಕ್ಕಿ, ಹಿರಿಯಡಕ ಮೇಳಗಳಲ್ಲಿ ಸುಮಾರು 16 ವರ್ಷಗಳ ಕಲಾಯಾತ್ರೆ ಪೂರ್ಣಗೊಂಡಿದೆ.

ಯಕ್ಷಗಾನ ಪೌರಾಣಿಕ ಪ್ರಸಂಗಗಳಲ್ಲಿ ಕಂಡುಬರುವ ವಿಪ್ರ ಪಾತ್ರಗಳನ್ನೇ ಹೆಚ್ಚಾಗಿ ನಿರ್ವಹಿಸಿದವರು ಇವರು. ಹಾಸ್ಯರಸ ಪರಿಪ್ಲುತವಾದ ಯಕ್ಷಗಾನ ಪೋಷಕ ಪಾತ್ರಗಳಿಗೆ ಇವರು ಕಲಾವಂತಿಕೆಯಿಂದ ಜೀವತುಂಬಿದವರು. ನಾರದ, ಮಹೋಗ್ರ, ಕೈಲಾಸ ಶಾಸ್ತ್ರಿ, ವಿದ್ಯುಜ್ಜಿಹ್ವ.. ಮೊದಲಾದ ಪಾತ್ರಗಳು ಇವರಿಗೆ ಸಂತೃಪ್ತಿ ನೀಡಿವೆ, ಪ್ರೇಕ್ಷಕರನ್ನು ಸಂತಸಪಡಿಸಿವೆ.

ಸೌಡ ಸತ್ಯಾನಾರಾಯಣ ಪೂಜಾರಿಯವರು ಪ್ರಸಂಗಕರ್ತರಾಗಿ ಕೆಲವು ಸಾಮಾಜಿಕ ಹೊಸ ಪ್ರಸಂಗಗಳನ್ನು ರಚಿಸಿ ವೃತ್ತಿ ಮೇಳಗಳಲ್ಲಿ ಪ್ರದರ್ಶಿಸಿರುತ್ತಾರೆ. ತನ್ನಲ್ಲಿರುವ ಕಲಾವಿದ್ಯೆಯನ್ನು ಉತ್ಸಾಹಿಗಳಿಗೆ ಧಾರೆಯೆರೆದು ಪ್ರತಿಭಾವಂತ ಕಲಾವಿದರನ್ನಾಗಿ ರೂಪಿಸಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಕಲಾಪ್ರತಿಭೆಯನ್ನು ಕಂಡು ಗೌರವಿಸಿವೆ.



## ಸತೀಶ ಹೆಗಡೆ, ಆನೆಗದ್ದೆ

*ಅಂಚೆ : ಹುಂಚಾ, ಹೊಸನಗರ ತಾಲೂಕು*
*ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9663739379*

ಪುರುಷ ವೇಷದ ಗತ್ತು–ಗೈರತ್ತಿನಲ್ಲಿ ಪೌರಾಣಿಕ ಕಥಾನಕಗಳ ನಾಯಕ–ಪ್ರತಿನಾಯಕ ಹಾಗೂ ಖಳನಾಯಕ ಭೂಮಿಕೆಗಳಿಗೆ ವಿಶೇಷ ಕಲಾವರ್ಚಸ್ಸು ನೀಡುವ ಪ್ರತಿಭಾನ್ವಿತ ಕಲಾವಿದ ಸತೀಶ ಹೆಗಡೆ, ಆನೆಗದ್ದೆ.

ಶಿವಮೊಗ್ಗ ಜಿಲ್ಲೆಯ ಸುಳ್ಳಳ್ಳಿ ಎಂಬಲ್ಲಿ 1965ರಲ್ಲಿ ಜನಿಸಿದ ಸತೀಶ ಹೆಗಡೆ, ಚಿದಂಬರ ಹೆಗಡೆ ಹಾಗೂ ಶಕುಂತಲಾ ದಂಪತಿಯ ಸುಪುತ್ರ.

ಪ್ರಥಮ ಪಿ.ಯು.ಸಿ. ವ್ಯಾಸಂಗವನ್ನು ಪೂರೈಸಿದ ಸತೀಶ ಹೆಗಡೆ ತನ್ನ 20ನೇ ವಯಸ್ಸಿನಲ್ಲಿ ಯಕ್ಷಲೋಕಕ್ಕೆ ಚರಣವಿರಿಸಿದರು. ಜಿ. ಮಂಜಪ್ಪಯ್ಯ ಎಂಬವರ ಪ್ರೇರಣೆಯಂತೆ ಉಡುಪಿ ಯಕ್ಷಗಾನ ಕೇಂದ್ರವನ್ನು ಸೇರಿದ ಇವರು ಗುರು ಬನ್ನಂಜೆ ಸಂಜೀವ ಸುವರ್ಣ ಅವರ ಶಿಷ್ಯನಾಗಿ ಸಾಂಪ್ರದಾಯಿಕ ರಂಗ ಶಿಕ್ಷಣವನ್ನು ಪಡೆದು ವೃತ್ತಿ ಬದುಕಿಗೆ ಸುಭದ್ರ ಬುನಾದಿಯನ್ನು ನಿರ್ಮಿಸಿಕೊಂಡರು.

ರಂಜದಕಟ್ಟೆ–1, ಬಗ್ವಾಡಿ–1, ಕಮಲಶಿಲೆ–7, ಮಂದಾರ್ತಿ–1, ಸೌಕೂರು–1, ಅಮೃತೇಶ್ವರಿ–2, ಮಡಾಮಕ್ಕಿ–1, ಸಿಗಂಧೂರು–2... ಹೀಗೆ 16 ವರ್ಷಗಳ ಕಲಾಯಾತ್ರೆ ಹೆಗಡೆಯುವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿದೆ. ಪ್ರಸ್ತುತ ಹೆಗಡೆ ಸಿಗಂಧೂರು ಮೇಳದ ಕಲಾವಿದರಾಗಿ ದುಡಿಯುತ್ತಿದ್ದಾರೆ.

ಸದೃಢ ಆಳಂಗ, ಸುಪುಷ್ಟ ನೃತ್ಯಾಭಿನಯ, ಸುಸಂಸ್ಕೃತ ಪ್ರಸಂಗ ಪಾಂಡಿತ್ಯ, ಸುಮನೋಹರ ವೇಷವಿಧಾನ, ಸುಸ್ಪಷ್ಟ ವಚೋವಿನ್ಯಾಸ ಹಾಗೂ ಸುವ್ಯವಸ್ಥಿತ ರಂಗ ವ್ಯವಹಾರದಲ್ಲಿ ನಿರ್ವಹಣಾ ಭೂಮಿಕೆಗಳಿಗೆ ಜೀವ ತುಂಬುವ ಸತೀಶ ಹೆಗಡೆಯವರ ಕೀಚಕ, ಮಹಿಷಾಸುರ, ರಾವಣ, ರಾಮ, ಭಸ್ಮಾಸುರ, ಸುಧನ್ವ, ಮಾಗಧ, ಕಂಸ... ಮೊದಲಾದ ಪಾತ್ರಗಳು ಕಲಾಭಿಮಾನಿಗಳ ಹಾರ್ದಿಕ ಮೆಚ್ಚುಗೆಗೆ ಸಂಪೂರ್ಣ ಪಾತ್ರವಾಗಿವೆ.

ಸಮರ್ಥ ವೇಷಧಾರಿಯಾದ ಸತೀಶ ಹೆಗಡೆಯವರಿಗೆ ಮದ್ದಳೆವಾದನದ ಪರಿಣತಿಯೂ ಇದೆ.

ಶ್ರೀಯುತರ ಧರ್ಮಪತ್ನಿ ಸಂಧ್ಯಾ. ಸಿಂಚನ ಹಾಗೂ ಸುದರ್ಶನ ಇವರ ಉಭಯ ಮಕ್ಕಳು.

ಜೆ.ಸಿ.ಸಿ ಸಂಘ, ಹುಂಚ ಇದರ ವತಿಯಿಂದ ಹಾಗೂ ಅನೇಕ ಸಂಘ–ಸಂಸ್ಥೆಗಳಿಂದ ಸತೀಶ ಹೆಗಡೆ ಸಂಮಾನಿತರಾಗಿದ್ದಾರೆ.



## ಸಂತೋಷ ಕುಮಾರ್, ಹಿಲಿಯಾಣ

*'ಮಂದರತಿ' ನಿಲಯ,*
*ಹಿಲಿಯಾಣ ಅಂಚೆ-ಗ್ರಾಮ, ಉಡುಪಿ ಜಿಲ್ಲೆ*
*ದೂರವಾಣಿ : 9449902788*

ಯಕ್ಷಗಾನ ರಂಗರಸಿಕರ ಮನಸೂರೆಗೊಳ್ಳುವ ಆಕರ್ಷಕ ರೂಪಸಿರಿ, ಲಾಲಿತ್ಯಪೂರ್ಣ ನೃತ್ಯಾಭಿನಯ, ಮಾಧುರ್ಯತೆಯ ಕಂಠಸಂಪತ್ತಿನಿಂದ ಬಡಗಿನ ಬೆಡಗಿಣಿಯಾಗಿ ರಂಜಿಸಿ ಇದೀಗ ತೆಂಕಿನಲ್ಲಿ ಅಭಿನಯಿಸುತ್ತಿರುವ ಸ್ತ್ರೀವೇಷಧಾರಿ, ಸಂತೋಷ ಕುಮಾರ ಹಿಲಿಯಾಣ.

ಉಡುಪಿ ಜಿಲ್ಲೆಯ ಹಿಲಿಯಾಣ ಎಂಬಲ್ಲಿ 1-6-1982ರಲ್ಲಿ ಜನಿಸಿದ ಸಂತೋಷ ಕುಮಾರ್ ಪಿಣಿಯ ಮಡಿವಾಳ ಹಾಗೂ ಗಿರಿಜಾ ದಂಪತಿಯ ಸುಪುತ್ರ. ಶಾಲಾ ದಿನಗಳಲ್ಲಿ ಯಕ್ಷಗಾನ ವೇಷ ಮಾಡಿದ ಅನುಭವ ಹಾಗೂ ಆಸಕ್ತಿಯನ್ನೇ ಮೂಲ ಬಂಡವಾಳವಾಗಿಸಿಕೊಂಡು ಬಣ್ಣದ ಲೋಕದ ಕನಸು ಕಂಡ ಸಂತೋಷ ಕುಮಾರ್ 8ನೇ ತರಗತಿಗೆ ವಿದಾಯ ಹೇಳಿ ತಂತ್ರಾಡಿ ಹಿರಿಯಣ್ಣ ಶೆಟ್ಟಿಗಾರ್ ಅವರಲ್ಲಿ ಯಕ್ಷಗಾನ ತರಬೇತಿ ಪಡೆದು ತನ್ನ ಭಾವ ಹಾಸ್ಯಗಾರ ಕಡಬ ಪೂವಪ್ಪನವರ ಸಹಕಾರದೊಂದಿಗೆ ವೃತ್ತಿಮೇಳಕ್ಕೆ ಹೆಜ್ಜೆ ಹಾಕಿದರು.

ಮಂದಾರ್ತಿ ಮೇಳವನ್ನು ಸೇರಿ ಅಲ್ಲಿ ಸ್ತ್ರೀವೇಷಧಾರಿಯಾಗಿ ಹತ್ತು ವರ್ಷಗಳನ್ನು ಪೂರ್ಣಗೊಳಿಸಿ, ತೆಂಕುತಿಟ್ಟಿನ ಹೊಸನಗರ ಮೇಳದಲ್ಲಿ ಮೂರು ವರ್ಷ ಪೂರೈಸಿ ಇದೀಗ ತೆಂಕುತಿಟ್ಟಿನ ಜನಪ್ರಿಯ ಸ್ತ್ರೀವೇಷಧಾರಿಯಾಗಿ ಜನಾದರಣೆ ಗಳಿಸಿಕೊಳ್ಳುತ್ತಿದ್ದಾರೆ.

ಭ್ರಮರಕುಂತಳೆ, ಪದ್ಮಗಂಧಿನಿ, ಮಾಯಾ ಶೂರ್ಪನಖಿ, ಮೀನಾಕ್ಷಿ, ಸೀತೆ, ರತ್ನಾವತಿ, ಶರ್ಮಿಷ್ಠೆ.. ಮೊದಲಾದ ಪೌರಾಣಿಕ ಸ್ತ್ರೀ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಸಂತೋಷ ಕುಮಾರ್ ಅತ್ಯಲ್ಪ ಕಾಲದಲ್ಲೇ ಯಶಸ್ವಿ ಪ್ರಗತಿಯನ್ನು ಕಂಡ ಯುವ ಕಲಾವಿದ.

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗೌರವ ಸಂಮಾನ ಪಡೆದ ಯುವ ಪ್ರತಿಭೆ ಹಿಲಿಯಾಣ ಸಂತೋಷ ಕುಮಾರ್ ಸ್ಥಳೀಯ ಸಂಮಾನವನ್ನು ಪಡೆದಿದ್ದಾರೆ.



## ಸದಾನಂದ ಶೆಣೈ, ಆಗೋ೯ಡು

*ಅಂಚೆ : ಕಮಲಶಿಲೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08259-204099*

ಸಾಂಪ್ರದಾಯಿಕ ಶೈಲಿಯ ಭಾಗವತಿಕೆಯಲ್ಲಿ ಗುರುತಿಸಿಕೊಂಡ ಹಿರಿಯ ಭಾಗವತ ಸದಾನಂದ ಶೆಣೈ, ಆಗೋ೯ಡು.

ಕುಂದಾಪುರ ತಾಲೂಕಿನ ಆಗೋ೯ಡು ಎಂಬಲ್ಲಿ 5-3-1958ರಲ್ಲಿ ಜನಿಸಿದ ಸದಾನಂದ ಶೆಣೈಯವರು ನರಸಿಂಹ ಶಾನುಭಾಗ್-ಭಾಗೀರಥಿ ಶೆಣೈ ದಂಪತಿಯ ಸುಪುತ್ರ.

ಶೆಣೈಯವರ ತಂದೆಯವರು ಕಲಾವಿದರಾದುದರಿಂದ ಅನುವಂಶಿಕವಾಗಿ ಯಕ್ಷ ಕಲೆಯೆಂಬುದು ಇವರಿಗೆ ಒಲಿಯಿತು. ಅವರ ಪ್ರೇರಣೆಯೇ ಕಲಾಲೋಕದ ಪಯಣಕ್ಕೆ ಮಾರ್ಗದೀಪವಾಯಿತು. ತೀರ್ಥರೂಪರ ಗುರುತನದ ನೆರಳು ಶೆಣೈಯವರ ರಂಗಜೀವನಕ್ಕೆ ಅಕ್ಕರೆಯ ಆಸರೆಯಾಯಿತು.

9ನೇ ತರಗತಿವರೆಗೆ ಓದಿದ ಶೆಣೈಯವರು ತನ್ನ 25ನೇ ವಯಸ್ಸಿನಲ್ಲಿ ರಂಗಮಂಚವೇರಿದವರು.

ಮಂದಾರ್ತಿ-6, ಮಾರಣಕಟ್ಟೆ-9, ಅಮೃತೇಶ್ವರಿ-4, ಕಮಲಶಿಲೆ-2, ಹಾಲಾಡಿ-2, ಸೌಕೂರು-1, ಅಜ್ರಿ-2.... ಮೊದಲಾದ ವೃತ್ತಿಮೇಳಗಳಲ್ಲಿ ಶೆಣೈಯವರ ಇಪ್ಪತ್ತಾರು ವರ್ಷಗಳ ರಂಗಕೃಷಿ ಸಂಪನ್ನಗೊಂಡು ಜನಾದರಣೆ ಗಳಿಸಿಕೊಂಡಿದೆ.

ಅಪಾರ ಪ್ರಸಂಗಾನುಭವ, ಸಶಕ್ತ ರಂಗನಡೆ, ಪೌರಾಣಿಕ ಗುಣಾಢ್ಯತೆ ಶೆಣೈಯವರ ಗಾನಜೀವನದಲ್ಲಿ ಗಮನಾರ್ಹವಾಗುತ್ತದೆ. ತುಂಬುಸ್ವರದ ಏರ್ದನಿಯ ಹಾಡುಗಾರಿಕೆಯಲ್ಲಿ ಪಾರಂಪರಿಕ ರಂಗ ವಾತಾವರಣ ನಿರ್ಮಿಸುವ ಸದಾನಂದ ಶೆಣೈಯವರು ಪೌರಾಣಿಕ ಕಥಾಮೃತಗಳನ್ನು ಗಾನಾಮೃತದಿಂದ ಕಳೆಗಟ್ಟಿಸುವ ಕೌಶಲ ಹೊಂದಿದವರು.

ಅನುಭವಿ ಭಾಗವತರಾದ ಶೆಣೈಯವರು ನೃತ್ಯ, ಚಂಡೆ, ಮದ್ದಳೆ ವಾದನಕಲೆಯನ್ನೂ ಬಲ್ಲರು.

ಸದಾನಂದ ಶೆಣೈಯವರು ಶಾರದಾ ಶೆಣೈಯವರ ಕೈಹಿಡಿದು ದಾಂಪತ್ಯ ಜೀವನದಲ್ಲಿ ವೆಂಕಟೇಶ್, ಪದ್ಮಶ್ರೀ, ಅಮೃತ್ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಅನೇಕ ಸಂಘ ಸಂಸ್ಥೆಗಳಿಂದ ಸಂಮಾನಿತರಾದ ಇವರಿಗೆ ಶ್ರೀ ವೆಂಕಟರಮಣ ದೇವಸ್ಥಾನ ಕುಂದಾಪುರ ಇವರ ವತಿಯಿಂದ ಗೌರವಪೂರ್ವಕ ಸಂಮಾನ ದೊರಕಿರುತ್ತದೆ.



## ಸದಾನಂದ ಹೆಬ್ಬಾರ್ ಎಚ್.ಎಸ್.

*ಅಂಚೆ : ಬೆಳಾಲ ಕೊಪ್ಪ, ಕೊಪ್ಪ ತಾಲೂಕು*
*ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 08265-240728*

ಸಾಂಪ್ರದಾಯಿಕ ಗಾನ ಶಿಕ್ಷಣವನ್ನು ಪಡೆದು ಅನುಭವಿ ಭಾಗವತರಾಗಿ ರೂಪುಗೊಂಡವರು ಎಚ್.ಎಸ್. ಸದಾನಂದ ಹೆಬ್ಬಾರ್.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಬೆಳಾಲ ಕೊಪ್ಪ-ಹಿರೇ ಹಿತ್ಲು ಎಂಬಲ್ಲಿ ಜನಿಸಿದ ಸದಾನಂದ ಹೆಬ್ಬಾರ್ ಅವರು ಎಚ್. ಸುಬ್ಬರಾವ್-ಸೀತಮ್ಮ ದಂಪತಿಯ ಸುಪುತ್ರ. ಹೆಬ್ಬಾರರಿಗೆ ಈಗ 47 ವರ್ಷ.

ಸದಾನಂದ ಹೆಬ್ಬಾರರ ಚಿಕ್ಕಪ್ಪ ಎಚ್. ನಾರ್ಣಪ್ಪಯ್ಯ ಹಾಗೂ ಅಣ್ಣ ರಮೇಶ್ ಎಚ್.ಎಸ್. ಬಡಗುತಿಟ್ಟಿನ ಮದ್ದಳೆವಾದಕರು. ಹಾಗಾಗಿ ಕಲೆಯ ಸಾಂಗತ್ಯ-ಸೆಳೆತ ಎನ್ನುವುದು ಇವರಿಗೆ ಸ್ವಯಂ ಆಸಕ್ತಿಯೊಂದಿಗೆ ಕೌಟುಂಬಿಕವಾಗಿಯೂ ಒದಗಿಬಂದಿತು. ಎಸ್.ಎಸ್.ಎಲ್.ಸಿ. ಗೆ ಶಿಕ್ಷಣ ಜೀವನವನ್ನು ಮೊಟಕುಗೊಳಿಸಿ 16ರ ಹರೆಯದಲ್ಲೇ ಹೆಬ್ಬಾರರು ವೃತ್ತಿರಂಗಕ್ಕೆ ಪದವಿರಿಸಿದವರು.

ಹಿರಿಯ ಭಾಗವತ ನಾರ್ಣಪ್ಪ ಉಪ್ಪೂರರ ಗರಡಿಯಲ್ಲಿ ಪಳಗಿದ ಇವರು ಶಾಸ್ತ್ರೋಕ್ತ ಭಾಗವತಿಕೆಯ ಸಮಗ್ರ ಜ್ಞಾನಪರಿಪೂರ್ಣರಾಗಿ ಗುರುತಿಸಿಕೊಂಡರು. ಅನೇಕ ಪ್ರತಿಭಾನ್ವಿತ ಭಾಗವತಿಕೆಯ ಉತ್ಸಾಹಿಗಳಿಗೆ ಸಭಾಲಕ್ಷಣ ಪಾಠವನ್ನು ಮಾಡಿದ ಹಿರಿಮೆಯೂ ಇವರಿಗಿದೆ.

ಶೃಂಗೇರಿ ಮೇಳ-2, ಹಿರಿಯಡಕ-2, ಸಾಲಿಗ್ರಾಮ-6, ಮಂದಾರ್ತಿ-1... ಹೀಗೆ 11 ವರ್ಷಗಳ ರಂಗಯಾತ್ರೆ ನಡೆಸಿದ ಅನುಭವಿ ಭಾಗವತರಿವರು.

ಸಮರ್ಥ ಭಾಗವತಿಕೆಯನ್ನು ಬಲ್ಲ ಹೆಬ್ಬಾರರಿಗೆ ಚಂಡೆ-ಮದ್ದಳೆ ವಾದನದ ಪರಿಣತಿಯೂ ಇರುವುದು ಗಮನಾರ್ಹ.

ಸದಾನಂದ ಹೆಬ್ಬಾರರ ಧರ್ಮಪತ್ನಿ ಗೀತಾ. ಸರಿತಾ ಹಾಗೂ ಸುರಭಿ ಇವರ ಉಭಯ ಹೆಣ್ಮಕ್ಕಳು.

ಉಪವೃತ್ತಿಯಾಗಿ ಕೃಷಿರಂಗವನ್ನು ಅವಲಂಬಿಸಿರುವ ಹೆಬ್ಬಾರರು ಬಿಡುವಿನ ವೇಳೆಯಲ್ಲಿ ಕಲಾಭ್ಯಾಸಿಗಳಿಗೆ ಭಾಗವತಿಕೆ ಶಿಕ್ಷಣವನ್ನೂ ನೀಡುತ್ತಾ ಬಂದಿದ್ದಾರೆ.

ಅನೇಕ ಸಂಘ-ಸಂಸ್ಥೆಗಳಿಂದ ಗೌರವಿಸಲ್ಪಟ್ಟ ಹೆಬ್ಬಾರರನ್ನು ಸೀಗೋಡು ಎಂಬಲ್ಲಿನ 'ಮರಿಯಪ್ಪಾಚಾರ್ ವೇದಿಕೆ' ಯ ವತಿಯಿಂದ ಸಂಮಾನಿಸಲಾಗಿದೆ.



## ಸೀತಾರಾಮ ಭಂಡಾರಿ, ಮಾಳ್ಕೋಡು

*ಮಾಳ್ಕೋಡು, ದೇವಸ್ಥಾನ ಕೇರಿ,*
*ಅಂಚೆ : ಕೆಳ ಇಡಗುಂಜಿ,*
*ಹೊನ್ನಾವರ ತಾಲೂಕು, (ಉ.ಕ)*
***ದೂರವಾಣಿ : 9481444694 / 9342701825***

ಮದ್ದಳೆಯ ಮಧುರ ಭಾಷೆಯಲ್ಲಿ ಕಲಾವಿದರ ಭಾವಾಭಿವ್ಯಕ್ತಿಗೆ ನಾದ ನಿನಾದದ ಹೊಸ ಹುರುಪು ನೀಡುವ ಪ್ರತಿಭಾವಂತ ಮದ್ದಳೆಗಾರ ಸೀತಾರಾಮ ಭಂಡಾರಿ, ಮಾಳ್ಕೋಡು.

ಉತ್ತರ ಕನ್ನಡದ ಹೊನ್ನಾವರ ತಾಲೂಕಿನ ಮಾಳ್ಕೋಡು ಇವರ ಹುಟ್ಟೂರು. 2-1-1976ರಲ್ಲಿ ಜನಿಸಿದ ಸೀತಾರಾಮ ಭಂಡಾರಿ ಅವರು ಕೃಷ್ಣ ಭಂಡಾರಿ-ಸರಸ್ವತಿ ದಂಪತಿಯ ಸುಪುತ್ರ.

ಹತ್ತನೆ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ತನ್ನ 17ರ ಹರೆಯದಲ್ಲೇ ಕಲಾಜೀವನದ ಹಾದಿ ಹಿಡಿದ ಸೀತಾರಾಮ ಭಂಡಾರಿ ಅವರು ತನ್ನ ತಂದೆ-ತಾಯಿ ಹಾಗೂ ಹಿರಿಯ ಯಕ್ಷನಟ ಕೆರೆಮನೆ ಶಂಭು ಹೆಗಡೆಯುವರ ಪ್ರೇರಣೆ-ಪ್ರೋತ್ಸಾಹದಲ್ಲಿ ವೃತ್ತಿರಂಗಮುಖಿಯಾದರು.

ಕೆರೆಮನೆ ಶಂಭು ಹೆಗಡೆ, ಎ.ಪಿ. ಫಾಟಕ್, ವಿದ್ವಾನ್ ಗಣಪತಿ ಭಟ್ಟ ಹಾಗೂ ಹೆರಂಜಾಲು ಗೋಪಾಲ ಗಾಣಿಗರ ಗುರುತನದಲ್ಲಿ ಸುಪುಷ್ಟ ಕಲಾವಿದ್ಯೆಯನ್ನು ಸಂಪಾದಿಸಿದ ಭಂಡಾರಿ ಅವರು ತನ್ನ ಅನನ್ಯ ಕಲಾವಂತಿಕೆಯಿಂದ ಪ್ರಬುದ್ಧ ಮದ್ದಳೆಗಾರರಾಗಿ ಗುರುತಿಸಿಕೊಂಡರು.

ಗುಂಡಬಾಳ-3, ಮಂದಾರ್ತಿ-5, ಗೋಳಿಗರಡಿ-1, ಸೌಕೂರು-2, ಹಿರಿಯಡಕ-2... ಹೀಗೆ 13 ವರ್ಷಗಳ ಕಲಾಯಾತ್ರೆ ಇವರದ್ದಾಗಿದೆ.

ಸಶಕ್ತ ಪ್ರಸಂಗಾನುಭವ, ಸುಯೋಗ್ಯ ರಂಗನಡೆ, ಶ್ರವಣೀಯ ಮದ್ದಳೆಗಾರಿಕೆಯ ಮಾಧುರ್ಯದಲ್ಲಿ ರಂಗ ನೆಲದಲ್ಲಿ ನಾದಲೀಲೆಯನ್ನು ಸೃಜಿಸುವ ಸೀತಾರಾಮ ಭಂಡಾರಿ ಅವರು ಆಟ-ಕೂಟಗಳೆರಡರಲ್ಲೂ ವಿಜೃಂಭಿಸುವ ಸಮರ್ಥ ಮದ್ದಳೆ ವಾದಕರಾಗಿದ್ದಾರೆ.

ಇವರ ಬಾಳ ಸಂಗಾತಿ ಸವಿತಾ. ಓರ್ವಳೇ ಸುಪುತ್ರಿ ಕೃತಿಕಾ. ಚಿಕ್ಕ ಚೊಕ್ಕ ಸಂಸಾರ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಕಲಾಪ್ರತಿಭೆಯನ್ನು ಗುರುತಿಸಿ ಸಂಮಾನಿಸಿವೆ.



## ಸೀತಾರಾಮ ಹೆಗಡೆ, ಉಳವಿ-ಗದ್ದೆಮನೆ

*ಅಂಚೆ : ಉಳವಿ,*
*ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆ*
*ದೂರವಾಣಿ : 9481064451 / 08184-252595*

ಸಾಂಪ್ರದಾಯಿಕ ರಂಗ ವೈಶಿಷ್ಟ್ಯಗಳೊಂದಿಗೆ ಸೃಜನಶೀಲತೆಯ ಕಲಾ ವೈವಿಧ್ಯವನ್ನು ಎರಕಗೊಳಿಸಿ ಪೌರಾಣಿಕ ಪಾತ್ರಗಳಿಗೆ ವಿಶೇಷ ಕಳೆಯೊದಗಿಸುವ ಅನುಭವಿ ಕಲಾವಿದ ಸೀತಾರಾಮ ಹೆಗಡೆ ಉಳವಿ-ಗದ್ದೆಮನೆ.

ಶಿವಮೊಗ್ಗ ಜಿಲ್ಲೆಯ ಉಳವಿ ಎಂಬಲ್ಲಿ 8-8-1949ರಲ್ಲಿ ಜನಿಸಿದ ಸೀತಾರಾಮ ಹೆಗಡೆಯವರು ಬೆಳೆ ರಾಮಚಂದ್ರಪ್ಪ-ಜಾನಕಿ ದಂಪತಿಯ ಸುಪುತ್ರ.

7ನೇ ತರಗತಿಯವರೆಗೆ ಶಾಲಾ ವಿದ್ಯಾಭ್ಯಾಸ ಮಾಡಿದ ಹೆಗಡೆಯವರು ತನ್ನ 20ನೇ ವಯಸ್ಸಿನಲ್ಲಿ ಕಲಾಜೀವನಕ್ಕೆ ಹೆಜ್ಜೆ ಹಾಕಿದರು.

ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳಿಂದ ಪ್ರಭಾವಿತರಾಗಿ ಬಣ್ಣದ ಬದುಕಿನ ಗೀಳು ಹಚ್ಚಿಸಿಕೊಂಡ ಹೆಗಡೆಯವರು ದಶಾವತಾರಿ ಗುರು ವೀರಭದ್ರ ನಾಯಕರಲ್ಲಿ ಶಾಸ್ತ್ರೋಕ್ತ ಯಕ್ಷಶಿಕ್ಷಣವನ್ನು ಪಡೆದು ರಂಗಲೋಕಕ್ಕೆ ಮುಖಮಾಡಿದರು.

ಗೋಳಿಗರಡಿ, ಕಮಲಶಿಲೆ, ಸೌಕೂರು, ಸಿಗಂಧೂರು, ಅಮೃತೇಶ್ವರಿ, ಬಗ್ವಾಡಿ... ಮೊದಲಾದ ವೃತ್ತಿಮೇಳಗಳಲ್ಲಿ 20 ವರ್ಷಗಳ ಕಲಾವ್ಯವಸಾಯ ಮಾಡಿದ ಸೀತಾರಾಮ ಹೆಗಡೆಯವರು ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರ ಆಶ್ರಯದ . ತುಮರಿ-ಯಕ್ಷಬಳಗದ ಕಲಾವಿದರಾಗಿಯೂ ನಾಲ್ಕು ವರ್ಷ ಕಲಾಸೇವೆ ನಡೆಸಿದ್ದಾರೆ.

ಪುರಾಣ ಕಥಾಭಾಗಗಳ ಖಳನಾಯಕ ಪಾತ್ರ ನಿರ್ವಹಣೆಯಲ್ಲಿ ಹೆಗಡೆಯವರ ಕಲಾಭಿವ್ಯಕ್ತಿ ಅಮೋಘ. ನಿರರ್ಗಳ ವಾಕ್ ಪಾಂಡಿತ್ಯದಲ್ಲಿ ಪಾತ್ರಗಳ ಆಂತರಂಗಿಕ ಸತ್ತ್ವವನ್ನು ಎತ್ತಿತೋರಿಸುವ ಹೆಗಡೆಯವರ ಪೌರಾಣಿಕ ಜ್ಞಾನ ಅಗಾಧ.

ಭಸ್ಮಾಸುರ, ರಾವಣ, ದುಷ್ಟಬುದ್ಧಿ, ಕೌರವ, ಭೀಮ, ಭದ್ರಸೇನ, ದುರ್ಜಯ, ಮಾಗಧ, ಕೀಚಕ, ಸಹಸ್ರಾನಿಕ, ರುಕ್ಮ, ಬಲರಾಮ, ರಕ್ತಜಂಘ ಮೊದಲಾದ ಪಾತ್ರಗಳಲ್ಲಿ ಹೆಗಡೆಯವರ ಮನೋಜ್ಞ ಅಭಿನಯ ಕಲಾರಸಿಕರ ಮನಮುಟ್ಟಿದೆ.

ಸೀತಾರಾಮ ಹೆಗಡೆಯವರ ಧರ್ಮಪತ್ನಿ ಅಹಲ್ಯಾ. ಶ್ರೀಯುತರಿಗೆ ಉಭಯ ಮಕ್ಕಳು.

ಅಖಿಲ ಕರ್ನಾಟಕ ಹವ್ಯಕ ಮಹಾಸಭಾ, ಬೆಂಗಳೂರು ಇದರ ವತಿಯಿಂದ ಸೀತಾರಾಮ ಹೆಗಡೆಯವರಿಗೆ ಪ್ರತಿಭಾ ಪುರಸ್ಕಾರ ದೊರಕಿರುತ್ತದೆ. ಅನೇಕ ಸಂಘ-ಸಂಸ್ಥೆಗಳಿಂದಲೂ ಇವರು ಸಂಮಾನಿತರಾಗಿದ್ದಾರೆ.



## ಸೀತಾರಾಮ ಹೆಗಡೆ, ಮುಡಾರೆ

*ಅಂಚೆ : ಆಡುಕಾಳ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9481464706 / 08387-257396*

ಬಡಗುತಿಟ್ಟು ಯಕ್ಷಗಾನ ರಂಗಭೂಮಿಯ ಪೌರಾಣಿಕ ಆಖ್ಯಾನಗಳಲ್ಲಿರುವ ಎಲ್ಲಾ ಬಗೆಯ ಪುರುಷವೇಷಗಳನ್ನು ನಿರ್ವಹಿಸಿ ಗೆಲುವು ಕಾಣುವುದರೊಂದಿಗೆ ವೃತ್ತಿರಂಗದಲ್ಲಿ ಸದಭಿರುಚಿಯ ಹಾಸ್ಯಗಾರಿಕೆಯಲ್ಲಿ ಪೂರ್ಣ ಪ್ರವಾಹದಲ್ಲಿ ತೊಡಗಿಸಿಕೊಂಡ ಅನುಭವಿ ಕಲಾವಿದ ಸೀತಾರಾಮ ಹೆಗಡೆ, ಮುಡಾರೆ.

ಉತ್ತರ ಕನ್ನಡದ ಹೊಸಾಕುಳಿ ಎಂಬಲ್ಲಿ 27-10-1963ರಲ್ಲಿ ಸುಬ್ಬ ಹೆಗಡೆ-ಗಂಗಾ ದಂಪತಿಯ ಸುಪುತ್ರನಾಗಿ ಜನಿಸಿದ ಸೀತಾರಾಮ ಹೆಗಡೆಯವರು 9ನೇ ತರಗತಿವರೆಗಿನ ಔಪಚಾರಿಕ ಅಕ್ಷರ ಶಿಕ್ಷಣದ ಬಳಿಕ ತನ್ನ 16ರ ಹರೆಯದಲ್ಲೇ ಬಣ್ಣದ ಬದುಕು ಕಂಡರು.

ಬಾಲ್ಯದಲ್ಲಿಯೇ ಯಕ್ಷಕಲೆಯ ಮೇಲಣ ಅಪಾರ ಗೌರವ, ಒಲವು ಹೊಂದಿದ್ದ ಸೀತಾರಾಮ ಹೆಗಡೆಯವರು ಕಲಾಕ್ಷೇತ್ರಕ್ಕೆ ಪಾದಾರ್ಪಣೆ ಮಾಡುವುದಕ್ಕೆ ಪ್ರೇರಣೆಯಾಗಿ ಹೊಸಾಕುಳಿ ಶ್ರೀ ಉಮಾಮಹೇಶ್ವರ ಕಲಾವರ್ಧಕ ಸಂಘವೇ ಕಾರಣವಾಯಿತು.

ಡಾ. ಶಿವರಾಮ ಕಾರಂತರ ಹಾಗೂ ಕೆರೆಮನೆ ಶಂಭು ಹೆಗಡೆಯವರ ಗುರುತನ ಮಾರ್ಗದರ್ಶನದಲ್ಲಿ ಕಲಾವಿದ್ಯಾ ಸಂಪನ್ನರಾದ ಹೆಗಡೆಯವರು ನಾಗರಕೊಡಿಗೆ, ಗುಂಡಬಾಳ, ಕೆರೆಮನೆ, ಬಚ್ಚಗಾರು, ಕುಮಟಾ ಮೇಳಗಳಲ್ಲಿ 11 ವರ್ಷಗಳ ಕಲಾಯಾತ್ರೆ ನಡೆಸಿ ಜನಮಾನ್ಯತೆಗಳಿಸಿದ್ದಾರೆ.

ಹಾಸ್ಯಗಾರ ಸೀತಾರಾಮ ಹೆಗಡೆಯವರು ದುಷ್ಟಬುದ್ಧಿ, ಭಸ್ಮಾಸುರ, ಕೀಚಕ, ಮಹಿಷಾಸುರ, ಶ್ರೀಕೃಷ್ಣ, ಸುಧನ್ವ, ಅರ್ಜುನ, ಕಾರ್ತವೀರ್ಯ, ರಾವಣ, ಸಾಲ್ವ, ಭೀಷ್ಮ, ಹನುಮಂತ, ಕುಳಿಂದ... ಮೊದಲಾದ ಭೂಮಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಪ್ರೇಕ್ಷಕರ ಶ್ಲಾಘನೆಗೆ ಪಾತ್ರರಾಗಿದ್ದಾರೆ.

ವಿಜಯ, ಕಾಶೀಮಾಣಿ, ಕಾಳಿದಾಸ... ಮೊದಲಾದ ವೈನೋದಿಕ ಪಾತ್ರಗಳು ಇವರಿಗೆ ಸಾರ್ಥಕ ನಾಮವನ್ನು ತಂದಿತ್ತಿವೆ.

ಹಲವಾರು ಯಕ್ಷಗಾನ ಕಲಾಸಂಘಗಳನ್ನು ಸ್ಥಾಪಿಸಿ ಅನೇಕ ಪ್ರತಿಭೆಗಳನ್ನು ಬೆಳಕಿಗೆ ತಂದ ಹಿರಿಮೆಯೂ ಇವರಿಗಿದೆ. ತಾಳಮದ್ದಳೆಯಲ್ಲಿ ಏಕಪಾತ್ರದ ಅರ್ಥಗಾರಿಕೆಯಲ್ಲಿ ಗುರುತಿಸಿಕೊಂಡು ಇವರು ಜನಪ್ರಿಯರಾಗಿದ್ದಾರೆ.

ಸೀತಾರಾಮ ಹೆಗಡೆಯವರ ಧರ್ಮಪತ್ನಿ ರೇಣುಕಾ. ಅಂಜನಾ, ಶೃತಿ, ಗಣೇಶ ಇವರ ಮೂರು ಮಂದಿ ಮಕ್ಕಳು.

ಸ್ಥಳೀಯ ಸಂಘ-ಸಂಸ್ಥೆಗಳಿಂದ, ಶಿಷ್ಯ ಬಳಗದಿಂದ ಕಲಾವಿದ ಹೆಗಡೆಯವರು ಸಂಮಾನಿತರಾಗಿದ್ದಾರೆ.



## ಸುಧಾಕರ ಕೊಠಾರಿ

*ಮೇಲ್ ಕೋಟಿ ಕೇರಿಮನೆ, ಅಂಚೆ : ಯಳಜಿತ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9632273581*

ಸಶಕ್ತ ಯಕ್ಷಗಾಯನದ ಮೂಲಕ ರಂಗನಟರ ಕಲಾಭಿವ್ಯಕ್ತಿಯನ್ನು ಪ್ರಖರಗೊಳಿಸುವ ಯುವಭಾಗವತ ಸುಧಾಕರ ಕೊಠಾರಿ.

ಕುಂದಾಪುರ ತಾಲ್ಲೂಕಿನ ಯಳಜಿತ ಎಂಬ ಊರಿನಲ್ಲಿ 15–5–1978ರಲ್ಲಿ ಜನಿಸಿದ ಸುಧಾಕರ ಕೊಠಾರಿ ಅವರು ನಾಗು ಕೊಠಾರಿ–ಚಂದು ದಂಪತಿಯ ಪುತ್ರ.

ಪ್ರಥಮ ಪಿ.ಯು.ಸಿ. ವ್ಯಾಸಂಗದ ಬಳಿಕ 18ನೇ ವಯಸ್ಸಿನಲ್ಲಿ ಯಕ್ಷಗಾನ ಪ್ರಪಂಚವನ್ನು ಪ್ರವೇಶಿಸಿದ ಇವರು ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಶಾಸ್ತ್ರೋಕ್ತ ಯಕ್ಷಶಿಕ್ಷಣವನ್ನು ಪಡೆದರು.

ವೃತ್ತಿರಂಗದಲ್ಲಿ ಹಿರಿಯ ಕಲಾವಿದರ ಒಡನಾಟದಿಂದ ಅನನ್ಯ ಅನುಭವದ್ರವ್ಯವನ್ನು ಗಳಿಸಿಕೊಂಡು ತನ್ನ ಸುಖಸ್ವರದಲ್ಲಿ ಪ್ರೇಕ್ಷಕ ಬಾಂಧವರ ಕರ್ಣಾಂಗಣವನ್ನು ತಣಿಸಿದರು. ಉತ್ತಮ ಪ್ರಸಂಗಾನುಭವ, ರಂಗಮಾಹಿತಿಯನ್ನು ಹೊಂದಿದ ಕೊಠಾರಿಯವರು ಪೌರಾಣಿಕ ರಂಗನಿಯತ್ತಿನಲ್ಲಿ ಯಕ್ಷಗಾಯನವನ್ನು ನಿರೂಪಿಸುವವರು.

ಬಗ್ವಾಡಿ ಮೇಳದಲ್ಲಿ ಒಂದು ವರ್ಷ ತಿರುಗಾಟ ಮಾಡಿದ ಭಾಗವತ ಸುಧಾಕರ ಕೊಠಾರಿ 12 ವರ್ಷಗಳಿಂದ ಮಾರಣಕಟ್ಟೆ ಮೇಳದ ಭಾಗವತರಾಗಿ ಕಲಾಸೇವೆ ಸಲ್ಲಿಸುತ್ತಿದ್ದಾರೆ.

ಹವ್ಯಾಸಿ ಆಟ–ಕೂಟಗಳಲ್ಲೂ ಭಾಗವತರಾಗಿ ಭಾಗವಹಿಸುವ ಕೊಠಾರಿಯವರು ಒಳ್ಳೆಯ ಅಧ್ಯಯನಶೀಲರಾಗಿ ವೃತ್ತಿರಂಗದಲ್ಲಿ ಎತ್ತರಕ್ಕೇರುವ ಆಕಾಂಕ್ಷೆಯನ್ನು ಹೊಂದಿದ್ದಾರೆ.

ಸುಧಾಕರ ಕೊಠಾರಿಯವರು ರೇವತಿ ಎಂಬುವರನ್ನು ವರಿಸಿ ಸುರಭಿ ಎನ್ನುವ ಮಗಳನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ–ಸಂಸ್ಥೆಗಳು ಪ್ರತಿಭಾನ್ವಿತ ಕೊಠಾರಿಯವರನ್ನು ಗುರುತಿಸಿ ಗೌರವಿಸಿವೆ.



## ಸುಧಾಕರ ದೇವಾಡಿಗ, ಉಪ್ಪುಂದ

*ಭಾನುಮನೆ, ಅಂಚೆ : ಉಪ್ಪುಂದ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9242943348*

ಯಕ್ಷಗಾನದ ಪ್ರತಿನಾಯಕ ಹಾಗೂ ಖಳನಾಯಕ ಪಾತ್ರಗಳಿಗೆ ತನ್ನ ಕಲಾವಂತಿಕೆಯಿಂದ ಜೀವತುಂಬುವ ಯುವ ಯಕ್ಷನಟ ಸುಧಾಕರ ದೇವಾಡಿಗ, ಉಪ್ಪುಂದ.

ಕುಂದಾಪುರ ತಾಲೂಕಿನ ಉಪ್ಪುಂದ–ಭಾನುಮನೆ ಎಂಬಲ್ಲಿ ಜನಿಸಿದ ಸುಧಾಕರ್, ರಾಮದೇವಾಡಿಗ–ಲಕ್ಷ್ಮೀ ದಂಪತಿಯ ಸುಪುತ್ರ. ಇವರಿಗೆ 38 ವರ್ಷಪ್ರಾಯ.

7ನೇ ತರಗತಿ ವಿದ್ಯಾಭ್ಯಾಸ ಮುಗಿಸಿ, 18ನೇ ವಯಸ್ಸಿನಲ್ಲಿ ಇವರು ರಂಗಜೀವನಕ್ಕೆ ಮುಂದಾದವರು. ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳ ನಿರಂತರ ವೀಕ್ಷಣೆಯೇ ಇವರ ವೃತ್ತಿಬದುಕಿಗೆ ಪ್ರೇರಣೆಯಾಯಿತು. ಹಿರಿಯ ಕಲಾವಿದ ಹೆರಾಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಕಲಾಶಿಕ್ಷಣ ಸಂಸ್ಕಾರವನ್ನು ಹೊಂದಿ ರಂಗಪ್ರವೇಶಿಸಿದ ಸುಧಾಕರ ದೇವಾಡಿಗರು ಸಮರ್ಥಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ.

ನಾಗರಕೊಡಿಗೆ–2, ಅಮೃತೇಶ್ವರಿ–1, ಮಂದಾರ್ತಿ–13, ಮಡಾಮಕ್ಕಿ–1, ಮಾರಣಕಟ್ಟೆ–5.... ಹೀಗೆ 22 ವರ್ಷಗಳ ಕಲಾತಿರುಗಾಟ ಇವರದ್ದಾಗಿದೆ. ಪ್ರಸ್ತುತ ದೇವಾಡಿಗರು ಮಾರಣಕಟ್ಟೆ ಮೇಳದಲ್ಲಿ ವೃತ್ತಿ ತಿರುಗಾಟದಲ್ಲಿದ್ದಾರೆ.

ಸಾಲ್ವ, ಭೀಮ, ಅರ್ಜುನ, ಕೀಚಕ, ಕೌರವ, ರಾವಣ, ವಿಭೀಷಣ, ಶತ್ರುಘ್ನ, ವೀರಮಣಿ, ಹನುಮಂತ, ಬಲರಾಮ, ಶಲ್ಯ, ಈಶ್ವರ, ಶೂರಸೇನ, ವಿಶ್ವಾಮಿತ್ರ... ಮೊದಲಾದ ಪಾತ್ರಪೋಷಣೆಯಲ್ಲಿ ಸುಧಾಕರ ದೇವಾಡಿಗರು ಪ್ರೇಕ್ಷಕರ ಮನಮೆಚ್ಚಿಸಿದ್ದಾರೆ.

ವಿಭಿನ್ನ ನಡೆಯ ವೇಷ ನಿರ್ವಹಣೆಯಲ್ಲಿ ಗುರುತಿಸಿಕೊಂಡ ಇವರು ಉತ್ತಮ ಮುಂಡಾಸು ವೇಷಧಾರಿ.

ಸುಧಾಕರ ದೇವಾಡಿಗರ ಬಾಳ ಸಂಗಾತಿ ಸೀತಾ. ಆದಿತ್ಯ ಹಾಗೂ ದೀಪಕ ಇವರ ಉಭಯ ಮಕ್ಕಳು.

ಅನೇಕ ಸಂಘ–ಸಂಸ್ಥೆಗಳಲ್ಲಿ ದೇವಾಡಿಗರು ಸಂಮಾನಿತರಾಗಿದ್ದಾರೆ.



## ಸುಧಾಕರ ಶೆಟ್ಟಿ, ಕಾನ್ಕಿ

*ಕಾನ್ಕಿ, ವೈಲಾಲಿ, ಅಂಚೆ : ಜಡ್ಕಲ್*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9632502260*

ಪ್ರಬುದ್ಧ ಮುಂಡಾಸು ವೇಷಧಾರಿಯಾಗಿ ಗುರುತಿಸಿಕೊಂಡ ಯುವ ಕಲಾವಿದ ಸುಧಾಕರ ಶೆಟ್ಟಿ ಕಾನ್ಕಿ.

ಕುಂದಾಪುರ ತಾಲೂಕಿನ ಕಾನ್ಕಿ ಎಂಬ ಊರಿನಲ್ಲಿ ವೆಂಕಪ್ಪ ಶೆಟ್ಟಿ-ಚೆನ್ನಮ್ಮ ಶೆಡ್ತಿ ದಂಪತಿಯ ಸುಪುತ್ರನಾಗಿ ಜನಿಸಿದ ಸುಧಾಕರ ಶೆಟ್ಟರು ಇದೀಗ 36ರ ಹರೆಯದಲ್ಲಿದ್ದಾರೆ.

ನಾಲ್ಕನೆ ತರಗತಿಗೆ ಶರಣು ಹೊಡೆದು 18ನೇ ವರ್ಷದಲ್ಲಿ ಕಲಾಜೀವನದ ಪಥವನ್ನು ಅನುಸರಿಸಿದ ಸುಧಾಕರ ಶೆಟ್ಟರು ಹಾಸ್ಯಗಾರ ಮಹಾಬಲ ದೇವಾಡಿಗ ಹಾಗೂ ಹಿರಿಯ ಕಲಾವಿದ ಆಲೂರು ಸುರೇಂದ್ರ ಅವರ ಪ್ರೇರಣೆ-ಪ್ರೋತ್ಸಾಹದೊಂದಿಗೆ ವೃತ್ತಿರಂಗಮುಖಿಯಾದರು.


ಆಲೂರು ಸುರೇಂದ್ರ ಅವರೇ ಇವರಿಗೆ ಕಲಾಗುರುಗಳು. ಸಮರ್ಥ ಗುರುವಿನ ಸಶಕ್ತ ಯಕ್ಷಬೋಧೆಯಿಂದ ಸಮರ್ಪಕ ರಂಗಶಿಕ್ಷಣ ಸಂಪನ್ನರಾದ ಸುಧಾಕರ ಶೆಟ್ಟರು ವೃತ್ತಿ ಮೇಳಗಳಲ್ಲಿ ಸಾರ್ಥಕ ವ್ಯವಸಾಯದಿಂದ ಸಹೃದಯ ಕಲಾರಸಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮಾರಣಕಟ್ಟೆ-12, ಕಮಲಶಿಲೆ-3, ಬಗ್ವಾಡಿ-1, ಮಡಾಮಕ್ಕಿ-1, ಅಮೃತೇಶ್ವರಿ-1... ಹೀಗೆ 18 ವರ್ಷಗಳ ರಂಗಕೃಷಿಯಲ್ಲಿ ಶೆಟ್ಟರ ಕಲಾಪ್ರತಿಭೆ ಸಮೃದ್ಧವಾಗಿ ಗುರುತಿಸಲ್ಪಟ್ಟಿದೆ.

ಪೌರಾಣಿಕ ಕಥಾನಕಗಳಲ್ಲಿ ಕಂಡುಬರುವ ಮುಂಡಾಸು ವೇಷಗಳ ನಿರ್ವಹಣೆಯಲ್ಲಿ ವಿಶೇಷ ಯಶಸ್ಸು ಕಂಡ ಸುಧಾಕರ ಶೆಟ್ಟರು ಒಳ್ಳೆಯ ಪೋಷಕ ಪಾತ್ರಧಾರಿಯಾಗಿ ರಂಗ-ಪ್ರಸಂಗಕ್ಕೆ ರಂಗು ತುಂಬುವವರು.

ಸುಧಾಕರ ಶೆಟ್ಟರು ಸುಗಂಧಿ ಎನ್ನುವವರನ್ನು ವರಿಸಿ ಶಿಥಿಲ ಹಾಗೂ ಶಿಲ್ಪಾ ಎನ್ನುವ ಉಭಯ ಮಕ್ಕಳನ್ನು ಪಡೆದಿರುತ್ತಾರೆ.

ಸ್ಥಳೀಯ ಸಂಘ-ಸಂಸ್ಥೆಗಳಿಂದ ಶೆಟ್ಟರು ಗೌರವಪೂರ್ವಕ ಸಂಮಾನ ಪಡೆದಿರುತ್ತಾರೆ.



## ಸುಬ್ರಹ್ಮಣ್ಯ ಆಚಾರ್ ನಗರ

*ಅಂಚೆ : ಕೆಳಾರ್ಕಳ ಬೆಟ್ಟು, ಸಂತೆಕಟ್ಟೆ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9945654564*

ಕಲಕಂಠ ಸಿರಿಯು ಯಕ್ಷಗಾಯನದಲ್ಲಿ ಕಲಾರಸಿಕರ ಕರ್ಣಾಂಗಣಕ್ಕೆ ಇಂಪಿನ ತಂಪೆರೆವ ಬಡಗಿನ ಪ್ರತಿಭಾವಂತ ಭಾಗವತ ನಗರ ಸುಬ್ರಹ್ಮಣ್ಯ ಆಚಾರ್.

ಇವರ ಹುಟ್ಟೂರು ನಗರ ಸನಿಹದ ಬೇಳೂರು. ಸದಾಶಿವ ಆಚಾರ್–ಜಯಲಕ್ಷ್ಮೀ ದಂಪತಿಯ ಸುಪುತ್ರನಾಗಿ 25–12–1976ರಲ್ಲಿ ಜನಿಸಿದ ಸುಬ್ರಹ್ಮಣ್ಯ ಆಚಾರ್ ಒಂಬತ್ತನೆ ತರಗತಿಗೆ ಶರಣುಹೊಡೆದು ಯಕ್ಷರಂಗ ಬದುಕಿನ ಕಲಾಪ್ರಪಂಚವನ್ನು ಪ್ರವೇಶಿಸಿದರು.

ಸುಬ್ರಹ್ಮಣ್ಯ ಆಚಾರ್ ಅವರ ಅಜ್ಜ ಪುಟ್ಟಾಚಾರ್ ಈ ರಂಗಭೂಮಿಯ ಹೆಸರಾಂತ ಮದ್ದಳೆಗಾರರು. ಅವರ ಪ್ರೇರಣೆ–ಪ್ರೋತ್ಸಾಹವೇ ಇವರ ಕಲಾಜೀವನದ ಹಾದಿಗೆ ಹೊನ್ನ ಹಾಸುಗೆ ಹಾಸಿತು. ಹಿರಿಯ ಕಲಾವಿದ ನಗರ ಜಗನ್ನಾಥ ಶೆಟ್ಟರು ಇವರನ್ನು ವೃತ್ತಿ ಮೇಳಕ್ಕೆ ಪರಿಚಯಿಸಿದರು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಚಂದ್ರಹಾಸ ಪುರಾಣಿಕ ಅವರಲ್ಲಿ ಶಾಸ್ತ್ರೋಕ್ತ ಭಾಗವತಿಕೆ ಶಿಕ್ಷಣ ಪಡೆದ ಸುಬ್ರಹ್ಮಣ್ಯ ಆಚಾರ್ ಅವರಿಗೆ ರಾಜ್ಯ ಪ್ರಶಸ್ತಿ ವಿಜೇತ ಗುರುಗಳಾದ ನೀಲಾವರ ಲಕ್ಷ್ಮೀನಾರಾಯಣಯ್ಯ ಹಾಗೂ ಬನ್ನಂಜೆ ಸಂಜೀವ ಸುವರ್ಣ ಅವರ ಗುರುತನವೂ ದೊರಕಿ ಸಶಕ್ತ ಕಲಾ ವಿದ್ಯಾರ್ಜನೆಗೆ ಸಹಕಾರಿಯಾಯಿತು.

ಗೋಳಿಗರಡಿ, ಕಮಲಶಿಲೆ, ಮಂದಾರ್ತಿ ಮೇಳಗಳಲ್ಲಿ ನಗರ ಸುಬ್ರಹ್ಮಣ್ಯ ಆಚಾರ್‌ರ ಕಲಾಸೇವೆ ಸಾರ್ಥಕ 12 ವರ್ಷಗಳನ್ನು ಪೂರೈಸಿರುತ್ತದೆ.

ಭಾಗವತರಾದ ಆಚಾರ್ಯರು ವೇಷಧಾರಿಯೂ ಹೌದು. ಶ್ರೀರಾಮ, ಮುನಿಯಂತಹ ಅನೇಕ ವೇಷಗಳನ್ನೂ ಇವರು ನಿರ್ವಹಿಸಿದ್ದಾರೆ. ಮದ್ದಳೆ ವಾದನದ ಪರಿಣತಿಯನ್ನೂ ಹೊಂದಿದ್ದಾರೆ.

ಎಲ್ಲಾ ಪೌರಾಣಿಕ ಪ್ರಸಂಗಗಳನ್ನೂ ಸಮರ್ಥವಾಗಿ ಆಡಿಸುವ ಇವರ ರಾಗಶುದ್ಧಿ, ಖಚಿತ ಲಯಗಾರಿಕೆ, ಗಟ್ಟಿಯಾದ ತಾಳಗಾರಿಕೆ, ಸಶಕ್ತ ರಂಗತಂತ್ರ ಹಾಗೂ ಸುಯೋಗ್ಯ ಪ್ರಸಂಗಾನುಭವ ಯಕ್ಷರಸಿಕರನ್ನು ಮೋಡಿಮಾಡಿದೆ.

ಹಾಡುಗಾರಿಕೆಯಲ್ಲಿ ತನ್ನತನ ಹಾಗೂ ಸರ್ವರನ್ನೂ ಆಕರ್ಷಿಸುವ ಗಂಧರ್ವ ಗುಣವನ್ನು ನಿರೂಪಿಸುವ ಆಚಾರ್ಯರು ಪ್ರಧಾನ ಭಾಗವತಿಕೆಗೆ ನ್ಯಾಯೋಚಿತ ಸ್ಥಾನ–ಮಾನ ಕಲ್ಪಿಸಿದವರು. ಇವರ ಅನೇಕ ದೃಶ್ಯ–ಶ್ರಾವ್ಯ ಯಕ್ಷಗಾನ ಧ್ವನಿ ಮುದ್ರಿಕೆಗಳು ಮಾರುಕಟ್ಟೆಗೆ ಬಂದಿವೆ.

ಆಟ–ಕೂಟಗಳೆರಡರಲ್ಲೂ ಬಹುಬೇಡಿಕೆಯ ಭಾಗವತರಾದ ಆಚಾರ್ಯರು ಉತ್ತಮ ಸಂಘಟಕರೂ, ತರಬೇತಿದಾರರೂ ಆಗಿದ್ದಾರೆ. ಉಡುಪಿ ಯಕ್ಷಗಾನ ಕೇಂದ್ರದ ಭಾಗವತಿಕೆ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದ ಹಿರಿಮೆಯೂ ಇವರಿಗಿದೆ.

ಪ್ರತಿಭಾನ್ವಿತ ಭಾಗವತ ನಗರ ಸುಬ್ರಹ್ಮಣ್ಯ ಆಚಾರ್ಯರು ಸರಸ್ವತಿ ಎಂಬುವರನ್ನು ವರಿಸಿ ಸೀಮಾ ಹಾಗೂ ಕಿಶೋರ ಎನ್ನುವ ಉಭಯ ಮಕ್ಕಳನ್ನು ಪಡೆದಿದ್ದಾರೆ.

ಕೋಣಿ, ಕಟಪಾಡಿ, ಉಡುಪಿ ಮೊದಲಾದ ಕಡೆಗಳ ಕಲಾ ಸಂಸ್ಥೆಗಳಿಂದ ಇವರು ಸಂಮಾನಿತರಾಗಿದ್ದಾರೆ.



## ಸುಬ್ರಹ್ಮಣ್ಯ ಗಣಪತಿ ಹೆಗಡೆ, ಮೂರೂರು

*ಅಂಚೆ : ಮೂರೂರು*
*ಕುಮಟಾ ತಾಲೂಕು (ಉ.ಕ)*
*ದೂರವಾಣಿ : **944919730 / 08386-268513***

ರಂಗಕಲಾರಸಿಕರ ಶ್ರವಣ ಮಂಜುಳ ಚಂಡೆವಾದನದ ಮೂಲಕ ರಂಗಸ್ಥಳದಲ್ಲಿ ಮಧುರ ನಾದಲೋಕವನ್ನು ನಿರ್ಮಿಸುವ ಪ್ರಬುದ್ಧ ಚಂಡೆವಾದಕ ಸುಬ್ರಹ್ಮಣ್ಯ ಹೆಗಡೆ, ಮೂರೂರು.

ಉತ್ತರಕನ್ನಡದ ಕುಮಟಾ ತಾಲೂಕಿನ ಮೂರೂರು ಎಂಬಲ್ಲಿ 18-6-1966ರಲ್ಲಿ ಜನಿಸಿದ ಸುಬ್ರಹ್ಮಣ್ಯ ಹೆಗಡೆಯವರು ಗಣಪತಿ ಹೆಗಡೆ-ದೇವಕಿ ದಂಪತಿಯ ಸುಪುತ್ರ.

ಹತ್ತನೆ ತರಗತಿಗೆ ವಿದ್ಯಾಭ್ಯಾಸವನ್ನು ಕೊನೆಗೊಳಿಸಿ ಇಪ್ಪತ್ತನೆ ವಯಸ್ಸಿನಲ್ಲಿ ಯಕ್ಷಗಾನ ಬದುಕು ಕಂಡ ಸುಬ್ರಹ್ಮಣ್ಯ ಹೆಗಡೆಯುವರು ಬಾಲ್ಯದಲ್ಲಿಯೇ ಕಲಾವಶವರ್ತಿಯಾದರು. ಇವರ ತಂದೆ ಯಕ್ಷಗಾನ ವೇಷಧಾರಿಯಾದುದರಿಂದ ಇವರಿಗೆ ಇಂತಹ ಕಲೆಯೆಂಬುದು ರಕ್ತಗತವಾಗಿ ಒಲಿದುಬಂದಿತು.

ರಾಮದಾಸ ಭಂಡಾರಿ, ದೇವರು ಹೆಗಡೆ, ಕೆರೆಮನೆ ಶಂಭು ಹೆಗಡೆ ಹಾಗೂ ಶ್ರೀಧರ ಷಡಕ್ಷರಿ ಅವರ ಗುರುತನವನ್ನು ಹೊಂದಿದ ಇವರು ವೃತ್ತಿರಂಗದಲ್ಲಿ ಯೋಗ್ಯ ಚಂಡೆವಾದನ ಪಟುವಾಗಿ ಗುರುತಿಸಿಕೊಂಡರು.

ಶಿರಸಿ-2, ಪೆರ್ಡೂರು-18, ಮಂದಾರ್ತಿ-1, ಸಾಲಿಗ್ರಾಮ-1, ಮಾರಣಕಟ್ಟೆ-1... ಹೀಗೆ 23 ವರ್ಷಗಳ ಸಾರ್ಥಕ ಕಲಾತಿರುಗಾಟ ಇವರದ್ದಾಗಿದೆ.

ಪದ್ಯ ಪೋಷಕವಾದ, ಕಲಾವಿದರ ರಸಭಾವ ಪ್ರೇರಕವಾದ ಚಂಡೆ ವಾದನದಲ್ಲಿ ರಂಗ-ಪ್ರಸಂಗಕ್ಕೆ ಸಚೇತನದ ಹೊಸ ಕಳೆಯನ್ನು ಕೊಡುವ ಇವರ ಚಂಡೆಯ ಮಾಧುರ್ಯಪೂರ್ಣ ನುಡಿತ-ಭಣಿತಗಳು ಶ್ರವ್ಯಾನಂದದ ರಸದೊಸರನ್ನು ಕಲ್ಪಿಸಿಕೊಡುತ್ತವೆ.

ಸಮರ್ಥ ಚಂಡೆಗಾರರಾದ ಇವರಿಗೆ ಮದ್ದಳೆವಾದನವೂ ತಿಳಿದಿದೆ. ನರ್ತನವನ್ನೂ ಇವರು ಬಲ್ಲರು.

ಆಟ-ಕೂಟಗಳೆರಡರಲ್ಲೂ ಬಹುಬೇಡಿಕೆಯ ಹಿಮ್ಮೇಳ ಕರ್ಮಿಯಾಗಿ ಗುರುತಿಸಿಕೊಂಡ ಇವರ ವಾದನ ಪ್ರತಿಭೆ ಪರಿಪಕ್ವವಾಗಿ ಜನಮಾನ್ಯತೆ ಗಳಿಸುವಲ್ಲಿ ಯಶಸ್ವಿಯಾಗಿದೆ.

ಸುಬ್ರಹ್ಮಣ್ಯ ಹೆಗಡೆ ಅವರು ಸುಮಾ ಎಂಬವರನ್ನು ವರಿಸಿ ಪೂಜಾ ಹಾಗೂ ಪ್ರಿಯಾ ಎಂಬ ಉಭಯ ಹೆಣ್ಣುಮಕ್ಕಳನ್ನು ಪಡೆದಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಉನ್ನತ ಕಲಾವಂತಿಕೆಯನ್ನು ಮೆಚ್ಚಿ ಗೌರವಿಸಿವೆ.



## ಸುಬ್ರಹ್ಮಣ್ಯ ನಾವುಡ, ತೆಂಕಬೆಟ್ಟು

*ಅಂಚೆ : ಕಂಬದ ಕೋಣೆ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 9740743148*

ಮಧುರ ಸ್ವರಚೇತನ, ಖಚಿತ ತಾಳಜ್ಞಾನ, ಗಮನಾರ್ಹ ರಂಗತಂತ್ರ ಹಾಗೂ ಪ್ರಬುದ್ಧ ಪ್ರಸಂಗ ಮಾಹಿತಿಯಲ್ಲಿ ಸಮರ್ಥ ಭಾಗವತರಾಗಿ ರೂಪುಗೊಂಡವರು ಸುಬ್ರಹ್ಮಣ್ಯ ನಾವುಡ, ತೆಂಕಬೆಟ್ಟು.

ಕುಂದಾಪುರ ತಾಲೂಕಿನ ತೆಂಕಬೆಟ್ಟು ಎಂಬಲ್ಲಿ ನಾರಾಯಣ ನಾವುಡ–ನಾಗಮ್ಮ ದಂಪತಿಯ ಪುತ್ರನಾಗಿ 6–7–1967ರಲ್ಲಿ ಜನಿಸಿದ ಸುಬ್ರಹ್ಮಣ್ಯ ನಾವುಡರಿಗೆ ಶಾಲಾ ದಿನಗಳಲ್ಲೇ ಯಕ್ಷಕಲಾಸಕ್ತಿ ಬಲವಾಗಿತ್ತು. ಕಾಳಿಂಗ ನಾವುಡ ಹಾಗೂ ಹೆರಂಜಾಲು ಗೋಪಾಲ ಗಾಣಿಗರ ಭಾಗವತಿಕೆಯ ಪ್ರಭಾವಕ್ಕೆ ಒಳಗಾದ ಇವರು ಎಸ್.ಎಸ್.ಎಲ್.ಸಿ. ವರೆಗೆ ಓದಿ ತನ್ನ 21ನೇ ವಯಸ್ಸಿನಲ್ಲೇ ಬಣ್ಣದ ಬದುಕಿಗೆ ಮನ ಮಾಡಿದರು.

ಹೆರಂಜಾಲು ವೆಂಕಟರಮಣ ಗಾಣಿಗ ಹಾಗೂ ಹೆರಂಜಾಲು ಗೋಪಾಲಗಾಣಿಗ ಅವರಲ್ಲಿ ಯಕ್ಷಗಾನ ಶಿಕ್ಷಣ ಪಡೆದ ಸುಬ್ರಹ್ಮಣ್ಯ ನಾವುಡರು ವೃತ್ತಿಮೇಳವನ್ನು ಸೇರಿ ಅಲ್ಲಿ ಸಮರ್ಥ ಭಾಗವತರಾಗಿ ಗುರುತಿಸಿಕೊಂಡರು.

ಮಾರಣಕಟ್ಟೆ–8, ಸೌಕೂರು–8, ಕಳವಾಡಿ–1, ಕಮಲಶಿಲೆ–3... ಹೀಗೆ ನಾವುಡರ ಕಲಾಯಾತ್ರೆ ವಿಂಶತಿ ವರ್ಷ ಪೂರೈಸಿದೆ.

ಪೌರಾಣಿಕ ಪ್ರಸಂಗಗಳೆಲ್ಲವನ್ನೂ ಸಮರ್ಥವಾಗಿ ಆಡಿಸುವ ಗಾನಕೌಶಲವನ್ನು ಹೊಂದಿದ ಯಕ್ಷಗಾಯಕ ಸುಬ್ರಹ್ಮಣ್ಯ ನಾವುಡರು ಪ್ರಸ್ತುತ ಕಮಲಶಿಲೆ ಮೇಳದ ಪ್ರಧಾನ ಭಾಗವತರಾಗಿ ಕಲಾವ್ಯವಸಾಯದಲ್ಲಿ ನಿರತರಾಗಿದ್ದಾರೆ.

ಭಾಗವತ ಸುಬ್ರಹ್ಮಣ್ಯ ನಾವುಡರ ಬಾಳ ಸಂಗಾತಿ ಸಾವಿತ್ರಿ. ಒಬ್ಬನೇ ಮಗ ನಾಗಚಂದ್ರ. ಚಿಕ್ಕ–ಚೊಕ್ಕ ಸಂಸಾರ.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಸಂಮಾನಿತರಾದ ಇವರು ಉಡುಪಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದಲೂ ಗೌರವವನ್ನು ಪಡೆದಿರುತ್ತಾರೆ.



## ಸುಬ್ರಹ್ಮಣ್ಯ ಪ್ರಸಾದ್, ಮುದ್ರಾಡಿ

*'ಅಕ್ಷರ', ಅಂಚೆ : ಮುದ್ರಾಡಿ,*
*ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08253-251004 / 9972383888*

ಇಂಪಾದ ಭಾಗವತಿಕೆ ಹಾಗೂ ಗಮನೀಯ ನೃತ್ಯಗಾರಿಕೆ ಎರಡರಲ್ಲೂ ಸಮಾನ ಪ್ರಭುತ್ವ ಹೊಂದಿ ಪ್ರಸ್ತುತ ಕೆರೆಮನೆ ಯಕ್ಷಗಾನ ಕೇಂದ್ರದ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಯುವ ಪ್ರತಿಭಾನ್ವಿತ ಸುಬ್ರಹ್ಮಣ್ಯ ಪ್ರಸಾದ್ ಮುದ್ರಾಡಿ.

ಮುದ್ರಾಡಿ ಎಂದ ಕೂಡಲೇ ಪ್ರಸಿದ್ಧ ಅರ್ಥಧಾರಿ, ಸಾಹಿತಿ ಅಂಬಾತನಯ ಮುದ್ರಾಡಿಯವರ ನೆನಪಾಗುವುದು ಸಹಜ. ಹೌದು, ಶ್ರೀಯುತ ಅಂಬಾತನಯರೇ ಸುಬ್ರಹ್ಮಣ್ಯ ಪ್ರಸಾದ್ ಅವರ ತಂದೆ, ತಾಯಿ ಶ್ರೀಮತಿ ಅಕ್ಕಮ್ಮ.

ಸುಬ್ರಹ್ಮಣ್ಯ ಪ್ರಸಾದ್ ಹುಟ್ಟಿದ್ದು ಮುದ್ರಾಡಿಯಲ್ಲಿ, 8-7-1978ರಲ್ಲಿ ಇವರ ಜನನ. ಬಾಲ್ಯದಿಂದಲೇ ಯಕ್ಷಕಲೆಯ ಕುರಿತ ಅನ್ಯಾದೃಶ ಆಸಕ್ತಿ ಶೈಕ್ಷಣಿಕ ವಿದ್ಯಾಭ್ಯಾಸವನ್ನು 9ಕ್ಕೆ ನಿಲ್ಲಿಸಿ 14ರ ಹರೆಯದಲ್ಲೇ ಇವರನ್ನು ಯಕ್ಷರಂಗಭೂಮಿಗೆ ಕರೆದುತಂದಿತು. ಇವರ ಅಜ್ಜ ಹಾಗೂ ತಂದೆಯವರು ಯಕ್ಷಗಾನ ಅರ್ಥಧಾರಿಗಳಾದುದರಿಂದ ಇಂತಹ ರಂಗಕಲೆಯ ಸಾಂಗತ್ಯ ಸುಬ್ರಹ್ಮಣ್ಯ ಪ್ರಸಾದ್ ಅವರಿಗೆ ಸುಲಭ ಸಾಧ್ಯವಾಯಿತು.

ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ನೀಲಾವರ ಲಕ್ಷ್ಮೀನಾರಾಯಣ ರಾವ್, ಬನ್ನಂಜೆ ಸಂಜೀವ ಸುವರ್ಣ, ಚಂದ್ರಹಾಸ ಪುರಾಣಿಕ ಹಾಗೂ ಎ.ಪಿ. ಫಾಟಕರಲ್ಲಿ ಶಾಸ್ತ್ರೋಕ್ತ ಯಕ್ಷ ಶಿಕ್ಷಣವನ್ನು ಪಡೆದ ಇವರು ವೃತ್ತಿಮೇಳದಲ್ಲಿ ಭಾಗವತರಾಗಿಯೂ ಸಂದರ್ಭೋಚಿತವಾಗಿ ವೇಷಧಾರಿಯಾಗಿಯೂ ದುಡಿದವರು.

ಶ್ರೀ ಗುಂಡಬಾಳ ಮೇಳ-6, ಮಾರಣಕಟ್ಟೆ ಮೇಳ-2, ಮಡಾಮಕ್ಕಿ ಮೇಳ-1, ಸಾಲಿಗ್ರಾಮ ಮೇಳ-1, ಅಮೃತೇಶ್ವರಿ ಮೇಳ-1.... ಹೀಗೆ 11 ವರ್ಷಗಳ ತಿರುಗಾಟ ಇವರದ್ದಾಗಿದೆ.

ಶಶಿಪ್ರಭಾ ಪರಿಣಯದ ಕಮಲಧ್ವಜ, ಅಭಿಮನ್ಯು ಕಾಳಗದ ಸುಭದ್ರೆ ಹಾಗೂ ಕೌರವ, ಸುಧನ್ವ ಕಾಳಗದ ಪ್ರಭಾವತಿ, ಕಂಸ ದಿಗ್ವಿಜಯದ ಆಸ್ತಿ, ಭೀಷ್ಮವಿಜಯದ ಕಿರಾತ ಏಕಲವ್ಯ... ಮುದ್ರಾಡಿಯವರು ನಿರ್ವಹಿಸಿ ಗೆಲುವು ಕಂಡ ಕೆಲವು ಪಾತ್ರಗಳಾಗಿವೆ.

ಮುದ್ರಾಡಿ ಸುಬ್ರಹ್ಮಣ್ಯ ಪ್ರಸಾದ್ ಪ್ರಮೀಳ ಎಂಬವರನ್ನು ವರಿಸಿ ಸಂತೃಪ್ತ ಕುಟುಂಬಿಯಾಗಿದ್ದು ಇದೀಗ ಯಕ್ಷಗಾನ ಅಧ್ಯಾಪನವೇ ಇವರ ವೃತ್ತಿಯಾಗಿದೆ.

ಹಲವಾರು ಸಂಘ-ಸಂಸ್ಥೆಗಳಿಂದ ಯುವ ಭಾಗವತ, ಶಿಕ್ಷಕ ಸುಬ್ರಹ್ಮಣ್ಯ ಪ್ರಸಾದ್ ಸಂಮಾನಿತರಾಗಿದ್ದಾರೆ.



# ಸುಬ್ರಹ್ಮಣ್ಯ ಭಂಡಾರಿ, ಗುಣವಂತೆ

*ಅಂಚೆ : ಗುಣವಂತೆ,*
*ಹೊನ್ನಾವರ ತಾಲೂಕು (ಉ.ಕ)*
*ದೂರವಾಣಿ : 9538578845*

ನಟನ ಕಲಾಭಿವ್ಯಕ್ತಿಗೆ ಪೂರಕವಾಗಿ, ಗಾನ-ಮದ್ದಳೆಯ ಹಿಮ್ಮೇಳ ಶಕ್ತಿಗೆ ಪೋಷಕವಾಗಿ ಶ್ರವಣ ಮಂಜುಳವಾಗಿ ಚಂಡೆ ವಾದನದ ಕರಕೌಶಲ್ಯವನ್ನು ಮೆರೆಯುವ ಪ್ರಬುದ್ಧ ಚಂಡೆಗಾರ ಸುಬ್ರಹ್ಮಣ್ಯ ಭಂಡಾರಿ, ಗುಣವಂತೆ.

ಹೊನ್ನಾವರ ತಾಲೂಕಿನ ಗುಣವಂತೆ ಎಂಬಲ್ಲಿ ಗಜಾನನ ಭಂಡಾರಿ-ಪಾರ್ವತಿ ದಂಪತಿಯ ಸುಪುತ್ರನಾಗಿ ಜನಿಸಿದ ಸುಬ್ರಹ್ಮಣ್ಯ ಅವರಿಗೆ ಇದೀಗ 28ರ ಹರೆಯ.

7ನೇ ತರಗತಿಗೆ ವಿದ್ಯಾಭ್ಯಾಸವನ್ನು ಮುಕ್ತಾಯಗೊಳಿಸಿ ತನ್ನ 17ನೇ ವಯಸ್ಸಿನಲ್ಲಿ ಯಕ್ಷಗಾನ ಬದುಕು ಕಂಡ ಸುಬ್ರಹ್ಮಣ್ಯ ಭಂಡಾರಿಯವರಿಗೆ ಕಲೆಯೆಂಬುದು ಆನುವಂಶಿಕ ಬಳುವಳಿ. ಇವರ ತಂದೆ ಹಾಗೂ ಚಿಕ್ಕಪ್ಪ ಚಂಡೆ-ಮದ್ದಳೆ ವಾದಕರಾದುದರಿಂದ ವಾದನ ಕಲಾಸಕ್ತಿಯೆಂಬುದು ಸಹಜವಾಗಿ ಮೈ-ಕೈ ತುಂಬಿಕೊಳ್ಳುವಂತಾಯಿತು. ಗಜಾನನ ದೇವಾಡಿಗ ಗುಣವಂತೆ ಹಾಗೂ ಚಿಕ್ಕಪ್ಪ ಈಶ್ವರ ಭಂಡಾರಿಯವರಿಂದ ಚಂಡೆವಾದನವನ್ನು ಕಲಿತುಕೊಂಡ ಇವರು ವೃತ್ತಿರಂಗದಲ್ಲಿ ಸುಯೋಗ್ಯ ವಾದನ ಕಲಾವಿದರಾಗಿ ರೂಪುಗೊಂಡರು.

ಗುಂಡಬಾಳ, ಗೋಳಿಗರಡಿ, ಹಾಲಾಡಿ ಮೇಳಗಳಲ್ಲಿ ಇವರು 11 ವರ್ಷ ಕಲಾವ್ಯವಸಾಯ ಪೂರೈಸಿದ್ದಾರೆ. ಪ್ರಸ್ತುತ ಹಾಲಾಡಿ ಮೇಳದ ಚಂಡೆಗಾರರಾಗಿ ದುಡಿಯುತ್ತಿದ್ದಾರೆ.

ಸುಬ್ರಹ್ಮಣ್ಯ ಭಂಡಾರಿ ಅವರ ವಾದನಕಲಾ ಪ್ರೌಢಿಮೆ ಗರಿಷ್ಠವಾದದ್ದು. ರಂಗ-ಪ್ರಸಂಗದ ಕುರಿತು ಅವರ ಹಿಡಿತವೂ ಉತ್ಕೃಷ್ಟವಾದದ್ದು. ಆಟ-ಕೂಟಗಳಲ್ಲೂ ಇವರು ಕ್ರಿಯಾಶೀಲ ಚಂಡೆವಾದಕರು.

ಯಕ್ಷಗಾನ ರಂಗಸೇವೆಯೇ ಬಾಳಬುತ್ತಿಗೆ ಮೂಲಾಧಾರವಾಗಿಸಿಕೊಂಡ ಸುಬ್ರಹ್ಮಣ್ಯ ಭಂಡಾರಿಯವರು ರಂಗವ್ಯವಸಾಯದ ಬಿಡುವಿನ ವೇಳೆಯಲ್ಲಿ ಕೃಷಿ ಕರ್ಮನಿರತರು.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಯುವ ಪ್ರತಿಭಾಸಂಪನ್ನತೆಯನ್ನು ಗುರುತಿಸಿ ಗೌರವಿಸಿವೆ.



## ಸುನಿಲ್ ಎಸ್. ಭಂಡಾರಿ

*ಕಡತೋಕಾ,*
*ಹೊನ್ನಾವರ ತಾಲೂಕು (ಉ.ಕ)*

ಮದ್ದಳೆಯನ್ನು ಮಧುರ ಹಸ್ತಸ್ಪರ್ಶದಿಂದ ಮಾತನಾಡಿಸಿ ಹಿಮ್ಮೇಳದ ಗಾಯನ ಶಕ್ತಿಗೆ, ಮುಮ್ಮೇಳದ ನಟನಾಭಿವ್ಯಕ್ತಿಗೆ ಸಮರ್ಪಕ ವಾದನ ಸಾಂಗತ್ಯ ನೀಡುವ ಪ್ರತಿಭಾವಂತ ಮದ್ದಳೆವಾದಕ ಸುನಿಲ್ ಎಸ್. ಭಂಡಾರಿ.

ಹೊನ್ನಾವರ ತಾಲೂಕಿನ ಕಡತೋಕ ಎಂಬಲ್ಲಿ ಜನಿಸಿದ ಸುನಿಲ್ ಭಂಡಾರಿ ಅವರು ಶಿವರಾಮ ಭಂಡಾರಿ-ಸುಬ್ಬಿ ಭಂಡಾರಿ ದಂಪತಿಯ ಸುಪುತ್ರ.

9ನೇ ತರಗತಿಗೆ ಶರಣು ಹೊಡೆದು ಯಕ್ಷಗಾನ ಬದುಕು ಕಂಡ ಸುನಿಲ್ ಅವರು ಹೆರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಶಾಸ್ತ್ರೋಕ್ತ ಕಲಾಶಿಕ್ಷಣವನ್ನು ಸಂಪಾದಿಸಿದರು.

ಮಂದಾರ್ತಿ, ಬಂಗಾರಮಕ್ಕಿ ಹಾಗೂ ಪೆರ್ಡೂರು ಮೇಳಗಳಲ್ಲಿ ಇವರ ಸಾರ್ಥಕ ಕಲಾಕೃಷಿ 18 ವಸಂತಗಳನ್ನು ಕಂಡಿರುತ್ತದೆ.

ಸುನಿಲ್ ಭಂಡಾರಿ ಅವರು ಮದ್ದಳೆಯನ್ನು ತೊಡೆಯೇರಿಸಿ ಕುಳಿತರೆಂದರೆ ಮೂಕಕೋಗಿಲೆಗೆ ಬಾಯಿ ಬಂದಂತಹ ರೋಮಾಂಚಕ ಅನುಭವ. ಅವರ ಸ್ಫುಟವಾದ ಹೊರಳಿಕೆ, ಸ್ಪಷ್ಟವಾದ ಬೆರಳುಗಾರಿಕೆ ಮಾಧುರ್ಯಪೂರ್ಣ ನಾದ-ನಿನಾದವನ್ನು ಹೊರ ಹೊಮ್ಮಿಸುವ ಪರಿ ಅನನ್ಯ. ಪೌರಾಣಿಕ ಪ್ರಸಂಗಗಳ ಸಾರ ಸತ್ವವನ್ನು ಗಂಭೀರವಾಗಿ ಹೀರಿಕೊಂಡು ಪಾತ್ರಕ್ಕೆ ಔಚಿತ್ಯಪೂರ್ಣವಾಗಿ ವಾದನ ಕಲೆಯನ್ನು ನಿರೂಪಿಸುವ ಭಂಡಾರಿ ಅವರು ನವೀನ ಕಥಾಮೃತಗಳಿಗಂತೂ ಅನಿವಾರ್ಯವೆನಿಸಬಹುದಾದ ಮದ್ದಳೆಗಾರರು.

ಸುನಿಲ್ ಭಂಡಾರಿ ಅವರಿಗೆ ಪಾರಂಪರಿಕ ಪೆಟ್ಟು-ಮಟ್ಟುಗಳೊಂದಿಗೆ ಸಮಕಾಲೀನ ಯಕ್ಷರಂಗದ ಸೃಜನಾತ್ಮಕ ನುಡಿತ ಭಣಿತಗಳೂ ಹಸ್ತಗತವಾಗಿವೆ.

ಖಚಿತವಾದ ತಾಳಗಾರಿಕೆ-ಲಯಗಾರಿಕೆಯ ಸೊಗಸಿನಲ್ಲಿ ರಂಗಸ್ಥಳಕ್ಕೆ ನಾದದ ರಂಗು ನೀಡಿ ಸೌಖ್ಯ ವಾದನದ ಗುಂಗು ತುಂಬುವ ಭಂಡಾರಿ ಅವರು ಆಟ-ಕೂಟಗಳೆರಡರಲ್ಲೂ ಬಹುಬೇಡಿಕೆಯ ಮದ್ದಳೆಗಾರರಾಗಿದ್ದಾರೆ.

ಸಮರ್ಥ ಮದ್ದಳೆವಾದಕರಾದ ಇವರಿಗೆ ಹೆಜ್ಜೆಗಾರಿಕೆಯ ಪರಿಣತಿಯೂ ಇದೆ. ಅನೇಕ ಪ್ರತಿಭಾವಂತ ಶಿಷ್ಯರನ್ನು ರೂಪಿಸಿದ ಹಿರಿಮೆಯನ್ನೂ ಇವರು ಹೊಂದಿದ್ದಾರೆ.

ಸುನಿಲ್ ಭಂಡಾರಿ ಅವರ ಸಹಧರ್ಮಿಣಿ ಸಂಧ್ಯಾ.

ಸ್ಥಳೀಯ ಸಂಘ-ಸಂಸ್ಥೆಗಳು ಇವರ ಉನ್ನತ ಕಲಾಪ್ರತಿಭೆಗೆ ಶರಣಾಗಿ ಸಂಮಾನಿಸಿವೆ.



# ಸುರೇಶ್ ಕುಲಾಲ್, ಆವರ್ಸೆ

*ಅಂಚೆ : ಆವರ್ಸೆ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*

ಕಲಾರಸಿಕರ ಕಣ್ಮನ ಸೆಳೆಯುವ ವೇಷಗಾರಿಕೆಯ ಸೊಗಸಿನಲ್ಲಿ ರಂಗಮಂಚದಲ್ಲಿ ಸ್ತ್ರೀಸಹಜ ಭಾವ-ಸ್ವಭಾವದ ಉತ್ಕೃಷ್ಟ ಕಲಾಪ್ರತಿಭೆ ಪ್ರದರ್ಶಿಸುವ ಪ್ರತಿಭಾಶಾಲಿ ಯುವ ಕಲಾವಿದ ಸುರೇಶ ಕುಲಾಲ ಆವರ್ಸೆ.

ಉಡುಪಿ ತಾಲೂಕಿನ ಆವರ್ಸೆ ಇವರ ಹುಟ್ಟೂರು. ತಂದೆ ಅನಂತ ಕುಲಾಲ, ತಾಯಿ-ಪದ್ಮಾವತಿ. 7ನೇ ತರಗತಿಯ ವ್ಯಾಸಂಗದ ಬಳಿಕ, ತನ್ನ 14ರ ಹರೆಯದಲ್ಲೇ ಕಲಾಬದುಕಿಗೆ ಮನಮಾಡಿದ ಸುರೇಶ ಕುಲಾಲ ಅವರು ಚಿಕ್ಕಂದಿನಿಂದಲೇ ತೀವ್ರ ಯಕ್ಷಗಾನಾಸಕ್ತಿ ಹೊಂದಿದವರು. ಪರಿಸರದಲ್ಲಿ ಜರುಗುತ್ತಿದ್ದ ಬಯಲಾಟಗಳಿಂದ ಪ್ರೇರಿತರಾದ ಇವರು ಹಾಸ್ಯಗಾರ ಆವರ್ಸೆ ಚಂದ್ರ ಕುಲಾಲ ಅವರಿಂದ ಯಕ್ಷಶಿಕ್ಷಣ ಪಡೆದು ವೃತ್ತಿರಂಗವನ್ನು ಪ್ರವೇಶಿಸಿದವರು.

ಅಮೃತೇಶ್ವರಿ, ಬಚ್ಚಗಾರು, ಮಡಾಮಕ್ಕಿ, ಹಾಲಾಡಿ, ಸೌಕೂರು, ಸಾಲಿಗ್ರಾಮ, ಪೆರ್ಡೂರು ಮೇಳಗಳಲ್ಲಿ ಸುರೇಶ ಕುಲಾಲರ 19 ವರ್ಷಗಳ ಕಲಾವ್ಯವಸಾಯ ಸಾರ್ಥಕ ಯಶಸ್ಸು ಕಂಡಿದೆ.

ಪೌರಾಣಿಕ ಕಥಾನಕಗಳ ಎಲ್ಲಾ ಬಗೆಯ ಸ್ತ್ರೀವೇಷಗಳನ್ನೂ ನಿರ್ವಹಿಸುವ ಕಲಾಜಾಣ್ಮೆ ಇವರಿಗಿದೆ. ಶೃಂಗಾರ ಭಾವ ಪ್ರಧಾನ ಪಾತ್ರವಿರಲಿ, ಗಂಭೀರ ನಡೆಯ ಭೂಮಿಕೆಯಿರಲಿ, ಸೌಮ್ಯ ಸ್ವಭಾವದ ಸ್ತ್ರೀವೇಷಗಳಿರಲಿ... ಎಲ್ಲವನ್ನೂ ಸಮರ್ಥವಾಗಿ ನಿರ್ವಹಿಸುವ ಇವರ ನೃತ್ಯ, ಅಭಿನಯ, ಹಾವ-ಭಾವ, ಬಾಗು-ಬಳುಕು ಎಲ್ಲವೂ ಸ್ತ್ರೀವೇಷಕ್ಕೆ ಸೂಕ್ತವಾಗಿ ರಂಗಸ್ಥಳದಲ್ಲಿ ಮೇಲ್ತರಗತಿಯಲ್ಲಿ ವಿಜೃಂಭಿಸುತ್ತದೆ.

ಅರಳುಹುರಿದಂತೆ ಮಾತನಾಡುವ ವಚೋ ಚಮತ್ಕಾರ ಇವರಲ್ಲಿ ಗುರುತಿಸಬಹುದಾಗಿದೆ.

ಸುಗರ್ಭೆ, ಸುಭದ್ರೆ, ಪ್ರಭಾವತಿ, ರತ್ನಾವತಿ, ಭ್ರಮ ಕುಂತಳೆ, ಪದ್ಮಗಂಧಿನಿ, ಮೀನಾಕ್ಷಿ, ಸತ್ಯಭಾಮೆ, ತ್ರಿಲೋಕ ಸುಂದರಿ ಮೊದಲಾದ ಪಾತ್ರ ನಿರ್ವಹಣೆಯಲ್ಲಿ ಇವರ ಕಲಾಪ್ರೌಢಿಮೆ ಅತ್ಯುಚ್ಚವಾಗಿ ಪ್ರೇಕ್ಷಕರ ಮನ ಮುದಗೊಳಿಸಿದೆ.

ಪ್ರತಿಭಾನ್ವಿತ ಕಲಾವಿದ ಸುರೇಶ ಕುಲಾಲ್ ಅವರು ಜ್ಯೋತಿ ಎಂಬವರನ್ನು ಬಾಳ ಸಂಗಾತಿಯನ್ನಾಗಿಸಿಕೊಂಡಿದ್ದಾರೆ.

ಸ್ಥಳೀಯ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



## ಸುರೇಶ ಗಾಣಿಗ, ಪಡುಕೋಣೆ

*ಅಂಚೆ : ನಾಡ,*
*ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ*
*ದೂರವಾಣಿ : 08254–279546*

ನಡುಬಡಗಿನ ಪರಂಪರೆಯ ಕಟ್ಟಾಳುತನದಲ್ಲಿ ಯಕ್ಷಗಾನ ಪಾತ್ರ ಪ್ರತಿಮೆಗಳನ್ನು ರಂಗಸ್ಥಳದಲ್ಲಿ ಜೀವಂತವಾಗಿ ಪ್ರತಿಷ್ಠಾಪಿಸುವ ಹಿರಿಯ ಕಲಾವಿದ ಸುರೇಶ ಗಾಣಿಗ, ಪಡುಕೋಣೆ.

ಕುಂದಾಪುರ ತಾಲೂಕಿನ ಪಡುಕೋಣೆ ಇವರ ಹುಟ್ಟೂರು. ತಂದೆ ನಾಗಯ್ಯ ಗಾಣಿಗ–ತಾಯಿ ಕೃಷ್ಣಿ ಗಾಣಿಗ. 6–1–1937ರಲ್ಲಿ ಸುರೇಶ ಗಾಣಿಗರ ಜನನ. ನಾಲ್ಕಕ್ಕೇ ಓದು ಸಾಕೆನಿಸಿಕೊಂಡು ಹದಿನೈದರ ಹರೆಯದಲ್ಲೇ ಬಣ್ಣದ ಬದುಕಿಗೆ ಮುಖಮಾಡಿದ ಸುರೇಶ ಗಾಣಿಗರು ದಶಾವತಾರಿ ಗುರು ವೀರಭದ್ರನಾಯಕರ ಶಿಷ್ಯನಾಗಿ ಅವರ ಪ್ರೇರಣೆ–ಪ್ರೋತ್ಸಾಹದೊಂದಿಗೆ ವೃತ್ತಿರಂಗಕ್ಕೆ ಹೆಜ್ಜೆ ಹಾಕಿದವರು.

ಮಾರಣಕಟ್ಟೆ, ಪೆರ್ಡೂರು, ಗೋಳಿಗರಡಿ, ರಂಜದ ಕಟ್ಟೆ, ಬಗ್ವಾಡಿ, ಗುಂಡಬಾಳ, ಅಮೃತೇಶ್ವರಿ, ಹಾಲಾಡಿ... ಮೊದಲಾದ ಮೇಳಗಳಲ್ಲಿ ಸುದೀರ್ಘ 48 ವರ್ಷಗಳ ಕಲಾವ್ಯವಸಾಯ ನಡೆಸಿದ ಹಿರಿಮೆಯನ್ನು ಹೊಂದಿದ ಸುರೇಶ ಗಾಣಿಗರು ಶುದ್ಧ ಸಾಂಪ್ರದಾಯಿಕ ಯಕ್ಷಗಾನ ಶೈಲೀಕೃತ ರಂಗಧರ್ಮದಲ್ಲಿ ಕಲಾಕರ್ಮವನ್ನು ಕೈಗೊಂಡವರು.

ಪ್ರಬುದ್ಧ ಕಲಾವಿದ ಸುರೇಶ ಗಾಣಿಗರು ವೃತ್ತಿರಂಗದಲ್ಲಿನ ಆರಂಭದಲ್ಲಿ ಪುರುಷವೇಷಧಾರಿಯಾಗಿ ವಿಜೃಂಭಿಸಿ, ತದನಂತರ ಪೋಷಕ ವೇಷದಲ್ಲಿ ಪೌರಾಣಿಕ ಪಾತ್ರಗಳನ್ನು ಸುಪುಷ್ಟವಾಗಿ ಪೋಷಿಸಿ ಗೆಲುವು ಕಂಡವರು. ಸೌಮ್ಯ ಸ್ವಭಾವದ ರಾಜವೇಷಗಳಲ್ಲಿ ವಿಶೇಷವಾಗಿ ಮೆರೆಯುವ ಗಾಣಿಗರು ಉತ್ತಮ ರಂಗನಡೆ, ವಾಗ್ಪಟುತ್ವವನ್ನು ಸಿದ್ಧಿಸಿಕೊಂಡು ಜನಪ್ರಿಯರಾದವರು.

ಧರ್ಮರಾಯ, ದೇವೇಂದ್ರ, ಕಮಲಭೂಪ, ಹಂಸಧ್ವಜ, ಶತ್ರುಘ್ನ... ಮೊದಲಾದ ಇವರ ಪಾತ್ರಗಳು ಸನಾತನ ಯಕ್ಷ ಶ್ರೀಮಂತಿಕೆಯನ್ನು ರಂಗನೆಲದಲ್ಲಿ ಸಾಕಾರಗೊಳಿಸಿವೆ.

ಪುರುಷವೇಷಧಾರಿಯಾದ ಗಾಣಿಗರು ಪೌರಾಣಿಕ ಪ್ರಸಂಗಗಳಲ್ಲಿ ಸ್ತ್ರೀವೇಷಧಾರಿಯಾಗಿಯೂ ಪಾತ್ರವನ್ನು ಪೊರೆದವರು. ಗಾಣಿಗರಿಗೆ ಭಾಗವತಿಕೆ ಹಾಗೂ ಮದ್ದಳೆವಾದನದ ಪರಿಣತಿಯೂ ಇದೆ.

ಸುರೇಶ ಗಾಣಿಗರ ಸಹಧರ್ಮಿಣಿ ಸೀತಾ ಗಾಣಿಗ. ಇಂದಿರಾ, ಅನುಸೂಯಾ, ರೇಣುಕಾ, ಸುಜಾತ, ದಯಾನಂದ, ನಾಗರಾಜ ಇವರ ಆರು ಮಂದಿ ಮಕ್ಕಳು.

ಸ್ಥಳೀಯ ಸಂಘ–ಸಂಸ್ಥೆಗಳಿಂದ ಗಾಣಿಗರು ಸಂಮಾನಿತರು.



# ಸುರೇಶ ಮ್ಯೊಲಿ

*ಅಂಚೆ : ಲೋಕನಾಥ ಪುರ*
*ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ*
*ದೂರವಾಣಿ : 9972720879*

ಬಡಗಿನ ಚಂಡೆ-ಮದ್ದಳೆ ವಾದನದ ನಾದ-ನಿನಾದದ ತರಂಗ ತಾಡನದಲ್ಲಿ ರಂಗಕ್ಕೆ ರಂಗೇರಿಸುವ ಯುವ ಹಿಮ್ಮೇಳ ಕಲಾವಿದ ಸುರೇಶ ಮ್ಯೊಲಿ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಮುತ್ತವಳ್ಳಿ ಎಂಬ ಊರಿನಲ್ಲಿ 5-5-1975ರಲ್ಲಿ ಜನಿಸಿದ ಸುರೇಶ್, ಸಂಜೀವ ಮ್ಯೊಲಿ-ಗಿರಿಜಾ ದಂಪತಿಯ ಸುಪುತ್ರ. 8ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಇವರು 19ನೇ ವಯಸ್ಸಿನಲ್ಲೇ ಕಲಾಬದುಕು ಕಂಡವರು.

ಸುಬ್ರಹ್ಮಣ್ಯ ಮುತ್ತುವಳ್ಳಿ ಎಂಬವರ ಸಹಕಾರವನ್ನು ಪಡೆದು ವೃತ್ತಿರಂಗವನ್ನು ಪ್ರವೇಶಿಸಿದ ಸುರೇಶ ಮ್ಯೊಲಿ ಅವರು ಗೋರ್ಪಾಡಿ ವಿಠಲ ಪಾಟೀಲ್, ವಿದ್ವಾನ್ ಗಣಪತಿ ಭಟ್ಟ, ಹೆರಂಜಾಲು ಗೋಪಾಲ ಗಾಣಿಗರ ಗುರುತನದಲ್ಲಿ ಸಮರ್ಪಕ ಯಕ್ಷಗಾನ ವಿದ್ಯಾ ಸಂಪನ್ನರಾದವರು.

ಮೇಗರವಳ್ಳಿ, ಶಿವರಾಜಪುರ, ಬಗ್ವಾಡಿ, ಗೋಳಿಗರಡಿ, ಮಡಾಮಕ್ಕಿ, ಮಂದಾರ್ತಿ, ಮಾರಣಕಟ್ಟೆ, ಕಮಲಶಿಲೆ... ಮೇಳಗಳಲ್ಲಿ 16 ವರ್ಷಗಳ ಕಲಾವ್ಯವಸಾಯ ಪೂರೈಸಿದ ಇವರು ಪ್ರಸ್ತುತ ಕಮಲಶಿಲೆ ಮೇಳದ ಮದ್ದಳೆ-ಚಂಡೆಗಾರರಾಗಿ ದುಡಿಯುತ್ತಿದ್ದಾರೆ.

ರಸಭಾವ ಪೋಷಕ ವಾದನ ಕಲಾಪರಿಣತರಾದ ಇವರು ಸುಪುಷ್ಟ ಪ್ರಸಂಗ ಮಾಹಿತಿಯನ್ನು ಹೊಂದಿದವರು. ಚಂಡೆ-ಮದ್ದಳೆ ವಾದನ ಪರಿಣತಿಯೊಂದಿಗೆ ಯಕ್ಷಗಾನ ಸಂಗೀತ ವಿದ್ಯೆಯನ್ನೂ ಇವರು ಬಲ್ಲರು.

ಸಮರ್ಥ ಹಿಮ್ಮೇಳ ಪಟುವೆನಿಸಿ ಅನೇಕ ಶಿಷ್ಯರನ್ನು ರೂಪಿಸಿದ ಹೆಗ್ಗಳಿಕೆಯೂ ಮ್ಯೊಲಿಯವರಿಗಿದೆ.

ಪ್ರತಿಭಾನ್ವಿತ ಸುರೇಶ ಮ್ಯೊಲಿಯವರು ಚಂದ್ರಾವತಿಯೆಂಬುವರ ಕೈಹಿಡಿದು ಗೃಹಸ್ಥರಾಗಿದ್ದಾರೆ.

ಅನೇಕ ಸಂಘ-ಸಂಸ್ಥೆಗಳು ಇವರನ್ನು ಗುರುತಿಸಿ ಗೌರವಿಸಿವೆ.



## ಸುರೇಶ ರಾವ್, ಬಾರ್ಕೂರು

*ಮಣಿಗಾರ ಕೇರಿ, ಬಾರ್ಕೂರು-ಕಲ್ಲುಚಪ್ಪರ,*
*ಹೊಸಾಳ ಗ್ರಾಮ, ಉಡುಪಿ ಜಿಲ್ಲೆ*
*ದೂರವಾಣಿ : 9902008388*

ಶ್ರೀಮಂತ ಸ್ವರಭಾರ ಸಂಪನ್ನ ಬಡಗಿನ ಉತ್ಸಾಹಿ ಭಾಗವತ ಸುರೇಶ ರಾವ್ ಬಾರ್ಕೂರು.

ಉಡುಪಿ ಜಿಲ್ಲೆಯ ಬಾರ್ಕೂರು ಸುರೇಶ್ ರಾವ್ ಅವರ ಹುಟ್ಟೂರು. ಬಿ. ಜಗನ್ನಾಥ ರಾವ್-ಕಮಲಾ ದಂಪತಿಯ ಸುಪುತ್ರರಾದ ಇವರು ಜನಿಸಿದ್ದು 13-9-1958ರಲ್ಲಿ.

ಚಿಕ್ಕಂದಿನಿಂದಲೇ ಯಕ್ಷಗಾಯನದ ಬಾನಾಡಿಯಾಗಿ ವಿಹರಿಸಬೇಕೆಂಬ ಕನಸು ಕಟ್ಟಿಕೊಂಡಿದ್ದ ಇವರು ಸೋದರಮಾವನವರ ಪೂರ್ಣ ಸಹಕಾರದೊಂದಿಗೆ ರಂಗಜೀವನಕ್ಕೆ ಶ್ರೀಕಾರ ಹಾಡಿದರು.

6ನೇ ತರಗತಿಯವರೆಗೆ ಅಕ್ಷರಾಭ್ಯಾಸ ಮಾಡಿ, 22ನೇ ವಯಸ್ಸಿನಲ್ಲಿ ವೃತ್ತಿಬದುಕು ಕಂಡ ಇವರು ನೀಲಾವರ ರಾಮಕೃಷ್ಣಯ್ಯನವರ ಗುರುತನದಲ್ಲಿ ಸಮರ್ಪಕ ಯಕ್ಷಗಾನ ಶಿಕ್ಷಣವನ್ನು ಪಡೆದವರು.

ಕಳವಾಡಿ, ಕಮಲಶಿಲೆ, ಶಿವರಾಜಪುರ, ಬಗ್ವಾಡಿ, ಹಾಲಾಡಿ, ಮಡಾಮಕ್ಕಿ, ಗೋಳಿಗರಡಿ, ಸಿಗಂಧೂರು... ಮೊದಲಾದ ಮೇಳಗಳಲ್ಲಿ ಕಲಾ ತಿರುಗಾಟದ 'ಬೆಳ್ಳಿಹಬ್ಬ' ವನ್ನು ಕಂಡ ಭಾಗವತರಿವರು.

ಉತ್ತಮ ಪೌರಾಣಿಕ ಜ್ಞಾನವೂ ಇವರಿಗಿದ್ದು ಹಳೇ ಪ್ರಸಂಗಗಳನ್ನು ಯಶಸ್ವಿಯಾಗಿ ಆಡಿಸಬಲ್ಲರು. ನವೀನ ಪ್ರಸಂಗಗಳ ಗಾನವಿಧಾನವಂತೂ ಸುರೇಶ್ ರಾವ್ ಅವರಿಗೆ ಸುಲಿದ ಬಾಳೆಯ ಹಣ್ಣು.

ಭಾಗವತರಾದ ಸುರೇಶ್ ರಾವ್ ವೇಷಧಾರಿಯೂ ಹೌದು. ಚಂಡೆ-ಮದ್ದಳೆ ವಾದನದ ಪರಿಣತಿಯೂ ಇವರಿಗಿದೆ.

ಬಿಡುವಿನ ವೇಳೆಯಲ್ಲಿ ಶಾಲಾ ಮಕ್ಕಳಿಗೆ ಯಕ್ಷ ಶಿಕ್ಷಣವನ್ನೂ ನೀಡುವ ಸುರೇಶ್‌ರಾವ್ ಸಾಂಪ್ರದಾಯಿಕ ಯಕ್ಷ ಪ್ರಬೇಧವಾದ ಹೂವಿನಕೋಲು ತಿರುಗಾಟವನ್ನೂ ಮಾಡುತ್ತಾರೆ.

ಸುರೇಶ್‌ರಾವ್ ಅವರ ಬಾಳಸಂಗಾತಿ ಯಶೋದಾ. ಮೇಘನಾ ಹಾಗೂ ಗಗನ ಇವರ ಯುಗಳ ಹೆಣ್ಣು ಮಕ್ಕಳು.

ಪ್ರತಿಭಾವಂತ ಭಾಗವತ ಸುರೇಶ್ ರಾವ್ ಅನೇಕ ಸಂಘ-ಸಂಸ್ಥೆಗಳಿಂದ ಆದರದ ಸಂಮಾನವನ್ನೂ ಪಡೆದಿದ್ದಾರೆ.



# ಸೂರ್ಯ ದೇವಾಡಿಗ, ನೀಲಾವರ

*ಹೆಬ್ಬಾಗಿಲು ಮನೆ*
*ಅಂಚೆ : ನೀಲಾವರ, ನೀಲಾವರ ಗ್ರಾಮ,*
*ಉಡುಪಿ ತಾಲೂಕು, ಉಡುಪಿ ಜಿಲ್ಲೆ*

ರಂಗ ಪ್ರಸಂಗಗಳ ಕುರಿತ ಪರಿಣತ ಮಾಹಿತಿಯೊಂದಿಗೆ ಬಡಗಿನ ಚಂಡೆವಾದನದಲ್ಲಿ ಪರಿಣಾಮಕಾರಿ ಕಲಾಪರಿಸರ ನಿರ್ಮಿಸುವ ಯುವ ಚಂಡೆವಾದಕ ಸೂರ್ಯದೇವಾಡಿಗ, ನೀಲಾವರ.

ಉಡುಪಿ ತಾಲೂಕಿನ ನೀಲಾವರ ಇವರ ಹುಟ್ಟೂರು. ಫಕೀರ ದೇವಾಡಿಗ-ಸುಬ್ಬಿ ದಂಪತಿಯ ಸುಪುತ್ರರಾದ ಇವರಿಗೆ ಈಗ 43 ವರ್ಷ ಪ್ರಾಯ.

ಸೂರ್ಯದೇವಾಡಿಗರು 7ನೇ ತರಗತಿಗೆ ಶರಣು ಹೊಡೆದು ತನ್ನ 22ನೇ ವಯಸ್ಸಿನಲ್ಲಿ ಕಲಾಲೋಕಕ್ಕೆ ಪದವಿರಿಸಿದರು.

ನೀಲಾವರದ ಯಕ್ಷಗಾನ ಕಲಾಸಂಘದ ಕಲಾವಿದರಾಗಿ ಹವ್ಯಾಸಿ ರಂಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ಇವರನ್ನು ಮದ್ದಳೆಗಾರ ಎ.ಪಿ. ಫಾಟಕರು ಉಡುಪಿ ಯಕ್ಷಗಾನ ಕೇಂದ್ರಕ್ಕೆ ಸೇರ್ಪಡೆಗೊಳಿಸಿ, ಅಲ್ಲಿ ಚಂಡೆ ವಾದನದ ಗುರುವಾಗಿ ಸುಯೋಗ್ಯ ಕಲಾ ಶಿಕ್ಷಣ ನೀಡಿದರು.

ಮಡಾಮಕ್ಕಿ-1, ಅಮೃತೇಶ್ವರಿ-2, ಮೇಗರವಳ್ಳಿ-2, ಹಾಲಾಡಿ-5, ಮಂದಾರ್ತಿ-12... ಹೀಗೆ 22 ವರ್ಷಗಳ ಕಲಾವ್ಯವಸಾಯ ಪೂರ್ಣಗೊಳಿಸಿದ ಸೂರ್ಯದೇವಾಡಿಗರು ಪ್ರಸ್ತುತ ಮಂದಾರ್ತಿ ಮೇಳದ ಪ್ರಧಾನ ಚಂಡೆಗಾರರಾಗಿ ಕಲಾಕೃಷಿಯನ್ನು ಮುಂದುವರಿಸುತ್ತಿದ್ದಾರೆ.

ರಂಗಸ್ಥಳದ ವೇಷಧಾರಿಗಳ ಹೆಜ್ಜೆ-ಗೆಜ್ಜೆ ಹಾಗೂ ಭಾಗವತರ-ಮದ್ದಳೆಗಾರರ ತಾಳ-ವಾದ್ಯಗಳ ಸಾಂಗತ್ಯಕ್ಕೆ ಸೂಕ್ತ ಚಂಡೆಗಾರಿಕೆಯ ಸಾರಥ್ಯ ಒದಗಿಸುವ ಸೂರ್ಯ ದೇವಾಡಿಗರ ಚಂಡೆವಾದನ ಮಾಧುರ್ಯಪೂರ್ಣ ಕೇಳ್ಮೆಗೆ ಹೆಸರಾಗಿ ಜನಪ್ರಿಯತೆ ಗಳಿಸಿದೆ.

ಸೂರ್ಯ ದೇವಾಡಿಗರ ಧರ್ಮಪತ್ನಿ ಶಾಲಿನಿ. ಸೃಜನ್ ಹಾಗೂ ಸಂಜನಾ ಇವರ ಉಭಯ ಮಕ್ಕಳು.

ಪ್ರತಿಭಾನ್ವಿತ ಹಿಮ್ಮೇಳ ಕಲಾವಿದರಾದ ಸೂರ್ಯ ದೇವಾಡಿಗರು ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ ಸಂಮಾನಿತರಾಗಿದ್ದಾರೆ.

# ತೆಂಕುತಿಟ್ಟಿನ ಕಲಾವಿದರು



## ಅಣ್ಣಿ ಗೌಡ ಕೆ.

*ಕಾಡ ಮನೆ, ಬೂಡ್ದ ಮಕ್ಕಿ, ಶಿಬಿಜೆ ಗ್ರಾಮ*
*ಬೆಳ್ತಂಗಡಿ ತಾಲೂಕು*
*ಮೊ: 9483920747.*

ಸ್ವಂತಾಸಕ್ತಿಯಿಂದ ಯಕ್ಷಗಾನ ಕಲೆಗೆ ಆಕರ್ಷಿತರಾಗಿ, ಅರಿತು ಕಲಾಮಾತೆಯ ಸೇವೆಯನ್ನು ಮಾಡುತ್ತಾ ಬಂದಿರುವ ಶ್ರೀಯುತ ಕೆ. ಅಣ್ಣಿ ಗೌಡರು ಪ್ರಸಕ್ತ ಸಾಲಿನಲ್ಲಿ ಸಸಿಹಿತ್ಲು ಭಗವತೀ ಮೇಳದ ಮದ್ದಳೆಗಾರರಾಗಿ ಸೇವೆಗೈಯುತ್ತಿದ್ದಾರೆ.

ಬೂಡ್ದ ಮಕ್ಕಿಯಲ್ಲಿ 1956ರಲ್ಲಿ ಶ್ರೀ ಕೆ. ದೇರಣ್ಣ ಗೌಡ ಮತ್ತು ಶ್ರೀಮತಿ ಕೆ. ಸೀತಮ್ಮ ದಂಪತಿಗಳಿಗೆ ಮಗನಾಗಿ ಜನಿಸಿದರು. ಮುಂದೆ ಶಾಲೆಗೆ ಹೋಗಿ 3ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದರು.


18ನೇ ವರ್ಷದಲ್ಲಿ ಸ್ವಪ್ರೇರಣೆಯೊಂದಿಗೆ ಗೋಪಾಲಕೃಷ್ಣ ಕುರೂಪ್ ಮತ್ತು ಜನಾರ್ದನ ಕುರೂಪ್‌ರಿಂದ ಚೆಂಡೆ ಮದ್ದಳೆಯ ನುಡಿತ-ಬಡಿತಗಳ ಬಗ್ಗೆ ಅಭ್ಯಾಸ ಮಾಡಿ ಮೇಳಕ್ಕೆ ಸೇರಿದವರು ಹಿರಿಯ ಕಲಾವಿದರೊಂದಿಗೆ ಅನುಭವವನ್ನು ಸಂಪಾದಿಸಿ ಬೆಳೆದರು.

ಸುಬ್ರಹ್ಮಣ್ಯ ಹಾಗೂ ಸುಂಕದಕಟ್ಟೆ ಮೇಳಗಳಲ್ಲಿ ತಲಾ 6 ವರ್ಷ, ಕರ್ನಾಟಕ ಮೇಳದಲ್ಲಿ 4 ವರ್ಷ, ನಂದಾವರ ಮೇಳದಲ್ಲಿ 2 ವರ್ಷ, ಹಾಗೂ ಪುತ್ತೂರು, ಅಳದಂಗಡಿ, ತಲಕಳ, ಧರ್ಮಸ್ಥಳ, ಕಟೀಲು ಮೇಳಗಳಲ್ಲಿ ತಲಾ ಒಂದೊಂದು ವರ್ಷದ ತಿರುಗಾಟ ಮಾಡಿದ ಹಿರಿಮೆ ಇವರಿಗಿದೆ.

ಪ್ರಸ್ತುತ ವರ್ಷವು ಸೇರಿದಂತೆ ಒಟ್ಟು 3 ವರ್ಷಗಳಿಂದ ಸಸಿಹಿತ್ಲು ಭಗವತಿ ಮೇಳದಲ್ಲಿ ಸೇವೆಗೈಯುತ್ತಿರುವ ಹೊಂದಾಣಿಕೆಯ ಮನೋಧರ್ಮವುಳ್ಳ ಕಲಾವಿದರಾಗಿದ್ದಾರೆ.

ಶ್ರೀಮತಿ ಕೆ. ಲೀಲಾ ಎಂಬವರನ್ನು ವರಿಸಿ ಕೆ. ಗಣೇಶ್, ಕೆ. ದಿನೇಶ್, ಕೆ. ರಮೇಶ್ ಎಂಬ ಮೂವರು ಗಂಡು ಮಕ್ಕಳನ್ನು ಹಾಗೂ ಕೆ. ಮಾಲತಿ ಹೆಣ್ಣು ಮಗಳನ್ನು ಪಡೆದಿರುವರು.

ಕಲಾ ಜೀವನವನ್ನೇ ಬದುಕಿನ ಉಸಿರಾಗಿ ಸ್ವೀಕರಿಸಿರುವ ಇವರು ಅನೇಕ ಮಂದಿಗೆ ಚೆಂಡೆ, ಮದ್ದಳೆಗಳ ಪಾಠವನ್ನು ಹೇಳಿಕೊಟ್ಟಿದ್ದಾರೆ. ಶ್ರೀಯುತರ ಕಲಾಸಾಧನೆಗೆ ಪ್ರತಿರೂಪವಾಗಿ ಬೆಳ್ತಂಗಡಿ, ಮೈಸೂರು ಮೊದಲಾದ ಕಡೆಗಳಲ್ಲಿ ಸಂಮಾನದ ಪುರಸ್ಕಾರಗಳು ದೊರೆತಿವೆ.



# ಅಶೋಕ ಭಟ್ ಉಜಿರೆ

*"ಚಿನ್ಮಯ" ಅಜಿತನಗರ ಅಂಚೆ*
*ಬೆಳ್ತಂಗಡಿ ತಾಲೂಕು – 574240*
*ಮೊ: 9449510666*

ಯಕ್ಷಗಾನ ಕಲೆಯಲ್ಲಿ ತನ್ನದೇ ಆದ ಶೈಲಿಯ ಚೌಕಟ್ಟನ್ನು ರೂಪಿಸಿಕೊಂಡು, ತನ್ನದೇ ಧೋರಣೆಯಲ್ಲಿ ಬೆಳೆದು ಬಂದಿರಯವ ಉಜಿರೆ ಅಶೋಕ ಭಟ್‌ರವರು ಪ್ರಸ್ತುತ ಹೊಸನಗರ ಮೇಳದ ಪ್ರಬಂಧಕರಾಗಿ ಕಾರ್ಯ ನಿರ್ವಹಿಸುತ್ತಾ ಇದ್ದಾರೆ.

ನೆರೆಯ ಕಾಸರಗೋಡು ಜಿಲ್ಲೆಯ ಎಣ್ಮಕಜೆ ಗ್ರಾಮದಲ್ಲಿ ದಿನಾಂಕ 27–06–1970ರಲ್ಲಿ ಈಶ್ವರ ಭಟ್ ಹಾಗೂ ಕಲ್ಯಾಣಿ ಅಮ್ಮನವರ ಸುಪುತ್ರನಾಗಿ ಹುಟ್ಟಿರುವ ಅಶೋಕ್ ಭಟ್ಟರು ಬಿ.ಕಾಂ ಪದವಿಯನ್ನು ಪಡೆದುಕೊಂಡಿರುವರು.

ವಿದ್ಯಾಭ್ಯಾಸವನ್ನು ಕಲಿಯುತ್ತಿರುವ ಸಂದರ್ಭದಲ್ಲೇ ಯಕ್ಷಗಾನದ ನಂಟನ್ನು ಬೆಳೆಸಿಕೊಂಡರು. ಜೊತೆಗೆ ತಮ್ಮ ಪ್ರೀತಿಯ ಕಲೆಯಾಗಿರುವ ಭಾಷಣ ಕಲೆಯಲ್ಲೂ ಆಸಕ್ತರಾದರು. ಹೀಗಾಗಿ ಇವರ ಪ್ರತಿಭೆಗೆ, ಪ್ರೌಢಿಮೆಗೆ ಮಾತೇ ಜೀವಾಳವಾಯಿತು. ಕೀರ್ತಿಶೇಷ ಡಾ॥ಶೇಣಿ ಗೋಪಾಲಕೃಷ್ಣ ಭಟ್ಟರ ಆದರ್ಶವನ್ನು ಅನುಸರಿಸಿರುವ ಇವರು ಪ್ರಬುದ್ಧ ಅರ್ಥಧಾರಿಯಾಗಿ ಮನ್ನಣೆಗೆ ಒಳಗಾಗಿದ್ದಾರೆ.

ಧರ್ಮಸ್ಥಳ ನರೇಂದ್ರ ಕುಮಾರ್‌ರವರಲ್ಲಿ ಯಕ್ಷಗಾನದ ಬಗ್ಗೆ ಅಧ್ಯಯನ ಮಾಡಿರುವ ಅಶೋಕ ಭಟ್ಟರು 12ನೇ ವಯಸ್ಸಿನಿಂದಲೇ ರಂಗ ಪ್ರವೇಶ ಮಾಡಿದ್ದಾರೆ. ಮುಂದೆ ಹವ್ಯಾಸಿ ಕಲಾವಿದನಾಗಿ ಬೆಳೆದ ಇವರು ಮೇಳದ ತಿರುಗಾಟವನ್ನು ನಡೆಸಿದರು.

ಸದಾಶಿವ ಮಹಾಗಣಪತಿ ಯಕ್ಷಗಾನ ಮಂಡಳಿ, ಸುರತ್ಕಲ್ – 5 ವರ್ಷ, ಸುಬ್ರಹ್ಮಣ್ಯ ಮೇಳ–1ವರ್ಷ ತಳಕಳ ಮೇಳ–1ವರ್ಷ, ಸಸಿಹಿತ್ಲು ಮೇಳ–1 ವರ್ಷ ಹಾಗೂ ಅರುವ ಮೇಳ–2 ವರ್ಷ ಹೀಗೆ ತಿರುಗಾಟವನ್ನು ನಡೆಸಿರುವ ಇವರು ಪ್ರಸಕ್ತ ಹೊಸನಗರ ರಾಮಚಂದ್ರಾಪುರ ಮೇಳದಲ್ಲಿ 6ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಮೇಳದ ಮೇನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಯಕ್ಷಗಾನದ ಪಾತ್ರಗಳಲ್ಲಿ ಹೊಣೆಗಾರಿಕೆಯ ವೇಷಗಳೆಂದೆನಿಸಿಕೊಂಡ ವಿಷ್ಣು, ಕೃಷ್ಣ, ರಾಮ, ಹನೂಮಂತ, ಈಶ್ವರ, ವಿಶ್ವಾಮಿತ್ರ, ಅರ್ಜುನ, ಕರ್ಣ, ದ್ರೋಣ, ಕೌರವ, ದಕ್ಷ, ಗೌತಮ, ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿರುವರು.

ಉಜಿರೆ ಹೈಸ್ಕೂಲ್ ಹಾಗೂ ಕಾಲೇಜ್‌ನಲ್ಲಿ ಮಕ್ಕಳ ಯಕ್ಷಗಾನ ಪ್ರದರ್ಶನಕ್ಕಾಗಿ ನಿರ್ದೇಶನವನ್ನು ಮಾಡಿರುವ ಇವರು ಬೆಳಾಲು, ಧರ್ಮಸ್ಥಳ ಮೊದಲಾದೆಡೆಯಲ್ಲಿ ಯಕ್ಷಗಾನದ ಅನುಭವನ್ನು ಕಿರಿಯ ಕಲಾವಿದರಿಗೆ ನೀಡಿ ಹಲವು ಮಂದಿ ಶಿಷ್ಯರನ್ನು ಹೊಂದಿದ್ದಾರೆ.

ಕುರಿಯ ವಿಠಲ ಶಾಸ್ತ್ರಿ ಪ್ರತಿಷ್ಠಾನದಲ್ಲಿ 11 ವರ್ಷ ಸಂಚಾಲಕರಾಗಿ, ಕನ್ನಡ ಸಾಹಿತ್ಯ ಪರಿಷತ್, ಬೆಳ್ತಂಗಡಿ ಇದರ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರಿನ ಅಜೀವ ಸದಸ್ಯರಾಗಿ ಕಲಾಸೇವೆ ಹಾಗೂ ಸಾಹಿತ್ಯ ಸೇವೆ ಮಾಡಿದ ಹಿರಿಮೆ ಇವರದ್ದಾಗಿದೆ.

ಭುಜಬಲಿಬಳಗದ ಮುಖೇನ ಆಕಾಶವಾಣಿ ಕೇಂದ್ರದ ತಾಳಮದ್ದಳೆಯ ಬಿ'ಹೈಗ್ರೇಡ್ ಕಲಾವಿದರಾಗಿರುವ ಇವರ ಕಲಾಸಾಧನೆಗೆ ಪ್ರತಿಫಲವಾಗಿ ರೋಟರಿ ಕ್ಲಬ್ ಬೆಳ್ತಂಗಡಿ, ಮುಂಡಾಜೆ ಯುವಕ ಮಂಡಳಿ, ಮೊದಲಾದ ಸಂಸ್ಥೆಗಳು ಸಂಮಾನಿಸಿ ಪುರಸ್ಕರಿಸಿವೆ. ಯಕ್ಷಪ್ರಭಾ ಪತ್ರಿಕೆಯ ದಶಮಾನ ಸಂಮಾನದ ಪುರಸ್ಕಾರ ಕೂಡಾ ಇವರಿಗೆ ಲಭಿಸಿದೆ.



## ಅಶೋಕ್ ಕುಮಾರ್ ಕೊಲೆಕಾಡಿ

*"ಜ್ಞಾನ ಜ್ಯೋತಿ" ನಿಲಯ*
*ಅತಿಕಾರಿ ಬೆಟ್ಟು (ಕೊಲೆಕಾಡಿ) ಗ್ರಾಮ ಮತ್ತು ಅಂಚೆ*
*ವಯಾ ಮೂಲ್ಕಿ - 574171*
*ಮೊ: 9663430071*

ಶ್ರೀ ಅಶೋಕ ಕುಮಾರ್ ಕೊಲೆಕಾಡಿ ಇವರು ಶ್ರೀ ಬಪ್ಪನಾಡು ಮೇಳದಲ್ಲಿ ಯಕ್ಷಗಾನ ತಿರುಗಾಟವನ್ನು ನಡೆಸುತ್ತಿದ್ದು ಸ್ತ್ರೀವೇಷ, ಪುಂಡುವೇಷ, ಹಾಗೂ ರಾಜವೇಷಗಳಲ್ಲಿ ಪರಿಣತಿಯನ್ನು ಹೊಂದಿದವರಾಗಿದ್ದಾರೆ.


ದಿನಾಂಕ 21-11-1977 ರಂದು, ಉಡುಪಿ ಎಂಬಲ್ಲಿ ಶ್ರೀ ಶೀನಪ್ಪ ಸಾಲಿಯಾನ್ ಹಾಗೂ ಶ್ರೀಮತಿ ಸುಮತಿ ಎಂಬ ದಂಪತಿಯ ಮಗನಾಗಿ ಅಶೋಕರು ಜನಿಸಿದರು. ಬಿ.ಕಾಂ ಪದವಿದರರಾಗಿರುವ ಇವರಿಗೆ ಯಕ್ಷಗಾನ ಕಲಿಯುವ ಆಸಕ್ತಿ ಸಣ್ಣವಯಸ್ಸಿನಿಂದಲೇ ಹುಟ್ಟಿತು. 11ನೇ ಯ ವರ್ಷದಲ್ಲಿ ಶಾಲೆಯ ಅಧ್ಯಾಪಕರಾದಂತಹ ವಸಂತ್‌ಕುಮಾರ್ ಇವರ ಪ್ರೇರಣೆಯಿಂದಾಗಿ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿದರು. ಹವ್ಯಾಸಿ ಕಲಾವಿದರಾದ ಶ್ರೀ ನಾರಾಯಾಣ ಅಂಚನ್ ಶಿಮಂತೂರು ಇವರಲ್ಲಿ ಮೊದಲಾಗಿ ನಾಟ್ಯಾಭ್ಯಾಸವನ್ನು ಕಲಿತ ಅಶೋಕರು ನಂತರ ಶ್ರೀ ಕೃಷ್ಣಪ್ಪ ಕಟೀಲು ಹಾಗೂ ಶ್ರೀ ಚಿದಾನಂದ ಕಟೀಲು ಇವರುಗಳಿಂದ ಹೆಚ್ಚಿನ ಅನುಭವವನ್ನು ಸಂಪಾದಿಸಿದರು.

ತಲಕಳ ಮೇಳದಲ್ಲಿ 6 ವರ್ಷಗಳವರೆಗೆ ಯಕ್ಷಗಾನ ತಿರುಗಾಟವನ್ನು ನಡೆಸಿದ ಇವರು ನಂತರ ಮುಂಡ್ಕೂರು ಮೇಳ- 2 ವರ್ಷ, ಪುತ್ತೂರು ಮೇಳ- 1 ವರ್ಷ, ಎಡನೀರು ಮೇಳ-1 ವರ್ಷ, ಮಂಗಳಾದೇವಿ ಮೇಳ -1 ವರ್ಷ, ಕದ್ರಿ ಮೇಳ- 1 ಹೀಗೆ 12ವರ್ಷಗಳ ಕಲಾಸೇವೆ ಪೂರೈಸಿ, ಶ್ರೀ ಬಪ್ಪನಾಡು ಮೇಳವನ್ನು ಸೇರಿದವರು 5 ವರ್ಷಗಳಿಂದ ಕಲಾಸೇವೆಯನ್ನು ನಡೆಸಿಕೊಂಡು ಬಂದಿದ್ದಾರೆ. ಕಳೆದ 1 ವರ್ಷದಿಂದೀಚೆ ಬಪ್ಪನಾಡು ಮೇಳದ ನಿರ್ವಾಹಕರಾಗಿ ಮೇಳದ ಏಳಿಗೆಗೆ ಕಾರಣರಾಗಿದ್ದಾರೆ.

ಶ್ರೀದೇವಿ, ಪ್ರಮೀಳೆ, ಭ್ರಮರಕುಂತಳೆ, ಸುಭದ್ರೆ, ಶಶಿಪ್ರಭೆ, ದಾಕ್ಷಾಯಿಣಿ, ಅಂಬೆ, ದಮಯಂತಿ, ಚಂದ್ರಮತಿ, ದ್ರೌಪದಿ, ಕೃಷ್ಣ, ಸುಧನ್ವ, ಅಭಿಮನ್ಯು, ಕೌರವ, ದೂಮ್ರಾಕ್ಷ ಹೀಗೆ ಹತ್ತು ಹಲವು ವೇಷಗಳನ್ನು ಮಾಡಿದ್ದಾರೆ. ಕೊಲೆಕಾಡಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಯಕ್ಷಗಾನದ ತರಬೇತಿಯನ್ನು ನೀಡಿರುವ ಇವರುನಾಟಕದಲ್ಲಿ ಕಥಾ ನಾಯಕಿಯಾಗಿ ಪಾತ್ರ ನಿರ್ವಹಿಸುವುದರೊಂದಿಗೆ ಜನ ಮನ್ನಣೆಗೊಳಗಾಗಿದ್ದಾರೆ.

ಇವರ ಯಕ್ಷಗಾನದ ಕಲಾಸೇವೆಯನ್ನು ಗುರುತಿಸಿದ ಅನೇಕ ಸಂಸ್ಥೆಗಳು ಪುರಸ್ಕರಿಸಿವೆ. ಮುಂಡ್ಕೂರು, ಕೊಲೆಕಾಡಿ ಮೊದಲಾದೆಡೆಯಲ್ಲಿ ಗೌರವಿಸಲ್ಪಟ್ಟಿರುವ ಇವರನ್ನು ಕಿನ್ನಿಗೋಳಿಯ ವಿಜಯ ಕಲಾವಿದ ತಂಡವು ಸಂಮಾನಿಸಿದೆ. ತುಳು ಭಾಷೆಯ ಯಕ್ಷಗಾನ ಸ್ಪರ್ಧೆಯಲ್ಲಿ ಇವರ ಸ್ತ್ರೀಪಾತ್ರಕ್ಕೆ ದ್ವಿತೀಯ ಪ್ರಶಸ್ತಿ ಬಂದಿದೆ.

ಕಾಲೇಜು ವಿದ್ಯಾರ್ಥಿಯಾಗಿರುವಾಗಲೇ ಯಕ್ಷಗಾನ ಪಾತ್ರಧಾರಿಯಾಗಿ ಗೌರವಕ್ಕೆ ಒಳಗಾಗಿರುವ ಇವರ ಪ್ರತಿಭೆ ಮಹತ್ವ ಪೂರ್ಣವಾಗಿದೆ.



## ಆನಂದ ಪುರುಷ ಜೋಡುಕಲ್ಲು

*ಜೋಡುಕಲ್ಲು ಮನೆ, ಕೈಯ್ಯಾರು ಗ್ರಾಮ*
*ಕಾಸರಗೋಡು ಜಿಲ್ಲೆ.*

ಪುಂಡುವೇಷಧಾರಿಯಾಗಿ, ಆಕರ್ಷಣೆಯ ದಿಗಿಣವನ್ನು ಹಾಕುತ್ತಾ ಉತ್ತಮ ನಟನೆಯಿಂದ ಕೀರ್ತಿವಂತರಾಗಿರುವ ಆನಂದ ಪುರುಷರು ನಿವೃತ್ತ ಕಲಾವಿದರಾಗಿ ಹೇಳಿಕೆಂಯು ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ಕಾಸರಗೋಡು ಜಿಲ್ಲೆಯ ಕೈಯ್ಯಾರು ಗ್ರಾಮದ ಜೋಡುಕಲ್ಲು ಎಂಬಲ್ಲಿ ಶ್ರೀ ಅಣ್ಣಪ್ಪ ಪುರುಷ ಹಾಗೂ ಶ್ರೀಮತಿ ಮಂಜಕ್ಕ ದಂಪತಿಯ ಪುತ್ರರಾಗಿ ಆನಂದ ಪುರುಷರು ಜನಿಸಿದರು. ಅಡ್ಕಸ್ಥಳ ನಾರಾಯಣ ಶೆಟ್ಟಿಯವರಿಂದ ನಾಟ್ಯಾಭ್ಯಾಸವನ್ನು ನಡೆಸಿ ರಂಗಪ್ರವೇಶ ಮಾಡಿದರು.


ಕಟೀಲು ಮೇಳ, ಕೂಡ್ಲು ಮೇಳ, ಸುರತ್ಕಲ್ ಮೇಳ, ಕದ್ರಿಮೇಳ, ಬಪ್ಪನಾಡು ಮೇಳ, ಮುಚ್ಚೂರ್ ಮೇಳ ಹಾಗೂ ಕುಂಬ್ಳೆ ಮೇಳಗಳಲ್ಲಿ 3 ದಶಕಗಳಿಗೂ ಮಿಕ್ಕಿ ಕಲಾ ಸೇವೆಯನ್ನು ಮಾಡಿದ್ದಾರೆ. ಅನಂತರ ಹವ್ಯಾಸಿ ಕಲಾವಿದರೊಂದಿಗೆ ಬೆರೆತು ಅನೇಕ ಪ್ರದರ್ಶನಗಳಲ್ಲಿ ಪಾತ್ರ ನಿರ್ವಹಣೆ ಮಾಡಿದ್ದಾರೆ.

ಸ್ತ್ರೀವೇಷ ಹಾಗೂ ಪುಂಡುವೇಷಗಳಲ್ಲಿ ಪ್ರತಿಭೆಯನ್ನು ಮೆರೆಸಿರುವ ಇವರು ಮೋಹಿನಿ, ಭ್ರಮರಕುಂತಳೆ, ಚಿತ್ರಾಂಗದೆ, ಅಭಿಮನ್ಯು, ಬಭ್ರುವಾಹನ, ಭಾರ್ಗವ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಸ್ತ್ರೀ ಪಾತ್ರಕ್ಕೆ ಬೆಡಗಿನ ವಿಳಾಸವನ್ನು ತೋರುವ ಇವರು ಪುಂಡುವೇಷವನ್ನು ಮಾಡಿದಾಗ ಪಾತ್ರಕ್ಕೆ ಪೂರಕವಾಗಿ ತೀವ್ರಗತಿಂಯು ಅಭಿನಂಯುವನ್ನು ತೋರಬಲ್ಲವರಾಗಿದ್ದಾರೆ.

ಪ್ರಸಾಧನ ಕಲೆಯ ಅನುಭವ ಇರುವ ಇವರು ನೇಪಥ್ಯ ಕಲಾವಿದರಾಗಿಯೂ ಕಾರ್ಯನಿರ್ವಹಣೆ ಮಾಡಿದ್ದಾರೆ. ಭಾರತೀ ಕಲಾ ಆರ್ಟ್ಸ್‌ನಲ್ಲಿ ಸೇವೆ ಸಲ್ಲಿಸಿರುವುದರೊಂದಿಗೆ ಯಕ್ಷಗಾನದ ಆಭರಣ ತಯಾರಿಯ ಕುಶಲ ಕಲೆಯಲ್ಲೂ ಪ್ರತಿಭೆಯನ್ನು ಮೆರೆಸಿದ್ದಾರೆ.

ನಾಟ್ಯದ ಗುರುಗಳಾಗಿ ಹಲವಾರು ಮಂದಿಗೆ ನಾಟ್ಯ ಹಾಗೂ ರಂಗತಂತ್ರದ ಮಾರ್ಗದರ್ಶನ ಮಾಡಿಸಿರುವುದರೊಂದಿಗೆ, ಪಾತ್ರನಿರ್ವಹಣೆಯ ಬಗ್ಗೆ ತರಬೇತಿ ನೀಡಿದ್ದಾರೆ.

ಇವರ ಮಹತ್ವದ ಕಲಾ ಸಾಧನೆಯನ್ನು ಗಮನಿಸಿ ಹಲವಾರು ಸಂಘಟನೆಗಳು ಸಂಮಾನಿಸಿ ಗೌರವಿಸಿವೆ. ಹವ್ಯಾಸಿ ಬಳಗ ಕದ್ರಿಯು ತನ್ನ ದಶಮಾನ ಸಂಮಾನ ಶತಕದ ನಿಮಿತ್ತ ಇವರನ್ನು ಸಂಮಾನಕ್ಕೆ ಆಯ್ಕೆ ಮಾಡಿ ಪುರಸ್ಕರಿಸಿದೆ.



## ಆನಂದ ಯು.ಟಿ.

*ಶ್ರೀ ಭಗವತಿ ನಿವಾಸ, ಮೂಡು ಬೆಟ್ಟು ಮನೆ,*
*ಮೂಡು ತೋನ್ಸೆ, ಕಲ್ಯಾಣ ಪುರ ಅಂಚೆ*
*ಉಡುಪಿ ತಾಲೂಕು ಮತ್ತು ಜಿಲ್ಲೆ.*
***ಮೊ ; 9379788265 / 9743491914***

ಶ್ರೀ ಸುಂಕದ ಕಟ್ಟೆ ಮೇಳದ ಹಿರಿಯ ಕಲಾವಿದರಾಗಿರುವ ಶ್ರೀ ಯು. ಟಿ. ಆನಂದರು ಸ್ತ್ರೀ ಪಾತ್ರದ ಮುಖೇನ ಜನ ಮನ್ನಣೆಗೆ ಪಾತ್ರರಾಗಿರುವರು.

ಶ್ರೀ ಐತಪ್ಪ ಬೆಳ್ಚಡ ಹಾಗೂ ಶ್ರೀಮತಿ ಸೀತು ಬೆಳ್ಚಾಡ್ತಿ ಇವರ ಸುಪುತ್ರರಾಗಿ 11-4-1958 ರಂದು ಜನಿಸಿದ ಆನಂದರು 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಪ್ರಾಥಮಿಕ ಶಾಲಾ ವಿಧ್ಯಾರ್ಥಿಯಾಗಿರುವಾಗಲೇ ಬಡಗು ತಿಟ್ಟಿನ ಯಕ್ಷಗಾನ ಕಲಾ ಪ್ರಕಾರಕ್ಕೆ ಆಕರ್ಷಿತರಾದ ಇವರು ಬ್ರಹ್ಮಾವರದ ನೀಲಪ್ಪ ಬಂಗೇರ ಎಂಬವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಪಾತ್ರ ನಿರ್ವಹಣೆಯನ್ನು ಮಾಡಿದರು.

ಪೆರ್ಡೂರು ಮೇಳ -2 ವರ್ಷ, ಕಮಲ ಶಿಲೆ ಮೇಳ-2 ವರ್ಷ, ಕಟೀಲು ಮೇಳ -3ವರ್ಷ, ಬಪ್ಪನಾಡು ಟೆಂಟು ಮೇಳ -1 ವರ್ಷ, ಸುಂಕದ ಕಟ್ಟೆ ಮೇಳ -28 ವರ್ಷ ಹೀಗೆ 3 ದಶಕಗಳಿಗೂ ಮಿಕ್ಕಿದ ಕಲಾ ಸೇವೆಯನ್ನು ಮಾಡಿದ್ದಾರೆ.

ತೆಂಕು ತಿಟ್ಟಿನ ನಾಟ್ಯ ಶೈಲಿಯನ್ನು ನೋಡಿಯೇ ಕಲಿತಿರುವ ಇವರು ಶ್ರೀ ದೇವಿ, ಮಾಲಿನಿ, ಯಶೋಮತಿ, ರಂಭಾಮಣಿ, ಪ್ರಭಾವತಿ, ದ್ರೌಪದಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಸವ್ಯಸಾಚಿ ಕಲಾವಿದರಾಗಿದ್ದ ಕೀರ್ತಿ ಶೇಷ ಕಾಂತಪ್ಪ ಮಾಸ್ಟ್ರು ಇವರ ಚಿಕ್ಕ ತಂದೆ. ಕಾಂತಪ್ಪ ಮಾಸ್ಟ್ರರ ಮಕ್ಕಳಾದ ತೋನ್ಸೆ ಜಯಂತ ಕುಮಾರ್, ತೋನ್ಸೆ ಪುಷ್ಕಳ್ ಕುಮಾರ್, ತೋನ್ಸೆ ರಾಜೀವ ಕುಮಾರ್ ಇವರೆಲ್ಲಾ ಕಲಾವಿದರಾಗಿದ್ದು ಆನಂದರ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸಿದ್ದಾರೆ.

ಮಳೆಗಾಲದಲ್ಲಿ ಕೃಷಿಯು ಕಾರ್ಯವನ್ನು ನಿರ್ವಹಿಸುವ ಇವರು ಶ್ರೀಮತಿ ಮಾಲತಿ ಎಂಬವರನ್ನು ವರಿಸಿ ಯಶವಂತ, ಹೇಮಲತಾ, ಗುರುಪ್ರಸಾದ್, ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಕಿನ್ನಿಗೋಳಿ, ಬಂಟ್ವಾಳ, ಬ್ರಹ್ಮಾವರ ಮೊದಲಾದೆಡೆಯಲ್ಲಿ ಸಂಮಾನದ ಗೌರವಗಳು ಸಂದಿವೆ.



## ಆನಂದ ಗುಡಿಕಾರ್ ಕೆ.

*ಕಲಾಶ್ರೀ ಅಂಕೋತ್ತಿಮಾರು ಮನೆ, ಕೆರ್ವಾಶೆ*
*(ಸೊಸೈಟಿ ಬಳಿ), ಕೆರ್ವಾಶೆ ಅಂಚೆ, ಕಾರ್ಕಳ ತಾಲೂಕು*
*ಉಡುಪಿ ಜಿಲ್ಲೆ – 574122*
*ಮೊ: 9449954657*

ಚೆಂಡೆ ಮದ್ದಳೆಯ ನುಡಿತ-ಬಡಿತಗಳಲ್ಲಿ ತನ್ನದೇ ಆದ ವರ್ಚಸ್ಸನ್ನು ಮೆರೆಸಿರುವ ಶ್ರೀ ಆನಂದ ಗುಡಿಗಾರ್ ಇವರು ಇತ್ತೀಚೆಗೆ ಸ್ವಂತ ಉದ್ಯೋಗದ ನಿಮಿತ್ತ ಮೇಳ ತಿರುಗಾಟಕ್ಕೆ ಮುಕ್ತಾಯ ಹಾಡಿ ಹೇಳಿಕೆಯು ಮೇರೆಗೆ ಕಲಾಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ಶ್ರೀಯುತರು ಜಾಣ ಗುಡಿಗಾರ ಹಾಗೂ ಶ್ರೀಮತಿ ಲಕ್ಷ್ಮೀ ಗುಡಿಗಾರ್ತಿಯ ಸುಪುತ್ರರಾಗಿ 16–08–1977ರಲ್ಲಿ ಜನಿಸಿದ ಇವರು 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವರು.

ಯಕ್ಷಗಾನ ಕಲಾವಿದನಾಗುವ ಆಶಯದಿಂದ ಧರ್ಮಸ್ಥಳ ಲಲಿತಕಲಾಕೇಂದ್ರವನ್ನು ಸೇರಿದರು. ಆವಾಗ ಅಲ್ಲಿನ ಗುರುಗಳಾಗಿದ್ದ ಶ್ರೀ ಹರಿನಾರಾಯಣ ಬೈಪಾಡಿತ್ತಾಯ ಹಾಗೂ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ ಅವರಿಂದ ಹಿಮ್ಮೇಳದ ಅನುಭವವನ್ನು ಸಂಪಾದಿಸಿದರು. ಜೊತೆಗೆ ನಾಟ್ಯ ಹಾಗೂ ಜಾನಪದ ನೃತ್ಯಗಳಲ್ಲಿ ಅಪಾರ ಆಸಕ್ತಿ ಹೊಂದಿರುತ್ತಾರೆ.

ಬಪ್ಪನಾಡು –1 ವರ್ಷ, ಸಸಿಹಿತ್ಲು –1 ವರ್ಷ, ಸುಂಕದಕಟ್ಟೆ –4 ವರ್ಷ, ಪುತ್ತೂರು –1 ವರ್ಷ ಹಾಗೂ ಮಂಗಳಾದೇವಿಮೇಳ –3ವರ್ಷ ಹೀಗೆ 10 ವರ್ಷಗಳ ತನಕ ಮೇಳದಲ್ಲಿ ಕಲಾಮಾತೆಯ ಸೇವೆಯನ್ನು ಮಾಡಿರುತ್ತಾರೆ.

ಚೆಂಡೆ–ಮದ್ದಳೆಯ ನುಡಿತ,ಬಡಿತಗಳಲ್ಲಿ ಕೈಚಳಕವನ್ನು ತೋರಿ ಪ್ರತಿಭಾವಂತರೆನಿಸಿರುವ ಶ್ರೀ ಆನಂದ ಗುಡಿಗಾರರಿಗೆ ಹವ್ಯಾಸಿ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಇದ್ದು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಜಾನಪದ ನೃತ್ಯದಲ್ಲಿ ಅನುಭವವುಳ್ಳ ಇವರು ಅನೇಕ ತಂಡಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಪ್ರದರ್ಶನದ ಗುಣಮಟ್ಟವನ್ನು ಹೆಚ್ಚಿಸಿದ್ದಾರೆ.



## ಆನಂದ ಕೊಕ್ಕಡ

*ಪೊಯ್ಯೊಲೆ ಮನೆ, ಕೊಕ್ಕಡ ಗ್ರಾಮ ಮತ್ತು ಅಂಚೆ*
*ಬೆಳ್ತಂಗಡಿ ತಾಲೂಕು*
*ಫೋನ್: 9740764688.*

ತನ್ನ ಸ್ವಂತ ಆಸಕ್ತಿಯಿಂದ ಗೆಜ್ಜೆ ಕಟ್ಟಿ ರಂಗವೇರಿದ ಶ್ರೀ ಆನಂದ ಕೊಕ್ಕಡರು ಕಳೆದ ಹತ್ತು ವರ್ಷಗಳಿಂದ ಶ್ರೀ ಕಟೀಲು ಮೇಳದಲ್ಲಿ ಸ್ತ್ರೀ ವೇಷ ಹಾಗೂ ಪುಂಡು ವೇಷಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ.

ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದಲ್ಲಿ ಶ್ರೀ ಕೊರಗಪ್ಪ ಪೂಜಾರಿ ಹಾಗೂ ಶ್ರೀಮತಿ ಚೆನ್ನಮ್ಮ ದಂಪತಿಯ ಸುಪುತ್ರನಾಗಿ ಜನಿಸಿದ ಇವರು ಹತ್ತನೆಯ ತರಗತಿಯವರೆಗಿನ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಖ್ಯಾತ ಹಾಸ್ಯ ಕಲಾವಿದರಾದ ಉಜಿರೆ ನಾರಾಯಣ ಇವರ ಸಂಬಂಧಿಕರಾಗಿದ್ದು ಇವರ ಕಲಾ ಉತ್ತೇಜನಕ್ಕೆ ಬಾಲ್ಯದಿಂದಲೇ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಜೊತೆಗೆ ಬೆಳ್ತಂಗಡಿ ತಾಲೂಕಿನಲ್ಲಿ ನಡೆಯುವ ಯಕ್ಷಗಾನ ಬಯಲಾಟಗಳನ್ನು ಕಂಡು ಪ್ರಭಾವಿತರಾದರು.'

ನಾಟ್ಯ ಗುರುಗಳಾದ ಕೀರ್ತಿಶೇಷ ಪರಮೇಶ್ವರ ಆಚಾರ್ಯರಿಂದ ಹೆಜ್ಜೆಗಾರಿಕೆಯನ್ನು ಕಲಿತು ಹತ್ತು ವರ್ಷಗಳ ಹಿಂದೆ ಶ್ರೀ ಕಟೀಲು ಮೇಳವನ್ನು ಸೇರಿದರು. ಅಂದಿನಿಂದ ಇಂದಿನ ವರೆಗೆ ಅದೇ ಮೇಳದಲ್ಲಿ ತನ್ನ ಕಲಾಸೇವೆಯನ್ನು ಸಲ್ಲಿಸುತ್ತಾ ಇದ್ದಾರೆ.

ಶ್ರೀಯುತರು ಶ್ರೀ. ದೇವಿ ಮಹಾತ್ಮೆಯ ಆದಿಮಾಯೆ, ಮಾಲಿನಿ, ದಿತಿ ಕಟೀಲು ಕ್ಷೇತ್ರ ಮಹಾತ್ಮೆಯ ಸೌಗಂಧಿಕೆ ರತಿ ಕಲ್ಯಾಣದ ರತಿ ಮುಂತಾದ ಸ್ತ್ರೀ ಪಾತ್ರಗಳನ್ನು ಮಾಡುತ್ತಾ ಇದ್ದಾರೆ. ಜೊತೆಗೆ ಬ್ರಹ್ಮ, ವರುಣ ಮಾರುತ, ಮನ್ಮಥ, ಈಶ್ವರ ಮುಂತಾದ ಪುರುಷ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ.

ತನ್ನ ಯಕ್ಷಗಾನ ಕಲಾಜೀವನದ ಜೊತೆಗೆ ಉಪವೃತ್ತಿಯಾಗಿ ಬೇಸಾಯವನ್ನು ಮಾಡುತ್ತಾ ಬಂದಿರುವ ಶ್ರೀ ಆನಂದ ಕೊಕ್ಕಡರು ಎರಡು ರಂಗಗಳಲ್ಲಿ ಕೃಷಿಯನ್ನು ಮಾಡುವ ಸಾಧಕರಾಗಿ ಬೆಳೆಯುತ್ತಾ ಇದ್ದಾರೆ.



## ಆನಂದ ಮುಡಿಪು

*ತಿರ್ತರ್ ಕಾಡುಮನೆ, ಕೈರಂಗಳ ಗ್ರಾಮ, ಅಂಚೆ*
*ಬಂಟ್ವಾಳ ತಾಲೂಕು, ಮುಡಿಪು*
*ಮೊ. 9686283001*

ಸ್ತ್ರೀ ವೇಷ, ಪುಂಡುವೇಷ, ಕಿರೀಟ ವೇಷಗಳ ನಿರ್ವಹಣೆ ಮಾಡುತ್ತಾ ಬಂದಿರುವ ಆನಂದ ಮುಡಿಪು ಇವರು ಪ್ರಸ್ತುತ ಸಾಲಿನಲ್ಲಿ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಿದ್ದಾರೆ.

ಇವರ ಹುಟ್ಟೂರು ಮುಡಿಪು. ತಂದೆ ಅಣ್ಣಪ್ಪ ಎಂಬವರು. ತಾಯಿ ಸುಶೀಲ ಎಂಬಾಕೆ. 4ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವ ಇವರು ಬೆಳೆಯುತ್ತಿದ್ದಂತೆ ಯಕ್ಷಗಾನದತ್ತ ಆಕರ್ಷಿತರಾದರು.

ತಮ್ಮ 15ನೇ ವಯೋಮಾನದಲ್ಲಿ ಉಂಡಮನೆ ಕೃಷ್ಣಭಟ್‌ರಿಂದ ನಾಟ್ಯದ ತರಬೇತಿಯನ್ನು ಪಡೆದು ರಂಗ ಪ್ರವೇಶ ಮಾಡಿದರು.ಜೊತೆಗೆ ವೇಷಧಾರಿ ಆನಂದ ಸಜಂಕಿಲ ಮತ್ತು ಮದ್ದಳೆಗಾರರಾದ ರಾಘವ ಜೋಡುಕಲ್ಲು, ಆನಂದರ ಸಂಬಂಧಿಕರಾಗಿದ್ದು ಇವರ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆ.

36 ವರ್ಷ ವಯೋಮಾನದವರಾದ ಇವರು ಕಟೀಲು ಮೇಳ–6 ವರ್ಷ, ವರ್ಕಾಡಿ ಮೇಳ –1 ವರ್ಷ, ಭಗವತಿ ಮೇಳ –1 ವರ್ಷ ಕೂಡ್ಲು ಮೇಳದಲ್ಲಿ –2 ವರ್ಷ. ಹೀಗೆ 10 ವರ್ಷಗಳ ಕಾಲ ತಿರುಗಾಟ ಮಾಡಿದರು. ಆಮೇಲೆ 5 ವರ್ಷಗಳ ಕಾಲ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಇವರು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಾಲಿನಿ, ದಿತಿ, ಆದಿಮಾಯೆ, ವನದೇವಿ, ಕೃಷ್ಣ ವಿಭೀಷಣ, ಲಕ್ಷ್ಮಣ, ಭಗದತ್ತ, ಸೋಮದತ್ತ, ಕಾಳಿ, ಶಂಖಾಸುರ, ದುರ್ಗಾಸುರ ಮೊದಲಾದ ಪಾತ್ರಗಳಲ್ಲಿ ಪ್ರತಿಭೆಯನ್ನು ತೋರಿರುವರು.

ಶ್ರೀಮತಿ ಮಮತಾ ಎಂಬವರನ್ನು ವರಿಸಿ ಸಿಂಚನಾ ಎಂಬ ಸುಪುತ್ರಿಯನ್ನು ಪಡೆದು ಸಾರ್ಥಕ ಜೀವನ ನಡೆಸುತ್ತಿದ್ದಾರೆ.



# ಈಶ್ವರ್ ಭಟ್ ಕೆ. ಹೆನ್ನಳ

*"ಯಕ್ಷಮಿತ್ರ", ಪಟ್ರಮೆ ಅಂಚೆ, ಬೆಳ್ತಂಗಡಿ ತಾಲೂಕು*
*ದಕ್ಷಿಣ ಕನ್ನಡ ಜಿಲ್ಲೆ.*
*ದೂ; 08256-263042*

ಒಂದು ದಿನ ಕೃಷ್ಣ ಜನ್ಮದ ಕೃಷ್ಣನಾಗಿ ಗೆಜ್ಜೆ ಕಟ್ಟಿ, ಬಣ್ಣ ಹಚ್ಚಿ ರಂಗ ಪ್ರವೇಶಿಸಿದ ಶ್ರೀ ಹೆನ್ನಳ ಈಶ್ವರ್ ಭಟ್ ಇವರು ಮುಖ್ಯ ಸ್ತ್ರೀ ವೇಷಧಾರಿಯಾಗಿ ಬೆಳೆದು ಕೀರ್ತಿಯನ್ನು ಪಡೆದು ಮೇಳದಿಂದ ನಿವೃತ್ತರಾಗಿರುವ ಹಿರಿಯ ಕಲಾವಿದರಾಗಿದ್ದಾರೆ.

ಬಂಟ್ವಾಳ ತಾಲೂಕು ಅಳಕೆ ಗ್ರಾಮದ ಮುಳಿಯ ಎಂಬಲ್ಲಿ ಕಡೆಂಗೋಡ್ಲು ಮಹಾಲಿಂಗ ಭಟ್ ಮತ್ತು ಶ್ರೀಮತಿ ಪರಮೇಶ್ವರಿ ಅಮ್ಮ ದಂಪತಿಗಳ 3ನೇ ಮಗನಾಗಿ 1941ರಲ್ಲಿ ಇವರ ಜನನವಾಯಿತು. ಬಡತನದ ನಡುವೆಯೂ 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ಉದ್ಯೋಗದತ್ತ ಮನ ಮಾಡಿದರು.

ಪ್ರಸಿದ್ಧ ಹಾಸ್ಯಗಾರ ಪುತ್ತೂರು ನಾರಾಯಣ ಭಟ್‌ರ ನೆಂಟಸ್ತಿಕೆಯೊಂದಿಗೆ ಮುಲ್ಕಿ ಮೇಳದಲ್ಲಿ ಕೆಲಸಕ್ಕೆ ಸೇರಿದರು. ಮಳೆಗಾಲದಲ್ಲಿ ನಾರಾಯಣ ಭಟ್‌ರಿಂದ ಹೆಜ್ಜೆಗಾರಿಕೆಯನ್ನು ಅಭ್ಯಾಸ ಮಾಡಿ ಮೇಳ ತಿರುಗಾಟಕ್ಕೆ ಅಣಿಯಾದರು.

ಪ್ರಾರಂಭದಲ್ಲಿ ಬಾಲಗೋಪಾಲ ವೇಷ ಮಾಡುತ್ತಿದ್ದ ಇವರು ಕ್ರಮೇಣ ಭರತನಾಟ್ಯ ಮತ್ತು ಯಕ್ಷಗಾನದ ಕುಣಿತಗಳನ್ನು ಕುಡಾನ ಗೋಪಾಲಕೃಷ್ಣಭಟ್‌ರಿಂದ ಅಭ್ಯಾಸಿಸಿದರು. ಆಮೇಲೆ ಪೀಠಿಕೆ ಸ್ತ್ರೀವೇಷಗಳನ್ನು ಹಾಗೂ ಪೋಷಕ ಸ್ತ್ರೀ ಪಾತ್ರಗಳನ್ನು ಮಾಡತೊಡಗಿದರು. ಬೆಳೆಯುತ್ತಾ ಇದ್ದಂತೆ ಮೂಲ್ಕಿ ಮೇಳದಲ್ಲಿ ಕಡತೋಕ ಮಂಜುನಾಥ ಭಾಗವತರಿಂದ ಪಾತ್ರಗಳಿಗೆ ಮಾರ್ಗದರ್ಶನ ಪಡೆದರು. ಪಾತಾಳ ವೆಂಕಟರಮಣ ಭಟ್ಟರ ಗೈರುಹಾಜರಿಯಿಂದು ಮೇಳದಲ್ಲಿ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ ಅವಕಾಶವನ್ನು ಬಳಸಿಕೊಂಡ ಇವರು ಶೀಘ್ರದಲ್ಲೇ ಜನಾಕರ್ಷಣೆಗೆ ಒಳಗಾದರು.

ಮೂಲ್ಕಿ ಮೇಳ –6ವರ್ಷ, ಸುರತ್ಕಲ್ –13, ಕುಂಬಳೆ –3, ಬಪ್ಪನಾಡು –2, ಕದ್ರಿ –5, ಇಡಗುಂಜಿ –1, ಶಿರಸಿ –3, ಕುಮಟಾ –3, ಸಾಲಿಗ್ರಾಮ –1, ಎಡನೀರು –1 ಮೇಳಗಳನ್ನು ತಿರುಗಾಡಿದ ಹಿರಿಯಾ ಅನುಭವಿ ಕಲಾವಿದ ಇವರಾಗಿದ್ದಾರೆ.

ತೆಂಕು ಬಡಗಿನಲ್ಲಿ ಪಳಗಿದ ಉಭಯ ಕಲಾವಿದ ರಾಗಿದ್ದು ಇವರಿಗೆ ಸಾಮಗ, ಶೇಣಿ, ಅಗರಿದ್ವಯರು, ಪುತ್ತೂರು ನಾರಾಯಣ ಹೆಗ್ಡೆ, ಕೊಲ್ಲೂರು, ಪಾತಾಳ, ಶಂಭು ಹೆಗ್ಡೆ, ಗೋಡೆ ನಾರಾಯಣ ಹೆಗ್ಡೆ, ನಿಟ್ಟೂರು ನಾರಾಯಣ ಭಾಗವತ, ಚಿಟ್ಟಾನಿ ರಾಮಚಂದ್ರ ಹೆಗ್ಡೆ ಮೊದಲಾದ ಮೇರು ಪಂಕ್ತಿಯ ಕಲಾವಿದರ ಒಡನಾಟ ಮತ್ತು ಮಾರ್ಗದರ್ಶನವಿದೆ.

ದಮಯಂತಿ, ದಾಕ್ಷಾಯಿಣಿ, ಮಂಡೋದರಿ, ಶ್ರೀಲಲಿತೆ, ಶ್ರೀದೇವಿ, ಶಾರದೆ, ಗುಣ ಸುಂದರಿ, ಶೀಲಾವತಿ ಹಾಗೂ ಇನ್ನಿತರ ತುಳು ಪ್ರಸಂಗಗಳ ಸ್ತ್ರೀಪಾತ್ರಗಳನ್ನು ಇವರು ನಿರ್ವಹಿಸಿದ್ದಾರೆ.

ಇವರ ಕಲಾ ಸಾಧನೆಯನ್ನೂ ಗುರುತಿಸಿ ಬೆಳ್ತಂಗಡಿ ಸೀಮಾ ಪರಿಷತ್ ಹವ್ಯಕ ಸಭಾ,ದುರ್ಗಾಪರಮೇಶ್ವರಿ ಕಲಾರಂಗ ಉಪ್ಪಳ, ದ.ಕ. ಯಕ್ಷಗಾನೋತ್ಸವ ಮಂಗಳೂರು, ಕದ್ರಿ ಮೇಳ, ಯಕ್ಷಗಾನ ಕಲಾರಂಗ, ಪೇಜಾವರ ಶ್ರೀಗಳು, ಉಡುಪಿ, ಕನ್ನಡ ಸಾಹಿತ್ಯ ಸಮ್ಮೇಳನ, ಬೆಳ್ತಂಗಡಿ, ಸೌತಡ್ಕ, ಎಡನೀರು, ಕಲ್ಕೂರ ಪ್ರತಿಷ್ಠಾನ ಮೊದಲಾದೆಡೆಯಲ್ಲಿ ಸಂಮಾನಗಳಾಗಿವೆ. ಶೇಣಿ ಸಂಸ್ಮರಣೆ ಪ್ರಶಸ್ತಿಯು ಸೇರಿದಂತೆ ಕೀಲಾರು ಪ್ರತಿಷ್ಠಾನ ಕಲ್ಲಗುಂಡಿ, ಮಂಗಳೂರು ಹವ್ಯಕ ಸಭಾ ಮೊದಲಾದ ಸಂಸ್ಥೆಗಳಿಂದ ಗೌರವ ಪುರಸ್ಕಾರಗಳು ಸಂದಿವೆ.

ಇಬ್ಬರು ಹೆಣ್ಣುಮಕ್ಕಳು ಆಶಾ ಪರಮೇಶ್ವರಿ, ಜಂಬುಭಾರತಿ. ಓರ್ವಮಗ ಉಮೇಶ್(ಸಿವಿಲ್ ಇಂಜಿನಿಯರ್) ಹಾಗೂ ಪತ್ನಿ ಶಕುಂತಳೆಯೊಂದಿಗೆ ಕೃತಾರ್ಥ ಜೀವನ ನಡೆಸುತ್ತಿರುವ ಇವರು ಕಳೆದ ಕೆಲವು ವರ್ಷಗಳಿಂದ ಅನಾರೋಗ್ಯದಿಂದಾಗಿ ಯಕ್ಷಗಾನ ವೃತ್ತಿ ಜೀವನದಿಂದ ನಿವೃತ್ತಿ ಪಡೆದಿದ್ದಾರೆ.



## ಈಶ್ವರ್ ಪ್ರಸಾದ್ ಪಿ.ವಿ.

*ರಜತಗಿರಿ ಮನೆ, ಧರ್ಮಸ್ಥಳ*
*ಬೆಳ್ತಂಗಡಿ ತಾಲೂಕು- 574216*
*ಮೊ: 9449488631*

ಮೇರು ಪಂಕ್ತಿಯ ಕಲಾವಿದ ಕೆ. ಗೋವಿಂದ ಭಟ್ಟರ ವೇಷದ ಪ್ರಭಾವ ಹಾಗೂ ತನ್ನ ಸುತ್ತಲಿನ ಯಕ್ಷಗಾನ ಪರಿಸರದ ಪ್ರಭಾವದಿಂದಾಗಿ ಕಲಾವಿದರಾದ ಶ್ರೀ ಈಶ್ವರ ಪ್ರಸಾದ್ ಪಿ.ವಿ.ರವರು ಧರ್ಮಸ್ಥಳ ಮೇಳದ ಕಲಾವಿದರಾಗಿದ್ದಾರೆ.

13-06-1978ರಂದು ಪುತ್ತೂರು ತಾಲೂಕಿನ ಮತಾವುನಲ್ಲಿ ಶ್ರೀ ವೆಂಕಟರಮಣ ಶಾಸ್ತ್ರಿ ಪಿ. ಮತ್ತು ಶ್ರೀಮತಿ ಕುಸುಮ ದಂಪತಿಗೆ ಪುತ್ರರಾಗಿ ಜನಿಸಿದ ಶ್ರೀಯುತರು ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡಿರುವರು.

16-17ನೇ ವಯಸ್ಸಿನಲ್ಲಿ ಯಕ್ಷಗಾನದ ರಂಗ ಪ್ರವೇಶ ಮಾಡಿದ ಈಶ್ವರ ಪ್ರಸಾದರು. ಕೋಳ್ಯೂರು ರಾಮಚಂದ್ರ ರಾವ್, ಕೆ. ಗೋವಿಂದ ಭಟ್, ಬನ್ನಂಜೆ ಸಂಜೀವ ಸುವರ್ಣ ಇವರುಗಳ ಗುರುತನದಲ್ಲಿ ನಾಟ್ಯ, ರಂಗತಂತ್ರ ಹಾಗೂ ಪಾತ್ರ ನಿರ್ವಹಣೆಯ ಬಗ್ಗೆ ಮಾರ್ಗದರ್ಶನ ಪಡೆದಿರುವರು.

ಧರ್ಮಸ್ಥಳ ಮೇಳದಲ್ಲಿ ಒಟ್ಟು 16 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಒಂದೇ ಮೇಳದಲ್ಲಿದ್ದು ಎಳವೆಯಲ್ಲೇ ಹಿರಿಯರ ಅನುಭವವನ್ನು ಮೈಗೂಡಿಸಿ, ಉತ್ತಮ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾ ಜನ ಮನ್ನಣೆಗೆ ಒಳಗಾಗಿದ್ದಾರೆ.

ಸ್ತ್ರೀವೇಷ, ಪುಂಡು ವೇಷ ಹಾಗೂ ರಾಜವೇಷಗಳ ನಿರ್ವಹಣೆ ಮಾಡುತ್ತಿರುವ ಇವರು ತಾಳಮದ್ದಳೆಯ ಪಾತ್ರಧಾರಿಯಾಗಿ ಅರ್ಥ ಹೇಳಿದ್ದಾರೆ. ಶ್ರೀದೇವಿ, ಸೀತೆ, ಮೋಹಿನಿ, ದಮಯಂತಿ, ಕೃಷ್ಣ, ರಾಮ, ವಿಷ್ಣು, ಅರ್ಜುನ, ಧರ್ಮರಾಯ ಇತ್ಯಾದಿ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿರುತ್ತಾರೆ.

ಇತ್ತೀಚೆಗೆ ಶ್ರೀಮತಿ ವಿದ್ಯಾ ಎಂಬವರನ್ನು ವರಿಸಿರುವ ಈಶ್ವರ ಪ್ರಸಾದರು ಬೆಳ್ತಂಗಡಿ, ಉಜಿರೆ ಕಾಲೇಜು, ಹಾಗೂ ಹೊಸಪೇಟೆಯಲ್ಲಿ ನಾಟ್ಯ ತರಬೇತಿಯನ್ನು ಮಾಡಿರುವರು. ಶ್ರೀಯುತರು ಒಬ್ಬ ಪ್ರತಿಭಾನ್ವಿತ ಕಲಾವಿದರಾಗಿದ್ದು, ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆಯುತ್ತಿದ್ದಾರೆ.



## ಉಮೇಶ ಎಚ್. ಹೆಬ್ಬಾರ್

*ಎಳ್ಳಿಯಾರು ಮನೆ, ಅಂಚೆ ನೆಡ್ಲೆ, ವಯಾ ಧರ್ಮಸ್ಥಳ*
*ಬೆಳ್ತಂಗಡಿ ತಾಲೂಕು – 574216*
*ಮೊ: 9482037246.*

ಸ್ತ್ರೀವೇಶದ ಮುಖೇನ ವರ್ಚಸ್ಸನ್ನು ಮೆರೆಸಿ ಸತ್ಕೀರ್ತಿಗೆ ಭಾಜನರಾಗಿರುವ ಶ್ರೀ ಎಚ್. ಉಮೇಶ್ ಹೆಬ್ಬಾರ್ 'ಹಿರಿಯ ಕಲಾವಿದರಾಗಿದ್ದು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕುಂಟ್ಯಾನದಲ್ಲಿ ಎಚ್. ಪದ್ಮನಾಭ ಹೆಬ್ಬಾರ್ ಹಾಗೂ ಯಮುನಾಬಾಯಿ ಇವರ ಮಗನಾಗಿ ದಿನಾಂಕ 01–11–1955ರಲ್ಲಿ ಜನಿಸಿದರು.

10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಶ್ರೀ ಶ್ರೀಕರ ಭಟ್ ಇವರ ಪ್ರೇರಣೆಯಿಂದ ಯಕ್ಷಗಾನದ ಆಸಕ್ತಿಯನ್ನು ಬೆಳೆಸಿದರು. ಶ್ರೀ ಧರ್ಮಸ್ಥಳದ ಲಲಿತಕಲಾ ಕೇಂದ್ರದಲ್ಲಿ ಪಡ್ರೆ ಚಂದು ಅವರಿಂದ ನಾಟ್ಯಾಭ್ಯಾಸವನ್ನು ಮಾಡಿ, ನೆಡ್ಲೆ ನರಸಿಂಹಭಟ್ ಅವರಿಂದ ರಂಗಮಾಹಿತಿಯ ಅನುಭವವನ್ನು ಪಡೆದುಕೊಂಡು ಪ್ರಬುದ್ಧ ಕಲಾವಿದರಾಗಿ ಬೆಳೆದಿದ್ದಾರೆ.

ಕಟೀಲು ಮೇಳ –9 ವರ್ಷ, ಅರುವ ಮೇಳ – 3 ವರ್ಷ, ಬಪ್ಪನಾಡು ಮೇಳ –1 ವರ್ಷ, ಹೀಗೆ 12 ವರ್ಷಗಳ ತಿರುಗಾಟವನ್ನು ಮಾಡಿ ಅನಿವಾರ್ಯ ಕಾರಣದಿಂದ ಮೇಳಕ್ಕೆ ವಿಮುಕ್ತರಾದರು. ಆಮೇಲೆ ಹಲವಾರು ಕಾರ್ಯಕ್ರಮಗಳಿಗೆ ಹೇಳಿಕೆಯ ಮೇರೆಗೆ ಭಾಗವಹಿಸಿ ಪ್ರತಿಭೆಯನ್ನು ಮೆರೆಸುತ್ತಿದ್ದರು. ಇತ್ತೀಚೆಗೆ ಮತ್ತೆ ಕಟೀಲು ಮೇಳವನ್ನು ಸೇರಿದವರು ಪ್ರಸ್ತುತ 5ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಶ್ರೀ ದೇವಿ ಮಹಾತ್ಮೆಯ ಶ್ರೀದೇವಿ ಪಾತ್ರ ಇವರಿಗೆ ಸ್ಫೂರ್ತಿಯನ್ನೂ, ಕೀರ್ತಿಯನ್ನೂ ತಂದು ಕೊಟ್ಟಿದೆ. ಪ್ರಮೀಳೆ, ಶಶಿಪ್ರಭೆ, ಭ್ರಮರ ಕುಂತಳೆ, ಮೀನಾಕ್ಷಿ, ಚಿತ್ರಾಂಗದೆ ಮುಂತಾದ ಪಾತ್ರಗಳನ್ನು ಸ್ವಂತಿಕೆಯ ವರ್ಚಸ್ಸಿನಿಂದ ಮೆರೆಸಿದ್ದಾರೆ.

ಹಿಂದೆ ಉತ್ತಮ ಪುಂಡುವೇಷಧಾರಿಯಾಗಿದ್ದು ಅಭಿಮನ್ಯು, ಪರಶುರಾಮ, ಚಂಡ–ಮುಂಡರು ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ. ಪ್ರಸ್ತುತ ಬ್ರಹ್ಮ, ವಿಷ್ಣು ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾ ಕಲಾಸೇವೆಯನ್ನು ನಡೆಸುತ್ತಾ ಇದ್ದಾರೆ.

ಶಾಲಾ ಮಕ್ಕಳಿಗೆ ಹಾಗೂ ಆಸಕ್ತ ಯುವಕರಿಗೆ ಗುರುಗಳಾಗಿ ನಾಟ್ಯಾಭ್ಯಾಸವನ್ನು ಮಾಡಿಸಿದ್ದಾರೆ. ಸಾಂಸಾರಿಕವಾಗಿ ಶ್ರೀಮತಿ ಅರ್ಪಣಾ ಅವರನ್ನು ವರಿಸಿರುವ ಇವರು ಶಿವರಂಜನ್, ಸುಹಾಸಿನಿ, ವಿಧೀಶ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.

ಪರಂಪರೆಯ ಶೈಲಿಯಲ್ಲಿ ಪಾತ್ರ ನಿರ್ವಹಣೆಯನ್ನು ಮಾಡುತ್ತಾ ಬೆಳೆದು ಬಂದಿರುವ ಶ್ರೀ ಉಮೇಶ್ ಹೆಬ್ಬಾರ್ ಇವರ ಕಲಾಸಾಧನೆಗೆ ಫಲಶ್ರುತಿಯಾಗಿ ಹಲವು ಸಮ್ಮಾನದ ಗೌರವಗಳು ಸಂದಿವೆ. ನೆಡ್ಲೆ ಜೆ.ಸಿ ಕ್ಲಬಿನ ಸಂಮಾನ, ನೆಡ್ಲೆ ಶಾಲಾ ವಾರ್ಷಿಕೋತ್ಸವ ಸಂಮಾನ, ಮುಂತಾದವುಗಳು ಉಲ್ಲೇಖನೀಯ. ಕಾಂತಾವರದ ತೆಂಕುತಿಟ್ಟು ಯಕ್ಷಗಾನ ಸ್ಪರ್ಧೆಯಲ್ಲಿ ಇವರ ಶಶಿಪ್ರಭೆ ಪಾತ್ರಕ್ಕೆ ವೈಯುಕ್ತಿಕ ಪ್ರಶಸ್ತಿ ಬಂದಿರುವುದು ಕೂಡಾ ಗಮನಿಸಬೇಕಾದ ಅಂಶವಾಗಿದೆ.



## ಉದಯಕುಮಾರ್ ಧರ್ಮಸ್ಥಳ

*ಮೂಡಂಗಾಲು ಮನೆ, ಧರ್ಮಸ್ಥಳ ಅಂಚೆ,*
*ಬೆಳ್ತಂಗಡಿ ತಾಲೂಕು*
*-9741632565*

ಬಣ್ಣದ ವೇಷವು ಸೇರಿದಂತೆ ಉಳಿದ ಎಲ್ಲಾ ವೇಷಗಳನ್ನು ಮಾಡಿ ಅನುಭವವನ್ನು ಸಂಪಾದಿಸಿರುವ ಶ್ರೀ ಉದಯ ಧರ್ಮಸ್ಥಳ ಇವರು ತಳಕಳ ಮೇಳದ ಕಲಾವಿದರಾಗಿ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಯಕ್ಷಗಾನದ ಪರಿಸರವೇ ಆದ ಧರ್ಮಸ್ಥಳದಲ್ಲಿ 9-5-1982 ರಲ್ಲಿ, ಬಾಬು ಪೂಜಾರಿ ಮತ್ತು ಕಮಲ ಪೂಜಾರ್ತಿಯವರಿಗೆ ಸುಪುತ್ರನಾಗಿ ಜನಿಸಿದ ಇವರು 6ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದರು.

ಪ್ರಸಿದ್ಧ ಪುಂಡುವೇಷಧಾರಿ ಧರ್ಮಸ್ಥಳ ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಚಂದ್ರಶೇಖರ ಧರ್ಮಸ್ಥಳ ಇವರ ಪ್ರೇರಣೆಯೊಂದಿಗೆ ಧರ್ಮಸ್ಥಳದ ಲಲಿತಕಲಾ ಕೇಂದ್ರವನ್ನು ಸೇರಿ ನಾಟ್ಯಾಭ್ಯಾಸವನ್ನು ಮಾಡಿದರು.

15ನೇ ವಯಸ್ಸಿನಲ್ಲಿ ಸಬ್ಬಣ ಕೋಡಿ ಕೃಷ್ಣ ಭಟ್‌ರಿಂದ ನಾಟ್ಯಾಭ್ಯಾವನ್ನು ಮಾಡಿದ ಇವರು ಆರಂಭದಲ್ಲಿ ಪತಿಷ್ಠಿತವಾದ ಕರ್ನಾಟಕ ಮೇಳವನ್ನು ಸೇರಿ 4ವರ್ಷಗಳ ಕಾಲ ತಿರುಗಾಟವನ್ನೂ ಮಾಡಿದರು. ನಂತರ ಉಳ್ಳಾಲ ಚೀರುಂಬ ಭಗವತಿ ಮೇಳದಲ್ಲಿ 3ವರ್ಷ ಹಾಗೂ ತಳಕಲ ಮೇಳದಲ್ಲಿ 6ವರ್ಷಗಳ ಕಾಲ ಕಲಾಸೇವೆಯನ್ನು ಮಾಡಿರುತ್ತಾರೆ,

ಪುಂಡುವೇಷ, ಹಾಸ್ಯವೇಷ, ಸ್ತ್ರೀವೇಷ ಹಾಗೂ ರಾಜವೇಷಗಳನ್ನೂ ನಿರ್ವಹಿಸುವ ಇವರು ಅಯ್ಯಪ್ಪ, ಶ್ರೀದೇವಿ, ಶಶಿಪ್ರಭಾ, ಪ್ರಮೀಳೆ, ಮಾಲಿನಿ, ವೀರಭದ್ರ, ನಿಶುಂಭ, ರಾವಣ, ಹನೂಮಂತ, ದಾರಿಕಾಸುರ, ದೇವೇಂದ್ರ ಮೊದಲಾದ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಮೂಲಕ ಜನಮನ್ನಣೆಯನ್ನು ಗಳಿಸಿರುವರು.

ಸುಂಕದಕಟ್ಟೆ ಕಾಲೇಜು ಹಾಗೂ ಕಿನ್ನಿಕಂಬಳ ಹಿರಿಯ ಪ್ರಾಥಾಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಇನ್ನಿತರ ಹವ್ಯಾಸಿ ಕಲಾವಿದರಿಗೆ ನಾಟ್ಯ ತರಬೇತಿಯನ್ನು ನೀಡಿರುವ ಇವರು ಉತ್ತಮ ಪಾತ್ರಧಾರಿ ಎಂಬ ಮನ್ನಣೆಗೆ ಒಳಗಾಗಿದ್ದಾರೆ.

ಕಿನ್ನಿಕಂಬಳ, ಶಾಲಾವತಿಯಿಂದ ಹಾಗೂ ಸುಂಕದಕಟ್ಟೆ ಕಾಲೇಜು ವತಿಯಿಂದ ಸಂಮಾನಿಸಿ ಗೌರವಿಸಲ್ಪಟ್ಟಿರುವ ಇವರು ತನ್ನ ಪ್ರತಿಭೆಯ ಮೂಲಕ ಯಕ್ಷಾನದ ಮೇರು ಕಲಾವಿದನಾಗಿ ಬೆಳೆಯುವ ಎಲ್ಲಾ ಗುಣಗಳನ್ನು ಹೊಂದಿದ್ದಾರೆ.



## ಉದಯಕುಮಾರ್ ನಾವಡ, ಮಧೂರು

*"ಪಂದಪ್ಪಿಲ" ಮನೆ, ಬನ್ನೂರ ಗ್ರಾಮ,*
*ಮಧೂರು ಅಂಚೆ, ಕಾಸರಗೋಡು– 670124*
*ದೂರವಾಣಿ – 09048630123.*

ಚುರುಕಿನ ಪಾದ ಚಲನೆಯಿಂದ ದೀಂಗಿಣ ವೀರರಾಗಿ ನಾಟ್ಯ ಚತುರರೆನಿಸಿಕೊಂಡಿರುವ ಶ್ರೀ ಮಧೂರು ಉದಯಕುಮಾರ್ ನಾವಡರು ಜನಮನ್ನಣೆಗೆ ಒಳಗಾಗುತ್ತಲೆ ಅನಾರೋಗ್ಯದ ನಿಮಿತ್ತ ಮೇಳ ತಿರುಗಾಟದಿಂದ ನಿವೃತ್ತರಾಗಿದ್ದಾರೆ.

ಪಂದಪ್ಪಿಲದಲ್ಲಿ 5–03–1966ರಂದು ಸಂಸ್ಕೃತ ವಿದ್ವಾಂಸ ವಿಷ್ಣು ನಾವಡ ಬಿ. ಹಾಗೂ ಲೀಲಾವತಿ ದಂಪತಿಗೆ ಮಗನಾಗಿ ಜನಿಸಿದ ಇವರು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು.

12ನೇ ವಯಸ್ಸಿನಲ್ಲಿ ಪರಿಸರದ ಪ್ರಭಾವದಿಂದ ಯಕ್ಷಗಾನದ ಸೆಳೆತಕ್ಕೊಳಗಾಗಿ ಕೂಡ್ಲು ನಾರಾಯಣ ಬಲ್ಯಾಯರಿಂದ ನಾಟ್ಯಾಭ್ಯಾಸ ಮಾಡಿದರು.

ಇವರ ತಂದೆಯವರು ಇವರನ್ನು ಯಕ್ಷಗಾನ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗಿ ತೋರಿಸುತ್ತಿದ್ದುದರಿಂದ ಇವರಿಗೆ ಯಕ್ಷಗಾನದ ರಂಗತಂತ್ರ, ಪಾತ್ರಗಳ ನಟನೆಯ ಮನೋಧರ್ಮ, ಅಭಿವ್ಯಕ್ತಿ ಇತ್ಯಾದಿ ವಿಚಾರಗಳಲ್ಲಿ ನೋಡಿಯೇ ಪ್ರೌಢಿಮೆಯನ್ನು ಸಾಧಿಸಿದರು.

ಪುಂಡುವೇಷ ಹಾಗೂ ಸ್ತ್ರೀವೇಷಗಳಲ್ಲಿ ಪರಿಣತಿಯನ್ನು ಹೊಂದಿದ ಇವರು ಮಂಗಳಾದೇವಿ ಮೇಳದಲ್ಲಿ –7ವರ್ಷ, ಬಪ್ಪನಾಡು ಮೇಳದಲ್ಲಿ – 6ವರ್ಷ, ಮಧೂರು ಮೇಳದಲ್ಲಿ –3ವರ್ಷ, ಸುರತ್ಕಲ್ ಮೇಳದಲ್ಲಿ –3ವರ್ಷ, ಕೂಡ್ಲು, ಪುತ್ತೂರು, ಕಾಂತಾವರ, ಪೆರ್ಡೂರು, ಗಣೇಶಪುರ, ಸಾಲಿಗ್ರಾಮ, ಕುಂಟಾರು ಮೇಳಗಳಲ್ಲಿ ಒಂದೊಂದು ವರ್ಷಗಳ ತಿರುಗಾಟ ಮಾಡಿದ್ದಾರೆ.

ತೆಂಕುವುತ್ತಾ ಬಡಗು ತಿಟ್ಟುಗಳಲ್ಲಿ ವೇಷಧಾರಿಯಾಗಿ ಅನುಭವಿಗಳಿಸಿರುವ ಇವರು ಅಭಿಮನ್ಯು, ಚೆನ್ನಯ, ಕುಶಲವ, ಚಂಡಮುಂಡರು, ಭ್ರಮರಕುಂತಳೆ, ಪ್ರಮೀಳೆ, ಮಾಲಿನಿ ಹಾಗೂ ತುಳು ಪ್ರಸಂಗದ ಸ್ತ್ರೀ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿರುತ್ತಾರೆ.

ಪತ್ನಿ ರಾಜೇಶ್ವರಿ ಹಾಗೂ 2 ಮಕ್ಕಳೊಂದಿಗೆ ಜೀವನ ನಡೆಸುತ್ತಿರುವ ಇವರು ಬೆನ್ನು ಮೂಳೆಗೆ ಸಂಬಧಿಸಿದ ನೋವಿನ ಯಾತನೆಗೊಳಗಾಗಿ ವೃತ್ತಿ ಜೀವನದಿಂದ ನಿವೃತ್ತರಾಗಿ ಮನೆಯಲ್ಲಿಯೇ ಇದ್ದಾರೆ.



# ಉಮೇಶ ಕುಪ್ಪೆಪದವು

*"ದೇವಿಪ್ರಸಾದ", ಕೆಲಿಂಜಾರು ಗ್ರಾಮ*
*ಕುಪ್ಪೆಪದವು ಅಂಚೆ, ಮಂಗಳೂರು*
*ಮೊ: 9741479289 / 0824-2265547.*

ಕಟೀಲು ಮೇಳದಲ್ಲಿ ಬಣ್ಣದ ವೇಷಧಾರಿಯಾಗಿ ತಿರುಗಾಟವನ್ನು ನಡೆಸುತ್ತಿರುವ ಶ್ರೀ ಉಮೇಶ ಕುಪ್ಪೆಪದವು ಇವರು ಪುಂಡುವೇಷ ಹಾಗೂ ರಾಜವೇಷವನ್ನು ಮಾಡಬಲ್ಲ ಕಲಾವಿದರಾಗಿಯೂ ಜನಮನ್ನಣೆಯನ್ನು ಪಡೆದಿದ್ದಾರೆ.

ಮಂಗಳೂರು ತಾಲೂಕಿನ ಕುಪ್ಪೆಪದವಿನ ಕೆಲಿಂಜಾರು ಗ್ರಾಮದ ರಾಮ ಮಡಿವಾಳ ಹಾಗೂ ಲೀಲಾವತಿಯವರ ಸುಪುತ್ರನಾದ ಉಮೇಶರು ತನ್ನ 7ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. 12ನೇ ವರ್ಷದಲ್ಲಿಯೇ ಯಕ್ಷಗಾನದ ಬಗ್ಗೆ ಅರಿತುಕೊಳ್ಳಬೇಕೆಂಬ ಆಸಕ್ತಿಯಿಂದ ಗುಂಡಿಮಜಲು ಗೋಪಾಲಭಟ್ ಅವರಲ್ಲಿ ನಾಟ್ಯದ ಬಗ್ಗೆ ಪರಿಪೂರ್ಣ ಮಾಹಿತಿಯನ್ನು ಪಡೆದರು. ಆಮೇಲೆ ಮೇಳ ತಿರುಗಾಟದಲ್ಲಿ ಹಿರಿಯರಾದ ಬಲಿಪ ನಾರಾಯಣ ಭಾಗವತರ ಮಾರ್ಗದರ್ಶನವನ್ನು ಪಡೆದುಕೊಂಡರು.

32 ವರ್ಷ ಪ್ರಾಯದ ಉಮೇಶ ಕುಪ್ಪೆಪದವು ಇವರ ಮನೆತನದವರಾದ ಸಾಣೂರು ಭುಜಂಗ ಮಡಿವಾಳರು ನಾಟಕೀಯ ವೇಷ ಹಾಗೂ ಕಿರೀಟ ವೇಷದಲ್ಲಿ ಹೆಸರುವಾಸಿಯಾಗಿದ್ದಾರೆ. ಹಾಗಾಗಿ ಅವರ ಆದರ್ಶವು ಹಾಗೂ ಯಕ್ಷಗಾನದ ಪರಿಸರವು ಇವರ ಕಲಾ ಉತ್ತೇಜನಕ್ಕೆ ಕಾರಣವಾಯಿತು.

ಬಣ್ಣದ ವೇಷಗಳಲ್ಲಿ ಪ್ರಸಿದ್ಧಿಗೊಂಡಿರುವ ಇವರು ಮಹಿಷಾಸುರ, ಶುಂಭ, ತಾಟಕಿ, ಶೂರ್ಪನಖಿ, ಮತ್ಸ್ಯ, ವರಾಹ, ಪುರುಷಾಮೃಗ, ರಾವಣ, ಭೀಮ, ಕುಂಭಕರ್ಣ, ವಜ್ರದುಂಬಿ ಮುಂತಾದ ಪಾತ್ರಗಳನ್ನು ಮಾಡುತ್ತಿದ್ದಾರೆ. ಆರಂಭಕ್ಕೆ ಕಟೀಲು ಮೇಳದಲ್ಲಿ 10 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ. ಅನಂತರ ಇರುವೈಲು ಮೇಳ, ಚಿರುಂಭ ಭಗವತಿ ಮೇಳ, ಸಸಿಹಿತ್ಲು ಮೇಳಗಳಲ್ಲಿ ಹಾಗೂ ಕುಪ್ಪೆಪದವು ಯಕ್ಷಗಾನ ಮಂಡಳಿಯಲ್ಲಿ 10 ವರ್ಷಗಳ ಕಲಾ ಸೇವೆಯನ್ನು ಮಾಡಿ ಮತ್ತೆ ಕಟೀಲು ಮೇಳವನ್ನು ಸೇರಿದವರು ಈಗಾಗಲೇ ಒಂದು ವರ್ಷದ ತಿರುಗಾಟವನ್ನು ಪೂರೈಸಿದ್ದಾರೆ.

ಬಣ್ಣದ ವೇಷಗಳಲ್ಲದೇ ಇತರ ವೇಷಗಳಾದ ಹುಂಡ-ಪುಂಡರು, ಚಂಡ-ಪ್ರಚಂಡರು, ಮಧು-ಕೈಟಭರ ವೇಷಗಳಲ್ಲಿಯೂ ಪ್ರೌಢಿಮೆಯನ್ನು ಸಾಧಿಸಿರುವ ಇವರು ಶಂಖಾಸುರ, ದಾರಿಕಾಸುರ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ.

ಇರುವೈಲಿನಲ್ಲಿ ಬಣ್ಣದ ತರಬೇತಿಯನ್ನು ನಡೆಸಿರುವರಲ್ಲದೆ ಆಸಕ್ತರಿಗೆ ರಂಗಮಾಹಿತಿಯ ಅನುಭವವನ್ನು ನೀಡಿದ್ದಾರೆ.

ಶ್ರೀಮತಿ ಶ್ಯಾಮಲಾ ಅವರನ್ನು ವರಿಸಿ ಅಂಕಿತ ಎಂಬ ಸುಪುತ್ರಿಯನ್ನು ಪಡೆದಿದ್ದಾರೆ.ಕುಪ್ಪೆಪದವಿನಲ್ಲಿ ವಾಸವಾಗಿರುವ ಇವರು ಸ್ನೇಹ ಜೀವಿಯಾಗಿ ಯಕ್ಷಗಾನ ಅಭಿಮಾನಿಗಳ ಮನ್ನಣೆಗೆ ಪಾತ್ರರಾಗಿದ್ದಾರೆ.



## ಉಮೇಶ ಕೊಳಂಬೆ

*"ನರಂಗ ಮನೆ", ಕೊಳಂಬೆ ಬಜ್ಪೆ*
*ಮಂಗಳೂರು*
*ಮೊ: **9448663680***

ದಕ್ಷಿಣಕನ್ನಡ ಜಿಲ್ಲೆಯ ಬಜ್ಪೆ ಬಳಿಯ ಕೊಳಂಬೆ ಎಂಬಲ್ಲಿ ದೂಮಪ್ಪ ಪೂಜಾರಿ ಹಾಗೂ ಭವಾನಿ ಪೂಜಾರ್ತಿ ದಂಪತಿಯ ಪುತ್ರನಾಗಿ 1974ರಲ್ಲಿ ಜನಿಸಿದರು. 6ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ತಮ್ಮ ನಾಟ್ಯಾಭ್ಯಾಸದ ಗುರುಗಳಾದ ತಿಮ್ಮಪ್ಪ ಗುಜರನ್ ಅವರ ಪ್ರೇರಣೆಯಿಂದಾಗಿ 18ನೇ ವಯಸ್ಸಿನಿಂದ ಯಕ್ಷಗಾನವನ್ನು ಕಲಿತರು.

ತಳಕಳ ಮೇಳದಲ್ಲಿ 6 ವರ್ಷ, ಸುಂಕದಕಟ್ಟೆ ಮೇಳದಲ್ಲಿ 1 ವರ್ಷ ತಿರುಗಾಟವನ್ನು ಮಾಡಿ ಶ್ರೀ ಭಗವತಿ ಮೇಳವನ್ನು ಸೇರಿದವರು 11 ವರ್ಷಗಳ ತಿರುಗಾಟವನ್ನು ಈಗಾಗಲೇ ಪೂರೈಸಿದ್ದಾರೆ.

ವೀರಭದ್ರ, ಮಹಿಷಾಸುರ, ನಿಶುಂಭ ಮೊದಲಾದ ಬಣ್ಣದ ವೇಷಗಳನ್ನು ಮಾಡಿರುವ ಇವರಿಗೆ ಭಗವತಿ ಮೇಳದಲ್ಲಿ ಗುಳಿಗನ ಪಾತ್ರವು ಹೆಚ್ಚಿನ ಕೀರ್ತಿಯನ್ನು ತಂದುಕೊಟ್ಟಿದೆ. ವಿಜಯ, ದಾರುಕ, ತುಳು ಪ್ರಸಂಗದ ಹಾಸ್ಯ ಪಾತ್ರಗಳು ಹೀಗೆ ಹಲವಾರು ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಳೆಗಾಲದಲ್ಲಿ ಕೃಷಿಯ ಚಟುವಟಿಕೆಯಲ್ಲಿ ತೊಡಗಿರುವ ಇವರು ಬಜಪೆ ರಾಘವ ದಾಸರ ಭಾರತೀ ಕಲಾ ಆರ್ಟ್ಸ್‌ನಲ್ಲಿ ಹಲವು ವರ್ಷ ಕಾರ್ಯನಿರತರಾಗಿದ್ದರು. ಹಾಗಾಗಿ ಯಕ್ಷಗಾನದ ಆಭರಣ ತಯಾರಿಯಲ್ಲಿ ಅನುಭವವನ್ನು ಸಂಪಾದಿಸಿ ಕಸೂತಿ ಕೆಲಸದಲ್ಲಿ ನಿಪುಣರಾಗಿದ್ದಾರೆ.

ಉಮೇಶ ಕೊಳಂಬೆಯವರು ಶ್ರೀಮತಿ ಸುಮತಿಯವರನ್ನು ವರಿಸಿ ಅನುಶ್ರೀ ಹಾಗೂ ಲತೀಶ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಇವರ ಉತ್ತಮ ಕಲಾ ಸಾಧನೆಗೆ ಮುಂಬಯಿಯ ತೀಯಾ ಸಮಾಜದ ಸಂಮಾನ ಲಭಿಸಿದೆ.

ಪುಂಡುವೇಷ, ಬಣ್ಣದ ವೇಷ ಹಾಗೂ ರಾಜವೇಷ ವೇಷಗಳಲ್ಲಿ ಪರಿಣತಿಯನ್ನು ಪಡೆದಿರುವ ಉಮೇಶ ಕೊಳಂಬೆ ಅವರು ಸಸಿಹಿತ್ಲು ಶ್ರೀ ಭಗವತೀ ಮೇಳದಲ್ಲಿ ತಮ್ಮ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.



## ಎಂ.ಟಿ.ಎಸ್. ಕುಲಾಲ್

*ಯಕ್ಷ ಕೃಪಾ ನಿವಾಸ, ಬೇಡ ಗುಡ್ಡೆ,*
*ಕುಡ್ತಲ್ತಡ್ಕ ಅಂಚೆ- ಕನ್ಯಾನ*
*ಬಂಟ್ವಾಳ*

ಮೋಷಕ ಪಾತ್ರ ಹಾಗೂ ಹಾಸ್ಯ ಪಾತ್ರಗಳನ್ನು ನಿರ್ವಹಿಸುತ್ತಾ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುವ ಕಲಾವಿದರು ಎಂ.ಟಿ.ಎಸ್. ಕುಲಾಲ್.

ಕಾಸರಗೋಡು ಜಿಲ್ಲೆಯ ಕಾಂತಿಲ ಗ್ರಾಮದ ಚಕ್ರು ಮೂಲ್ಯ ಹಾಗೂ ಗೌರಿ ದಂಪತಿಯ ಸುಪುತ್ರನಾಗಿ 1947 ರಲ್ಲಿ ಜನಿಸಿದರು.

4ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ ಇವರು ತಂದೆಯವರ ಹಾಗೂ ಟೈಲರಾಗಿದ್ದ ಮಾವ ಐತಪ್ಪ ಕುಲಾಲ್ ಅವರ ಪ್ರೇರಣೆಯಿಂದ ಮಾವನಾದ ಬೇತಕುಂಞಿ ಕುಲಾಲ್ ಅವರಿಂದ ಯಕ್ಷಗಾನ ನಾಟ್ಯವನ್ನು ಕಲಿತರು.

ಧರ್ಮಸ್ಥಳ ಮೇಳ –2 ವರ್ಷ, ಮುಲ್ಕಿ ಮೇಳ –3ವರ್ಷ, ಸುರತ್ಕಲ್ ಮೇಳ –23ವರ್ಷ, ಕುಂಬ್ಳೆ ಮೇಳ –3 ವರ್ಷ, ಬಪ್ಪನಾಡು ಮೇಳ –3ವರ್ಷ, ಕದ್ರಿ ಮೇಳ –3 ವರ್ಷ ಹಾಗೂ ಪ್ರಸ್ತುತ ಕಟೀಲು ಮೇಳದಲ್ಲಿ 10ನೇ ವರ್ಷದ ತಿರುಗಾಟವನ್ನು ಮಾಡುತ್ತಾ ಬರುತ್ತಿದ್ದಾರೆ.

ರಾಜವೇಷ, ಮೋಷಕ ಪಾತ್ರ ಹಾಗೂ ಹಾಸ್ಯ ವೇಷದಲ್ಲಿ ಪರಿಣತಿಯನ್ನು ಪಡೆದಿರುವ ಇವರು ಭಾಗವತಿಕೆಯ ವಿಭಾಗದಲ್ಲೂ ಹವ್ಯಾಸವನ್ನು ಬೆಳೆಸಿದ್ದಾರೆ.

ಶ್ರೀಮತಿ ಸವಿತಾ ಕುಲಾಲ್ ಇವರನ್ನು ವರಿಸಿರುವ ಇವರು ಸುಜಾತ, ದೇವಿಪ್ರಸಾದ್, ಗುರು ಪ್ರಸನ್ನ ಎಂಬ ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾಸೇವೆಗೆ ಅನೇಕ ಪುರಸ್ಕಾರಗಳು ದೊರಕಿವೆ. ಇವರ ತಂದೆಯವರಾದ ಪಕ್ರು ಮೂಲ್ಯರು ಮೇಳದಲ್ಲಿ ನೇಪಥ್ಯ ಸಹಕಾರಿಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.



## ಐತಪ್ಪ ಎಸ್. ವರ್ಕಾಡಿ

*ತಿಮ್ಮಂಗುರವೆ ಮನೆ, ಧರ್ಮನಗರ*
*ವರ್ಕಾಡಿ ಅಂಚೆ, ವಯಾ ಮಂಜೇಶ್ವರ- 671323*
*ಮೊಬೈಲ್: 9447401788.*

ಕಲಾಮಾತೆಯ ಸೇವೆಯನ್ನು ಮಾಡುವ ಉದ್ದೇಶದಿಂದ ಕಲಾವಿದರಾಗಿ, ಮೇಳಗಳ ವ್ಯವಸ್ಥಾಪಕರಾಗಿ ಯಕ್ಷರಂಗದಲ್ಲಿಯೂ ಜೀವನರಂಗದಲ್ಲಿಯೂ ಬಹು ವಿಧದ ಏರಿಳಿತಗಳನ್ನು ಕಂಡವರು ಎಸ್. ಐತಪ್ಪ ವರ್ಕಾಡಿ.

ಮಂಜೇಶ್ವರ ಸಮೀಪದ ವರ್ಕಾಡಿ ಎಂಬಲ್ಲಿ ತಾ.22-11-1964ರಲ್ಲಿ ಶ್ರೀ ಕೊರಗಪ್ಪ ಹಾಗೂ ಶ್ರೀಮತಿ ಉಜಾರು ದಂಪತಿಯ ಪುತ್ರನಾಗಿ ಜನಿಸಿದ ಐತಪ್ಪನವರು 10ನೇ ತರಗತಿಯವರೆಗಿನ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಆಮೇಲೆ ಶ್ರೀ ಧರ್ಮಸ್ಥಳ ಮೇಳದ ಪುಂಡು ವೇಷಧಾರಿ ಶ್ರೀ ತಾರನಾಥ ಬಲ್ಯಾಯ ವರ್ಕಾಡಿ ಇವರ ಪ್ರೇರಣೆಯಂತೆ ಯಕ್ಷರಂಗವನ್ನು ಸೇರಿದರು.

ಶ್ರೀ ತಾರನಾಥ ಬಿಲ್ಯಾಯಿ ಹಾಗೂ ಶ್ರೀ ಶಂಕರ ಆಚಾರಿ ಕೋಳ್ಯೂರು ಇವರಿಂದ ನಾಟ್ಯವನ್ನು ಅಭ್ಯಾಸಿಸಿ ಬೆಳ್ಮಣ್ ಮೇಳ- 1 ವರ್ಷ, ಸುಬ್ರಹ್ಮಣ್ಯ ಮೇಳದ- 1 ವರ್ಷ, ನಂದಾವರ ಮೇಳ- 1 ವರ್ಷ, ಅರುವ ಮೇಳದಲ್ಲಿ- 1 ವರ್ಷ, ಗಣೇಶಪುರ ಮೇಳ- 1ವರ್ಷ ಹೀಗೆ 5 ವರ್ಷಗಳ ತನಕ ಕಲಾವಿದರಾಗಿ ತಿರುಗಾಟವನ್ನು ಮಾಡಿದ ಮೇಲೆ 10 ವರ್ಷಗಳ ಪರಿಯಂತರ ವಿವಿಧ ಮೇಳಗಳ ವ್ಯವಸ್ಥಾಪಕತ್ವವನ್ನು ಮಾಡಿದ್ದಾರೆ.

ಶ್ರೀಯುತರು ವಾಮನ, ಲಕ್ಷ್ಮಣ, ಹನೂಮಂತ, ದೇವೇಂದ್ರ, ಚಂಡ ಮುಂಡ ಹೀಗೆ ಪುರಾಣಗಳಲ್ಲಿ ಬರುವ ಪಾತ್ರಗಳಲ್ಲದೆ, ತುಳು ಕಾಲ್ಪನಿಕ ಪ್ರಸಂಗಗಳ ರಾಜ ವೇಷ ಖಳನಾಯಕ ಮುಂತಾದ ಪಾತ್ರಗಳನ್ನು ನಿರ್ವಹಿಸಿರುತ್ತಾರೆ. ಪಟ್ಟದವಿಷ, ರತ್ನ ಮಯ್ಯೂರ, ಪಂಜದ ಪಂಜುರ್ಲಿ ಮುಂತಾದ ತುಳು ಕಾಲ್ಪನಿಕ ಪ್ರಸಂಗಗನ್ನು ರಚಿಸಿ ರಂಗದಲ್ಲಿ ಪ್ರದರ್ಶಿಸಿದ್ದಾರೆ.

ಇವರು ತಾವೇ ವೇಷಭೂಷಣಗಳನ್ನು ರಚಿಸಿ ಇರುವೈಲು ಮೇಳ, ವರ್ಕಾಡಿ ಮೇಳ, ಪುತ್ತೂರು ಮೇಳ ಕುಂಟಾರು ಮೇಳಗಳನ್ನು ಮುನ್ನಡೆಸಿದ್ದಾರೆ. ಮಾತ್ರವಲ್ಲದೆ "ಶ್ರೀ ಉದನೇಶ್ವರರ ಯಕ್ಷಗಾನ ಸಂಘ ಪೆರಡಾಲ ಬದಿಯಡ್ಕ" ಇಲ್ಲಿ ನಾಟ್ಯ ತರಬೇತಿಯನ್ನು ನಡೆಸಿ ಹಲವು ಮಂದಿ ಶಿಷ್ಯರಿಗೆ ತರಬೇತಿಯನ್ನು ನೀಡುತ್ತಿದ್ದಾರೆ.

ಇವರ ಕಲಾ ಸೇವೆಯನ್ನು ಕಂಡು ಉದನೇಶ್ವರ ಯಕ್ಷಗಾನ ಸಂಘ, ಶ್ರೀ ಶಂಕರನಾರಾಯಣ ಯಕ್ಷಗಾನ ಸಂಘ ಕೋಳ್ಯೂರು, ಯಕ್ಷ ಕಲಾ ಭಾರತಿ ಉಪ್ಪಳ, ಶ್ರೀ ವಿಷ್ಣು ಯಕ್ಷಗಾನ ಸಂಘ ನಿಟ್ಟೆ, ಪೇರೂರು ಜಾರು ಮುಂತಾದವರ ವತಿಯಿಂದ ಸಂಮಾನಗಳು ದೊರೆತಿವೆ.

ಈಗ ಯಕ್ಷಗಾನ ವೃತ್ತಿ ಜೀವನದಿಂದ ಹಿಂದೆ ಸರಿದು ವರ್ಕಾಡಿ ಸಮೀಪ ಶ್ರೀ ಅಯ್ಯಪ್ಪ ಯಕ್ಷ ಕಲಾ 'ರಂಗವನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ನಡೆಸುತ್ತಿರುವರು. ಜೊತೆಗೆ ಸ್ವಂತ ವೇಷ ಭೂಷಣವನ್ನು ಹೊಂದಿದ್ದು, ಹವ್ಯಾಸಿ ಸಂಘ ಸಂಸ್ಥೆಗಳಿಗೆ ಬಾಡಿಗೆ ನೀಡುತ್ತಾರೆ.

ಹೇಳಿಕೆ ಮೇರೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಾಸೇವೆ ಮಾಡುವ ಇವರು ಧರ್ಮಪತ್ನಿಯಾದ ಸುಮತಿ ಹಾಗೂ ಮಕ್ಕಳಾದ ಭಾಗೀರಥಿ, ತಾರಾವತಿ ಎಂಬ ಇಬ್ಬರು ಮಕ್ಕಳ ಜೊತೆಗೆ ಜೀವನವನ್ನು ಸಾಗಿಸುತ್ತಿದ್ದಾರೆ.



## ಕಮಲಾಕ್ಷ ಶೆಟ್ಟಿಗಾರ್

*ಬೆಂಜನಪದವು, ಅಮ್ಮುಂಜೆ ಅಂಚೆ ಮತ್ತು ಗ್ರಾಮ*
*ಬಂಟ್ವಾಳ ತಾಲೂಕು*
*ಮೊ: 9535617849.*

ಪರಿಸರದಿಂದ ಪ್ರಭಾವಿತರಾಗಿ ರಂಗಪ್ರವೇಶ ಮಾಡಿ ಪ್ರಸಕ್ತ ಸಾಲಿನಲ್ಲಿ ಕಟೀಲು ಮೇಳದ ಕಲಾವಿದರಾಗಿದ್ದುಕೊಂಡು ತಮ್ಮ ಕಲಾ ಪ್ರತಿಭೆಯನ್ನು ತೋರುತಿರುವವರು ಶ್ರೀ ಕಮಲಾಕ್ಷ ಶೆಟ್ಟಿಗಾರ್.

33ವರ್ಷ ವಯೋಮಾನವರಾದ ಇವರು ಬೆಂಜನಪದವಿನ ಭದ್ರತೋಟದಲ್ಲಿ ಶ್ರೀ ದೇವು ಶೆಟ್ಟಿಗಾರ್ ಹಾಗೂ ಶ್ರೀಮತಿ ಉಮಾವತಿ ಶೆಟ್ಟಿಗಾರ್ತಿ ದಂಪತಿಗೆ ಮಗನಾಗಿ ಜನಿಸಿದರು.

6ನೇ ತರಗತಿಯವರೆಗೆ ಶಾಲೆಗೆ ಹೋಗಿ 12ನೇ ವರುಷಕ್ಕೆ ಯಕ್ಷಗಾನ ಪ್ರವೇಶಿಸಿದ ಇವರು ಬೆಳ್ಳಾರೆ ಮಂಜುನಾಥ ಭಟ್‌ರಿಂದ ನಾಟ್ಯಾಭ್ಯಾಸವನ್ನು ಮಾಡಿ ರಂಗವನ್ನು ಪ್ರವೇಶಿಸಿರುವರು.

ತಳಕಳ ಮೇಳದಲ್ಲಿ 6 ವರ್ಷ, ಬಪ್ಪನಾಡು, ಪುತ್ತೂರು ಮೇಳದಲ್ಲಿ 2 ವರ್ಷ, ಸಸಿಹಿತ್ಲು ಮೇಳದಲ್ಲಿ 2 ವರ್ಷ ಹಾಗೂ ಎಡನೀರು ಮೇಳದಲ್ಲಿ 1 ವರ್ಷಗಳ ಕಲಾಸೇವೆಯನ್ನು ಮಾಡಿ ಪ್ರಸ್ತುತ ಸಾಲಿನಲ್ಲಿ ಕಟೀಲು ಮೇಳದ ಕಲಾವಿದರಾಗಿ ತಿರುಗಾಟ ನಡೆಸುತ್ತಿದ್ದಾರೆ.

ಚಾರಕ, ವಿಜಯ, ಸಖಿ, ಮುಖ್ಯ ಸ್ತ್ರಿ ವೇಷ ಮೊದಲಾದ ಹಾಸ್ಯ ಮತ್ತು ಸ್ತ್ರೀ ಪಾತ್ರಗಳ ನಿರ್ವಹಣೆಯಲ್ಲಿ ನೈಪುಣ್ಯತೆಯನ್ನು ಸಾಧಿಸಿರುವ ಇವರು. ಸಿದ್ಧಕಟ್ಟೆ ಪದ್ಮನಾಭ ಶೆಟ್ಟಿಗಾರರ ಸಂಬಂಧಿಕರಾಗಿದ್ದಾರೆ.

ಶ್ರೀಮತಿ ಲೋಹಿತಾಕ್ಷಿಯವರನ್ನು ವಿವಾಹವಾಗಿ ಸಂಸಾರ ನಡೆಸುತ್ತಿರುವ ಇವರು ಮದ್ದಳೆಯ ನುಡಿಸುವಿಕೆಯಲ್ಲಿ ಆಸಕ್ತಿಯನ್ನು ತಾಳಿ ಅಭ್ಯಾಸ ಮಾಡಿರುವರು.



## ಕುಸುಮಾಕರ್ ಮುಡಿಪು

*ಮುಡಿಪು, ಕೈರಂಗಳ ಗ್ರಾಮ, ಅಂಚೆ*
*ಬಂಟ್ವಾಳ ತಾಲೂಕು- 574153*
*ಮೊ; 9945055534*

ತಂದೆಯವರಿಂದ ಹಾಗೂ ಕಾವೂರು ಕೇಶವರಿಂದ ಪ್ರೇರಿತರಾಗಿ ಕರಾವಳಿಯ ಕಲೆ ಯಕ್ಷಗಾನದತ್ತ ಒಲವು ಮೂಡಿಸಿ ಕಲಾವಿದರನಾಗಿ ಮೆರೆದ ಶ್ರೀಯುತ ಕುಸುಮಾಕರ ಮುಡಿಪುರವರು ಪ್ರಸಕ್ತ ಹೇಳಿಕೆಯ ಮೇರೆಗೆ ಕಾರ್ಯ ಕ್ರಮಕ್ಕೆ ಭಾಗವಹಿಸಿಕಲಾಸೇವೆಯನ್ನು ಮಾಡುತ್ತಿದ್ದಾರೆ.

ಮುಡಿಪುವಿನಲ್ಲಿ ಕೃಷ್ಣ-ರುಕ್ಮಿಣಿ ದಂಪತಿಗೆ 21-05-1977ರಲ್ಲಿ ಸುಪುತ್ರನಾಗಿ ಜನಿಸಿದ ಇವರು 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ 14ನೇ ವರ್ಷದಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಕಾಲಿರಿಸಿದರು.

ಹರಿನಾರಾಯಣ ಬೈಪಾಡಿತ್ತಾಯ, ಲೀಲಾವತಿ ಬೈಪಾಡಿತ್ತಾಯ ಮತ್ತು ಲಕ್ಷ್ಮೀಶ ಅಮ್ಮಣ್ಣಾಯರಿಂದ ಚೆಂಡೆ-ಮದ್ದಳೆ ನುಡಿಸುವುದನ್ನೂ ಅಭ್ಯಾಸಿಸಿದ ಇವರು ಕರ್ನಾಟಕ ಮೇಳ -4ವರ್ಷ.ಕದ್ರಿ ಮೇಳ - 3ವರ್ಷ, ಧರ್ಮಸ್ಥಳ -2ವರ್ಷ ಹಾಗೂ ಮಲ್ಲ, ಕಟೀಲು, ಪುತ್ತೂರು, ಕುಂಟಾರು ಮೇಳಗಳಲ್ಲಿ ತಲಾ ಒಂದೊಂದು ವರ್ಷಗಳ ತಿರುಗಾಟ ಮಾಡಿರುವರು.

ಇವರಿಗೆ ವೇಷಗಾರಿಕೆಯನ್ನು ಮಾಡಿದ ಅನುಭವ ಇದ್ದು ವರುಣ, ಮಾರುತ ಮೊದಲಾದ ಪುಂಡುವೇಶಗಳನ್ನು ಮಾಡಿದ್ದಾರೆ.

ಶ್ರೀ ಭಾರತಿ ಮಕ್ಕಳ ಯಕ್ಷಗಾನ ಕಲಾತಂಡದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ಶೈಕ್ಷಣಿಕವಾಗಿ ಮಕ್ಕಳ ಕಲಾ ಪ್ರತಿಭೆಗೆ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ.

ಸ್ವಂತ ಉದ್ಯೋಗದಲ್ಲಿ ತೊಡಗಿಕೊಂಡಿರುವ ಇವರು. ಪತ್ನಿ ಜಯಲಕ್ಷ್ಮೀ ಕೊಪ್ಪ ಮತ್ತು ಮಕ್ಕಳಾದ ಶುಭಶ್ರೀ ಮತ್ತು ಸಾತ್ವಿಕರೊಂದಿಗೆ ಕೃತಾರ್ಥ ಜೀವನ ನಡೆಸುತ್ತಿದ್ದಾರೆ.

ಇವರಿಗೆ ಪುತ್ತೂರು, ಕುಂಟಾರು, ಮುಂಬಯಿ ಹಾಗೂ ದ.ಕ. ಜಿಲ್ಲಾ ಪರಿಷತ್ತಿನಿಂದ ಪುರಸ್ಕಾರಗಳು ಲಭಿಸಿವೆ.



## ಕೃಷ್ಣ ಭಟ್ ಪುಂಡಿಕ್ಯಾ

*ಪುಂಡಿಕಾಯಿ ಮನೆ. ಕಾರಡ್ಕ ಗ್ರಾಮ,*
*ಮುಳ್ಳೇರಿಯ ಅಂಚೆ, ಕಾಸರಗೋಡು ತಾಲೂಕು.*
*ಮನೆ ದೂರವಾಣಿ 04994-261793.*

ಮೇರು ಪಂಕ್ತಿಯ ಕಲಾವಿದರ ಸಾಲಿಗೆ ಸೇರುವ ಶ್ರೀಯುತ ಪುಂಡಿಕ್ಯಾ ಕೃಷ್ಣಭಟ್ಟರು ಚೆಂಡೆಮದ್ದಳೆ ವಾದಕರಾಗಿ ಬಹಳಷ್ಟು ಸಮಯ ತಿರುಗಾಟ ಮಾಡಿದ ಅನುಭವಿ ಕಲಾವಿದರು ಇವರಾಗಿದ್ದಾರೆ.

30-10-1943ರಂದು ಅಚ್ಯುತ ಭಟ್ಟ ಹಾಗೂ ಸರಸ್ವತಿ ಅಮ್ಮ ದಂಪತಿಗೆ ಮಗನಾಗಿ ಜನಿಸಿದ ಇವರು 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಪಡೆದಿದ್ದಾರೆ.

ದಿ। ಕುದ್ರೆ ಕೂಡ್ಲು ರಾಮಭಟ್ಟರಿಂದ ಚೆಂಡೆ ಮದ್ದಳೆ ಅಭ್ಯಾಸ ಮಾಡಿದ ಇವರು 1962ರಿಂದ ಮೇಳ ತಿರುಗಾಟವನ್ನು ಆರಂಭಿಸಿ 4 ದಶಕಗಳ ಕಾಲ ಕಲಾ ಸೇವೆಯನ್ನು ಮಾಡಿದ್ದಾರೆ.

ಮುಲ್ಕಿ ಮೇಳದಲ್ಲಿ 5 ವರ್ಷ, ಕೂಡ್ಲು ಮೇಳದಲ್ಲಿ 4 ವರ್ಷ. ಕಟೀಲು ಮೇಳದಲ್ಲಿ 10ವರ್ಷ, ಕರ್ನಾಟಕ ಮೇಳದಲ್ಲಿ 3ವರ್ಷ, ಕೊಲ್ಲೂರು ಮೇಳದಲ್ಲಿ 2 ವರ್ಷ ಕದ್ರಿಮೇಳದಲ್ಲಿ 10 ವರ್ಷ, ಬಪ್ಪನಾಡು, ಮಧೂರು ಮೇಳಗಳಲ್ಲಿ ಎರಡೆರಡು ವರ್ಷಗಳು ಹಾಗೂ ಪುತ್ತಿಗೆ, ಮುಜುಂಗಾವು ಮೇಳಗಳಲ್ಲಿ ಒಂದೊಂದು ವರ್ಷಗಳ ತಿರುಗಾಟ ಮಾಡಿದ ಹಿರಿಯರು ಇವರಾಗಿದ್ದಾರೆ.

ಪಡ್ರೆ, ಆರ್ಲಪದವು, ನುಳಿಯಾಳು, ಕನ್ಯಾನ, ಕೋಟೂರು, ಮುಳ್ಳೇರಿಯಾ, ಸುಳ್ಯ, ಬೋವಿಕ್ಕಾನ, ಪುಂಡಿಕ್ಯಾ ಮೊದಲಾದ ಪ್ರದೇಶಗಳಲ್ಲಿ ಹಿಮ್ಮೇಳ ವಾದನದ ತರಬೇತಿಯನ್ನು ನೀಡಿರುವ ಇವರು ಹಲವಾರು ಮಂದಿ ಶಿಷ್ಯರನ್ನು ಪಡೆದಿದ್ದಾರೆ.

ಇವರ ಕಲಾಸೇವೆಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ದೆಹಲಿ ಕರ್ನಾಟಕ ಸಂಘದ ಸಂಮಾನ, ಹೊನ್ನಾವರ ದೇವಮ್ಮ ರಾಮನಾಯ್ಕರ ಪ್ರಶಸ್ತಿ, ತೆಂಕುತಿಟ್ಟು ಹಿತರಕ್ಷಣಾ ವೇದಿಕೆ, ಸುಳ್ಯ ಇವರಿಂದ ಬಲಿಪ ಪ್ರಶಸ್ತಿ, ಇವರಿಗೆ ಸಂದಿವೆ.

ಕೋಟೂರು ಕಾರ್ತಿಕೇಯ ನಿಲಯ, ಪಡ್ರೆ ಚಂದು ಸ್ಮಾರಕ ಸಮಿತಿ, ಮೂಡಬಿದ್ರಿ ಸಮಾಜಮಂದಿರ, ಮುಂಡೋಳು ದೇವಸ್ಥಾನ, ಆರ್ಲಪದವು ಸುಬ್ರಹ್ಮಣ್ಯೇಶ್ವರ ಸಂಘ, ಪುಂಡೂರು ಮಹಾಲಿಂಗೇಶ್ವರ ಸಂಘ, ತಿರುಮಲ ವೆಂಕಟರಮಣ ಶ್ರಾವಣಮಾಸದ ಯಕ್ಷಗಾನ ಸಂಘ, ಬೊಳುವಾರು ಆಂಜನೇಯ ಯಕ್ಷಗಾನ ಸಂಘ, ಬೊಳುವಾರು ಮಹಿಳಾ ಯಕ್ಷಗಾನ ಸಂಘ, ಹೀಗೆ ಅನೇಕ ಸಂಘ- ಸಂಸ್ಥೆಗಳಿಂದ ಸಂಮಾನಗಳನ್ನು ಸ್ವೀಕರಿಸಿದ ಹೆಗ್ಗಳಿಕೆ ಇವರದು. ಇತ್ತೀಚೆಗೆ ಮಂಗಳೂರು ಪುರಭವನದಲ್ಲಿ ಜ್ಞಾನಾಮೃತ ಮಂಗಳೂರು ಸಂಸ್ಥೆಯ ಉದ್ಘಾಟನಾ ಸಮಾರಂಭದ ಸಂಮಾನವು ಕೂಡಾ ಇವರಿಗೆ ಲಭಿಸಿದೆ.

ಶ್ರೀಮತಿ ಇಂದುಮತಿಯನ್ನು ಪಾಣಿಗ್ರಹಣ ಮಾಡಿಕೊಂಡು ರಾಜೇಂದ್ರ ಪ್ರಸಾದ್, ಸ್ವರ್ಣಪ್ರಭಾ, ಶಾಂತಕುಮಾರಿ, ಎಂಬ ಮಕ್ಕಳನ್ನು ಪಡೆದು ಕೃತಾರ್ಥರೆನಿಸಿರುವ ಇವರು 2002ರಿಂದ ಅಸೌಖ್ಯದ ಕಾರಣ ಯಕ್ಷಗಾನದಿಂದ ನಿವೃತ್ತರಾಗಿದ್ದಾರೆ.



## ಕೃಷ್ಣ ಮುಡಿಪು

*ಮುಡಿಪು, ಕೈರಂಗಳ ಗ್ರಾಮ, ಅಂಚೆ*
*ಬಂಟ್ವಾಳ ತಾಲೂಕು- 574153*
***ಮೊ; 9945055534***

ಸ್ತ್ರೀಪಾತ್ರದ ಮೂಖೇನ ಜನಪ್ರಿಯರಾಗಿರುವ ಶ್ರೀ ಮುಡಿಪು ಕೃಷ್ಣರವರು ಪ್ರಸ್ತುತ ಮೇಳದಿಂದ ನಿವೃತ್ತರಾಗಿ ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮುಡಿಪು ಎಂಬಲ್ಲಿ ಶ್ರೀ ಪಕೀರ ಜೋಗಿ ಹಾಗೂ ಶ್ರೀಮತಿ ಸೇಸಮ್ಮ ದಂಪತಿ ಪುತ್ರರಾಗಿ ಮುಡಿಪು ಕೃಷ್ಣರು ಜನಿಸಿದರು.

ಆನಂದ ಪುರುಷರವರಿಂದ ಯಕ್ಷಗಾನದ ನಾಟ್ಯಾಭ್ಯಾಸವನ್ನು ನಡೆಸಿ, ಸಜಿಪ ಮೋನಪ್ಪ ಶೆಟ್ಟಿ ಹಾಗೂ ಕುಂಬ್ಳೆ ಸೇಸಪ್ಪರವರಿಂದ ಅರ್ಥಗಾರಿಕೆಯ ಬಗ್ಗೆ ಅಧ್ಯಯನ ಮಾಡಿದ್ದಾರೆ.

ವೇಣೂರು ಮೇಳ 2ವರ್ಷ, ಸುಂಕದ ಕಟ್ಟೆ ಮೇಳ 2ವರ್ಷ, ಇರಾಮೇಳ 2ವರ್ಷ, ಕಟೀಲು ಮೇಳ 2ವರ್ಷ, ಕೂಡ್ಲು ಮೇಳ 1ವರ್ಷ, ಭಗವತಿ ಮೇಳ 2ವರ್ಷ, ಬಪ್ಪನಾಡು ಮೇಳ 2ವರ್ಷ ಹೀಗೆ ಮೇಳಗಳಲ್ಲಿ ತಿರುಗಾಟವನ್ನು ನಡೆಸಿದ್ದಾರೆ.

ಹಿತವಾದ ನಾಟ್ಯ, ಮಿತವಾದ ಮಾತುಗಾರಿಕೆ ಇವರ ಪಾತ್ರದಲ್ಲಿ ಕಂಡು ಬರುತ್ತದೆ. ಪಾತ್ರ ಚಿತ್ರಣದಲ್ಲಿ ಅತಿರೇಕವನ್ನು ಮಾಡಲಾರರು. ಪ್ರಚಾರವನ್ನು ಬಯಸದೆ ಮನತೃಪ್ತಿಗಾಗಿ ಕಲಾಸೇವೆಯನ್ನು ಮಾಡಿರುವ ಇವರು ಸುಭದ್ರೆ, ಚಿತ್ರಾಂಗದೆ, ರೇಣುಕೆ, ಗೌರಿ, ಭ್ರಮರಕುಂತಳೆ ಮುಂತಾದ ಪಾತ್ರಗಳಿಗೆ ಜೀವ ತುಂಬಿ ಕೀರ್ತಿ ಸಂಪನ್ನರಾಗಿದ್ದಾರೆ.

ಭಾರತೀ ಕಲಾ ಆರ್ಟ್ಸ್‌ನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಇವರು ಮೇಳ ತಿರುಗಾಟವನ್ನು ನಿಲ್ಲಿಸಿದ ಮೇಲೆ ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

ಮುಡಿಪು ಕೃಷ್ಣರವರ ಸುಪುತ್ರರಾಗಿರುವ ಕುಸುಮಾಕರ ಮುಡಿಪು ಇವರು ಚೆಂಡೆ ಮದ್ದಳೆಯ ನುಡಿತ ಬಡಿತಗಳಲ್ಲಿ ಪಳಗಿದವರಾಗಿದ್ದಾರೆ. ತಂದೆಯಂತೆ ಇವರು ಕೂಡಾ ಮೇಳ ತಿರುಗಾಟವನ್ನು ಮಾಡಿ ಬೇರೆ ಉದ್ಯೋಗ ನಿಮಿತ್ತ ಮೇಳ ತಿರುಗಾಟವನ್ನು ನಿಲ್ಲಿಸಿ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಸಂತೃಪ್ತಿಯ ಜೀವನವನ್ನು ನಡೆಸುತ್ತಿರುವ ಮುಡಿಪು ಕೃಷ್ಣರವರಿಗೆ ಹವ್ಯಾಸಿ ಬಳಗ ಕದಿರೆಯ ದಶಮಾನ ಸಂಮಾನ ಶತಕದ ಸಂಮಾನ ಗೌರವವು ಲಭಿಸಿರುವುದಲ್ಲದೆ ಹಲವೆಡೆಯ ಸಂಘ ಸಂಸ್ಥೆಗಳು ಗೌರವಿಸಿ ಪುರಸ್ಕರಿಸಿವೆ.



## ಕೃಷ್ಣ ಬಿ. ಶೆಟ್ಟಿ, ಬೆಳ್ತಂಗಡಿ

*ಲಾಯಿಲ ಗ್ರಾಮ, ಕಾಶಿಬೆಟ್ಟು,*
*ಬೆಳ್ತಂಗಡಿ ತಾಲೂಕು, ದ.ಕ.*
*ಮೊಬೈಲ್ -9481919757*

ವೇಷಗಾರಿಕೆ ಹಾಗೂ ಮದ್ದಳೆ ಎರಡೂ ವಿಭಾಗಗಳಲ್ಲಿ ಪರಿಣತಿಯನ್ನು ಸಾಧಿಸಿದ ಹಿರಿಯ ಅನುಭವಿ ಕಲಾವಿದ ಶ್ರೀಯುತ ಬಿ.ಕೃಷ್ಣ ಶೆಟ್ಟಿ ಬೆಳ್ತಂಗಡಿ ಇವರು ಶ್ರೀ ಭಗವತಿ ಮೇಳದಲ್ಲಿ ಪ್ರಸ್ತುತಸಾಲಿನ ತಿರುಗಾಟ ನಡೆಸುತ್ತಾ ಇದ್ದಾರೆ.

ಬೆಳ್ತಂಗಡಿ ತಾಲೂಕಿನಲ್ಲಿ ಬಿ. ಮುಂತಪ್ಪ ಶೆಟ್ಟಿ ಮತ್ತು ಕಲ್ಯಾಣಿ ದಂಪತಿಗೆ 13-2-1947ರಂದು ಜನಿಸಿದ ಇವರು 5ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುವರು.

14ನೇ ವಯಸ್ಸಿನಲ್ಲಿ ಅಳಿಕೆ ರಾಮಯ್ಯ ರೈಯವರಿಂದ ನಾಟ್ಯವನ್ನು, ದಿ| ಅಂತರ ದೇವಾರಾಜ ಹೆಗ್ಡೆಂಯುವರಿಂದ ಮದ್ದಳೆ ವಾದನವನ್ನು ಅಭ್ಯಾಸಮಾಡಿದರು. ಆಮೇಲೆ ಮದ್ದಕ್ಕ ಗೋಪಾಲ ಶೆಟ್ಟಿಯವರ ಪ್ರೇರಣೆಯೊಂದಿಗೆ ಯಕ್ಷಗಾನ ಕ್ಷೇತ್ರದ ಒಳಹೊಕ್ಕಿದರು.

ಕರ್ನಾಟಕ ಮೇಳದಲ್ಲಿ 2 ವರ್ಷ, ಬೆಳ್ತಂಗಡಿ ಭುವನೇಶ್ವರಿ ಮೇಳದಲ್ಲು 1ವರ್ಷ, ಕೂಡ್ಲು ಮೇಳದಲ್ಲಿ 6ವರ್ಷ, ಹವ್ಯಾಸಿ ಕಲಾವಿದರಾಗಿ 38ವರ್ಷ ಹೀಗೆ ಮುಮ್ಮೇಳದ ಕಲಾವಿದರಾಗಿ ದುಡಿದ ಇವರು. 1 ವರ್ಷದಿಂದ ಭಗವತಿ ಮೇಳದಲ್ಲಿ ಕಲಾ ಸೇವೆ ಮಾಡುತ್ತಿದ್ದಾರೆ.

ಪುಂಡು, ರಾಜ, ಸ್ತ್ರೀ ವೇಷಗಳನ್ನು ನಿರ್ವಹಿಸಿರುವ ಇವರು ಶಶಿಪ್ರಭೆ ಚಿತ್ರಾಂಗದೆ, ಅಯ್ಯಪ್ಪ, ಭಸ್ಮಾಸುರ, ವಾವರ ಮೊದಲಾದ ಪಾತ್ರಗಳನ್ನು ನ್ಯಾಯ ಸಮ್ಮತವಾಗಿ ನಿರ್ವಹಿಸಿದ್ದಾರೆ. ಇಷ್ಟಲ್ಲದೆ ಹವ್ಯಾಸಿ ಕಲಾವಿದರಿಗೆ ತರಬೇತಿ ನೀಡಿದ್ದಾರೆ.

ಶ್ರೀಮತಿ ವಸಂತಿಯವರನ್ನು ಪಾಣಿಗ್ರಹಣ ಮಾಡಿಕೊಳ್ಳುವ ಮೂಲಕ ಮಮತ, ವಿನುತ, ಆರತಿ, ಭಾರತಿ, ಗುರುಪ್ರಸಾದ್ ಎಂಬ ಮಕ್ಕಳನ್ನು ಪಡೆದು ಕೃತಾರ್ಥರಾಗಿದ್ದಾರೆ.

ಕಲಾ ಸಾಧನೆಗೆ ಪ್ರತಿಫಲವಾಗಿ ಅನೇಕ ಸಂಘ ಸಂಸ್ಥೆಗಳಿಂದ ಸಂಮಾನ, ಪುರಸ್ಕಾರಗಳನ್ನು ಗಳಿಸಿದ ಹಿರಿಮೆ ಇವರದ್ದಾಗಿದೆ.



## ಕೃಷ್ಣ ಭಟ್ ಪೆರುವಾಯಿ

*"ಬರೆಮನೆ", ಪೆರುವಾಯಿ ಅಂಚೆ*
*ಬಂಟ್ವಾಳ ತಾಲೂಕು - 574260*
*ಮೊ: 9741948284.*

ಶ್ರೀ ಕೃಷ್ಣ ಭಟ್ ಪೆರುವಾಯಿ ಇವರು ಹಿರಿಯ ಮದ್ದಲೆಗಾರರಾಗಿದ್ದು ಭಗವತಿ ಮೇಳದ ಕಲಾವಿದರಾಗಿ ತಿರುಗಾಟ ನಡೆಸುತ್ತಾ ಇದ್ದಾರೆ.

ತಾಯಿಯ ತಂದೆ, ಅಜ್ಜನಾದ ಶಾಂತಿ ಮೂಲೆ ನಾರಾಯಣ ಭಟ್(ಭಾಗವತರು ಮತ್ತು ಚೆಂಡೆಮದ್ದಳೆ ವಾದಕರು) ರವರ ಪ್ರೇರಣೆಯೊಂದಿಗೆ ಯಕ್ಷಗಾನ ಕ್ಷೇತ್ರಕ್ಕೆ ಬಂದಿರುವವರು ಶ್ರೀ ಕೃಷ್ಣ ಭಟ್ ಪೆರುವಾಯಿ. ಶ್ರೀಯುತರು ಪೆರುವಾಯಿಯಲ್ಲಿ ಮಾಲಿಂಗ್ ಭಟ್ ಮತ್ತು ಶ್ರೀಮತಿ ಮೂಕಾಂಬಿಕಾ ಅಮ್ಮ ದಂಪತಿಗೆ ಸುಪುತ್ರರಾಗಿ 18-12-1953 ರಂದು ಜನಿಸಿದರು.

ಕೃಷಿಕರಾಗಿರುವ ಶ್ರೀಯುತರು 10ನೇ ತರಗತಿಗೆ ವ್ಯಾಸಂಗ ಮುಗಿಸಿ ತನ್ನ 16ನೇ ವಯಸ್ಸಿನಿಂದ ಯಕ್ಷಗಾನ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದಾರೆ.

ಅಜ್ಜ ದಿ। ಮಾಂಬಾಡಿ ನಾರಾಯಣ ಭಾಗವತರಿಂದ ಹಿಮ್ಮೇಳ ವಾದನವನ್ನು ಅಭ್ಯಸಿಸಿದ ನಂತರ ಕಟೀಲು ಮೇಳ- 6 ವರ್ಷ, ಕುಂಬ್ಳೆ ಮೇಳ- 6 ವರ್ಷ ಬಪ್ಪನಾಡು ಮೇಳ- 5 ವರ್ಷ, ಕುಂಟಾರು ಮೇಳ- 5 ವರ್ಷ, ಕದ್ರಿ ಮೇಳ- 4 ವರ್ಷ, ಮಧೂರು ಮೇಳ- 3 ವರ್ಷ, ಅರುವ ಮೇಳ- 3 ವರ್ಷ, ಕಾಟಿಪಳ್ಳ ಮೇಳ- 3 ವರ್ಷ, ಪುತ್ತೂರು- 1 ವರ್ಷ, ನಂದಾವರ ಮೇಳ- 1 ವರ್ಷ ಭಗವತಿ ಮೇಳ- 4ವರ್ಷ ಹೀಗೆ 41 ವರ್ಷಗಳ ಕಾಲ ತಿರುಗಾಟವನ್ನು ಮಾಡಿದ್ದಾರೆ.

ಇವರ ತಮ್ಮ ಪೆರುವಾಯಿ ನಾರಾಯಣ ಭಟ್ಟರು ಕಟೀಲು ಮೇಳದಲ್ಲಿ ಕಲಾಸೇವೆಯನ್ನು ಮಾಡುತ್ತಿದ್ದು ಉತ್ತಮ ಮದ್ದಲೆಗಾರರಾಗಿದ್ದಾರೆ.

ಧರ್ಮಪತ್ನಿಯಾದ ಶ್ರೀಮತಿ ಜಯಲಕ್ಷ್ಮೀಯವರಿಂದ ಶಿವಪ್ರಕಾಶ್ ಮತ್ತು ಪ್ರಶಾಂತ್ ಎಂಬ ಇಬ್ಬರು ಪುತ್ರರನ್ನು ಪಡೆದಿದ್ದಾರೆ.

ನಾರಾಯಣ ಭಟ್‌ರಿಗೆ ಮುಂಬಯಿ, ಪೆರುವಾಯಿ, ಮಾಳ, ವಿಷ್ಣುಮೂರ್ತಿ ದೇವಸ್ಥಾನ, ಹಾಗೂ ಕದ್ರಿ ಮೇಳ ಮೇಳದಲ್ಲಿ ಸಂಮಾನಗಳಾಗಿವೆ.



## ಕೃಷ್ಣಮೂರ್ತಿ, ನೀರ್ಮಜೆ

*ನೀರ್ಮಜೆ ಮನೆ, ಮಳ್ಳೇರಿಯಾ,*
*ಕಾಸರಗೋಡು,*
*ಕೇರಳ*


ಕಲಾಸೇವೆಯನ್ನೂ, ದೇವರ ಸೇವೆಯನ್ನು ಸಮಾನವಾಗಿ ನಿಷ್ಠೆಯಿಂದ ಮಾಡುತ್ತಿರುವ ಶ್ರೀಯುತ ಕೃಷ್ಣಮೂರ್ತಿ ನೀರ್ಮಜೆ ಇವರು ಮೇಳ ತಿರುಗಾಟ ಮಾಡಿದ ಅನುಭವಿ ಕಲಾವಿದರಾಗಿದ್ದಾರೆ.

19-03-1969ರಂದು ಶ್ಯಾಂ ಭಟ್ ಮತ್ತು ಲೀಲಾವತಿ ದಂಪತಿಗೆ 6ನೇ ಮಗನಾಗಿ ಜನಿಸಿದ ಇವರು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸವನ್ನು ಪಡೆದರು. ಆಮೇಲೆ ಯಕ್ಷಗಾನವು ಇವರ ಬಾಲ್ಯದ ಆಕರ್ಷಣೆಯ ಕಲೆಯಾಗಿದ್ದುದರಿಂದ ಅಧ್ಯಯನದ ಆಸಕ್ತಿಯನ್ನು ತಾಳಿದರು.

1982ರಲ್ಲಿ ಧರ್ಮಸ್ಥಳಾದ ಲಲಿತಾ ಕಲಾ ಕೇಂದ್ರದಲ್ಲಿ ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸ ಮಾಡಿ ಯಕ್ಷಗಾನ ನಾಟ್ಯ ಶಾಸ್ತ್ರದ ಅನುಭವ ಹೊಂದಿದ ಇವರು ಕಟೀಲು ಮೇಳವನ್ನು ಸೇರಿ 10ವರ್ಷಗಳ ಕಾಲ. ಸ್ತ್ರೀವೇಷಧಾರಿಯಾಗಿ ಕಲಾ ಸೇವೆ ಮಾಡಿದರು.
ಗಂಗಯ್ಯ ಶೆಟ್ಟಿ ಗೇರುಕಟ್ಟೆಯವರ ಮಹಿಷಾಸುರ ಪಾತ್ರದ ಜೊತೆಗೆ ಇವರ ಮಾಲಿನಿ ಪಾತ್ರವು ಬಹು ರಸವತ್ತಾಗಿ ಅಭಿನಯಿಸಲ್ಪಡುತ್ತಿದ್ದುದರಿಂದ ಜನಮನ್ನಣೆಯೊಂದಿಗೆ ಸತ್ಕೀರ್ತಿ ದೊರೆತಿತ್ತು.

ಆದಿಮಾಯೆ, ಸೌಗಂಧಿಕೆ, ಸೀತೆ, ದ್ರೌಪದಿ ಮೊದಲಾದ ಉತ್ತಮವಾಗಿ ನಿರ್ವಹಿಸುತ್ತಿರುವ ಇವರು ಕಾರಣಾಂತರದಿಂದ ವೃತ್ತಿ ಜೀವನದಿಂದ ನಿವೃತ್ತಿ ಪಡೆದು ಪೌರೋಹಿತ್ಯದ ಸ್ವಂತ ಉದ್ಯೋಗವನ್ನು ಆರಂಭಿಸಿದರು. ಕೆಲವು ವರ್ಷಗಳ ಕಾಲ ಮಲ್ಲ ಶ್ರೀ ದುರ್ಗಾಪರಮೇಶ್ವರಿ ಮೇಳದಲ್ಲಿ ಪ್ರಧಾನ ಸ್ತ್ರೀ ಪಾತ್ರಾಧಾರಿಯಾಗಿ ಕಲಾ ಸೇವೆ ಮಾಡಿರುವ ಇವರು ಈಗಲೂ ಹಲವು ಕಡೆ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ.

ಅದಮ್ಯ ಉತ್ಸಾಹ ಹಾಗೂ ಸಹಕಲಾವಿದರ ಒಡನಾಟ, ಕಲಾಭಿಮಾನಿಗಳ ಪ್ರೋತ್ಸಾಹಗಳಿಂದ ಉತ್ತಮ ಕಲಾವಿದರಾಗಿ ಬೆಳೆದಿರುವ ಇವರು ಪ್ರಸ್ತುತ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ದೇವರ ಪುಜಾ ಸೇವೆಯ ಉದ್ಯೋಗವನ್ನು ಮಾಡುತ್ತಾ ಇದ್ದಾರೆ.



## ಕೃಷ್ಣ ರೈ ನೀರ್ಚಾಲು

*ಬಂಡ್ರಡ್ಕ ಮನೆ, ನೀರ್ಚಾಲು ಅಂಚೆ*
*ಕಾಸರಗೋಡು ತಾಲೂಕು – 671321*
*ಮೊ: 9633923799.*

ರಾಜವೇಷ, ಪುಂಡುವೇಷ, ನಾಟಕೀಯ ವೇಷಗಳಲ್ಲಿ ನಿಪುಣರಾಗಿರುವ ಶ್ರೀಯುತ ಕೃಷ್ಣ ರೈ ನೀರ್ಚಾಲು ಇವರು ಪ್ರಸ್ತುತ ವರ್ಷದಲ್ಲಿ ಕೊಲ್ಲಂಗಾನ ಮೇಳದಲ್ಲಿ ಕಲಾಸೇವೆ ಮಾಡುತ್ತಾ ಇದ್ದಾರೆ.

ನೀರ್ಚಾಲುವಿನಲ್ಲಿ ರಾಮಯ್ಯ ರೈ ಮತ್ತು ಗಿರಿಜಾ ರೈ ದಂಪತಿಗಳಿಗೆ ಮಗನಾಗಿ ಜನಿಸಿದ ಇವರು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಪಡೆದಿರುವರು.

15ನೇ ವರ್ಷಕ್ಕೆ ಯಕ್ಷಗಾನ ಕಲಾ ಕ್ಷೇತ್ರದತ್ತ ಒಲವು ತೋರಿದ ಇವರು ಕೋಳ್ಯೂರು ರಾಮಚಂದ್ರ ರಾವ್ ಅವರಿಂದ ನಾಟ್ಯವನ್ನು ಕಲಿತು ರಂಗ ಪ್ರವೇಶ ಮಾಡಿ ಪ್ರತಿಭೆಯನ್ನು ತೋರುತ್ತಾ ಬೆಳೆದರು.

ಸುರತ್ಕಲ್ ಮೇಳದಲ್ಲಿ 4 ವರ್ಷ, ಮಂಗಳಾದೇವಿ ಮೇಳದಲ್ಲಿ 3 ವರ್ಷ, ಪುತ್ತೂರು ಮೇಳದಲ್ಲಿ 2 ವರ್ಷ, ಕುಂಟಾರು ಮೇಳದಲ್ಲಿ 2 ವರ್ಷ, ಕೊಲ್ಲಂಗಾನ ಮೇಳದಲ್ಲಿ 2 ವರ್ಷ ಕಲಾ ಸೇವೆ ಗೈದು ಅನುಭವಿ ಕಲಾವಿದರಾಗಿದ್ದಾರೆ.

ರಾಜವೇಷ, ಪುಂಡುವೇಷ, ಬಣ್ಣದ ವೇಷಗಳನ್ನು ಉತ್ತಮವಾಗಿ ನಿರ್ವಹಿಸುವ ಕೃಷ್ಣ ರೈಯವರು ಶುಂಭ, ಮಹಿಷಾಸುರ, ಮಧು–ಕೈಟಭ, ದೇವೇಂದ್ರ, ಅರ್ಜುನ, ವೃಷಕೇತ, ಜಯಂತ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಸಾಲಿಗ್ರಾಮದಲ್ಲಿ ಸಂಮಾನವಾಗಿದೆ.



## ಕೇಶವ ಶೆಟ್ಟಿಗಾರ್

*ಹೊಸ ಕಾವೇರಿ, ಪುನರೂರು ಅಂಚೆ,*
*ಮಂಗಳೂರು ತಾಲೂಕು,*
*ಮೊಬೈಲ್ -9901193682, 9611632768*

ಯಕ್ಷಗಾನದ ಪ್ರಭಾವಕ್ಕೆ ಮಣಿದು ರಂಗಸ್ಥಳಕ್ಕೆ ಪಾದಸ್ಪರ್ಶ ಮಾಡಿ ಪುಂಡುವೇಷ ಮತ್ತು ಸ್ತ್ರೀ ವೇಷಗಳಲ್ಲಿ ಪರಿಣತಿಯನ್ನು ಗಳಿಸಿರುವ ಕೇಶವ ಶೆಟ್ಟಿಗಾರ್ ಇವರು ಪ್ರಸಕ್ತ ಸಾಲಿನಲ್ಲಿ ಕಟೀಲು ಮೇಳದ ಕಲಾವಿದರಾಗಿದ್ದಾರೆ.

ನಾರಾಯಣ ಶೆಟ್ಟಿಗಾರ್ ಹಾಗೂ ಗಿರಿಜಾ ದಂಪತಿಗೆ ಹೆಮ್ಮೆಯ ಸುಪುತ್ರರಾಗಿ ಜನಿಸಿದ ಇವರು 48ರ ವಯೋಮಾನದ ಹಿರಿತನಕ್ಕೆ ಏರಿದ್ದಾರೆ.

ಶ್ರೀಯುತರು ತನ್ನ 13ನೇ ವಯಸ್ಸಿನಲ್ಲಿ ಕೀರ್ತಿಶೇಷ ಕಲಾವಿದ ಪಡ್ರೆ ಚಂದುರವರಿಂದ ನಾಟ್ಯಾಭ್ಯಾಸ ಮಾಡಿದರು.

ಕಟೀಲು ಕ್ಷೇತ್ರ ಹಾಗೂ ಮೇಳದ ಬಗ್ಗೆ ಅಭಿಮಾನವಿದ್ದು ಕಲಾಸೇವೆಯನ್ನು ಆರಂಭಿಸಿದ ಇವರು 13ವರ್ಷ ಸತತ ತಿರುಗಟವನ್ನು ನಡೆಸಿದರು. ಆಮೇಲೆ ಸ್ವಂತ ಉದ್ಯೋಗದ ನಿಮಿತ್ತ ಹೊರರಾಜ್ಯದ ಮುಂಬಯಿಗೆ ಹೋದವರು ಅಲ್ಲಿಯೂ ಕಲಾ ಸೇವೆಯನ್ನು ಬಿಡದೆ ಗೀತಾಂಬಿಕ ಯಕ್ಷಗಾನ ಮಂಡಳಿಯಲ್ಲಿ ಕಲಾವಿದನಾಗಿ ಪಾತ್ರ ನಿರ್ವಹಣೆಯನ್ನು ಮಾಡಿರುವರು.

ಪುರಾಣದ ಅನುಭವವನ್ನು ಸಂಪಾದಿಸಿರುವ ಕೇಶವರು ಚಂಡ-ಮುಂಡರು, ಬ್ರಹ್ಮ- ವಿಷ್ಣು, ರಾಮ-ಲಕ್ಷ್ಮಣ, ಮಾಲಿನಿ, ಆದಿಮಾಯೆ, ಯಶೋಮತಿ, ನಂದಿನಿ, ಶಶಿಪ್ರಭೆ, ಶಿವಪ್ರಭೆ ಇತ್ಯಾದಿ ಪಾತ್ರಗಳನ್ನೂ ನಿರ್ವಹಿಸುವ ಮೂಲಕ ಯಕ್ಷರಂಗದಲ್ಲಿ ಕೀರ್ತಿವಂತರಾಗಿದ್ದಾರೆ.

ಶ್ರೀಮತಿ ಆಶಾಲತಾರನ್ನು ವರಿಸಿ, ರವಿಪ್ರಸಾದ್, ಪೂಜಾ, ಯಶಸ್ಸು ಎಂಬ ಮೂವರು ಮಕ್ಕಳನ್ನು ಪಡೆದು ಕೃತಾರ್ಥರಾಗಿದ್ದಾರೆ. ಇವರ ತಮ್ಮ ಕರುಣಾಕರ್ ಶೆಟ್ಟಿಗಾರ್ ಕೂಡ ಹವ್ಯಾಸಿ ಯಕ್ಷಗಾನ ಕಲಾವಿದರಾಗಿದ್ದಾರೆ.

ಇವರ ಕಲಾ ಸಾಧನೆಯನ್ನು ಮೆಚ್ಚಿ ಮುಂಬಯಿಯಲ್ಲಿ ಯಕ್ಷಗಾನದ ಅಭಿಮಾನಿಗಳುಪ್ರತಿಭಾ ಪುರಸ್ಕಾರ ಮಾಡಿ ಗೌರವಿಸಿದ್ದಾರೆ.



## ಕೇಶವ ಶಕ್ತಿನಗರ

*ಮನೆ ನಂ. 9-57, ರಮಾಶಕ್ತಿ ಮಿಷನ್ ಸಮೀಪ,*
*ಅಂಚೆ ಶಕ್ತಿನಗರ, ಮಂಗಳೂರು*
*ಮೊ: 9343352180.*

ಯಕ್ಷಗಾನದಿಂದ ಪ್ರಾಭಾವಿತರಾಗಿರುವ ಶ್ರೀಯುತ ಕೇಶವ ಶಕ್ತಿನಗರ ಇವರು ಪಾತ್ರ ನಿರ್ವಹಣೆ ಹಾಗೂ ಪ್ರಸಾಧನ ಕಲೆಯಲ್ಲಿ ಪರಿಣತರಾದ ಕಲಾವಿದರಾಗಿದ್ದು ಪ್ರಸ್ತುತ ತಲಕಳ ಮೇಳದ ಕಲಾವಿದರೆನಿಸಿದ್ದಾರೆ.

8-04-1960ರಲ್ಲಿ ದೇವೋಜಿ ರಾವ್ ಹಾಗೂ ಜಾನಕಿ ದಂಪತಿಗೆ ಸುಪುತ್ರನಾಗಿ ಜನಿಸಿದ ಶ್ರೀಯುತರು ಕಾವೂರು ಕೇಶವರಿಂದ ನಾಟ್ಯಾಭ್ಯಾಸ ಮಾಡಿ ಪುಂಡುವೇಷ, ರಾಜವೇಷ, ನಾಟಕೀಯ ವೇಷಗಳಲ್ಲಿ ಪರಿಣತಿಯನ್ನು ಹೊಂದಿದ್ದಾರೆ.


ಸುಂಕದಕಟ್ಟೆ ಮೇಳ- 1 ವರ್ಷ,ಅಡ್ಯಾರು ಮೇಳ- 1 ವರ್ಷ, ಕೂಡ್ಲು ಮೇಳ- 2 ವರ್ಷ, ಕೊಲ್ಲೂರು ಮೇಳ- 3 ವರ್ಷ ಹಾಗೂ ತಲಕಳ ಮೇಳ- 26 ವರ್ಷ ಹೀಗೆ ಮೇಳತಿರುಗಾಟವನ್ನು ಮಾಡಿದ ಅನುಭವಿ ಕಲಾವಿದರು ಇವರಾಗಿದ್ದಾರೆ.

ಮಧು-ಕೈಟಭ, ರಕ್ತಬೀಜ, ಅರ್ಜುನ, ದೇವೇಂದ್ರ, ದಾರಿಕಾಸುರ, ಕೌಂಹಾಸುರ, ಚಂಡ-ಮುಂಡರು, ಮರ್ತಾಂಡತೇಜ, ಕೋಟಿ-ಚೆನ್ನಯ, ಚಂದುಗಿಡಿ, ಕಾಂತಬಾರೆ-ಬೂತಬಾರೆ, ಕಾಂತು ಪೂಂಜ, ಇತ್ಯಾದಿ ಪೌರಾಣಿಕ ಹಾಗೂ ತುಳು ಭಾಷಾ ಪ್ರಸಂಗಗಳ ಪಾತ್ರಗಳನ್ನು ನಿರ್ವಹಿಸಿರುತ್ತಾರೆ.

. 5ನೇ ತರಗತಿ ವ್ಯಾಸಂಗ ಮಡಿರುವ ಇವರು ಯಕ್ಷಗಾನದ ಭೂಷಣ ತಯಾರಿಯ ಪ್ರಸಾಧನ ಕಲೆಯಲ್ಲಿ ಹೆಚ್ಚಿನ ನಿಪುಣತೆಯನ್ನು ಸಾಧಿಸಿದ್ದಾರೆ. ಸ್ವಂತ ವೇಷಭೂಷಣದ ವ್ಯವಸ್ಥೆಯನ್ನು ಮಾಡಿ ಬಾಡಿಗೆಗೆ ನೀಡುತಿದ್ದರು. ಇಷ್ಟಲ್ಲದೆ ಕರಾವಳಿ ಯಕ್ಷಗಾನ ಮಿತ್ರ ಮಂಡಳಿಯನ್ನು ಸ್ಥಾಪಿಸಿ ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದಾರೆ.

ಶ್ರೀಮತಿ ಶೀಲಾರವರ ಕೈಹಿಡಿದು ಮಕ್ಕಳಾದ ಸುಪ್ರೀತ, ಯೋಜಿತಾ, ಸಾಧನಾರೊಂದಿಗೆ ಜೀವನ ನಡೆಸುತ್ತಿರುವ ಶ್ರೀಯುತರು ಅನೇಕರಿಗೆ ನಾಟ್ಯ ತರಬೇತಿ ನೀಡಿರುತ್ತಾರೆ.ಹವ್ಯಾಸಿ ಸ್ತ್ರೀ ವೇಷಧಾರಿ ಮಲ್ಲ ಭಾಸ್ಕರ್ ಶ್ರೀಯುತರ ದೂರದ ಸಂಬಂಧಿಯಾಗಿರುತ್ತಾರೆ.

ಆರ್ಯಮನೆ ಮರಾಠ ಸಂಘ ಮುಳ್ಳೂರಿಯಾ ಹಾಗೂ ಇನ್ನಿತರ ಹಲವಾರು ಸಂಘ-ಸಂಸ್ಥೆಗಳಿಂದ ಇವರು ಸಮ್ಮಾನಿಸಲ್ಪಟ್ಟಿರುವರು.



## ಗಣಾಧಿರಾಜ ಉಪಾಧ್ಯಾಯ ಎ. ಕೊಲ್ಲಂಗಾನ

*"ಶ್ರೀ ನಿಲಯ" ಕೊಲ್ಲಂಗಾನ,*
*ಅಂಚೆ: ಕಲ್ಲಕಟ್ಟ ವಯಾ ವಿದ್ಯಾನಗರ, ಕಾಸರಗೋಡು*
*(ಮನೆ ದೂರವಾಣಿ) 0499 8285206*
*(ಮೊಬೈಲ್) 9480060207*

ತನ್ನದೇ ಆದ ಸ್ವಂತ ವರ್ಚಸ್ಸಿನಿಂದ ಕಲಾಕ್ಷೇತ್ರದಲ್ಲಿ ಮನ್ನಣೆಗೆ ಒಳಗಾಗಿರುವ ಶ್ರೀ ಗಣಾಧಿರಾಜ ಉಪಾಧ್ಯಾಯರು ಪ್ರಸ್ತುತ ಶ್ರೀ ಕೊಲ್ಲಂಗಾನ ಮೇಳದ ಮುಖ್ಯಸ್ಥರಾಗಿ ಮೇಳವನ್ನು ಮುನ್ನಡೆಸುವುದರೊಂದಿಗೆ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

ತಂತ್ರಿ ಶ್ರೀ ಅನಂತ ಪದ್ಮನಾಭ ಉಪಾದ್ಯಾಯ ಮತ್ತು ಶಾರದಮ್ಮ ದಂಪತಿಯ ಸುಪುತ್ರರಾಗಿ ಕೊಲ್ಲಂಗಾನದಲ್ಲಿ ಜನಿಸಿದರು. ಆಮೇಲೆ 10ನೇ ತರಗತಿಯವರೆಗೆ ವಿದ್ಯಭ್ಯಾಸವನ್ನು ಪಡೆದಿರುವರು.

ಉಪ್ಪಳ ಕೃಷ್ಣ ಮಾಸ್ತರ್ ಮತ್ತು ಸೂರಿಕುಮೇರಿ ಗೋವಿಂದ ಭಟ್ಟರಿಂದ ನಾಟ್ಯಾಭ್ಯಾಸ ಮಾಡಿ ತನ್ನ 15ನೇ ವರ್ಷದಿಂದಲೇ ರಂಗ ಪ್ರವೇಶ ಮಾಡಿದ್ದರು. ಇವರ ತಂದೆ ಅರ್ಥಧಾರಿ ಅಜ್ಜ ಶಂಕರನಾರಾಯಣ ಉಪಾಧ್ಯ ವೇಷಧಾರಿ ಹಾಗೂ ಹಿಮ್ಮೇಳ ವಾದಕರು. ಹೀಗಾಗಿ ಮನೆತನದ ಪ್ರಭಾವ ಇವರ ಪ್ರತಿಭೆಯ ಬೆಳವಣಿಗೆಗೆ ಪೂರಕವಾಯಿತು.

ಬಣ್ಣದ ವೇಷ, ರಾಜವೇಷ ಮತ್ತು ನಾಟಕೀಯ ವೇಷದಲ್ಲಿ ಪ್ರೌಢಿಮೆಯನ್ನು ಸಾಧಿಸಿರುವ ಇವರು ಕಟೀಲು ಮೇಳ 3 ವರ್ಷ, ಬಪ್ಪನಡು ಮೇಳ 1 ವರ್ಷ, ಕೊಲ್ಲಂಗಾನ ಮೇಳ 12 ವರ್ಷ, ಹೀಗೆ ಕಲಾಸೇವೆಯ ಹಿನ್ನೆಲೆಯನ್ನು ಹೊಂದಿದ್ದಾರೆ.

ಮಹಿಷಾಸುರ, ರುದ್ರಭೀಮ, ಶಿಶುಪಾಲ, ಶೂರ್ಪನಖಾ ಮೊದಲಾದ ಪಾತ್ರಗಳ ಮುಖೇನ ವೇಷದ ವೈಭವೀಕರಣದಲ್ಲಿ ಪ್ರಸಿದ್ದರಾಗಿರುವರು. ಹವ್ಯಾಸಿ ಕಲಾವಿದರ ಜೊತೆಗೂ ಪಾತ್ರ ನಿರ್ವಹಣೆಯನ್ನು ಮಾಡುವ ಇವರು ಸಹಕಾರ ಹಾಗೂ ಪ್ರೋತ್ಸಾಹ ಮನೋಧರ್ಮದ ವ್ಯಕ್ತಿತ್ವವನ್ನು ಹೊಂದಿದ್ದಾರೆ.

ಕೊಲ್ಲಂಗಾನ ಶ್ರೀ ಕ್ಷೇತ್ರದ ಮೊಕ್ತೇಸರರಾಗಿದ್ದು ಕ್ಷೇತ್ರದ ಏಳಿಗೆಗೆ ಶ್ರಮಿಸುವರಲ್ಲದೆ ಯಕ್ಷಗಾನ ಕಲೆಯ ಬಗ್ಗೆ ಕಾಳಜಿ ಇದ್ದು ಕ್ಷೇತ್ರದ ಮೇಳವನ್ನು ಉತ್ತಮ ಕಲಾವಿದರ ಸಂಘಟನೆಯಲ್ಲಿ ಮುನ್ನಡೆಸುತ್ತಾ ಇದ್ದಾರೆ.ಇಷ್ಟಲ್ಲದೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಪರಿಣತರಾಗಿ ಮನ್ನಣೆಯನ್ನು ಪಡೆದಿದ್ದಾರೆ.



## ಗಣೇಶ್ ಶರ್ಮಾ ಕೆ.

*ಪಿಲ್ಲಂಬು ಗೋಳಿ, ಅರಂಬೋಡಿ ಗ್ರಾಮ*
*ಬೆಳ್ತಂಗಡಿ ತಾಲೂಕು*
*ಮೊ; 9448790709 / 9448151548*

ವೇಷಧಾರಿಯಾಗಿ, ಅರ್ಥಧಾರಿಯಾಗಿ ಕವಿಯಾಗಿ ಬರಹಗಾರನಾಗಿ ಕೆ. ಗಣೇಶ ಶರ್ಮರದ್ದು ಒಂದು ವಿಚಕ್ಷಣ ಪ್ರತಿಭೆ. ಯಕ್ಷಗಾನವನ್ನೇ ಆಧಾರವಾಗಿರಿಸಿಕೊಂಡು ಅದರ ಮುಖೇನ ಸಾಹಿತ್ಯ ಕ್ಷೇತ್ರದ ನಾನಾ ಪ್ರಕಾರಗಳಲ್ಲಿ ತೊಡಗಿಸಿಕೊಂಡ ಇವರು ಪ್ರಸ್ತುತ ಹೇಳಿಕೆಯ ಮೇರೆಗೆ ಕಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.


ಯಕ್ಷಗಾನಕ್ಕೆ ಹಲವಾರು ಮೇರು ಕಲಾವಿದರನ್ನು ನೀಡಿದ ಕೀರಿಕ್ಕಾಡು ಮನೆತನದಲ್ಲಿ ಕೀರಿಕ್ಕಾಡು ಗೋಪಾಲಕೃಷ್ಣ ಭಟ್ ಹಾಗೂ ಸರಸ್ವತಿ ದಂಪತಿಗೆ ಕೊನೆಯ ಪುತ್ರನಾಗಿ ತಾ. 22-3-1965ರಲ್ಲಿ ಗಣೇಶ ಶರ್ಮರು ಜನಿಸಿದರು. ತಾನು ಹುಟ್ಟಿದ ಮನೆಯು ಯಕ್ಷಗಾನ ಕೇಂದ್ರವಾಗಿದ್ದರಿಂದ ಆ ಕಲೆಯು ಶರ್ಮರಿಗೆ ರಕ್ತಗತವಾಗಿ ಬಂದಿತ್ತು. ತಂದೆ, ಚಿಕ್ಕ ತಂದೆ ಕೀರಿಕ್ಕಾಡು ವಿಷ್ಣುಭಟ್, ಶೇಣಿ ಗೋಪಾಲ ಕೃಷ್ಣಭಟ್ ಹಾಗೂ ಗೋವಿಂದ ಭಟ್ ಇವರ ಅರ್ಥಗಾರಿಕೆಯಿಂದ ಪ್ರಭಾವಿತರಾದರು. ಕೀರಿಕ್ಕಾಡು ಹಾಗೂ ಶೇಣಿಯವರಿಂದ ಅರ್ಥಗಾರಿಕೆಯನ್ನು ಕಲಿತ ನಂತರ ಧರ್ಮಸ್ಥಳದ ಲಲಿತಾಕಲಾ ಕೇಂದ್ರಕ್ಕೆ ಸೇರಿ ನಾಟ್ಯವನ್ನು ಕಲಿತರು.

ಶ್ರೀ ಧರ್ಮಸ್ಥಳ ಮೇಳದಲ್ಲಿ ತನ್ನ ತಿರುಗಾಟದ ಜೀವನವನ್ನು ಆರಂಭಿಸಿದರು. ಆಮೇಲೆ ಸುರತ್ಕಲ್ ಮೇಳ, ಕಟೀಲು ಮೇಳ, ಮಧೂರು ಮೇಳ, ಗಣೇಶಪುರ ಮೇಳ, ಬಪ್ಪನಾಡು ಮೇಳ, ಶರಭೇಶ್ವರ ಮೇಳಗಳಲ್ಲಿ 2 ದಶಕಕ್ಕೂ ಮಿಕ್ಕಿ ತಿರುಗಾಟವನ್ನು ಮಾಡಿದ ಅನುಭವ ಗಣೇಶ ಶರ್ಮರಿಗೆ ಇದೆ. ಬ್ರಹ್ಮ, ದೂವ್ರಾಕ್ಷ, ಭೀಷ್ಮ, ಜಾಬಾಲಿ ಅತಿಕಾಯ, ಪರಶುರಾಮ, ಅರ್ಜುನ, ಸುಧನ್ವ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಪುಂಡು ವೇಷ, ರಾಜವೇಷ ಪೂಷಕ ವೇಷಧಾರಿಯಾಗಿ ಮೆರೆದರು.

ಸುರಗಿರಿ ಕ್ಷೇತ್ರ ಮಹಾತ್ಮ್ಯಂ, ರಘು ದಿಗ್ವಿಜಯ, ವಿನಾಯಕ ಲೀಲಾರ್ಣವ, ಎಂಬ ಯಕ್ಷಗಾನ ಪ್ರಸಂಗಗಳು ಹಾಗೂ ಭಕ್ತ ಪ್ರಹ್ಲಾದ, ಗುರುದಕ್ಷಿಣೆ, ಶನೈಶ್ಚರ ಮಹಾತ್ಮ್ಯಂ, ಪಂದಳ ವೀರ, ಭಕ್ತ ಮಾರ್ಕಂಡೇಯ ಮುಂತಾದ ನಾಟಕಗಳನ್ನು ರಚಿಸಿರುತ್ತಾರೆ. ಇವರ ಋಷಿಯಾಂತರಂಗ ಎಂಬ ಕೃತಿಯು ಬಿಡುಗಡೆಗೊಂಡಿದೆ.

ಜೀವನೋಪಾಯಕ್ಕಾಗಿ ಶ್ರೀಯುತರು ಕೃಷಿ, ಜ್ಯೋತಿಷ್ಯ ಹಾಗೂ ಸುರಗಿರಿ, ಪೂಂಜ, ಅರಳ, ಸಿದ್ಧ ಕಟ್ಟೆ, ಓಕ್ರಾಡಿ ಮುಂತಾದ ಕಡೆಗಳಲ್ಲಿ ಯಕ್ಷಗಾನ ತರಬೇತಿಯನ್ನು ನಡೆಸುತ್ತಿದ್ದಾರೆ. ಇವರ ಸಾಧನೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಸಂಮಾನವನ್ನೂ ಮಾಡಿ ಗೌರವಿಸಿವೆ.

ಹೆಂಡತಿ ಶಶಿಕಲಾ ಮಗಳು ವಿದ್ಯಾ ಸರಸ್ವತಿ, ಮಗ ಅಕ್ಷಯ ಗೋಪಾಲ ಕೃಷ್ಣರಿಂದ ಒಡಗೂಡಿದ ಸಂತೃಪ್ತ ಜೀವನವನ್ನು ಶ್ರೀಯುತರು ನಡೆಸುತ್ತಿದ್ದಾರೆ.



# ಗಣೇಶ ಚಂದ್ರ ಮಂಡಲ

*ಚಂದ್ರಮಂಡಲ ಮನೆ, ಮೆನ್ನ ಬೆಟ್ಟು ಗ್ರಾಮ*
*ಕಿನ್ನಿಗೋಳಿ ಅಂಚೆ - 574150*
*ಮೊಬೈಲ್: 9980752828*

ಬಪ್ಪನಾಡು ಮೇಳದಲ್ಲಿ ಯಕ್ಷಗಾನ ತಿರುಗಾಟವನ್ನು ನಡೆಸುತ್ತಿದ್ದು ರಾಜ, ಪುಂಡು ನಾಟಕೀಯ, ಬಣ್ಣ ಹಾಗೂ ಹಾಸ್ಯ ವೇಷಗಳನ್ನು ಮಾಡುತ್ತಿರವರುವ ಗಣೇಶ ಚಂದ್ರ ಮಂಡಲ ಅವರು ಯಕ್ಷಗಾನ ರಂಗದ ಉತ್ತಮ ಕಲಾವಿದರಾಗಿದ್ದಾರೆ.

ಶ್ರೀ ಕೋಟಿ ಮೂಲ್ಯ ಹಾಗೂ ಶ್ರೀಮತಿ ಕಮಲ ದಂಪತಿಗೆ ಸುಪುತ್ರರಾಗಿ 7-7-1967ರಂದು, ದಕ್ಷಿಣಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ಜನಿಸಿದರು. ದ್ವಿತೀಯ ಪಿಯುಸಿಯವರೆಗೆ ವಿದ್ಯಾಭ್ಯಾಸವನ್ನು ಪೂರೈಸಿದ ಇವರು 13ನೇ ವರ್ಷದಿಂದ ಯಕ್ಷಗಾನದ ಆಸಕ್ತಿಯನ್ನು ಬೆಳೆಸಿಕೊಂಡರು.

ಇವರಿಗೆ ಕಟೀಲು ಮೇಳದ ಪ್ರದರ್ಶನಗಳು ಹೆಚ್ಚಿನ ಪ್ರೇರಣೆ ಹಾಗೂ ಉತ್ತೇಜನವನ್ನು ನೀಡಿ ಯಕ್ಷಗಾನವನ್ನು ಸೇರುವುದಕ್ಕೆ ನಾಂದಿಯಾಯಿತು. ಯಕ್ಷಗಾನದ ಗುರುಗಳಾದ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯ ಅವರಲ್ಲಿ ಯಕ್ಷಗಾನ ನಾಟ್ಯಾಭ್ಯಾಸವನ್ನು ಕಲಿತರು.

ಮೊದಲಾಗಿ ಮುಂಡ್ಕೂರು ಮೇಳಕ್ಕೆ ಸೇರಿದ ಇವರು 7 ವರ್ಷಗಳ ಕಾಲ ಕಲಾಸೇವೆ ಮಾಡಿ ನಂತರ ತಲಕಳ ಮೇಳದಲ್ಲಿ 3 ವರ್ಷಗಳ ತನಕ ಪಾತ್ರ ನಿರ್ವಹಣೆ ಮಾಡಿದರು. ಮುಂದೆ ಸುಂಕದಕಟ್ಟೆ ಮೇಳ 1 ವರ್ಷ ಹಾಗೂ ಕದ್ರಿ ಮೇಳದಲ್ಲಿ ಒಂದೊಂದು ವರ್ಷದ ತಿರುಗಾಟವನ್ನು ಪೂರೈಸಿದರು.

ಉದ್ಯೋಗ ನಿಮಿತ್ತ ಮುಂಬಯಿಗೆ ಹೋದವರು ಅಲ್ಲಿನ ಗುರುನಾರಾಯಣ ಮಂಡಳಿಯಲ್ಲಿ ಕೂಡಾ ಕಲಾ ಸೇವೆಯನ್ನು ಮಾಡಿದ್ದಾರೆ. ಮತ್ತೆ ಊರಿಗೆ ಬಂದವರು ಕಲೆಯ ನಂಟನ್ನು ಬಿಡಲಾರದೆ ಬಪ್ಪನಾಡು ಮೇಳವನ್ನು ಸೇರಿ ಕಳೆದ 3 ವರ್ಷಗಳಿಂದ ಪಾತ್ರ ನಿರ್ವಹಣೆಯನ್ನು ಮಾಡುತ್ತಿದ್ದಾರೆ.

ಕೌರವ, ಅತಿಕಾಯ, ಇಂದ್ರಜಿತು, ಕರ್ಣ, ಅರ್ಜುನ, ತಾಟಕೀ, ಕೋಟಿ, ದೇವುಪೂಂಜ, ಬೀರಣ್ಣ, ಕಂಸ, ಹಿರಣ್ಯಕಶ್ಯಪ, ಭೀಮ, ರಾಮ ಹಾಗೂ ಇನ್ನಿತರ ವೇಷಗಳಲ್ಲಿ ಇವರು ಪರಿಣತಿಯನ್ನು ಸಾಧಿಸಿದ್ದಾರೆ. ಇದರೊಂದಿಗೆ ಯಕ್ಷಗಾನಾಸಕ್ತರಿಗೆ ನಾಟ್ಯಾಭ್ಯಾಸವನ್ನು ಕಲಿಸಿಕೊಟ್ಟಿದ್ದಾರೆ.

ಇವರ ತಮ್ಮಂದಿರಾದ ಶಂಭು ಕುಮಾರ ಅವರು ಉತ್ತಮ ವೇಷಧಾರಿಯಾಗಿದ್ದಾರೆ. ಹಾಗೂ ಧನಂಜಯ ಅವರು ಹವ್ಯಾಸಿ ಕಲಾವಿದರಾಗಿದ್ದಾರೆ.

ಶ್ರೀಮತಿ ಭಾನುಮತಿ ಎಂಬವರನ್ನು ವಿವಾಹವಾಗಿ ಕು. ಸೃಷ್ಟಿ ಹಾಗೂ ಕು. ಸೃಜನ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾ ಸಾದನೆಯನ್ನು ಗುರುತಿಸಿ ಮುಂಬಾಯಿ, ಬೆಹರಿನ್ ಹಾಗೂ ಹಳೆಯಂಗಡಿಯಲ್ಲಿ ಸಂಮಾನದ ಗೌರವಗಳು ಸಂದಿವೆ.



# ಗಣೇಶ್ ರೈ, ಅರಳ

*ಅಂಬಾರ್‌ದೊಟ್ಟು ಮನೆ, ಅರಳ ಗ್ರಾಮ, ಅಂಚೆ,*
*ಬಂಟ್ವಾಳ ತಾಲೂಕು,*
*ಮೊಬೈಲ್ -9980248276*

ರಾಜವೇಷದ ಮುಖೇನ ಬೆಳೆಯುತ್ತಿರುವ ಶ್ರೀಯುತ ಗಣೇಶ ರೈ ಅರಳ ಅವರು ಕಟೀಲು ಮೇಳದಲ್ಲಿ ವೇಷಧಾರಿಯಾಗಿ ಕಲಾಮಾತೆಯ ಸೇವೆಯನ್ನು ಮಾಡುತ್ತಿದ್ದಾರೆ.

ಶ್ರೀಯುತರು 19-8-1986ರಂದು ಅರಳದಲ್ಲಿ ಶ್ರೀ ಮಹಾಲಿಂಗ ರೈ ಮತ್ತು ಶ್ರೀಮತಿ ರೇವತಿ ದಂಪತಿಗೆ ಸುಪುತ್ರರಾಗಿ ಜನಿಸಿ, 8ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವರು.

ಯಕ್ಷಗಾನದ ಪರಿಸರದಲ್ಲಿ ಇವರು ಹುಟ್ಟಿ ಬೆಳೆದಿರುವುದರಿಂದ ಪ್ರಭಾವಕ್ಕೆ ಒಳಗಾಗಿ ತಾನೂ ಕಲಿಯಬೇಕೆಂಬ ಸ್ವಂತಾಸಕ್ತಿಯನ್ನು ತಾಳಿದರು. ಜೊತೆಗೆ ಅಜ್ಜ ಶೀನಕಂಬಳಿ ಅವರ ಪ್ರೋತ್ಸಾಹವು ದೊರೆಯಿತು.

ದಿವಾಣ ಶಿವಶಂಕರ ಭಟ್‌ರಿಂದ ನಾಟ್ಯಾಭ್ಯಾಸವನ್ನು ಮಾಡಿ ಕಲಾಸೇವೆಯನ್ನು ಆರಂಭಿಸಿದ ಇವರು ವಿದ್ಯುನ್ಮಾಲಿ, ದೇವೇಂದ್ರ, ಅರ್ಜುನ, ಅರುಣಾಸುರ, ಈಶ್ವರ, ದೂಮ್ರಾಕ್ಷ, ಮೈಂದ-ದಿವಿದ, ಸುಗ್ರೀವ, ತ್ರಿಶಿರ, ಸುಬಾಹು ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಇವರ ಅಜ್ಜರಾದ ಸಜಿಪ ಮೋನಪ್ಪ ಶೆಟ್ಟಿಯವರು ವೇಷಧಾರಿಯಾಗಿ ಕಟೀಲು, ಧರ್ಮಸ್ಥಳ ಮೇಳಗಳಲ್ಲಿ ತಿರುಗಾಟ ಮಾಡಿದ ಅನುಭವವನ್ನು ಸಂಪಾದಿಸಿರುವುದರಿಂದ ಅವರ ಆದರ್ಶವನ್ನು ಇವರು ಮೈಗೂಡಿಸಿಕೊಂಡಿದ್ದಾರೆ.



## ಗಣೇಶ್ ನಿಡ್ಡೋಡಿ

*ಕೊಳತ್ತಾರು ಮನೆ, ನಿಡ್ಡೋಡಿ ಗ್ರಾಮ, ಅಂಚೆ*
*ಮಂಗಳೂರು ತಾಲೂಕು*
*ಮೊ; **9611035982***

ಸ್ತ್ರೀ ವೇಷ ಮತ್ತು ಪೋಷಕ ಪಾತ್ರಗಳನ್ನು ನಿರ್ವಹಿಸುವ ಶ್ರೀ ಗಣೇಶ್ ನಿಡ್ಡೋಡಿಯವರು ಪ್ರಸ್ತುತ ಬಜ್ಪೆ ಸುಂಕದಕಟ್ಟೆಯ ಶ್ರೀ ಅನ್ನ ಪೂರ್ಣೇಶ್ವರಿ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


ಈಶ್ವರ ಗೌಡ ಮತ್ತು ಪುಷ್ಪಾ ದಂಪತಿಯ ಸುಪುತ್ರರಾಗಿ 27-11-1982 ರಂದು ನಿಡ್ಡೋಡಿಯಲ್ಲಿ ಹುಟ್ಟಿದರು.

6 ನೇ ತರಗತಿಯ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಪ್ರದರ್ಶನಗಳನ್ನು ನೋಡಿ ತಾನೂ ಕಲಿಯಬೇಕೆಂಬ ಹಂಬಲದಿಂದ ಹಾಸ್ಯಗಾರ ಪದ್ಮನಾಭ ಶೆಟ್ಟಿಗಾರರಿಂದ ನಾಟ್ಯಾಭ್ಯಾಸವನ್ನು ಮಾಡಿದರು.

11ನೇ ವರ್ಷದಿಂದಲೇ ವೇಷ ಮಾಡಲು ಆರಂಭಿಸಿದ ಇವರಿಗೆ ಹಾಸ್ಯಗಾರ ಮಿಜಾರು ಅನ್ನಪ್ಪರವರ ಪ್ರಭಾವ ಕೂಡ ಬೆಳೆಯುಲು ಕಾರಣವಾಯಿತು. ಕಟೀಲು ಮೇಳ – 4 ವರ್ಷ, ಕದ್ರಿ ಮೇಳ – 4 ವರ್ಷ, ಸುಂಕದಕಟ್ಟೆ ಮೇಳ – 8 ವರ್ಷ, ಹೀಗೆ ಮೇಳಗಳಲ್ಲಿ 16 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

ಚಿತ್ರಾಂಗದೆ, ಶ್ರೀದೇವಿ, ಮಾಲಿನಿ, ಸೀತೆ, ದ್ರೌಪದಿ, ಪ್ರಮೀಳೆ ಇತ್ಯಾದಿ ಪಾತ್ರಗಳನ್ನು ಮಾಡಿರುವ ಇವರು ನಿಶುಂಭ, ಭೀಮ ಮೊದಲಾದ ಬಣ್ಣದ ವೇಷಗಳನ್ನು ಮತ್ತು ಅರ್ಜುನ ದೇವೇಂದ್ರ ಮೊದಲಾದ ರಾಜ ವೇಷಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಇದರ ಜೊತೆಗೆ ತುಳು ಪ್ರಸಂಗದ ಪಾತ್ರಗಳನ್ನೂ ನಿರ್ವಹಿಸುತ್ತಾರೆ.

ಶ್ರೀಮತಿ ಲೀಲಾವತಿ ಎಂಬವರನ್ನು ವರಿಸಿ ಮಾ। ಸುಮಂತ್ ಎಂಬ ಕುಮಾರನನ್ನು ಪಡೆದಿದ್ದಾರೆ.



# ಗಿರೀಶ್ ರಾವ್ ಐ.

*ಪಾಂಡಿಗದ್ದೆ ಮನೆ, ಅಂಚೆ: ಕಾವು*
*ಪುತ್ತೂರು ತಾಲೂಕು ದ. ಕ.*
*ಮೊಬೈಲ್: 9741482513.*

ಪುಂಡುವೇಷ, ಸ್ತ್ರೀವೇಷ, ಹಾಗೂ ಪೋಷಕ ಪಾತ್ರಗಳಲ್ಲಿ ಉತ್ತಮವಾದ ನಿರ್ವಹಣೆಯನ್ನು ತೋರಿ ಪರಂಪರೆಯ ಶೈಲಿಯನ್ನು ಬೆಳೆಸಿದ ಗಿರೀಶ್ ರಾವ್ ಇವರು ಪ್ರಸ್ತುತ ಅನಾರೋಗ್ಯದ ನಿಮಿತ್ತ ಮೇಳ ತಿರುಗಾಟವನ್ನು ನಿಲ್ಲಿಸಿದ್ದಾರೆ.

ಐ. ವೆಂಕಟರಾಯ ಹಾಗೂ ಐ. ಲಲಿತಾ ದಂಪತಿಯ ಸುಪುತ್ರನಾಗಿ 10-04-1961ರಲ್ಲಿ ಜನಿಸಿದ ಗಿರೀಶರು ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿ ರಂಗಪ್ರವೇಶ ಮಾಡಿದ್ದಾರೆ.


1976ರಿಂದ ಹವ್ಯಾಸಿ ಕಲಾವಿದರಾಗಿ ಪಾತ್ರ ನಿರ್ವಹಣೆ ಮಾಡುತ್ತಿದ್ದ ಇವರು 1980ರಿಂದ 2ವರ್ಷಗಳ ತನಕ ಆದಿ ಸುಬ್ರಹ್ಮಣ್ಯ ಮೇಳದಲ್ಲಿ ತಿರುಗಾಟವನ್ನು ನಡೆಸಿದರು.

ಆಮೇಲೆ ಕಟೀಲು ಮೇಳವನ್ನು ಸೇರಿದವರು 27 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

10 ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಪಾತ್ರಕ್ಕೆ ತಕ್ಕಂತೆ ನಟಿಸಬಲ್ಲ ಪ್ರತಿಭಾವಂತರಾಗಿದ್ದಾರೆ. ರುಕ್ಮಾಂಗದ, ಬ್ರಹ್ಮ, ಈಶ್ವರ, ಖ್ಯಾತಿ, ಮಾಲಿನಿ, ಸುಗ್ರೀವ ಮುಂತಾದ ಪಾತ್ರಗಳಲ್ಲಿ ಶ್ರೀಯುತರು ವಿಜೃಂಭಿಸಿದ್ದಾರೆ.

ಕಾವು, ಈಶ್ವರ ಮಂಗಳ, ಕೊಂಬ್ರ, ಪರ್ಲಂಪಾಡಿ ಮುಂತಾದ ಕಡೆಗಳಲ್ಲಿ ನಾಟ್ಯಗುರುಗಳಾಗಿ ಕ್ರೀಯಾಶಿಲ ವ್ಯಕ್ತಿತ್ವವನ್ನು ತೋರಿದ ಇವರಿಗೆ ಹಲವು ಮಂದಿ ಶಿಷ್ಯರು ಋಣಿಗಳಾಗಿದ್ದಾರೆ.

ಶ್ರೀಮತಿ ಮಾಲಿನಿ ಎಂಬವರನ್ನು ವರಿಸಿರುವ ಇವರು ಇತ್ತೀಚೆಗೆ ಅನಾರೋಗ್ಯದ ನಿಮಿತ್ತ ತಿರುಗಾಟವನ್ನು ನಿಲ್ಲಿಸಿ ಕಷ್ಟದ ಜೀವನವನ್ನು ನಡೆಸುತ್ತಿದ್ದಾರೆ.



## ಗಿರಿಧರ ರಾವ್

*ಜಯನಗರ ಆದೂರು, ಮುಳ್ಳೇರಿಯಾ ಅಂಚೆ*
*ಕಾಸರಗೋಡು ತಾಲೂಕು– 671543*
*ಮೊಬೈಲ್ –9745438032*

ಯಕ್ಷಗಾನದ ಹಿನ್ನೆಲೆ ಇಲ್ಲದೆ ಯಕ್ಷರಂಗ ಪ್ರವೇಶಿಸಿ ಪುರುಷ ಪಾತ್ರಗಳ ನಿರ್ವಹಣೆಯ ಮೂಲಕ ಯಕ್ಷಗಾನ ಕ್ಷೇತ್ರದಲ್ಲಿ ತಮ್ಮ ಇರುವಿಕೆಯನ್ನು ತೋರ್ಪಡಿಸಿದ ಕಲಾವಿದರೇ ಶ್ರೀಯುತ ಗಿರಿಧರ ರಾವ್.

ಕುಂಟಾರಿನಲ್ಲಿ 28–3–1969 ರಂದು ಹೇಮುಜಿ ರಾವ್ ಮತ್ತು ಶಾರದಾ ದಂಪತಿಗೆ ಮಗನಾಗಿ ಜನಿಸಿದ ಇವರು 6ನೇ ತರಗತಿಗೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿದರು.

13ನೇ ವಯಸ್ಸಿನಲ್ಲಿ ಶ್ರೀ ಪುರುಷೋತ್ತಮ ರಾವ್ ಮಾಟೆಡ್ಕ ಅವರ ಪ್ರೇರಣೆಯೊಂದಿಗೆ ನಾರಾಯಣ ಮಣಿಯಾಣಿಯವರಿಂದ ನಾಟ್ಯಾಭ್ಯಾಸ ಮಾಡಿ ರಂಗ ಪ್ರವೇಶ ಮಾಡಿದರು.

ರಾಜವೇಷ, ಪುಂಡು ವೇಷ ಹಾಗೂ ಬಣ್ಣದ ವೇಷಗಳನ್ನು ನಿರ್ವಹಿಸುವ ಮೂಲಕ ತಮ್ಮ ಪ್ರತಿಭೆಯನ್ನು ತೋರಿಸಿದವರು ಇವರಾಗಿದ್ದಾರೆ.

ಕುಂಬ್ಳೆ ಮೇಳದಲ್ಲಿ –3 ವರ್ಷ, ಮಲ್ಲ ಮೇಳದಲ್ಲಿ –2ವರ್ಷ, ಕದ್ರಿ ಮೇಳದಲ್ಲಿ –1ವರ್ಷ ಹಾಗೂ ಕೊಲ್ಲಂಗಾನ ಮೇಳದಲ್ಲಿ –5ವರ್ಷಗಳ ಕಾಲ ವೇಷಧಾರಿಯಾಗಿ ತಿರುಗಾಟ ಮಾಡಿದ ಅನುಭವವುಳ್ಳವರಾಗಿದ್ದಾರೆ. ಇಷ್ಟಲ್ಲದೆ ಹೊಸನಗರ ಮೇಳದಲ್ಲಿ 1ವರ್ಷಗಳ ಕಾಲ ಪಸಾಧನ ಕಲೆಯ ಕಾರ್ಯ ನಿರ್ವಹಿಸಿದ್ದಾರೆ.

ದೇವೇಂದ್ರ, ದಶರಥ, ನಿಶುಂಭ, ವೃಷಕೇತು, ಕೃಷ್ಣ, ರಾಮ, ತಾಟಕಿ, ಶೂರ್ಪನಖಿ, ಕರಾಳ ನೇತ್ರೆ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ರತಿಯವರನ್ನು ವಿವಾಹವಾಗಿ ಧನರಾಜ್ ಮತ್ತು ಹರ್ಷಿತ ಎನ್ನುವ ಎರಡು ಮಕ್ಕಳನ್ನು ಪಡೆದು ಕೃತಾರ್ಥರಾಗಿದ್ದಾರೆ.



## ಗುಡ್ಡಪ್ಪ ಸುವರ್ಣ

*ಮಂಚಿಕಟ್ಟೆ ಮನೆ, ಕರಿಕಳ ಅಂಚೆ, ಗ್ರಾಮ ಪೊಂಚಿತ್ತಡಿ*
*ಸುಳ್ಯ ತಾಲೂಕು ಪಂಜ 574232*
*ಮೊ ; 9611824854*

ಪ್ರಸ್ತುತ ಬಜ್ಪೆ ಸುಂಕದಕಟ್ಟೆಯ ಶ್ರೀ ಅನ್ನ ಪೂರ್ಣೇಶ್ವರಿ ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿರುವ ಶ್ರೀ ಗುಡ್ಡಪ್ಪ ಸುವರ್ಣರು ಪುಂಡು ವೇಷಧಾರಿಯಾಗಿ ಜನಮನ್ನಣೆಯನ್ನು ಪಡೆದಿದ್ದಾರೆ.


ಸೋಮಪ್ಪ ಪೂಜಾರಿ ಮತ್ತು ವಾಸಮ್ಮ ದಂಪತಿಯ ಸುಪುತ್ರರಾಗಿ ಪಂಜದಲ್ಲಿ ಜನಿಸಿದರು. 7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸಾಹಿತಿ ಕೆರೆಕೋಡಿ ಗಣಪತಿ ಎಂಬವರ ಪ್ರೇರಣೆಯ ಮೇರೆಗೆ ಯಕ್ಷಗಾನದ ರಂಗವನ್ನು ಪ್ರವೇಶಿಸಿದರು.

ಕರ್ಗಲ್ಲು ವಿಶ್ವೇಶ್ವರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ಗುಡ್ಡಪ್ಪ ಸುವರ್ಣರು ತಲಕಳ ಮೇಳ – 2 ವರ್ಷ, ಮಧೂರು ಮೇಳ –2 ವರ್ಷ, ಕದ್ರಿ ಮೇಳ –4 ವರ್ಷ, ಕರ್ನಾಟಕ ಮೇಳ –6 ವರ್ಷ, ಹಾಗೂ ಸುಂಕದಕಟ್ಟೆ ಮೇಳ –5 ವರ್ಷ ಹೀಗೆ 21 ವರ್ಷಗಳ ತಿರುಗಾಟದ ಅನುಭವವನ್ನು ಹೊಂದಿದ್ದಾರೆ.

ಚಂಡ–ಮುಂಡರು, ಕುಶ–ಲವರು, ಸುದರ್ಶನ, ಭಾರ್ಗವ, ಲಕ್ಷ್ಮಣ ಮೊದಲಾದ ಹೆಚ್ಚಿನ ಎಲ್ಲಾ ಪುಂಡುವೇಷಗಳನ್ನು ನಿರ್ವಹಿಸಿದ್ದಾರೆ. ತುಳು ಪ್ರಸಂಗಗಳಲ್ಲಿ ಕೋಟಿ–ಚೆನ್ನಯ, ಕಾಂತಾಬಾರೆ–ಬೂದಾಬಾರೆ ಮೊದಲಾದ ಪುಂಡು ವೇಷಗಳನ್ನು ನಿರ್ವಹಿಸಿದ್ದಾರೆ.

ಯುವಜನ ಮೇಳದಲ್ಲಿ ಭಾರ್ಗವ, ಜಯಂತ ಮೊದಲಾದ ಏಕಪಾತ್ರಾಭಿನಯಗಳನ್ನು ಮಾಡಿ ರಾಜ್ಯದಲ್ಲೇ ಪ್ರಥಮ ಸ್ಥಾನದ ಬಹುಮಾನಗಳನ್ನು ಪಡೆದಿರುವ ಇವರು ಮಳೆಗಾಲದಲ್ಲಿ ಯಕ್ಷಗಾನ ತರಬೇತಿಯನ್ನು ನಡೆಸುತ್ತಾ ಹಲವು ಮಂದಿ ಹವ್ಯಾಸಿ ಕಲಾವಿದರಿಗೆ ಮಾರ್ಗದರ್ಶನವನ್ನು ಮಾಡಿದ್ದಾರೆ.

ಶ್ರೀಮತಿ ಗುಲಾಬಿ ಎಂಬವರನ್ನು ವರಿಸಿರುವ ಇವರು ರಚನಾ, ರಕ್ಷಿತ, ಜಾಹ್ನವಿ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.



## ಗುರುಪ್ರಸಾದ್ ಬೊಳಿಂಜಡ್ಕ

*ಬೊಳಿಂಜಡ್ಕ ಮನೆ, ಮಾಳಿಲ ಗ್ರಾಮ*
*ಮುರುವ ಅಂಚೆ, ಬಂಟ್ವಾಳ ತಾಲೂಕು*
*ಮೊ; **9449283118.***

ಎಳೆವೆಯಲ್ಲೇ ಚೆಂಡೆ ಮದ್ದಳೆಯ ನುಡಿತ-ಬಡಿತಗಳಲ್ಲಿ ಪ್ರತಿಭೆಯ ಛಾಪನ್ನು ಮೂಡಿಸಿ ಪ್ರಸಿದ್ಧಿಗೆ ಬಂದಿರುವ ಗುರುಪ್ರಸಾದ ಬೊಳಿಂಜಡ್ಕರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


ದಿನಾಂಕ 29-8-1982 ರಂದು ಬಾಲಕೃಷ್ಣ ಶೆಟ್ಟಿ ಮತ್ತು ನೇತ್ರಾವತಿ ದಂಪತಿಯ ಸುಪುತ್ರರಾಗಿ ಬೊಳಿಂಜಡ್ಕದಲ್ಲಿ ಜನಿಸಿದರು.

10ನೇ ತರಗತಿ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದು ಆಮೇಲೆ ಶ್ರೀ ಹರಿನಾರಾಯಣ ಬೈಪಾಡಿತ್ತಾಯರಿಂದ ಚೆಂಡೆ-ಮದ್ದಳೆಯ ಅಭ್ಯಾಸವನ್ನು ಮಾಡಿ ಮೇಳ ತಿರುಗಾಟವನ್ನು ಆರಂಭಿಸಿದರು.

16ನೇ ವಯಸ್ಸಿನಿಂದಲೇ ಹಿಮ್ಮೇಳ ವಾದಕನಾಗಿ ಕೈಚಳಕದ ಸಾಧನೆಯನ್ನು ತೋರುತ್ತಾ ಬೆಳೆದು ಬಂದವರು. ಈಗಾಗಲೇ ಕಟೀಲು ಮೇಳದಲ್ಲಿ 10 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಭಾಗವತಿಕೆಯ ಅಭ್ಯಾಸವನ್ನು ಕೂಡಾ ಮಾಡಿರುವ ಇವರು ಬೇಡಿಕೆಯ ಮೇರೆಗೆ ಹಲವಾರು ತಾಳಮದ್ದಳೆಯ ಕಾರ್ಯಕ್ರಮಗಳಲ್ಲಿ ಕಂಡು ಬರುತ್ತಾರೆ.

ಮಳೆಗಾಲದಲ್ಲಿ ಮನೆಯ ಕೃಷಿಗಾರಿಕೆಗೆ ಶ್ರಮಿಸುತ್ತಾ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.



## ಗೋವಿಂದ ಭಟ್ ಪದ್ಯಾಣ

*ಕಟೀಲು ದೇವಸ್ಥಾನ*
*ಮಂಗಳೂರು ತಾಲೂಕು-574148*
*ಮೊ ; 9482072294*


ರಂಗವನ್ನು ತುಂಬುವ ಸ್ವರಭಾರವನ್ನು ಹೊಂದಿದ್ದು ಭಾಗವತಿಕೆಯ ಮೂಲಕ ಗುರುತಿಸಲ್ಪಟ್ಟಿರುವ ಶ್ರೀ ಗೋವಿಂದ ಭಟ್ಟರು ಪ್ರಸ್ತುತ ಕಟೀಲು ಮೇಳದಲ್ಲಿ 2ನೇ ಭಾಗವತರಾಗಿ 17ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದಿನಾಂಕ 13-12-1969ರಂದು ಗಣಪತಿ ಭಟ್ ಮತ್ತು ಅದಿತಿ ಅಮ್ಮ ದಮಪತಿಯ ಸುಪುತ್ರರಾಗಿ ಪದ್ಯಾಣದಲ್ಲಿ ಜನಿಸಿರುವ ಗೋವಿಂದ ಭಟ್ಟರು ಬಿ.ಎ. ಪದವೀದರರಾಗಿದ್ದಾರೆ.

ಎಳವೆಯಿಂದಲೇ ಯಕ್ಷಗಾನ ಕಲೆಯಿಂದ ಆಕರ್ಷಿತರಾಗಿ ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಿಂದ ಹಾಡುವ, ಭಾಗವತಿಕೆಯ ಅನುಭವವನ್ನು ಪಡೆದರು.

ಮಳೆಗಾಲದಲ್ಲಿ ಕಟೀಲು ದೇವಸ್ಥಾನದಲ್ಲಿ ಸೇವಾ ವೃತ್ತಿಯನ್ನು ಮಾಡುವ ಇವರು ಕಟೀಲು ಮೇಳವೊಂದರಲ್ಲೇ 17 ವರ್ಷಗಳ ತಿರುಗಟವನ್ನು ನಡೆಸಿದ್ದಾರೆ.

ನಗು ಮೊಗದಿಂದ ರಂಗಸ್ಥಳದಲ್ಲಿ ಕಾಣುವ ಇವರು ಯಾವುದೇ ಪ್ರಶಸ್ತಿ ಗೌರವಗಳ ಬಗ್ಗೆ ಆಶಾವಾದಿಯಾಗದೆ ತನ್ನ ಪಾಡಿಗೆ ತಾನು ಎಂಬಂತೆ ಕಲಾಸೇವೆಯನ್ನು ನಡೆಸುತ್ತಾ ಇದ್ದಾರೆ.



## ಗೋಪಾಲಕೃಷ್ಣ ಭಟ್

*ಪುಂಡಿಕ್ಯಾ ಮನೆ, ಕಾರಡ್ಕ ಗ್ರಾಮ,*
*ಮುಳ್ಳೇರಿಯ ಅಂಚೆ, ಕಾಸರಗೋಡು*
*(ಮೊಬೈಲ್) 9448315385 / 9481023272*


14-5-1973 ರಲ್ಲಿ ಶ್ರೀ ಗೋವಿಂದ ಭಟ್ ಹಾಗೂ ಶ್ರೀಮತಿ ಭವಾನಿ ದಂಪತಿಯ ಸುಪುತ್ರರಾಗಿ ವಿಟ್ಲದಲ್ಲಿ ಹುಟ್ಟಿದರು.

ಬಿ. ಎ. ಪದವೀಧರರಾಗಿರುವ ಇವರು ಮಾವನಾದ ಬಲಿಪ ನಾರಾಯಣ ಭಾಗವತ, ಸಣ್ಣ ಮಾವ - ಬಲಿಪ ವಿಶ್ವೇಶ್ವರ ಭಟ್, ಚಿಕ್ಕಪ್ಪ ಪುಂಡಿಕ್ಯಾ ಕೃಷ್ಣ ಭಟ್ ಇವರೆಲ್ಲರ ಮಾರ್ಗದರ್ಶನವನ್ನು ಪಡೆದು ಯಕ್ಷಗಾನ ಕಲೆಯತ್ತ ಪ್ರಾಭಾವಿತರಾದರು.

22 ನೇ ವಯಸ್ಸಿನಿಂದ ಭಾಗವತಿಕೆಯನ್ನು ಮಾಡುತ್ತಾ ಬಂದಿರುವ ಇವರು ಕಾಟಿಪಳ್ಳ ಗಣೇಶ ಪುರ ಮೇಳ - 1 ವರ್ಷ, ಶ್ರೀ ಕಟೀಲು ಮೇಳ - 13 ವರ್ಷ, ಹೀಗೆ ತಿರುಗಾಟದ ಹಿನ್ನಲೆಯನ್ನು ಹೊಂದಿರುವರು.

ಪ್ರಸಂಗ ನಿರ್ದೇಶನದ ಬಗ್ಗೆ ಬೊಟ್ಟಿಗೆರೆ ಪುರುಷೋತ್ತಮ ಪೂಂಜರಿಂದ ಹೆಚ್ಚಿನ ಅನುಭವವನ್ನು ಪಡೆದಿರುವ ಇವರು ಬಾಲ್ಯದಲ್ಲಿ ಪಾತ್ರನಿರ್ವಹಣೆಯನ್ನು ಕೂಡಾ ಮಾಡಿದ್ದಾರೆ. ಸುದರ್ಶನ , ವರುಣ, ವಿಭೀಷಣ, ಶಂಬರಾಸುರ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಬಲಿಪ ಮನೆತನದ ಪಾರಂಪರಿಕಾ ಶೈಲಿಯಲ್ಲಿ ಭಾಗವತಿಕೆಯನ್ನು ಮಾಡುತ್ತಾ ಕಲಾ ಸೇವೆಯನ್ನು ನಡೆಸುತ್ತಿರುವ ಶ್ರೀ ಗೋಪಾಲಕೃಷ್ಣ ಭಟ್ಟರು ಪ್ರಸ್ತುತ ಕಟೀಲು ಮೇಳದ 2ನೇ ಭಾಗವತರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.



## 39. ಗೋಪಾಲಕೃಷ್ಣ ಮಯ್ಯ ಬಾಯಾರು

*ಪೆಲತ್ತಡ್ಕ ಮನೆ*
*ಬಾಯಾರು ಗ್ರಾಮ ಮತ್ತು ಅಂಚೆ*
*ವಯಾ ಪೈವಳಿಕೆ ಕಾಸರಗೋಡು - 671348*
*ಮನೆ: 04998-264297*
*ಮೊಬೈಲ್: 09480936324.*

ಭಾಗವತಿಕೆಯ ಆಕರ್ಷಣೆಯಿಂದ ಅಧ್ಯಯನ ಆಸಕ್ತರಾಗಿ ರಂಗಾನುಭವದಲ್ಲಿ ನಿಷ್ಣಾತರಾಗಿ ಮುಖ್ಯ ಭಾಗವತರ ಸ್ಥಾನಕ್ಕೇರಿದ ಗೋಪಾಲಕೃಷ್ಣ ಮಯ್ಯ ಪೆಲತ್ತಡ್ಕರವರು ಕಟೀಲು ಮೇಳವೊಂದರಲ್ಲೇ ತಿರುಗಾಟವನ್ನು ಮಾಡಿರುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಶಂಕರನಾರಾಯಣ ಮಯ್ಯ ಮತ್ತು ಸುಂದರಿಯಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಶ್ರೀಯುತರು ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.
ಇವರ ತಂದೆ ಯಕ್ಷಗಾನ ಕಲೆಯ ಬಗ್ಗೆ ಆಸಕ್ತರು ಹಾಗೂ ಅನುಭವಿಯಾಗಿದ್ದರು. ದೊಡ್ಡತಂದೆ ವೆಂಕಪ್ಪಯ್ಯ ಸಾಹಿತಿಯಾಗಿದ್ದರು. ವೆಂಕಪ್ಪಯ್ಯರ ಮಗ ಸಿರಿಬಾಗಿಲುರಾಮಕೃಷ್ಣ ಮಯ್ಯರು ಧರ್ಮಸ್ಥಳ ಮೇಳದ ಭಾಗವತರಾಗಿದ್ದು ಇವರ ಅಣ್ಣನಾಗಿದ್ದಾರೆ. ಹೀಗಾಗಿ ಮನೆತನದ ಹಿನ್ನೆಲೆ ಇವರ ಕಲಾ ಜೀವನದ ಬೆಳವಣಿಗೆಗೆ ಉತ್ತೇಜನವನ್ನು ನೀಡಿತು.

ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿ ರಂಗವೇರಿದ ಶ್ರೀಯುತರು 1990ರಿಂದ ಇಂದಿನ ತನಕ 20 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಮದ್ದಳೆಯ ನುಡಿತದಲ್ಲಿ ಕೈಚಳಕವನ್ನು ಸಾಧಿಸಿರುವ ಇವರು ಬೆಳವಣಿಗೆಯ ಆರಂಭದ ಹಂತದಲ್ಲಿ ವೇಷಗಾರಿಕೆಯ ಬಗ್ಗೆ ಆಸಕ್ತಿ ಇದ್ದು ಬ್ರಹ್ಮ, ಲಕ್ಷ್ಮೀ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ.

ಶ್ರೀಮತಿ ಶಕುಂತಳಾ ಎಂಬವರನ್ನು ವರಿಸಿರುವ ಇವರು ಮಳೆಗಾಲದಲ್ಲಿ ಕೃಷಿಕರಾಗಿ ಉಪವೃತ್ತಿಯನ್ನು ನಿರ್ವಹಿಸುತ್ತಾರೆ.



## ಗಂಗಾಧರ ಕೆಸರುಗದ್ದೆ

*ಗೋಳಾರ ಮನೆ, ಕೆಸರುಗದ್ದೆ ಅಂಚೆ*
*ಮಂಗಳೂರು ತಾಲೂಕು*
*ಮೊ: 9901327404.*

ಯಕ್ಷಗಾನ ಪರಿಸರದಲ್ಲಿಯೇ ಹುಟ್ಟಿ ಬೆಳೆದು ಯಕ್ಷಗಾನದತ್ತ ಒಲವು ಮೂಡಿಸಿಕೊಂಡು ಯಕ್ಷಗಾನ ಪ್ರವೇಶ ಮಾಡಿದ ಶ್ರೀ ಗಂಗಾಧರ ಕೆಸರುಗದ್ದೆ ಇವರು ಪುಂಡು ವೇಷ ಹಾಗೂ ಸ್ತ್ರೀ ವೇಷಧಾರಿಯಾಗಿ ತಮ್ಮ ಕಲಾಸೇವೆಯನ್ನು ಮಾಡುತ್ತಿದ್ದಾರೆ.


30 ವರ್ಷ ವಯೋಮಾನದವರಾದ ಇವರು ಲಿಂಗಯ್ಯ ಹಾಗೂ ಕಮಲಾ ದಂಪತಿಗೆ ಬೆಳುವಾಯಿಯಲ್ಲಿ ಸುಪುತ್ರರಾಗಿ ಜನಿಸಿರುತ್ತಾರೆ.

5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ 15ನೇ ವರ್ಷದಲ್ಲಿ ಯಕ್ಷಗಾನ ಪ್ರವೇಶ ಮಾಡಿದ ಇವರು ರಮೇಶ ಕುಲಶೇಖರ ಅವರಿಂದ ನಾಟ್ಯಾಭ್ಯಾಸ ಮಾಡಿ ಜಯಂತ ಕಾರಂತ್‌ರವರಿಂದ ಯಕ್ಷಗಾನದ ಬಗ್ಗೆ ಪೂರಕವಾದ ಅಭ್ಯಾಸವನ್ನು ಮಾಡಿರುತ್ತಾರೆ.

ಸ್ತ್ರೀ ವೇಷ ಹಾಗೂ ಪುಂಡುವೇಷಗಳನ್ನು ನಿರ್ವಹಿಸುವ ಇವರು ತಲಕಳ, ಕಟೀಲು, ಬಪ್ಪನಾಡು ಮೇಳಗಳಲ್ಲಿ ಒಂದೊಂದು ವರ್ಷಗಳ ತಿರುಗಾಟವನ್ನು ಪೂರೈಸಿರುವರು. ಆಮೇಲೆ ಸುಂಕದಕಟ್ಟೆ ಮೇಳದಲ್ಲಿ 9 ವರ್ಷ ಹಾಗೂ ಎಡನೀರು ಮೇಳದಲ್ಲಿ ಕಳೆದ 3 ವರ್ಷಗಳಿಂದ ತಿರುಗಾಟವನ್ನು ಮಾಡಿರುತ್ತಾರೆ.

ಮಾಲಿನಿ, ಮಾಯಾಸೀತೆ, ರತಿ, ವೃಷಕೇತು, ವರುಣ, ಮಾರುತ, ಆದಿಮಾಯೆ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿ ಮನ್ನಣೆಯನ್ನುಗಳಿಸಿರುತ್ತಾರೆ.

ಶ್ರೀಮತಿ ರಂಜಿನಿ ಎಂಬವರನ್ನು ವಿವಾಹವಾಗಿ ಕಾರ್ತಿಕ್ ಎಂಬ ಸುಪುತ್ರನನ್ನು ಪಡೆದು ಸುಖೀ ಸಂಸಾರವನ್ನು ನಡೆಸುವರು.



## ಚೆನ್ನಪ್ಪ ಗೌಡ (ಉಮೇಶ್ ಬಂಗಾಡಿ)

*ಅಂತರಿಮಾರ್ ಮನೆ. ಇಂದಬೆಟ್ಟು ಗ್ರಾಮ,*
*ಬಂಗಾಡಿ ಅಂಚೆ. ಬೆಳ್ತಂಗಡಿ ತಾಲೂಕು 574204.*
*ಮೊ ; 9743024577.*

ಶ್ರೀ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಚೆನ್ನಪ್ಪ ಗೌಡರು ಪುಂಡು ವೇಷ ಹಾಗೂ ರಾಜವೇಷದ ಮುಖೇನ ಮನ್ನಣೆಯನ್ನು ಗಳಿಸಿರುವರು.

ಶ್ರೀ ಅಣ್ಣು ಗೌಡ ಹಾಗೂ ಶ್ರೀಮತಿ ಪೂವಕ್ಕ ದಂಪತಿಯ ಸುಪುತ್ರರಾಗಿ 6-6-1975 ರಂದು ಜನಿಸಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.


ಇವರ ತಂದೆಯುವರು ಹವ್ಯಾಸಿ ಅರ್ಥಧಾರಿಯಾಗಿದ್ದುದರಿಂದ ಅವರ ಪ್ರೇರಣೆಯ ಮೇರೆಗೆ ಯಕ್ಷಗಾನದ ನಾಟ್ಯಾಭ್ಯಾಸಕ್ಕಾಗಿ ಧರ್ಮಸ್ಥಳ ಕ್ಷೇತ್ರದ ಲಲಿತ ಕಲಾ ಕೇಂದ್ರವನ್ನು ಸೇರಿದರು.

ಕಲಾ ಬೋಧಕರಾಗಿರುವ ಶ್ರೀ ತಾರಾನಾಥ ವರ್ಕಾಡಿ ಅವರಿಂದ ಹೆಜ್ಜೆಗಾರಿಕೆಯನ್ನರಿತ ಇವರು ಕೀರ್ತಿ ಶೇಷ ಕಲಾವಿದರಾದ ಹರೀಶ್ ಶೆಟ್ಟಿಗಾರ್ ಮುಚ್ಚೂರು ಅವರಿಂದ ಅರ್ಥಗಾರಿಕೆಯ ಬಗ್ಗೆ ಅನುಭವವನ್ನು ಸಂಪಾದಿಸಿ ಬೆಳೆದರು.

ಕರ್ನಾಟಕ ಮೇಳದಲ್ಲಿ ಒಂದು ವರುಷದ ತಿರುಗಾಟವನ್ನು ಮಾಡಿರುವ ಇವರು ಕಟೀಲು ಮೇಳದಲ್ಲಿ ಕಳೆದ ಹದಿನಾರು ವರ್ಷಗಳಿಂದ ತಿರುಗಾಟವನ್ನು ನಡೆಸಿರುವರು.

ಚಂಡ-ಮುಂಡರು, ದೇವೇಂದ್ರ, ಅರ್ಜುನ, ಚಂಡ-ಪ್ರಚಂಡರು, ವೃಷಕೇತು, ಪ್ರದ್ಯುಮ್ನ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಮೋಹಿನಿ ಎಂಬವರನ್ನು ವರಿಸಿರುವ ಇವರು ಮಳೆಗಾಲದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡು ಜೀವನ ನಡೆಸುತ್ತಾ ಇದ್ದಾರೆ.



## ಚೆನ್ನಕೇಶವ ಎಂ.

*ಸರಿಪಳ್ಳ, ಸಿಸ್ಟರ್ಸ್ ಕಂಪೌಂಡ್, ಅಳಪೆ ಗ್ರಾಮ,*
*ಪಡೀಲು ಅಂಚೆ*
*ಮಂಗಳೂರು-575007*

ರೂಪ, ಸೌಂದರ್ಯ, ಲಾಲಿತ್ಯ ಹಾಗೂ ನಾಟ್ಯವಿಲಾಸದಿಂದ ಸ್ತ್ರೀ ವೇಷವನ್ನು ಮೆರೆಸಿದ ಕಲಾವಿದರಾದ ಚೆನ್ನಕೇಶವ ಎಂ. ಇವರು ಮೇಳದಿಂದ ನಿವೃತ್ತರಾದ ಅನುಭವಿ ಕಲಾವಿದರಾಗಿದ್ದಾರೆ.

ಮರವಂತೆಯ ಹೊನ್ನಪ್ಪ ಪೂಜಾರಿ ಹಾಗೂ ಪುಟ್ಟಮ್ಮ ದಂಪತಿಗೆ ಸುಪುತ್ರರಾಗಿ ಜನಿಸಿದ ಇವರು 4ನೇ ತರಗತಿಯ ತನಕ ವ್ಯಾಸಂಗ ಮಾಡಿರುವರು.

ಕೀರ್ತಿಶೇಷರಾಗಿರುವ ಅಗರಿ ಶ್ರೀನಿವಾಸ ಭಾಗವತರಿಂದ ರಂಗಾನುಭವ ಹಾಗೂ ಕಾವೂರು ಕೇಶವ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿ ಯಕ್ಷಗಾನಕ್ಕೆ ಪಾದಾರ್ಪಣೆ ಮಾಡಿದರು.

72ರ ವಯೋಮಾನದ ಹಿರಿತನಕ್ಕೆ ಏರಿರುವ ಇವರು ಕುಂಡಾವು ಮೇಳ -2ವರ್ಷ, ಕರ್ನಾಟಕ ಮೇಳ –3 ವರ್ಷ, ಸುಂಕದಕಟ್ಟೆ ಮೇಳ –7 ವರ್ಷ, ಸುರತ್ಕಲ್ ಮೇಳ –6 ವರ್ಷ ಹೀಗೆ ಮೇಳಗಳಲ್ಲಿ 18 ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ.

ಇತ್ತೀಚೆಗಿನ ಕೆಲವು ವರ್ಷಗಳಿಂದ ಯಕ್ಷಗಾನದ ಮೇಳ ತಿರುಗಾಟದಿಂದ ನಿವೃತ್ತಿ ಪಡೆದು ವಿಶ್ರಾಂತ ಜೀವನವನ್ನು ನಡೆಸುತ್ತಾ ಇದ್ದಾರೆ.

ಶ್ರೀಮತಿ ಸಾವಿತ್ರಿ ಎಂಬವರನ್ನು ವರಿಸಿ ನಾಲ್ವರು ಹೆಮ್ಮಕ್ಕಳು ಹಾಗೂ ಓರ್ವ ಗಂಡು ಮಗುವನ್ನು ಪಡೆದು ಕೃತಾರ್ಥರಾಗಿದ್ದಾರೆ.

ಬಿಕರ್ನಕಟ್ಟೆಯ ಭಜನಾ ಮಂಡಳಿಯಲ್ಲಿ ನಾಟ್ಯ ತರಬೇತಿ ನಡೆಸಿರುವ ಇವರ ಕಲಾ ಪ್ರತಿಭೆಗೆ ಗೌರವ ಪುರಸ್ಕಾರವಾಗಿ ಜಪ್ಪು, ಮಂಗಳೂರು, ಬಿಕರ್ನಕಟ್ಟೆ, ಮೊದಲಾದ ಪ್ರದೇಶಗಳಿಂದ ಸಂಮಾನಗಳು ಸಂದಿವೆ.



# ಚಂದ್ರಶೇಖರ ಹೆಗ್ಡೆ ಬಿ. ಎನ್. ಪುತ್ತೂರು

*ಬಪ್ಪಳಿಗೆ ಮನೆ, ಆಶ್ರಯ ಕಾಲೊನಿ.*
*ಅಂಚೆ ಪುತ್ತೂರು,*
*ಮೊ ; 9449387381*

ರಾಜವೇಷ ಮತ್ತು ನಾಟಕೀಯ ವೇಷದಲ್ಲಿ ಗತ್ತುಗಾರಿಕೆಯನ್ನು ಮರೆಸಿರುವ ಶ್ರೀ ಬಿ.ಎನ್. ಚಂದ್ರ ಶೇಖರ ಹೆಗ್ಡೆಯವರು ಮೇಳದಿಂದ ಸ್ವಯಂ ನಿವೃತ್ತಿ ಪಡೆದು ಯಕ್ಷಗಾನದ ವಸ್ತ್ರದ ಹೊಲಿಗೆ ಹಾಗೂ ಆಭರಣ ತಯಾರಿಯ ಕಾರ್ಯವನ್ನು ಮಾಡುತ್ತಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಮೇಳದ ಕಲಾವಿದರಾಗಿ ಕೀರ್ತಿ ಶೇಷರಾಗಿರುವ ಪುತ್ತೂರು ನಾರಾಯಣ ಹೆಗ್ಡೆ ಹಾಗೂ ಸಂಜೀವಿನಿ ದಂಪತಿಯ ಸುಪುತ್ರರಾಗಿ 2-3-1960 ರಂದು ಇವರು ಜನಿಸಿದರು.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ತಂದೆಯವರ ಪ್ರೇರಣೆ ಮತ್ತು ಹಿರಿಯ ಕಲಾವಿದರಾಗಿರುವ ಶೀನಪ್ಪ ಭಂಡಾರಿ ಅವರ ಪ್ರೋತ್ಸಾಹದ ಮೇರೆಗೆ ಶಾಲಾ ರಜೆಯಲ್ಲಿ ಸುಬ್ರಹ್ಮಣ್ಯ ಮೇಳಕ್ಕೆ ಹೋಗಿ ಪಾತ್ರ ನಿರ್ವಹಣೆ ಮಾಡುತ್ತಿದ್ದರು.

ಆರಂಭದಲ್ಲಿ ನೋಡಿ ಕಲಿತು ಪಾತ್ರ ನಿರ್ವಹಣೆ ಮಾಡುತ್ತಿದ್ದ ಇವರು ಮುಂದೆ ಧರ್ಮಸ್ಥಳದ ಲಲಿತ ಕಲಾ ಕೇಂದ್ರವನ್ನು ಸೇರಿ ಕೆ. ಗೋವಿಂದ ಭಟ್ಟರಿಂದ ಹೆಚ್ಚಿನ ಅನುಭವವನ್ನು ಸಂಪಾದಿಸಿದರು.

ಧರ್ಮಸ್ಥಳ ಮೇಳದಲ್ಲಿ 3 ವರ್ಷ ಹಾಗೂ ಸುಂಕದಕಟ್ಟೆ ಮೇಳದಲ್ಲಿ 12 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಆರೋಗ್ಯದ ಕಾಳಜಿಯಿಂದಾಗಿ ಮೇಳ ತಿರುಗಾಟವನ್ನು ನಿಲ್ಲಿಸ ಬೇಕಾಯಿತು.

ದೇವೇಂದ್ರ, ಅರ್ಜುನ, ಕಂಸ, ಮಾಗಧ, ಶಿಶುಪಾಲ, ರಕ್ತಬೀಜ, ಇಂದ್ರಜಿತು, ಹಿರಣ್ಯಾಕ್ಷ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಪ್ರಸಾಧನ ಕಲೆಯಲ್ಲಿ ಪ್ರವೀಣರಾಗಿರುವ ಇವರು ಮಳೆಗಾಲದಲ್ಲಿ ಧರ್ಮಸ್ಥಳ, ಹಾಗೂ ಸುಂಕದ ಕಟ್ಟೆ ಮೇಳಗಳ ವಸ್ತ್ರ ಹಾಗೂ ಭೂಷಣದ ದರಸ್ತಿ ಹಾಗೂ ಹೊಸ ತಯಾರಿಕೆಯ ಕಾರ್ಯವನ್ನು ನಿರ್ವಹಿಸಿದ್ದಾರೆ, ಇಷ್ಟಲ್ಲದೆ ಆಸಕ್ತರಿಗೆ ತರಬೇತಿಯನ್ನು ನೀಡಿದ್ದಾರೆ.

ಇವರ ಸಹೋದರರಾದ ಶ್ರೀ ದೇವರಾಜ ಹೆಗ್ಡೆ ಪುತ್ತೂರು ನುರಿತ ಹವ್ಯಾಸಿ ಕಲಾವಿದರಾದರೆ, ಇನ್ನೋರ್ವ ಸಹೋದರರಾದ ಗಿರೀಶ ಹೆಗ್ಡೆಯವರು ಧರ್ಮಸ್ಥಳ ಮೇಳದ ಉಪಪ್ರಬಂಧಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಕುಟುಂಬ ಬಾಂಧವರಲ್ಲಿ ಕಲೆಯ ಅಭಿರುಚಿ ಇದ್ದು ಬೆಳೆದ ಇವರ ಮನೆತನಕ್ಕೆ ಯಕ್ಷಗಾನದ ಹಿನ್ನೆಲೆ ಇದೆ.

ಶ್ರೀಮತಿ ಶ್ಯಾಮಲ ಎಂಬವರನ್ನು ವರಿಸಿರುವ ಇವರು ಪಲ್ಲವಿ, ಪ್ರತಿಮಾ, ಚಂದನ್ ಪ್ರಸಾದ್ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.



## ಚಂದ್ರಹಾಸ ತುಂಬೆ

*ಸಂಜಯನಗರ ಮನೆ, ದರ್ಬೆ ಅಂಚೆ,*
*ಪುತ್ತೂರು – 574202*

ಪುಂಡುವೇಷ, ರಾಜವೇಷ, ಹಾಸ್ಯ ವೇಷಗಳನ್ನು ಮಾಡುವ ಶ್ರೀಯುತ ಚಂದ್ರಹಾಸ ತುಂಬೆ ಇವರು ಪ್ರಸಕ್ತ ಸಾಲಿನಲ್ಲಿ ಸಸಿಹಿತ್ಲು ಭಗವತಿ ಮೇಳದ ಕಲಾವಿದರಾಗಿದ್ದಾರೆ.

ದಿ। ಕೊರಗಪ್ಪ ಪೂಜಾರಿ ಹಾಗೂ ತುಂಗಮ್ಮ ಪೂಜಾರ್ತಿ ದಂಪತಿಗೆ ಸುಪುತ್ರರಾಗಿ ತುಂಬೆಯಲ್ಲಿ ಜನಿಸಿದ ಇವರು ಮಾಯಿಪ್ಪಾಡಿ ಕುಂಞಿರಾಯ ಶೆಟ್ಟಿ ಹಾಗೂ ಮೇರು ಕಲಾವಿದ ಕೆ. ಗೋವಿಂದ ಭಟ್‌ರಿಂದ ನಾಟ್ಯಾಭ್ಯಾಸ ಮಾಡಿ ರಂಗ ಪ್ರವೇಶ ಮಾಡಿದರು.

ಸುಂಕದಕಟ್ಟೆ ಮೇಳದಲ್ಲಿ –3 ವರ್ಷ, ತಲಕಳ ಮೇಳದಲ್ಲಿ –4 ವರ್ಷ, ಪುತ್ತೂರು ಮೇಳದಲ್ಲಿ –2 ವರ್ಷ, ಕದ್ರಿ ಮೇಳದಲ್ಲಿ –2 ವರ್ಷ, ಕುಂಟಾರು, ಮಂಗಳಾದೇವಿ, ಕರ್ನಾಟಕ, ಅರುವ ಮೇಳಗಳಲ್ಲಿ ಒಂದೊಂದು ವರ್ಷಗಳ ತಿರುಗಾಟವನ್ನು ಮಾಡಿದ ಅನುಭವ ಇವರಿಗಿದೆ.

ಕಳೆದ 7 ವರ್ಷಗಳಿಂದ ಭಗವತಿ ಮೇಳದ ಪ್ರಮುಖ ಕಲಾವಿದರೆನಿಸಿದ ಇವರು ಬಭ್ರುವಾಹನ, ಕುಶ–ಲವ, ಸುದರ್ಶನ, ಭಾರ್ಗವ, ಕೋಟಿ–ಚೆನ್ನಯ, ಕಾಂತಬಾರೆ–ಬೂದಬಾರೆ, ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪ್ರಸಾಧನ ಕಲೆ ಹಾಗೂ ಯಕ್ಷಗಾನದ 'ಭೂಷಣವನ್ನು ತಯಾರಿಸುವ ಕಲೆಯಲ್ಲಿ ನಿಪುಣತೆಯನ್ನು ತೋರಿದ್ದಾರೆ.

45ರ ವಯೋಮಾನಕ್ಕೆ ಏರಿದ ಇವರು ಪತ್ನಿ ಮೀನಾಕ್ಷಿ, ಹಾಗೂ ಮಕ್ಕಳಾದ ಲೋಹಿತ್, ಪುನೀತ್, ಹೇಮಂತಾ ಅವರೊಂದಿಗೆ ಜೀವನ ನಡೆಸುತ್ತಿದ್ದಾರೆ.



## ಜನಾರ್ದನ ಕೊಕ್ಕಡ

*ದೇರಾಜೆ ಮನೆ, ಕೊಕ್ಕಡ*
*ಬೆಳ್ತಂಗಡಿ ತಾಲೂಕು–574198*
*(ಮನೆ ದೂರವಾಣಿ) 08256 – 310515*

ಪುಂಡು ವೇಷಧಾರಿಯಾಗಿ ಪ್ರತಿಭೆಯನ್ನು ತೋರುತ್ತಿರುವ ಶ್ರೀ ಜನಾರ್ದನ ಕೊಕ್ಕಡರವರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಲಿಂಗಪ್ಪ ಗೌಡ ಹಾಗೂ ಶೇಸಮ್ಮ ದಂಪತಿಯ ಸುಪುತ್ರರಾಗಿ 16–4–1982ರಂದು ಕೊಕ್ಕಡದಲ್ಲಿ ಜನಿಸಿದರು.

10ನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕಲೆಯ ಮೇಲಿನ ಸ್ವಂತಾಸಕ್ತಿ ಹಾಗೂ ಉದ್ಯೋಗದ ಅನಿವಾರ್ಯತೆಯಿಂದ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿದರು.

ದಿ। ಪರಮೇಶ್ವರ ಆಚಾರ್ ಎಂಬವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದ ಇವರು ಮೇಳ ತಿರುಗಾಟದಲ್ಲಿ ಅನುಭವವನ್ನು ಸಂಪಾದಿಸುತ್ತ ಜೊತೆಜೊತೆಗೆ ನಾಟ್ಯ ಮತ್ತು ಮಾತಿನ ಶೈಲಿಯನ್ನು ನುಣುಪಾಗಿಸಿ ಬೆಳೆಯುತ್ತಾ ಕಲಾ ಸಾಧನೆಯನ್ನು ಮಾಡುತ್ತಾ ಇದ್ದಾರೆ.

ಕಟೀಲು ಮೇಳದಲ್ಲಿ ಹತ್ತನೇಯ ವರುಷದ ತಿರುಗಾಟವನ್ನು ಪೂರೈಸಿರುವ ಕೊಕ್ಕಡರು ವೃಷಕೇತು, ಅಭಿಮನ್ಯು, ಮನ್ಮಥ, ಭಾರ್ಗವ ಮೊದಲಾದ ಪುಂಡುವೇಷಗಳನ್ನು ಮಾಡುತ್ತಿರುವುದರ ಜೊತೆಗೆ ದುರ್ಜಯ, ದೇವೇಂದ್ರ, ಅರ್ಜುನ ಮುಂತಾದ ಕಿರೀಟ ವೇಷಗಳ ಪಾತ್ರಗಳನ್ನು ಕೂಡಾ ನಿರ್ವಹಿಸುತ್ತಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಜೊತೆಗೆ ಕೆಲವಾರು ಕಾರ್ಯಕ್ರಮಗಳಲ್ಲಿ ಹೇಳಿಕೆಯ ಮೇರೆಗೆ ಭಾಗವಹಿಸುತ್ತಾ ಕಲಾ ಸೇವೆಯನ್ನು ಮಾಡುತ್ತಾರೆ.



## ಜಗದಾಭಿರಾಮ ಸ್ವಾಮಿ ಪಡುಬಿದ್ರಿ

*ಉದಯಾದ್ರಿ ಮಠ,*
*ಉಡುಪಿ ಜಿಲ್ಲೆ*

ತಂದೆಯವರ ಪ್ರೇರಣೆಯೊಂದಿಗೆ ಶ್ರೀಯುತ ಜಗದಾಭಿರಾಮ ಪಡುಬಿದ್ರಿಯವರು ವೇಷಧಾರಿಯಾಗಿ ಯಕ್ಷಗಾನ ಕ್ಷೇತ್ರಕ್ಕೆ ಬಂದು ಮೇಳ ತಿರುಗಾಟವನ್ನು ಮಾಡಿ ಜನಮನ್ನಣೆಗೊಳಗಾದ ಕಲಾವಿದರಾಗಿದ್ದಾರೆ.

11-11-73ರಲ್ಲಿ ಪಡುಬಿದಿರೆಯಲ್ಲಿ ದಿ। ಪಟ್ಟಾಭಿರಾಮ ಸ್ವಾಮಿ ಹಾಗೂ ವಸಂತಿ ದಂಪತಿಗೆ ಇವರು ಮಗನಾಗಿ ಜನಿಸಿದರು.

ಪ್ರಾಥಮಿಕ ಹಂತದ ಶಿಕ್ಷಣಗಳಿಸಿರುವ ಇವರು ಗೋವಿಂದ ಭಟ್ ಹಾಗೂ ಕರ್ಗಲ್ಲು ವಿಶ್ವೇಶ್ವರ ಭಟ್ ಅವರಿಂದ ನಾಟ್ಯ ತರಬೇತಿಯನ್ನು ಪಡೆದರು. ಆಮೇಲೆ ನೆಡ್ಲೆ ನರಸಿಂಹ ಭಟ್‌ರಿಂದ ರಂಗವಾಹಿತಿಯ ಅನುಭವವನ್ನು ಸಂಪಾದಿಸಿದ ಇವರು ಸುಬ್ರಾಯ ಹೊಳ್ಳ ಕಾಸರಗೋಡು ಅವರಿಂದ ಉತ್ತೇಜಿತರಾಗಿ ಉತ್ತಮ ಅವಕಾಶಗಳನ್ನು ಬಳಸಿಕೊಂಡರು.

ಧರ್ಮಸ್ಥಳ -7 ವರ್ಷ ಕಟೀಲು -6 ವರ್ಷ ಮಧೂರು -1 ವರ್ಷ ಬಪ್ಪನಾಡು -1ವರ್ಷ ಹೀಗೆ ಮೇಳಗಳಲ್ಲಿ ತಿರುಗಾಟ ಮಾಡಿದ ಇವರು 1999ರ ನಂತರ, ತಂದೆಯವರು ಕೀರ್ತಿಶೇಷರಾದ ಬಳಿಕ ಮೇಳ ತಿರುಗಾಟವನ್ನು ನಿಲ್ಲಿಸಿದರು.

ಬಣ್ಣ, ಪುಂಡು, ರಾಜ, ಸ್ತ್ರೀ ವೇಷಧಾರಿಯಾಗಿರುವ ಇವರು ದಮಯಂತಿ, ಸುಭದ್ರೆ, ಪ್ರಮೀಳೆ, ಹಿರಣ್ಯಾಕ್ಷ, ಕರ್ಣ, ಅರ್ಜುನ, ಇಂದ್ರಜಿತು, ಕಂಸ, ಭೀಮ, ನರಕಾಸುರ, ಶುಂಭ, ಚಂಡಮುಂಡರು, ಬ್ರಹ್ಮ, ವಿಷ್ಣು ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಕಟೀಲು ಮೇಳದಲ್ಲಿ ಕುರಿಯ ಗಣಪತಿ ಶಾಸ್ತ್ರಿ ಅವರ ಭಾಗವತಿಕೆ ಹಾಗೂ ಪದ್ಯಾಣ ಶಂಕರ ನಾರಾಯಣ ಭಟ್ಟರ ಚೆಂಡೆಯ ಸಾಂಗತ್ಯದಲ್ಲಿ ಇವರ ಮಹಿಷನ ಪಾತ್ರವು ವಿಜೃಂಭಿಸಿ ಹೆಚ್ಚಿನ ಸತ್ಕೀರ್ತಿಯನ್ನು ತಂದುಕೊಟ್ಟಿದೆ.

ಮುಲ್ಕಿ ಕಾಲೇಜು, ನಿಟ್ಟೆ ಕಾಲೇಜು, ಪಲಿಮಾರು ಮಠ, ಉಡುಪಿ ಮಠಗಳಲ್ಲಿ ತರಬೇತಿ ನೀಡಿರುವ ಇವರಿಗೆ ಅನೇಕ ಸಮ್ಮಾನಗಳು ಸಂದಿವೆ.

ಶ್ರೀಮತಿ ನಾಗರತ್ನ ಎಂಬವರನ್ನು ವರಿಸಿ ಮಕ್ಕಳಾದ ಅಮರಾಭಿರಾಮಸ್ವಾಮಿ ಹಾಗೂ ಅಪರ್ಣರನ್ನು ಪಡೆದು ಸಾರ್ಥಕ ಜೀವನ ನಡೆಸುವ ಇವರು ಅರ್ಚಕವೃತ್ತಿ ಹಾಗೂ ಜ್ಯೋತಿಷ್ಯ ವೃತ್ತಿಯ ಕಾರ್ಯ ನಿರ್ವಹಿಸುತ್ತಿದ್ದಾರೆ.



## ಜಗದೀಶ ನಲ್ಕ

*ನಲ್ಕ ರೆಂಜಮೂಲ ಮನೆ, ಪೆರ್ಲ ಅಂಚೆ*
*ಕಾಸರಗೋಡು – 671552*
*ಮೊ: 9449389493.*

ಪುಂಡುವೇಷ, ರಾಜವೇಷ, ನಾಟಕೀಯ ವೇಷಗಳಲ್ಲಿ ಪರಿಣತಿಯನ್ನು ಪಡೆದು ಜನರ ಮೆಚ್ಚುಗೆಗೆ ಪಾತ್ರರಾದ ಶ್ರೀ ಜಗದೀಶ ನಲ್ಕ ಅವರು ಶ್ರೀ ಭಗವತೀ ಮೇಳ ಸಸಿಹಿತ್ಲು ಇದರ ಕಲಾವಿದರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ ದಿನಾಂಕ 11–06–1975ರಂದು ಶ್ರೀ ಕಿಂಞಣ್ಣ ಮೂಲ್ಯ ಹಾಗೂ ಶ್ರೀಮತಿ ದೇವಕಿ ದಂಪತಿಯ ಸುಪುತ್ರನಾಗಿ ಜನಿಸಿದರು.


ಬಿ.ಎ. ಪದವಿಯನ್ನು ಮುಗಿಸಿರುವ ಇವರು ಯಕ್ಷಗಾನ ಪರಿಸರದಿಂದ ಪ್ರಭಾವಿತರಾಗಿ 17ನೇ ವಯಸ್ಸಿಗೆ ಸಬ್ಬನಕೋಡಿ ರಾಂಭಟ್ ಅವರಿಂದ ನಾಟ್ಯಾಭ್ಯಾಸವನ್ನು ಕಲಿತರು.

ಇವರ ಸಂಬಂಧಿಕರಾದ ಎ. ಕೆ. ಕುಲಾಲ್ ಅಡ್ಯನಡ್ಕ ಅವರು ಬಣ್ಣದ ವೇಷದಲ್ಲಿ ಪರಿಣತಿಯನ್ನು ಹೊಂದಿರುತ್ತಾರೆ. ಹಾಗಾಗಿ ಅವರ ಉತ್ತೇಜನ ಮತ್ತು ಪ್ರೋತ್ಸಾಹವನ್ನು ಪಡೆದು ಜಗದೀಶರು ಕಲಾ ಸಾಧಕರಾಗಿ ಬೆಳೆದರು.

ಕೊಲ್ಲಂಗಾನ ಮೇಳದಲ್ಲಿ –3 ವರ್ಷ ಹಾಗೂ ಬಪ್ಪನಾಡು ಮೇಳದಲ್ಲಿ –1 ವರ್ಷಗಳ ತಿರುಗಾಟವನ್ನು ಪೂರೈಸಿದ ಇವರು ಭಗವತೀ ಮೇಳದಲ್ಲಿ ಈಗಾಗಲೆ 10 ವರ್ಷಗಳ ಕಲಾಸೇವೆಯನ್ನು ಮಾಡಿದ್ದಾರೆ.

ಕೃಷ್ಣ, ರಾಮ, ಕುಶ, ಲವ, ಲಕ್ಷ್ಮಣ, ಈಶ್ವರ, ಷಣ್ಮುಖ, ದೇವೇಂದ್ರ, ಅರ್ಜುನ, ಜಲಂಧರ, ಮಧು, ಕೈಟಭ' ಇತ್ಯಾದಿ ವೇಷಗಳನ್ನು ಮಾಡಿದ್ದಾರೆ. ಆಸಕ್ತರಿಗೆ ಯಕ್ಷಗಾನದ ತರಬೇತಿಯನ್ನು ನೀಡಿ ರಂಗ ಪ್ರವೇಶ ಮಾಡಿಸಿದ್ದಾರೆ.

ಯಕ್ಷಗಾನದ ಹೊರತಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಇವರಿಗೆ ವಿಟ್ಲ ದುರ್ಗಾ ಪರಮೇಶ್ವರಿ ಕಲಾ ಸಂಘ , ಮಾಣಿಲ ಶ್ರೀ ಧಾಮ, ಪದವಿನಂಗಡಿ ವಿಘ್ನೇಶ್ವರ ಯಕ್ಷಗಾನ ಮಂಡಳಿಯ , ತೀಯಾ ಸಮಾಜ ಮುಂಬಾಯಿ ಇಲ್ಲೆಲ್ಲಾ ಸಂಮಾನಗಳಿಂದ ಪುರಸ್ಕರಿಸಲ್ಪಟ್ಟಿದ್ದಾರೆ.



## ಜಿ.ಕೆ. ನಾವಡ

*ಪೆಲತ್ತಡ್ಕ ಮನೆ. ಬಾಯಾರು ಅಂಚೆ ಮತ್ತು ಗ್ರಾಮ,*
*ಕಾಸರಗೋಡು ತಾಲೂಕು.*
***ಮೊ : 04998264182 / 09539227372***
***09686949107***

ಉತ್ತಮವಾದ ಕಂಠಸಿರಿಯಿಂದ ಭಾಗವತಿಕೆಯನ್ನು ಮಾಡಿ ಜನಮೆಚ್ಚುಗೆಗೆ ಪಾತ್ರರಾದ ಶ್ರೀ ಜಿ. ಕೆ. ನಾವಡ ಬಾಯಾರು ಇವರು ಮೇಳ ತಿರುಗಾಟಕ್ಕೆ ವಿದಾಯ ಹೇಳಿ ಪ್ರಸ್ತುತ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಶ್ರೀ ಶಂಕರ ನಾರಾಯಣ ನಾವಡ ಹಾಗೂ ಲಕ್ಷ್ಮೀ ಅಮ್ಮ ದಂಪತಿಯ ಸುಪುತ್ರರಾಗಿ 30–5–1964ರಂದು ಜನಿಸಿದ ಇವರು ಪದವಿ ಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಮನೆತನದ ಪ್ರಭಾವದಿಂದಾಗಿ ಬಾಲ್ಯದಿಂದಲೇ ಯಕ್ಷಗಾನ ಕಲೆಯ ಬಗ್ಗೆ ಆಸಕ್ತರಾಗಿದ್ದ ಇವರು ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಲ್ಲಿ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು.

ಮಲ್ಲ ಮೇಳ –2 ವರ್ಷ, ಮಧೂರು ಮೇಳ 4ವರ್ಷ, ಬಪ್ಪನಾಡು ಮೇಳ –5 ವರ್ಷ ಹಾಗೂ ಕಾಟಿಪಳ್ಳ ಮೇಳ –2 ವರ್ಷ ಹೀಗೆ 13 ವರ್ಷಗಳ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಭಾಗವತಿಕೆಗೆ ಪೂರಕವಾಗಿ ಚೆಂಡೆ–ಮದ್ದಳೆಯ ನುಡಿತ–ಬಡಿತಗಳ ಅಭ್ಯಾಸವನ್ನು ಮಾಡಿರುವ ಇವರು ನಾಟಕ ಕಲೆಯ ಬಗ್ಗೆ ಅಭಿರುಚಿವುಳ್ಳವರಾಗಿದ್ದು, ಹಲವಾರು ಪಾತ್ರಗಳನ್ನು ನಿರ್ವಹಿಸಿದ್ದಾರೆ. ಇಷ್ಟಲ್ಲದೆ ಜೋತಿಷ್ಯ ಶಾಸ್ತ್ರದ ಬಗ್ಗೆಯೂ ಅನುಭವವನ್ನು ಸಂಪಾದಿಸಿದ್ದಾರೆ.

ಪ್ರಸಂಗದ ಯಶಸ್ಸು ಹಾಗೂ ಪಾತ್ರಗಳ ವಿಜೃಂಭಣೆಗೆ ತನ್ನದೇ ಆದ ಧೋರಣೆಯಲ್ಲಿ ಕರ್ತವ್ಯ ನಿರ್ವಹಣೆ ಮಾಡುವ ಇವರು ರಂಗಾನುಭವದಲ್ಲಿ ಪ್ರೌಢಿಮೆಯನ್ನು ಸಾಧಿಸಿದ್ದಾರೆ.

ಬಾಯಾರು ರಮೇಶ ಶೆಟ್ಟಿ ಅವರ ನಿರ್ದೇಶನದ ಯಕ್ಷಗಾನ ತಂಡಗಳಿಗೆ ಭಾಗವತರಾಗಿ ಪ್ರದರ್ಶನದ ಯಶಸ್ಸಿಗೆ ಕಾರಣರಾದ ಇವರು ಕಾಸರಗೋಡು ಚಿನ್ನ ಅವರ ನೇತೃತ್ವದ ಯಕ್ಷ ತೇರು ಪರ್ಯಟಣದಲ್ಲಿ ಮುಂದಾಳುವಾಗಿದ್ದರು.

ಎಸ್. ಎನ್. ಪಂಜಾಜೆ ಬೆಂಗಳೂರು ಅವರ ಯಕ್ಷಗಾನ ತಂಡದ ಮುಖೇನ ಅಮೇರಿಕಾದ ಅಕ್ಕ ಸಮ್ಮೇಳನದಲ್ಲಿ ಹಾಡಿರುವ ಇವರು ಅಕ್ಷತಾ ಮಹಿಳಾ ಕಲಾ ವೃಂದ ಬಿಕರ್ಣಕಟ್ಟೆ ಮಂಗಳೂರು, ಗೋವಿಂದದಾಸ ಕಾಲೇಜಿನ ಯಕ್ಷಗಾನ ತಂಡ ಸುರತ್ಕಲ್ ಇಲ್ಲೆಲ್ಲಾ ಜಿ. ಕೆ. ನಾವಡರು ತಮ್ಮ ಭಾಗವತಿಕೆಯ ಪ್ರತಿಭೆಯನ್ನು ಮೆರೆಸಿದ್ದಾರೆ.

ಹೇಳಿಕೆಯ ಮೇರೆಗೆ ಹವ್ಯಾಸಿ ಕಲಾ ಕಾರ್ಯ ಕ್ರಮಗಳಲ್ಲಿ ಭಾಗವಹಿಸುತ್ತಿರುವ ಇವರು ಶ್ರೀ ದೇವಿ ಎಂಬವರನ್ನು ವರಿಸಿ. ಶ್ರಾವ್ಯ ಮತ್ತು ಶ್ರದ್ಧಾ ಎಂಬ ಈರ್ವರು ಮಕ್ಕಳನ್ನು ಪಡೆದಿದ್ದಾರೆ.

ದೇಶ–ವಿದೇಶಗಳ ಕಾರ್ಯ ಕ್ರಮಗಳಲ್ಲಿ ಭಾಗವಹಿಸಿರುವ ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಜರ್ಮನಿ, ಅಮೇರಿಕಾ, ಶ್ರೀ ಧಾಮ ಮಾಣಿಲ, ಕಾಟಿಪಳ್ಳ ಮೊದಲಾದೆಡೆಯಲ್ಲಿ ಸಂಮಾನದ ಪುರಸ್ಕಾರಗಳು ಸಂದಿವೆ.



## ತನಿಯಪ್ಪ ಗೌಡ, ಕುಂಟಪದವು

*ಕುಂಟಪದವು ಮನೆ, ಕೊಡ್ಲಮೊಗರು ಅಂಚೆ*
*ಮಂಜೇಶ್ವರ ವಯ, ಕಾಸರಗೋಡು 671323*
*ಮೊ : 9663214897*

ಬಣ್ಣದ ವೇಷದ ಮುಖೇನ ಜನ ಮನ್ನಣೆಗೆ ಪಾತ್ರರಾಗಿರುವ ಶ್ರೀ ತನಿಯಪ್ಪ ಗೌಡ ಕುಂಟಪದವು ಇವರು ಮೇಳದ ನಿವೃತ್ತ ಕಲಾವಿದರಾಗಿದ್ದಾರೆ.

75 ವರ್ಷಗಳ ಹಿರಿತನಕ್ಕೆ ಸಂದಿರುವ ತನಿಯಪ್ಪ ಗೌಡರು ರಾಮ ಗೌಡ ಹಾಗೂ ಕೊರಪಾಳು ದಂಪತಿಯ ಸುಪುತ್ರರಾಗಿ ಕೊಜಪೆ ಎಂಬಲ್ಲಿ ಜನಿಸಿದರು.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಪರಿಸರದಲ್ಲಿ ನಡೆಯುತ್ತಿದ್ದ ಯಕ್ಷಗಾನ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ಮೇಳ ತಿರುಗಾಟಕ್ಕೆ ಸೇರಿದರು.

ಬಣ್ಣದ ಮಾಲಿಂಗ, ಅಗರಿ ಶ್ರೀನಿವಾಸ ಭಾಗವತ ಮೊದಲಾದ ಹಿರಿಯ ಕಲಾವಿದರ ಒಡನಾಟದಿಂದ ಹೆಜ್ಜೆಗಾರಿಕೆ ಮತ್ತು ರಂಗದ ಅನುಭವವನ್ನು ಸಂಪಾದಿಸಿ ಬೆಳೆದು ಬಂದರು.

ವೇಣೂರು ಮೇಳ, ಮೂಲ್ಕಿ ಮೇಳ, ಕುಂಡಾವು ಮೇಳ, ಸುಂಕದಕಟ್ಟೆ ಮೇಳ, ಸುರತ್ಕಲ್ ಮೇಳ, ಕರ್ನಾಟಕ ಮೇಳ, ಮಧೂರು ಮೇಳ, ಕಟೀಲು ಮೇಳ, ಹಾಗೂ ಕದ್ರಿ ಮೇಳಗಳಲ್ಲಿ 4 ದಶಕಕ್ಕೂ ಮಿಕ್ಕಿದ ಕಲಾ ಸೇವೆಯನ್ನು ಮಾಡಿದ್ದಾರೆ.

ಮಹಿಷಾಸುರ, ಅಜಮುಖಿ, ಶೂರ್ಪನಖಿ, ಶೂರಪದ್ಮ, ಉಗ್ರಭೀಮ, ರಾವಣ, ಗುಳಿಗ, ಶುಂಭ, ಕಾಲಜಂಘ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಯಕ್ಷಗಾನದಲ್ಲಿ ಸಂಗೀತಗಾರರಾಗಿ ಹಾಡಿರುವ ಇವರು ಅನೇಕ ಕಿರಿಯ ಕಲಾವಿದರಿಗೆ ರಂಗದ ಅನುಭವವನ್ನು ಹೇಳಿಕೊಟ್ಟು ಪ್ರದರ್ಶನದ ಯಶಸ್ವಿಗೆ ಕಾರಣರಾಗಿದಾರೆ.

ಶ್ರೀಮತಿ ಚೆನ್ನಮ್ಮ ಎಂಬವರನ್ನು ವರಿಸಿ ಶಾಲಿನಿ, ಭಾಸ್ಕರ, ಯಶೋದ, ಸತೀಶ ಎಂಬ ನಾಲ್ವರು ಮಕ್ಕಳನ್ನು ಪಡೆದಿದ್ದಾರೆ. ಇವರು ನಾಲ್ವರು ಮಕ್ಕಳು ಕೂಡಾ ಶಿಕ್ಷಕ ವೃತ್ತಿಯನ್ನು ಮಾಡುತ್ತಿದ್ದಾರೆ.

ಪರಂಪರೆಯ ಶೈಲಿಯನ್ನು ಉಳಿಸಿ, ಮೆರೆಸಿರುವ ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಹೆರ್ಗ ರಾಮಕೃಷ್ಣ ಕೆದಿಲಾಯ ಪ್ರಶಸ್ತಿ ಹಾಗೂ ಬೋಳೂರು ದೋಗ್ರ ಪೂಜಾರಿ ಪ್ರಶಸ್ತಿಗಳು ಲಭಿಸಿರುವುದಲ್ಲದೆ ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನ ಶತಕದ ಸಂಮಾನವು ಸಂದಿದೆ. ನಾಡಿನ ಹಲವು ಸಂಘ ಸಂಸ್ಥೆಗಳಿಂದ ಪುರಸ್ಕಾರಕ್ಕೊಳಗಾಗಿರುವ ಇವರು ಉತ್ತಮ ಕಲಾ ಸಾಧಕರಾಗಿದ್ದಾರೆ.



## ತಿಮ್ಮಯ್ಯ ಮಾನ್ಯ


*ಶ್ರೀ ಗುರು ದತ್ತಾತ್ರೇಯ ನಿಲಯ*
*ವಿಷ್ಣುಮೂರ್ತಿ ನಗರ*
*ಉಳ್ಳೋಡಿ ಅಂಚೆ ಕಾಸರಗೋಡು 671323*


1950-1980ರ ಕಾಲದಲ್ಲಿ ಸ್ತ್ರೀ ವೇಷಧಾರಿಯಾಗಿ ಪುಂಡು ವೇಷಧಾರಿಯಾಗಿ ರಂಗದಲ್ಲಿ ಮೆರೆದ ಧೀಮಂತ ಕಲಾವಿದರು ಮಾನ್ಯ ತಿಮ್ಮಯ್ಯ.

ಮಾನ್ಯ ಕೃಷ್ಣಯ್ಯ ಹಾಗೂ ಗೌರಮ್ಮ ದಂಪತಿಗಳಿಗೆ 1929ರಲ್ಲಿ ಸುಪುತ್ರನಾಗಿ ಜನಿಸಿದ ತಿಮ್ಮಯ್ಯನವರು ಹುಟ್ಟಿನಿಂದಲೇ ದಟ್ಟ ದಾರಿದ್ರ್ಯದಿಂದ ಬೆಳೆದವರು. ಮಾನ್ಯದ ಅಂದಿನ ಸಮಾಜ ಸೇವಕ ಅಧ್ಯಾಪಕರಾದ ಅಣ್ಣಯ್ಯ ಮಾಸ್ತರರಿಂದ ಐದನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದರು. ಅವರ ಪ್ರೇರಣೆಯಂತೆ ಶಾಲಾದಿನಗಳಲ್ಲಿ ನಡೆಯುವ ನಾಟಕ - ಯಕ್ಷಗಾನದಲ್ಲಿ ಪಾತ್ರ ಮಾಡುವ ಮೂಲಕ ಸಹಜವಾಗಿಯೇ ರಂಗಾಸಕ್ತಿ ಮೂಡಿತು.

ಊರಲ್ಲಿ ನಡೆಯುವ ಪ್ರಸಿದ್ಧ ಮೇಳಗಳ ಬಯಲಾಟ, ಜೋಡಾಟಗಳಲ್ಲಿ ಮೆರೆಯುವ ರಂಗ ಕಲಾವಿದರನ್ನು ಕಂಡು ತಾನೂ ಕೂಡ ಅವರಂತೆಯೇ ಪ್ರಬುದ್ಧ ಕಲಾವಿದನಾಗಬೇಕೆಂದು ನಿರ್ಧರಿಸಿದ ತಿಮ್ಮಯ್ಯನವರು ಕುಕ್ಕಪ್ಪ ಗೌಡರು ಸಂಚಾಲಕರಾಗಿದ್ದ ಚೊಕ್ಕಾಡಿ ಮೇಳವನು ಸೇರಿ ಗೆಜ್ಜೆ ಕಟ್ಟಿ ರಂಗವೇರಿದರು.

ಸಣ್ಣ ಸಣ್ಣ ಪಾತ್ರಗಳನ್ನು ನಿರ್ವಹಿಸುತ್ತ ಪ್ರೇಕ್ಷಕರ ಗಮನ ಸೆಳೆದ ಇವರು ನಂತರ ನಾಟ್ಯವನ್ನು ಕಲಿತು ಸ್ತ್ರೀವೇಷ ಹಾಗೂ ಪುಂಡು ವೇಷಗಳನ್ನು ಮಾಡುತ್ತಾ ಬಂದರು. 1953ರಲ್ಲಿ ಪೆರ್ವೊಡಿ ಸುಬ್ರಾಯ ಭಟ್ಟರು ಹೊರಡಿಸಿದ ಮುಲ್ಕಿ ಮೇಳದಲ್ಲಿ ಒಂದನೇ ಸ್ತ್ರೀ ವೇಷ ಪುಂಡು ವೇಷಧಾರಿಯಾಗಿಯೂ ಪಾತ್ರ ನಿರ್ವಹಣೆ ಮಾಡಿದರು. ಆಮೇಲೆ 1960ರಲ್ಲಿ ಬಿ.ಶೀನಪ್ಪ ಭಂಡಾರಿಯವರ ಆದಿ ಸುಬ್ರಹ್ಮಣ್ಯ ಮೇಳದಲ್ಲಿ ಸುಮಾರು ಹದಿನೈದು ವರ್ಷಗಳ ಕಾಲ ದುಡಿದ ಇವರು ಅಭಿಮನ್ಯು, ಬಭ್ರುವಾಹನ, ಚಿತ್ರಧ್ವಜ, ಜಯಂತ, ಕೃಷ್ಣ ಮೊದಲಾದ ಪುಂಡು ವೇಷಗಳಲ್ಲದೆ. ದ್ರೌಪದಿ, ಸೀತೆ, ಪ್ರಮೀಳೆ ಚಿತ್ರಾಂಗದೆ. ರತ್ನಾವತಿ ಮುಂತಾದ ಸ್ತ್ರೀ ವೇಷಗಳನ್ನು ರಂಗದಲ್ಲಿ ಮೆರೆಸುತ್ತಾ ಬಂದರು.

ಎಡನೀರು ಮಠದಲ್ಲಿ ನಡೆಯುವ ಸರಣಿ ತಾಳಮದ್ದಳೆಗಳಲ್ಲಿ ಭಾಗವಹಿಸುತ್ತಿದ್ದ ಇವರು. ಆಕಾಲದ ಹಿರಿಯ ಕಲಾವಿದರಾದ ಬಲಿಪಭಾಗವತರು ಪುತ್ತಿಗೆ ರಾಮಕೃಷ್ಣ ಜೋಯಿಸರು ಪುತ್ತೂರು ನಾರಾಯಣ ಹೆಗಡೆ, ಗೋವಿಂದ ಭಟ್ ಬಣ್ಣದ ಕುಪ್ಪಪ್ಪು, ಕುಂಬಳೆ ಸಣ್ಣ ತಿಮ್ಮ, ಕಾವುಕಣ್ಣ, ಮಾನ್ಯರಾಮ, ಕೇದಗಡಿ ಗುಡ್ಡಪ್ಪ ಗೌಡ ಮುಂತಾದ ಹಿರಿಯ ಕಲಾವಿದರ ಒಡನಾಟದಿಂದ ತಮ್ಮ ರಂಗದ ಜ್ಞಾನವನ್ನು ಹೆಚ್ಚಿಸಿಕೊಂಡರು.

ಧರ್ಮಸ್ಥಳ, ಉದ್ಯಾವರ, ಮೂಲ್ಕಿ, ಕದ್ರಿ, ಮಧೂರು ಮುಂತಾದ ಪ್ರಸಿದ್ಧ ಮೇಳಗಳಲ್ಲಿ ಕಲಾಸೇವೆ ಮಾಡಿರುವ ಇವರು ಮಳೆಗಾಲದಲ್ಲಿ ಇವರ ಪರಿಸರದಲ್ಲಿ ಚಿಕ್ಕ ಮೇಳವೊಂದನ್ನು ಕಟ್ಟಿಕೊಂಡು ಮನೆ ಮನೆಗೆ ಹೋಗಿ ಪ್ರದರ್ಶನವನ್ನು ನೀಡಿದ್ದಾರೆ.

ಯಕ್ಷಗಾನ ಕಲಾರಂಗ ಉಡುಪಿ, ಸುಳ್ಯ, ಕೊಲ್ಲಂಗಾನ, ಮೊದಲಾದ ಕಡೆಗಳಲ್ಲಿ ಕಲಾಭಿಮಾನಿ ಸಂಸ್ಥೆಗಳು ಇವರ ಸಾಧನೆಯನ್ನು ಗುರುತಿಸಿ ಸಂಮಾನಿಸಿವೆ.



## ತಿಮ್ಮಪ್ಪ ಕೆ. ಗುಜರನ್

*ಕೊಳಂಬೆ – ಕುಂಜೋಡಿ ಮನೆ,*
*ಕೊಳಂಬೆ ಅಂಚೆ ಮತ್ತು ಅಂಚೆ, ಬಜ್ಪೆ ವಯಾ*
*ಮಂಗಳೂರು ತಾಲೂಕು – 574189*
*ಮೊ: 9481517035.*

ಸ್ವಂತ ಪ್ರೇರಣೆಯಿಂದಲೇ ಯಕ್ಷಗಾನ ನಾಟ್ಯಾಭ್ಯಾಸ ಮತ್ತು ಹಿಮ್ಮೇಳವನ್ನು ಅಭ್ಯಸಿಸಿರುವ ಶ್ರೀಯುತ ಕೊಳಂಬೆ ತಿಮ್ಮಪ್ಪ ಗುಜರನ್ ಇವರು ಶ್ರೀ ಚೀರುಂಭ ಭಗವತೀ ಕೃಪಾಪೋಷಿತ ಯಕ್ಷಗಾನ ಕಲಾಮಂಡಳಿ ಉಳ್ಳಾಲ ಇದರ ವ್ಯವಸ್ಥಾಪಕರಾಗಿಯೂ, ಕಲಾವಿದರಾಗಿಯೂ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ದಿ। ರಾಮಪ್ಪ ಬೆಳ್ಚಡ ಹಾಗೂ ನಾಗಮ್ಮ ದಂಪತಿಗಳ ಸುಪುತ್ರರಾಗಿ ಜನಿಸಿರುವ ಇವರು 6ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದು ಸ್ವಂತ ಪ್ರೇರಣೆಯಿಂದಲೇ 15ನೇ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಪ್ರವೇಶವನ್ನು ಮಾಡಿದರು. ಬಜ್ಪೆ ದೇರಣ್ಣ ದೇವಾಡಿಗರಿಂದ ನಾಟ್ಯಾಭ್ಯಾಸವನ್ನು, ಶೆಡ್ಡೆ ದೊಡ್ಡಣ್ಣ ಶೆಟ್ಟಿಯವರಿಂದ ಹಿಮ್ಮೇಳವನ್ನು ಅಭ್ಯಾಸ ಮಾಡಿರುವ ಇವರು ರಾಜವೇಷ, ನಾಟಕೀಯ, ಹಾಸ್ಯ ಹಾಗೂ ಕಥಾನಾಯಕ ಪಾತ್ರಗಳ ನಿರ್ವಹಣೆಯಲ್ಲಿ ಪರಿಣತಿಯನ್ನು ಹೊಂದಿರುತ್ತಾರೆ.

ಕೃಷಿ ಮನೆತನದವರಾದ ಶ್ರೀಯುತರು ಧರ್ಮಪತ್ನಿ ಶ್ರೀಮತಿ ಗುಲಾಬಿಯವರ ಸಹಕಾರದೊಂದಿಗೆ ತಮ್ಮ ಕಲಾಸೇವೆಯನ್ನು ಇಂದಿನವರೆಗೂ ಮುಂದುವರೆಸಿಕೊಂಡು ಬಂದಿರುತ್ತಾರೆ. ಇವರ ಸುಪುತ್ರನಾದ ದಿ। ಯೋಗೀಶ್ ತಳಕಲ ಇವರು ಹಿಮ್ಮೇಳ ಹಾಗೂ ಮುಮ್ಮೇಳ ಕಲಾವಿದರಾಗಿದ್ದು ಜೊತೆಗೆ ಪ್ರಸಂಗಕರ್ತರಾಗಿ, ಬರಹಗಾರರಾಗಿ ತಮ್ಮ ಪ್ರತಿಭೆಯನ್ನು ಬೆಳೆಸಿದರು ಹಾಗೂ ಇವರ ಸುಪುತ್ರಿ ಶ್ರೀಮತಿ ಮೀನಾಕ್ಷಿ ಇವರು ವೃತ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿದ್ದು ಯಕ್ಷಗಾನ ಹವ್ಯಾಸಿ ಕಲಾವಿದರಾಗಿ ಭಾಗವತಿಕೆ ಹಾಗೂ ವೇಷಧಾರಿಗಳಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

59 ವರ್ಷ ವಯಸ್ಸಿನವರಾದ ಕೆ. ಜಿ. ಗುಜರನ್‌ರವರು ಆರಂಭದಲ್ಲಿ ನಂದಾವರ ಮೇಳದಲ್ಲಿ 1 ವರ್ಷ, ತಳಕಳ ಮೇಳದ ವ್ಯವಸ್ಥಾಪಕರಾಗಿ 22 ವರ್ಷ ಹಾಗೂ ಉಳ್ಳಾಲ ಚೀರುಂಭ ಭಗವತೀ ಮೇಳದ ವ್ಯವಸ್ಥಾಪಕರಾಗಿ 5 ವರ್ಷ ಹೀಗೆ ಕಲಾಮಾತೆಯ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ಕೇವಲ ವೇಷಧಾರಿ ಮಾತ್ರವಲ್ಲದೆ ಭಾಗವತಿಕೆ, ಚೆಂಡೆ, ಮದ್ದಳೆ ಬಲ್ಲಂತಹ ಇವರು ಸವ್ಯಸಾಚಿ ಕಲಾವಿದರಾಗಿದ್ದಾರೆ. ತಳಕಲ ಕ್ಷೇತ್ರ ಮಹಾತ್ಮೆ, ಕಾಡಮಂಜರಿ, ಗುಡ್ಡೆದ ಗುಳಿಗೆ ಮೊದಲಾದ ಹತ್ತಿಪ್ಪತ್ತು ತುಳು, ಕನ್ನಡ ಪ್ರಸಂಗಗಳನ್ನು ರಚಿಸಿದ್ದಾರೆ. ಇದರ ಜೊತೆಗೆ ಯಕ್ಷಗಾನದ ಭೂಷಣಗಳನ್ನು ತಯಾರಿಸುವ ಕಾರ್ಯದಲ್ಲೂ ನಿಪುಣರಾಗಿದ್ದಾರೆ.

ರಾಜವೇಷ, ನಾಟಕೀಯ, ಕಥಾನಾಯಕ ಪಾತ್ರಗಳನ್ನು ನಿರ್ವಹಿಸುವ ಇವರು ಭಸ್ಮಾಸುರ, ವಾವರ, ದಾರಿಕಾಸುರ, ಬಪ್ಪಬ್ಯಾರಿ, ಮಹಿಷಾಸುರ, ಕೋಟಿ, ಬುದ್ಯಂತ, ದೇವು ಪೂಂಜೆ ಪ್ರಸಂಗದ ಕೊಂಡೆ ಇತ್ಯಾದಿ ಪಾತ್ರಗಳನ್ನು ನಿರ್ವಹಿಸುತ್ತಾರೆ.

ಹಲವು ಮಂದಿ ಶಿಷ್ಯರಿಗೆ ಯಕ್ಷಗಾನ ತರಬೇತಿಯನ್ನು ನೀಡಿರುವ ಇವರು ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರ, ಕೊಳಂಬೆ, ಕೈಕಂಬ, ತೊಕ್ಕೊಟ್ಟು, ಶಕ್ತಿನಗರ ಇತ್ಯಾದಿ ಪ್ರದೇಶಗಳಲ್ಲಿ ಅಭಿಮಾನಿಗಳ ಸಂಮಾನವನ್ನು ಸ್ವೀಕರಿಸಿದ್ದಾರೆ.



# ತಿರುಮಲೇಶ್ವರ ಶಾಸ್ತ್ರಿ ತೆಂಕಬೈಲು

*ಕರೋಪಾಡಿ ಗ್ರಾಮ*
*ಬಂಟ್ವಾಳ ತಾಲೂಕು*
*ದಕ್ಷಿಣ ಕನ್ನಡ*

ಭಾಗವತಿಕೆಯ ಮುಖೇನ ವಿಶಿಷ್ಟವಾದ ಛಾಪನ್ನು ಮೂಡಿಸಿ ಅಬ್ಬರದ ಸ್ವರಭಾರ, ನಾದಮಾಧುರ್ಯ ಹಾಗೂ ಪ್ರಸಂಗವನ್ನು ವಿಜೃಂಭಿಸುವ ರಂಗದ ಕೌಶಲ್ಯದಿಂದ ಕೀರ್ತಿಯನ್ನು ಪಡೆದಿರುವ ಶ್ರೀ ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಯವರು. ಮೇಳದ ಕಾರ್ಯಕ್ರಮಗಳಲ್ಲಿ ಅತಿಥಿ ಕಲಾವಿದರಾಗಿಯೂ ಹವ್ಯಾಸಿ ಕಲಾಕಾರ್ಯಕ್ರಮಗಳಲ್ಲಿ ಹೇಳಿಕೆಯ ಭಾಗವತರಾಗಿಯೂ ಕಲಾ ಸೇವೆಯನ್ನು ನಡೆಸುತ್ತಿದ್ದಾರೆ.


ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮದಲ್ಲಿ ಶ್ರೀಕೃಷ್ಣ ಭಟ್ಟ ಹಾಗೂ ಶ್ರೀಮತಿ ಸಾವಿತ್ರಿ ದಂಪತಿಯ ಸುಪುತ್ರರಾಗಿ ದಿನಾಂಕ 25–4–1944ರಂದು ತಿರುಮಲೇಶ್ವರ ಶಾಸ್ತ್ರಿಯವರು ಜನಿಸಿದರು. ಕೀರ್ತಿ ಸಂಪನ್ನರಾಗಿ ದಿವಂಗತರಾಗಿರುವ ಮಾಂಬಾಡಿ ನಾರಾಯಣ ಭಾಗವತರಲ್ಲಿ ಯಕ್ಷಗಾನದ ಭಾಗವತಿಕೆಯನ್ನು ಅಭ್ಯಾಸ ಮಾಡಿರುವ ಇವರು ಬಜಕ್ಕಳ ಗಣಪತಿ ಭಟ್ಟರಿಂದ ಸಂಗೀತದ ಅಭ್ಯಾಸವನ್ನು ಮಾಡಿದ್ದಾರೆ.

ಶ್ರೀ ಇರಾಮೇಳ 1ವರ್ಷ, ಶ್ರೀ ಬಪ್ಪನಾಡು ಮೇಳ 19ವರ್ಷ, ಶ್ರೀ ಮಧೂರು ಮೇಳ 1ವರ್ಷ, ಶ್ರೀ ಮಲ್ಲ ಮೇಳ 2ವರ್ಷ ಹಾಗೂ ಶ್ರೀ ಕುಂಟಾರು ಮೇಳ 2ವರ್ಷ ಹೀಗೆ ಮೇಳ ತಿರುಗಾಟದ ಹಿನ್ನೆಲೆಯನ್ನು ಹೊಂದಿರುವ ತೆಂಕಬೈಲು ಶಾಸ್ತ್ರಿಯವರು ಚೆಂಡೆ ಮದ್ದಳೆಯನ್ನು ನುಡಿಸಬಲ್ಲವರಾಗಿದ್ದಾರೆ.

ತೆಂಕುತಿಟ್ಟಿನ ಶ್ರೇಷ್ಠ ಭಾಗವತರ ಸಾಲಿನಲ್ಲಿ ಮನ್ನಣೆಯನ್ನು ಪಡೆದಿರುವ ಇವರು ಉಕ್ಕುಡ, ಆನೆಕಲ್ಲು , ಕಾಸರಗೋಡಿನ ಮಾನ್ಯ, ಬೇಕೂರು, ಮಂಗಳೂರು ಸುಳ್ಯಪದವು ಮೊದಲಾದ ಕಡೆಗಳಲ್ಲಿ ಭಾಗವತಿಕೆಯ ತರಗತಿಗಳನ್ನು ಮಾಡಿರುವರು. ಇವರ ಶಿಷ್ಯರಲ್ಲಿ ಹಲವಾರು ಮಂದಿ ರಂಗದಲ್ಲಿ ಉತ್ತಮ ಭಾಗವತರಾಗಿ ಮನ್ನಣೆಯನ್ನು ಪಡೆದಿದ್ದಾರೆ.

ಶ್ರೀಮತಿ ಸರಸ್ವತಿ ಎಂಬವರನ್ನು ವರಿಸಿ ಒರ್ವ ಗಂಡು ಹಾಗೂ ಮೂವರು ಹೆಣ್ಣು ಮಕ್ಕಳನ್ನು ಪಡೆದು ಸಾರ್ಥಕ ಜೀವನವನ್ನು ನಡೆಸುತ್ತಾ ಇದ್ದಾರೆ. ಇವರ ಸುಪುತ್ರ ಮುರಳಿಕೃಷ್ಣ ಶಾಸ್ತ್ರಿಯವರು ತಂದೆಯ ಶೈಲಿಯನ್ನು ಅನುಸರಿಸಿರುವ ಉತ್ತಮ ಭಾಗವತರಾಗಿರುವರಲ್ಲದೆ, ಮಂಗಳೂರು ತಾಲೂಕಿನ ಹರೇಕಳ ಅನುದಾನಿತ ರಾಮಕೃಷ್ಣ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ನಡೆಸುತ್ತಾ ಇದ್ದಾರೆ.

ಯಕ್ಷಗಾನ ಕಲೆಯಲ್ಲಿ ಮಹತ್ವದ ಸಾಧನೆಯನ್ನು ಮಾಡಿರುವ ತಿರುಮಲೇಶ್ವರ ಶಾಸ್ತ್ರಿಯವರ ಪ್ರತಿಭೆ ತಕ್ಕಂತೆ ಅನೇಕ ಸಂಮಾನ-ಗೌರವಗಳು ಸಂದಿವೆ. ಹೊರನಾಡು, ಮಂಗಳೂರು, ಸಾಲೆತ್ತೂರು, ಮುಂಡೋಡು ಮೊದಲಾದ ಕಡೆಗಳಲ್ಲಿ ಅಭಿಮಾನಿಗಳಿಂದ ಸಂಮಾನಿತರಾಗಿದ್ದಾರೆ.



# ದಯಾನಂದ ಶೆಟ್ಟಿಗಾರ್

*ಶ್ರೀ ರಾಮಧಾಮ, ಪೂಮಾರ ಪದವು ಮನೆ*
*ತೆಂಕ ಮಿಜಾರು ಗ್ರಾಮ, ಅಶ್ವತ್ಥಪುರ ಅಂಚೆ,*
*ಮಂಗಳೂರು – 574266*
*ದೂರವಾಣಿ: 9481378723*

ಯಕ್ಷಗಾನದ ಮೇಲಿನ ಸ್ವ ಆಸಕ್ತಿಯಿಂದ ಹಿಮ್ಮೇಳ ಕಲಾವಿದನಾಗಿ ಮೂಡಿಬಂದ ಶ್ರೀ ದಯಾನಂದ ಶೆಟ್ಟಿಗಾರ್ ಇವರು ಪ್ರಸಕ್ತ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿದ್ದಾರೆ.

ರಾಮ ಶೆಟ್ಟಿಗಾರ್ ಹಾಗೂ ವಾರಿಜ ದಂಪತಿಗೆ ಸುಪುತ್ರನಾಗಿ 12–03–1972ರಂದು ಅಶ್ವತ್ಥಪುರದಲ್ಲಿ ದಯಾನಂದರು ಜನಿಸಿದರು. 10ನೇ ತರಗತಿಗೆ ತನ್ನ ವಿದ್ಯಾಭ್ಯಾಸವನ್ನೂ ನಿಲ್ಲಿಸಿ 14ನೇ ವಯಸ್ಸಿನಲ್ಲಿ ಗುರುಪುರ ಅಣ್ಣಿ ಭಟ್ ಮತ್ತು ಮುರಳೀಧರ ಕಟೀಲು ಇವರುಗಳಿಂದ ಚೆಂಡೆ ಮದ್ದಾಳೆ ವಾದನವನ್ನೂ ಅಭ್ಯಾಸಿಸಿದರು. ಸ ಸಿ ಹಿ ತ್ಲ ಮೇಳದಲ್ಲಿ 5ವರ್ಷ, ತಲಕಳ ಮೇಳದಲ್ಲಿ 4ವರ್ಷ, ಸುರತ್ಕಲ್ ಮೇಳದಲ್ಲಿ 2ವರ್ಷ ಹಾಗೂ ಕರ್ನಾಟಕ, ಸುಂಕದಕಟ್ಟೆ, ಕಟೀಲು ಮೇಳಗಳಲ್ಲಿ ಒಂದೊಂದು ವರ್ಷದ ತಿರುಗಾಟ ಮಾಡಿದ ಅನುಭವ ಇವರಿಗಿದೆ.

ಯಕ್ಷಗಾನ ಕಲಾವಿದರುಗಳಾದ ಮಿಜಾರು ಮೋಹನ್ ಶೆಟ್ಟಿಗಾರ್ ಮತ್ತು ರಾಮಕೃಷ್ಣ ಶೆಟ್ಟಿಗಾರ್ ಇವರುಗಳು ದಯಾನಂದ ಶೆಟ್ಟಿಗಾರ್‌ರವರ ಸಂಬಂಧಿಕರಾಗಿ ಪ್ರೋತ್ಸಾಹವನ್ನು ನೀಡಿದ್ದಾರೆ.

ಹಿಮ್ಮೇಳ ವಾದನದೊಂದಿಗೆ ವೇಷಗಾರಿಕೆಯನ್ನೂ ಮಾಡಿದ ಅನುಭವ ಇವರಿಗಿದೆ. ಸ್ತ್ರೀವೇಷ, ಪುಂಡು ವೇಷಗಳನ್ನು ನಿರ್ವಹಿಸಿದ್ದ ಇವರು ರತಿ, ಕಮಲಗಂಧಿನಿ, ಮನ್ಮಥ, ಕುಶ–ಲವ, ವರುಣ, ಮಾರುತ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ.

ಪತ್ನಿ ಶ್ರೀಮತಿ ಸರಿತಾ ಮತ್ತು ಮಗ ಕೌಶಿಕ್‌ರೊಂದಿಗೆ ಸುಖೀ ಸಂಸಾರವನ್ನೂ ನಡೆಸುತ್ತಿರುವ ಇವರು ಹವ್ಯಾಸಿ ಕಲಾವಿದರಿಗೆ ತರಬೇತಿಯನ್ನೂ ನೀಡುತ್ತಿದ್ದಾರೆ. ಇವರ ಕಲಾಸೇವೆಗೆ ದುಬಾಯಿಯ ಕಲಾಭಿಮಾನಿಗಳ ಅಭಿನಂದನೆ ಲಭಿಸಿದೆ.



## ದಿನೇಶ್ ಕೋಡಪದವು


*ಯಕ್ಷಜ್ಯೋತಿ, ಬೊಂಜಕುಕ್ಕು ಮನೆ*
*ಕೋಡಪದವು, ವೀರಕಂಭ ಗ್ರಾಮ,*
*ಬಂಟ್ವಾಳ*

ಸ್ವಂತ ಆಸಕ್ತಿಯಿಂದ ಯಕ್ಷಗಾನ ಕ್ಷೇತ್ರಕ್ಕೆ ಪಾದಸ್ಪರ್ಶ ಮಾಡಿ ತನ್ನ ಕಲಾ ಪ್ರತಿಭೆಯನ್ನು ತೋರುತ್ತಿರುವ ಶ್ರೀಯುತ ದಿನೇಶ್ ಕೋಡಪದವುರವರು ಪುಂಡು, ರಾಜ, ಹಾಗೂ ಹಾಸ್ಯ ಪಾತ್ರಗಳಿಗೆ ಸಮರ್ಥರೆನಿಸಿರುವ ಕಲಾವಿದರಾಗಿದ್ದಾರೆ.

2-4-83ರಂದು ಕೋಡಪದವಿನಲ್ಲಿ ಈಶ್ವರ ಶೆಟ್ಟಿಗಾರ್ ಹಾಗೂ ಲೀಲಾವತಿ ಶೆಟ್ಟಿಗಾರ್ ದಂಪತಿಯ ಮಗನಾಗಿ ಜನಿಸಿದ ಇವರು 7ನೇ ತರಗತಿವರೆಗೆ ವಿದ್ಯಾಭ್ಯಾಸ ಪಡೆದಿರುವರು.

12ನೇ ವಯೋಮಾನದಲ್ಲಿ ಉತ್ತಮ ಪುಂಡು ವೇಷಧಾರಿಯಾದ ರತ್ನಾಕರ ಹೆಗ್ಡೆ ಮತ್ತು ಸಬ್ಬಣಕೋಡಿ ಕೃಷ್ಣಭಟ್‌ರಿಂದ ನಾಟ್ಯಾಭ್ಯಾಸ ಮಾಡಿದರು.

ಸುಂಕದಕಟ್ಟೆ -3ವರ್ಷ, ಕದ್ರಿ -1 ವರ್ಷ, ಕರ್ನಾಟಕ -1ವರ್ಷ ಮಂಗಳಾದೇವಿ -5 ವರ್ಷ ಹೀಗೆ ಮೇಳಗಳಲ್ಲಿ ತಿರುಗಾಟ ಮಾಡಿರುವ ಇವರು ಕಳೆದ ಐದು ವರ್ಷಗಳಿಂದ ಸ್ವಂತ ಉದ್ಯೋಗದಲ್ಲಿ ತೊಡಗಿರುವರು. ಪ್ರಸ್ತುತ ಹೇಳಿಕೆಯ ಮೇಲೆ ಪಾತ್ರ ನಿರ್ವಹಣೆ ಮಾಡಿ ಕಲಾಸೇವೆ ಗೈಯುತ್ತಿರವ ದಿನೇಶರು'. ಅಭಿಮನ್ಯು, ಚಂಡ-ಮುಂಡರು, ಕೋಟಿ-ಚೆನ್ನಯ, ದೇವುಪೂಂಜ, ಬಬ್ಬು, ದಾರುಕ, ವಿಜಯ ಇತ್ಯಾದಿ ಪಾತ್ರಗಳನ್ನು ಮಾಡುತ್ತಾ ಉದಯೋನ್ಮುಖ ಕಲಾವಿದರಾಗಿ ಬೆಳೆಯುತ್ತಾ ಇದ್ದಾರೆ.



# ದಿವಾಕರ ಆಚಾರ್ಯ ಪೊಳಲಿ

*ಸಾದೂರು ಮನೆ, ಅಡ್ಡೂರು ಅಂಚೆ, ಗ್ರಾಮ*
*ಮಂಗಳೂರು ತಾಲೂಕು*

ಪರಂಪರಾಗತವಾದ ಶೈಲಿಯ ಹಾಡುಗಾರಿಕೆಯಿಂದ ಜನ ಮನ್ನಣೆಗೆ ಒಳಗಾಗಿರುವ ಶ್ರೀ ದಿವಾಕರ ಆಚಾರ್ಯ ಪೊಳಲಿಯವರು. ಸ್ವಂತ ಉದ್ಯೋಗದ ನಿಮಿತ್ತ ಮೇಳ ತಿರುಗಾಟವನ್ನು ನಿಲ್ಲಿಸಿ ಹೇಳಿಕೆಯ ಮೇರೆಗೆ ಕಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಕೇಶವ ಆಚಾರ್ಯ ಹಾಗೂ ರತ್ನಾವತಿ ಆಚಾರ್ಯ ದಂಪತಿಗೆ ಸುಪುತ್ರರಾಗಿ ಜನಿಸಿದ ಶ್ರೀಯುತರ ಜನ್ಮ ದಿನಾಂಕ 22-5-1966.

ಕೌಟುಂಬಿಕವಾಗಿ ಯಾವುದೇ ಯಕ್ಷಗಾನ ಹಿನ್ನಲೆ ಇಲ್ಲದೆ 1985-86ರ ಸಾಲಿನಲ್ಲಿ, 20ರ ವಯೋಮಾನದ ಕಾಲ ಘಟ್ಟ. ಇವರಿಗೆ ಯಕ್ಷಗಾನ ಕಲಿಯಬೇಕೆಂಬ ಉತ್ಸಾಹ ಹುಟ್ಟಿ ಕಲಾವಿದರಾದ ಅರ್ಬಿ ದೊಡ್ಡಣ್ಣಶೆಟ್ಟಿಯವರ ಗುರುತನದಲ್ಲಿ ರಂಗ ಪ್ರವೇಶ ಮಾಡಿದರು. ಬಜಪೆ ದೇರಣ್ಣರಿಂದ ನಾಟ್ಯಾಭ್ಯಾಸ, ಮಂದಾರ ಕೇಶವ ಭಟ್‌ರಿಂದ ಭಾಗವತಿಕೆಯ ಅಭ್ಯಾಸ ಇವರ ಪಂಚಾಂಗವನ್ನು ಗಟ್ಟಿ ಮಾಡಿತು. ಮುಂದೆ ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರ ಗುರುತನ ಇವರ ಶೈಲಿಗೆ ಪುಷ್ಟಿಯನ್ನು ನೀಡಿತು.

ತಲಕಳ ಮೇಳದಲ್ಲಿ ನಿರಂತರವಾಗಿ 15ವರ್ಷಗಳ ಕಾಲ ವೇಷಧಾರಿಯಾಗಿ ಹಾಗೂ ಭಾಗವತರಾಗಿ ಕಲಾಮಾತೆಯ ಕಲಾ ಸೇವೆಯನ್ನು ಗೈದಿರುವ ಇವರು ಗರುಡ, ಸೌಮಿತ್ರಿ ಭೀಮ ಇತ್ಯಾದಿ ಪೌರಾಣಿಕ ಪಾತ್ರಗಳೊಂದಿಗೆ ತುಳು ಪ್ರಸಂಗದ ಪುಂಡು ವೇಷಗಳನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ.

ಕಟೀಲು, ಸಸಿಹಿತ್ಲು, ಬಪ್ಪನಾಡು ಮೇಳಗಳ ಹಾಗೂ ಇನ್ನಿತರ ಹವ್ಯಾಸಿ ಕಾರ್ಯಕ್ರಮಗಳಲ್ಲಿ ಹೇಳಿಕೆಯ ಮೇರೆಗೆ ಭಾಗವತರಾಗಿ ಕಲಾಸೇವೆ ಮಾಡುವ, ದಿವಾಕರ ಆಚಾರ್ಯರು ವೇಷಧಾರಿ ಹಾಗೂ ಭಾಗವತರಾಗಿರುವದು ಮಾತ್ರವಲ್ಲದೆ ಪ್ರಸಂಗ ರಚನೆಯಲ್ಲೂ ಆಸಕ್ತಿ ತೋರಿದ್ದಾರೆ. ಇವರ "ಸಿರಿ-ತುಡರ್" ಹಾಗೂ "ಧರ್ಮಾಭಿಷೇಕ" ಎಂಬ ಪ್ರಸಂಗಗಳು ಹಲವಾರು ಬಾರಿ ಪ್ರದರ್ಶನಗೊಂಡಿವೆ.

ಶ್ರೀ ಶರತ್ ಕುಮಾರ್ ಕದ್ರಿ ಸಂಚಾಲಕತ್ವದ ಹವ್ಯಾಸಿ ಬಳಗ ಕದ್ರಿ (ರಿ). ಮಂಗಳೂರು ಇದರ ಮುಖ್ಯ ಭಾಗವತರಾಗಿದ್ದು, ಸ್ಪರ್ಧಾ ವಿಜೇತ ಬಳಗದ ವರ್ಚಸ್ಸಿಗೆ ಇವರ ಭಾಗವತಿಕೆಯ ಪ್ರಭಾವ ಕೂಡಾ ಮಹತ್ವ ಪೂರ್ಣವಾಗಿದೆ.

ಹವ್ಯಾಸಿ ಆಸಕ್ತ ಕಲಾವಿದರಿಗೆ ಭಾಗವತಿಕೆಯ ತರಬೇತಿಯನ್ನು ನೀಡುತ್ತಿರುವ ಇವರು ಪತ್ನಿ ಶ್ರೀಲತಾ ಮಕ್ಕಳು ಶ್ರೀನಿಧಿ, ಶಿವಾಣಿಯರೊಂದಿಗೆ ಕೃತಾರ್ಥ ಜೀವನ ನಡೆಸುತ್ತಿದ್ದಾರೆ. ಇವರ ಪ್ರತಿಭೆಗೆ ಸ್ಕಂದ ಪುರಸ್ಕಾರ ಹಾಗೂ ವಿಘ್ನೇಶ್ವರ ಯಕ್ಷಗಾನ ಮಂಡಳಿಯ ಸನ್ಮಾನ ಸಂದಿವೆ.

ಆಧುನೀಕರಣಗೊಳ್ಳುತ್ತಿರುವ ಇಂದಿನ ಯುಗದಲ್ಲಿ ಯಕ್ಷಗಾನದ ಭಾಗವತಿಕೆಯಲ್ಲಿ ಪರಂಪರಾ ಶೈಲಿಯನ್ನು ಉಳಿಸಿಕೊಂಡು ಬಂದಿರುವ ಇವರ ಕಲಾ ಸಾಧನೆ ಔಚಿತ್ಯ ಪೂರ್ಣವಾಗಿದೆ.



## ದಿವಾಕರ ಬಂಗಾಡಿ

***ಪೆಲತ್ತಡಿ ಮನೆ, ಕಿಲ್ಲೂರು ಅಂಚೆ, ಮಿತ್ರಬಾಗಿಲು ಗ್ರಾಮ***
***ಬೆಳ್ತಂಗಡಿ ತಾಲೂಕು***
***ಮೊ: 9481212971***

ಶ್ರೀ ಕಟೀಲು ಮೇಳದಲ್ಲಿ ತಿರುಗಾಟ ನಡೆಸುವ ದಿವಾಕರ ಬಂಗಾಡಿಯವರು ಪುಂಡುವೇಷಧಾರಿಯಾಗಿ ಜನಮನ್ನಣೆಗಳಿಸಿರುತ್ತಾರೆ.

ಕಿನ್ನಿಗೌಡ ಮತ್ತು ಶ್ರೀಮತಿ ದುಗ್ಗಮ್ಮ ದಂಪತಿಯರ ಸುಪುತ್ರರಾಗಿ ಶ್ರೀ ದಿವಾಕರ ಬಂಗಾಡಿಯವರು 22-02-1983ರಲ್ಲಿ ಜನಿಸಿದರು.

ಶ್ರೀಯುತರು 7ನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಯಕ್ಷಗಾನವು ಇವರ ಬಾಲ್ಯದ ಆಕರ್ಷಣೆಯ ಕಲೆಯಾಗಿದ್ದುದರಿಂದ ಅಧ್ಯಯನಕ್ಕೆ ಮನ ಮಾಡಿದರು.

ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಅವಕಾಶವನ್ನು ಪಡೆದು ಕಲಾವಿದರಾದ ವರ್ಕಾಡಿ ತಾರಾನಾಥರಿಂದ ನಾಟ್ಯಾಭ್ಯಾಸವನ್ನು ಮಾಡಿ ರಂಗಪ್ರವೇಶ ಮಾಡಿದರು.

16ನೇ ವಯಸ್ಸಿನಿಂದ ಯಕ್ಷಗಾನ ರಂಗಕ್ಕೆ ಕಾಲಿರಿಸಿದ ದಿವಾಕರ ಬಂಗಾಡಿಯವರು 10 ವರ್ಷಕ್ಕೂ ಮೀರಿದ ಕಲಾಸೇವೆಯನ್ನು ಕಟೀಲು ಮೇಳದಲ್ಲಿ ನಡೆಸಿದ್ದಾರೆ.

ಪುಷ್ಕಳ, ವೃಷಕೇತು, ಯಕ್ಷ ,ಚಂಡ-ಮುಂಡರು ಶಂಖ-ದುರ್ಗರು ಮುಂತಾದ ಪಾತ್ರಗಳನ್ನು ರಂಗಸ್ಥಳದಲ್ಲಿ ದಿಗಿಣ ಪ್ರಧಾನವಾಗಿ ಪ್ರದರ್ಶನ ಮಾಡಿ ಮೆಚ್ಚುಗೆಗೆ ಪಾತ್ರ ರಾಗಿದ್ದಾರೆ.

ಇವರ ಸಹೋದರ ಪಿ.ಟಿ.ಪ್ರಸಾದ್ ಭಾಗವತರು ಆಗಿ ಮನ್ನಣೆಯನ್ನು ಪಡೆದಿದ್ದಾರೆ. ಮಳೆಗಾಲದಲ್ಲಿ ಕೃಷಿಕ ರಾಗಿ ಶ್ರಮಿಸುವ ಇವರು ಉತ್ತಮ ವೇಷಧಾರಿಯಾಗಿ ಬೆಳೆಯುವ ಹಂಬಲವನ್ನು ಇರಿಸಿಕೊಂಡಿದ್ದಾರೆ.



## ದೇರಣ್ಣ ಬಜಪೆ

*ಕಲ್ಲೋಡಿ,ಬಜಪೆ*
*ಮಂಗಳೂರು ತಾಲೂಕು.*

ಪುಂಡುವೇಷ ಹಾಗೂ ಸ್ತ್ರೀವೇಷಗಳ ಮುಖೇನ ತನ್ನದೇ ಆದ ವರ್ಚಸ್ಸನ್ನು ಮರೆಸಿ ಖ್ಯಾತಿವೆತ್ತ ಶ್ರೀ ಬಜಪೆ ದೇರಣ್ಣ ಅವರು ನಿವೃತ್ತ ಕಲಾವಿದರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಬಜಪೆಯ ಕಲ್ಲೋಡಿ ಎಂಬಲ್ಲಿ ಸಂಕಪ್ಪ ಹಾಗೂ ಜಾನಕಿ ಮೊಯ್ಲಿ ದಂಪತಿಯ ಪುತ್ರರಾಗಿ ದಿನಾಂಕ 06-03/-1937ರಂದು ಬಜಪೆ ದೇರಣ್ಣರು ಜನಿಸಿದರು.

ನಾಟ್ಯರತ್ನ ಕಾವುಗೋಳಿ ಕಣ್ಣನ್‌ರವರಲ್ಲಿ ಯಕ್ಷಗಾನದ ನಾಟ್ಯಾಭ್ಯಾಸವನ್ನು ನಡೆಸಿ ರಂಗಪ್ರವೇಶ ಮಾಡಿದ ಇವರಿಗೆ ಸ್ತ್ರೀ ಪಾತ್ರ ಹಾಗೂ ಪುಂಡುವೇಷದ ನಿರ್ವಹಣೆ ಹೆಚ್ಚಿನ ಹಿತವನ್ನುಂಟು ಮಾಡಿತು. ಆ ಕಾರಣದಿಂದ ಇವರ ವರ್ಚಸ್ಸು ಸ್ತ್ರೀ ಹಾಗೂ ಪುಂಡು ವೇಷದ ಪಾತ್ರದಲ್ಲಿ ವಿಜೃಂಭಿಸಿದೆ.

ಕಟೀಲು ಮೇಳ 5 ವರ್ಷ, ಕರ್ನಾಟಕ ಮೇಳ 2 ವರ್ಷ, ಸುರತ್ಕಲ್ ಮೇಳ 20 ವರ್ಷ, ಆದಿಕೊಲ್ಲೂರು ಮೇಳ 2 ವರ್ಷ, ಸುಂಕದಕಟ್ಟೆ ಮೇಳ 12 ವರ್ಷ, ತಳಕಲ ಮೇಳ 1 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಸ್ತ್ರೀ ಪಾತ್ರಗಳಲ್ಲಿ ಒನಪು ವೈಯ್ಯಾರದ ಲಾಲಿತ್ಯವನ್ನು ತೋರುವ ಶ್ರೀಯುತರು ಪ್ರಮೀಳೆ, ದ್ರೌಪದಿ, ಶಶಿಪ್ರಭೆ, ಮೀನಾಕ್ಷಿ, ಮೇನಕೆ, ಮೋಹಿನಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಶ್ವೇತಕುಮಾರ, ಅಭಿಮನ್ಯು, ಬಭ್ರುವಾಹನ ಮುಂತಾದ ಇವರ ನಿರ್ವಹಣೆಯು ಪುಂಡುವೇಷಗಳು ಜನಾಕರ್ಷಣೆಗೆ ಒಳಗಾಗಿವೆ.

ಕುಪ್ಪೆಪದವು, ಕಂದಾವರ, ಕೊಳಂಬೆ, ಬೊಳ್ಳೂರು, ಬಜಪೆ ಮೊದಲಾದ ಕಡೆಗಳಲ್ಲಿ ನಾಟ್ಯ ತರಭೇತಿಯನ್ನು ನೆರವೇರಿಸಿರುವ ಇವರು ಹಲವು ಮಂದಿ ಶಿಷ್ಯಂದಿರನ್ನು ತಡೆದು ಸಾರ್ಥಕರಾಗಿದ್ದಾರೆ.

ಉತ್ತಮ ಕಲಾ ಸಾಧನೆಯನ್ನು ಮಾಡಿರುವ ಇವರು ಹಿರಿಮೆಗೆ ಪ್ರತಿ ಫಲವಾಗಿ ಎಡಪದವು, ಉಡುಪಿ, ಕಲ್ಯಾಣಪುರ, ಗುರುಪುರ, ಮಂಗಳೂರು ಪುರಭವನ ಮುಂತಾದೆಡೆಯಲ್ಲಿ ಗೌರವದ ಸಂಮಾನಗಳು ದೊರೆತಿವೆ.



## ನವೀನ ಮುಂಡಾಜೆ

*ಬತ್ರೆ ಬೈಲು ಮನೆ, ಮುಂಡಾಜೆ ಗ್ರಾಮ*
*ಬೆಳ್ತಂಗಡಿ ತಾಲೂಕು- 574216*
*ಮೊ: 9880865095 / 08256-288023.*

ಮುಂಡು ವೇಷದಲ್ಲಿ ಚತುರನಾಗಿರುವ ನವೀನ ಮುಂಡಾಜೆಯುವರು ಧರ್ಮಸ್ಥಳ ಮೇಳದ ಕಲಾವಿದನಾಗಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಶ್ರೀ ಬೂಬ ಶೆಟ್ಟಿ ಹಾಗೂ ಶ್ರೀಮತಿ ಗೋಪಿ ಶೆಡ್ತಿ ದಂಪತಿಯ ಮಗನಾಗಿರುವ ನವೀನ ಮುಂಡಾಜೆ ದಿನಾಂಕ 01-01-1984ರಲ್ಲಿ ಮುಂಡಾಜೆ ಗ್ರಾಮದಲ್ಲಿ ಜನಿಸಿದರು.

10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದು ಅನಂತರ ಸ್ವಂತಾಸಕ್ತಿಯಿಂದಲೇ ಯಕ್ಷಗಾನದತ್ತ ಒಲವನ್ನು ತೋರಿ ತಮ್ಮ ಸಾಧನೆಯನ್ನು ಮುಂದುವರಿಸಿದರು.

ತಮ್ಮ 16ನೇ ವರ್ಷದಲ್ಲಿ ಶ್ರೀ ಧರ್ಮಸ್ಥಳ ಯಕ್ಷಗಾನ ಕೇಂದ್ರದ ಗುರುಗಳಾದ ದಿವಾಣ ಶಿವಶಂಕರ ಭಟ್‌ರಲ್ಲಿ ಯಕ್ಷಗಾನ ನಾಟ್ಯಾಭ್ಯಾಸವನ್ನು ಕಲಿತು ಧರ್ಮಸ್ಥಳ ಮೇಳವನ್ನು ಸೇರಿದರು.

ಅಜ್ಜ ಶ್ರೀಧರ ಭಂಡಾರಿ, ಚಿಕ್ಕಪ್ಪನವರಾದ ಬಾಲಕೃಷ್ಣ ಮುಂಡಾಜೆ, ಸದಾಶಿವ ಮುಂಡಾಜೆ ಹಾಗೂ ಮಾವನಾದ ಉಮೇಶ ಶೆಟ್ಟಿ ಉಬರಡ್ಕ ಇವರಿಂದ ಪ್ರೇರೇಪಿತರಾಗಿರುವ ನವೀನ ಮುಂಡಾಜೆಯವರು ಈಗಾಗಲೆ 10 ವರ್ಷಗಳ ಕಲಾಸೇವೆಯನ್ನು ಮಾಡಿದ್ದಾರೆ.

ಪೌರಾಣಿಕ ಪ್ರಸಂಗಗಳಲ್ಲಿನ ಪುಂಡು ಪಾತ್ರಗಳಾದ ಅಶ್ವತ್ಥಾಮ, ಸೌಮಿತ್ರಿ, ಲವ, ಅಭಿಮನ್ಯು, ಲಕ್ಷ್ಮಣ, ಕೃಷ್ಣ, ರಾಮ, ವರುಣ ಮಾರುತ, ಪ್ರಹ್ಲಾದ ಮುಂತಾದ ಪಾತ್ರಗಳನ್ನು ನಿರ್ವಹಿಸಿರುವ ಇವರು ಬೆಳೆಯುತ್ತಿರುವ ಯುವ ಪ್ರತಿಭಾವಂತ ಕಲಾವಿದರಾಗಿದ್ದಾರೆ.



## ನಾಗಪ್ಪ ಪಡುಮಲೆ

*ಪಡುಮಲೆ, ಪಡುವಣ್ಣೂರು ಗ್ರಾಮ ಮತ್ತು ಅಂಚೆ*
*ಪುತ್ತೂರು ತಾಲೂಕು, ದ.ಕ.*
*ಮೊ; 9844919221*

ಯಕ್ಷಗಾನದ ಪ್ರಮುಖ ಪಾತ್ರವಾದ ಪುಂಡುವೇಷ ಮತ್ತು ಸ್ತ್ರೀವೇಷಗಳನ್ನು ಮಾಡುತ್ತಾ ಬೆಳೆಯುತ್ತಿರುವ ಯುವ ಪ್ರತಿಭೆ ನಾಗಪ್ಪ ಪಡುಮಲೆ ಪ್ರಸ್ತುತ ಬಪ್ಪನಾಡು ಮೇಳದಲ್ಲಿ ಕಲಾಸೇವೆಯನ್ನು ಮಾಡುತ್ತಾ ಬರುತ್ತಿದ್ದಾರೆ.

ಪುತ್ತೂರು ತಾಲೂಕಿನ ಪಡುಮಲೆ ಎಂಬಲ್ಲಿ ಶ್ರೀ ತಣಿಯಪ್ಪ ಹಾಗೂ ಶ್ರೀಮತಿ ಅಕ್ಕು ದಂಪತಿಯ ಪುತ್ರನಾಗಿ 1980ರಲ್ಲಿ ಜನಿಸಿದರು.

10ನೇ ತಗಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದ ಇವರಿಗೆ ಇವರ ಪರಿಸರವು ಯಕ್ಷಗಾನದತ್ತ ಆಸಕ್ತಿವಹಿಸುವಂತೆ ಮಾಡಿತು.

ಗುರುಗಳಾದ ಟಿ.ವಿಷ್ಣುಭಟ್ಟರು ಸುಳ್ಯಪದವು ಶಾಲೆಯಲ್ಲಿ ಅಧ್ಯಾಪಕರಾಗಿದ್ದುದರಿಂದ ನಾಗಪ್ಪ ಪಡುಮಲೆಯುವರ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸಲು ಪ್ರೋತ್ಸಾಹಿಸಿದರು. ಹಾಗಾಗಿ ಏಳನೇ ತರಗತಿಯಿಂದ ಹತ್ತನೇ ತರಗತಿಯ ತನಕ ಶಾಲೆಯಲ್ಲೇ ಯಕ್ಷಗಾನದ ಪಾತ್ರ ನಿರ್ವಹಣೆ ಮಾಡಿದರು.

ಹತ್ತನೇ ತರಗತಿಯಿಂದ ಶಾಲಾ ಜೀವನಕ್ಕೆ ಮುಕ್ತಾಯ ಹಾಡಿದ ಇವರು ಹದಿನಾರನೇ ವರ್ಷದಿಂದ ವರ್ಷದಿಂದ ಮೇಳತಿರುಗಾಟವನ್ನು ಆರಂಭಿಸಿದರು.

ಕಟೀಲು ಮೇಳ 6ವರ್ಷ, ಪುತ್ತೂರು ಮೇಳ 3ವರ್ಷ, ಕುಂಟಾರು ಮೇಳದ 4ವರ್ಷ, ಮಂಗಳಾದೇವಿ 2ವರ್ಷ, ತಲಕಳ 2ವರ್ಷ ಹಾಗೂ ಬಪ್ಪಬಾಡು, ಮೇಳದಲ್ಲಿ ಕಳೆದ 1ವರ್ಷದಿಂದ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ಇವರು ಪುಂಡುವೇಷ ಹಾಗೂ ಸ್ತ್ರೀವೇಷದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆಸಿ ಮನ್ಮಥ, ಜಯವಿಜಯರು, ಚಂಡ-ಮುಂಡರು, ಮೀನಾಕ್ಷಿ, ಕಮಲಗಂಧಿನಿ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಳೆಗಾಲದಲ್ಲಿ ಉಪವೃತ್ತಿಯಾಗಿ ಯಕ್ಷಗಾನದ ಭೂಷಣ ತಯಾರಿಯ ಕೆಲಸವನ್ನು ಮಾಡಿಕೊಂಡು ಬರುತ್ತಿರುವ ಇವರು ಚುರುಕಿನ ಪ್ರತಿಭಾವಂತ ಕಲಾವಿದರಾಗಿದ್ದಾರೆ.

ಶ್ರೀಮತಿ ಶೋಭ ಇವರನ್ನು ವರಿಸಿರುವ ನಾಗಪ್ಪ ಪಡುಮಲೆಯವರು ಯಜ್ಞೇಶ್ ಎಂಬ ಮಗುವನ್ನು ಪಡೆದಿದ್ದಾರೆ.



# ನಾಗೇಶ ಕುಲಶೇಖರ

*ಮಲೆನಾಡು ಸ್ವಾಮಿಲ್‌ನ ಹತ್ತಿರ, ಕುಲಶೇಖರ,*
*ಪದವಲೆ ಅಂಚೆ, ಮಂಗಳೂರು*
*ಮೊ ; 9481974748.*

ಪುಂಡುವೇಷ, ರಾಜವೇಷ, ನಾಟಕೀಯ ವೇಷಗಳನ್ನು ಉತ್ತಮವಾಗಿ ನಿರ್ವಹಿಸ ಬಲ್ಲ ನಾಗೇಶ ಕುಲಶೇಖರ ಇವರು ಸಸಿಹಿತ್ಲು ಭಗವತಿ ಮೇಳದ ಕಲಾವಿದರಾಗಿ ಯಕ್ಷಗಾನ ಕಲಾಸೇವೆಯನ್ನೂ ಮಾಡುತ್ತಿದ್ದಾರೆ.

24-7-1966ರಂದು ಮಂಗಳೂರಿನ ಕುಲಶೇಖರದಲ್ಲಿ ಶ್ರೀ ಸಂಕಯ್ಯ ಆಚಾರ್ಯ ಹಾಗೂ ಶ್ರೀಮತಿ ರತ್ನಾವತಿ ದಂಪತಿಗಳಿಗೆ ಸುಪುತ್ರನಾಗಿ ಜನಿಸಿದರು. 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ.

ಇವರು 10ನೇ ವಯಸ್ಸಿನ ಎಳೆಯ ವಿದ್ಯಾರ್ಥಿಯಾಗಿದ್ದಾಗಲೇ ತಂದೆಯವರಿಂದ ಹಾಗೂ ರಾಮಚಂದ್ರ ಭಂಡಾರ್‌ಕರ್ ಅವರಿಂದ ಪ್ರೇರಣೆಗೊಳಗಾಗಿ ಯಕ್ಷಗಾನ ಕ್ಷೇತ್ರದತ್ತ ಮುಖ ಮಾಡಿದರು.

ಬೆಳ್ಳಾರೆ ಮಂಜುನಾಥ ಭಟ್ ಹಾಗೂ ಜಪ್ಪು ದಯಾನಂದ ಶೆಟ್ಟಿಯವರಿಂದ ನಾಟ್ಯಾಭ್ಯಾಸವನ್ನು ಮಾಡಿ ಪುಂಡು, ರಾಜ ಹಾಗೂ ನಾಟಕೀಯ ವೇಷಗಳನ್ನು ನಿರ್ವಹಿಸುತ್ತಾ ಪ್ರೌಢಿಮೆಯನ್ನು ಸಾಧಿಸಿ ನಾಯಕ ಪ್ರತಿನಾಯಕ ಪಾತ್ರಗಳೆರಡನ್ನು ನಿರ್ವಹಿಸ ಬಲ್ಲವರಾಗಿದ್ದಾರೆ.


ಇವರ ತಮ್ಮನಾದ ವೆಂಕಟೇಶ ಆಚಾರ್ಯರವರು ಕೂಡಾ ವೇಷಧಾರಿಯಾಗಿ ಸಸಿಹಿತ್ಲುವಿನ ಭಗವತಿ ಮೇಳದಲ್ಲಿಯೇ ವ್ಯವಸಾಯ ಮಾಡುತ್ತಿದ್ದಾರೆ.

ಸುಬ್ರಹ್ಮಣ್ಯ ಯಕ್ಷಗಾನ ಮಂಡಳಿಯಲ್ಲಿ 15ವರ್ಷ ಹವ್ಯಾಸಿಯಾಗಿ ಕಲಾ ಸೇವೆ ಮಾಡಿದ ಇವರು ತಲಕಳ ಮೇಳದಲ್ಲಿ 3ವರ್ಷ, ಬಪ್ಪನಾಡು ಮೇಳದಲ್ಲಿ 1 ವರ್ಷ ಹಾಗೂ ಭಗವತಿ ಮೇಳದಲ್ಲಿ 11 ವರ್ಷಗಳ ತಿರುಗಾಟವನ್ನು ಮಾಡಿದ್ದಾರೆ. ಇಷ್ಟಲ್ಲದೆ ಕರ್ನಾಟಕ ಮೇಳದಲ್ಲಿ ಹೇಳಿಕೆಯ ಮೇರೆಗೆ ಕಲಾಸೇವೆ ಗೈದಿರುವ ಹಿರಿಮೆ ಇವರಿಗಿದೆ.

ಅಭಿಮನ್ಯು, ಬಭ್ರುವಾಹನ, ಮಧು-ಕೈಟಭ, ಚಂಡ-ಮುಂಡರು, ಬೀರಣ್ಣ, ದುಗ್ಗಣ್ಣಕೊಂಡೆ,ದಾರಿಕಾಸುರ, ಚೆನ್ನಯ, ಚಂದುಗಿಡಿ ಇತ್ಯಾದಿ ನಾಯಕ ಖಳನಾಯಕ ಪಾತ್ರಗಳನ್ನೂ ನಿರ್ವಹಿಸಿದ್ದಾರೆ.

ಚೆಂಡೆ ಮದ್ದಳೆ ವಾದನದಲ್ಲಿ ತಮ್ಮ ಆಸಕ್ತಿಯನ್ನು ತೋರ್ಪಡಿಸಿಕೊಂಡಿರುವ ಇವರು ಪ್ರಸಾಧನ ಕಾರ್ಯದ ಅನುಭವವನ್ನು ಕೂಡಾ ಸಂಪಾದಿಸಿದ್ದಾರೆ.

ಶ್ರೀಮತಿ ಸುಮಿತ್ರರೊಂದಿಗೆ ವಿವಾಹವಾಗಿ ಜೀವನ ನಡೆಸುತ್ತಿರುವ ನಾಗೇಶ ಕುಲಶೇಖರರ ಪ್ರತಿಭೆಯನ್ನು ಗುರುತಿಸಿದ ಮುಂಬಯಿಯ ತೀಯಾ ಸಮಾಜವು ಗೌರವಿಸಿ ಸಂಮಾನಿಸಿದೆ.



## ನಾರಾಯಣ ಪೂಜಾರಿ ಕೆ. ಉಜಿರೆ

*ಕೊಳಪ್ಪಳ ಮನೆ, ಉಜಿರೆ ಅಂಚೆ,*
*ಬೆಳ್ತಂಗಡಿ ತಾಲೂಕು– 574240*
*ಮೊ: 9741770702*

ಹಾಸ್ಯ, ಪುಂಡು, ರಾಜ ಹಾಗೂ ಸ್ತ್ರೀವೇಷಗಳನ್ನು ನಿರ್ವಹಿಸುತ್ತಾ ರಂಗ ಕಲಾವಿದನಾಗಿ ಕಲಾ ಸೇವೆಯನ್ನು ಮಾಡುತ್ತಾ ಬಂದಿರುವ ಶ್ರೀ ಉಜಿರೆ ನಾರಾಯಣ ಪೂಜಾರಿಯವರು ಪ್ರಸಕ್ತ ಶ್ರೀ ಕಟೀಲು ಮೇಳದ ಹಾಸ್ಯ ಕಲಾವಿದರಾಗಿದ್ದಾರೆ.

ಅಣ್ಣು ಪೂಜಾರಿ ಹಾಗೂ ದರ್ಣಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಇವರು ಏಳನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

15ನೇ ವಯಸ್ಸಿನಲ್ಲಿ ಯಕ್ಷಗಾನ ಕಲಾರಂಗಕ್ಕೆ ಸೇರ್ಪಡೆಗೊಂಡ ಉಜಿರೆ ನಾರಾಯಣರು ಪಡ್ರೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದ್ದಾರೆ.

ದೇಲಂಪುರಿ ಮೇಳದಲ್ಲಿ 1 ವರ್ಷ, ಅಮ್ಮಾಡಿ ಮೇಳದಲ್ಲಿ 1 ವರ್ಷ, ಸುಂಕದಕಟ್ಟೆ ಮೇಳದಲ್ಲಿ 8 ವರ್ಷ, ಪುತ್ತೂರು ಮೇಳದಲ್ಲಿ 4 ವರ್ಷ, ಕುಂಬ್ಳೆ ಮೇಳದಲ್ಲಿ 4 ವರ್ಷ, ಸುರತ್ಕಲ್ ಮೇಳದಲ್ಲಿ 10 ವರ್ಷ, ಕರ್ನಾಟಕ ಮೇಳದಲ್ಲಿ 2 ವರ್ಷ, ಮಂಗಳಾದೇವಿ ಮೇಳದಲ್ಲಿ 1 ವರ್ಷ, ಕಟೀಲು ಮೇಳದಲ್ಲಿ 3 ವರ್ಷ, ಬಪ್ಪನಾಡು ಮೇಳದಲ್ಲಿ 1 ವರ್ಷ.ಭಗವತಿ ಸಸಿಹಿತ್ಲು ಮೇಳದಲ್ಲಿ 3 ವರ್ಷಗಳ ಕಲಾಸೇವೆ ಮಾಡಿರುವ ಇವರು ಪಸ್ತುತ ವರ್ಷದಲ್ಲಿ ಕಟೀಲು ಮೇಳವನ್ನು ಸೇರಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಅಭಿಮನ್ಯು, ಬಭ್ರುವಾಹನ, ಕುಶ, ಲವ, ದೇವೇಂದ್ರ, ದೇವಿ, ಮೋಹಿನಿ, ಸೀತಾ, ದಾರುಕಾ, ವಿಜಯ, ಮಕರಂದ, ಬಾಹುಕ ಇತ್ಯಾದಿ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ಇವರಿಗೆ ಇದೆ.

ಶ್ರೀಮತಿ ಕಮಲಾರನ್ನು ವಿವಾಹವಾಗಿ ಸ್ಮಿತಾರಶ್ಮಿ ಮತ್ತು ಜಗದೀಶ ಎಂಬ ಇಬ್ಬರು ಮಕ್ಕಳಿಗೆ ಜನ್ಮಕೊಟ್ಟಿರುತ್ತಾರೆ.

ಮುಂಬಯಿಯಲ್ಲಿ ಯಕ್ಷಗಾನ ತರಬೇತಿ ನಡೆಸಿ ಅನೇಕ ಶಿಷ್ಯವೃಂದವನ್ನು ಹೊಂದಿರುವ ಇವರಿಗೆ ಮುಂಬಯಿಯ ತೀಯಾ ಸಮಾಜ, ಚಾ ಪರ್ಕ ಅಭಿಮಾನಿ ಬಳಗ ಮುಂಬಯಿ, ಉಜಿರೆ ಬಿಲ್ಲವ ಸಮಾಜ, ಅರಳ ರಾಯಿ ಕ್ಯೊಳ ಬಿಲ್ಲವ ಸಮಾಜ, ಮುಂಬಯಿ ಕಾಂದಿವೆಲಿ ಕನ್ನಡ ಸಂಘ ಇತ್ಯಾದಿಗಳಿಂದ ಅನೇಕ ಸಂಮಾನ ಹಾಗೂ ಗೌರವದ ಪುರಸ್ಕಾರಗಳೂ ಸಂದಿವೆ.



## ನಾರಾಯಣ ಬಿ. ಭಟ್

*"ಬರೆಮನೆ" , ಪೆರುವಾಯಿ ಅಂಚೆ ಮತ್ತು ಗ್ರಾಮ*
*ಬಂಟ್ವಾಳ ತಾಲೂಕು – 574260*
*ಮೊ ; 9449236199*

ಪುರಾಣ ಪ್ರಸಂಗ ಪ್ರದರ್ಶನದ ಅನುಭವವನ್ನು ಸಂಪಾದಿಸಿ ರಂಗ ತಂತ್ರಕ್ಕೆ ಅನುಗುಣವಾಗಿ ಚೆಂಡೆ–ಮದ್ದಳೆಯ ಕೈಚಳಕವನ್ನು ತೋರುವ ಹಿರಿಯ ಕಲಾವಿದರಾಗಿರುವ ಬಿ. ನಾರಾಯಣ ಭಟ್ಟರು ಪ್ರಸ್ತುತ ಕಟೀಲು ಮೇಳದ ಮದ್ದಳೆಗಾರರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಹಾಲಿಂಗ ಭಟ್ ಮತ್ತು ಮೂಕಾಂಬಿಕಾ ಅಮ್ಮ ದಂಪತಿಯ ಸುಪುತ್ರರಾಗಿ ದಿನಾಂಕ 28–1–1956ರಂದು ಬರೆಮನೆ ಪೆರುವಾಯಿಯಲ್ಲಿ ಜನಿಸಿದರು.

ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಮನೆತನದಲ್ಲಿ ಹುಟ್ಟಿ ಬೆಳೆದವರಾಗಿದ್ದುದರಿಂದ ಕಲೆಯ ಪ್ರತಿಭೆ ರಕ್ತಗತವಾಗಿ ಬಂದಿದೆ.

ಅಜ್ಜರಾದ ದಿ| ಕುದ್ರೆ ಕೂಡ್ಲು ರಾಮ ಭಟ್ಟರು ಹಾಗೂ ಇನ್ನೋರ್ವ ಅಜ್ಜರಾದ ನಾರಾಯಣ ಭಟ್ ಕೊಂದಲಕಾಡು ಇವರು ಭಾಗವತರು ಮತ್ತು ಹಿಮ್ಮೇಳ ವಾದಕರಾಗಿದ್ದು ನಾರಾಯಣ ಭಟ್ಟರಿಗೆ ಉತ್ತೇಜನವನ್ನು ಮಾಡಿ ನುಡಿತ – ಬಡಿತಗಳ ತರಭೇತಿಯನ್ನು ನೀಡಿದ್ದಾರೆ. ಆಮೇಲೆ ನಾರಾಯಣ ಭಟ್ಟರು ದಿ| ನೆಡ್ಲೆ ನರಸಿಂಹ ಭಟ್ಟರಿಂದ ಹೆಚ್ಚಿನ ಮಾರ್ಗದರ್ಶನವನ್ನು ಪಡೆದು ಉದಯೋನ್ಮುಖರಾಗಿ ಬೆಳೆದು ಪ್ರೌಢಿಮೆಯನ್ನು ಸಾಧಿಸಿದ್ದಾರೆ.

1974ರಿಂದ ಮೇಳ ತಿರುಗಾಟವನ್ನು ಆರಂಭಿಸಿದ ಇವರು ಮೊದಲಾಗಿ ಸ್ವರ್ಣಾಡು ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಮಾಡಿ ಅನಂತರ ಕಟೀಲು ಮೇಳವನ್ನು ಸೇರಿದವರು ಈಗಾಗಲೇ 33 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ನಾರಾಯಣ ಭಟ್ಟರು ಆಸಕ್ತರಿಗೆ ಹಿಮ್ಮೇಳದ ತರಬೇತಿಯನ್ನು ನೀಡಿದ್ದಾರೆ.

ಶ್ರೀಮತಿ ಸತ್ಯವತಿ ಎಂಬವರನ್ನು ವರಿಸಿ ಅಕ್ಷಯ ಎಂಬ ಸುಪುತ್ರನೋರ್ವನನ್ನು ಪಡೆದಿದ್ದಾರೆ.



## ಪದ್ಮನಾಭ ಶೆಟ್ಟಿ

*ಪೊಂಜಿಲ ಮನೆ, ಗರಡಾಡಿ ಅಂಚೆ ಮತ್ತು ಗ್ರಾಮ*
*ಬೆಳ್ತಂಗಡಿ ತಾಲೂಕು– 574217*
***ಮೊ : 9449488630.***

ಶ್ರೀ ಧರ್ಮಸ್ಥಳ ಮೇಳದಲ್ಲಿ 14 ವರ್ಷಗಳಿಂದ ತಿರುಗಾಟ ಮಾಡಿರುವ ಶ್ರೀ ಪದ್ಮನಾಭ ಶೆಟ್ಟಿಯವರು ಸ್ತ್ರೀವೇಷ, ಪುರುಷವೇಷಗಳಲ್ಲಿ ಪರಿಣತಿಯನ್ನು ಸಾಧಿಸಿದ್ದಾರೆ.

ಶ್ರೀಯುತರು ಶ್ರೀ ನೇಮಣ್ಣ ಶೆಟ್ಟಿ ಹಾಗೂ ಶ್ರೀಮತಿ ಹೇಮಾವತಿಯವರ ಸುಪುತ್ರರಾಗಿ 29–10–1978ರಂದು ಪೊಂಜಿಲ ಮನೆಯಲ್ಲಿ ಹುಟ್ಟಿದರು.

ಶ್ರೀಯುತರು 10ನೇ ತರಗತಿಯ ತನಕ ಕಲಿತ ಮೇಲೆ 18ನೇ ವಯಸ್ಸಿನಲ್ಲಿ ತನ್ನ ತಂದೆಯವರಿಂದ ಯಕ್ಷಗಾನದ ಅರ್ಥವನ್ನು ಅಭ್ಯಾಸ ಮಾಡಿದರು.

ಯಕ್ಷಗಾನದ ಗುರುಗಳಾದ ಶ್ರೀ ಅನಂತ ಪದ್ಮನಾಭ ಹೊಳ್ಳರಿಂದ ಪ್ರಾಥಮಿಕ ನಾಟ್ಯಾಭ್ಯಾಸವನ್ನು ಮಾಡಿ 1996ರಲ್ಲಿ ಧರ್ಮಸ್ಥಳ ಲಲಿತಕಲಾಕೇಂದ್ರದಲ್ಲಿ ಶ್ರೀ ಕೋಳ್ಯೂರು ರಾಮಚಂದ್ರ ರಾವ್ ಅವರಿಂದ ಹೆಚ್ಚಿನ ಅಭ್ಯಾಸವನ್ನು ಮಾಡಿರುತ್ತಾರೆ.

ಧರ್ಮಸ್ಥಳ ಮೇಳದಲ್ಲೇ 14 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ದೇವೇಂದ್ರ, ಅರ್ಜುನ, ಹಾಗೂ ಅಸುರ ವೇಷಗಳನ್ನು ಮಾಡುತ್ತಿದ್ದಾರೆ. ಭವಿಷ್ಯದಲ್ಲಿ ಉತ್ತಮ ಕಲಾ ಸಾಧಕನಾಗುವ ಆಶಯವನ್ನು ಹೊಂದಿರುವ ಶ್ರೀಯುತರು ಶ್ರೀಮತಿ ಹರಿಣಾಕ್ಷಿಯನ್ನು ಧರ್ಮಪತ್ನಿಯಾಗಿ ಸ್ವೀಕರಿಸಿಕೊಂಡು ಸೂರಜ್ ಎಂಬ ಸುಪುತ್ರನನ್ನು ಪಡೆದಿದ್ದಾರೆ.



## ಪಿ. ಟಿ. ಪ್ರಸಾದ್.

*ಕೃತಿ ನಿವಾಸ. ಬೆಳಾಲು, ಬೆಳ್ತಂಗಡಿ ತಾಲೂಕು.*
*ದಕ್ಷಿಣ ಕನ್ನಡ.*
*ಮೊ ; 9740256030.*

ಶ್ರೀ ಸುಂಕದ ಕಟ್ಟೆ ಮೇಳದಲ್ಲಿ ತಿರುಗಾಟವನ್ನು ನಡೆಸುವ ಶ್ರೀ ಪಿ.ಟಿ. ಪ್ರಸಾದ್ ಇವರು ಸಂಗೀತ ಗಾರರಾಗಿ ಕಲಾ ಸೇವೆಯನ್ನು ಮಾಡುತ್ತಾ ಪ್ರಸಂಗ ಪ್ರದರ್ಶನಕ್ಕೆ ಹಾಡಲು ಅನುಭವವನ್ನು ಸಂಪಾದಿಸಿದ್ದಾರೆ.

38 ವರ್ಷಗಳ ಹಿರಿತನಕ್ಕೆ ಬೆಳೆದಿರುವ ಇವರು ಶ್ರೀ ಬೊಗ್ರ ಗೌಡ ಹಾಗೂ ಶ್ರೀಮತಿ ದುಗ್ಗಮ್ಮ ದಂಪತಿಯ ಸುಪುತ್ರರಾಗಿದ್ದಾರೆ.

ಒಂಭತ್ತನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಬಾಲ್ಯದಿಂದಲೇ ಯಕ್ಷಗಾನ ಕಲೆಯ ಬಗ್ಗೆ ಆಕರ್ಷಿತರಾಗಿದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಲೀಲಾವತಿ ಬೈಪಾಡಿತ್ತಾಯರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿದ ಇವರು ಸಂಗೀತ ಹಾಡುವ ಅನುಭವವನ್ನು ಸಂಪಾದಿಸಿದರು.

ಬಪ್ಪನಾಡು ಮೇಳ –4 ವರ್ಷ, ಕುಂಟಾರು ಮೇಳ –2 ವರ್ಷ, ಕಟೀಲು ಮೇಳ –2 ವರ್ಷ, ಸಸಿಹಿತ್ಲು ಭಗವತಿ ಮೇಳ –4 ವರ್ಷ ಹಾಗೂ ಸುಂಕದ ಕಟ್ಟೆ ಮೇಳ –4 ವರ್ಷ ಹೀಗೆ 16 ವರ್ಷಗಳ ಮೇಳ ತಿರುಗಾಟದ ಅನುಭವವನ್ನು ಹೊಂದಿದ್ದಾರೆ.

ಶ್ರೀಮತಿ ದೇವಕಿ ಎಂಬವರನ್ನು ವರಿಸಿ ಕಿರಣ್ ಮತ್ತು ಕೃತಿ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಪುಷ್ಪರಾಜ್ ಜೋಗಿ ನೆಲ್ಯಾಡಿ

*"ಕಲಾ ಚೇತನ", ನೆಲ್ಯಾಡಿ ಗ್ರಾಮ, ಅಂಚೆ*
*ಪುತ್ತೂರು ತಾಲೂಕು – 574221*
*ಮೊಬೈಲ್ : 9481756743*

ಕಲೆಯ ಮೇಲಿನ ಆಸಕ್ತಿಯೇ ಪ್ರಮುಖ ಕಾರಣವಾಗಿದ್ದು, ಸಾಧನೆಯ ಹಂಬಲದಿಂದ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿದ ಶ್ರೀ ಪುಷ್ಪರಾಜ ಜೋಗಿ ನೆಲ್ಯಾಡಿ ಇವರು ಪಸ್ತುತ ಕಟೀಲು ಮೇಳದ ಕಲಾವಿದರಾಗಿದ್ದಾರೆ.

46ರ ವಯೋಮಾನಕ್ಕೆ ಬೆಳೆದಿರುವ ಇವರು ಶಿವಪ್ಪ ಜೋಗಿ ಮತ್ತು ರುಕ್ಮಿಣಿ ದಂಪತಿಗೆ ಸುಪುತ್ರರಾಗಿದ್ದಾರೆ. ಇವರ ಹುಟ್ಟೂರು ಕಾಂಚನ.

7ನೇ ತರಗತಿಯ ತನಕ ವಿದ್ಯಾರ್ಹತೆ ಹೊಂದಿರುವ ಇವರು 13ರ ವಯಸ್ಸಿನಲ್ಲಿ ಯಕ್ಷಗಾನವನ್ನು ಕಲಿಯುವ ಆಸಕ್ತಿಯಿಂದ ಕಟೀಲು ಸೀನ ಮತ್ತು ಪಡ್ರೆ ಚಂದ್ರುರವರಿಂದ ರಂಗ ತರಬೇತಿಯನ್ನು ಪಡೆದರು.

ದೊಡಪ್ಪನ ಮಗ ಶಿವರಾಮ ಜೋಗಿ ಮತ್ತು ದೂರದ ಸಂಬಂಧಿಕರಾದ ಜನಾರ್ದನ ಜೋಗಿ ಇವರುಗಳು ಯಕ್ಷಗಾನ ಕಲಾವಿದರಾಗಿರುವುದರಿಂದ ಪುಷ್ಪರಾಜ್ ಜೋಗಿಯವರಿಗೆ ಪ್ರೋತ್ಸಾಹಕರಾಗಿ ಬೆನ್ನು ತಟ್ಟಿದ್ದಾರೆ.

ಪ್ರವೃತ್ತಿಯಲ್ಲಿ ಚಾಲಕವೃತ್ತಿಯ ಹವ್ಯಾಸವನ್ನು ಬೆಳೆಸಿಕೊಂಡಿರುವ ಶ್ರೀಯುತರು ಪುಂಡುವೇಷ, ರಾಜವೇಷ, ಸ್ತ್ರೀ ವೇಷಗಳನ್ನು ನಿರ್ವಹಿಸುವ ಮೂಲಕ ತಮ್ಮ ಪ್ರತಿಭೆಯನ್ನು ಮೆರೆಸಿಕೊಂಡಿದ್ದಾರೆ.

ಸುಂಕದಕಟ್ಟೆ ಮೇಳದಲ್ಲಿ 5 ವರ್ಷ, ಪುತ್ತೂರು ಮೇಳದಲ್ಲಿ 4 ವರ್ಷ ಅರುವ ಮೇಳದಲ್ಲಿ 3ವರ್ಷ, ಕುಂಬ್ಳೆ ಮೇಳದಲ್ಲಿ 3ವರ್ಷ, ಮಲ್ಲ ಮೇಳ, ಬಪ್ಪನಾಡು, ಕೂಡ್ಲು ಮೇಳಗಳಲ್ಲಿ ಒಂದೊಂದು ವರ್ಷಗಳ ಕಲಾ ಸೇವೆ ಮಾಡಿ ಕಟೀಲು ಮೇಳವನ್ನು ಸೇರಿದರು. ಅಲ್ಲಿ 4 ವರ್ಷಗಳ ತಿರುಗಾಟವನ್ನು ಪೂರೈಸಿ ಅನಿವಾರ್ಯ ಕಾರಣದಿಂದ ಮೇಳ ತಿರುಗಾಟವನ್ನು ನಿಲ್ಲಿಸಿದ್ದರು.

13ವರ್ಷಗಳ ಕಾಲ ಹವ್ಯಾಸಿ ಕಲಾವಿದರಾಗಿ ವಿವಿಧ ಯಕ್ಷಗಾನ ಮಂಡಳಿಗಳಲ್ಲಿ ಭಾಗವಹಿಸಿದ್ದ ಇವರು 2009ರಿಂದ ಮತ್ತೆ ಕಟೀಲು ಮೇಳವನ್ನು ಸೇರಿದವರು ಪ್ರಸಕ್ತ ವರ್ಷ 2ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಅಭಿಮನ್ಯು, ಬಭ್ರುವಾಹನ, ರಾಮ, ಕೃಷ್ಣ, ವಿಷ್ಣು, ಸುದರ್ಶನ, ಚಂಡ–ಮುಂಡರು, ದುಶ್ಯಾಸನ, ಹಿರಣ್ಯಾಕ್ಷ, ಇಂದ್ರಜಿತು, ರಕ್ತಬೀಜ, ದಮಯಂತಿ, ಭ್ರಮರ ಕುಂತಳೆ, ಚಂದ್ರಮತಿ, ಗುಣಸುಂದರಿ, ಸುಭದ್ರೆ, ಪ್ರಮೀಳೆ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ನೆಲ್ಯಾಡಿ ಶಾಲೆ, ಕೊಕ್ಕಡ ಶಾಲೆ, ಮಾದೇವಿ ಶಾಲೆಗಳಲ್ಲಿ ಯಕ್ಷಗಾನ ತರಬೇತಿ ನೀಡಿರುವ ಇವರು ಅನೇಕ ಹವ್ಯಾಸಿ ಕಲಾವಿದರನ್ನು ಯಕ್ಷರಂಗಕ್ಕೆ ಪ್ರವೇಶ ಮಾಡಿಸಿದ್ದಾರೆ.

ಪುತ್ತೂರು ಅಭಿಮಾನ ಬಳಗ, ನೆಲ್ಯಾಡಿ ಅಭಿಮಾನಿ ಬಳಗದಿಂದ 2ಸಲ ಸನ್ಮಾನಗಳನ್ನು ಸ್ವೀಕರಿಸಿದ ಇವರು ಶ್ರೀಮತಿ ಸಾವಿತ್ರಿಯವರೊಂದಿಗೆ ಪಾಣಿಗ್ರಹಣ ಮಾಡಿಕೊಂಡು ಸಾಗರ್, ಸಂದೇಶ್ ಎಂಬ ಈರ್ವರು ಮಕ್ಕಳನ್ನು ಪಡೆದು ಕೃತಾರ್ಥರೆನಿಸಿದ್ದಾರೆ.



## ಪುರುಷೋತ್ತಮ ಬೆಳ್ಳಾರೆ ಕೆ.

*ಪೆರುವಾಜೆ ಮನೆ, ಪೆರುವಾಜೆ ಅಂಚೆ, ಗ್ರಾಮ*
*ಸುಳ್ಯ ತಾಲೂಕು- 574212*
*ದೂರವಾಣಿ: 9448008871*
*ಮನೆ: 08257- 318420*

ಯಕ್ಷಗಾನ ಕಲೆಯ ಮೇಲಿನ ವ್ಯಾಮೋಹದಿಂದ ಕಲಿತು ಬೆಳೆದು ನಿಂತಿರುವ ಕಟೀಲು ಮೇಳದ ಉದಯೋನ್ಮುಖ ಕಲಾವಿದ ಶ್ರೀಯುತ ಕೆ. ಪುರುಷೋತ್ತಮ ಬೆಳ್ಳಾರೆ.


ಪೆರುವಾಜೆಯಲ್ಲಿ ಶ್ರೀ ಜತ್ತಪ್ಪ ನಾಯ್ಕ ಮತ್ತು ಶ್ರೀಮತಿ ಜಯಂತಿ ದಂಪತಿಯ ಸುಪುತ್ರರಾಗಿರುವ ಇವರು 9ನೇ ತರಗತಿಯ ತನಕ ವಿಧ್ಯಾಭ್ಯಾಸವನ್ನು ಪಡೆದಿರುವರು.

15ನೇ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಪ್ರವೇಶಿಸಿದ ಪುರುಷೋತ್ತಮ ಬೆಳ್ಳಾರೆಯವರು ವರ್ಕಾಡಿ ತಾರಾನಾಥ ಬಲ್ಯಾಯರಿಂದ ನಾಟ್ಯದ ತರಬೇತಿಯನ್ನು ಪಡೆದಿರುವರು.

ರಮೇಶ್ ರೈ ಬೆಳ್ಳಾರೆಯವರ ಮುಖೇನ ಮೇಳಕ್ಕೆ ಸೇರ್ಪಡೆಗೊಂಡ ಇವರು ಆರಂಭಕ್ಕೆ ಕದ್ರಿ ಮೇಳದಲ್ಲಿ ಒಂದು ವರ್ಷದ ತಿರುಗಾಟವನ್ನು ಪೂರೈಸಿ ಕಟೀಲು ಮೇಳವನ್ನು ಸೇರಿದವರು 9 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

ಪುಂಡುವೇಷ, ರಾಜವೇಷ, ಹಾಸ್ಯ, ಬಣ್ಣ, ಸ್ತ್ರೀ ವೇಷಗಳನ್ನೂ ನಿರ್ವಹಿಸುವ ಇವರು ವರುಣ, ಮಾರುತ, ಪುಷ್ಕರ, ದಮನ, ಅನುಸಾಲ್ವ, ನಿಶುಂಭ, ಭೀಮ, ಕರಾಳ ವಕ್ರ, ಮುಖ್ಯ ಸ್ತ್ರೀ ವೇಷ, ದೇವದೂತ, ಹಾಸ್ಯ ಸ್ತ್ರೀ ಪಾತ್ರಗಳನ್ನು ಮಾಡಿದ್ದಾರೆ.

ಮಳೆಗಾಲದಲ್ಲಿ ಉಪವೃತ್ತಿಯಾಗಿ ಕೃಷಿಯ ಉದ್ಯೋಗವನ್ನು ನಡೆಸುವ ಇವರು ಕಲಾ ಸಾಧಕನಾಗಿ ಬೆಳೆಯ ಬೇಕೆಂಬ ಆಶಯವನ್ನು ಹೊಂದಿದ್ದಾರೆ.



## ಪ್ರಸಾದ್ ಶೆಟ್ಟಿ

*ಮಳಲಿ ಮೇಗಿನ ಮನೆ, ಕೈಂಕುಳಿಪಾಡಿ ಗ್ರಾಮ*
*ಮಳಲಿ ಅಂಚೆ,*
*ಮೊ.9844636375*

ಯಕ್ಷಗಾನದ ಪರಿಸರದಲ್ಲಿ ಬೆಳೆದ ಪ್ರಸಾದ್ ಶೆಟ್ಟಿ ಇವರು ಪ್ರಸಕ್ತ ಸಾಲಿನಲ್ಲಿ ತಲಕಳ ಮೇಳದ ಭಾಗವತರಾಗಿ ಹಿರಿಮೆಯನ್ನು ಗಳಿಸಿದರಾಗಿದ್ದಾರೆ.

ಮಳಲಿಯಲ್ಲಿ ಕೃಷ್ಣ ಶೆಟ್ಟಿ ಹಾಗೂ ಕಲ್ಯಾಣಿ ದಂಪತಿಗೆ ಪುತ್ರನಾಗಿ ಜನಿಸಿದ ಇವರು 7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದರು.

14ನೇ ವಯಸ್ಸಿನಲ್ಲಿ ಮಂಬಾಡಿ ಸುಬ್ರಹ್ಮಣ್ಯ ಭಟ್ ಇವರಿಂದ ಭಾಗವತಿಗೆ ಹಾಗೂ ಮೋನಪ್ಪ ಕುಲಾಲ್ ಅವರಿಂದ ನಾಟ್ಯವನ್ನು ಅಭ್ಯಾಸ ಮಾಡಿದರು.

ಹವ್ಯಾಸಿ ಕಲಾವಿದರುಗಳಾಗಿರುವ ಗಣಪ ನಾಯ್ಕ, ಕಾಡ್ಯ ಶೆಟ್ಟಿ, ಸಂಕಪ್ಪ ರೈ, ಕುಂಞಣ್ಣ ಶೆಟ್ಟಿ ಇವರುಗಳು ಪ್ರಸಾದ್ ಶೆಟ್ಟಿಯವರ ಸಂಬಂಧಿಕರಾಗಿದ್ದು ಪ್ರಸಾದರ ಕಲಾ ಪ್ರತಿಭೆಗೆ ಪ್ರೋತ್ಸಾಹವನ್ನು ನೀಡಿದ್ದಾರೆ.

ಕಟೀಲು ಮೇಳದಲ್ಲಿ 4 ವರ್ಷ, ರಾಮಾಂಜನೇಯ ಯಕ್ಷಗಾನ ಮಂಡಳಿಯಲ್ಲಿ 15 ವರ್ಷ ಹಾಗೂ ತಳಕಲ ಮೇಳದಲ್ಲಿ 3 ವರ್ಷ ದುಡಿದ ಅನುಭವಿ ಕಲಾವಿದರಾದ ಇವರು ವೇಷಧಾರಿ ಯಾಗಿಯೂ ತಮ್ಮ ಪ್ರತಿಭೆಯನ್ನು ಮೆರೆಸಿದ್ದಾರೆ.

ರಾಜ, ಬಣ್ಣದ ವೇಷಗಳ ಜೊತೆಗೆ ಪೋಷಕ ಪಾತ್ರಗಳನ್ನು ಕೂಡಾ ನಿರ್ವಹಿಸಿರುತ್ತಾರೆ. ಭವಿಷ್ಯದಲ್ಲಿ ಭಾಗವತಿಕೆಯ ಮುಖೇನ ಸತ್ಕೀರ್ತಿಯನ್ನು ಗಳಿಸಬೇಕೆನ್ನುವ ಆಶಯವನ್ನು ಹೊಂದಿದವರಾಗಿದ್ದಾರೆ.

ಶ್ರೀಮತಿ ಉಷಾ ಎಂಬವರನ್ನು ವರಿಸಿ ಜಯಶ್ರೀ, ಅರ್ಪಿತ ಹಾಗೂ ಲಕ್ಷ್ಮೀ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಪ್ರಕಾಶ್ ಕೆ. ವಿಟ್ಲ


*ಚೆಂಡೆಗುಳಿ ಮನೆ, ಒಕ್ಕೆತ್ತೂರು*
*ವಿಟ್ಲ ಅಂಚೆ, ಬಂಟ್ವಾಳ ತಾಲೂಕು*
*ಮೊ ; 97414475913*

ಯಕ್ಷಗಾನದ ಪ್ರಮುಖ ಅಂಗವಾದ ಹಿಮ್ಮೇಳದಲ್ಲಿ ಮದ್ದಳೆಗಾರರಾಗಿದ್ದು, ಚಂಡೆ–ಮದ್ದಳೆಗಳ ನುಡಿತ ಬಡಿತಗಳಲ್ಲಿ ಪ್ರತಿಭೆಯನ್ನು ತೋರಿರುವ ಶ್ರೀ ಪ್ರಕಾಶ್. ಕೆ. ವಿಟ್ಲ ಇವರು ಸುಂಕದ ಕಟ್ಟೆ ಮೇಳದಲ್ಲಿ ಕಲಾಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ದ.ಕ. ಜಿಲ್ಲೆಯ ವಿಟ್ಲ ಗ್ರಾಮದ ಚೆಂಡುಗುಳಿ ಮನೆಯಲ್ಲಿ ಶ್ರೀ ಗೋಪಾಲ ಕೆ ಮತ್ತು ಶ್ರೀಮತಿ ಸರೋಜಿನಿ ದಂಪತಿಯ ಸುಪುತ್ರರಾಗಿ ದಿನಾಂಕ 23.10.1979ರಂದು ಇವರು ಜನಿಸಿದರು.

10ನೇ ತರಗತಿಯವರೆಗೆ ವಿದ್ಯಾಭಾಸವನ್ನು ಮಾಡಿದ ಇವರು ಯಕ್ಕಗಾನದ ಪ್ರಭಾವದಿಂದ ಅಸಕ್ತಿಯನ್ನು ಬೆಳೆಸಿಕೊಂಡು ಗುರುಗಳಾದ ಮೋಹನ ಬೈಪಾಡಿತ್ತಾಯರಿಂದ ಚಂಡೆ ಮದ್ದಲೆ ಅಭ್ಯಾಸವನ್ನು ಮಾಡಿದರು.

ಸುಂಕದ ಕಟ್ಟೆ ಮೇಳದಲ್ಲಿ ಸತತ 14 ವರ್ಷಗಳಿಂದ ಕಲಾಸೇವೆಯನ್ನು ನಡೆಸಿಕೊಂಡು ಬಂದಿರುವ ಇವರು ಅನೇಕ ಕಲಾಸಕ್ತರಿಗೆ ಚಂಡೆ ಮದ್ದಳೆಯ ಅಭ್ಯಾಸವನ್ನು ಮಾಡಿಸಿದ್ದಾರೆ.



## ಪ್ರಫುಲ್ಲ ಚಂದ್ರ ಭಟ್, ನೆಲ್ಯಾಡಿ

*ಜಿ.ಕೆ. ಫ್ರೆಂಡರ್ಸ್ ವಾಣಿಶ್ರೀ ಕಾಂಪ್ಲೆಕ್ಸ್*
*ನೆಲ್ಯಾಡಿ ಅಂಚೆ, ಪುತ್ತೂರು ತಾಲೂಕು*
*(ಮೊಬೈಲ್) 9481917485*

ಭಾಗವತಿಕೆಯ ಮುಖೇನ ಪ್ರವರ್ಧಮಾನರಾಗಿ ಬೆಳೆಯುತ್ತಿರುವ ಶ್ರೀ ಪ್ರಫುಲ್ಲ ಚಂದ್ರ ಭಟ್ಟರು ಪ್ರಸ್ತುತ ಶ್ರೀ ಹೊಸನಗರ ಮೇಳದಲ್ಲಿ ತಿರುಗಾಟವನ್ನು ಮಾಡುತ್ತಾ ಇದ್ದಾರೆ.

ಗಣಪತಿ ಭಟ್ ಮತ್ತು ಸ್ವರ್ಣಲತಾ ದಂಪತಿಯ ಸುಪುತ್ರರಾಗಿ ದಿನಾಂಕ 26-10-81ರಂದು ಪುತ್ತೂರಲ್ಲಿ ಹುಟ್ಟಿದರು. 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಮಾಡಿರುವ ಇವರು ದಿ। ಕಾಳಿಂಗ ನಾವಡ ಮತ್ತು ದಿನೇಶ್ ಅಮ್ಮಣ್ಣಾಯರ ಭಾಗವತಿಕೆಯಿಂದ ಪ್ರಭಾವಿತರಾಗಿದ್ದು ಮಾಂಬಾಡಿ ಸುಬ್ರಹ್ಮಣ್ಯ ಭಟ್ ಮತ್ತು ಪದ್ಯಾಣ ಗಣಪತಿ ಭಟ್ಟರಲ್ಲಿ ಭಾಗವತಿಕೆಯ ಬಗ್ಗೆ ಅಧ್ಯಯನವನ್ನು ಮಾಡಿರುವರು.

ಹವ್ಯಾಸಿ ಕಲಾವಿದರಾಗಿ 4 ವರ್ಷಗಳ ಅನುಭವವನ್ನು ಸಂಪಾದಿಸಿರುವ ಇವರು. ಕಟೀಲು ಮೇಳ - 3 ವರ್ಷ, ಮಂದಾರ್ತಿ ಮೇಳ - 1 ವರ್ಷ, ಬಪ್ಪನಾಡು ಮೇಳ - 1 ವರ್ಷ, ಎಡನೀರು ಮೇಳ - 1 ವರ್ಷ, ಹೊಸನಗರ ಮೇಳ - 3 ವರ್ಷ ಹೀಗೆ ತಿರುಗಾಟವನ್ನು ಮಾಡಿರುವರು.

ಎಳವೆಯಲ್ಲಿಯೇ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿ ವರುಣ, ಮಾರುತ, ರೇಣುಕೆ ಮೊದಲಾದ ಪುಂಡು ಹಾಗೂ ಸ್ತ್ರೀ ವೇಷಗಳನ್ನು ಮಾಡಿರುವರು.

ಅರ್ಥಧಾರಿಯಾಗಿರುವ ಅಜ್ಜ ಶಂಕರನಾರಾಯಣ ಭಟ್ ಬದಿಯಡ್ಕ ಅವರ ಪ್ರೋತ್ಸಾಹದಿಂದ ಬೆಳೆದಿರುವ ಪ್ರಫುಲ್ಲ ಚಂದ್ರರು ಶ್ರೀಮತಿ ಪ್ರತಿಭಾ ಎಂಬವರನ್ನು ವರಿಸಿದ್ದಾರೆ.



## ಪ್ರಶಾಂತ್ ಡಿ. ಶೆಟ್ಟಿ, ನೆಲ್ಯಾಡಿ

*ದೋಂತಿಲ ಮನೆ, ಕೌಕ್ರಾಡಿ ಗ್ರಾಮ,*
*ನೆಲ್ಯಾಡಿ ಅಂಚೆ, ಪುತ್ತೂರು ತಾಲೂಕು*
*ಫೋನ್ ಮನೆ: 9901194254*
*ಮೊಬೈಲ್: 9964093306*

ಸ್ತ್ರೀ ವೇಷ ಹಾಗೂ ಪುಂಡು ವೇಷಗಳ ಮೂಲಕ ತನ್ನದೇ ಆದ ಶೈಲಿಯನ್ನು ರಂಗದಲ್ಲಿ ಮೆರೆಸುತ್ತಾ ಜನ ಮನ್ನಣೆಯನ್ನು ಪಡೆದಿರುವ ಶ್ರೀ ಪ್ರಶಾಂತ್ ಶೆಟ್ಟಿ ನೆಲ್ಯಾಡಿಯವರು ಕಟೀಲು ಮೇಳದ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪುತ್ತೂರು ತಾಲೂಕಿನ ಕೌಕ್ರಾಡಿ ಗ್ರಾಮದ ನೆಲ್ಯಾಡಿ ಎಂಬ ಪರಿಸರದಲ್ಲಿ ದಿನಾಂಕ 28-02-1986ರಲ್ಲಿ ಶ್ರೀ ಆನಂದ ಶೆಟ್ಟಿ ಹಾಗೂ ಶ್ರೀಮತಿ ಯಮುನಾ ಶೆಡ್ತಿಯವರ ಸುಪುತ್ರನಾಗಿ ಜನಿಸಿದ ಪ್ರಶಾಂತ ಶೆಟ್ಟಿಯವರು ಹತ್ತನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ತನ್ನ ಭಾವನಾದ ಮಹಾಬಲ ಶೆಟ್ಟಿಯವರ ಅಪೇಕ್ಷೆಯ ಮೇರೆಗೆ ಶ್ರೀ ಧರ್ಮಸ್ಥಳದ ಲಲಿತಕಲಾ ಕೇಂದ್ರಕ್ಕೆ ಸೇರಿದ ಶ್ರೀಯುತರು ಅಂದಿನ ಕೇಂದ್ರದ ಗುರುಗಳಾದ ದಿವಾಣ ಶಿವಶಂಕರ ಭಟ್ಟರಿಂದ ಹೆಜ್ಜೆಗಾರಿಕೆಯನ್ನು ಕಲಿತು ಮೇಳ ಸೇರಿದರು.

ಧರ್ಮಸ್ಥಳ ಮೇಳದಲ್ಲಿ ಒಂದು ವರ್ಷದ ತಿರುಗಾಟವನ್ನು ಮಾಡಿದ ಇವರು ಅನಂತರ ಕಟೀಲು ಮೇಳವನ್ನು ಸೇರಿ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ದೇವಿ ಮಾತ್ಮೆಯ ಮಾಲಿನಿ ಹಾಗೂ ಶ್ರೀ ದೇವಿ, ಧಕ್ಷಾಧ್ವರದ ದಾಕ್ಷಾಯಿಣಿ, ಸುಧನ್ವ ಮೋಕ್ಷದ ಪ್ರಭಾವತಿ, ರತಿ ಕಲ್ಯಾಣದ ದ್ರೌಪದಿ, ಪಂಚವಟಿಯ ಸೀತೆ ಹಾಗೂ ಮಾಯಾ ಶೂರ್ಪನಖಿ, ಭಸ್ಮಾಸುರ ಪ್ರಸಂಗದ ಮೋಹಿನಿ ಮೊದಲಾದ ಪ್ರಮುಖ ಸ್ತ್ರೀ ಪಾತ್ರಗಳಲ್ಲದೆ ಪುಂಡು ವೇಷಗಳಾದ ರುಕ್ಮಾಂಗದ, ವರುಣ ಮಾರುತ, ಹಾಗೂ ಕಚ್ಚೆ ಸ್ತ್ರೀ ವೇಷಗಳಾದ ಮದನಾಕ್ಷಿ. ಭ್ರಮರ ಕುಂತಳೆ, ಪ್ರಮೀಳೆ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ತನ್ನದೇ ಆದ ಶೈಲಿಯಲ್ಲಿ ಪಾತ್ರಕ್ಕೆ ಜೀವ ತುಂಬುತ್ತಾ ರಂಗದಲ್ಲಿ ಮೆರೆಯುವ ಯುವ ಕಲಾವಿದ ಇವರು ಅಜ್ಜಂದಿರಾದ ಕಾಂಚನ ಸಂಜೀವ ರೈ ಹಾಗೂ ಶ್ರೀಧರ ಭಂಡಾರಿಯವರ ಸಾಧನೆಯ ಆದರ್ಶದಂತೆ ಸಾಧಕರಾಗಿ ಬೆಳೆಯ ಬೇಕೆಂಬ ಆಶಯವನ್ನು ಇರಿಸಿ ಕೊಂಡಿದ್ದಾರೆ.

ಇವರ ಜನಾಕರ್ಷಣೆಯ ಕಲಾ ಪ್ರತಿಭೆಗೆ ಪ್ರತಿಫಲವಾಗಿ ಬೆಂಗಳೂರಿನಲ್ಲಿ ಯುವಜನ ಪ್ರತಿಭೆಯ ಗೌರವ ಸಂದಿವೆ.



## ಪ್ರಶಾಂತ ಕುಮಾರ್ ಕೋಳ್ಯೂರು

*ಕೋಳ್ಯೂರು ಅಂಚೆ, ವಯಾ ಮಂಜೇಶ್ವರ,*
*ಕಾಸರಗೋಡು*
*ಮೊಬೈಲ್: 9946613537.*

ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿ ಸ್ತ್ರೀ ಹಾಗೂ ಪುಂಡು ವೇಷಗಳನ್ನು ನಿರ್ವಹಿಸುತ್ತಿರುವ ಶ್ರೀ ಪ್ರಶಾಂತ ಕೋಳ್ಯೂರು ಇವರು ಪ್ರಸ್ತುತ ಮೇಳ ತಿರುಗಾಟವನ್ನು ನಿಲ್ಲಿಸಿ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.


ಶ್ರೀ ಆನಂದ ಸಪಲ್ಯ ಹಾಗೂ ಶ್ರೀಮತಿ ಲಲಿತ ದಂಪತಿಯ ಸುಪುತ್ರರಾಗಿ 16-11-1974 ರಂದು ಜನಿಸಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

15 ನೇ ವಯಸ್ಸಿನಿಂದ ಯಕ್ಷಗಾನದ ರಂಗವನ್ನು ಪ್ರವೇಶಿಸಿದ ಇವರು ಶ್ರೀ ದಿವಾಣ ಶಿವಶಂಕರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿರುವರು.

ಮೊದಲಾಗಿ ಮಲ್ಲ ಮೇಳದಲ್ಲಿ 5 ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ಅನಂತರ ಕಟೀಲು ಮೇಳದಲ್ಲಿ 5 ವರ್ಷಗಳ ತಿರುಗಾಟವನ್ನು ಮಾಡಿ ಅನಿವಾರ್ಯ ಕಾರಣದಿಂದ ಮೇಳದ ತಿರುಗಾಟವನ್ನು ನಿಲ್ಲಿಸಿ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ಆದಿಮಾಯೆ, ಮಾಲಿನಿ, ದ್ರೌಪದಿ, ಕಮಲಗಂಧಿನಿ, ಗಣಪತಿ, ಪ್ರದ್ಯುಮ್ನ, ಧೇನುಕಾಸುರ, ಶಂಖಾಸುರ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.

ಕೋಳ್ಯೂರಿನ ಶಂಕರ ಪ್ರೆಂಡ್ಸ್ ಕ್ಲಬ್, ಇದರ ನೇತೃತ್ವದಲ್ಲಿ ನಾಟ್ಯದ ತರಬೇತಿಯನ್ನು ನಡೆಸಿರುವ ಇವರು ಶ್ರೀಮತಿ ಶೋಭಾ ಎಂಬವರನ್ನು ವರಿಸಿ ಮೇಘನಾ ಹಾಗೂ ಗೌತಮ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಪ್ರಶಾಂತ ವಗೆನಾಡು

*"ವಗೆನಾಡು ಮನೆ" ಕೊಡ್ಸಲ್ತಡ್ಕ ಅಂಚೆ,*
*ಕರೋಪಾಡಿ ಗ್ರಾಮ, ಬಂಟ್ವಾಳ ತಾಲೂಕು.*
*ಮೊ ; 9343086811*

ಚೆಂಡೆ ಮದ್ದಳೆಯ ನುಡಿತ ಬಡಿತಗಳಲ್ಲಿ ಪ್ರತಿಭೆಯನ್ನು ತೋರುತ್ತಾ ಬೆಳೆಯುತ್ತಿರುವ ಶ್ರೀ ಪ್ರಶಾಂತ್ ಶೆಟ್ಟಿ ವಗೆನಾಡು ಇವರು ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ದೇರಣ್ಣ ಶೆಟ್ಟಿ ಮತ್ತು ಚಂದ್ರಾವತಿ ದಂಪತಿಯ ಸುಪುತ್ರರಾಗಿ 1981ನೇ ವರ್ಷ ಕೊಡಂಗೆ ಸಾಲೆತ್ತೂರು ಎಂಬಲ್ಲಿ ಜನಿಸಿದರು.

ವಗೆನಾಡು ಶ್ರೀ ಸುಬ್ರಾಯ ದೇವಸ್ಥಾನವು ಸೇರಿದಂತೆ ಆಪರಿಸರವು ಸುತ್ತಮುತ್ತ ಆಟ-ಕೂಟಗಳಿಂದ ಪ್ರಭಾವಿತರಾಗಿದ್ದುದರಿಂದ ಇವರು ಯಕ್ಷಗಾನದತ್ತ ಆಕರ್ಷಿತರಾಗಿ ಬೆಳೆಯುವುದಕ್ಕೆ ಅವಕಾಶ ಒದಗಿ ಬಂತು.

10ನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದಿರುವ ಪ್ರಶಾಂತರು ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಿಂದ ಚೆಂಡೆ ಮತ್ತು ಮದ್ದಳೆಯ ನುಡಿತ ಬಡಿತಗಳ ಅಭ್ಯಾಸವನ್ನು ಮಾಡಿ ಹಿಡಿತವನ್ನು ಸಾಧಿಸಿ ಮೇಳ ತಿರುಗಾಟವನ್ನು ಆರಂಭಿಸಿದರು.

ಇವರ ಮಾವ ಪೆರುವಾಯಿ ನಾರಾಯಣ ಶೆಟ್ಟಿ ಹಾಗೂ ಭಾವ ಜಯ ಪ್ರಕಾಶ್ ಪೆರ್ಮುದೆ ಇವರ ಉತ್ತೇಜನವು ಪೂರಕವಾಗಿದ್ದು, ಭಾಗವತರಾದ ಬೊಟ್ಟಿಗೆರೆ ಪುರುಷೋತ್ತಮ ಪೂಂಜರ ಸಮಕ್ಷದಲ್ಲಿ ರಂಗದ ಅನುಭವವನ್ನು ಸಂಪಾದಿಸುತ್ತಾ ಬೆಳೆದರು.

ಕಟೀಲು ಮೇಳವೊಂದರಲ್ಲೇ ಹತ್ತು ವರುಷಗಳ ತಿರುಗಾಟವನ್ನು ಪೂರೈಸಿರುವ ಇವರು ತಾಳಮದ್ದಳೆಯ ಕಾರ್ಯಕ್ರಮಗಳಲ್ಲೂ ಹೇಳಿಕೆಯ ಮೇರೆಗೆ ಭಾಗವಹಿಸುತ್ತಾರೆ.

ದೇಶ ಮತ್ತು ವಿದೇಶಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಹೆಗ್ಗಳಿಕೆ ಇವರದ್ದಾಗಿದೆ. ಒಡಿಯೂರು, ಮುಂಬಯಿ ಮತ್ತು ದುಬಾಯಿಯಲ್ಲಿ ಕಲಾ ಸಾಧನೆಯ ನಿಮಿತ್ತ ಗೌರವ ಪುರಸ್ಕಾರಕ್ಕೆ ಒಳಗಾಗಿದ್ದಾರೆ.



## ಬಾಬುಗೌಡ ಚಾರ್ಮಾಡಿ

*ಅಲ್ಲದ ಕಾಡು ಮನೆ, ಚಾರ್ಮಾಡಿ ಅಂಚೆ, ಗ್ರಾಮ*
*ಬೆಳ್ತಂಗಡಿ ತಾಲೂಕು.*
*ಮೊ : 9449254856*

ಯಕ್ಷಗಾನ ರಂಗದಲ್ಲಿ ಉತ್ತಮ ಪ್ರತಿಭೆಯುಳ್ಳ ವ್ಯಕ್ತಿ ಶ್ರೀ ಬಾಬುಗೌಡ. ಇವರು ಕಟೀಲು ಮೇಳದ ಕಲಾವಿದರಾಗಿ ಕಲಾಸೇವೆಯುನ್ನು ನಡೆಸುತ್ತಾ ಬರುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಾಂಗಡಿ ತಲೂಕಿನ ಅಲ್ಲದ ಕಾಡು ಮನೆಯಲ್ಲಿ ಡೊಂಬ ಗೌಡ ಮತ್ತು ಹೊನ್ನಮ್ಮ ದಂಪತಿಯ ಸುಪುತ್ರನಾಗಿ 1964ರಲ್ಲಿ ಜನಿಸಿದರು.

5ನೇ ತರಗತಿಯುವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ವೈಯಕ್ತಿಕ ಆಸಕ್ತಿಯಿಂದ ಧರ್ಮಸ್ಥಳದ ಲಲಿತಾ ಕಲಾ ಅಧ್ಯಯನ ಕೇಂದ್ರವನ್ನು ಸೇರಿದರು. ಅಲ್ಲಿ ಕೆ. ಗೋವಿಂದ ಭಟ್ ಹಾಗೂ ಕರ್ಗಲ್ಲು ವಿಶ್ವೇಶ್ವರ ಭಟ್ ಅವರಿಂದ ನಾಟ್ಯಾಭ್ಯಾಸವನ್ನು ಪೂರೈಸಿದರು.

ಸುಂಕದ ಕಟ್ಟೆ ಮೇಳದಲ್ಲಿ 14 ವರ್ಷ ಹಾಗೂ ಕಟೀಲು ಮೇಳದಲ್ಲಿ 3 ವರ್ಷಗಳ ತಿರುಗಾಟವನ್ನು ಈಗಾಗಲೇ ಪೂರೈಸಿದ್ದಾರೆ.

ಹಾಸ್ಯ, ಪೋಷಕ ಕಿರೀಟ, ಪುಂಡುವೇಷವನ್ನು ಮಾಡುವ ಇವರು ಉತ್ತಮ ಕಲಾವಿದಾಗಿದ್ದಾರೆ. ವಿಜಯ, ದೇವದೂತ, ದಾರುಕ, ಬಾಹುಕ, ದೇವೇಂದ್ರ, ಅರ್ಜುನ, ಧರ್ಮರಾಯ, ಚಂಡ–ಮುಂಡರು, ಸುಪಾಶ್ವಕ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ವಿಜಯುಲಕ್ಷ್ಮೀ ಎಂಬವರನ್ನು ವಿವಾಹವಾಗಿರುವ ಇವರು ಪ್ರಶಾಂತ ಹಾಗೂ ಪ್ರಕೃತಿ ಎಂಬ ಇಬ್ಬರು ಮಕ್ಕಳ್ನನು ಪಡೆದಿದ್ದಾರೆ.

ಮಳೆಗಾಲದಲ್ಲಿ ಉಪವೃತ್ತಿಯಾಗಿ ಕೃಷಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ.



## ಬಾಬುಗೌಡ ತೆಂಕ ಎಕ್ಕಾರು.

*ತೆಂಕ ಎಕ್ಕಾರು ಮನೆ. ಪೆರ್ಮುದೆ ಅಂಚೆ ಮತ್ತು ಗ್ರಾಮ,*
*ಮಂಗಳೂರು ತಾಲೂಕು,*
*ಮೊ ; 9481960367*

ಶ್ರೀ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಬಾಬು ಗೌಡ ತೆಂಕ ಎಕ್ಕಾರು ಅವರು ಹಾಸ್ಯ ವೇಷ ಹಾಗೂ ಪುಂಡು ವೇಷಗಳನ್ನು ನಿರ್ವಹಿಸ ಬಲ್ಲವರಾಗಿದ್ದಾರೆ.

ಶ್ರೀ ವಾಸು ಗೌಡ ಹಾಗೂ ಕುಸುಮ ದಂಪತಿಯ ಸುಪುತ್ರರಾಗಿ ತಾ. 1–3–1983 ರಂದು ತೆಂಕ ಎಕ್ಕಾರಿನಲ್ಲಿ ಜನಿಸಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಯಕ್ಷಗಾನದ ಆಕರ್ಷಣೆಗೆ ಒಳಗಾದ ಇವರು ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ದಿವಾಣ ಶಿವಶಂಕರ ಭಟ್ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿದರು.

17 ನೇ ವರುಷದಿಂದ ಮೇಳ ತಿರುಗಾಟವನ್ನು ಆರಂಭಿಸಿದ ಇವರು ಕಟೀಲು ಮೇಳದಲ್ಲೇ 10 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ದೇವದೂತ, ಹೊಗಳಿಕೆ ಹಾಸ್ಯ, ದಾರುಕ, ನಾರದ, ವರುಣ, ಮಾರುತ, ಚಿಕ್ಷುರ, ಬಿಡಲಾಸುರ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.



## ಬಾಲಕೃಷ್ಣ ಗೌಡ ಯಂ.

*ಮುದಿಯಾರು ಮನೆ, ದೇಲಂಪಾಡಿ ಗ್ರಾಮ*
*ಕಾಸರಗೋಡು– 671543*
*ದೂರವಾಣಿ: 04994–265574*
*ಮೊ: 09900641156.*

ಪುಂಡುವೇಷ ಹಾಗೂ ರಾಜವೇಷಗಳನ್ನು ಮಾಡಿ ಜನಮನ್ನಣೆಗೆ ಒಳಗಾಗಿರುವ ಯಂ. ಬಾಲಕೃಷ್ಣ ಗೌಡ ಇವರು ಮಲ್ಲ ಮೇಳದ ಕಲಾವಿದರಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ಬೆಳ್ಯಪ್ಪ ಗೌಡ ಹಾಗೂ ರಾಜಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ಬಾಲಕೃಷ್ಣ ಗೌಡರು 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಧರ್ಮಸ್ಥಳದ ಲಲಿತಾಕಲಾ ಕೇಂದ್ರದಲ್ಲಿ ಗೋವಿಂದ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿ ರಂಗವನ್ನು ಪ್ರವೇಶಿಸಿದ್ದಾರೆ.


ಸುಂಕದಕಟ್ಟೆ ಮೇಳ, ಸುಬ್ರಹ್ಮಣ್ಯ ಮೇಳ, ಉಪ್ಪಿನಂಗಡಿ ಮೇಳ, ಕಾಂತೇಶ್ವರ ಮೇಳ, ಮಧೂರು ಮೇಳ ಹಾಗೂ ಮಲ್ಲ ಮೇಳಗಳಲ್ಲಿ ತ್ರಿದಶಕಗಳಿಗೂ ಮಿಕ್ಕಿದ ಕಲಾಸೇವೆಯನ್ನು ನಡೆಸಿದ್ದಾರೆ.

ಬ್ರಹ್ಮ, ಈಶ್ವರ, ಚಂಡ–ಮುಂಡರು, ವಿದ್ಯುನ್ಮಾಲಿ, ದೂಮ್ರಾಕ್ಷ, ಕಮಲಗಂಧಿನಿ, ಮೀನಾಕ್ಷಿ, ಭೀಮ, ಅರ್ಜುನ, ದೇವೇಂದ್ರ, ವರಾಹ ಮುಂತಾದ ಪಾತ್ರಗಳನ್ನು ಮಾಡಿ ಅನುಭವಿ ಕಲಾವಿದರಾಗಿದ್ದಾರೆ.

48 ವರ್ಷಗಳ ಹಿರಿತನಕ್ಕೆ ಬಾಳಿರುವ ಇವರು ನೆಡ್ಲೆ ನರಸಿಂಹ ಭಟ್ಟರಿಂದ ರಂಗದ ಅನುಭವವನ್ನು ಸಂಪಾದಿಸಿದ್ದಾರೆ.

ಸ್ನೇಹಶೀಲ ಕಲಾವಿದರಾಗಿರುವ ಬಾಲಕೃಷ್ಣ ಗೌಡರು ಪಾತ್ರದ ನಿರ್ವಹಣೆಯಲ್ಲಿ ತನ್ನದೇ ಆದ ವರ್ಚಸ್ಸನ್ನು ಮೆರೆಸಿ ಕೀರ್ತಿಯನ್ನುಗಳಿಸಿದ್ದಾರೆ.

ಶ್ರೀಮತಿ ಭಾರತಿ ಎಂಬವರನ್ನು ವರಿಸಿ ಜೀವನ್, ಜ್ಯೋತಿ ಎಂಬ ಇಬ್ಬರು ಮಕ್ಕಳನ್ನು ಪಡೆದು ಕೃತಾರ್ಥರಾಗಿದ್ದಾರೆ.



## ಬಾಲಕೃಷ್ಣ ಗೌಡ ಮಿಜಾರು

*ಕಿಂಡೇಲು, ಯಕ್ಷಾನುಗ್ರಹ ಮನೆ*
*ಬಡಗ ಎಡಪದವು ಅಂಚೆ , ಮಂಗಳೂರು ತಾಲೂಕು*
*ಮೊ: 9901536255.*

ಶ್ರೀ ಬಾಲಕೃಷ್ಣ ಗೌಡ ಮಿಜಾರು, ಶ್ರೀ ಕಟೀಲು 3 ಮೇಳದಲ್ಲಿ 11 ವರ್ಷಗಳಿಂದ ರಾಜವೇಷ ಮತ್ತು ಬಣ್ಣದ ವೇಷಗಳನ್ನು ಮಾಡುತ್ತಾ ರಂಗ ಕಲಾವಿದರಾಗಿ ಬೆಳೆದಿದ್ದಾರೆ.

ಮಿಜಾರು ಗ್ರಾಮದ ವೆಂಕಪ್ಪ ಗೌಡ ಹಾಗೂ ಪೂವಮ್ಮರ ಸುಪುತ್ರರಾಗಿ ಜನಿಸಿದರು. ಆಮೇಲೆ 8ನೇ ತರಗತಿಯ ತನಕ ಕಲಿತಿರುತ್ತಾರೆ.

18ನೇ ವರ್ಷದಲ್ಲಿ ಯಕ್ಷಗಾನದ ಕಡೆಗೆ ಆಸಕ್ತಿಹೊಂದಿ, ಗುರುಗಳಾದ ಸಬ್ಬನಕೋಡಿ ಕೃಷ್ಣ ಭಟ್ ಮತ್ತು ಬಜ್ಪೆ ದೇರಣ್ಣರಿಂದ ನಾಟ್ಯಾಭ್ಯಾಸವನ್ನು ಮಾಡಿ ಪರಿಣತಿಯನ್ನು ಪಡೆದರು.

ರಾಜವೇಷ, ಬಣ್ಣದ ವೇಷಗಳ ಮೂಲಕ ಪ್ರೌಢಿಮೆಯನ್ನು ಸಾಧಿಸಿರುವ ಇವರು ದೇವೇಂದ್ರ, ಅರ್ಜುನ, ಶಿಶುಪಾಲ, ದಂತವಕ್ತ್ರ, ಮಧು, ಶುಂಭ, ಭೀಮ, ಕುಂಭಕರ್ಣ, ವರಾಹ, ಮತ್ಸ್ಯ ಇತ್ಯಾದಿ ಪಾತ್ರಗಳನ್ನು ನಿರ್ವಹಿಸುತ್ತಾರೆ.

31 ವರ್ಷದ ಬಾಲಕೃಷ್ಣ ಗೌಡರು ಹಿರಿಯ ಕಲಾವಿದರಿಂದ ಮಾರ್ಗದರ್ಶನವನ್ನು ಪಡೆಯುತ್ತಾ ಉತ್ತಮ ಕಲಾವಿದರಾಗಿ ಬೆಳೆಯುತ್ತಾ ಇದ್ದಾರೆ.



## ಬಾಲಕೃಷ್ಣ ಪಾಟಲಿ ಸೀತಂಗೋಳಿ

*ಸೀತಂಗೋಳಿ ಮನೆ, ಏಡನಾಡು ಗ್ರಾಮ, ಪುತ್ತಿಗೆ*
*ಕಾಸರಗೋಡು ತಾಲೂಕು*
*ಮೊ : 09809327808*

ಸ್ತ್ರೀವೇಷದ ಪಾತ್ರಗಳನ್ನು ಮಾಡಿಕೊಂಡು ಬರುತ್ತಿರುವ ಶ್ರೀ ಬಾಲಕೃಷ್ಣ ಪಾಟಳಿ ಸೀತಂಗೋಳಿಯುವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕಾಸರಗೋಡು ತಾಲೂಕಿನ ಬದಿಯಡ್ಕ ಎಂಬಲ್ಲಿ ಶ್ರೀ ತಿಮ್ಮಪ್ಪ ಪಾಟಾಳಿ ಹಾಗೂ ಶ್ರೀಮತಿ ಸಂಜೀವಿ ದಂಪತಿಯ ಸುಪುತ್ರರಾಗಿ ಜನಿಸಿದ ಇವರು 15ನೇ ವರ್ಷದಿಂದ ಯಕ್ಷಗಾನದ ಪಾತ್ರ ನಿರ್ವಹಣೆಯನ್ನು ಮಾಡಿಕೊಂಡು ಬಂದಿದ್ದಾರೆ.

ಕೀರ್ತಿ ಶೇಷ ಕಲಾವಿದರಾಗಿರುವ ಬಣ್ಣದ ಮಾಲಿಂಗರವರು ಇವರ ಅಜ್ಜರಾಗಿದ್ದು, ಅವರ ಆದರ್ಶವನ್ನು ಮೈಗೂಡಿಸಿ, ಸ್ವಂತಾಸಕ್ತಿಯೊಂದಿಗೆ ಯಕ್ಷಗಾನಕ್ಕೆ ಸೇರಿಕೊಂಡರು.

ದಿವಾನ ಶಿವಶಂಕರ ಭಟ್ ಅವರ ಮಾರ್ಗದರ್ಶನದಲ್ಲಿ ಯಕ್ಷಗಾನ ನಾಟ್ಯಾಭ್ಯಾಸವನ್ನು ಮಾಡಿ ಪ್ರವೀಣರಾದ ಇವರು ಮಾವನಾದ ಸುಬ್ರಾಯ ಪಾಟಾಳಿ ಅವರಿಂದ ಉತ್ತೇಜಿತರಾಗಿ ಮೇಳಕ್ಕೆ ಸೇರ್ಪಡೆಯಾಗಿದ್ದಾರೆ.

ರತಿ, ಮಾಲಿನಿ, ಶ್ರೀದೇವಿ, ಮೋಹಿನಿ, ಪ್ರಭಾವತಿ, ರಾಮ, ಕೃಷ್ಣ ಮೊದಲಾದ ಪಾತ್ರಗಳನ್ನು ಉತ್ತಮ ಅಭಿನಯದೊಂದಿಗೆ ನಿರ್ವಹಿಸುತ್ತಿದ್ದಾರೆ.



# ಬಾಲಕೃಷ್ಣ ಶೆಟ್ಟಿ ಮುಂಡಾಜೆ

*ಮಾಡವು ಅಂಚರೆ, ಕೈಯೂರು ಗ್ರಾಮ*
*ಪುತ್ತೂರು ತಾಲೂಕು*
*ಮೊ. 9008649445*

ಖ್ಯಾತ ಪುಂಡು ವೇಷಧಾರಿಯಾಗಿ ಮನ್ನಣೆಯನ್ನು ಪಡೆದಿರುವ ಶ್ರೀ ಬಾಲಕೃಷ್ಣ ಶೆಟ್ಟಿ ಮುಂಡಾಜೆಯವರು ಪ್ರಸ್ತುತ ಹೇಳಿಕೆಯ ಮೇರೆಗೆ ಕಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ತಾ. 22.11.1956ರಲ್ಲಿ ರಾಮಯ್ಯ ಶೆಟ್ಟಿ ಹಾಗೂ ತುಂಗಮ್ಮ ದಂಪತಿಗೆ ಮಗನಾಗಿ ಜನಿಸಿದ ಬಾಲಕೃಷ್ಣ ಶೆಟ್ಟರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಮುಂಡಾಜೆ ಪರಿಸರದಲ್ಲಿ ನಡೆಯುವ ಯಕ್ಷಗಾನ ಪ್ರದರ್ಶನಗಳನ್ನುನೋಡಿ ಪ್ರಭಾವಿತರಾಗಿ ತಾನು ಕೂಡ ಒಬ್ಬ ಕಲಾವಿದನಾಗ ಬೇಕೆಂದು ಬಯಸಿ ಧರ್ಮಸ್ಥಳ ಲಲಿತ ಕಲಾಕೇಂದ್ರಕ್ಕೆ ಸೇರಿದರು.

ಪಡ್ರೆ ಚಂದು ಅವರಿಂದ ನಾಟ್ಯವನ್ನು ಕಲಿತು, ಕುರಿಯ ವಿಠಲ ಶಾಸ್ತ್ರಿಯವರಿಂದ ರಂಗದ ಮಾರ್ಗದರ್ಶನವನ್ನು ಪಡೆದು ಹನ್ನೆರಡನೆ ವಯಸ್ಸಿನಲ್ಲೇ ಕರ್ನಾಟಕ ಮೇಳದ ಮುಖೇನ ತನ್ನ ತಿರುಗಾಟದ ಜೀವನವನ್ನು ಆರಂಭಿಸಿದರು .

1968ರಿಂದ 1988ರ ತನಕ ಕರ್ನಾಟಕ ಮೇಳವೊಂದರಲ್ಲಿದ್ದು ಒಬ್ಬ ಉತ್ತಮ ಪುಂಡು ವೇಷಧಾರಿಯಾಗಿ ಜನ ಮನ್ನಣೆ ಪಡೆದರು.

ಆಕಾಲ ಇದ್ದ ಹಿರಿಯ ಕಲಾವಿದರಾದ ನಾರಾಂಪಾಡಿ ಸುಬ್ಬಯ್ಯ ಶೆಟ್ಟಿ ಮೂಡಬಿದ್ರೆ ಮಾಧವ ಶೆಟ್ಟಿ, ಕಾವೂರುಕೇಶವ, ಕೃಶನ್ ಬಾಬು ಮುಂತಾದ ಹಿರಿಯ ಕಲಾವಿದರ ಒಡ ನಾಟದಿಂದ ತನ್ನ ಪ್ರೌಢಿಮೆಯನ್ನು ಹೆಚ್ಚಿಸಿ ಕೊಂಡರು.

ರೋಹಿತಾಶ್ವ, ಪ್ರಹ್ಲಾದ, ಕುಶಲವ, ಲಕ್ಷ್ಮಣ, ಬಭ್ರುವಾಹನ, ಅಭಿಮನ್ಯು, ಅರ್ಜುನ, ಪರುಶುರಾಮ, ಚೆನ್ನಯ, ದೇವುಪೂಂಜ, ಮುಂತಾದ ಪುರುಷ ಪಾತ್ರಗಳಲ್ಲದೆ, ದಮಯಂತಿ, ಊರ್ಮಿಳೆ, ಮಂಜರಿ ರುಕ್ಮಿಣಿ, ಮುಂತಾದ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ.

ಹಲವಾರುಬಾರಿ ವಿದೇಶಕ್ಕೆ ತೆರಳಿದ ಇವರು ದೋಹಾ, ಕತಾರ್, ಮುಂತಾದ ಕಡೆ ಹಲಾವಾರು ಪ್ರದರ್ಶನಗಳನ್ನು ನೀಡಿರುತ್ತಾರೆ.

ಇವರ ಕಲಾ ಸೇವೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ಸಂಮಾನಗಳನ್ನರ್ಪಿಸಿ ಗೌರವಿಸಿವೆ. ಬಂಟರ ಯಕ್ಷ ಕಲೋತ್ಸವ, ಶಾರದ ಸೇವಾ ಸಮಿತಿ ತುಂಬೆ, ಕೋಟಿ ಚೆನ್ನಯ್ಯ ಯುವಕ ಮಂಡಲ ಪಡುಮಲೆ, ಪೆರಾಜೆ ಶಾಲೆ, ಜ್ಞಾನೋದಯ ತುಳುವರೆ ಕಲಾಕೂಟ ಮುಂತಾದ ಸಂಘಟನೆಗಳನ್ನು ಉಲ್ಲೇಖಿಸ ಬಹುದಾಗಿದೆ.

ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿರುವ ಶ್ರೀ ಸದಾಶಿವ ಶೆಟ್ಟಿ ಮುಂಡಾಜೆಯವರು ಇವರ ಸಹೋದರರಾಗಿದ್ದು, ಪರಸ್ಪರ ಅನೂನವಾಗಿ ಕಲಾ ಸಾಧನೆಯನ್ನು ಮಾಡುತ್ತಾ ಬೆಳೆದಿದ್ದಾರೆ.

ಹೆಂಡತಿ ಪ್ರಮುಲ್ಲ ಬಿ.ಶೆಟ್ಟಿ, ಮಗಳು ದೀಪಾ ಬಿ. ಶೆಟ್ಟಿ (ಮನಃಶಾಸ್ತ್ರ ಪದವೀಧರೆ) ಯನ್ನು ಒಳಗೊಂಡ ಸಂತೃಪ್ತ ;ಕುಟುಂಬದಲ್ಲಿ ಜೀವಿಸುವ ಮುಂಡಾಜೆ ಬಾಲಕೃಷ್ಣ ಶೆಟ್ಟರ ಕಲಾ ಸೇವೆ ನಿಜಕ್ಕೂ ಸ್ತುತ್ಯರ್ಹ.



# ಭಾಸ್ಕರ ಕೋಳ್ಯೂರು

*ಶ್ರೀ ನಿಲಯ, ಕೋಳ್ಯೂರು ಅಂಚೆ,*
*ಶಂಕರ ನಾರಾಯಣ ದೇವಳದ ಬಳಿ*
*ವಯಾ ಮಂಜೇಶ್ವರ-671 323 ಕಾಸರಗೋಡು*
*ಮೊ :9961643836*

ಕಲಾವಿದರ ಮನೋಧರ್ಮವನ್ನರಿತು ನಾಟ್ಯದ ವೈವಿಧ್ಯಕ್ಕನುಗುಣವಾಗಿ ಚೆಂಡೆಯ ಝೇಂಕಾರವನ್ನೆಬ್ಬಿಸಿ ರಂಗಕ್ಕೆ ಕಳೆ ಭರಿಸುವ ಮದ್ದಳೆಗಾರರಾದ ಶ್ರೀ ಭಾಸ್ಕರ ಕೊಳ್ಯೂರು ಇವರು ಪ್ರಸ್ತುತ ಹೇಳಿಕೆಯ ಮೇರೆಗೆ ಕಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಯಕ್ಷಗಾನಕ್ಕೆ ಹಲವಾರು ಶ್ರೇಷ್ಠ ಕಲಾವಿದರನ್ನು ನೀಡಿದ ಊರು ಕೋಳ್ಯೂರು. ಇಂತಹ ಪರಿಸರದಲ್ಲಿ ಶ್ರೀ ಸುಂದರ ದೇವಾಡಿಗ, ಹಾಗೂ ಶ್ರೀಮತಿ ಸುಂದರಿ ದಂಪತಿಗೆ ಸುಪುತ್ರನಾಗಿ ತಾ.25-05-1966ರಲ್ಲಿ ಜನಿಸಿದ ಭಾಸ್ಕರರು ಹತ್ತನೆಯ ತರಗತಿಯ ತನಕ ವಿದ್ಯಭ್ಯಾಸವನ್ನು ಪಡೆದಿದ್ದಾರೆ.

ತಂದೆಯಾದ ಸುಂದರ ದೇವಾಡಿಗರು ದೇವಾಲಯದ ಪದಾತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಈ ಕಲೆಯು ಇವರಿಗೆ ಬಾಲ್ಯದಿಂದಲೇ ರಕ್ತಗತವಾಗಿ ಬಂದಿತ್ತು. ಚೆಂಡೆಯ ನುಡಿಸುವಿಕೆ, ಉತ್ತಮವಾದ ಉರುಳುವಿಕೆ. ಮತ್ತು ಗಟ್ಟಿ ಪೆಟ್ಟುಗಳ ನಾದಗಾಂಭೀರ್ಯವು ಇವರ ಪದಾತಿ ಕಾರ್ಯದಲ್ಲೇ ಅಡಕವಾಗಿತ್ತು.

ಹದಿನೆಂಟನೇ ವಯಸ್ಸಿನಲ್ಲಿ ತಂದೆಯವರ ಪ್ರೇರಣೆಯಂತೆ ಯಕ್ಷಗಾನ ಹಿಮ್ಮೇಳ ಗುರುವಾದ, ಮಾಂಬಾಡಿ ಸುಬ್ರಹ್ಮಣ್ಯ ಭಟ್ ಇವರಿಂದ ಚೆಂಡೆ ಮದ್ದಳೆಯ ನುಡಿತ-ಬಡಿತಗಳ ರಂಗ ಸಿದ್ಧಾಂತವನ್ನರಿತುಕೊಂಡರು.

ಇವರ ಪ್ರತಿಭೆಯನ್ನರಿತು ಕಲಾ ಸಾಧಕನಾಗಬೇಕೆಂದು ಮಾಂಬಾಡಿಯವರು ಕೂಡಾ ಪ್ರೋತ್ಸಾಹ ನೀಡಿದರು. ಹಾಗಾಗಿ ಯಕ್ಷಗಾನದ ತಿರುಗಾಟ ಜೀವನವನ್ನು ಆರಂಭಿಸಿದರು.

ಭಾಸ್ಕರರು ವೃತ್ತಿಪರ ಕಲಾವಿದರಾಗಿ ಮಧೂರು ಮೇಳ - 3 ವರ್ಷ. ಕೂಡ್ಲು ಮೇಳ-1 ವರ್ಷ, ಮಲ್ಲಮೇಳ-4 ವರ್ಷ, ಸುಂಕದಕಟ್ಟೆ ಮೇಳ-1 ವರ್ಷ, ಕರ್ನಾಟಕ ಮೇಳ-1 ವರ್ಷ, ಬಪ್ಪನಾಡು ಮೇಳ- 1 ವರ್ಷ, ಕಟೀಲು ಮೇಳ-1 ವರ್ಷ, ಹೀಗೆ ತಿರುಗಾಟದ ಹಿನ್ನಲೆಯನ್ನು ಹೊಂದಿದ್ದಾರೆ. ಇಷ್ಟಲ್ಲದೆ ಮಳೆಗಾಲದಲ್ಲಿ ತಿರುಗಾಟವನ್ನು ನಡೆಸುವ ಶ್ರೀ ನಿಡ್ಲೆ ಮಹಾಗಣಪತಿ ಯಕ್ಷಗಾನ ಮಂಡಳಿ ಕಲಾ ಸೇವೆಯನ್ನು ಮಾಡಿದ್ದಾರೆ.

ಚಿಕ್ಕಪ್ಪನಾದ ನಾರಾಯಣ ದೇವಡಿಗರು ಮೊದಲೇ ಹಿಮ್ಮೇಳಕಲಾವಿದನಾಗಿದ್ದುದರಿಂದ ಇವರ ಜೊತೆಗಿದ್ದು ಪ್ರೋತ್ಸಾಹವನ್ನು ನೀಡಿದ್ದಾರೆ.

ಶ್ರೀಯುತರು ಮಹಾರಾಷ್ಟ್ರ, ತಮಿಳುನಾಡು, ಆಂದ್ರಪ್ರದೇಶ, ಕೇರಳ, ಕರ್ನಾಟಕ ರಾಜ್ಯಗಳಲ್ಲಿ ಹಲವಾರು ಕಾರ್ಯಕ್ರಮಗಳಿಗೆ ಭಾಗವಹಿಸಿರುತ್ತಾರೆ. ಇಷ್ಟಲ್ಲದೆ ವಿಶೇಷ ಆಹ್ವಾನದ ಮೇರೆಗೆ ಅಮೇರಿಕಾದಲ್ಲಿ ನಡೆದ ಅಕ್ಕ ಸಮ್ಮೇಳನದಲ್ಲಿ ಭಾಗವಹಿಸಿದ ಹೆಗ್ಗಳಿಕೆ ಇವರದ್ದಾಗಿದೆ.

ಕೋಳ್ಯೂರು ದೇವಸ್ಥಾನದ ಆಶ್ರಯದಲ್ಲಿ ಮಹತ್ವದ ಯಕ್ಷಗಾನ ಕಾರ್ಯಕ್ರಮಗಳನ್ನು ಆಯೋಜಿಸಿ ಯಶೋವಂತರಾಗಿರುವ ಇವರು ತನ್ನದೇ ಆದ ಯಕ್ಷಗಾನ ಸಂಘಟನೆಯನ್ನು ಸ್ಥಾಪಿಸಿ ಹಲವೆಡೆಯಿಲ್ಲಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಈಗ ಮೇಳದಿಂದ ನಿವೃತ್ತಿಯನ್ನು ಪಡೆದು ಕೋಳ್ಯೂರಿನ ಶಂಕರ ನಾರಾಯಣ ದೇವಸ್ಥಾನದಲ್ಲಿ 'ಪದಾತಿ ವೃತ್ತಿಯನ್ನು ನಿರ್ವಹಿಸುತ್ತಾ ಬಿಡುವಿನ ವೇಳೆ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಪತ್ನಿ ದಿವ್ಯಾ ಬಿ. ಮಕ್ಕಳಾದ ದರ್ಶನ್, ಜಿತೇಶ್, ನೂತನಾ ಇವರೊಂದಿಗೆ ಸಂತೃಪ್ತ ಜೀವನವನ್ನು ಜೀವನವನ್ನು ನಡೆಸುತ್ತಾ ಇದ್ದಾರೆ.

ಇವರ ಕಲಾ ಸಾಧನೆಯನ್ನು ಕಂಡು ವರ್ಕಾಡಿ, ಕಾರ್ಕಳ, ಮಾಳ ಮುಂತಾದ ಕಡೆ ಸಂಮಾನಗಳು ಸಂದಿವೆ.



## ಭಾಸ್ಕರ ಸರಪಾಡಿ

*"ಬಾಚಕೆರೆ ಮನೆ", ಮಣಿನಾಲ್ಕೂರು ಗ್ರಾಮ,*
*ಮೂಲ್ಕಜೆ ಮಾಡ ಅಂಚೆ, ಬಂಟ್ವಾಳ ತಾಲೂಕು.*
*ಮೊ ; 7760788687*

ಮುಂಡುವೇಷ ಮತ್ತು ಸ್ತ್ರೀ ವೇಷದ ಪಾತ್ರಗಳನ್ನು ಮಾಡುತ್ತಾ ಪ್ರತಿಭಾವಂತರಾಗಿ ಬೆಳೆಯುತ್ತಿರುವ ಶ್ರೀ ಭಾಸ್ಕರ ಸರಪಾಡಿಯವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


ಶೀನ ಪೂಜಾರಿ ಮತ್ತು ಅಪ್ಪಿ ಪೂಜಾರ್ತಿ ದಂಪತಿಯ ಸುಪುತ್ರರಾಗಿ ಸರಪಾಡಿಯಲ್ಲಿ ಹುಟ್ಟಿದ ಭಾಸ್ಕರರಿಗೆ 25 ವರ್ಷಗಳು ಸಂದಿವೆ.

7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರಿಗೆ ಬಾಲ್ಯದಲ್ಲೇ ಯಕ್ಷಗಾನವನ್ನು ನೋಡುವ ಆಸಕ್ತಿ ಇತ್ತು. ಹಾಗಾಗಿ ಶಾಲಾ ಜೀವನವು ಮುಕ್ತಾಯವಾದೊಡನೆ ಯಕ್ಷಗಾನದ ಮೇಳವನ್ನು ಸೇರಿದರು.

ದಿವಾಣ ಶಿವಶಂಕರ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿದ ಇವರು 14ನೇ ವರ್ಷದಿಂದ ಮುಖಕ್ಕೆ ಬಣ್ಣ ಹಚ್ಚಲು ಆರಂಭಿಸಿದರು.

ಆರಂಭದಲ್ಲಿ ಸುಂಕದಕಟ್ಟೆ ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಮಾಡಿದ ಮೇಲೆ ಕಟೀಲು ಮೇಳವನ್ನು ಸೇರಿದವರು 10 ವರ್ಷಗಳ ತಿರುಗಾಟವನ್ನು ಈಗಾಗಲೇ ಪೂರೈಸಿದ್ದಾರೆ.

ವರುಣ, ಮನ್ಮಥ, ಮಾರುತ, ಷಣ್ಮುಖ, ಚಂಡ-ಮುಂಡರು, ಚಂಡ-ಪ್ರಚಂಡರು, ಬ್ರಹ್ಮ, ಭ್ರಮರ ಕುಂತಳೆ, ಆದಿಮಾಯೆ, ಪ್ರಮೀಳೆ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.



## ಬೇತಕುಂಞಿ ಕುಲಾಲ್

*ಕರೋಪಾಡಿ ಗ್ರಾಮ, ಬಂಟ್ವಾಳ ತಾಲೂಕು,*
*ದಕ್ಷಿಣ ಕನ್ನಡ ಜಿಲ್ಲೆ.*

ಸುಂಕದ ಕಟ್ಟೆ ಮೇಳದಲ್ಲಿ ಕಿರೀಟ ವೇಷಧಾರಿಯಾಗಿ ಗೌರವಕ್ಕೆ ಒಳಗಾಗಿದ್ದ ಬೇತ ಕುಂಞಿ ಕುಲಾಲ್ ಇವರೀಗ ಮೇಳದ ನಿವೃತ್ತ ಕಲಾವಿದರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕು ಕರೋಪಾಡಿ ಗ್ರಾಮದ ಬೇತ ಎಂಬಲ್ಲಿ ಶ್ರೀ ಮುತ್ತ ಮೂಲ್ಯ ಹಾಗೂ ಶ್ರೀಮತಿ ಅಚ್ಚು ದಂಪತಿಯ ಪುತ್ರರಾಗಿ 1943ರಲ್ಲಿ ಬೇತ ಕುಂಞಿ ಕುಲಾಲ್ ಜನಿಸಿದರು.

ಬಾಲ್ಯದಲ್ಲಿಯೇ ಯಕ್ಷಗಾನ ಕಲೆಯ ಮೇಲೆ ಆಸಕ್ತರಾಗಿ ಕುರಿಯ ವಿಠಲ ಶಾಸ್ತ್ರಿಯವರಿಂದ ಯಕ್ಷಗಾನದ ನಾಟ್ಯಾಭ್ಯಾಸವನ್ನರಿತುಕೊಂಡರು. ಆಮೇಲೆ ಕಟ್ಟು ವೇಷದ ಮುಖೇನ ರಂಗಪ್ರವೇಶ ಮಾಡಿ ಹಂತ ಹಂತವಾಗಿ ಬೆಳೆದು ಬಂದರು.

ಧರ್ಮಸ್ಥಳ ಮೇಳ– 5 ವರ್ಷ, ಮುಲ್ಕಿ ಮೇಳ– 3 ವರ್ಷ, ಸೌಕೂರು ಮೇಳ– 1 ವರ್ಷ ,ಕುತ್ಯಾಳ ಮೇಳ– 1 ವರ್ಷ, ಸುಬ್ರಹ್ಮಣ್ಯ ಮೇಳ– 1 ವರ್ಷ, ಸುಂಕದಟ್ಟೆ ಮೇಳ– 33 ವರ್ಷ. ಹೀಗೆ ಮೇಳಗಳಲ್ಲಿ ತಿರುಗಾಟವನ್ನು ನಡೆಸಿದ್ದಾರೆ.

ಮನ್ಮಥ, ಪ್ರಮೀಳೆ, ಚಿತ್ರಾಂಗದೆ, ಶ್ರೀದೇವಿ, ದೇವೇಂದ್ರ, ಅರ್ಜುನ, ಹನೂಮಂತ, ಕಾರ್ತವೀರ್ಯ ಮುಂತಾದ ವೇಷಗಳಿಂದ ಕಲಾ ಸಾಧನೆಯನ್ನು ಮಾಡಿ ಮೆರೆದಿರುವರು.

ಪೀಠಿಕೆ ವೇಷಗಳಲ್ಲಿ ಸಮರ್ಥ ವೇಷಧಾರಿ ಎನ್ನುವ ಕೀರ್ತಿಗೆ ಪಾತ್ರರಾಗಿರುವ ಬೇತ ಕುಂಞಿಯವರು ಪುರಾಣ ಮತ್ತು ಪ್ರಸಂಗಗಳ ಅಧ್ಯಯನದಿಂದ ಜ್ಞಾನವಂತರಾಗ ಪರಂಪರೆಯ ಶೈಲಿಯನ್ನು ಮೈಗೂಡಿಸಿಕೊಂಡಿದ್ದಾರೆ. ಹೀಗಾಗಿ ಆಧುನಿಕತೆಯ ಪ್ರಭಾವಕ್ಕೆ ಒಳಗಾಗದೆ ತನ್ನತನವನ್ನು ಉಳಿಸಿಕೊಂಡು ಬಂದಿದ್ದಾರೆ.

ತುಳು, ಕನ್ನಡ ಭಾಷೆಗಳ ಪ್ರದರ್ಶನಗಳಲ್ಲಿ ಸಮಾನಭಾಗಿಯಾಗಿದ್ದರೂ ಕೂಡ ಇವರ ನೈಜತೆಯ ನೃತ್ಯ ಮತ್ತು ಮಾತಿನ ಶೈಲಿಗೆ ಯಾವುದೇ ಕೊರತೆಯಾಗಿಲ್ಲ.

ಶ್ರೀಮತಿ ಗೀತಾ ಎಂಬವರನ್ನು ವರಿಸಿ, ಓರ್ವ ಸುಪುತ್ರ ಹಾಗೂ ಓರ್ವಳು ಸುಪುತ್ರಿಯನ್ನು ಪಡೆದು ಸಾರ್ಥಕರಾಗಿದ್ದಾರೆ.

ಕೇವಲ ಮೇಳ ತಿರುಗಾಟವೇ ಅಲ್ಲದೇ ಅನೇಕ ಹವ್ಯಾಸಿ ಸಂಘಟನೆಗಳಲ್ಲೂ ಭಾಗವಹಿಸಿರುವ ಇವರು ಮಾಡಿದ ಸಾಧನೆಗೆ ಪ್ರತಿಫಲವಾಗಿ ಥಲವೆಡೆ, ಸಂಮಾನ ಗೌರವಗಳಿಂದ ಪುರಸ್ಕರಿಸಲ್ಪಟ್ಟಿದ್ದಾರೆ. ಹವ್ಯಾಸಿ ಬಳಗ ಕದ್ರಿಯ ದಶಮಾನ ಸಂಮಾನ ಶತಕದ ಸಂಮಾನವು ಕೂಡಾ ಇವರಿಗೆ ಲಭಿಸಿದೆ.



# ಮಹಾಬಲ ಭಟ್ ಕೋಳ್ಯೂರು

*"ಕೊಮ್ಮೆ ಮನೆ", ಕೋಳ್ಯೂರು ಅಂಚೆ ಮತ್ತು ಗ್ರಾಮ,*
*ಮಂಜೇಶ್ವರ ವಯಾ,*
*ಮೊ : 9449568218.*

ಯಕ್ಷಗಾನದ ಪರಿಸರದಲ್ಲಿಯೇ ಬೆಳೆದ ಶ್ರೀ ಮಹಾಬಲ ಭಟ್ ಕೋಳ್ಯೂರು ಇವರು ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿ ಹಾಸ್ಯ ಕಲಾವಿದರಾಗಿ ಮೇಳ ತಿರುಗಾಟವನ್ನು ನಡೆಸಿದ್ದು, ಪ್ರಸ್ತುತ ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ಕೋಳ್ಯೂರಿನಲ್ಲಿ ಈಶ್ವರ ಭಟ್ ಹಾಗೂ ಪಾರ್ವತಿ ಅಮ್ಮನವರಿಗೆ 13-02-1961ರಲ್ಲಿ ಸುಪುತ್ರನಾಗಿ ಜನಿಸಿದರು.

ಎಸ್.ಎಸ್.ಎಲ್.ಸಿವರೆಗೆ ವಿದ್ಯಾರ್ಹತೆ ಪಡೆದ ಇವರು ತಮ್ಮ 16ನೇ ವಯಸ್ಸಿನಲ್ಲಿ ಭಾವನಾದ ಕೆ. ಗೋವಿಂದ ಭಟ್‌ರಿಂದ ನಾಟ್ಯಾಭ್ಯಾಸವನ್ನು ಕಲಿತರು. ಆಮೇಲೆ ನೆಡ್ಲೆ ನರಸಿಂಹ ಭಟ್‌ರಿಂದ ರಂಗದ ಅನುಭವವನ್ನು ಪಡೆದರು.


ಉಪ್ಪಳ ಭಗವತಿ ಮೇಳದಲ್ಲಿ 1 ವರ್ಷ, ಕಟೀಲು ಮೇಳದಲ್ಲಿ 2 ವರ್ಷ, ಕದ್ರಿ ಮೇಳದಲ್ಲಿ 6 ವರ್ಷ, ಧರ್ಮಸ್ಥಳ ಮೇಳದಲ್ಲಿ 1 ವರ್ಷ, ಮಧೂರು ಮೇಳದಲ್ಲಿ 4 ವರ್ಷ ಹಾಗೂ ಬಪ್ಪನಾಡು, ಅರುವ, ಪುತ್ತೂರು ಮೇಳಗಳಲ್ಲಿ ಒಂದೊಂದು ವರ್ಷದ ತಿರುಗಾಟವನ್ನು ಮಾಡಿರುವರು.

ಹಾಸ್ಯ ಹಾಗೂ ಪೋಷಕ ಪಾತ್ರವನ್ನು ನಿರ್ವಹಿಸುವ ಇವರು ದಾರುಕ, ಮಕರಂದ, ವಿಜಯ, ಪಾಪಣ್ಣ, ಉಸ್ಮಾನ್, ಅಬ್ಬು-ಶೇಕು, ಮುದುಕಿ, ಋಷಿ, ನಾರದ, ಪಯ್ಯಬೈದ, ಜೋಯಿಷ, ಬ್ರಹ್ಮ, ಈಶ್ವರ ಮೊದಲಾದ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ.

ಅನೇಕ ಹವ್ಯಾಸಿ ಕಲಾವಿದರಿಗೆ ಗುರುಗಳಾಗಿರುವ ಇವರು ಶಾಲಾ-ಕಾಲೇಜುಗಳಲ್ಲಿ ತರಬೇತಿಯನ್ನು ನೀಡುತ್ತಾರೆ,

ಭಾಗಮಂಡಲದಲ್ಲಿ ಕಳೆದ 10 ವರ್ಷಗಳಿಂದ ತರಬೇತಿ ಕೇಂದ್ರವನ್ನು ನಡೆಸಿಕೊಂಡು ಬರುತ್ತಿರುವ ಶ್ರೀಯುತರನ್ನು ಕನ್ನಡ ಸಾಹಿತ್ಯ ಸಮ್ಮೇಳನ ಮಾರ್ನಾಡು ಹಾಗೂ ಎಫ್.ಎಂ.ಸಿ. ಕಾಲೇಜು ಮಡಿಕೇರಿ ಇವರು ಸಂಮಾನಿಸಿರುತ್ತಾರೆ.

ಕಲಾವಿದರಾಗಿರುವ ಮುಳಿಯಾಲ ರಾಮಭಟ್ ಇವರು ದೂರ ಸಂಬಂಧಿಯಾಗಿರುವ ಮಹಾಬಲ ಭಟ್ಟರು ಸತ್ಯವತಿ ಎಂಬವರನ್ನು ವಿವಾಹವಾಗಿ ಅಭಿಷೇಕ್ ಎಂಬ ಸುಪುತ್ರನನ್ನು ಪಡೆದು ಸುಖೀ ಸಂಸಾರವನ್ನು ನಡೆಸುತ್ತಿದ್ದಾರೆ.



# ಮರಿಯಯ್ಯ ಬಲ್ಲಾಳ್ ಚಿಪ್ಪಾರು

*"ಗುರು ಗಣೇಶ ನಿಲಯ" ಚಿಪ್ಪಾರು ಅಂಚೆ ಮತ್ತು ಗ್ರಾಮ, ಕಾಸರಗೋಡು ಜಿಲ್ಲೆ.*
***ದೂರವಾಣಿ : 08251-276253.***

ಶ್ರೀ ಮರಿಯಯ್ಯ ಬಲ್ಲಾಳ್ ಚಿಪ್ಪಾರು ಇವರು ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಾ ಚೆಂಡೆ-ಮದ್ದಳೆಗಳ ನುಡಿಸುವಿಕೆಯಲ್ಲಿ ಜನ ಮನ್ನಣೆಗಳಿಸಿರುತ್ತಾರೆ.

ಶ್ರೀಯುತರು ಕೀರ್ತಿ ಶೇಷ ಕಲಾವಿದರಗಿರುವ ಚಿಪ್ಪಾರು ಕೃಷ್ಣಯ್ಯ ಬಲ್ಲಾಳ್ ಮತ್ತು ಶ್ರೀಮತಿ ಶಾರದಮ್ಮರ ಸುಪುತ್ರರಾಗಿ ದಿನಾಂಕ 01-01-1967ರಂದು ಜನಿಸಿದರು.

ತನ್ನ ತಂದೆಯವರ ಪ್ರಭಾವದಿಂದ 16ನೇ ವರ್ಷದಿಂದ ಯಕ್ಷಗಾನಕ್ಕೆ ಸೇರಿದ ಇವರು ನೆಡ್ಲೆ ನರಸಿಂಹ ಭಟ್‌ರಿಂದ ಚೆಂಡೆ ಮದ್ದಳೆಯ ನುಡಿತ-ಬಡಿತಗಳನ್ನು ಅಭ್ಯಾಸ ಮಾಡಿರುವರು.

ಕಳೆದ 25 ವರ್ಷಗಳಿಂದ ಕಟೀಲು ಮೇಳವೊಂದರಲ್ಲೇ ತಿರುಗಾಟವನ್ನು ಮಾಡಿರುವ ಇವರು ಆರಂಭಕ್ಕೆ ಧರ್ಮಸ್ಥಳ ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಮಾಡಿದ್ದರು.

ಸಹೋದರ ಸುಕುಮಾರ ಬಲ್ಲಾಳ್ ಮೇಳ ತಿರುಗಾಟವನ್ನು ಮಾಡುತ್ತಿದ್ದರೆ, ಮತ್ತೋರ್ವ ಸಹೋದರ ರಾಜಾರಾಮ ಬಲ್ಲಾಳರು ಹವ್ಯಾಸಿ ಕಲಾವಿದರಾಗಿ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಉಪವೃತ್ತಿಯಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಎಸ್.ಎಸ್.ಎಲ್.ಸಿಯ ತನಕ ಕಲಿತು ವಿದ್ಯಾಭ್ಯಾಸವನ್ನು ಪಡೆದಿರುವರು.

ಶ್ರೀಮತಿ ಜಯಲಕ್ಷ್ಮೀ ಎಂಬವರನ್ನು ವಿವಾಹವಾಗಿ ನಿಖೇಶ್ ಮತ್ತು ನಿಖಿಲೇಶ್ವರಿ ಎಂಬ ಇಬ್ಬರು ಮಕ್ಕಳನ್ನು ಪಡೆದು ಸಾರ್ಥಕರಾಗಿದ್ದಾರೆ.



## ಮನೋಹರ ರೈ ಬೆಳ್ಳಾರೆ

*ಬಾಳಿಗ ಗ್ರಾಮ*
*ಸುಳ್ಯ ತಾಲೂಕು ದ.ಕ*
*ಮೊಬೈಲ್ : **9740093072***

ಶೃಂಗಾರ ಮಯವಾದ, ಲಾಲಿತ್ಯ ಪೂರ್ಣವಾದ ರೂಪ ಸೌಂದರ್ಯವನ್ನು ಸ್ತ್ರೀ ಪಾತ್ರದ ಮುಖೇನ ಮೆರೆಸುವ ಶ್ರೀ ಮನೋಹರ ರೈ ಬೆಳ್ಳಾರೆ ಅವರು ಪ್ರಸ್ತುತ ಕಟೀಲು ಮೇಳದಲ್ಲಿ ಸೇವೆಯುನ್ನು ಸಲ್ಲಿಸುತ್ತಿದ್ದಾರೆ.


ಸುಳ್ಯ ತಾಲೂಕು, ಬಾಳಿಗ ಗ್ರಾಮದಲ್ಲಿ ಶ್ರೀ ಸುಂದರ ರೈ ಹಾಗೂ ಶ್ರೀಮತಿ ಗುಲಾಬಿ ಅವರ ದಂಪತಿಯ ಸುಪುತ್ರನಾಗಿ 1–6–1983ರಲ್ಲಿ ಜನಿಸಿದರು.

7ನೇ ತರಗತಿಯವರಿಗೆ ವಿದ್ಯಾಭ್ಯಾಸವನ್ನು ಕಲಿತ ಇವರು ಪದ್ಮನಾಭ ಪೂಜಾರಿ ಬೆಳ್ಳಾರೆ ಇವರ ವೇಷದ ಪ್ರೇರಣೆಯಿಂದ ಅವರಲ್ಲೇ ನಾಟ್ಯಾಭ್ಯಾಸವನ್ನು ಮಾಡಿದರು.

13ನೇ ವಯಸ್ಸಿನಿಂದ ಮೇಳವನ್ನು ಸೇರಿದ ಇವರು ಕುಂಟಾರು ಮೇಳದಲ್ಲಿ 2 ವರ್ಷ, ಮಂಗಳಾದೇವಿ ಮೇಳದಲ್ಲಿ 2 ವರ್ಷ, ಕೊಲ್ಲಂಗಾನ ಮೇಳದಲ್ಲಿ 2 ವರ್ಷ, ಹಾಗೂ ಕಟೀಲು ಮೇಳದಲ್ಲಿ 5ನೇ ವರ್ಷ ತಿರುಗಾಟವನ್ನು ಮಾಡಿರುವ ಇವರು ಪ್ರಸ್ತುತ ಕಟೀಲು ಮೇಳದಲ್ಲೇ ತಮ್ಮ ಕಲಾ ಸೇವೆಂಯುನ್ನು ಮುಂದುವರಿಸಿದ್ದಾರೆ.

ಮಾಲಿನಿ, ಶ್ರೀದೇವಿ, ರತಿ, ಸೀತೆ, ಮಾಯಾ ಶೂರ್ಪನಖಿ, ಸುಭದ್ರೆ, ಚಿತ್ರಂಗದೆ, ಮೋಹಿನಿ, ಪಾರ್ವತಿ ಇತ್ಯಾದಿ ಪಾತ್ರಗಳನ್ನು ಮಾಡಿದ್ದಾರೆ.

ಇವರು ಮಳೆಗಾಲದಲ್ಲಿ ಉಪವೃತ್ತಿಯಾಗಿ ಕೃಷಿಯನ್ನು ಅವಲಂಬಿಸಿದ್ದಾರೆ.



## ಮಾಧವ ಭಂಡಾರಿ, ಕುಳಾಯಿ

*"ಕಲಾ ಗಣೇಶ" ಅಂಚೆ-ಕುಳಾಯಿ*
*ಮಂಗಳೂರು-574019.*
*ಮೊ ; 8147484288*

ತುಳು ಭಾಷೆಯ ಪ್ರೌಢಿಮೆಯೊಂದಿಗೆ ಮೇಳ ತಿರುಗಾಟವನ್ನು ನಡೆಸಿರುವ ಶ್ರೀ ಕುಳಾಯಿ ಮಾಧವ ಭಂಡಾರಿಯವರು ಪ್ರಸ್ತುತ ಹವ್ಯಾಸಿ ಕಲಾವಿದರಾಗಿದ್ದಾರೆ.

ಭಂಡಾರಿಯವರು 1969ರಲ್ಲಿ ಶ್ರೀಮತಿ ಲಲಿತ ಮತ್ತು ಶ್ರೀ ಸಾನು ಭಂಡಾರಿ ದಂಪತಿಗೆ ಮಗನಾಗಿ ಕುಳಾಯಿಯಲ್ಲಿ ಜನಿಸಿದರು.

ಯಕ್ಷಗಾನ ಗುರು ಶಿವರಾಮ ಪಣಂಬೂರು ಹಾಗೂ ಗೋಪಾಲರಾಯರ ಮಾರ್ಗದರ್ಶನದಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಗೆಜ್ಜೆ ಕಟ್ಟಿ ರಂಗ ಪ್ರವೇಶ ಮಾಡಿದರು.

ಅಡ್ಯಾರು ಮೇಳ-3 ವರ್ಷ, ತಳಕಳ ಮೇಳ-6 ವರ್ಷ, ಮತ್ತು ಸದಾಶಿವ ಗಣೇಶ ಮೇಳದಲ್ಲಿ-10 ವರ್ಷಗಳ ತಿರುಗಾಟವನ್ನು ಪೂರೈಸಿರುವರು.

ಕೋಟಿ, ಬುದ್ಧಿವಂತ, ಪೆರುಮಳ ದೇವು ಪೂಂಜ ಮುಂತಾದ ಪಾತ್ರಗಳನ್ನು ಮಾಡಿರುವ ಇವರು ಪಯ್ಯಬೈದ ಜೋಯಿಸ ಕಾಶೀಮಾಣಿ ದಾರುಕ ಮೊದಲಾದ ಹಾಸ್ಯ ಪಾತ್ರಗಳನ್ನು ನಿರ್ವಹಿಸುತ್ತಾರೆ.

3ನೇ ತರಗತಿಯ ಓದಿನೊಂದಿಗೆ ಶಾಲಾ ಕಲಿಕಾ ಸಂಬಂಧವನ್ನು ಅಲ್ಲಿಗೇ ನಿಲ್ಲಿಸಿದ ಶ್ರೀಯುತರು ವಿದ್ವಜ್ಜನರ ಸಂಪರ್ಕದೊಂದಿಗೆ ಕನ್ನಡ ಹಾಗೂ ತುಳು ಭಾಷೆಯಲ್ಲಿ ನಾಟಕ ಮತ್ತು ಯಕ್ಷಗಾನ ಪ್ರಸಂಗಗಳನ್ನು ನಿರಂತರವಾಗಿ ರಚಿಸುತ್ತಾ ಬಂದಿದ್ದಾರೆ.

ತನ್ನ ರಚನೆ ಹಾಗೂ ಪಾತ್ರ ನಿರ್ವಹಣೆಯ ಮೂಲಕ ತುಳು ಭಾಷಾ ಪ್ರಾಯೋಗಕ್ಕೆ ಒಂದು ವಿಶಿಷ್ಟ ದೃಷ್ಟಿಕೋನವನ್ನು ಬಿಂಬಿಸಿದವರು ಮಾಧವ ಭಂಡಾರಿಯವರು.

ಇದುವರೆಗೆ ಸುಮಾರು ನಲ್ವತ್ತೆರಡು ತುಳು-ಕನ್ನಡ ಯಕ್ಷಗಾನ ಪ್ರಸಂಗಗಳನ್ನು, ಹದಿನಾರು ನಾಟಕಗಳನ್ನು ರಚಿಸಿದ ಇವರು ಸುಮಾರು 62 ಧ್ವನಿ ಸುರುಳಿಗಳಿಗೆ ಸಾಹಿತ್ಯವನ್ನು ನಿರ್ಮಿಸಿರುವರು.

ನಾಗದೃಷ್ಟಿ, ಸ್ವಾಮಿಭಕ್ತ ಮಂಜಣ್ಣೆ, ಮರ್ಲದಿ ಮಾಚಕ್ಕೆ, ಮದಿಮಾಯೆ ಮಂಗುರೆ, ಅಬ್ಬರದ ಬಬ್ಬರ್ಯೆ, ಕಾರ್ನಿಕದ ಕಲ್ಲುರ್ಟಿ, ನಾಗತಂಬಿಲ, ಗೋವಿಂದ ಗೋಪಾಲೆ, ಸತ್ಯದ ತುಡರ್, ಕಟ್ಟದ ಪೂಂಜೆ, ಮೊದಲಾದವುಗಳು ಇವರು ರಚಿಸಿದ ಕೃತಿಗಳು.

ಇವರು ಬರೆದ ಯಕ್ಷಗಾನ ಪ್ರಸಂಗಗಳು, ಕರ್ನಾಟಕ, ಸುರತ್ಕಲ್, ಕದ್ರಿ, ಎಡನೀರು, ಮೊದಲಾದ ಮೇಳಗಳಲ್ಲಿ ಪ್ರದರ್ಶನಗೊಂಡು ಜಯಭೇರಿಗಳಿಸಿದೆ.

ಶ್ರೀಮತಿ ವತ್ಸಲಾ ಎಂಬವರನ್ನು ವರಿಸಿ ಕಾವ್ಯ ಮತ್ತು ಕೀರ್ತನ್ ಎಂಬ ಇಬ್ಬರು ಮಕ್ಕಳನ್ನು ಪಡೆದು ಸಾರ್ಥಕ ಜೀವನವನ್ನು ನಡೆಸುತ್ತಾ ಇದ್ದಾರೆ.

ಇವರ ಕಲಾ ಸಾಧನೆಗೆ ಪ್ರತಿಫಲವಾಗಿ ಮಂಗಳೂರು ಪುರಭವನ, ಕುಳಾಯಿ, ಸುರತ್ಕಲ್ ಮೊದಲಾದೆಡೆಯಲ್ಲಿ ಗೌರವದ ಸಂಮಾನಗಳು ಸಂದಿವೆ. ಇಷ್ಟಲ್ಲದೆ ಗೆಲ್ಮೆದ ರಾಜೆ ಎಂಬ ಬಿರುದಿಗೆ ಪಾತ್ರರಾಗಿದ್ದಾರೆ.



## ಮಾಧವ ಬಂಗೇರ ಡಿ. ಕೊಳತ್ತಮಜಲು

*ದೋಟದ ಮನೆ, ಬಡಗ ಬೆಳ್ಳೂರು ಅಂಚೆ ಮತ್ತು*
*ಗ್ರಾಮ, ಬಂಟ್ವಾಳ ತಾಲ್ಲೂಕು-574 219*
*ಮೊ ; 9164521588*

ವೇಷಧಾರಿ ಹಾಗೂ ಕಲಾ ಸಂಘಟಕನಾಗಿ ಬೆಳೆದು ನಿಂತಿರುವ ಯುವ ಕಲಾವಿದರಾದ ಡಿ.ಮಾಧವ ಬಂಗೇರ ಕೊಳತ್ತಮಜಲು ಇವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಬಂಟ್ವಾಳ ತಾಲ್ಲೂಕು ಬಡಗ ಬೆಳ್ಳೂರು ಗ್ರಾಮದ ಹೂವಯ್ಯ ಪೂಜಾರಿ ಹಾಗೂ ದೇಜು ಹೆಂಗ್ಸು ಇವರ ಸುಪುತ್ರನಾಗಿರುವ ಡಿ. ಮಾಧವ ಬಂಗೇರರು ತಾ. 1-6- 1980 ರಲ್ಲಿ ಜನಿಸಿದ್ದಾರೆ.

ಯಕ್ಷಗಾನದ ಪ್ರಭಾವಕ್ಕೆ ಒಳಗಾಗಿ, ತನ್ನ ವಿದ್ಯಾಭ್ಯಾಸವನ್ನು 10ನೇ ತರಗತಿವರೆಗೆ ಮಾತ್ರ ಸೀಮಿತಗೊಳಿಸಿ ಯಕ್ಷಗಾನದ ರಂಗ ಪ್ರವೇಶವನ್ನು ಮಾಡಿದರು.

ಧರ್ಮಸ್ಥಳದ ಲಲಿತ ಕಲಾ ಕೇಂದ್ರವನ್ನು ಸೇರಿದ ಇವರು ದಿವಾಣ ಶಿವಶಂಕರಭಟ್ ಅವರಲ್ಲಿ ನಾಟ್ಯಾಭ್ಯಾಸವನ್ನು ಕಲಿತು ಅರ್ಥಗಾರಿಕೆಗೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಿದರು.

ಕೃಷ್ಣ, ಬ್ರಹ್ಮ, ಅಕ್ರೂರ, ಭೀಷ್ಮ, ಮಹೋಗ್ರ, ಸುಗ್ರೀವ ಮುಂತಾದ ಪುಂಡು ಹಾಗೂ ರಾಜವೇಷಗಳಲ್ಲಿ ತಮ್ಮದೇ ಆದ ಸ್ವಂತಿಕೆಯನ್ನು ಮೆರೆಸಿದ್ದಾರೆ.

ಶ್ರೀಮತಿ ವಿಜಯಲಕ್ಷ್ಮಿಯೊಂದಿಗೆ ತನ್ನ ಸಾಂಸಾರಿಕ ಜೀವನವನ್ನು ನಡೆಸುತ್ತಿರುವ ಇವರು ಕಲಾ ಸಾಧಕರಾಗಿ ಬೆಳೆಯುವ ಆಶಯವನ್ನು ಹೊಂದಿದ್ದಾರೆ.



## ಮೋನಪ್ಪ ದೇವಾಡಿಗ ಮುಚ್ಚೂರು

*ತೌಡುಕ್ಕು ಮನೆ, ಮುಚ್ಚೂರು ಅಂಚೆ*
*ಮಂಗಳೂರು ತಾಲೂಕು*
*ಮೊ. 9632303291*

ಯಕ್ಷಗಾನದ ಹಾಸ್ಯ ಪಾತ್ರದಲ್ಲಿ ಕಲಾ ಸೇವೆಯನ್ನು ಮಾಡುತ್ತಾ ಮನ್ನಣೆಗೊಳಗಾಗಿರುವ ಮೋನಪ್ಪ ದೇವಾಡಿಗ. ಇವರು ಪ್ರಸ್ತುತ ಸುಂಕದ ಕಟ್ಟೆ ಮೇಳದ ಹಾಸ್ಯಗಾರರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಂಗಳೂರು ತಾಲೂಕು ಮುಚ್ಚೂರು ಗ್ರಾಮದ ಶ್ರೀ ಕೃಷ್ಣಪ್ಪ ದೇವಾಡಿಗ ಮತ್ತು ಶ್ರೀಮತಿ ಕಲಾ ದೇವಾಡಿಗ ಇವರ ಪುತ್ರನಾಗಿ 1970 ರಲ್ಲಿ ಜನಿಸಿದರು.

7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ ಇವರು ಯಕ್ಷಗಾನ ಪರಿಸರದದ ಪ್ರಭಾವದಿಂದ ಅಕರ್ಷಿತರಾಗಿ ಹರೀಶ್ ಶೆಟ್ಟಿಗಾರ್ ಅವರಿಂದ ನಾಟ್ಯಭ್ಯಾಸವನ್ನು ಕಲಿತರು. ಆಮೇಲೆ ತಮ್ಮ 25ನೇ ವರ್ಷದಿಂದ ಮೇಳಕ್ಕೆ ಸೇರಿದರು.

ಅರುವ ಮೇಳದಲ್ಲಿ 1 ವರ್ಷ, ಕಟೀಲು ಮೇಳದಲ್ಲಿ 1 ವರ್ಷ, ಆಮೇಲೆ ಸುಂಕದ ಕಟ್ಟೆ ಮೇಳದಲ್ಲಿ ಸತತ 12 ವಷಗಳಿಂದ ಕಲಾಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ಯಕ್ಷಗಾನದ ಹಾಸ್ಯ ಪಾತ್ರಗಳಲ್ಲಿ ಬಾಹುಕ, ಮಕರಂದ, ದಾರುಕ, ವಿಜಯ, ಮೂಕಾಸುರ, ಪಯ್ಯಬೈದ, ಲಿಂಗಪ್ಪಾಚಾರಿ, ಅಣ್ಣಯ್ಯ ಬೆಳ್ಚಡ, ಇತ್ಯಾದಿ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಜೊತೆಗೆ ಸುಗ್ರೀವ, ಬ್ರಹ್ಮ ಮುಂತಾದ ಪೋಷಕಪಾತ್ರಗಳನ್ನು ಕೂಡಾ ಮಾಡುತ್ತಾರೆ.

ಶ್ರೀಮತಿ ಜಯಂತಿ ಎಂಬರನ್ನು ವರಿಸಿರುವ ಇವರು ಕು. ಪ್ರತೀಕ್ಷಾ ಮತ್ತು ಕು. ಪ್ರತೀಕ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ಮೋಹನ ಶೆಟ್ಟಿ ಬಾಯಾರು

*"ಕುಳ್ಯಾರು ಮನೆ", ಬಾಯಾರು ಗ್ರಾಮ*
*ಕಾಸರಗೋಡು, ಕೇರಳ*
*ಮೊ ; 9686211170 / 9846378381 (ಕೇರಳ)*

ರಾಜ, ಪುಂಡು, ಮತ್ತು ನಾಟಕೀಯ ವೇಷಗಳನ್ನು ನಿರ್ವಹಿಸುತ್ತಾ ಜನ ಮನ್ನಣೆಯನ್ನು ಪಡೆದಿರುವ ಬಾಯಾರು ಮೋಹನ್ ಶೆಟ್ಟಿಯವರು ಸುಂಕದಕಟ್ಟೆ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಐತಪ್ಪ ಶೆಟ್ಟಿ ಮತ್ತು ಕಲ್ಯಾಣಿ ಶೆಡ್ತಿ ದಂಪತಿಯ ಸುಪುತ್ರರಾಗಿರುವ ಇವರು ದಿನಾಂಕ 20-11-1963ರಂದು ಬಾಯಾರಿನಲ್ಲಿ ಹುಟ್ಟಿದರು.

ತಂದೆ ಸ್ತ್ರೀ ಪಾತ್ರಧಾರಿ, ಅಣ್ಣಂದಿರಾದ ಬಾಯಾರು ರಘುನಾಥ ಶೆಟ್ಟಿ ಮತ್ತು ಬಾಯಾರು ರಮೇಶ ಶೆಟ್ಟಿಯವರು ಪುರುಷ ಪಾತ್ರಧಾರಿಗಳು ಈ ಕಾರಣದಿಂದ ತಂದೆ ಮತ್ತು ಅಣ್ಣಂದಿರ ಮಾರ್ಗದರ್ಶನದಲ್ಲಿ ಇವರು ಬೆಳೆದು ಬಂದರು.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 14ನೇ ವರ್ಷದಿಂದಲೇ ಯಕ್ಷಗಾನದ ಪಾತ್ರಧಾರಿಯಾಗಿ ಬೆಳೆದರು.

ಕರ್ನಾಟಕ ಮೇಳ – 15 ವರ್ಷ, ಗೀತಾಂಬಿಕ ಯಕ್ಷಗಾನ ಮಂಡಳಿ ಮುಂಬಯಿ – 10 ವರ್ಷ, ಸುಂಕದಕಟ್ಟೆ ಮೇಳ – 5 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ.

ಹಿರಣ್ಯಾಕ್ಷ, ಕೌರವ, ಇಂದ್ರಜಿತು, ಕಂಸ, ಜಾಂಬವಂತ, ಚಂಡ–ಮುಂಡರು, ವಿಷ್ಣು, ಚೆನ್ನಯ, ದೇವುಪೂಂಜ, ಬೂದಾಬಾರೆ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಮತಿ ಶೋಭ ಎಂಬವರನ್ನು ವರಿಸಿರುವ ಇವರು ಕು। ರಶ್ಮಿತ, ಕು। ನಿಶ್ಮಿತ, ಕು। ಲಿಖಿತ ಎಂಬ ಮೂವರು ಪುತ್ರಿಯರನ್ನು ಪಡೆದಿದ್ದಾರೆ.



## ಮೋಹನ ಬೆಳ್ಳಿಪಾಡಿ

*ಬೆಳ್ಳಿಪಾಡಿ ಮನೆ, ದೇಲಂಪಾಡಿ ಗ್ರಾಮ*
*ಪಂಜಿಕಲ್ಲು ಅಂಚೆ,*
*ಕಾಸರಗೋಡು ತಾಲೂಕು* **-671 543**
*ಮೊಬೈಲ್ :* **9481019506**

ಯುವ ಪುಂಡುವೇಷದ ಕಲಾವಿದರಾದ ಬೆಳ್ಳಿಪ್ಪಾಡಿ ಮೋಹನರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಕಾಸರಗೋಡು ಜಿಲ್ಲೆಯ ದೇಲಂಪಾಡಿ ಗ್ರಾಮದ ಪಂಜಿಕಲ್ಲು ಎಂಬಲ್ಲಿನ ಬೆಳ್ಳಿಪಾಡಿ ಮನೆಯ ಶ್ರೀ ಕೃಷ್ಣಪ್ಪ ಪೂಜಾರಿ ಹಾಗೂ ಶ್ರೀಮತಿ ಚೆನ್ನಮ್ಮ ದಂಪತಿಗೆ ಸುಪುತ್ರನಾಗಿ ಮೋಹನರು ದಿನಾಂಕ 10-2-1983ರಲ್ಲಿ ಜನಿಸಿರುವರು.


ಹತ್ತನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನದ ಆಟ-ಕೂಟಗಳನ್ನು ನೋಡಿ ಪ್ರಭಾವಿತರಾಗಿ ಕಲಿಯುವ ಆಸಕ್ತಿಗೆ ಮನಮಾಡಿದರು.

ಯಕ್ಷಗಾನ ಗುರುಗಳಾದ ಸಬ್ಬನ ಕೋಡಿ ರಾಮಭಟ್‌ರಿಂದ ಯಕ್ಷಗಾನದ ನಾಟ್ಯವನ್ನು ಕಲಿತು ರಂಗ ಪ್ರವೇಶ ಮಾಡಿದರು.

ಕಟೀಲು ಮೇಳದಲ್ಲೆ ಇದ್ದು 10ನೇ ವರ್ಷದ ತಿರುಗಾಟವನ್ನು ಪೂರೈಸಿರುವ ಇವರು ಪುಂಡು ವೇಷಗಳಾದ ರಾಮ, ಕೃಷ್ಣ, ಅಭಿಮನ್ಯು, ಚಂಡ-ಮುಂಡರು, ಭಾರ್ಗವ, ಬಭ್ರುವಾಹನ, ಇತ್ಯಾದಿ ಪಾತ್ರಗಳನ್ನು ನಿರ್ವಹಿಸುತ್ತಾರೆ.

ರಾಜವೇಷಗಳಲ್ಲಿ ದೇವೇಂದ್ರ, ಅರ್ಜುನ, ದೂಮ್ರಾಕ್ಷ, ಹಾಗೂ ಅಸುರ ಪಾತ್ರಗಳನ್ನು ಮಾಡಬಲ್ಲವರಾಗಿದ್ದಾರೆ. ಈಶ್ವರ, ಬ್ರಹ್ಮ ಮುಂತಾದ ಪಾತ್ರಗಳನ್ನು ಕೂಡ ಉತ್ತಮವಾಗಿ ನಿರ್ವಹಿಸ ಬಲ್ಲವರಾಗಿದ್ದಾರೆ.

ಮಳೆಗಾಲಕ್ಕೆ ಮನೆಯಲ್ಲಿ ಉಪವೃತ್ತಿಯಾಗಿ ಕೃಷಿಯ ಕೆಲಸವನ್ನು ಮಾಡುವ ಇವರು ರಂಗದ ಅನುಭವವನ್ನು ಸಂಪಾದಿಸುತ್ತಾ ಬೆಳೆಯುತ್ತಿದ್ದಾರೆ.



## ಮಂಜುನಾಥ ಭಟ್ ಕೆ. ಜಿ., ಬೆಳ್ಳಾರೆ

*"ಶರಣ ಸದನ", ತಳಕಲ ಅಂಚೆ ಮತ್ತು ಗ್ರಾಮ.*
*ವಯಾ ಬಜ್ಪೆ, ಮಂಗಳೂರು ತಾಲೂಕು – 574189*
*ಮನೆ ದೂರವಾಣಿ: 0824–2253592*
*ಮೊಬೈಲ್: 9591346172*

ಪೂರ್ವರಂಗದಿಂದ ಇದಿರು ವೇಷದ ತನಕ ಹಂತ ಹಂತವಾಗಿ ಬೆಳೆಯುತ್ತಾ ಪ್ರಸಿದ್ಧಿಗೆ ಬಂದಿರುವ ಶ್ರೀ ಕೆ. ಜಿ. ಮಂಜುನಾಥ ಭಟ್ ಬೆಳ್ಳಾರೆ ಕಟೀಲು ಮೇಳದ ಹಿರಿಯ ಕಲಾವಿದರಾಗಿ ಮನ್ನಣೆಯನ್ನು ಪಡೆದಿದ್ದಾರೆ.

1960ನೇ ವರ್ಷ, ಏಪ್ರಿಲ್ ತಿಂಗಳ ಒಂದನೇ ದಿನಾಂಕದಂದು ಕುಂಜಿಹಿತ್ಲು ಗೋವಿಂದ ಭಟ್, ಮತ್ತು ಕೆ. ಸರಸ್ವತಿ ಅಮ್ಮ ದಂಪತಿಯ ಸುಪುತ್ರರಾಗಿ ಬೆಳ್ಳಾರೆಯಲ್ಲಿ ಜನಿಸಿದರು.

ಎಂಟನೆಯ ತರಗತಿಯ ತನಕ ಶಾಲೆಗೆ ಹೋಗಿರುವ ಇವರು ಬಾಲ್ಯದಲ್ಲೇ ಯಕ್ಷಗಾನದತ್ತ ಪ್ರಭಾವಿತರಾಗಿದ್ದರು. ಇವರ ಅಜ್ಜ ಮಾಣಾಂಗಾಯ್ ಕೃಷ್ಣ ಭಟ್ ಹಾಗೂ ಅಣ್ಣ ಪ್ರಸಂಗ ಕರ್ತರೂ ಸಾಹಿತಿಯೂ ಆಗಿರುವ ಸೂರ್ಯನಾರಾಯಣ ಭಟ್ ಇವರ ಪ್ರೇರಣೆಯ ಪ್ರೋತ್ಸಾಹದಲ್ಲಿ ಶಾಲಾ ಅಧ್ಯಾಪಕ ಬಾಬು ಗೌಡರಿಂದ ಮೊದಲ ಮಾರ್ಗದರ್ಶನವನ್ನು ಪಡೆದರು.

ಆಮೇಲೆ ಧರ್ಮಸ್ಥಳದ ಲಲಿತಕಲಾಕೇಂದ್ರದಲ್ಲಿ ಪಡ್ರೆ ಚಂದುರವರಿಂದ ನಾಟ್ಯಭ್ಯಾಸ ಹಾಗೂ ರಂಗದ ಅನುಭವವನ್ನು ಸಂಪಾದಿಸಿ ಮೇಳದ ತಿರುಗಾಟವನ್ನು ಆರಂಭಿಸಿದರು.

ನೆಡ್ಲೆ ನರಸಿಂಹಭಟ್, ಇರಾ ಗೋಪಾಲಕೃಷ್ಣ ಭಾಗವತ, ಬಲಿಪ ನಾರಾಯಣ ಭಾಗವತ ಮತ್ತು ಕಟೀಲು 3ನೇ ಮೇಳದ ಭಾಗವತರಾದ ಕುರಿಯ ಗಣಪತಿ ಶಾಸ್ತ್ರಿಯವರಿಂದ ರಂಗದ ಅನುಭವವನ್ನು ಸಂಪಾದಿಸಿ ಪ್ರೌಢರಾದರು.

ಅಜ್ಜನ ಯಜಮಾನಿಕೆಯಲ್ಲಿದ್ದ ಕೂಡ್ಲು ಕುತ್ಯಾಳ ಗೋಪಾಲಕೃಷ್ಣ ಮೇಳದಲ್ಲಿ ಮೊದಲ ತಿರುಗಾಟವನ್ನು ಮಾಡಿದ ಮೇಲೆ ಸುಬ್ರಹ್ಮಣ್ಯ ಮೇಳಕ್ಕೆ ಹೋದವರು ಮುಂದಿನ ವರ್ಷದಿಂದ ಕಟೀಲು ಮೇಳದ ತಿರುಗಾಟಕ್ಕೆ ಸೇರ್ಪಡೆಯಾಗಿ ಪ್ರಸ್ತುತ 35ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


ಭ್ರಮರಕುಂತಳೆ, ಅಭಿಮನ್ಯು, ವಿಷ್ಣು, ರಾಮ, ಕೃಷ್ಣ, ಮಧು–ಕೈಟಭ, ದೇವೇಂದ್ರ, ಅರ್ಜುನ, ಕರ್ಣ, ರಕ್ತಬೀಜ, ಮಹಿಷ, ಶುಂಭ, ಹನೂಮಂತ, ಧರ್ಮರಾಯ, ಕುಂಭಕರ್ಣ ಹೀಗೆ ಹೆಚ್ಚಿನ ಎಲ್ಲಾ ವಿಧದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪರಂಪರೆಯ ಬಗ್ಗೆ ಹೆಚ್ಚಿನ ಅನುಭವವುಳ್ಳ ಇವರಿಂದ ಸಾತ್ವಿಕ ಸ್ವಭಾವದ ಪಾತ್ರಗಳು ಹೆಚ್ಚು ವಿಜೃಂಭಿಸುತ್ತವೆ.

ಕದ್ರಿ ವಿಷ್ಣು ಸ್ಮಾರಕ ಎಳೆಯರ ಬಳಗ ಕದ್ರಿ ಎಂಬ ಸಂಸ್ಥೆಯನ್ನು ಹಿರಿಯ ಸಾಹಿತಿ ವಿ. ಬಿ. ಹೊಸಮನೆ ಯವರು ನಡೆಸುತ್ತಿದ್ದಾಗ ಇವರನ್ನೇ ನಿರ್ದೇಶಕರನ್ನಾಗಿ ಆಯ್ಕೆ ಮಾಡಿದ್ದರು. ಮಂಗಳೂರು ಜೈಲು ರೋಡಿನ ಟಿ. ಸಿ. ಎಚ್. ತರಬೇತಿ ಕೇಂದ್ರದಲ್ಲೂ ಅವರು ನಿರ್ದೇಶಕರಾಗಿ ತರಬೇತಿ ನೀಡಿದ್ದರು.

ತರಬೇತಿಯ ಹಿನ್ನೆಲೆಯಲ್ಲಿ ಚೊಕ್ಕಾಡಿ, ಕುಪ್ಪೆಪದವು, ಮಲ್ಲೂರು ಮೊದಲಾದ ಕಡೆ ಶಾಲಾ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸಿ ಕಲಾವಿದರ ಬೆಳವಣಿಗೆಗೆ ಕಾರಣರಾಗಿದ್ದಾರೆ.

ಯಕ್ಷಗಾನದ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿಯೂ ಭಾಗವಹಿಸಿದ ಇವರು ಪರಂಪರೆಯ ಬಣ್ಣಗಾರಿಕೆಯ ಬಗ್ಗೆಯೂ ಅಧಿಕೃತವಾಗಿ ಹೇಳುವ ಅನುಭವಿ ಕಲಾ ಸಾಧಕರು ಇವರಾಗಿದ್ದಾರೆ. ಇವರ ಸಾಧನೆಗೆ ಫಲಶ್ರುತಿಯಾಗಿ ಮೈಸೂರು, ಕದ್ರಿ ಮೊದಲಾದೆಡೆ ಸಂಮಾನವು ಸಂದಿದೆ.

ಶ್ರೀಮತಿ ಕೆ. ಅದಿತಿ ಎಂಬವರನ್ನು ವರಿಸಿರುವ ಮಂಜುನಾಥ ಭಟ್ಟರಿಗೆ ಸಾಯಿಸುಮಾ, ಶ್ರೀಹರಿಶರ್ಮ, ಶ್ರೀರಾಮ ಶರ್ಮ ಎಂಬ ಮೂವರು ಮಕ್ಕಳಿದ್ದಾರೆ.



## ಯಶೋಧರ ಗೌಡ

*ಅರಮನೆ ಕಾಡುಮನೆ, ಕೂತ್ಕುಂಜ ಅಂಚೆ ಮತ್ತು*
*ಗ್ರಾಮ. ಸುಳ್ಯ ತಾಲೂಕು – 574232*
*ಮೊಬೈಲ್ : 9972412549.*

ಸ್ತ್ರೀವೇಷ ಹಾಗೂ ಬಣ್ಣದವೇಷಗಳ ಪಾತ್ರ ಮಾಡುತ್ತಾ ಶ್ರೀ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿರುವವರು ಶ್ರೀ ಯಶೋಧರ ಗೌಡ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೂತ್ಕುಂಜ ಗ್ರಾಮದ ಸುಳ್ಯ ತಾಲೂಕಿನ ಐತಪ್ಪ ಗೌಡ ಹಾಗೂ ಸುಶೀಲ ಇವರ ಮಗನಾಗಿ ದಿನಾಂಕ 20-05-1979 ರಲ್ಲಿ ಜನಿಸಿದರು.

10ನೇ ತಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಸ್ವಂತಾಸಕ್ತಿಯಿಂದ ಯಕ್ಷಗಾನದ ಅಭ್ಯಾಸಕ್ಕೆ ಮನ ಮಾಡಿದರು.

ಶ್ರೀ ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ದಿವಾಣ ಶಿವಶಂಕರ ಭಟ್ ಅವರಿಂದ ತೆಂಕು ತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿದ ಮೇಲೆ ಮಂದಾರ್ತಿ ಕೇಂದ್ರಕ್ಕೆ ಸೇರಿ ಶ್ರೀ ರಮೇಶ್ ಗಾಣಿಗರಿಂದ ಬಡಗು ತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿರುವರು.

ಸಿಗಂದೂರು ಮೇಳ (ಬಡಗು) 4 ವರ್ಷ, ಕಟೀಲು ಮೇಳ 4 ವರ್ಷ, ಸುಂಕದಕಟ್ಟೆ ಮೇಳ 1 ವರ್ಷ, ತಳಕಳ ಮೇಳ 1 ವರ್ಷ ತಿರುಗಾಟವನ್ನು ಮಾಡಿರುತ್ತಾರೆ. ಅನಂತರ ಕಟೀಲು ಮೇಳಕ್ಕೆ ಮತ್ತೆ ಸೇರಿದವರು 2 ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಗಿರಿಜೆ, ದಿತಿ, ಆದಿಮಾಯೆ, ಸೀತೆ, ನಿಶುಂಭ, ಭೀಮ, ಕುಂಭಕರ್ಣ, ತಾಟಕಿ, ಶೂರ್ಪನಖಿ, ಕರಾಳವಕ್ರ, ಸುಬಾಹು ಮುಂತಾದ ಪಾತ್ರಗಳನ್ನು ಇವರು ನಿರ್ವಹಿಸಿದ್ದಾರೆ.

ಶ್ರೀಮತಿ ಪ್ರಮೀಳಾ ಇವರನ್ನು ವರಿಸಿರುವ ಇವರು ಕು. ಮೋಕ್ಷಿತ್ ಎಂಬ ಮಗನನ್ನು ಪಡೆದಿದ್ದಾರೆ. ಮಳೆಗಾಲದಲ್ಲಿ ಕೃಷಿಯನ್ನು ಉಪವೃತ್ತಿಯಾಗಿ ಸ್ವೀಕರಿಸಿ ತಮ್ಮ ಜೀವನವನ್ನು ನಡೆಸುತ್ತಾ ಇದ್ದಾರೆ.



## ಯೋಗೀಶ್ ದಾಸ್

*ನೀರಾಳ,*
*ಸಿರಿಬಾಗಿಲು ಅಂಚೆ ಮತ್ತು ಗ್ರಾಮ*
*ಕಾಸರಗೋಡು.*

ಯಕ್ಷಗಾನದಲ್ಲಿ ಪ್ರಮುಖವಾದ ಪುಂಡುವೇಷ ಹಾಗೂ ಸ್ತ್ರೀವೇಷಗಳಲಿ ಪಾತ್ರ ನಿರ್ವಹಣೆ ಮಾಡುತ್ತಿರುವ ಶ್ರೀ ಯೋಗೀಶ್ ದಾಸ್‌ರವರು ಸುಂಕದಕಟ್ಟೆ ಮೇಳದ ಕಲಾವಿದರಾಗಿ ಯಕ್ಷಗಾನ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ಕಾಸರಗೋಡು ಜಿಲ್ಲೆಯ ನೀರಾಳ, ಸಿರಿಬಾಗಿಲು ಗ್ರಾಮದ ಶ್ರೀ ಕೃಷ್ಣದಾಸ ಹಾಗೂ ಶ್ರೀಮತಿ ಸುಂದರಿ ಇವರ ಮಗನಾಗಿರುವ ಯೋಗೀಶ್‌ದಾಸರವರು ತನ್ನ ಶಾಲಾ ವಿದ್ಯಾಭ್ಯಾಸವನ್ನು 10ನೇ ತರಗತಿವರೆಗೆ ಪೂರೈಸಿದ್ದಾರೆ.

ಶಾಲಾ ಜೀವನದಲ್ಲೇ ಯಕ್ಷಗಾನದ ಆಸಕ್ತಿಯನ್ನು ಬೆಳೆಸಿ ದಿನಾನ ಶಿವಶಂಕರಭಟ್ ಅವರಲ್ಲಿ ನಾಟ್ಯವನ್ನು ಅಭ್ಯಾಸ ಮಾಡಿ ರಂಗ ಪ್ರವೇಶ ಮಾಡಿದ ಇವರಿಗೆ ಈಗಾಗಲೇ 29 ವರ್ಷಗಳಾಗಿವೆ.

ಆರಂಭಕ್ಕೆ ಬಪ್ಪನಾಡು ಮೇಳವನ್ನು ಸೇರಿದವರು 4 ವರ್ಷಗಳ ತಿರುಗಾಟವನ್ನು ಪೂರೈಸಿ ಪುತ್ತೂರು ಹಾಗೂ ಕುಂಟಾರು ಮೇಳಗಳಲ್ಲಿ ಒಂದೊಂದು ವರುಷಗಳ ತಿರುಗಾಟವನ್ನು ನಡೆಸಿದ್ದಾರೆ. ಪ್ರಸ್ತುತ ಸುಂಕದ ಕಟ್ಟೆ ಮೇಳದಲ್ಲಿ 6ನೇ ವರುಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಪುಂಡುವೇಷ ಹಾಗೂ ಸ್ತ್ರೀವೇಷಗಳನ್ನು ನಿರ್ವಹಿಸುತ್ತಿರುವ ಇವರು ಲಕ್ಷ್ಮೀ, ಮಾಲಿನಿ, ಆದಿಮಾಯೆ, ಸೀತೆ, ದ್ರೌಪದಿ, ಭ್ರಮರಕುಂತಳೆ, ಪ್ರಮೀಳೆ, ಲಕ್ಷ್ಮಣ, ಲವ, ಕೃಷ್ಣ ಇತ್ಯಾದಿ ಪಾತ್ರಗಳಲ್ಲಿ ಉತ್ತಮವಾಗಿ ಅಭಿನಯಿಸುತ್ತಾರೆ.

ಮುಡಿಪು ಭಾರತೀ ಕಲಾ ಆರ್ಟ್ಸ್ ಇದರ ಮಾಲಕರಾದ ಬಜ್ಪೆ ರಾಘವದಾಸ್ ಹಾಗೂ ಮತ್ತೋರ್ವ ಕಲಾ ಆರ್ಟ್ಸ್‌ನ ಮಾಲಕರಾದ ದಿವಾಕರ ದಾಸ್ ಕಾವಳಕಟ್ಟೆ ಇವರು ಯೋಗೀಶ್ ದಾಸರ ಸಂಬಂಧಿಕರಾಗಿದ್ದು ಪ್ರೋತ್ಸಾಹವನ್ನು ನೀಡಿದ್ದಾರೆ.



## ರವಿರಾಜ ಪಣೆಯಾಲ

*ಪಣೆಯಾಲ ಮನೆ, ಬೆಳ್ಳೂರು ಗ್ರಾಮ,*
*ಕಾಸರಗೋಡು ತಾಲೂಕು,*
*ಕಿನ್ನಿಂಗಾರು ಅಂಚೆ –671 543*
*ಮೊ. 9048140252*

ಮೇರು ವ್ಯಕ್ತಿತ್ವವನ್ನು ಹೊಂದಿರುವ ಹಿರಿಯ ಹಾಗೂ ಅನುಭವಿ ಕಲಾವಿದರಾದ ಬಲಿಪ ನಾರಾಯಣ ಭಾಗವತರ ಕಂಠಸಿರಿಗೆ ಅಕರ್ಷಿತರಾಗಿ, ಕಲಾ ಕ್ಷೇತ್ರವನ್ನು ಪ್ರವೇಶಿಸಿದ ಪಣೆಯಾಲ ರವಿರಾಜ ಭಟ್ ಇವರು ಎಡನೀರು ಯಕ್ಷಗಾನ ಮಂಡಳಿಯ ಕಲಾವಿದರಾಗಿದ್ದಾರೆ.

ಪಣೆಯಾಲದಲ್ಲಿ 4–3–1968ರಂದು ಜನಿಸಿದ ಇವರ ತಂದೆ ಎಂ. ಕೇಶವ ಭಟ್ ಹಾಗೂ ಸಾವಿತ್ರಿ ಅಮ್ಮ 10 ನೇ ತರಗತಿಯ ತನಕ ಶಾಲಾ ಶಿಕ್ಷಣ ಪಡೆದಿರುವರು.

ಇವರು 18ನೇ ವಯೋಮಾನದಲ್ಲಿ ಸಬ್ಬನಕೋಡಿ ರಾಂಭಟ್ ಅವರಿಂದ ನಾಟ್ಯಭ್ಯಾಸವನ್ನು ಮಾಡಿ ರಂಗಸ್ಥಳವನ್ನು ಪ್ರವೇಶಿಸಿದ್ದಾರೆ.

ಸಂಬಂಧಿಕರಾಗಿರುವ ಸುಣ್ಣಂಬಳ ವಿಶ್ವೇಶ್ವರ ಬಟ್ಟರಿಂದ ಅರ್ಥಗಾರಿಕೆ ಮತ್ತು ರಂಗ ಮಾಹಿತಿಯನ್ನು ಪಡೆದು ಕೊಂಡು ಮೇಳ ತಿರುಗಾಟಕ್ಕೆ ನಾಂದಿ ಹಾಡಿದರು.

ಕಟೀಲು ಮೇಳದಲ್ಲಿ 9 ವರ್ಷ , ಹವ್ಯಾಸಿಯಾಗಿ 5 ವರ್ಷ ಆಮೇಲೆ ಇಡನೀರು ಮೇಳದಲ್ಲಿ 7 ವರ್ಷ ವೇಷಧಾರಿಯಾಗಿ ಸೇವೆ ಮಾಡಿದ ಅನುಭವಿ ಕಲಾವಿದರು ಇವರಾಗಿದ್ದಾರೆ.

ರಾಜ, ನಾಟಕೀಯ ಹಾಗೂ ಬಣದ್ದ ವೇಷಗಳನ್ನು ನಿರ್ವಹಿಸುವ ಇವರು ರಾಮ, ಕುಂಭಕರ್ಣ, ಶುಂಭ, ಭೀಮ, ಹಿರಣ್ಯಕಶ್ಯಪ, ಜಮದಗ್ನಿ, ಅರುಣಾಸುರ, ಮಹಿಷಾಸುರ, ತಾಟಕಿ, ಶೂರ್ಪನಖಿ, ಹನೂಮಂತ, ಅರ್ಜುನ, ದೇವೇಂದ್ರ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ,

ಶ್ರೀಮತಿ ದುರ್ಗಾಪರಮೇಶ್ವರಿಯವರನ್ನು ವರಿಸಿ ಚಿನ್ಮಯನೆಂಬ ಸುಪುತ್ರನನ್ನು ಪಡೆದು ಸಂತೋಷದ ಜೀವನ ನಡೆಸುತ್ತಿರುವರು.

ಕೃಷಿ ಕಾರ್ಯದಲ್ಲೂ ಅನುಭವ ಪಡೆದಿರುವ ಇವರ ಕಲಾ ಸಾಧನೆಗೆ ಫಲಶ್ರುತಿಯಾಗಿ ಕಾಸರಗೋಡು ವಾಣಿನಗರದ ಅಭಿಮಾನ ಬಳಗದಿಂದ ಸಂಮಾನದ ಪುರಸ್ಕಾರವಾಗಿದೆ.



## ರವಿಶಂಕರ್ ವಿ.ಎಸ್.

*"ಮಲೆ ಮನೆ", ಅಂಚೆ ಮಾಡಾವು,*
*ಪುತ್ತೂರು ತಾಲ್ಲೂಕು ಮೊ : 9972771284*
*ಮನೆ : 08251-310787*

ಶ್ರೀ ಧರ್ಮಸ್ಥಳ ಮೇಳದಲ್ಲಿ ತಿರುಗಾಟವನ್ನು ಮಾಡಿ ಖ್ಯಾತ ಹಾಸ್ಯ ಕಲಾವಿದರಾದ ಮಾವ ನಯನ ಕುಮಾರವರ ಪ್ರೇರಣೆಯೊಂದಿಗೆ ಯಕ್ಷಗಾನ ಕ್ಷೇತ್ರವನ್ನು ಪ್ರವೇಶಿಸಿದ ಶ್ರೀ ರವಿಶಂಕರ್ ವಿ. ಎಸ್ ಇವರು ಕಟೀಲು ಮೇಳದ ಹಾಸ್ಯ ಕಲಾವಿದರಾಗಿದ್ದಾರೆ.

ಕಾಸರಗೊಡಿನ ವಳಕ್ಕುಂಜದ ಶ್ರೀ ವಿ. ಸುಬ್ರಹ್ಮಣ್ಯ ಭಟ್ ಮತ್ತು ಶ್ರೀಮತಿ ಲಕ್ಷ್ಮೀ ಅಮ್ಮನವರ ಸುಪುತ್ರರಾದ ಶ್ರೀಯುತ ರವಿಶಂಕರ್ ವಿ.ಎಸ್ ಇವರು 8-3-1972ರಂದು ಜನಿಸಿದರು.

ಪದವಿ ಪೂರ್ಣ ಶಿಕ್ಷಣವನ್ನು ಗಳಿಸಿರುವ ಇವರು ಹವ್ಯಾಸಿ ವೇಷಧಾರಿ ಹಾಗೂ ಅರ್ಥಧಾರಿಗಳಾಗಿದ್ದ ತಂದೆಯವರ ಪ್ರಭಾವದಿಂದ ಯಕ್ಷಗಾನದ ಬಗ್ಗೆ ಪೂರ್ವ ಮಾಹಿತಿಯನ್ನು ಸಂಪಾದಿಸಿದರು.

15ನೇ ವಯಸ್ಸಿಗೆ ಉಂಡಮನೆ ಕೃಷ್ಣ ಭಟ್ ಹಾಗೂ ಮಾವ ನಯನಕುಮಾರರಿಂದ ರಂಗ ತರಬೇತಿಯನ್ನು ಪಡೆದು ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆದರು.

ಕಟೀಲು ಮೇಳದಲ್ಲಿ 11ನೇ ವರ್ಷದ ಸೇವೆಯನ್ನು ಮಾಡುತ್ತಿರುವ ಶ್ರೀಯುತರು ಹಾಸ್ಯ ಮತ್ತು ಇನ್ನಿತರ ಪೋಷಕ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.

ವಿಜಯ, ದಾರುಕ, ಬಾಹುಕ, ನಕ್ಷತ್ರಿಕ, ನಾರದ, ಬ್ರಹ್ಮ, ವಿಷ್ಣು, ರಾಮ, ವಾಲ್ಮೀಕಿ, ಸುಗ್ರೀವ, ಮೂಕಾಸುರ, ಮಕರಂದ, ಚಿತ್ರಗುಪ್ತ, ಮೊದಲಾದ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವರು.

ಮಳೆಗಾಲದಲ್ಲಿ ಉಪವೃತ್ತಿಯಾಗಿ ಕೃಷಿ ಕಾರ್ಯವನ್ನು ಮಾಡುವ ಇವರ ಹಾಸ್ಯ ಪಾತ್ರದ ನಿರ್ವಹಣೆಯಲ್ಲಿ ಪೌರಾಣಿಕ ಪ್ರಜ್ಞೆಯ ಲಕ್ಷಣವಿದೆ.



## ರಮೇಶ ಕುಲಶೇಖರ

*ಅಮ್ಮ ಕೃಪಾ, ಕರಿಯಂಗಳ ಗ್ರಾಮ*
*ಪೊಳಲಿ ಅಂಚೆ – ಬಡಕಬೈಲು*
*ಬಂಟ್ವಾಳ ತಾಲೂಕು*
*ಮೊಬೈಲ್: 9449101156*

ಕರ್ನಾಟಕ ಮೇಳದ ಪ್ರಭಾವ ಹಾಗೂ ವೀರಪ್ಪ ಕಾನಡ್ಕ ಅವರ ಪ್ರೋತ್ಸಾಹದೊಂದಿಗೆ ಯಕ್ಷರಂಗದಲ್ಲಿ ಪ್ರೌಢಿಮೆಯನ್ನು ಸಾಧಿಸಿದ ಶ್ರೀ ರಮೇಶ ಕುಲಶೇಖರ ಇವರು ಸಸಿಹಿತ್ಲು ಭಗವತೀ ಮೇಳದ ಕಲಾವಿದರಾಗಿದ್ದಾರೆ.

ಶ್ರೀ ಮುಂಡಪ್ಪ ಪೂಜಾರಿ ಹಾಗೂ ಶ್ರೀಮತಿ ದೇವಕಿ ದಂಪತಿಯ ಸುಪುತ್ರರಾಗಿರುವ ಇವರು ವಿಟ್ಲದಲ್ಲಿ 26–07–1966ರಲ್ಲಿ ಜನಿಸಿದರು.

6ನೇ ತರಗತಿಯ ತನಕ ವಿದ್ಯಾರ್ಹತೆಯುಳ್ಳ ಇವರು 13ನೇ ವರ್ಷದಲ್ಲಿ ಯಕ್ಷರಂಗವನ್ನು ಪ್ರವೇಶಿಸಿದರು. ಮುಂಡಪ್ಪ ಕೆಮ್ಮುಂಜೆ ಹಾಗೂ ಜಪ್ಪು ದಯಾನಂದ ಶೆಟ್ಟಿ ಇವರಿಂದ ನಾಟ್ಯಾಭ್ಯಾಸವನ್ನು ಮಾಡಿರುವರು. ಕೋಳ್ಯೂರು ಡಾ॥ ರಾಮ ಚಂದ್ರ ರಾವ್ ಹಾಗೂ ಪುಂಡರೀಕಾಕ್ಷಉಪಾಧ್ಯಾಯ ಇವರ ಸ್ತ್ರೀ ಪಾತ್ರಗಳನ್ನು ನೋಡಿ ಅವರ ಆದರ್ಶವನ್ನು ಅನುಸರಿಸಿದ್ದಾರೆ.

ಇವರು ಕುಲಶೇಖರದ ಶ್ರೀ ಸುಬ್ರಹ್ಮಣ್ಯೇಶ್ವರ ಯಕ್ಷಗಾನ ಮಂಡಳಿಯ ಸಂಘಟಕರಾಗಿ 18 ವರ್ಷ ದುಡಿದು ಅನಂತರ ತಲಕಳ ಮೇಳದಲ್ಲಿ 5 ವರ್ಷ ತಿರುಗಾಟ ಮಾಡಿರುವರು.

ಸುಂಕದಕಟ್ಟೆ ಹಾಗೂ ಬಪ್ಪನಾಡು ಮೇಳಗಳಲ್ಲಿ ಒಂದೊಂದು ವರ್ಷಗಳ ಕಲಾ ಸೇವೆ ಮಾಡಿ ಭಗವತಿ ಮೇಳವನ್ನು ಸೇರಿದವರು ಕಳೆದ 12 ವರ್ಷಗಳಿಂದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಶ್ರೀದೇವಿ, ಮೋಹಿನಿ, ಶಶಿಪ್ರಭೆ, ಕಿನ್ನಿದಾರು, ಸೋಮಲಾ ದೇವಿ ಮುಂತಾದ ಸ್ತ್ರೀ ಪಾತ್ರಗಳನ್ನು, ಕೃಷ್ಣ ಈಶ್ವರ, ವಿಷ್ಣು, ಕೋಟಿ ಇತ್ಯಾದಿ ಪುರುಷ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಕೇವಲ ಕಲಾವಿದರಾಗದೆ ಯಕ್ಷಗಾನ ಸಂಘಟಕರಾಗಿಯೂ, ಭಗವತಿ ಮೇಳದ ಪ್ರಬಂಧಕರಾಗಿಯೂ ಕಾರ್ಯ ನಿರ್ವಹಣೆ ಮಾಡಿ ಕೀರ್ತಿಗೆ ಪಾತ್ರರಾಗಿದ್ದಾರೆ.

ಸ್ವಂತವಾಗಿ ಕಲಾ ಆರ್ಟ್ಸ್ ಸಂಸ್ಥೆಯನ್ನು ಹೊಂದಿದ್ದ ಇವರು ಪ್ರಸಾಧನ ಕಲೆಯಲ್ಲಿಯೂ ಪಳಗಿದ್ದಾರೆ. ಹವ್ಯಾಸಿ ಅರ್ಥಧಾರಿಯಾಗಿ ಹಲವು ತಾಳಮದ್ದಳೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಶ್ರೀಮತಿ ಮಾಲತಿಯವರ ಕೈಹಿಡಿದು ಮಕ್ಕಳಾದ ಕು. ವಾಣಿಶ್ರೀ, ಕು. ಶುಭಶ್ರೀ ಹಾಗೂ ಪೃಥ್ವಿರಾಜ್ ಇವರೊಂದಿಗೆ ಸುಖೀ ಜೀವನವನ್ನು ನಡೆಸುತ್ತಿದ್ದಾರೆ.

ಶ್ರೀಯುತರು ಕಾಂತಾವರ, ಮುಂಬಯಿ ತೀಯಾ ಸಮಾಜ, ಸಸಿಹಿತ್ಲು ಭಗವತಿ ದೇವಸ್ಥಾನ ಹಾಗೂ ದುಬಾಯಿಯ ಬಿಲ್ಲವ ಸಂಘ ಇಲ್ಲೆಲ್ಲಾ ಅಭಿಮಾನಿ ಬಳಗಗಳಿಂದ ಸಂಮಾನಿತರಾಗಿದ್ದಾರೆ.



## ರಮೇಶ್ ಪಟ್ರಮೆ

*ಕುಕ್ಕೇಲಿ ಮನೆ*
*ಪಟ್ರಮೆ ಗ್ರಾಮ ಮತ್ತು ಅಂಚೆ,*
*ಬೆಳ್ತಂಗಡಿ ತಾಲೂಕು – **574198,***
*ಮೊ : **8722662562***

ಸ್ವಂತಾಸಕ್ತಿಯಿಂದ ರಂಗಪ್ರವೇಶ ಮಾಡಿದ ರಮೇಶ್ ಪಟ್ರಮೆ ಇವರು ಪ್ರಸಕ್ತ ಸಾಲಿನಲ್ಲಿ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದರೆ.

15–10–1982ರಂದು ಉಪ್ಪಿನಂಗಡಿಯಲ್ಲಿ ಪದ್ಮಗೌಡ ಮತ್ತು ದರ್ಣಮ್ಮ ದಂಪತಿಯ ಸುಪುತ್ರರಾಗಿ ಇವರು ಜನಿಸಿದರು.

7ನೇ ತರಗತಿವರೆಗೆ ವ್ಯಾಸಂಗ ಮಾಡಿ ಯಕ್ಷಗಾನದ ಮೇಲಿನ ಆಸಕ್ತಿಯಿಂದ ದಿವಾನ ಶಿವಶಂಕರ ಭಟ್ ಅವರಲ್ಲಿ ನಾಟ್ಯಭ್ಯಾಸ ಮಾಡಿದರು.

ಆರಂಭದಲ್ಲಿ ಕಟೀಲು ಮೇಳವನ್ನು ಸೇರಿದ ಇವರು 8 ವರ್ಷಗಳ ತಿರುಗಾಟವನ್ನು ನಡೆಸಿದರು. ಆಮೇಲೆ ಎಡನೀರು ಮೇಳದಲ್ಲಿ 1 ವರ್ಷ ತಿರುಗಾಟ ಮಾಡಿದ ರಮೇಶರು ಕಟೀಲು ಮೇಳವನ್ನು ಮತ್ತೆ ಸೇರಿ ತಿರುಗಾಟವನ್ನು ಮುನ್ನಡೆಸಿದ್ದಾರೆ.

ವಿಭೀಷಣ, ಲಕ್ಷ್ಮಣ, ಯಕ್ಷ, ಕಮಲಗಂಧಿನಿ, ಮಾಲಿನಿ, ಆದಿಮಾಯೆ ಮೊದಲಾದ ಪಾತ್ರಗಳನ್ನು ಮಾಡಿ ಮನ್ನಣೆಗೆ ಪಾತ್ರರಾಗಿದ್ದಾರೆ.

ಪ್ರವೃತ್ತಿಯಲ್ಲಿ ಕೃಷಿಕರಾಗಿರುವ ಇವರು ಕಲಾ ಸಾಧಕನಾಗಬೇಕೆಂಬ ಆಶಯವನ್ನು ಆತುಕೊಂಡಿದ್ದಾರೆ.



## ರಮೇಶ ಬೆಳಾಲು

*'ಕೂಡಿಗೆ ಮನೆ', ಬೆಳಾಲು ಗ್ರಾಮ ಮತ್ತು ಅಂಚೆ*
*ಬೆಳ್ತಂಗಡಿ ತಾಲೂಕು – 574241*
*ಮೊ ; 9481956224*

ಸ್ತ್ರೀ ಮತ್ತು ಪುಂಡು ವೇಷಗಳನ್ನು ಮಾಡುತ್ತಾ ಬೆಳೆಯುತ್ತಿರುವ ಶ್ರೀ ರಮೇಶ ಬೆಳಾಲು ಇವರು ಪ್ರಸ್ತುತ ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಾ ಇದ್ದಾರೆ.

1984ರಲ್ಲಿ ವೀರಪ್ಪ ಗೌಡ ಮತ್ತು ಹೊನ್ನಮ್ಮ ದಂಪತಿಯ ಸುಪುತ್ರರಾಗಿ ಬೆಳಾಲಿನಲ್ಲಿ ಹುಟ್ಟಿದ ಇವರು, 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವರು. 15ನೇ ವರ್ಷದಲ್ಲಿ ವೇಷವನ್ನು ಮಾಡಬೇಕೆಂಬ ಹಂಬಲದಿಂದ ಯಕ್ಷಗಾನ ಕಲೆಯ ಮೇಲೆ ಆಕರ್ಷಿತರಾಗಿ ಅಧ್ಯಯನಕ್ಕೆ ಮನ ಮಾಡಿದರು.

ಶ್ರೀ ಸಬ್ಬನಕೋಡಿ ಕೃಷ್ಣ ಭಟ್ಟರಿಂದ ನಾಟ್ಯಾಭ್ಯಾಸವನ್ನು ಮಾಡಿ ಮುಖಕ್ಕೆ ಬಣ್ಣ ಹಚ್ಚಿ ರಂಗ ಪ್ರವೇಶ ಮಾಡಿದರು.

ಶ್ರೀ ಧರ್ಮಸ್ಥಳ ಮೇಳದಲ್ಲಿ 1 ವರ್ಷದ ತಿರುಗಾಟವನ್ನು ಪೂರೈಸಿ ಅನಂತರ ಸುರತ್ಕಲ್ ಮೇಳ – 1 ವರ್ಷ, ಮಂಗಳಾದೇವಿ ಮೇಳ – 4 ವರ್ಷ, ಎಡನೀರು ಮೇಳ – 3 ವರ್ಷ ಹಾಗೂ ಹೊಸನಗರ ಮೇಳ – 3 ವರ್ಷ ಒಟ್ಟು 12 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಮಾಲಿನಿ, ಸೀತೆ, ಶ್ರೀದೇವಿ, ಪ್ರಮೀಳೆ, ಕೃಷ್ಣ, ಲವ, ರತಿ, ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.



# ರತ್ನಾಕರ ಆಚಾರ್ ಪಡುಬಿದ್ರೆ

*"ಹಿರೆಬೆಟ್ಟು" , ನರ್ಸಾಲು ಗ್ರಾಮ,*
*ಪಡುಬಿದ್ರೆ ಅಂಚೆ, ಉಡುಪಿ.*
*ಮೊ : 9242166557.*

ಬಪ್ಪನಾಡು ಮೇಳದಲ್ಲಿ ಯಕ್ಷಗಾನದ ತಿರುಗಾಟವನ್ನು ನಡೆಸುತ್ತಿದ್ದು ಹಾಸ್ಯ, ರಾಜವೇಷ, ಪುಂಡುವೇಷ ಹಾಗೂ ಪೋಷಕ ವೇಷಗಳಲ್ಲಿ ಪರಿಣತಿಯನ್ನು ಹೊಂದಿರುವ ರತ್ನಾಕರ ಆಚಾರ್ ಹಿರಿಯ ಕಲಾವಿದರಾಗಿದ್ದಾರೆ.

ವಾಸುದೇವ ಆಚಾರ್ಯ ಹಾಗೂ ಸರಸ್ವತಿ ದಂಪತಿಯ ಸುಪುತ್ರರಾಗಿ 1954ರಲ್ಲಿ ಉಡುಪಿಯ ಸಮೀಪವಿರುವ ಪಡುಬಿದ್ರೆ ಎಂಬಲ್ಲಿ ಜನಿಸಿದರು.

5ನೇ ತರಗತಿಯ ತನಕ ಶಾಲಾ ವಿದ್ಯಾಭ್ಯಾಸವನ್ನು ಪಡೆದ ಇವರು 20ನೇ ವರ್ಷದಲ್ಲಿ ಯಕ್ಷಗಾನದ ಕಲಾ ಆಕರ್ಷಣೆಗೆ ಒಳಗಾಗಿ ಶ್ರೀ ಪಡ್ರೆ ಚಂದು ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಕಲಾರಂಗಕ್ಕೆ ಪ್ರವೇಶಿಸಿದರು.

ಮೊದಲಾಗಿ ಸುಂಕದಕಟ್ಟೆ ಮೇಳ ಸೇರಿದ ಇವರು 1 ವರ್ಷದ ತಿರುಗಾಟವನ್ನು ಮಾಡಿ ಆದಿ ಸುಬ್ರಹ್ಮಣ್ಯ ಮೇಳದಲ್ಲಿ 3 ವರ್ಷ, ಕೊಲ್ಲೂರು ಮೇಳದಲ್ಲಿ 2 ವರ್ಷ, ಭಗವತಿ ಮೇಳದಲ್ಲಿ 7 ವರ್ಷ, ಬಪ್ಪನಾಡು ಮೇಳದಲ್ಲಿ 2 ವರ್ಷದ ಕಲಾ ಸೇವೆಯನ್ನು ಮಾಡಿದ್ದಾರೆ. ಹವ್ಯಾಸಿಯಾಗಿ ಸುಮಾರು 10–12 ವರ್ಷಗಳವರೆಗೆ ಯಕ್ಷಗಾನ ಕಲಾ ರಂಗದಲ್ಲಿ ಸೇವೆಯನ್ನು ಮಾಡಿದ ಇವರು ದಾರುಕ, ಮಕರಂದ, ಕೌಂಡ್ಲಿಕ, ವ್ಯಾಘ್ರಾಸುರ ಮುಂತಾದ ಪಾತ್ರಗಳನ್ನು ಮಾಡುವುದರಲ್ಲಿ ಸೈ ಎನಿಸಿಕೊಂಡಿದ್ದಾರೆ.

ರತ್ನಾಕರ ಆಚಾರ್ ಇವರು ಸುನಂದ ಅವರನ್ನು ವಿವಾಹವಾಗಿ ಶ್ವೇತ, ರೀತಾ ಹಾಗೂ ನಿತಿನ್ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ. ಇವರ ಸುಪುತ್ರ ಪುಂಡು ವೇಷ ಮಾಡುವುದರಲ್ಲಿ ಪರಿಣತಿಯನ್ನು ಹೊಂದಿದ್ದಾರೆ.

ಕಾಂತಾವರ ಸ್ಪರ್ಧೆಯಲ್ಲಿ ಇವರ ದಾರುಕನ ಹಾಸ್ಯ ವೇಷಕ್ಕೆ ವೈಯುಕ್ತಿಕ ಬಹುಮಾನ ಲಭಿಸಿದೆ. ಇವರು ಮಾಡಿದ ಕಲಾಸೇವೆಗೆ ಗೌರವದ ಪುರಸ್ಕಾರಗಳು ಕೂಡಾ ಲಭಿಸಿವೆ.



## ರವಿಕುಮಾರ್ ಬಿ.

*ಮಂಚಿ ಗ್ರಾಮ ಮತ್ತು ಅಂಚೆ*
*ಬಂಟ್ವಾಳ ತಾಲೂಕು ದ. ಕ*
*ಮೊ : 9741151283.*

ಸಮರ್ಥ ಭಾಗವತನಾಗಿ ಬೆಳೆಯುವ ಸದಾಶಯವನ್ನು ಹೊಂದಿರುವ ಯುವಕಲಾವಿದರಾದ ರವಿ ಕುಮಾರ್. ಬಿ ಅವರು ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಬಂಟ್ವಾಳ ತಾಲೂಕಿನ ಮಂಚಿ ಗ್ರಾಮದ ಶ್ರೀ ಜನಾರ್ದನ ನಾಯ್ಕ್ ಹಾಗೂ ಶ್ರೀಮತಿ ಶಾರದಾ ದಂಪತಿಯ ಸುಪುತ್ರನಾಗಿರುವ ರವಿಕುಮಾರ್ ಇವರು 07-05-1978ರಲ್ಲಿ ಬಾಕಿಲಪದವು (ಅಡ್ಯನಡ್ಕ) ಎಂಬಲ್ಲಿ ಜನಿಸಿದರು.

ಎಸ್.ಎಸ್.ಎಲ್.ಸಿಯ ಹಂತದ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 18ನೇ ವರ್ಷದಲ್ಲಿ ಸ್ವಂತಾಸಕ್ತಿಯಿಂದಲೇ ಯಕ್ಷಗಾನದ ಭಾಗವತಿಕೆಯನ್ನು ಕಲಿಯಲು ಇಚ್ಚಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾ ಕೇಂದ್ರವನ್ನು ಸೇರಿ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯರಲ್ಲಿ ತಾಳ ಪಾಠ ಹಾಗೂ ರಾಗ ಜ್ಞಾನವನ್ನು ಸಂಪಾದಿಸಿದರು.

ಸಂಗೀತಗಾರರಾಗಿ ಧರ್ಮಸ್ಥಳ ಮೇಳದಲ್ಲಿ 2 ವರ್ಷಗಳ ತಿರುಗಾಟವನ್ನು ಪೂರೈಸಿ ಕಟೀಲು ಮೇಳವನ್ನು ಸೇರಿದ ಇವರು ಈಗಾಗಲೇ 11ನೇ ವರ್ಷದ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

ಮಡದಿಯಾದ ಶ್ರೀಮತಿ ಅಕ್ಷತಾ ಹಾಗೂ ಮಗಳಾದ ರಕ್ಷಾ ಇವರೊಂದಿಗೆ ತಮ್ಮ ಸುಖೀ ಸಂಸಾರವನ್ನು ನಡೆಸುತ್ತಾ ಬಂದಿರುವ ಇವರು ಕೃಷಿಕ ಮನೆತನಕ್ಕೆ ಸೇರಿದವರಾಗಿದ್ದಾರೆ.



# ರಾಮ್ ಭಟ್ ಕುದ್ರೆಕೂಡ್ಲು

*ಪೈವಳಿಕೆ ಗ್ರಾಮ*
*ಕಾಸರಗೋಡು.*

ಮದ್ದಳೆಗಾರರಾಗಿ ಉತ್ತಮ ಕೈಚಳಕದ ನುಡಿತ ಬಡಿತಗಳಿಂದ ಸತ್ಕೀರ್ತಿಯನ್ನು ಸಂಪಾದಿಸಿರುವ ಶ್ರೀ ಕುದ್ರೆಕೂಡ್ಲು ರಾಮ್ ಭಟ್ ಇವರು ನಿವೃತ್ತ ಜೀವನವನ್ನು ನಡೆಸುತ್ತಿದ್ದಾರೆ.

ಕಾಸರಗೋಡು ಜಿಲ್ಲೆಯ ಪೈವಳಿಕೆ ಗ್ರಾಮದಲ್ಲಿ ರಾಮ್ ಭಟ್ ಹಾಗೂ ಶ್ರೀಮತಿ ಸರಸ್ವತಿ ದಂಪತಿಯ ಪುತ್ರರಾಗಿ 1940ರಲ್ಲಿ ಇವರು ಜನಿಸಿದರು.

ತಂದೆಯವರಿಂದಲೇ ಯಕ್ಷಗಾನ ಹಿಮ್ಮೇಳದ ಅಭ್ಯಾಸವನ್ನು ಮಾಡಿದ ಇವರು ಶ್ರೀಕೃಷ್ಣ ಅಯ್ಯಾರರಲ್ಲಿ ಮೃದಂಗವಾದನದ ನುಡಿತಗಳನ್ನರಿತು ಕಲಿಕೆಯೊಂದಿಗೆ ಪ್ರವೀಣರಾದರು.

ಧರ್ಮಸ್ಥಳ ಮೇಳ, ಕುಂಡಾವು ಮೇಳ, ಇರಾಮೇಳ, ಸುಂಕದಕಟ್ಟೆ ಮೇಳ, ಕೂಡ್ಲು ಮೇಳ, ಮಧೂರು ಮೇಳ, ಬಪ್ಪನಾಡು ಮೇಳ ಮತ್ತು ಕಟೀಲು ಮೇಳಗಳಲ್ಲಿ 4 ದಶಕಗಳಿಗೂ ಮಿಕ್ಕಿದ ಕಲಾಸೇವೆಯನ್ನು ಮಾಡಿದ್ದಾರೆ. ಯಕ್ಷಗಾನ ಕಲೆಯ ಬಗ್ಗೆ ಸಾಕಷ್ಟು ಅನುಭವವನ್ನು ಸಂಪಾದಿಸಿರುವ ಇವರು ಉಳ್ಳಾಲ ಮೋಹನ ಕುಮಾರರ ನೃತ್ಯ ಸಮೂಹದಲ್ಲಿ ಮೃದಂಗ ವಾದಕರಾಗಿ ಕಲಾಸೇವೆಯನ್ನು ಮಾಡಿದ್ದಾರೆ.

ಆಸಕ್ತ ವಿದ್ಯಾರ್ಥಿಗಳಿಗೆ ಹಿಮ್ಮೇಳದ ಮಾರ್ಗದರ್ಶನವನ್ನು ಮಾಡಿರುವ ರಾಮಭಟ್ಟರು ಹಲವು ಮಂದಿ ಶಿಷ್ಯರನ್ನು ಪ್ರತಿಭಾವಂತರನ್ನಾಗಿ ರಂಗಕ್ಕೇರಿಸಿ, ಯಕ್ಷಗಾನದ ಸಮರ್ಥ ಗುರುಗಳಾಗಿ ಮನ್ನಣೆಗೆ ಒಳಗಾಗಿದ್ದಾರೆ.

ಮೇಳ ತಿರುಗಾಟದಲ್ಲಿ ಹಿರಿಯ ಕಲಾವಿದರಿಂದ ಅನುಭವವನ್ನು ಸಂಪಾದಿಸುತ್ತಾ ಬೆಳೆದ ಇವರು ತಮ್ಮ ಅನುಭವಧಾರೆಯನ್ನು ಕಿರಿಯಕಲಾವಿದರಿಗೆ ಮಾಡಿ ಕೃತಾರ್ಥರಾಗಿದ್ದಾರೆ.

ಹೊಂದಾಣಿಕೆಯ ಗುಣಧರ್ಮದವರು ಇವರಾಗಿದ್ದುದರಿಂದ ಭಾಗವತರಿಗೆ ಮತ್ತು ಮುಮ್ಮೇಳದ ಸಹಕಲಾವಿದರೊಂದಿಗೆ ಸ್ನೇಹ ಜೀವಿಯಾಗಿ ಬೆರೆತು ತನ್ನ ಕಸುಬನ್ನು ಮೆರೆಸುತ್ತಾ ಬಂದಿದ್ದಾರೆ.

ಶ್ರೀಮತಿ ಉಮಾ ಎನ್ನುವವರನ್ನು ವರಿಸಿ ಈರ್ವರು ಸುಪುತ್ರರು ಹಾಗೂ ಓರ್ವಳು ಸುಪುತ್ರಿಯನ್ನು ಪಡೆದು ಸಾರ್ಥಕರಾಗಿದ್ದಾರೆ. ಇವರ ಸುಪುತ್ರರಾದ ರಾಮಮೂರ್ತಿ ಭಟ್ಟರು ಉತ್ತಮ ಹಿಮ್ಮೇಳವಾದಕರಾಗಿದ್ದಾರೆ.

ಕಲಾ ನಿಷ್ಠಾವಂತರಾಗಿ ಯಕ್ಷಗಾನ ಕ್ಷೇತ್ರಕ್ಕೆ ತನ್ನನ್ನು ತಾನೇ ಮುಡಿಪಾಗಿಟ್ಟು ಶ್ರದ್ಧೆಯಲ್ಲಿ ಸೇವೆಯನ್ನು ಸಲ್ಲಿಸಿದ ಇವರ ಸಾಧನೆಯನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ. ಹವ್ಯಾಸಿ ಬಳಗದ ದಶಮಾನ ಸಂಮಾನ ಶತಕದ ಗೌರವ ಕೂಡಾ ಇವರಿಗೆ ಲಭಿಸಿದೆ.



## ರಾಮ್ ಭಟ್ ಸಬ್ಬನ ಕೋಡಿ

*ಸಬ್ಬನ ಕೋಡಿ ಮನೆ. ಪೆರ್ಲ,*
*ಕಾಸರಗೋಡು ತಾಲೂಕು 671552.*
*ಮೊ ; 09645263928*

ಯಕ್ಷಗಾನ ರಂಗದ ಚತುರ ಕಲಾವಿದರಾದ ಶ್ರೀಯುತ ಸಬ್ಬನಕೋಡಿ ರಾಮ್‌ಭಟ್ಟರು ನಿತ್ಯವೇಷದಿಂದ ತೊಡಗಿ ಕಲಾ ಸೇವೆಯನ್ನು ಮಾಡುತ್ತಾ ಮುಂಡುವೇಷಧಾರಿಯಾಗಿ ಬೆಳೆದು ಮೇಳದಿಂದ ನಿವೃತ್ತರಾಗಿದ್ದಾರೆ.

1962ರಲ್ಲಿ ಪುತ್ತೂರು ಕಬಕ ಗ್ರಾಮದ ಸಬ್ಬನಕೋಡಿ ಎಂಬಲ್ಲಿ ನರಸಿಂಹ ಭಟ್ ಹಾಗೂ ಸಾವಿತ್ರಿ ದಂಪತಿಗೆ ಪುತ್ರನಾಗಿ ಜನಿಸಿದರು.

ಇವರು ವಿಟ್ಲ ಬಳಿಯ ಎತ್ತುಗಲ್ಲುವಿನ ಅಜ್ಜನ ಮನೆಯಲ್ಲಿ ಬೆಳೆದಾಗ ಬಡತನ, ಆರ್ಥಿಕ ಅಡಚಣೆ ಕಾರಣ ದಿಂದಾಗಿ ಏಳನೇ ತರಗತಿಯುವರೆಗೆ ಶಿಕ್ಷಣವನ್ನು ಸೀಮಿತಗೊಳಿಸಬೇಕಾಗಿ ಬಂತು.

ಶಾಲಾ ಸಮಯದಲ್ಲಿ ಯಕ್ಷಗಾನದ ಗೀಳು ಬೆಳೆಸಿಕೊಂಡಿದ್ದ ಇವರು ಅಧ್ಯಾಪಕ ಪದ್ಮನಾಭ ರಾವ್ ಅವರಿಂದ ಯಕ್ಷಗಾನದ ಬಗ್ಗೆ ಮಾಹಿತಿ ಪಡೆದು ಕಲಾಕರ್ಷಣೆಗೆ ಒಳಗಾದರು.

ಧರ್ಮಸ್ಥಳದ ಲಲಿತಾಕಲಾ ಕೇಂದ್ರದಲ್ಲಿ ಯಕ್ಷಗಾನ ನಾಟ್ಯ ತರಬೇತಿಗಾಗಿ ಸೇರ್ಪಡೆಗೊಂಡು ಯಕ್ಷಗಾನದ ನಾಟ್ಯವನ್ನು ಅಭ್ಯಾಸಿಸಿದರು.

ಕೇಂದ್ರದ ಗುರುಗಳಾಗಿದ್ದ ಪಡ್ರೆ ಚಂದು ಅವರಿಂದ ತರಬೇತಿ ಪಡೆದು ಪಳಗಿದ ಇವರು ಅದೇ ವರ್ಷ ಕರ್ನಾಟಕ ಮೇಳವನ್ನು ಸೇರಿದರು. ಅನಂತರ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸಿದರು. 13 ವರ್ಷಗಳ ತನಕ ಮೇಳ ತಿರುಗಾಟವನ್ನು ಮಾಡಿದ ಇವರು ತನ್ನದೇ ಉದ್ದೇಶದ ಈಡೆರಿಕೆಗಾಗಿ ತಿರುಗಾಟವನ್ನು ನಿಲ್ಲಿಸಿದರು.

ಹಿರಿಯ ಕಲಾವಿದರಾದ ಪಡ್ರೆ ಚಂದು, ಅಳಕೆ ರಾಮಯ್ಯ ರೈ, ಬೋಳಾರ ನಾರಾಯಣ ಶೆಟ್ಟಿ, ರಾಮದಾಸ ಸಾಮಗ, ಮಿಜಾರು ಅಣ್ಣಪ್ಪ, ಕೋಳ್ಯೂರು ರಾಮಚಂದ್ರ ರಾವ್ ಮೊದಲಾದವರೊಂದಿಗೆ 13 ವರ್ಷಗಳ ಒಡನಾಟದಿಂದ ಪ್ರೌಢಿಮೆಯನ್ನು ಸಾಧಿಸಿ ಪ್ರಭುದ್ಧರಾದರು.

ಅಭಿಮನ್ಯು, ಕೃಷ್ಣ, ಬಭ್ರುವಾಹನ, ಲಕ್ಷ್ಮಣ, ಕುಶ, ಶ್ವೇತ ಕುವಾರ ವೊದಲಾದ ಪಾತ್ರವನ್ನು ಉತ್ತಮವಾಗಿ ನಿರ್ವಹಿಸಿ ಕಲಾಭಿಮಾನಿಗಳಿಂದ ಮನ್ನಣೆಯನ್ನು ಗಳಿಸಿರುತ್ತಾರೆ.


1985 ರಿಂದ ನಾಟ್ಯ ತರಬೇತಿಯನ್ನು ನಡೆಸಲು ಪ್ರಾರಂಭಿಸಿದರು. ಕಾಸರಗೋಡು ಮತ್ತು ದ.ಕ. ಜಿಲ್ಲೆಯ ವಿವಿಧೆಡೆ ತರಗತಿಯನ್ನೇರ್ಪಡಿಸಿ ತನ್ನ ಶಿಷ್ಯ ವರ್ಗವನ್ನು ಬೆಳೆಸಿದರು.

1987ರಲ್ಲಿ ಪೆರ್ಲದಲ್ಲಿ ವಾಸ್ತವ್ಯ ಹೂಡಿದ ಅವರು ಗುರು ಪಡ್ರೆ ಚಂದು ಅವರ ಹೆಸರಲ್ಲಿ ಸ್ಮಾರಕ ನಿರ್ಮಿಸುವ ಕನಸು ಹೊತ್ತು ಕಾರ್ಯೋನ್ಮುಖರಾಗಿ ಯಶಸ್ಸನ್ನು ಪಡೆದರು.

30ವರ್ಷದ ಯಕ್ಷಗಾನ ವೃತ್ತಿಯಲ್ಲಿ ಒಂದು ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಗೆ ಯಕ್ಷಗಾನ ನಾಟ್ಯ ತರಬೇತಿ ನೀಡಿದ ಹಿರಿಮೆ ಇವರದ್ದಾಗಿದೆ.

ಆಧುನಿಕತೆಯ ಪ್ರಭಾವದಲ್ಲಿ ಸೊರಗುತ್ತಿರುವ ಯಕ್ಷಗಾನದ ಬಗ್ಗೆ ಜನರಲ್ಲಿ ಆಸಕ್ತಿ ಮೂಡಿಸುವುದಕ್ಕಾಗಿ ಕೇಂದ್ರದ ಮುಖೇನ ಆಕಾಂಕ್ಷಿಗಳಿಗೆ ಉಚಿತ ತರಬೇತಿ ನೀಡಲು ಮುಂದಾಗಿರುವ ಸಬ್ಬನ ಕೋಡಿ ರಾಂ ಭಟ್‌ರ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಇವರ ಕಲಾಸಾಧನೆಗೆ ಅನೇಕ ಸಂಮಾನ, ಪುರಸ್ಕಾರಗಳು ಲಭಿಸಿವೆ.



# ರಾಧಕೃಷ್ಣ ನಾವಡ ಮಧೂರು

*"ಪಂದಪ್ಪಿಲ" ಮನೆ, "ಬನ್ನೂರು" ಮಧೂರು ಅಂಚೆ,*
*ಕಾಸರಗೋಡು–670124*
*ಮೊಬೈಲ್ : 09448265723 / 09037220250.*

ಯಕ್ಷಗಾನ ರಾಜವೇಷ ಹಾಗೂ ನಾಟಕೀಯ ವೇಷದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿಯನ್ನು ತೋರಿಸಿ ಜನಮೆಚ್ಚುಗೆಯನ್ನು ಪಡೆದ ರಾಧಕೃಷ್ಣ ನಾವಡರವರು ಎಡನೀರು ಯಕ್ಷಗಾನ ಮಂಡಳಿಯ ಕಲಾವಿದರಾಗಿದ್ದಾರೆ.

ಕೇರಳ ರಾಜ್ಯದ ಕಾಸರಗೊಡು ಜಿಲ್ಲೆಯ ಮಧೂರು ಗ್ರಾಮದಲ್ಲಿ ವಿಷ್ಣುನಾವಡ ಬಿ. ಹಾಗೂ ಶ್ರೀಮತಿ ಲೀಲಾವತಿ ದಂಪತಿಯ ಸುಪುತ್ರನಾಗಿ ದಿನಾಂಕ 01–08–1962ರಲ್ಲಿ ಜನಿಸಿದರು.

ಪದವಿ ಪೂರ್ವ ಶಿಕ್ಷಣವನ್ನು ಪಡೆದ ಇವರು ಯಕ್ಷಗಾನವನ್ನು ನೋಡಿ ಹಾಗೂ ತಂದೆಯ ಪ್ರೋತ್ಸಾಹದಿಂದ ಹೆಜ್ಜೆಗಾರಿಕೆಯನ್ನು ಕೂಡ್ಲು ನಾರಾಯಣ ಬಲ್ಯಾಯ ಇವರಿಂದ ಕಲಿತರು.

ಕುಡ್ಲು ಮೇಳ– 2 ವರ್ಷ, ಪುತ್ತೂರು ಮೇಳ– 2 ವರ್ಷ, ಸುರತ್ಕಲ್ ಮೇಳ– 2, ಬಪ್ಪನಾಡು ಮೇಳ– 6, ಕಾಂತಾವರ ಮೇಳ– 1, ಸಾಲಿಗ್ರಾಮ ಮೇಳ– 1 ವರ್ಷ, ಕುಂಟಾರು ಮೇಳ– 2 ವರ್ಷ, ಕರ್ನಾಟಕ ಮೇಳ– 1 ವರ್ಷ, ಎಡನೀರು ಮೇಳದ– 6 ಹೀಗೆ ಇವರು ಅನೇಕ ಮೇಳಗಳಲ್ಲಿ ಕಲಾ ಸೇವೆಯನ್ನು ಮಾಡಿದ್ದಾರೆ.

ಇವರ ಮನೆತನದವರು ಕೂಡ ಯಕ್ಷಗಾನ ಸೇವೆಯನ್ನು ಮಾಡುತ್ತಾ ಇದ್ದರೆ. ಅವರಲ್ಲಿ ಪ್ರಮುಖರು ಶ್ರೀ ಸುಬ್ರಹ್ಮಣ್ಯ ಹೊಳ್ಳ (ಭಾವ), ಹಾಗೂ ಉದಯ ನಾವಡ (ತಮ್ಮ) ತೆಂಕು ತಿಟ್ಟಿನ ಪ್ರಭುದ್ಧ ಕಲಾವಿದರಾಗಿದ್ದಾರೆ.

ಖಳ ಪಾತ್ರಕ್ಕೆ ಒಪ್ಪುವ ಆಳಂಗವನ್ನು ಹೊಂದಿದ್ದು ಕೌರವ, ದುಶ್ಯಾಸನ, ನಾಟಕೀಯ ಭೀಮ, ನಾಟಕೀಯ ರಾವಣ ಇತ್ಯಾದಿ ಪುರಾಣ ಪ್ರಸಂಗದ ಪಾತ್ರಗಳು ಹಾಗೂ ತುಳು ಪ್ರಸಂಗದ ಖಳ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸುತ್ತಾರೆ.

ಆಸಕ್ತರಿಗೆ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿ ರಂಗ ಮಾಹಿತಿಯನ್ನು ಹೇಳಿಕೊಟ್ಟಿದ್ದಾರೆ. ಇವರು ಯಕ್ಷಗಾನದ ಜೊತೆಗೆ ಉಪವೃತ್ತಿಯಾಗಿ ಕೃಷಿಯನ್ನು ಅವಲಂಬಿಸಿದ್ದಾರೆ.

ಶ್ರೀಮತಿ ಜಯಲಕ್ಷ್ಮಿ ಕೆ. ಇವರನ್ನು ವರಿಸಿರುವ ಇವರು ನೇತ್ರಾ, ವಿನಾಯಕ ಹಾಗೂ ಮುರಳೀಧರ ಎಂಬ ಮೂವರು ಮಕ್ಕಳನ್ನು ಪಡೆದಿದ್ದಾರೆ.



## ರಾಮಣ್ಣ ಭಂಡಾರಿ

*ಚಾರ್ಮಾಡಿ ಅಂಚೆ*
*ಬೆಳ್ತಂಗಡಿ ತಾಲೂಕು –574 288*
*ಮೊಬೈಲ್ : 9902336120*

ಪ್ರಸ್ತುತ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುವ ರಾಮಣ್ಣ ಭಂಡಾರಿಯವರು ಸ್ತ್ರೀ ಪಾತ್ರದ ಮುಖೇನ ಮನ್ನಣೆಗೆ ಒಳಗಾಗಿದ್ದಾರೆ.


ದಕ್ಷಿಣ ಕನ್ನಡ ಜಿಲ್ಲೆಯ ಚಾರ್ಮಾಡಿಯಲ್ಲಿ ಶ್ರೀ ಎಲ್ಲಣ್ಣ ಭಂಡಾರಿ ಹಾಗೂ ಶ್ರೀಮತಿ ಲಕ್ಷ್ಮೀ ದಂಪತಿಯವರ ಕೊನೆಯ ಪುತ್ರನಾಗಿ ಜನಿಸಿದ ರಾಮಣ್ಣ ಭಂಡಾರಿಯವರು ಊರಲ್ಲಿ ನಡೆಯುವ ಯಕ್ಷಗಾನ ಪ್ರದರ್ಶನಗಳನ್ನು ನೋಡಿ ಅದರಿಂದ ಪ್ರೇರಿತರಾದರು. ಸ್ಥಳೀಯ ಶ್ರೀ ಪಂಚಲಿಂಗೇಶ್ವರ ಯಕ್ಷಗಾನ ಸಂಘದ ಆಟ-ಕೂಟಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದ ಇವರ ಆಸಕ್ತಿಯನ್ನು ಕಂಡು, ಸಂಘದ ಸದಸ್ಯರ ಪ್ರೇರಣೆಯಂತೆ ಸಾಂತಪ್ಪ ನಾಯ್ಕ ಬೆಳಾಲು ಇವರಿಂದ ಹೆಜ್ಜೆಗಾರಿಕೆಯನ್ನು ಕಲಿತರು.

ಶ್ರೀಯುತರು ಆರುವ ಮೇಳ– 4 ವರ್ಷ, ಬಪ್ಪನಾಡು ಡೇರೆ ಮೇಳ– 2ವರ್ಷ, ಪುತ್ತಿಗೆ ಮೇಳ– 1ವರ್ಷ, ಸುಂಕದಕಟ್ಟೆ ಮೇಳ– 1ವರ್ಷ ಕಟೀಲು ಮೇಳ– 15 ವರ್ಷ ಹೀಗೆ ತಿರುಗಾಟವನ್ನು ನಡೆಸಿ ಮೇಳತಿರುಗಾಟವನ್ನು ನಿಲ್ಲಿಸಿದವರು ಇದೀಗ ಮತ್ತೆ ಕಟೀಲು ಮೇಳದಲ್ಲಿ ಸೇವೆಯನ್ನು ಸಲ್ಲಿಸುತ್ತಾ ಇದ್ದಾರೆ.

ಶ್ರೀದೇವಿ, ದಮಯಂತಿ, ಚಂದ್ರಮತಿ, ಸುಭದ್ರೆ, ದ್ರೌಪದಿ, ಶಶಿಪ್ರಭೆ, ದೇವೇಂದ್ರ, ಕೌರವ, ರಾಮ, ಶ್ರೀಕೃಷ್ಣ ಹಾಗೂ ತುಳು ಪ್ರಸಂಗಗಳಲ್ಲಿ ಬರುವ ವಿವಿಧ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಹಲವಾರು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರಿಂದ ರತಿ ಕಲ್ಯಾಣ, ಸತ್ಯಹರಿಶ್ಚಂದ್ರ, ಶಶಿಪ್ರಭಾ ಪರಿಣಯ, ಮುಂತಾದ ಪುರಾಣ ಪ್ರಸಂಗಗಳನ್ನು ಪ್ರದರ್ಶಿಸಿದ್ದಾರೆ.

ಇವರ ಸುಧೀರ್ಘ ಕಲಾಸಾಧನೆಯನ್ನು ಕಂಡು ಹಲವಾರು ಸಂಘಸಂಸ್ಥೆಗಳು ಸಂಮಾನಗಳನ್ನು ಮಾಡಿ ಗೌರವಿಸಿವೆ.



## ರಾಮ ಪಾಟಾಳಿ ಪದವಿನಂಗಡಿ

*ದೇವಿನಗರ– ಪದವಿನಂಗಡಿ*
*ಮಂಗಳೂರು – 575 008*

ರಾಜವೇಷ ಮತ್ತು ನಾಟಕೀಯ ವೇಷಗಳನ್ನು ಮಾಡಿಕೊಂಡು ಜನಮನ್ನಣೆಯನ್ನು ಪಡೆದಿರುವ ಶ್ರೀ ರಾಮ ಪಾಟಾಳಿಯವರು ವೃತ್ತಿ ಮತ್ತು ಹವ್ಯಾಸಿ ಕಲಾತಂಡಗಳಲ್ಲಿ ಪಾತ್ರ ನಿರ್ವಹಣೆ ಮಾಡಿರುವ ಕಲಾವಿದರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮೂಡಂಬೈಲಿನಲ್ಲಿ. ಶ್ರೀ ನಡುಬೈಲು ಪಕೀರ ಪಾಟಾಳಿ ಹಾಗೂ ಶ್ರೀಮತಿ ಅಮುನಿ ದಂಪತಿಯ ಸುಪುತ್ರರಾಗಿ ಜನಿಸಿದರು.

ಬಾಲ್ಯದಿಂದಲೇ ಯಕ್ಷಗಾನ ಕಲೆಯ ಮೇಲೆ ಆಸಕ್ತಿಯನ್ನು ಬೆಳೆಸಿದ ಇವರು ಕೀರ್ತಿಶೇಷ ಪಡ್ರೆ ಚಂದುರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಬಣ್ಣದ ಮಾಲಿಂಗರವರೊಂದಿಗೆ ಅವರ ಉತ್ತೇಜನ ಹಾಗೂ ಆಶೀರ್ವಾದದ ಮೇರೆಗೆ ಧರ್ಮಸ್ಥಳ ಮೇಳದಲ್ಲಿ ಗೆಜ್ಜೆ ಕಟ್ಟಿದರು.

ಕಟೀಲು, ವೇಣೂರು, ಕೂಡ್ಲು, ಸುಂಕದಕಟ್ಟೆ, ಕೊಲ್ಲೂರು, ತಲಕಳ, ಬಪ್ಪನಾಡು ಮತ್ತು ಮುಂಬಯಿಯ ಶ್ರೀ ನರಸಿಂಹ ಯಕ್ಷಗಾನ ಮಂಡಳಿಯಲ್ಲಿ ಕಲಾಸೇವೆ ಮಾಡಿರುವರು. ಇಪ್ಪತ್ತು ವರ್ಷಗಳಿಗೂ ಮಿಕ್ಕಿ ಮೇಳಗಳಲ್ಲಿ ಕಲಾಸೇವೆಯನ್ನು ಮಾಡಿದ ಹಿನ್ನೆಲೆಯನ್ನು ಹೊಂದಿದ್ದಾರೆ.

ಮಂಗಳೂರು ಪದವಿನಂಗಡಿಯಲ್ಲಿ ಬಂದು ನೆಲೆಸಿದ ಮೇಲೆ ಶ್ರೀ ವಿಘ್ನೇಶ್ವರ ಯಕ್ಷಗಾನ ಮಂಡಳಿಯ ಪ್ರಧಾನ ಕಲಾವಿದರಾಗಿ ಪಾತ್ರ ನಿರ್ವಹಣೆ ಮಾಡಿರುವರಲ್ಲದೆ ಸಂಘದ ಬೆಳವಣಿಗೆಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ.

ದೇವೇಂದ್ರ, ಅರ್ಜುನ ಇಂದ್ರಜಿತು ಮೊದಲಾದ ಕಿರೀಟ ವೇಷಗಳನ್ನು ಮಾಡುವ ಇವರು ಇತ್ತೀಚಿನ ವರುಷಗಳಲ್ಲಿ ಮೇಳ ತಿರುಗಾಟಕ್ಕೆ ವಿದಾಯ ಹೇಳಿದ್ದಾರೆ.

ಪ್ರಸಾಧನ ಕಲೆಯಲ್ಲಿ ಅನುಭವಿಯಾಗಿದ್ದ ರಾಮ ಪಾಟಾಳಿಯವರು ಲಲಿತ ಕಲಾ ಆರ್ಟ್ಸ್ ಮಂಗಳೂರು ಈ ಸಂಸ್ಥೆಯಲ್ಲಿ ಪ್ರಸಾಧನ ಕಲಾವಿದರಾಗಿ ಕೆಲವು ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

ಮಂಗಳೂರಿನ ಮೇರಿಹಿಲ್ ಗುರುನಗರದಲಿ ಸ್ವಂತ ಮನೆ ಮಾಡಿರುವ ಇವರು ಶ್ರೀಮತಿ ಸುಶೀಲ ಎಂಬವವರನ್ನು ವರಿಸಿ ಮೂರು ಗಂಡು ಹಾಗೂ ಒಬ್ಬಾಕೆ ಹೆಣ್ಣು ಮಗಳನ್ನು ಪಡೆದು ಸಂತೃಪ್ತರಾಗಿದ್ದಾರೆ.

ಯಕ್ಷಗಾನ ಕಲೆಯ ಬೆಳವಣಿಗೆಗೆ ರಾಮ ಪಾಟಾಳಿಯವರು ನೀಡಿದ ಕಲಾಸೇವೆಯನ್ನು ಗುರುತಿಸಿದ ಶ್ರೀ ವಿಘ್ನೇಶ್ವರ ಯಕ್ಷಗಾನ ಮಂಡಳಿ ಪದವಿನಂಗಡಿ, ಹವ್ಯಾಸಿ ಬಳಗ ಕದ್ರಿ(ರಿ.) ಮಂಗಳೂರು ಹಾಗೂ ಇನ್ನಿತರ ಸಂಸ್ಥೆಗಳು ಗೌರವಿಸಿ ಸಂಮಾನಿಸಿವೆ.



## ರಾಮಕೃಷ್ಣ ಭಟ್ ಶಿರಂಕಲ್ಲು

*ದಾಜಿಮಾರ್, ಕ್ಯೊಲ ಗ್ರಾಮ,*
*ಬಂಟ್ವಾಳ ತಾಲೂಕು*
*ಮನೆ ದೂರವಾಣಿ: **319246.***


ಚೆಂಡೆ ಮದ್ದಳೆಗಳ ನುಡಿತ-ಬಡಿತಗಳ ಅಭ್ಯಾಸವನ್ನು ಮಾಡಿ ಪ್ರೌಢಿಮೆಯನ್ನು ಸಾಧಿಸಿರುವ ಶಿರಂಕಲ್ಲು ರಾಮಕೃಷ್ಣ ಭಟ್ಟರು ಸುಂಕದಕಟ್ಟೆ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಿದ್ದಾರೆ.

ಗೋಪಾಲಕೃಷ್ಣ ಭಟ್ಟ ಹಾಗೂ ಸರಸ್ವತಿ ಅಮ್ಮ ದಂಪತಿಯ ಸುಪುತ್ರರಾಗಿ ಜನಿಸಿದ ರಾಮಕೃಷ್ಣ ಭಟ್ಟರು 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. 20ನೇ ವರ್ಷದಿಂದ ಯಕ್ಷಗಾನ ಕಲೆಯ ಆಕರ್ಷಣೆಗೆ ಒಳಗಾಗಿ ಮುಳಿಗದ್ದೆ ಸುಬ್ರಾಯ ಭಟ್ ಅವರಲ್ಲಿ ಚೆಂಡೆ-ಮದ್ದಳೆಗಳ ನುಡಿತ-ಬಡಿತಗಳ ಅಭ್ಯಾಸವನ್ನು ಮಾಡಿದರು.

ವೇಣೂರು ಮೇಳ 1 ವರ್ಷ, ಕಟೀಲು ಮೇಳ 1 ವರ್ಷ, ಕದ್ರಿ ಮೇಳ 4 ವರ್ಷ, ಕರ್ನಾಟಕ ಮೇಳ 2 ವರ್ಷ, ಸುಂಕದಕಟ್ಟೆ ಮೇಳ 2 ವರ್ಷ ಹೀಗೆ ತಿರುಗಾಟದ ಹಿನ್ನೆಲೆಯನ್ನು ಹೊಂದಿರುವ ಇವರು ಹವ್ಯಾಸಿ ಕಲಾವಿದರಾಗಿ 22 ವರ್ಷಗಳ ಕಲಾಸೇವೆಯನ್ನು ಮಾಡಿದ್ದಾರೆ.

64 ವರ್ಷಗಳ ವಯೋಮಾನಕ್ಕೇರಿರುವ ರಾಮಕೃಷ್ಣ ಭಟ್ಟರು ಕೃಷಿಯನ್ನು ಉಪವೃತ್ತಿಯಾಗಿ ಅವಲಂಭಿಸಿದ್ದಾರೆ.

ಶ್ರೀಮತಿ ಶಾಂತಾ ಕುಮಾರಿಯನ್ನು ವರಿಸಿರುವ ಇವರ ಕಲಾಸೇವೆಗೆ ಊರ ಅಭಿಮಾನಿಗಳಿಂದ ಗೌರವ ಸಂದಿವೆ.



## ರಾಮಚಂದ್ರ ಎನ್. ರೈ, ಕಡಬ

*ಹೊಸಮಜಲು ಮನೆ, 102 ನೆಕ್ಕಿಲಾಡಿ*
*ಅಂಚೆ:ಮರ್ದಾಲ, ಪುತ್ತೂರು ತಾಲೂಕು*
*ಮನೆ: 08251-204156, ಮೊ : 9448894218*

ಭಾಗವತಿಕೆಯಲ್ಲಿ ತನ್ನದೇ ವೈಯುಕ್ತಿಕವಾದ ಶೈಲಿಯನ್ನು ಮೂಡಿಸಿಕೊಂಡ ಎನ್. ರಾಮಚಂದ್ರ ರೈ ಕಡಬ ಅವರು ಮೇಳದಿಂದ ಸ್ವಯಂ ನಿವೃತ್ತರಾಗಿ ಹೇಳಿಕೆಯ ಭಾಗವಹಿಸಿ ಕಲಾ ಸೇವೆಯನ್ನು ನಡೆಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕಡಬದಲ್ಲಿ ನಾರಾಯಣ ರೈ ಹಾಗೂ ಲಲಿತ ರೈ ದಂಪತಿಯ ಪುತ್ರರಾಗಿ 14-04-1962 ರಂದು ಇವರು ಜನಿಸಿದ ಇವರು ಶ್ರೀ ಹರಿನಾರಾಯಣ ಬೈಪಾಡಿತ್ತಾಯ ಅವರಿಂದ ಭಾಗವತಿಕೆಯ ಅಭ್ಯಾಸ ಮಾಡಿರುತ್ತಾರೆ.

ಕುಂಬ್ಳೆ ಮೇಳ 3 ವರ್ಷ, ಮಧೂರು ಮೇಳ 1 ವರ್ಷ, ಕದ್ರಿ ಮೇಳ 10 ವರ್ಷ, ಮಂಗಳಾದೇವಿ ಮೇಳ 1 ವರ್ಷ ಹಾಗೂ ಪುತ್ತೂರು ಮೇಳ 2 ವರ್ಷ ಹೀಗೆ ಆ ಮೇಳಗಳಲ್ಲಿ ತಿರುಗಾಟವನ್ನು ಮಾಡಿ ಯಕ್ಷಗಾನಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ.


ಅನಿವಾರ್ಯ ಕಾರಣಗಳಿಂದ ಮೇಳದ ತಿರುಗಾಟವನ್ನು ನಿಲ್ಲಿಸಿದ ಇವರು ಕಲೆಯ ನಂಟನ್ನು ಬಿಡದೆ ಹೇಳಿಕೆಯ ಹೀಳಿಕೆಯ ಕಾರ್ಯಕ್ರಮಗಳಿಗೆ ಭಾಗವಹಿಸುತ್ತಾ ಇದ್ದಾರೆ.

ಡಿ. ಮನೋಹರ ಕುಮಾರ್ ಇವರ ಕದ್ರಿ ಮೇಳದ ಹೊಸ ಪ್ರಸಂಗಗಳ ಪ್ರದರ್ಶನದಲ್ಲಿ ಕಡಬ ರಾಮಚಂದ್ರ ರೈಯವರ ಹಾಡು ಬಹಳಷ್ಟು ಆಕರ್ಷನೀಯವಾಗಿತ್ತು.

ಇವರ ಮನೆತನದಲ್ಲಿ ಇವರ ಮಾವಂದಿರಾದ ಶ್ರೀ ಆನಂದ ರೈ ಹಾಗೂ ಎನ್. ಕೆ. ನಾರಾಯಣ ರೈ ಇವರು ಹವ್ಯಾಸಿ ಭಾಗವತರಾಗಿ ಯಕ್ಷಗಾನ ಸೇವೆ ಮಾಡಿರುವುದು ಇವರಿಗೆ ಉತ್ತೇಜನವನ್ನು ನೀಡಿದ್ದರಿಂದ ಕಲಾ ಪ್ರತಿಭೆ ಬೆಳೆಯಲು ಪೂರಕವಾಯಿತು.

ಶ್ರೀಮತಿ ರೂಪಲತಾ ಎಂಬವರನ್ನು ವರಿಸಿರುವ ಇವರು ಶ್ರೀನಿಧಿ ಹಾಗೂ ಶರಧಿ ಎಂಬ ಇಬ್ಬರು ಮಕ್ಕಳನ್ನು ಪಡೆದು ಸಾರ್ಥಕ ಜೀವನವನ್ನು ನಡೆಸುತ್ತಾ ಇದ್ದಾರೆ.

ಕೃಷಿಕ ಮನೆತನಕ್ಕೆ ಸೇರಿದ ರೈಯವರು ಯಕ್ಷಗಾನ ಕಲೆಯಲ್ಲಿ ಮಹತ್ವದ ಸಾಧನೆಯನ್ನು ಮಾಡಿರುವುದರಿಂದ ಅನೇಕ ಸಂಮಾನ ಗೌರವಗಳು ಸಂದಿವೆ. ಕದ್ರಿ ಮೇಳದ ಸಂಮಾನದೊಂದಿಗೆ, ಮಂಗಳಾದೇವಿ, ಪುತ್ತೂರು ಮೊದಲಾದೆಡೆಯ ಅಭಿಮಾನಿ ಬಳಗದವರಿಂದ ಸಂಮಾನಿತರಾಗಿದ್ದಾರೆ.



# ರಾಮಚಂದ್ರ ಭಟ್, ಮುಂಡ್ರಕಜೆ

*ಮುಂಡ್ರಕಜೆ,*
*ಪೈವಳಿಕೆ ಗ್ರಾಮ,*
*ಕಾಸರಗೋಡು ಜಿಲ್ಲೆ.*

ಹಿಮ್ಮೇಳ ವಾದಕರಾಗಿ ಮನ್ನಣೆಗೆ ಒಳಗಾಗಿರುವ ಮುಂಡ್ರಕಜೆ ರಾಮಚಂದ್ರ ಭಟ್ಟರು ಪ್ರಸ್ತುತ ನಿವೃತ್ತ ಕಲಾವಿದರಾಗಿದ್ದಾರೆ.

ಕಾಸರಗೋಡು ಜಿಲ್ಲೆಯ ಪೈವಳಿಕೆ ಗ್ರಾಮದ ಮುಂಡ್ರಕಜೆ ಎಂಬಲ್ಲಿ ಶ್ರೀ ನಾರಾಯಣ ಭಟ್ ಹಾಗೂ ಶ್ರೀಮತಿ ಗೌರಮ್ಮ ದಂಪತಿಯ ಪುತ್ರರಾಗಿ 5–5–1939ರಂದು ಇವರು ಜನಿಸಿದರು.

ಬಾಲ್ಯದಲ್ಲಿಯೇ ಯಕ್ಷಗಾನ ಕಲೆಯ ಮೇಲೆ ಆಸಕ್ತರಾಗಿ ಕೀರ್ತಿ ಶೇಷ ಕಲಾವಿದರಾದ ಮೂಡಬಿದಿರೆ ಮಾಧವ ಶೆಟ್ಟಿಯವರಿಂದ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿದರು.

ಧರ್ಮಸ್ಥಳ, ಕೂಡ್ಲು, ಕುಂಡಾವು ಮೇಳಗಳಲ್ಲಿ 3 ದಶಕಕ್ಕೂ ಮಿಕ್ಕಿ ತಿರುಗಾಟವನ್ನು ನಡೆಸಿರುವ ಶ್ರೀಯುತರು ಹಿಮ್ಮೇಳವಾದಕರಾಗಿ ಮತ್ತು ಉತ್ತಮ ಸಂಘಟಕರೆನಿಸಿ ಜನಮನ್ನಣೆಯನ್ನು ಪಡೆದು ಕೀರ್ತಿ ಸಂಪನ್ನರಾಗಿದ್ದಾರೆ.

ಮೋಹಿನಿ, ಶ್ರೀದೇವಿ, ಶ್ರೀಕೃಷ್ಣ, ಜಯಂತ, ದೇವೇಂದ್ರ ಮಕರಾಕ್ಷ, ಮುಂತಾದ ಮುಂಡು, ಸ್ತ್ರೀ ಹಾಗೂ ರಾಜವೇಷಗಳನ್ನು ಚೊಕ್ಕವಾಗಿ ನಿರ್ವಹಿಸಿರುವರು.

ವಿಭಿನ್ನ ರೀತಿಯ, ವೇಷಗಳನ್ನು ಮಾಡುವುದರಲ್ಲಿ ಪಳಗಿದವರಾದ ಕಾರಣದಿಂದಾಗಿ ಇವರ ಶಕ್ತಿ ಪ್ರತಿಭೆ ಉತ್ತಮವಾದಂತಹ ಅನುಭವವನ್ನು ಸಂಪಾದಿಸಿದೆ.

ಕೇಳಿ ಅನುಭವಿಸುವುದಕ್ಕಿಂತಲೂ, ನೋಡಿ ಅನುಭವಿಸುವುದಕ್ಕಿಂತಲೂ ಹೆಚ್ಚಿನದ್ದಾಗಿರುವ ಮಾಡಿ ಅನುಭವಿಸುವ ಪ್ರಕ್ರಿಯೆಯಲ್ಲಿ ಪಳಗಿ ಉನ್ನತ ಮಟ್ಟದ ಕೀರ್ತಿಗೆ ರಾಮಚಂದ್ರ ಭಟ್ಟರು ಭಾಜನರಾಗಿದ್ದಾರೆ.

ಯಕ್ಷಗಾನವನ್ನು ಉಳಿಸಿ, ಬೆಳೆಸಿ, ಪೋಷಿಸುವಲ್ಲಿ ಮಹತ್ತರವಾದ ಕೊಡುಗೆಯನ್ನು ನೀಡಿದ ಮುಂಡ್ರಕಜೆ ರಾಮಚಂದ್ರ ಭಟ್ಟರು ಅನೇಕ ಮಂದಿಗಳಿಗೆ ಮಾರ್ಗದರ್ಶನವನ್ನು ಮಾಡಿದ ಗುರುಗಳಾಗಿದ್ದಾರೆ.

ಶ್ರಮಪಟ್ಟು ಸಾಧನೆ ಮಾಡಬೇಕು ಎಂಬ ಅಭಿಪ್ರಾಯವುಳ್ಳವರಾಗಿ ಶಿಷ್ಯಂದಿರನ್ನು ಉತ್ತಮವಾದ ಸಾಧನೆಯಲ್ಲಿ ಮುನ್ನಡೆಯುವಂತೆ ಮಾಡುವಲ್ಲಿ ಪ್ರಯತ್ನಶೀಲರಾಗಿದ್ದಾರೆ.

ಹಲವಾರು ಯಕ್ಷಗಾನದ ಸಂಘ ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿ ದುಡಿದಿದ್ದ ಇವರು ಉತ್ತಮ ಕಲಾಸಾಧಕರಾಗಿ ಬಾಳಿದ ಕಾರಣದಿಂದ ಹಲವೆಡೆಯಲ್ಲಿ ಗೌರವಕ್ಕೆ ಪಾತ್ರರಾಗಿ ಪುರಸ್ಕರಿಸಲ್ಪಟ್ಟಿದ್ದಾರೆ. ಹವ್ಯಾಸಿ ಬಳಗ ಕದ್ರಿಯ ದಶಮಾನದ ಸಂಮಾನಕ್ಕೂ ಭಾಗಿಯಾಗಿದ್ದಾರೆ.



# ರಾಧಾಕೃಷ್ಣ ಕಲ್ಲುಗುಂಡಿ

*ಚಟ್ಟೆಕಲ್ಲು ಮನೆ, ಚೆಂಬು ಗ್ರಾಮ, ಸುಳ್ಯ ತಾಲೂಕು*
*ಕಲ್ಲುಗುಂಡಿ – ಸಂಪಾಜೆ*
*ಮೊ : 9945072107*

ಪುಂಡುವೇಷ ಸ್ತ್ರೀವೇಷಮತ್ತು ರಾಜವೇಷಗಳಲ್ಲಿ ಉತ್ತಮವಾದ ಪ್ರತಿಭೆಯನ್ನು ತೋರಿಸುವುದರೊಂದಿಗೆ ಭಾಗವತರಾಗಿ ಕಲಾಸೇವೆಯನ್ನು ಮಾಡುತ್ತಿರುವ ಶ್ರೀ ರಾಧಾಕೃಷ್ಣ ಕಲ್ಲುಗುಂಡಿ ಇವರು, ಕಟೀಲು ಮೇಳದಲ್ಲಿ ಭಾಗವತರಾಗಿ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

ಶ್ರೀ ಕುಂಞರಾಮ ಬೆಳ್ಚಪ್ಪಾಡ ಮತ್ತು ಶ್ರೀಮತಿ ದೇವಕಿ ದಂಪತಿಯ ಸುಪುತ್ರರಾಗಿ ಜನಿಸಿರುವ ರಾಧಾಕೃಷ್ಣರು 6ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

13ನೇ ವರ್ಷದಿಂದ ಯಕ್ಷಗಾನ ಕಲಿಯಬೇಕೆಂಬ ಆಸಕ್ತಿಯಯನ್ನು ತಾಳಿ ಕೀರ್ತಿ ಶೇಷ ಕಲಾವಿದರಾದ ಪರಮೇಶ್ವರ ಆಚಾರ್ ಕೊಕ್ಕಡ ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ರಂಗಪ್ರವೇಶ ಮಾಡಿದರು.

ಆರಂಭದಲ್ಲಿ ಸುರತ್ಕಲ್ ಮೇಳವನ್ನು ಸೇರಿದ ಇವರು ಉತ್ತಮ ವೇಷಧಾರಿಯಾಗಿ ಪ್ರೌಢಿಮೆಯನ್ನು ಸಾಧಿಸುತ್ತಾ ಬೆಳೆದರು. 2ವರ್ಷಗಳ ನಂತರ ಸುರತ್ಕಲ್ ಮೇಳವನ್ನು ಬಿಟ್ಟು ಕಟೀಲು ಮೇಳವನ್ನು ಸೇರಿದವರು ಈಗಾಗಲೇ 17ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಚಂಡ–ಮುಂಡರು, ಬ್ರಹ್ಮ, ದೇವಿ, ಭ್ರಮರಕುಂತಳೆ, ಕಮಲಗಂಧಿನಿ, ವಿದ್ಯುನ್ಮಾಲಿ, ದೇವೇಂದ್ರ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದ ಇವರು ಪೌರಾಣಿಕ ಪ್ರಸಂಗಗಳ ಪ್ರದರ್ಶನದ ನಿರ್ವಹಣೆಯಲ್ಲಿ ಅನುಭವ ಸಂಪನ್ನರಾದರು. ಹೀಗಾಗಿ ಭಾಗವತರಾಗಿ ಬೆಳೆಯುದಕ್ಕೆ ಉತ್ತಮ ಅವಕಾಶ ಒದಗಿತು.

ಭಾಗವತರಲ್ಲಿ ಮೇರುಪಂಕ್ತಿಯ ಕಲಾವಿದರೆನಿಸಿದ ಶ್ರೀ ಬಲಿಪನಾರಾಯಣ ಭಾಗವತರಲ್ಲಿ ಭಾಗವತಿಕೆಯನ್ನು ಅಭ್ಯಾಸ ಮಾಡಿರುವ ಇವರು ಕಳೆದ ಕೆಲವು ವರ್ಷಗಳಿಂದ ಸಂಗೀತಗಾರರಾಗಿಯೂ ಅನುಭವವನ್ನು ಪಡೆದಿರುವವರಲ್ಲದೆ ಪ್ರಸ್ತುತ ವರ್ಷದಿಂದ ಕಟೀಲು ಮೇಳದ 2ನೇ ಭಾಗವತರಾಗಿ ಕಲಾಸೇವೆಯನ್ನು ಮಾಡುತ್ತಾ ಇದ್ದಾರೆ.

ಕಲಾವಿದರಾಗಬೇಕೆನ್ನುವ ಹಂಬಲದಿಂದ ವೇಷಧಾರಿಯಾಗುವ ಆಸಕ್ತಿಯನ್ನು ವ್ಯಕ್ತಪಡಿಸಿರುವ ಸುಳ್ಯದ ಕೆಲವು ಯುವಕರಿಗೆ ನಾಟ್ಯಾಭ್ಯಾಸದ ತರಬೇತಿಯನ್ನು ನೀಡಿರುವರು.

32ವರ್ಷಗಳ ವಯೋಮಾನಕ್ಕೆ ಏರಿರುವ ರಾಧಾಕೃಷ್ಣರವರ ಕಲಾಸಾಧನೆ ಮಹತ್ವ ಪೂರ್ಣವಾಗಿದ್ದು ಜನಮನ್ನಣೆಗೆ ಒಳಗಾಗಿದೆ.



## ರಾಧಾಕೃಷ್ಣ ಶೆಟ್ಟಿ, ಬೆಳ್ತಂಗಡಿ

*"ಮಾಂಜಾಲು ಮನೆ", ಲ್ಯಾಲ ಗ್ರಾಮ ಮತ್ತು ಅಂಚೆ*
*ಬೆಳ್ತಂಗಡಿ ತಾಲೂಕು*
*(ಮೊಬೈಲ್)* ***9449914185***

ಒನಪು ವೈಯಾರದ ನಾಟ್ಯವೈಖರಿಯಿಂದ ಪುಂಡುವೇಷದ ಮನ್ನಣೆಗೆ ಪಾತ್ರರಾಗಿ ಬೆಳೆಯತ್ತಿರುವ ರಾಧಾಕೃಷ್ಣ ಶೆಟ್ಟಿ ಬೆಳ್ತಂಗಡಿ ಇವರು ಪ್ರಸ್ತುತ ಹೊಸನಗರ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.


ದಿನಾಂಕ 8-7-1984ರಲ್ಲಿ ಬಾಬು ಶೆಟ್ಟಿ ಮತ್ತು ಜಾನಕಿ ಶೆಡ್ತಿ ದಂಪತಿಯ ಸುಪುತ್ರರಾಗಿ ಕಡಬದಲ್ಲಿ ಹುಟ್ಟಿದರು.

ಕಲಾಕರ್ಷಣೆಯಿಂದ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯದಿರುವ ಇವರು ಮಾವನಾದ ಸ್ತ್ರೀ ಪಾತ್ರಧಾರಿ ಕಡಬ ಶ್ರೀನಿವಾಸ ರೈಯವರ ಸಲಹೆಯ ಮೇರೆಗೆ ಯಕ್ಷಗಾನ ಕಲೆಯ ಅಭ್ಯಾಸವನ್ನು ಮಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತಕಲಾ ಕೇಂದ್ರದಲ್ಲಿ ಶ್ರೀ ತಾರಾನಾಥ ವರ್ಕಾಡಿಯವರಿಂದ ನಾಟ್ಯಾಭ್ಯಾಸವನ್ನು ಮಾಡಿದ ಮೇಲೆ ಧರ್ಮಸ್ಥಳ ಮೇಳದಲ್ಲಿ ಒಂದು ವರ್ಷದ ತಿರುಗಾಟವನ್ನು ಪೂರೈಸಿ ಕಟೀಲು ಮೇಳವನ್ನು ಸೇರಿದರು.

ಕಟೀಲು ಮೇಳದಲ್ಲಿ 5 ವರ್ಷಗಳ ತಿರುಗಾಟವನ್ನು ನಡೆಸಿ ಹೊಸನಗರ ಮೇಳವನ್ನು ಸೇರಿದವರು ಇದೀಗ 4 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಕೀರ್ತಿಶೇಷ ಕಲಾವಿದ ಅಳಿಕೆ ಲಕ್ಷ್ಮಣ ಶೆಟ್ಟಿ ಇವರ ಅಳಿಯನಾದ ರಾಧಾಕೃಷ್ಣರು ಅಭಿಮನ್ಯು, ಲವ, ಕುಶ, ಪ್ರಸೇನ, ಕೃಷ್ಣ, ಚಂಡ-ಮುಂಡರು, ಭಾರ್ಗವ, ರಾಮ, ಲಕ್ಷ್ಮಣ, ಶಿವಪ್ರಭೆ, ಬಾಲ ಸರಸ್ವತಿ, ಮಾರ್ತಾಂಡತೇಜ, ಅಶ್ವಿನಿದೇವತೆ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.



## ರಾಘವದಾಸ್ ಬಿ.

*ಭಾರತೀ ಕಲಾ ಆರ್ಟ್ಸ್, ಹೂ ಹಾಕುವ ಕಲ್ಲು*
*ಬಂಟ್ವಾಳ ತಾಲೂಕು*
*ಮೊಬೈಲ್: **9448858120.***

ಭಾರತೀ ಕಲಾ ಆರ್ಟ್ಸ್‌ನ ವ್ಯವಸ್ಥಾಪಕರಾಗಿರುವ ಶ್ರೀಯುತ ಬಿ.ರಾಘವದಾಸ್ ಇವರು ಮೇಳ ತಿರುಗಾಟವನ್ನು ಮಾಡಿದ್ದು, ರಾಜವೇಷ, ನಾಟಕೀಯ, ಪುಂಡುವೇಷ ಹಾಗೂ ಸ್ತ್ರೀವೇಷಗಳನ್ನು ನಿರ್ವಹಿಸುವುದರೊಂದಿಗೆ ತಮ್ಮ ಕಲಾಪ್ರತಿಭೆಯನ್ನು ತೋರಿರುತ್ತಾರೆ.

ಬಜ್ಪೆಯ ತಳಕಲದಲ್ಲಿ ನಾರಾಯಣ ದಾಸ್ ಹಾಗೂ ಸೀತಾ ದಂಪತಿಯ ಸುಪುತ್ರರಾಗಿ ಜನಿಸಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದು ಯಕ್ಷಗಾನದತ್ತ ಆಕರ್ಷಿತರಾದರು.

ತಮ್ಮ 15ನೇ ವಯಸ್ಸಿನಲ್ಲಿ ಬಜ್ಪೆ ದೇರಣ್ಣ ದೇವಾಡಿಗರಿಂದ ನಾಟ್ಯಾಭ್ಯಾಸವನ್ನು ಮಾಡಿ ರಂಗಪ್ರವೇಶ ಮಾಡಿದರು.

ಆರಂಭದಲ್ಲಿ ಸುಂಕದಕಟ್ಟೆ ಮೇಳದಲ್ಲಿ 1 ವರ್ಷ, ಕುಂಡಾವು ಮೇಳದಲ್ಲಿ 1 ವರ್ಷ, ನಂದಾವರ ಮೇಳದಲ್ಲಿ 2 ವರ್ಷ, ಅರುವ ಅಳದಂಗಡಿ ಮೇಳದಲ್ಲಿ 2 ವರ್ಷ, ಮಲ್ಲ ಮೇಳದಲ್ಲಿ 2 ವರ್ಷ, ತಳಕಲ ಮೇಳದಲ್ಲಿ 2 ವರ್ಷ, ಹಾಗೂ ಬಪ್ಪನಾಡು ಮೇಳದಲ್ಲಿ 2 ವರ್ಷಗಳ ಕಾಲ ತಿರುಗಾಟ ಮಾಡಿರುವರು.

ಕೌಂಡ್ಲಿಕ, ಅರ್ಜುನ, ದಕ್ಷ, ಕಾರ್ತವೀರ್ಯ, ಕಂಸ, ಕೌಂಹಾಸುರ, ತಾರಕಾಸುರ, ಶ್ವೇತಕುಮಾರ, ಕೃಷ್ಣ, ಚಂಡ-ಮುಂಡರು, ವಿಷ್ಣು, ಶ್ರೀದೇವಿ, ಭ್ರಮರಕುಂತಳೆ, ಶಶಿಪ್ರಭೆ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಇವರು ಭಾರತೀ ಕಲಾ ಆರ್ಟ್ಸ್‌ನ್ನು ಸ್ಥಾಪಿಸಿ ಈಗಾಗಲೇ 20 ವರ್ಷಗಳನ್ನು ಪೂರೈಸಿರುತ್ತಾರೆ ಕಳೆದ 10 ವರ್ಷಗಳಿಂದ ಭಾಗವತರಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

52 ವರ್ಷ ವಯಸ್ಸಿನವರಾದ ಶ್ರೀಯುತರು ಶ್ರೀಮತಿ ಚಂದ್ರಾವತಿ ಎಂಬವರನ್ನು ವರಿಸಿ ಭಾರತಿ (ಡಿ.ಎಸ್.ಪದವೀಧರೆ) ಹಾಗೂ ಮಗ ಬಾಲಸುಬ್ರಹ್ಮಣ್ಯ ಎಂಬ ಇಬ್ಬರು ಮಕ್ಕಳನ್ನು ಪಡೆದು ಸುಖೀ ಜೀವನವನ್ನು ನಡೆಸುತ್ತಿದ್ದಾರೆ.

ಹವ್ಯಾಸಿ ಕಲಾವಿದರಿಗೆ ನಾಟ್ಯತರಬೇತಿಯನ್ನು ನೀಡಿರುವ ಶ್ರೀಯುತರು ಅಖಿಲ ಭಾರತ ಯಕ್ಷಗಾನ ಸಮ್ಮೇಳನ ಬೆಂಗಳೂರು, ಕೊಲ್ಲಂಗಾನ ಸುಬ್ರಹ್ಮಣ್ಯ ಯಕ್ಷಗಾನ ಮಂಡಳಿ, ವೈದ್ಯನಾಥ ಫ್ರೆಂಡ್ಸ್ ಕ್ಲಬ್, ಹೂಹಾಕುವ ಕಲ್ಲು, ಹಾಗೂ ಆಷಾಡ ಮಾಸ ಯಕ್ಷಗಾನ ಕೂಟ ಮಂಜೇಶ್ವರ ಇತ್ಯಾದಿ ಸಂಸ್ಥೆಗಳಿಂದ ಸಂಮಾನಿಸಲ್ಪಟ್ಟಿದ್ದಾರೆ.



## ಲಕ್ಷ್ಮೀ ನಾರಾಯಣ ಭಟ್, ಪೂಕಳ

*ಸಂಪ್ಯ ಮನೆ-(ಕೊಲ್ಯ), ಅಂಚೆ ಆರಿಯಾಪು*
*ಪುತ್ತೂರು ತಾಲ್ಲೂಕು*
*ಮೊಬೈಲ್ : 9481507539*

ಯಕ್ಷಗಾನದ ಪರಿಸರದಲ್ಲೇ ಹುಟ್ಟಿ, ಬೆಳೆದು, ಪ್ರಭಾವಿತರಾಗಿ ರಾಜವೇಷ ಮತ್ತು ನಾಟಕೀಯ ವೇಷಗಳನ್ನು ನಿರ್ವಹಿಸುವ ಲಕ್ಷ್ಮೀ ನಾರಾಯಣ ಭಟ್ ಪೂಕಳ ಇವರು ಎಡನೀರು ಗೋಪಾಲಕೃಷ್ಣ ಯಕ್ಷಗಾನ ಮಂಡಳಿಯಲ್ಲಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ಇವರ ತಂದೆ ಪೂಕಳ ಕೃಷ್ಣಭಟ್ ತಾಯಿ ಶ್ರೀಮತಿ ಕುಸುಮ. ಪೂಕಳದಲ್ಲಿ 12-11-1957ರಂದು ಜನಿಸಿದ ಇವರು ಬಿ.ಕಾಂ. ಪದವೀಧರರು.

10ನೇ ವಯಸ್ಸಿನಲ್ಲಿ ಉಪ್ಪಳ ಕೃಷ್ಣ ಮಾಸ್ತರರಿಂದ ನಾಟ್ಯ ಅಭ್ಯಾಸವನ್ನು ಮಾಡಿ, ಅಜ್ಜ ಉಡಕಾನ ಕೇಶವ ಭಟ್‌ರಿಂದ ಅರ್ಥಗಾರಿಕೆಯ ಮಾಹಿತಿಯನ್ನು ಸಂಪಾದಿಸಿದರು. ಮಾವನಾಗಿದ್ದ ಕುರಿಯ ವಿಠಲ ಶಾಸ್ತ್ರಿಯವರಿಂದಲೂ ಮಾರ್ಗದರ್ಶನವನ್ನು ಪಡೆದಿದ್ದಾರೆ.

ಬಹುಮೇಳಗಳಲ್ಲಿ ತಿರುಗಾಟ ಮಾಡಿರುವ ಇವರು ಕಟೀಲು ಮೇಳದಲ್ಲಿ 7 ವರ್ಷ, ಕುಂಡಾವು ಮೇಳದಲ್ಲಿ 1 ವರ್ಷ, ಪುತ್ತೂರು ಮೇಳದಲ್ಲಿ 6 ವರ್ಷ, ಕರ್ನಾಟಕ ಮೇಳದಲ್ಲಿ 1ವರ್ಷ, ಸುರತ್ಕಲ್ ಮೇಳದಲ್ಲಿ 11 ವರ್ಷ ಹಾಗೂ ಕಳೆದ 5 ವರ್ಷಗಳಿಂದ ಎಡನೀರು ಮೇಳದಲ್ಲಿ ಕಲಾ ಪ್ರೌಢಿಮೆಯನ್ನು ಮೆರೆಸುತಿದ್ದಾರೆ.

ಹಿರಣ್ಯಾಕ್ಷ, ದಶರಥ, ಉಗ್ರಸೇನ, ತಾಮ್ರಧ್ವಜ, ಇಕ್ವಾಕು, ಅರುಣಾಸುರ, ಮಾಗಧ, ಕಾರ್ತವೀರ್ಯ, ದಕ್ಷ, ಕಂಸ, ಕರ್ಣ, ಕೌರವ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಾರೆ.

ಇವರು ಎಲ್ಲೂರ್ದ ಮಲ್ಲಿ ಮತ್ತು ಕಾವ್ಯ ಕಸ್ತೂರಿ ಎಂಬ ಎರಡು ಕಾಲ್ಪನಿಕ ಪ್ರಸಂಗಗಳನ್ನು ರಚಿಸುವ ಮೂಲಕ ಪ್ರಸಂಗ ರಚನೆಯಲ್ಲಿಯೂ ತಮ್ಮ ಪ್ರತಿಭೆಯನ್ನು ತೋರ್ಪಡಿಸಿದ್ದಾರೆ.

ಪತ್ನಿ ಶ್ರೀಮತಿ ಕುಸುಮ, ಮಕ್ಕಳಾದ ಅನುರೂಪ, ಶ್ರೀವಿದ್ಯಾ (ಬಿಕಾಂ ಪದವೀಧರೆ- ಕರ್ನಾಟಕ ಬ್ಯಾಂಕ್ ಉದ್ಯೋಗಿ) ಹಾಗೂ ಹರಿಕೃಷ್ಣರೊಂದಿಗೆ ಸಂತೃಪ್ತ ಜೀವನವನ್ನು ನಡೆಸುತ್ತಿದ್ದಾರೆ.

ಶ್ರೀಯುತರ ಪ್ರತಿಭೆಯನ್ನು ಗುರುತಿಸಿ ಎಡನೀರು ಮಠ, ಮುಂಬಯಿ, ಮೈಸೂರು, ತುಮಕೂರು, ಕುಂದಾಪುರ, ಮಂಗಳೂರು ಪುರಭವನ, ವಿಟ್ಲ ಇತ್ಯಾದಿ ಪ್ರದೇಶಗಳಲ್ಲಿ ಸಂಮಾನದ ಗೌರವಗಳು ಸಂದಿವೆ. ಇಷ್ಟಲ್ಲದೆ ಮಂಗಳೂರು ಶಂಕರನಾರಾಯಣ ಅಡಿಗ ಪ್ರಶಸ್ತಿ ಇವರಿಗೆ ದೊರಕಿದೆ.



## ಲಕ್ಷ್ಮೀನಾರಾಯಣ ರಾವ್, ಅಡೂರು

*ಪುತ್ತಿಲಮನೆ, ಅಡೂರು ಗ್ರಾಮ,*
*ಉರುಡೂರು ಅಂಚೆ*
*ಕಾಸರಗೋಡು ಜಿಲ್ಲೆ - ಕೇರಳ- 671543*
*ಮೊ : 9448043324.*

ಕಟೀಲು ಮೇಳದ ಕಲಾವಿದರಾಗಿ ಕಲಾ ಸೇವೆಗೈಯುತ್ತಿರುವ ಶ್ರೀ ಲಕ್ಷ್ಮೀನಾರಾಯಣ ರಾವ್ ಅಡೂರು ಅವರು ಚೆಂಡೆ-ಮದ್ದಳೆಯ ನುಡಿತ-ಬಡಿತಗಳಲ್ಲಿ ಪ್ರತಿಭಾವಂತರಾಗಿದ್ದಾರೆ.

ಭಾಸ್ಕರ್‌ರಾವ್ ಮತ್ತು ಕಮಲಾ ದಂಪತಿಗೆ ಸುಪುತ್ರರಾಗಿ ಅಡೂರಿನಲ್ಲಿ 15-08-1975ರಂದು ಜನಿಸಿದ ಇವರು ಪದವಿ ಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಪರಿಸರದಲಿ ಆಟ-ಕೂಟಗಳನ್ನು ನೋಡಿ ಹಿಮ್ಮೇಳದ ನಾದ ಮಾಧುರ್ಯಕ್ಕೆ ಆಕರ್ಷಿತರಾದ ಇವರು ಹರಿನಾರಾಯಣ ಬೈಪಾಡಿತ್ತಾಯರಿಂದ ಚೆಂಡೆ-ಮದ್ದಳೆಗಳ ವಾದನದ ರೀತಿ-ನೀತಿಯನ್ನು ಅಭ್ಯಾಸ ಮಾಡಿದರು.

ಇವರ ತಂದೆಯ ತಂದೆ (ಅಜ್ಜ) ಶಿವ ಮದ್ದಳೆಗಾರರು ಹಿಮ್ಮೇಳವಾದಕರಾಗಿದ್ದು ಅವರ ಆದರ್ಶವನ್ನು ಇವರು ಅನುಸರಿಸಿದ್ದಾರೆ.

ಕಟೀಲು ಮೇಳದಲ್ಲಿ 15 ವರ್ಷಗಳ ಕಾಲ ಕಲಾ ಮಾತೆಯ ಸೇವೆ ಗೈದಿರುವ ಇವರು ಕೃಷಿಕ ಮನೆತನಕ್ಕೆ ಸೇರಿದವರಾಗಿದ್ದಾರೆ.

ಶ್ರೀಯುತರು ಕಟೀಲು ಮೇಳದಲ್ಲಿ ಮುಖ್ಯ ಭಾಗವತರಾಗಿದ್ದ ಕುರಿಯ ಗಣಪತಿ ಶಾಸ್ತ್ರಿಯವರ ಮಾರ್ಗದರ್ಶನ ಹಾಗೂ ಸಾಂಗತ್ಯದಲ್ಲಿ ತಮ್ಮ ಕಲಾ ನೈಪುಣ್ಯತೆಯನ್ನು ಮೆರೆಸಿ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



## ಲಕ್ಷ್ಮಣ ಶೆಟ್ಟಿ ತಾರೆಮಾರು

*ತಾರೆಮಾರು ಮನೆ, ನಾಳ ಅಂಚೆ,*
*ಬೆಳ್ತಂಗಡಿ ತಲೂಕು-574 217.*
*ಮೊ ; 9441844920*

ಶ್ರೀ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುವ ಲಕ್ಷ್ಮಣ ಶೆಟ್ಟಿಯವರು ಸ್ತ್ರೀ ವೇಷ, ರಾಜ ವೇಷ ಹಾಗೂ ಪುಂಡು ವೇಷವನ್ನು ಮಾಡ ಬಲ್ಲವರಾಗಿದ್ದಾರೆ.


32 ವರ್ಷಗಳ ವಯೋಮಾನಕ್ಕೆ ಬೆಳೆದಿರುವ ಶ್ರೀಯುತರು ತಾರೆಮಾರಿನ ಕೋಚಪ್ಪ ಶೆಟ್ಟಿ ಮತ್ತು ಕುಂದಮ್ಮ ದಂಪತಿಗೆ ಸುಪುತ್ರನಾಗಿ ಜನಿಸಿದರು. 7ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಸುಣ್ಣಂಬಳ ವಿಶ್ವೇಶ್ವರ ಭಟ್ ಅವರಿಂದ ಪ್ರೇರಣೆ ಪಡೆದು, ಅವರಿಂದಲೇ ನಾಟ್ಯಾಭ್ಯಾಸವನ್ನು ಕಲಿತು ರಂಗ ಪ್ರವೇಶ ಮಾಡಿದರು.

ಕಟೀಲು ಮೇಳದ ಹಿರಿಯ ಕಲಾವಿದರಾಗಿರುವ ಗಂಗಯ್ಯ ಶೆಟ್ಟಿಯವರು ಸಂಬಂಧಿಕರಾಗಿದ್ದು, ಇವರ ಕಲಾ ಸಾಧನೆಯನ್ನು ಪ್ರೋತ್ಸಾಹಿಸಿದ್ದಾರೆ.

ಕಟೀಲು ಮೇಳದಲ್ಲಿ 11 ವರ್ಷಗಳ ತಿರುಗಾಟವನ್ನು ಪೂರೈಸಿರುವ ಲಕ್ಷ್ಮಣ ಶೆಟ್ಟಿಯವರು ವರುಣ, ಮಾರುತ, ಚಂಡ-ಮುಂಡರು, ಚಂಡ-ಪ್ರಚಂಡರು, ದೂಮ್ರಾಕ್ಷ, ಶಿಶುಪಾಲ, ವಿದ್ಯುನ್ಮಾಲಿ, ಸುಪಾರ್ಶ್ವಕ, ದಿತಿ ಮೊದಲಾದ ಪಾತ್ರಗಳನ್ನು ನಿರ್ವಹಿಸಿರುವರು.

ಶ್ರೀಯುತರು ಕೃಷಿಕ ಮನೆತನಕ್ಕೆ ಸೇರಿದ್ದು, ಶ್ರೀಮತಿ ಮೀನಾಕ್ಷಿ ಎಂಬವರನ್ನು ವರಿಸಿ ಸಂತೃಪ್ತ ಜೀವನವನ್ನು ನಡೆಸುತ್ತಿದ್ದಾರೆ.



## ಲಕ್ಷ್ಮಣ ಮುಚ್ಚೂರು

*ಪಡುಬೆಟ್ಟು ಮನೆ, ಮುಚ್ಚೂರು ಗ್ರಾಮ, ಅಂಚೆ,*
*ಮಂಗಳೂರು ತಾಲೂಕು,*
*ಮೊ : 9901478759*

ದಿನಾಂಕ 5-3-1982ರಂದು ಮುಚ್ಚೂರಿನಲ್ಲಿ ಶ್ರೀ ಕೊರಗಪ್ಪ ಮತ್ತು ಶ್ರೀಮತಿ ದುರ್ಗಾವತಿ ದಂಪತಿಗೆ ಸುಪುತ್ರರಾಗಿ ಜನಿಸಿದ ಇವರು 10ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವರು.

15ನೇ ವಯಸ್ಸಿಗೆ ಕರ್ಗಲ್ಲು ವಿಶ್ವೇಶ್ವರ ಭಟ್ ಅವರಿಂದ ಯಕ್ಷಗಾನದ ನಾಟ್ಯಾಭ್ಯಾಸವನ್ನು ಮಾಡಿ ರಂಗವನ್ನು ಪ್ರವೇಶಿಸಿರುವರು.

ಕಟೀಲು ಮೇಳವೊಂದರಲ್ಲೇ 15 ವರ್ಷಗಳ ತಿರುಗಾಟವನ್ನು ಪೂರೈಸಿ ಮುನ್ನಡೆದಿರುವ ಇವರು ಪ್ರಸಾಧನ ಕಲೆಯಲ್ಲಿಯೂ ಆಸಕ್ತರಾಗಿದ್ದಾರೆ.

ವರುಣ, ಮಾರುತ, ಶಂಖ-ದುರ್ಗಾಸುರ, ವೃಷಕೇತು, ಪ್ರದ್ಯುಮ್ನ ಮೊದಲಾದ ಪುಂಡು ವೇಷಗಳೊಂದಿಗೆ ಕಮಲಗಂಧಿನಿ, ದಂಡನಾಥೆ ಮೊದಲಾದ ಕಸೆಯ ಸ್ತ್ರೀ ವೇಷಗಳನ್ನು ಮಾಡಿರುವರು. ಇಷ್ಟಲ್ಲದೆ ಅನಿವಾರ್ಯ ಸಂದರ್ಭಗಳಲ್ಲಿ ಹಾಸ್ಯದ ಪಾತ್ರಗಳನ್ನು ಕೂಡಾ ನಿರ್ವಹಿಸಿದ್ದಾರೆ.

ಮಳೆಗಾಲದಲ್ಲಿ ಕೃಷಿಕರಾಗಿ ಶ್ರಮಿಸುವ ಇವರು ಯಕ್ಷಗಾನದಲ್ಲಿ ಕಲಾ ಸಾಧಕನಾಗಿ ಬೆಳೆಯುವ ಆಶಯವನ್ನು ಇರಿಸಿ ಕೊಂಡಿದ್ದಾರೆ.

ಸ್ವಂತಾಸಕ್ತಿಯಿಂದಲೇ ರಂಗ ಪ್ರವೇಶ ಮಾಡಿ ವೇಷಧಾರಿಯಾಗಿ ಬೆಳೆದು ಬಂದಿರುವ ಯುವ ಕಲಾವಿದರಾದ ಶ್ರೀ ಲಕ್ಷ್ಮಣ ಮುಚ್ಚೂರು ಇವರು ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಾ ಅನುಭವವನ್ನು ಸಂಪಾದಿಸುತ್ತಿದ್ದಾರೆ.



## ಲಕ್ಷಣ ಆಚಾರ್ಯ ಎಡಮಂಗಳ

*ಕೋಡಂಗೆ ಮನೆ, ಎಡಮಂಗಳ ಗ್ರಾಮ-ಅಂಚೆ,*
*ಸುಳ್ಯ ತಾಲ್ಲೂಕು, ದ.ಕ-574 232.*
*ಮೊ : 9449450444*

ಯಕ್ಷಗಾನದ ಪ್ರಭಾವ ಹಾಗೂ ಹಿರಿಯ ಕಲಾವಿದ ಶೀನ ಭಂಡಾರಿಯವರ ಪ್ರೋತ್ಸಾಹದೊಂದಿಗೆ ವೇಷಧಾರಿಯಾದ ಶ್ರೀ ಲಕ್ಷ್ಮಣ ಆಚಾರ್ಯ ಎಡಮಂಗಳ ಇವರು ಶ್ರೀ ಕೊಲ್ಲಂಗಾನ ಮೇಳದಲ್ಲಿ ಕಲಾ ಸೇವೆಯನ್ನು ಮಾಡುತ್ತಿದ್ದಾರೆ.

ನಾರಾಯಣ ಆಚಾರಿ ಹಾಗೂ ರಾದಮ್ಮ ದಂಪತಿಗೆ ಎಡಮಂಗಳದಲ್ಲಿ ಜನಿಸಿದ ಇವರು 3ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

38ರ ವಯಸ್ಸಿಗೆ ಬೆಳೆದಿರುವ ಇವರು 13ನೇ ವಯಸ್ಸಿನಲ್ಲಿ, ಕಟೀಲು ಮೇಳದ ಸ್ತ್ರೀ ವೇಷಧಾರಿಯಾಗಿದ್ದ ರಾಧಕೃಷ್ಣ ರೈ ದೆಲಂಪಾಡಿ ಹಾಗೂ ಶೀನ ಭಂಡಾರಿಯವರಿಂದ ನಾಟ್ಯಾಭ್ಯಾಸ ಮಾಡಿ ರಂಗ ಪ್ರವೇಶ ಮಾಡಿದರು.

ಕಲಾವಿದ ದಿ। ನಾರಾಯಣ ಆಚಾರಿ ಕಡಬ. ಶ್ರೀಯುತ ದೂರದ ಸಂಬಂಧಿಯಾಗಿದ್ದಾರೆ. ಹಾಗೆಯೇ ಅಜ್ಜ ದಿ।ಕುಂಞ ಆಚಾರಿಯವರು ಕೂಡಾ ಮದ್ದಳೆಗಾರರಾಗಿದ್ದರು. ಇವರಿಂದ ಪ್ರೋತ್ಸಾಹಕ್ಕೆ ಒಳಪಟ್ಟ ಲಕ್ಷ್ಮಣ ಆಚಾರ್ಯರ ಸಾಧನೆ ಮುಮ್ಮೇಳದ ವಿಭಾಗಕ್ಕೆ ಸೇರಿತು.

ಸುಬ್ರಹ್ಮಣ್ಯ ಮೇಳದಲ್ಲಿ 8 ವರ್ಷ, ಬಪ್ಪನಾಡು ಮೇಳದಲ್ಲಿ 5 ವರ್ಷ, ಮಹಾಲಕ್ಷ್ಮೀ ಮೇಳ ಪುತ್ತೂರು 3 ವರ್ಷ, ಕೊಲ್ಲಂಗಾನ ಮೇಳದಲ್ಲಿ 4 ವರ್ಷ, ಕಾಟಿಪಳ್ಳ ಮೇಳದಲ್ಲಿ 3 ವರ್ಷ, ಕುಂಟಾರು ಮೇಳದಲ್ಲಿ 2 ವರ್ಷ, ಮಂಗಳಾದೇವಿ, ನೆಪ್ಪಣಿಗೆ ಮತ್ತು ಸಸಿಹಿತ್ಲು ಮೇಳದಲ್ಲಿ ಒಂದೊಂದು ವರ್ಷಗಳ ತಿರುಗಾಟವನ್ನು ಮಾಡಿರುವ ಅನುಭವಿ ಕಲಾವಿದರು ಇವರಾಗಿದ್ದಾರೆ.

ಶುಂಭ, ಮಹಿಷಾಸುರ, ವರಾಹ, ಪುರುಷಾಮೃಗ, ಮತ್ಸ್ಯ, ಚಂಡ-ಮುಂಡರು, ಚಂಡ-ಪ್ರಚಂಡರು, ಬ್ರಹ್ಮ, ವಿಷ್ಣು, ರಾಮ, ಕೃಷ್ಣ, ಶ್ರೀದೇವಿ, ಮಾಲಿನಿ, ಭ್ರಮರ ಕುಂತಳೆ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ರಾಜ, ಬಣ್ಣ, ಪುಂಡು, ಸ್ತ್ರೀ, ಹಾಸ್ಯ ವೇಷಗಳು ಸೇರಿದಂತೆ ಎಲ್ಲಾ ನಮೂನೆಯ ಪಾತ್ರಗಳನ್ನು ನಿರ್ವಹಿಸಿರುವ ಇವರು ನೃತ್ಯ ಶಿಕ್ಷಕರಾಗಿ ತರಬೇತಿಯನ್ನು ಕೂಡಾ ನೀಡಿದ್ದಾರೆ.

ಹೊಸಮಠ, ಬಿಳಿನೆಲೆಹೈಸ್ಕೂಲು, ಕಲ್ಲುಗುಡ್ಡೆ, ಬೆಳ್ಳಾರೆ, ಮರ್ಕಂಜ, ಸುಳ್ಯ ಇತ್ಯಾದಿ ಕಡೆಗಳಲ್ಲಿ ಸಂಮ್ಮಾನಕ್ಕೆ ಭಾಜನರಾಗಿರುವ ಇವರು ಪತ್ನಿ ವಿಶಾಲಾಕ್ಷಿ ಮಕ್ಕಳಾದ ಪ್ರಿಯಾಂಕ ಮತ್ತು ಶಿವಕೀರ್ತನ್ ಇವರೊಂದಿಗೆ ತೃಪ್ತ ಜೀವನವನ್ನು ನಡೆಸುತ್ತಿದ್ದಾರೆ.



## ವಸಂತ ಕಟೀಲ್

*ದೇವರ ಗುಡ್ಡೆ ಮನೆ. ಬಡಗ ಎಕ್ಕಾರು ಗ್ರಾಮ,*
*ಕಟೀಲು ಅಂಚೆ, ಮಂಗಳೂರು ತಾಲೂಕು 574148.*
*ಮೊ ; 9964144454.*

ಬಣ್ಣದ ವೇಷ ಹಾಗೂ ರಾಜವೇಷದ ಪಾತ್ರಗಳನ್ನು ನಿರ್ವಹಿಸುವ ಶ್ರೀ ವಸಂತ ರಾಜ್ ಕಟೀಲು ಇವರು ಬಪ್ಪನಾಡು ಮೇಳದ ಕಲಾವಿದರಾಗಿ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ತಾ. 1-7-1972 ರಲ್ಲಿ ಶ್ರೀ ಕೊರಗ ಹಾಗೂ ಶ್ರೀಮತಿ ನುಕ್ಕು ದಂಪತಿಯ ಸುಪುತ್ರರಾಗಿ ದೇವರ ಗುಡ್ಡೆಯಲ್ಲಿ ಜನಿಸಿದರು.

8ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 16ನೇ ವಯಸ್ಸಿನಿಂದ ಯಕ್ಷಗಾನದ ಪಾತ್ರ ನಿರ್ವಹಣೆಯನ್ನು ಮಾಡಲಾರಂಭಿಸಿದರು.

ವೇಷಧಾರಿ ಕೃಷ್ಣಪ್ಪ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿರುವ ವಸಂತರು ತಳಕಳ ಮೇಳ -2 ವರ್ಷ, ಸಸಿಹಿತ್ಲು ಭಗವತಿ ಮೇಳ -5 ವರ್ಷ, ಹಾಗೂ ಬಪ್ಪನಾಡು ಮೇಳ -8 ವರ್ಷ. ಹೀಗೆ ಕಲಾಸೇವೆಯ ಹಿನ್ನೆಲೆಯನ್ನು ಹೊಂದಿದ್ದಾರೆ.

ಶುಂಭ, ವರಾಹ, ಮಹಿಷ, ಗುಳಿಗ, ಮತ್ಸ್ಯ ಭೀಮ, ವೀರಭದ್ರ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ನಾಟಕ ಕಲೆಯಲ್ಲೂ ಅಭಿರುಚಿ ಇದ್ದು ಹಲವು ಪಾತ್ರಗಳನ್ನು ನಿರ್ವಹಿಸಿರುವ ಇವರು ಕಾರ್ಣಿಕದ ದೈವ ಜುಮಾದಿ ಎಂಬ ಪ್ರಸಂಗವನ್ನು ರಚಿಸಿ ಶ್ರೀ ಗಣೇಶ ಕೊಲೆಕಾಡಿ ಅವರಿಂದ ಪದ್ಯ ರಚನೆ ಮಾಡಿಸಿರುವರು.

ಉಪವೃತ್ತಿಗಾಗಿ ಮನೆಯಲ್ಲೇ ಕಲಾ ಆರ್ಟ್ಸ್ ಸಂಸ್ಥೆಯನ್ನು ಸ್ಥಾಪಿಸಿ ಚಿತ್ರ-ಬರಹದ ಕಲಾ ನಿಪುಣತೆಯನ್ನು ಸಾಧಿಸಿದ್ದಾರೆ.

ಶ್ರೀಮತಿ ಚಂದ್ರಾವತಿ ಎಂಬವರನ್ನು ವರಿಸಿ ಅಭಿಷೇಕ್‌ರಾಜ್ ಹಾಗೂ ಅಭಿಜಿತ್‌ರಾಜ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.



## ವಸಂತ ಗೌಡ ಕಾಯರ್ತಡ್ಕ

*ಕಳೆಂಜ ಗ್ರಾಮ, ಕಾಯರ್ತಡ್ಕ ಅಂಚೆ*
*ಬೆಳ್ತಂಗಡಿ ತಾಲೂಕು – 574216*
*ಫೋನ್: 08256–203233*
*ಮೊ : 9449387351.*

ಶ್ರೀ ಧರ್ಮಸ್ಥಳ ಮೇಳದಲ್ಲಿ ಸುದೀರ್ಘವಾದ 35 ವರ್ಷಗಳ ತಿರುಗಾಟವನ್ನು ಮಾಡಿ ಕಲಾ ಸೇವೆಯಲ್ಲಿ ಪಳಗಿದ ಶ್ರೀ ವಸಂತ ಗೌಡರು ರಾಜವೇಷ, ಮತ್ತು ಪುಂಡುವೇಷಧಾರಿಯಾಗಿ ಮನ್ನಣೆಗಳಿಸಿರುತ್ತಾರೆ.

ಶ್ರೀ ಬಿರ್ಮಣ ಗೌಡ ಮತ್ತು ಶ್ರೀಮತಿ ಬೊಮ್ಮಿ ಅಮ್ಮ ಇವರ ಸುಪುತ್ರನಾಗಿ, ತಾ. 01–09–1962 ರಂದು ಕಾಯರ್ತಡ್ಕದಲ್ಲಿ ಹುಟ್ಟಿದ ಇವರು 7ನೇ ತರಗತಿಯ ತನಕ ಕಲಿತಿರುತ್ತಾರೆ.

13ನೇ ವರ್ಷದಲ್ಲಿ ಯಕ್ಷಗಾನದ ಅಧ್ಯಯನಕ್ಕೆ ಮನಮಾಡಿದ ಇವರು, ಧರ್ಮಸ್ಥಳದ ಲಲಿತ ಕಲಾ ಕೇಂದದಲ್ಲಿ ಗುರುಗಳಾದ ಪಡ್ರೆ ಚಂದು ಮತ್ತು ಕೆ ಗೋವಿಂದ ಭಟ್, ಅವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು.

ಪುಂಡು ವೇಷ ಹಾಗೂ ರಾಜವೇಷ ಮಾಡುವ ಶ್ರೀಯುತರು ಅಭಿಮನ್ಯು, ಭಾರ್ಗವ, ಬಬ್ರುವಾಹನ, ದೇವೆಂದ್ರ, ಅರ್ಜುನ, ರಾಮ, ಕೃಷ್ಣ, ಕಮಲಗಂಧಿನಿ, ಭ್ರಮರಕುಂತಳೆ, ಮೀನಾಕ್ಷಿ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಳೆಗಾಲಕ್ಕೆ ನೆಡ್ಲೆಯ ಮಹಾಗಣಪತಿ ಯಕ್ಷಗಾನ ಕಲಾ ಮಂಡಳಿಯಲ್ಲಿ ಪಾತ್ರ ನಿರ್ವಹಣೆಯನ್ನು ಮಾಡಿ ಸತ್ಕೀರ್ತಿಗೆ ಭಾಜನರಾಗಿದ್ದಾರೆ.

ಹವ್ಯಾಸಿ ಕಲಾವಿದರಿಗೆ ತರಬೇತಿ ನೀಡುವ ಇವರಿಗೆ ಸಂಘ ಸಂಸ್ಥೆಗಳಿಂದ ಪವುರಸ್ಕಾರ ದೆಹಲಿ ಮಾಜಿ ರಾಷ್ಟ್ರಪತಿ ಶಂಕರ ದಯಾಳ್ ಶರ್ಮರಿಂದ ಗೌರವಪುರಸ್ಕಾರ ಅಲ್ಲದೆ ನಿಡ್ಲೆಯ ತಂಡದಲ್ಲಿ, ಮೈಸೂರು, ಹೈದರಾಬಾಗ್, ಚೆನ್ನಯಿ ಮೊದಲಾದ ಕಡೆಗಳಲ್ಲಿ ಗೌರವಿಸಲಾಗಿದೆ.

ಕೃಷಿಕ ಮನೆತನಕ್ಕೆ ಸೇರಿದ ಇವರು ಶ್ರೀಮತಿ ಗೀತಾ ಎಂಬವರನ್ನು ವಿವಾಹವಾಗಿ ಮೂವರು ಮಕ್ಕಳನ್ನು ಪಡೆದಿದ್ದಾರೆ. ಶ್ರೀಯುತರ ಹಿರಿಯ ಮಗನಾದ ಶ್ರೀ ರವಿ ಎಂಬವರು ಸಾಪ್ಟ್‌ವೇರ್ ಇಂಜಿನಿಯರಿಂಗ್ ಆಗಿದ್ದಾರೆ.ಪುನೀತ್ ಮತ್ತು ದಯಾನಂದ್ ಎಂಬೀರ್ವರು ಶೈಕ್ಷಣಿಕ ಅಧ್ಯಯನವನ್ನು ನಡೆಸುತ್ತಾ ಇದ್ದಾರೆ.



## ವಾಮನ ಕುಮಾರ್ ವಿ.ವಿ.

*ಅನ್ನಪೂರ್ಣ ನಿವಾಸ, ವೇಣೂರು ಅಂಚೆ ಮತ್ತು ಗ್ರಾಮ, ಬೆಳ್ತಂಗಡಿ ತಲೂಕು–574242*
*ಮೊಬೈಲ್ : 9449953991*

ಉತ್ತಮವಾದ ಸ್ತ್ರೀವೇಷ, ಹಾಗೂ ಪುಂಡು ವೇಷವನ್ನು ಮಾಡುತ್ತಾ ಜನರ ಮೆಚ್ಚುಗೆಯನ್ನು ಗಳಿಸಿದ ಶ್ರೀ ವಾಮನ ಕುಮಾರ್ ಇವರು ಮಂಗಳಾ ದೇವಿ ಮೇಳದ ಕಲಾವಿದರಾಗಿದ್ದಾರೆ.

ದ.ಕ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ವೇಣೂರು ಗ್ರಾಮದಲ್ಲಿ ಶ್ರೀ ಅಣ್ಣು ದೇವಾಡಿಗ ಮತ್ತು ಶ್ರೀಮತಿ ಮೋನಮ್ಮ ದಂಪತಿಯ ಸುಪುತ್ರನಾಗಿ ಇವರು ಜನಿಸಿದರು.

8ನೇ ತರಗತಿಯವರಿಗೆ ವಿದ್ಯಾಭ್ಯಾಸವನ್ನು ಕಲಿತ ಇವರು ಭಾವನಾದ ಜಗದೀಶ ದೇವಾಡಿಗ ಹಾಗೂ ಶ್ರೀ ಮನೋಹರ ಕುಮಾರ್ ಇವರ ಪ್ರೇರಣೆಯಿಂದ ಗುರುಗಳಾದ ಶ್ರೀ ಕರ್ಗಲ್ಲು ವಿಶ್ವೇಶ್ವರ ಭಟ್‌ರಿಂದ ಯಕ್ಷಗಾನವನ್ನು ಅಭ್ಯಾಸ ಮಾಡಿದರು.

ಸ್ತ್ರೀವೇಷ ಹಾಗೂ ಪುಂಡುವೇಷ ವಿಭಾಗದಲ್ಲಿ ಪರಿಣತಿಯುನ್ನು ಹೊಂದಿದ ಇವರು ಕನ್ನಡ ಹಾಗೂ ತುಳು ಯಕ್ಷಗಾನರಂಗದಲ್ಲಿ ಮೆಚ್ಚುಗೆಯನ್ನು ಪಡೆದಿದ್ದಾರೆ.

ಧರ್ಮಸ್ಥಳ ಮೇಳದಲ್ಲಿ 2 ವರ್ಷ, ಕದ್ರಿ ಮೇಳದಲ್ಲಿ 4 ವರ್ಷ ಹಾಗೂ ಮಂಗಳಾದೇವಿ ಮೇಳದಲ್ಲಿ ಕಳೆದ 13 ವರ್ಷಗಳಿಂದ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಪ್ರಮೀಳೆ, ಭ್ರಮರಕುಂತಳೆ, ಮಾಲಿನಿ, ಪ್ರಭಾವತಿ, ಪದ್ಮಾವತಿ, ಕಿನ್ನಿದಾರು, ದುರ್ಮುಖಿ, ಕುಶ–ಲವರು, ಹುಂಡ–ಪುಂಡರು, ಚಂಡ–ಮುಂಡರು, ಕೋಟಿ–ಚೆನ್ನಯರು, ಕಾಂತಾಬಾರೆ–ಬೂದಾಬರೆಯರು ಮುಂತಾದ ಪಾತ್ರಗಳಲ್ಲಿ ಉತ್ತಮವಾದ ನಿರ್ವಹಣೆಯನ್ನು ತೋರಿದ್ದಾರೆ.

ಶ್ರೀಮತಿ ಆಶಾ ಎಂಬವರನ್ನು ವರಿಸಿ ಕುಮಾರಿ ವಂಶಿ ಎಂಬ ಹೆಣ್ಣು ಮಗುವನ್ನು ಪಡೆದಿರುವ ವಾಮನರು ಮಳೆಗಾಲದಲ್ಲಿ ಉಪವೃತ್ತಿಯಾಗಿ ಕೃಷಿಯನ್ನು ಅವಲಂಬಿಸಿದ್ದಾರೆ.

ಇವರ ಯಕ್ಷಗಾನದ ಕಲಾ ಸೇವೆಗೆ ಪ್ರತಿಫಲವಾಗಿ ಮಸ್ಕತಿನ ಗೌರವ, ಕದ್ರಿ ಮೇಳದ ಸಂಮಾನ ಹಾಗೂ ಮಂಗಳಾದೇವಿ ಮೇಳದ ಸಂಮಾನಗಳು ದೊರೆತಿವೆ.



## ವಿಠಲ ಶೆಟ್ಟಿಗಾರ್ ಕಾವೂರ್

*ಕಾವೂರು*
*ಮಂಗಳೂರು ತಾಲೂಕು ದ.ಕ.*

ಪುಂಡುವೇಷದ ಮುಖೇನ ಖ್ಯಾತರಾದ ಶ್ರೀ ಕಾವೂರು ವಿಠಲ ಶೆಟ್ಟಿಗಾರರು ಪ್ರಸ್ತುತ ಯಕ್ಷಗಾನ ಕಲಾಸೇವೆಯಿಂದ ನಿವೃತ್ತ ಜೀವನವನ್ನು ನಡೆಸುತ್ತಾ ಇದ್ದಾರೆ.

ಶ್ರೀ ಕೊರಗಪ್ಪ ಸೆಟ್ಟಿಗಾರ ಮತ್ತು ಶ್ರೀಮತಿ ಸೇಸಮ್ಮ ದಂಪತಿಯ ಮಗನಾಗಿ ಜನಿಸಿದ ವಿಠಲ ಶೆಟ್ಟಿಗಾರರು ಎಳೆವೆಯಲ್ಲೇ ಯಕ್ಷಗಾನದತ್ತ ಆಕರ್ಷಿತರಾದರು.

ಈಗಾಗಲೆ ಯಕ್ಷಗಾನ ಕಲೆಯಲ್ಲಿ ಸಾಧನೆಯನ್ನು ಮಾಡಿ ಕೀರ್ತಿಶೇಷರಾದ ಕಾವೂರು ಕೇಶವರು ಇವರ ಮಾವನಾಗಿದ್ದು ಕಲಾಸಕ್ತಿಗೆ ಉತ್ತೇಜನವನ್ನು ನೀಡಿದರು. ನಾಟ್ಯಾಭ್ಯಾಸ ಮಾಡಿಸಿ, ರಂಗದ ಅನುಭವವನ್ನು ನೀಡಿ ಗೆಜ್ಜೆ ಕಟ್ಟಿ ಕುಣಿಸಿದರು.

ಕಟೀಲು ಮೇಳ –3ವರ್ಷ, ಕೂಡ್ಲು ಮೇಳ – 4ವರ್ಷ, ಇರುವೈಲು ಮೇಳ –1ವರ್ಷ, ಹೆರ್ಗಾ ಮೇಳ –2ವರ್ಷ, ಸುಂಕದಕಟ್ಟೆ ಮೇಳ –6ವರ್ಷ, ಕೊಲ್ಲೂರು ಮೇಳ –2ವರ್ಷ, ನಂದಾವರ ಮೇಳ ,1ವರ್ಷ, ತಲಕಳ ಮೇಳ –3ವರ್ಷ, ಕದ್ರಿಮೇಳ – 1ವರ್ಷ ಹೀಗೆ ಮೇಳಗಳ ತಿರುಗಾಟದ ಹಿನ್ನೆಲೆಯನ್ನು ಹೊಂದಿದ್ದಾರೆ. ಇಷ್ಟಲ್ಲದೆ ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಾಸೇವೆ ಮಾಡಿದ್ದಾರೆ.

ಮಾರ್ತಾಂಡ ತೇಜ, ರಾಮ, ಲಕ್ಷ್ಮಣ, ಕೃಷ್ಣ, ಅಭಿಮನ್ಯು, ಬಭ್ರುವಾಹನ ಮುಂತಾದ ಪುಂಡುವೇಷಗಳೊಂದಿಗೆ ಪ್ರಮೀಳೆ, ಭ್ರಮರ ಕುಂತಳೆ ಮುಂತಾದ ಸ್ತ್ರೀವೇಷಗಳನ್ನು ನಿರ್ವಹಿಸಿದ್ದಾರೆ. ದೇವೇಂದ್ರ, ಅರ್ಜುನಾದಿ ರಾಜವೇಷಗಳನ್ನು ಮಾಡಿದ ಅನುಭವ ಕೂಡ ಇವರಿಗಿದೆ.

ಯಕ್ಷಗಾನದ ಪರಂಪರೆಯ ಶೈಲಿಯನ್ನು ಮೈಗೂಡಿಸಿಕೊಂಡಿದ್ದ ಇವರ ನಾಟ್ಯಶೈಲಿ ಮತ್ತು ಪಾತ್ರಚಿತ್ರಣ ಪ್ರೇಕ್ಷಕರ ಆಕರ್ಷಣೆಗೆ ಒಳಗಾಗಿದೆ.

ಮಳೆಗಾಲದಲ್ಲಿ ನೈಗೆ ಉದ್ಯೋಗವನ್ನು ಮಾಡುತ್ತಿದ್ದ ಇವರು ಕಳೆದ ಹಲವು ವರ್ಷಗಳಿಂದ ಗಾರೆ ಕೆಲಸಕ್ಕೆ ತೊಡಗಿಸಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ.

ಶ್ರೀಮತಿ ಚಂದ್ರಾವತಿ ಎಂಬವರನ್ನು ಮದುವೆಯಾಗಿ ಓರ್ವಾಕೆ ಹೆಣ್ಣು ಮಗಳೊಂದಿಗೆ ಸಾರ್ಥಕ ಜೀವನವನ್ನು ನಡೆಸುವ ಇವರ ಸಾಧನೆಯನ್ನು ಗುರುತಿಸಿ ಹವ್ಯಾಸಿ ಬಳಗ ಕದ್ರಿಯು ತನ್ನ ದಶಮಾನ ಸಂಮಾನ ಶತಕದ ನಿಮಿತ್ತ ಇವರನ್ನು ಗೌರವಿಸಿ ಸಂಮಾನಿಸಿದೆ.



## ವಿಶ್ವನಾಥ ಕಾಯರ್ತಡ್ಕ

*ಬಲ್ಕಾಜೆ ಮನೆ, ಕಲೆಂಜ ಗ್ರಾಮ,*
*ಕಾಯರ್ತಡ್ಕ ಅಂಚೆ, ಬೆಳ್ತಂಗಡಿ ತಾಲ್ಲೂಕು*
*ಮೊ :9945912580*

ಸ್ವಂತ ಆಸಕ್ತಿಯೇ ಕಾರಣವಾಗಿ ಯಕ್ಷಗಾನವನ್ನು ಅಭ್ಯಸಿಸಿ ಮಂಡುವೇಷ ಹಾಗೂ ರಾಜವೇಷಗಳನ್ನು ಮಾಡುವ ಶ್ರೀ ವಿಶ್ವನಾಥ ಕಾರ್ಯರ್ತಡ್ಕರವರು ಸಸಿಹಿತ್ಲು ಭಗವತಿ ಮೇಳದಲ್ಲಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.


ತಂದೆ ಶೀನಪ್ಪ, ತಾಯಿ ನೀಲಮ್ಮ. ಹುಟ್ಟೂರು ಬಲ್ಕಾಜೆ, 5ನೇ ತರಗತಿಯವರೆಗೆ ಶಾಲಾ ಶಿಕ್ಷಣವನ್ನು ಪಡೆದ ಇವರು 11ನೇ ವಯಸ್ಸಿನಲ್ಲಿ ಯಕ್ಷಗಾನದ ಅಧ್ಯಯನ ಮಾಡಿದರು.

ಕೋಳ್ಯೂರು ರಾಮಚಂದ್ರ ರಾವ್ ಅವರಿಂದ ನಾಟ್ಯಾಭ್ಯಾಸ ಮಾಡಿದ ಇವರು ಭಾವನಾದ ವೇಷಧಾರಿ ವಸಂತಗೌಡ ಕಾಯರ್ತಡ್ಕ ಅವರ ಪ್ರೋತ್ಸಾಹದ ಮೇರೆಗೆ ಮೇಳ ತಿರುಗಾಟವನ್ನು ನಡೆಸಿದರು.

ಧರ್ಮಸ್ಥಳ ಮೇಳದಲ್ಲಿ 1 ವರ್ಷ, ಸುಂಕದಕಟ್ಟೆ ಮೇಳದಲ್ಲಿ 6 ವರ್ಷ, ಹಾಗೂ ಸಸಿಹಿತ್ಲು ಮೇಳದಲ್ಲಿ 5 ವರ್ಷಗಳ ತಿರುಗಾಟವನ್ನು ಪೂರೈಸಿದ್ದಾರೆ.

ಪ್ರಸಾಧನ ಕಲೆಯಲ್ಲಿಯೂ ನಿಪುಣತೆಯನ್ನು ಸಾಧಿಸಿರುವ ಇವರು ಚಂಡ-ಮುಂಡರು, ಕೋಟಿ--ಚೆನ್ನಯ, ಪರಶುರಾಮ, ಲವ-ಕುಶ, ದೇವೇಂದ್ರ, ವಿದ್ಯುನ್ಮಾಲಿ, ಧೂಮ್ರಾಕ್ಷ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

31ರ ವಯೋಮಾನಕ್ಕೆ ಬೆಳೆದಿರುವ ಇವರು ಪತ್ನಿ ಶ್ರೀಮತಿ ಪ್ರೇಮಾ ಹಾಗೂ ಮಗಳು ತನುವಿನೊಂದಿಗೆ ನೆಮ್ಮದಿಯ ಜೀವನವನ್ನು ನಡೆಸುತ್ತಾ ಇದ್ದಾರೆ.



# ವಿಶ್ವನಾಥ ನಾಯ್ಕ ಎಡನೀರು

*ಹುಣ್ಸೆಯಡಿ ಮನೆ, ಪಾಡಿ ಗ್ರಾಮ, ಅಂಚೆ ಎಡನೀರು, ಕಾಸರಗೋಡು.*

*ಮೊ ; 9611875869 / 09895207432*

ಪಗಡಿ ವೇಷ, ಸ್ತ್ರೀ ವೇಷ, ಹಾಗೂ ಹಾಸ್ಯ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಶ್ರೀ ವಿಶ್ವನಾಥ ನಾಯ್ಕ ಎಡನೀರು ಇವರು ಹೊಸನಗರ ಮೇಳದ ಕಲಾವಿದರಾಗಿದ್ದಾರೆ.

ಎಡನೀರಿನಲ್ಲಿ ತಾ.18–3–1983ರಂದು ತಮ್ಮಣ್ಣ ನಾಯ್ಕ ಹಾಗೂ ಗೌರಿ ದಂಪತಿಗೆ ಸುಪುತ್ರನಾಗಿ ಜನಿಸಿದ ಇವರು 7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವರು.

ಇವರು 14ನೇ ವಯಸ್ಸಿನಲ್ಲಿ ಹರಿನಾರಾಯಣ ಭಟ್ ಎಡನೀರು ಅವರ ಪ್ರೇರಣೆಯೊಂದಿಗೆ ಅವರಿಂದ ಹಾಗೂ ದಿವಾಣ ಶಿವಶಂಕರಭಟ್ ಇವರಲ್ಲಿ ನಾಟ್ಯಾಭ್ಯಾಸ ಮಾಡಿ ಯಕ್ಷಗಾನದ ರಂಗವನ್ನು ಪ್ರವೇಶಿಸಿದರು.

ಧರ್ಮಸ್ಥಳ ಮೇಳದಲ್ಲಿ 1 ವರ್ಷ, ಕಟೀಲು ಮೇಳದಲ್ಲಿ 3 ವರ್ಷ, ಎಡನೀರು ಮೇಳದಲ್ಲಿ 4 ವರ್ಷ ಹಾಗೂ ಹೊಸನಗರ ಮೇಳದಲ್ಲಿ 2 ವರ್ಷಗಳ ತಿರುಗಾಟ ಮಾಡಿರುವರು.

ವೃಷಕೇತು, ಪ್ರಹ್ಲಾದ, ವರುಣ, ಬಾಲಸರಸ್ವತಿ, ತ್ರಿನೇತ್ರ, ಮಾರುತ, ಚಂಡ–ಮುಂಡರು, ಕೃಷ್ಣ, ಜಾಂಬವತಿ, ಪ್ರಮೀಳೆ, ಕಮಲಗಂಧಿನಿ, ಇತ್ಯಾದಿ ವೇಷಗಳನ್ನು ಇವರು ಮಾಡಿದ್ದಾರೆ.



## ವೆಂಕಟೇಶ ಆಚಾರ್ಯ

*ಮಲೆನಾಡು ಸ್ವಾ ಮಿಲ್‌ನ ಹತ್ತಿರ*
*ಕುಲಶೇಖರ, ಪೆದಮಲೆ ಅಂಚೆ*
*ಮಂಗಳೂರು*
*ಮೊಬೈಲ್: **9900801023.***

ಶ್ರೀ ಭಗವತೀ ಮೇಳ ಸಸಿಹಿತ್ಲು ಇದರಲ್ಲಿ ಯಕ್ಷಗಾನ ತಿರುಗಾಟವನ್ನು ಮಾಡುತ್ತಾ ಪುಂಡುವೇಷ, ಬಣ್ಣದವೇಷ, ಕಿರೀಟವೇಷ ಇತ್ಯಾದಿ ವೇಷಗಳನ್ನು ಮಾಡುತ್ತಾ ಬಂದಿರುವವರು ಶ್ರೀ ವೆಂಕಟೇಶ ಆಚಾರ್ಯ.

ಶ್ರೀ ಸಂಕ್ರಯ್ಯ ಆಚಾರ್ಯ ಹಾಗೂ ಶ್ರೀಮತಿ ರತ್ನಾವತಿ ದಂಪತಿಯ ಸುಪುತ್ರನಾಗಿ ದಿನಾಂಕ 14-12-1978ರಂದು ಮಂಗಳೂರಿನಲ್ಲಿ ಇವರು ಜನಿಸಿದರು. 9ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪೂರೈಸಿದ ಇವರು ರಮೇಶ ಕುಲಶೇಖರ ಹಾಗೂ ನಾಗೇಶ ಕುಲಶೇಖರ ಅವರ ಪ್ರೇರಣೆಯಿಂದ 16ನೇ ವಯಸ್ಸಿನಲ್ಲಿ ಮುಂಡಾಜೆ ಸದಾಶಿವ ಶೆಟ್ಟಿ ಹಾಗೂ ಜಪ್ಪು ದಯಾನಂದ ಶೆಟ್ಟಿ ಅವರಿಂದ ನಾಟ್ಯಾಭ್ಯಾಸವನ್ನು ಕಲಿತರು.

ಶ್ರೀ ಸುಬ್ರಹ್ಮಣ್ಯ ಯಕ್ಷಗಾನ ಮಂಡಳಿಯಲ್ಲಿ 4 ವರ್ಷ ಹಾಗೂ ಸಸಿಹಿತ್ಲು ಶ್ರೀ ಭಗವತೀ ಮೇಳದಲ್ಲಿ 8 ವರ್ಷವನ್ನು ಪೂರೈಸಿರುವು.

ಮಹಿಷಾಸುರ, ಶುಂಭ, ಮಧು-ಕೈಟಭರು, ಚಂಡ-ಮುಂಡರು, ಕಾಶೀ, ವರಾಹ ಇತ್ಯಾದಿ ವೇಷಗಳನ್ನು ಮಾಡುತ್ತಿದ್ದಾರೆ.

ಯಕ್ಷಗಾನದಲ್ಲಿ ವೇಷವನ್ನು ಮಾಡುವುದಲ್ಲದೆ ಹಿಮ್ಮೇಳದ ಮದ್ದಳೆಯ ನುಡಿತ-ಬಡಿತಗಳನ್ನು ಕಲಿತು ವಾದನದ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ.



# ಶಶಿಧರ ಶೆಟ್ಟಿ ಪಂಜ ಕ್ಯೊಕುಡೆ

*ಬೋಳೂರು ಗುತ್ತು ಮನೆ*
*ಬೋಳ ಕೋಡಿ*
*ಕಾರ್ಕಳ ತಾಲೂಕು*

ಕರ್ಕಶವಾದ ಕಂಠದಿಂದ ಬಣ್ಣದ ವೇಷವನ್ನು, ಗತ್ತುಗಾರಿಕೆಯೊಂದಿಗೆ ರಾಜವೇಷವನ್ನು ನಿರ್ವಹಸುವ ಶ್ರೀ ಶಶಿಧರ ಶೆಟ್ಟಿ ಪಂಜ ಇವರು ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡುತ್ತಿದ್ದಾರೆ.


ಪಂಜಕ್ಯೊಕುಡೆ ನಾರಾಯಣ ಶೆಟ್ಟಿ ಹಾಗೂ ಪುಷ್ಪಾವತಿ ಶೆಡ್ತಿಯವರಿಗೆ ಸುಪುತ್ರರಾಗಿ 22-11-1971ರಂದು ಜನಿಸಿದ ಇವರು 6ನೇ ತರಗತಿ ವರೆಗೆ ವ್ಯಾಸಾಂಗ ಮಾಡಿರುವರು.

21ನೇ ವಂಯೋವಮಾನದಲ್ಲಿ ಕೋಳ್ಯೂರು ರಾಮಚಂದ್ರ ರಾವ್ ಮತ್ತು ಡಿ. ಗೋಪಾಲಕೃಷ್ಣ ಭಟ್ ಅವರಿಂದ ನಾಟ್ಯಾಭ್ಯಾಸ ಮಾಡಿದರು.

ಬಪ್ಪನಾಡು ಮೇಳದಲ್ಲಿ 1 ವರ್ಷ ಹಾಗೂ ಕಟೀಲು ಮೇಳದಲ್ಲಿ ನಿರಂತರವಾಗಿ 17 ವರ್ಷಗಳನ್ನೂ ಪೂರೈಸಿದ್ದಾರೆ.

ಶುಂಭ-ನಿಶುಂಭ, ಶೂರಪದ್ಮ, ದೇವೇಂದ್ರ , ದಂತವಕ್ತ್ರ ಶೂರ್ಪನಖಾ ಇತ್ಯಾದಿ ವೇಷಗಳನ್ನು ಮಾಡಿದ ಅನುಭವ ಇವರದ್ದಾಗಿದೆ.

ಶ್ರೀಮತಿ ಸುನಿತಾ ಶೆಡ್ತಿಯವರನ್ನು ವರಿಸಿರವ ಇವರು ಪರಂಪರೆಯ ಶೈಲಿಯನ್ನು ಅನುಸರಿಸಿರುವ ಕಲಾವಿದರಾಗಿದ್ದಾರೆ.



## ಶಶಿಧರ ಕುಲಾಲ್. ಎಸ್

*"ನಂದರ ಬೆಟ್ಟು ಮನೆ", ಕನ್ಯಾನ ಗ್ರಾಮ ಮತ್ತು ಅಂಚೆ*
*ಬಂಟ್ವಾಳ ತಾಲೂಕು – 574279*
*ಮೊಬೈಲ್: 9448916438.*

ಶ್ರೀ ಎಡನೀರು ಯಕ್ಷಗಾನ ಮಂಡಳಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಯಕ್ಷಗಾನ ವೇಷಧಾರಿಯಾಗಿರುವ ಶ್ರೀಯುತ ಶಶಿಧರ ಕುಲಾಲ್. ಎಸ್ ಇವರು ಪುಂಡುವೇಷ ಹಾಗೂ ರಾಜವೇಷಗಳನ್ನು ನಿರ್ವಹಿಸುವಲ್ಲಿ ತಮ್ಮ ಕಲಾ ಪ್ರತಿಭೆಯನ್ನು ತೋರಿರುತ್ತಾರೆ.

ಕನ್ಯಾನದ ಕೃಷ್ಣ ಮೂಲ್ಯ. ಎಸ್ ಹಾಗೂ ಸುಂದರಿ ದಂಪತಿಗೆ 29–01–1985ರಂದು ಸುಪುತ್ರರಾಗಿ ಜನಿಸಿದ ಶ್ರೀ ಶಶಿಧರ್ ಕುಲಾಲರು ಎಸ್.ಎಸ್.ಎಲ್.ಸಿ. ಹಂತದ ವಿದ್ಯಾರ್ಹತೆಯನ್ನು ಪಡೆದಿದ್ದಾರೆ.

ಯಕ್ಷಗಾನದ ಪ್ರಭಾವದಿಂದಾಗಿ 16ನೇ ವರ್ಷದಲ್ಲಿ ಕಲಾ ಕ್ಷೇತ್ರಕ್ಕೆ ಪ್ರವೇಶ ಮಾಡಿದ ಇವರು ಆರಂಭದಲ್ಲಿ ಸಬ್ಬನಕೋಡಿ ರಾಮ್ ಭಟ್ ಅವರಿಂದ ನಾಟ್ಯಾಭ್ಯಾಸ ಮಾಡಿ ಅನಂತರ ಧರ್ಮಸ್ಥಳದ ಕೇಂದ್ರದಲ್ಲಿ ದಿವಾಣ ಶಿವಶಂಕರ ಭಟ್ ಅವರಿಂದ ಯಕ್ಷಗಾನದ ತರಬೇತಿಯನ್ನು ಪಡೆದರು.

ಧರ್ಮಸ್ಥಳ ಮೇಳದಲ್ಲಿ 9 ವರ್ಷಗಳ ಕಾಲ ತಿರುಗಾಟವನ್ನು ಮಾಡಿರುತ್ತಾರೆ. ನಂತರ ಎಡನೀರು ಮೇಳದಲ್ಲಿ ವೇಷಧಾರಿಯಾಗಿ 2 ವರ್ಷಗಳ ಅನುಭವವನ್ನು ಪಡೆದಿದ್ದಾರೆ.

ಲಕ್ಷ್ಮಣ, ಅಭಿಮನ್ಯು, ಬಭ್ರುವಾಹನ, ಕುಶ, ಲವ, ಚಂಡ–ಮುಂಡರು, ಅರ್ಜುನ, ದೇವೇಂದ್ರ, ಶಿಶುಪಾಲ, ಶ್ರೀಕೃಷ್ಣ, ರಾಮ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಶ್ರೀಯುತರು ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ ಅವರಿಂದ ಮದ್ದಳೆ ವಾದನದ ನುಡಿತ–ಬಡಿತಗಳನ್ನು ಅಭ್ಯಾಸ ಮಾಡಿರುತ್ತಾರೆ.



# ಶಿವಣ್ಣ ಆಚಾರ್ಯ ಕುರ್ನಾಡು

*ಕೂರ್ನಾಡು*
*ಬಂಟ್ವಾಳ ತಾಲೂಕು*
*ದಕ್ಷಿಣ ಕನ್ನಡ ಜಿಲ್ಲೆ*

ಸ್ತ್ರೀಪಾತ್ರದ ಮುಖೇನ ಪಾತ್ರಗಳಿಗೆ ತಕ್ಕಂತೆ ಅಭಿನಯವನ್ನು ಮೆರೆಸಿರುವ ಶ್ರೀ ಕುರ್ನಾಡು ಶಿವಣ್ಣ ಆಚಾರ್ಯರವರು ಮೇಳದಿಂದ ನಿವೃತ್ತರಾಗುವ ಕಲಾವಿದರಾಗಿದ್ದು, ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಪುಣಚದಲ್ಲಿ ಅಚ್ಯುತ ಆಚಾರ್ಯ ಮತ್ತು ಸರಸ್ವತಿ ದಂಪತಿಯ ಸುಪುತ್ರರಾಗಿ ದಿನಾಂಕ 13-3-1942ರಲ್ಲಿ ಶಿವಣ್ಣ ಆಚಾರ್ಯ ಹುಟ್ಟಿದರು.

ಬಾಲ್ಯದಿಂದಲೇ ಯಕ್ಷಗಾನ ಕಲೆಯ ಬಗ್ಗೆ ಆಸಕ್ತರಾದ ಇವರು ದಂಬೆ ನಾಗಪ್ಪ ಪೂಜಾರಿ ಎಂಬವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿದರು. ಜೊತೆಗೆ ಚಿಕ್ಕತಂದೆ ಶ್ರೀನಿವಾಸ ಆಚಾರ್ಯರಿಂದ ಅರ್ಥಗಾರಿಕೆಯನ್ನು ಅಭ್ಯಾಸಿಸಿದರು.

ಸ್ತ್ರೀಪಾತ್ರಕ್ಕೆ ತಕ್ಕಂತೆ ನಡೆ-ನುಡಿಯ ಲಾಲಿತ್ಯವನ್ನು ಹೊಂದಿದ ಇವರು ಹೆರ್ಗ, ಧರ್ಮಸ್ಥಳ, ಮುಲ್ಕಿ, ಕೂಡ್ಲು, ವೇಣೂರು, ಸುಂಕದಕಟ್ಟೆ, ಕಟೀಲು, ತಳಕಲ, ನಂದಾವರ, ಅಡ್ಯಾರು, ಮಲ್ಲ ಮೇಳಗಳಲ್ಲಿ 3 ದಶಕಗಳಿಗೂ ಮಿಕ್ಕಿದ ತಿರುಗಾಟವನ್ನು ಪೂರೈಸಿ ಉತ್ತಮ ಸ್ತ್ರೀ ಪಾತ್ರಧಾರಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಮೊದಲಿಗೆ ಪುಣಚ ಮಹಿಷ ಮರ್ದಿನಿ ಯಕ್ಷಗಾನ ಸಂಘದಲ್ಲಿ ಹವ್ಯಾಸಿಯಾಗಿ ವೇಷ ಮಾಡಿದ ಹಿನ್ನೆಲೆ ಇವರಿಗಿದ್ದು, ಕುರಿಯ ವಿಠಲ ಶಾಸ್ತ್ರಿ ಹಾಗೂ ಕೋಳ್ಯೂರು ರಾಮಚಂದ್ರ ಭಟ್ಟರಿಂದ ನಾಟ್ಯವನ್ನು ತಿದ್ದಿ, ನುಣುಪಾಗಿಸಿರುವರು.

ಸುಭದ್ರೆ, ತಾರೆ, ಸೀತೆ, ಮಂಡೋದರಿ, ಕಯಾದು, ಚಂದ್ರಮತಿ ಮುಂತಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿದ ಅನುಭವ ಇವರಿಗಿದೆ.

ಅನಾರೋಗ್ಯದ ಕಾರಣವಾಗಿ ಮೇಳದ ತಿರುಗಾಟವನ್ನು ನಿಲ್ಲಿಸಿದ ಶಿವಣ್ಣನವರು ಬಜ್ಪೆ ರಾಘವದಾಸರ ಭಾರತಿ ಕಲಾ ಆರ್ಟ್ಸ್‌ನಲ್ಲಿ ಪ್ರಸಾಧನ ಕಲಾವಿದರಾಗಿ ಹಲವು ವರ್ಷಗಳ ತನಕ ದುಡಿಸಿದ್ದಾರೆ. ಇದರ ಜೊತೆಗೆ ಹವ್ಯಾಸಿ ಕಲಾವಿದರೊಂದಿಗೆ ಬೆರೆತು ಪಾತ್ರವನ್ನು ನಿರ್ವಹಿಸಿರುವುದರೊಂದಿಗೆ ಕಿರಿಯ ಕಲಾವಿದರಿಗೆ ಮಾರ್ಗದರ್ಶನ ಮಾಡಿದ್ದಾರೆ.

ಇವರ ಕಲಾಸಾಧನೆಗೆ ಸಂದ ಗೌರವ ಹಲವಾರು. ದಕ್ಷಿಣಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಸಂಮಾನ, ಬ್ರಹ್ಮಶ್ರೀ ನಾರಾಯಣ ಗುರು ಯಕ್ಷಗಾನ ಮಂಡಳಿ ಕುಳಾಯಿ, ಹವ್ಯಾಸಿ ಬಳಗ ಕದ್ರಿ (ರಿ.) ಮಂಗಳೂರು, ಹೂ ಹಾಕುವ ಕಲ್ಲು, ಮುಡಿಪು, ಕುರ್ನಾಡು ಹೀಗೆ ಹಲವೆಡೆಯಲ್ಲಿ ಸಂಮಾನಗೊಂಡು ಗೌರವಿಸಲ್ಪಟ್ಟಿದ್ದಾರೆ.



## ಶಿವಶಂಕರ ಆರ್.ಎಸ್.

*ಸುಳ್ಯೋಡು ಮನೆ, ಬದಿಯಡ್ಕ ಗ್ರಾಮ*
*ಪೆರಡಾಲ ಅಂಚೆ – 671551*
*ಕಾಸರಗೋಡು ಕೇರಳ*


ಶಿವಶಂಕರ ಆರ್. ಎಸ್. ಇವರು ಮುಂಡು ವೇಷಧಾರಿಯಾಗಿ ಮಲ್ಲ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮೇಳದಲ್ಲಿ ಕಲಾಸೇವೆಯನ್ನು ಮಾಡುವರು.

20–1–1978ರಂದು ರಾಮಚಂದ್ರ ಎಸ್. ಮತ್ತು ಕುಸುಮಾವತಿ ದಂಪತಿಯ ಸುಪುತ್ರನಾಗಿ ಜನಿಸಿದ ಇವರು ಪದವಿಪೂರ್ವ ಹಂತದ ಶಿಕ್ಷಣವನ್ನು ಪಡೆದಿದ್ದಾರೆ.

ಯಕ್ಷಗಾನ ಪರಿಸರದಲ್ಲೇ ಹುಟ್ಟಿ ಬೆಳೆದ ಇವರು 1993ರಲ್ಲಿ ಉಪ್ಪಳ ಶ್ರೀಕೃಷ್ಣ ಮಾಸ್ತರ್‌ರವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಮಲ್ಲ ಮೇಳದ ಮುಖೇನ ಕಳೆದ 15 ವರ್ಷಗಳಿಂದ ಯಕ್ಷಮಾತೆಯ ಕಲಾಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ಮುಂಡುವೇಷ ಹಾಗೂ ಕಚ್ಚೆ ಸ್ತ್ರೀ ವೇಷಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಇವರು ವೃಷಕೇತು, ಪ್ರದ್ಯುಮ್ನ, ವರುಣ, ಮಾರುತ, ಚೆಂಡ–ಮುಂಡರು ಕಮಲಗಂಧಿನಿ ಮೊದಲಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಹಲವು ಸಂಘ ಸಂಸ್ಥೆಗಳಲ್ಲಿ ಹೇಳಿಕೆಯ ಮೇರೆಗೆ ವೇಷಧಾರಿಯಾಗಿ ಭಾಗವಹಿಸುವ ಇವರು ಸ್ಪರ್ಧೆಯ ಕಾರ್ಯಕ್ರಮಗಳಲ್ಲೂ ಪಾತ್ರ ನಿರ್ವಹಣೆಯನ್ನು ಮಾಡಿದ್ದಾರೆ.



## ಶಿವಶಂಕರ ಭಟ್ ಅಂಬೆಮೂಲೆ

*ಅಂಬೆಮೂಲೆ ಮನೆ, ಮುಳ್ಳೇರಿಯಾ ಅಂಚೆ*
*ಕಾಸರಗೋಡು ತಾಲೂಕು - 671543*
*ಮೊ : 09847034222*
*ಮನೆ ದೂರವಾಣಿ 04994-260236.*

ಚೆಂಡೆ ಮದ್ದಳೆಯ ನುಡಿತ ಬಡಿತಗಳನ್ನು ಕರಗತ ಮಾಡಿಕೊಂಡು ಪ್ರೌಢಿಮೆಯನ್ನು ಸಾಧಿಸಿರುವ ಅಂಬೆಮೂಲೆ ಶಿವಶಂಕರ ಭಟ್ಟರು ಕೊಲ್ಲಂಗಾನ ಮೇಳದ ಕಲಾವಿದರಾಗಿದ್ದಾರೆ.

ದಿನಾಂಕ 15-08-1966ರಲ್ಲಿ ಕಾಸರಗೋಡು ತಾಲೂಕಿನ ಮುಳ್ಳೇರಿಯಾದ ಅಂಬೆಮೂಲೆ ಮನೆಯಲ್ಲಿ ಅಂಬೆಮೂಲೆ ಗೋವಿಂದ ಭಟ್ ಹಾಗೂ ಭಾರತಿ ಅಮ್ಮ ಅವರ ಸುಪುತ್ರರಾಗಿ ಜನಿಸಿರುವ ಇವರು ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವರು. ಅರ್ಥಗಾರಿಕೆ ಹಾಗೂ ಪ್ರಸಂಗರಚನೆಯ ಮೂಲಕ ಯಕ್ಷಗಾನ ಕಲಾಸಾಧಕರಾಗಿದ್ದ ತಂದೆಯವರ ಪ್ರೇರಣೆಯ ಮೇರೆಗೆ 14ನೇ ವಯಸ್ಸಿನಿಂದ ಯಕ್ಷಗಾನದ ಅಧ್ಯಯನಕ್ಕೆ ಮನ ಮಾಡಿದರು. ನಾಯಿತೋಡು ಮಾಧವ ಭಟ್ ಅವರಲ್ಲಿ ಚೆಂಡೆ ಮದ್ದಳೆಯ ನುಡಿತ ಬಡಿತಗಳನ್ನು ಕರಗತ ಮಾಡಿಕೊಂಡರು.

ಮಲ್ಲ ಮೇಳದಲ್ಲಿ 18 ವರ್ಷಗಳ ತಿರುಗಾಟದ ಹಿನ್ನೆಲೆಯನ್ನು ಹೊಂದಿರುವ ಇವರು ಕಟೀಲು ಮೇಳದಲ್ಲಿಯೂ 2 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ.

ಅಂಬೆಮೂಲೆ ಶಿವಶಂಕರ ಭಟ್ಟರು ಪುಂಡು ವೇಷಗಳಾದ ವೃಷಕೇತು, ಷಣ್ಮುಖ, ವರುಣ, ಪ್ರದ್ಯುಮ್ನ ಇತ್ಯಾದಿ ಪಾತ್ರಗಳನ್ನು ಮಾಡಿ ಮುಮ್ಮೇಳದ ಅನುಭವವನ್ನು ಸಂಪಾದಿಸಿದ್ದಾರೆ.

ಶ್ರೀಮತಿ ಶಾಂತಲಾ ಎಂಬವರನ್ನು ವರಿಸಿ ಶ್ರೀಲತಾ ಎಂಬ ಸುಪುತ್ರಿಯನ್ನು ಪಡೆದಿರುವ ಇವರು ಕೃಷಿಕ ಮನೆತನಕ್ಕೆ ಸೇರಿದವರಾಗಿದ್ದಾರೆ.



## ಶಂಭು ಕುಮಾರ್ ಕೊಡೆತ್ತೂರು ಕಿನ್ನಿಗೋಳಿ

*"ಚಂದ್ರಮಂಡಲ ಮನೆ", "ಮೆನ್ನಬೆಟ್ಟು ಗ್ರಾಮ"*
*ಕಿನ್ನಿಗೋಳಿ ಅಂಚೆ- 574150*
*ಮೊಬೈಲ್: 9945936489*

ಪುಂಡುವೇಷ, ರಾಜವೇಷ, ಹಾಸ್ಯ, ನಾಟಕೀಯ ಹಾಗೂ ಬಣ್ಣದ ವೇಷಗಳನ್ನು ನಿರ್ವಹಿಸಿ ಜನ ಮನ್ನಣೆಯನ್ನು ಪಡೆದಿರುವ ಶ್ರೀ ಶಂಭು ಕುಮಾರ್ ಕೊಡೆತ್ತೂರು ಇವರು ಶ್ರೀ ಬಪ್ಪನಾಡು ಮೇಳದಲ್ಲಿ ಕಲಾ ಸೇವೆಯನ್ನು ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ಶ್ರೀ ಕೋಟಿಮೂಲ್ಯ ಹಾಗೂ ಶ್ರೀಮತಿ ಕಮಲ ದಂಪತಿಗೆ ಸುಪುತ್ರರಾಗಿ ದಿನಾಂಕ 15–10–1977ರಲ್ಲಿ ಜನಿಸಿದರು.

ದ್ವಿತೀಯ ಪಿ.ಯು.ಸಿಯ ವರೆಗೆ ವಿದ್ಯಾಭ್ಯಾಸವನ್ನು ಪಡೆದ ಇವರು ಅಣ್ಣನಾಗಿರುವ ವೇಷಧಾರಿ ಶ್ರೀ ಗಣೇಶ ಚಂದ್ರ ಮಂಡಲ ಅವರ ಪ್ರೇರಣೆ ಹಾಗೂ ಉತ್ತೇಜನದಿಂದಾಗಿ ಯಕ್ಷಗಾನಕ್ಕೆ ಪಾದಾರ್ಪಣೆಯನ್ನು ಮಾಡಿದರು.

ಮೊದಲಾಗಿ ಕೃಷ್ಣಪ್ಪ ಕಟೀಲು ಅವರಲ್ಲಿ ನಾಟ್ಯಾಭ್ಯಾಸವನ್ನು ಕಲಿತ ಇವರು ನಂತರ ಚಿದಾನಂದ ಕಟೀಲು ಇವರಲ್ಲಿ ಯಕ್ಷಗಾನವನ್ನು ಕಲಿತರು.

ಮೊದಲಾಗಿ ತಳಕಳ ಮೇಳದಲ್ಲಿ 6 ವರ್ಷ ಯಕ್ಷಗಾನದ ತಿರುಗಾಟವನ್ನು ಮಾಡಿದ ಇವರು ನಂತರ ಮುಂಡ್ಕೂರು –2 ವರ್ಷ, ಪುತ್ತೂರು ಮೇಳ –1 ವರ್ಷ, ಎಡನೀರು ಮೇಳ –1 ವರ್ಷ, ಮಂಗಳಾದೇವಿ ಮೇಳ –1 ವರ್ಷ, ಸಸಿಹಿತ್ಲು ಮೇಳ –1 ವರ್ಷ, ಕದ್ರಿ ಮೇಳ –1 ವರ್ಷತಿರುಗಾಟವನ್ನು ಮಾಡಿ ಪ್ರಸ್ತುತ ಬಪ್ಪನಾಡು ಮೇಳದಲ್ಲಿ 4 ವರ್ಷಗಳಿಂದ ಯಕ್ಷಗಾನದ ಸೇವೆಯನ್ನು ಮಾಡುತ್ತಿದ್ದಾರೆ.

ಇಂದ್ರಜಿತು, ದೇವೇಂದ್ರ, ದಾರಿಕಾಸುರ, ರಕ್ತಬೀಜ, ಅರ್ಜುನ, ಕೌರವ, ಕೋಟಿ–ಚೆನ್ನಯ, ದೇವುಪೂಂಜ, ಚಂಡ–ಮುಂಡರು, ಶುಂಭ ಹೀಗೆ ಇತ್ಯಾದಿ ವೇಷಗಳಲ್ಲಿ ಇವರು ಪರಿಣತಿಯನ್ನು ಹೊಂದಿದ್ದಾರೆ.

ಇವರ ಇನ್ನೋರ್ವ ಅಣ್ಣ ಧನಂಜಯರು ಚೆಂಡೆ–ಮದ್ದಳೆಗಳ ವಾದಕರಾಗಿರುವಂತೆ, ಶಂಭುರವರು ಕೂಡಾ ಮದ್ದಳೆ ನುಡಿಸುವುದರಲ್ಲಿ ಪ್ರೌಢಿಮೆಯನ್ನು ತೋರಿದ್ದಾರೆ.

ಮದನ ಮದಿರಗೆ ಎಂಬ ಪ್ರಸಂಗದ ಶೀರ್ಷಿಕೆಯಡಿಯಲ್ಲಿ ಕಾಲ್ಪನಿಕ ಕಥೆಯನ್ನು ರಚಿಸಿ ಶ್ರೀ ಗಣೇಶ ಕೊಲೆಕಾಡಿಯವರಿಂದ ಪದ್ಯ ರಚನೆ ಮಾಡಿಸಿರುವರು.

ಕೊಲೆಕಾಡಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ನಾಟ್ಯಾಭ್ಯಾಸದ ತರಬೇತಿಯನ್ನು ನೀಡಿರುವ ಇವರ ಕಲಾಸಾಧನೆಗೆ ಫಲಶ್ರುತಿಯಾಗಿ ಕೊಲೆಕಾಡಿ ಶಾಲೆಯ ಗೌರವ ಸಂಮಾನ, ಬೆಹರನ್‌ನ ಪುರಸ್ಕಾರ ಮತ್ತು ಮುಂಡ್ಕೂರಿನ ಸಂಮಾನಗಳು ಲಭಿಸಿವೆ.



# ಶ್ರೀಪತಿ ಭಟ್ ಮಜೂರು

*ಕೊಂಚಾಡಿ ಅಂಚೆ*
*ಮಂಗಳೂರು ತಾಲೂಕು*

ಉತ್ತಮ ಕಂಠವನ್ನು ಹೊಂದಿದ್ದು, ಪ್ರದರ್ಶನವನ್ನು ವಿಜೃಂಭಿಸಬಲ್ಲ ಹಳೆಯ ಶೈಲಿಯ ಭಾಗವತರಾಗಿ ಮನ್ನಣೆಗೆ ಒಳಗಾದ ಶ್ರೀಪತಿ ಭಟ್ ಮಜೂರು ಮೇಳದ ನಿವೃತ್ತ ಕಲಾವಿದರಾಗಿದ್ದಾರೆ.

ಉಡುಪಿ ಜಿಲ್ಲೆಯ ಕಾಪು ಮಜೂರು ಗ್ರಾಮದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ಭಟ್ಟ ಹಾಗೂ ಶ್ರೀಮತಿ ಪದ್ಮಾಕ್ಷಿ ದಂಪತಿಯ ಸುಪುತ್ರರಾಗಿ ದಿನಾಂಕ 12-6-1943ರಲ್ಲಿ ಶ್ರೀಪತಿ ಭಟ್ಟರು ಜನಿಸಿದರು.

ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಮುಚ್ಚೂರು ನಾರಾಯಣ ಭಾಗವತ ಮತ್ತು ಮರವಂತೆ ನರಸಿಂಹ ದಾಸರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು.

ಕದ್ರಿಮೇಳ, ಅರುವಮೇಳ, ಪುತ್ತೂರು ಮೇಳ, ಕಾಂತಾವರ ಮೇಳ, ಸುಂಕದಕಟ್ಟೆ ಮೇಳ ಮತ್ತು ಪುತ್ತಿಗೆ ಮೇಳಗಳಲ್ಲಿ 20ವರ್ಷಗಳಿಗೂ ಮಿಕ್ಕಿ ಕಲಾಸೇವೆಯನ್ನು ಮಾಡಿರುವರು. ಮೇಳ ತಿರುಗಾಟವನ್ನು ನಿಲ್ಲಿಸಿದ ಮೇಲೆ ಹವ್ಯಾಸಿ ಕಲಾವಿದರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಾಸೇವೆ ಮಾಡಿದ್ದಾರೆ.

ಶ್ರೀಪತಿ ಭಟ್ಟರು ಪ್ರಸಂಗಕರ್ತರಾಗಿಯೂ ಜನಮನ್ನಣೆಯನ್ನು ಪಡೆದಿದ್ದಾರೆ. ಪಾಡ್ದನ ಮತ್ತು ಜಾನಪದ ಕಥೆಯನ್ನಾಧರಿಸಿದ 'ಜಾಗದೆ ಪಂಜುರ್ಲಿ, ಬೊಳ್ಳಿದಾರಗೆ, ಧರ್ಮ ಚಾವಡಿ' ಇತ್ಯಾದಿ ಇವರ ಪ್ರಸಂಗಗಳು ಮೇಳಗಳಲ್ಲಿ ಪ್ರದರ್ಶನವಾಗಿ ಬೇಡಿಕೆಗೆ ಒಳಗಾಗಿರುವುದಲ್ಲದೆ ಹವ್ಯಾಸಿ ಕಲಾ ಮಂಡಳಿಗಳಲ್ಲೂ ಪ್ರದರ್ಶಿತವಾಗಿದೆ.

ಹಿಮ್ಮೇಳದ ಅನುಭವವನ್ನು ಹೊಂದಿರುವ ಇವರು ಮಹಿಷಾಸುರ, ಪೂತನಿ, ಭೀಮ ಮುಂತಾದ ಪಾತ್ರಗಳನ್ನು ನಿರ್ವಹಿಸಿ ಉತ್ತಮ ವೇಷಧಾರಿಯಾಗಿದ್ದರು. ಹೀಗಾಗಿ ಶ್ರೀಪತಿ ಭಟ್ಟರು ಪಾತ್ರಧಾರಿಗಳ ಮನೋಧರ್ಮವನ್ನು ಬೇಗನೆ ಅರಿತು ಪ್ರದರ್ಶನದಲ್ಲಿ ಕೊರತೆ ಕಾಣದಂತೆ ಪದ ಹಾಡಿ ಕುಣಿಸುವ ರಂಗತಂತ್ರದ ಸರ್ವ ಯೋಗ್ಯತೆಯ ಅನುಭವವನ್ನು ಸಂಪಾದಿಸಿದ್ದರು. ಇಷ್ಟಲ್ಲದೆ ಸ್ನೇಹಜೀವಿಯಾಗಿ ಸಹಕಾರ ಮನೋಭಾವವನ್ನು ಹೊಂದಿದ್ದರು.

ಪ್ರಸಿದ್ಧ ಅರ್ಥಧಾರಿ ಹಾಗೂ ಪ್ರವಚನಕಾರರಾಗಿ ಮನ್ನಣೆಯನ್ನು ಪಡೆದು ಕೀರ್ತಿಶೇಷರಾಗಿರುವ ದಿ। ಪೊಳಲಿ ಶಂಕರನಾರಾಯಣ ಶಾಸ್ತ್ರಿಯವರ ಮಗಳಾದ ಶ್ರೀಮತಿ ಪದ್ಮಾವತಿ ಎಂಬವರನ್ನು ಮದುವೆಯಾಗಿ ಓರ್ವ ಸುಪುತ್ರ ಹಾಗೂ ಸುಪುತ್ರಿಯನ್ನು ಪಡೆದಿದ್ದಾರೆ. ಯಕ್ಷಗಾನದ ನಿವೃತ್ತ ಜೀವನದಲ್ಲಿ ಸಾರ್ಥಕ ಬದುಕನ್ನು ಮುನ್ನಡೆಸುತ್ತಿರುವ ಇವರ ಕಲಾಸಾಧನೆಗೆ ಸಂಮಾನದ ಗೌರವ ದೊರೆತಿದೆ.



# ಶ್ರೀನಿವಾಸ ಸುವರ್ಣ

*ಕೂರಿಯಾಳ ಗ್ರಾಮ, ಅಂಚೆ*
*ಬಂಟ್ವಾಳ ತಾಲ್ಲೂಕು–574211*
*ಮೊಬೈಲ್ : 9632953293*

ಸ್ತ್ರೀ ಪಾತ್ರದ ಮುಖೇನ ಮನ್ನಣೆಗೆ ಒಳಗಾಗಿರುವ ಶ್ರೀ ಕುರಿಯಾಳ ಶ್ರೀನಿವಾಸ ಸುವರ್ಣ ಇವರು ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಿದ್ದಾರೆ.

30ವರ್ಷ ವಯೋಮಾನದವರಾದ ಇವರು ಕುರಿಯಾಳದಲ್ಲಿ ಜಾರಪ್ಪ ಪೂಜಾರಿ ಮತ್ತು ದೇವಕಿ ದಂಪತಿಯ ಸುಪುತ್ರರಾಗಿ ಜನಿಸಿದರು.

ಎಸ್.ಎಸ್.ಎಲ್.ಸಿ ಹಂತದ ತನಕ ವಿದ್ಯಾರ್ಹತೆ ಗಳಿಸಿದ ಬಳಿಕ ಶಿಕ್ಷಣವನ್ನು ಮುಂದುವರಿಸದೆ ಯಕ್ಷಗಾನದತ್ತ ಆಕರ್ಷಿತರಾಗಿ 16ನೇ ವಯೋಮಾನಕ್ಕೆ ರಂಗ ಪ್ರವೇಶವನ್ನು ಮಾಡಿದರು.

ಸಬ್ಬಣ್ಣಕೋಡಿ ಕೃಷ್ಣಭಟ್ ಇವರಿಂದ ಧರ್ಮಸ್ಥಳದ ಲಲಿತಕಲಾ ಕೇಂದ್ರದಲ್ಲಿ ತೆಂಕುತಿಟ್ಟಿನ ನಾಟ್ಯವನ್ನು ಅಭ್ಯಾಸ ಮಾಡಿದ ಶ್ರೀನಿವಾಸರು ಆಮೇಲೆ ಸಂಜೀವ ಸುವರ್ಣರಿಂದ ಬಡಗು ತಿಟ್ಟಿನ ನಾಟ್ಯಾಭ್ಯಾಸವನ್ನು ಮಾಡಿದರು.

ಕಟೀಲು ಮೇಳದಲ್ಲಿ 11 ವರ್ಷಗಳ ಕಾಲ ಕಲಾಸೇವೆ ಗೈದ ಇವರು ಆದಿಮಾಯೆ, ಮಾಲಿನಿ, ಭ್ರಮರ ಕುಂತಳೆ, ಮೋಹಿನಿ, ಸೌಗಂಧಿಕೆ, ನಂದಿನಿ, ಈಶ್ವರ, ಪ್ರಭಾವತಿ, ಚಿತ್ರಾಂಗದೆ, ಸುಭದ್ರೆ, ಪಾರ್ವತಿ, ದ್ರೌಪದಿ, ಕೃಷ್ಣ, ವಿಷ್ಣು ಇತ್ಯಾದಿ ಪಾತ್ರಗಳ ನಿರ್ವಹಣೆಯ ಮೂಲಕ ಜನಮನ್ನಣೆ ಪಾತ್ರರಾಗಿದ್ದಾರೆ.

ಸ್ತ್ರೀವೇಷ ಹಾಗೂ ಪೋಷಕ ಪಾತ್ರವನ್ನು ನಿರ್ವಹಿಸಬಲ್ಲ ಇವರು ತೆಂಕು ಮತ್ತು ಬಡಗು ತಿಟ್ಟುಗಳ ಶೈಲಿಯನ್ನು ಒಗ್ಗೂಡಿಸಿಕೊಂಡ ಕಲಾವಿದರಾಗಿದ್ದಾರೆ.



# ಶ್ರೀಧರ ಮಲ್ಲೂರು ಕುಟ್ಟಿಕಲಾ

*ಕಲಾಶ್ರೀ ನಿಲಯ, ಮಲ್ಲೂರು ಕುಟ್ಟಿ ಕಲಾ*
*ಮಲ್ಲೂರು ಅಂಚೆ, ಮಂಗಳೂರು*
*ಮೊಬೈಲ್: 9731925746.*

ಶ್ರೀ ಭಗವತೀ ಮೇಳ ಸಸಿಹಿತ್ಲು ಇದರಲ್ಲಿ ಕಲಾಸೇವೆಯನ್ನು ಮಾಡುತ್ತಾ, ಸ್ತ್ರೀ ಪಾತ್ರಗಳ ನಿರ್ವಹಣೆಯಲ್ಲಿ ಮನ್ನಣೆಯನ್ನು ಪಡೆದಿದ್ದಾರೆ. ಶ್ರೀಧರ ಮಲ್ಲೂರು ಕುಟ್ಟಿಕಲಾ.


ನೋಣಯ್ಯ ಪೂಜಾರಿ ಹಾಗೂ ದೇವಕಿ ದಂಪತಿಯ ಸುಪುತ್ರರಾಗಿ 1982ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಲ್ಲೂರಿನಲ್ಲಿ ಇವರು ಜನಿಸಿದರು.

7ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದ ಇವರು ರಮೇಶ ಕುಲಶೇಖರ ಅವರ ಪ್ರೇರಣೆಯಿಂದಾಗಿ 17ನೇ ವಯಸ್ಸಿನಲ್ಲಿ ಬೆಳ್ಳಾರೆ ಮಂಜುನಾಥ ಭಟ್ ಅವರಿಂದ ಯಕ್ಷಗಾನದ ನಾಟ್ಯಾಭ್ಯಾಸವನ್ನು ಕಲಿತರು.

ವೃತ್ತಿ ಕಲಾವಿದರಾಗಿ ಕುಲಶೇಖರ ಸುಬ್ರಹ್ಮಣ್ಯ ಯಕ್ಷಗಾನ ಮಂಡಳಿಯಲ್ಲಿ 2 ವರ್ಷ, ತಳಕಳ ಮೇಳದಲ್ಲಿ 1 ವರ್ಷ, ಸುಂಕದಕಟ್ಟೆ ಮೇಳದಲ್ಲಿ 3 ವರ್ಷ, ಕದ್ರಿ ಮೇಳದಲ್ಲಿ 3 ವರ್ಷ, ಹಾಗೂ ಬಪ್ಪನಾಡು ಮೇಳದಲಿ 1 ವರ್ಷದ ಯಕ್ಷಗಾನ ತಿರುಗಾಟವನ್ನು ಪೂರೈಸಿದ ಇವರು ಸಸಿಹಿತ್ಲು ಭಗವತೀ ಮೇಳದಲ್ಲಿ 8 ವರ್ಷಗಳ ಕಲಾ ಸೇವೆಯನ್ನು ಮಾಡಿದ್ದಾರೆ.

ಸ್ತ್ರೀ ಪಾತ್ರದಲ್ಲಿ ಪರಿಣತಿಯನ್ನು ಹೊಂದಿರುವ ಇವರು ಮಾಲಿನಿ, ಆದಿಮಾಯೆ, ಸೀತೆ, ಮೋಹಿನಿ, ದುರ್ಗಾಪರಮೇಶ್ವರಿ, ಕಿನ್ನಿದಾರು, ದೇಯಿಬೈದೇದಿ, ಸಿದ್ದು(ದೇವುಪೂಂಜ) ಇತ್ಯಾದಿ ಪಾತ್ರಗಳನ್ನು ಮಾಡುತ್ತಾ ಉತ್ತಮ ಪ್ರತಿಭೆಯನ್ನು ತೋರಿದ್ದಾರೆ.

ಕಲಾಸೇವೆಯನ್ನೇ ಜೀವನೋಪಾಯಕ್ಕಾಗಿ ನಂಬಿಕೊಂಡಿರುವ ಶ್ರೀಧರರು ಶ್ರೀಮತಿ ಪವಿತ್ರ ಅವರನ್ನು ವರಿಸಿಕೊಂಡಿರುತ್ತಾರೆ.



## ಶ್ರೀನಿವಾಸ ಕಡಬ

*ಕೋಡಂದೂರು, ಕಡಬ ದ. ಕ.*
*ಮೊಬೈಲ್:* ***9480532029***
*ಮನೆ ದೂರವಾಣಿ:* ***958251-260581.***

ವೇಷಗಾರಿಕೆಯಲ್ಲಿ ಹಾಗೂ ಉಡುಗೆ ತೊಡುಗೆಗಳಲ್ಲಿ ಸ್ತ್ರೀ ಪಾತ್ರದ ಸೌಂದರ್ಯವನ್ನು ಹೆಚ್ಚಿಸಿ ನಾಟ್ಯ ವೈವಿಧ್ಯದಿಂದ ಪ್ರೇಕ್ಷಕರ ಆಕರ್ಷಣೆಗೆ ಒಳಗಾಗಿ ಮೆರೆದಿರುವ ಕಡಬ ಶ್ರೀನಿವಾಸರು ಸ್ವಂತ ಉದ್ಯೋಗದ ನಿಮಿತ್ತ ಮೇಳ ತಿರುಗಾಟವನ್ನು ನಿಲ್ಲಿಸಿ ಹೇಳಿಕೆಯ ಮೇರೆಗೆ ಕಾರ್‍ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ರಾಮಣ್ಣ ರೈ ಹಾಗೂ ಕುಸುಮಾವತಿ ದಂಪತಿಯ ಸುಪುತ್ರರಾಗಿ ಜನಿಸಿದ ಇವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದ ಮೇಳ ಉದ್ಯೋಗ ನಿಮಿತ್ತ ಮುಂಬಯಿಗೆ ಹೋದವರು ಮುಂಬಯಿಯ ಗೀತಾಂಬಿಕಾ ಯಕ್ಷಗಾನ ಮಂಡಳಿಯಲ್ಲಿ ಪಾತ್ರನಿರ್ವಹಣೆ ಮಾಡಲು ಗೆಜ್ಜೆ ಕಟ್ಟಿದರು.

ಆಮೇಲೆ ಯಕ್ಷಗಾನ ಕಲೆಯಲ್ಲಿ ಪ್ರೌಢಿಮೆಯನ್ನು ಸಾಧಿಸುವ ಉದ್ದೇಶದಿಂದ ಮರಳಿ ಊರಿಗೆ ಬಂದವರು ನಾಟ್ಯಗುರು ಭಾಸ್ಕರ ಬಂಗಾಡಿಯವರಿಂದ ಅಭಿನಯದ ಅನುಭವವನ್ನು ಸಂಪಾದಿಸಿ ನಾಟ್ಯದ ಗತಿವಿಲಾಸವನ್ನು ಅರಿತು ಮೇಳ ತಿರುಗಾಟವನ್ನು ಆರಂಭಿಸಿದರು.

ಕರ್ನಾಟಕ ಮೇಳ –5 ವರ್ಷ, ಕದ್ರಿ ಮೇಳ – 2 ವರ್ಷ, ಪುತ್ತೂರು ಮೇಳ –2 ವರ್ಷ, ಮಂಗಳಾದೇವಿ ಮೇಳ –7 ವರ್ಷ ಒಟ್ಟು 16 ವರ್ಷಗಳ ತನಕ ಮೇಳದ ತಿರುಗಾಟವನ್ನು ಮಾಡಿ ಅನಂತರ 4 ವರ್ಷಗಳ ತನಕ ಭಿನ್ನ ಭಿನ್ನ ಬಯಲಾಟದ ಮೇಳಗಳಲ್ಲಿ ತಿರುಗಾಟವನ್ನು ನಡೆಸಿರುವರು.

ಮೋಹಿನಿ, ಮಾಲಿನಿ, ಸಿದ್ಧು, ಕಿನ್ನಿದಾರು ಮೊದಲಾದ ಪಾತ್ರಗಳನ್ನು ಮಾಡಿರುವ ಇವರು ವರ್ಷಂಪ್ರತಿ ಪ್ರದರ್ಶನಗೊಳ್ಳುತ್ತಿರುವ ನೂತನ ಪ್ರಸಂಗಗಳಲ್ಲಿ ವಿಭಿನ್ನ ರೀತಿಯ ಪಾತ್ರಗಳನ್ನು ನಿರ್ವಹಿಸಿ ಖ್ಯಾತಿಗೆ ಒಳಗಾಗಿದ್ದಾರೆ.

ಇವರ ಪ್ರತಿಭೆ ಯಕ್ಷಗಾನ ಕಲೆಯೊಂದಿಗೆ ನಾಟಕ ಕಲೆಯಲ್ಲೂ ಕೂಡ ಬೆಳಗಿದೆ. ನಾಟಕ ರಚನೆ, ಪಾತ್ರನಿರ್ವಹಣೆ ಇವರ ಹವ್ಯಾಸದ ಹೆಗ್ಗುರುತುಗಳಾಗಿವೆ.

34 ವರುಷಗಳ ಪ್ರಾಯಕ್ಕೆ ಬೆಳೆದಿರುವ ಇವರು ಪ್ರಸ್ತುತ ಹೇಳಿಕೆಯ ಮೇರೆಗೆ ಕಾರ್‍ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದಾರೆ.

ವ್ಯಾಪಾರದ ಸ್ವಂತ ಉದ್ಯೋಗದೊಂದಿಗೆ ನೆಮ್ಮದಿಯ ಜೀವನವನ್ನು ನಡೆಸುವ ಇವರು ಶ್ರೀಮತಿ ಯಶೋದ ರೈಯವರನ್ನು ವರಿಸಿ, ಕೀರ್ತನ್ ರೈ ಹಾಗೂ ಶರಣ್ ರೈ ಎಂಬ ಈರ್ವರು ಮಕ್ಕಳನ್ನು ಪಡೆದಿರುವರು.



## ಶಂಕರನಾರಾಯಣ ಕಾರಂತ ಸರಪಾಡಿ

*ಶ್ರೀಶ ನಿಲಯ, ಮೂಡುಮಠ ರಸ್ತೆ*
*ಪಾಂಡುರಂಗ ಟ್ರೇಡರ್ಸ್ ಹಿಂಭಾಗ, ಮುಖ್ಯರಸ್ತೆ,*
*ಕುಳ್ಯಾ ಅಂಚೆ ಮಂಗಳೂರು ದ. ಕ.*
*ದೂರವಾಣಿ: 2408182.*

ಭಾಗವತಿಕೆಯ ಮುಖೇನ ಪ್ರತಿಭೆಯನ್ನು ಮೆರೆಸಿ ಸತ್ಕೀರ್ತಿಯನ್ನು ಸಂಪಾದಿಸಿರುವ ಸರಪಾಡಿ ಶಂಕರನಾರಾಯಣ ಕಾರಂತ ಅವರು ಸ್ವಂತ ಉದ್ಯೋಗದ ನಿಮಿತ್ತ ಮೇಳ ತಿರುಗಾಟವನ್ನು ನಿಲ್ಲಿಸಿದ್ದಾರೆ.

ಸರಪಾಡಿ ಕೇಶವ ಕಾರಂತ ಹಾಗೂ ಶ್ರೀಮತಿ ದಯಾವತಿ ಕಾರಂತ್ ದಂಪತಿಯ ಸುಪುತ್ರರಾಗಿರುವ ಶಂಕರ ನಾರಾಯಣ ಕಾರಂತರು ಪದವಿ ಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

ಇವರ ತಂದೆ ಮೃದಂಗ ವಾದಕರಾಗಿದ್ದುದರಿಂದ ಇವರಲ್ಲಿ ಕಲಾಸಕ್ತಿ ಎಳವೆಯಿಂದಲೇ ಬೆಳೆದಿತ್ತು. ಭಾಗವತಿಕೆಯನ್ನು ಕಲಿಯುವ ಹಂಬಲದಿಂದ ಧರ್ಮಸ್ಥಳದ ಲಲಿತ ಕಲಾಕೇಂದ್ರವನ್ನು ಸೇರಿದ ಶ್ರೀಯುತರು ರಾಘವೇಂದ್ರ ತೋಳ್ಪಾಡಿತ್ತಾಯ ಧರ್ಮಸ್ಥಳ ಅವರಿಂದ ಜ್ಞಾನವನ್ನು ಆರ್ಜಿಸಿಕೊಂಡರು.

ಧರ್ಮಸ್ಥಳ ಮೇಳ 8 ವರ್ಷ, ಕಟೀಲು ಮೇಳ 4 ವರ್ಷ, ಕುಂಬಳೆ ಮೇಳ 3 ವರ್ಷ, ಅರುವ ಮೇಳ 2 ವರ್ಷ, ಮೂಲ್ಕಿ ಮೇಳ(ಬಡಗು) 1 ವರ್ಷ ಹೀಗೆ 18 ವರ್ಷಗಳ ತಿರುಗಾಟವನ್ನು ನಡೆಸಿದ್ದಾರೆ. ಆಮೇಲೆ ಪೌರೋಹಿತ್ಯ ಉದ್ಯೋಗವನ್ನು ನಡೆಸುತ್ತಾ ಜೊತೆ ಜೊತೆಗೆ ಯಕ್ಷಗಾನ ಕಲಾಸೇವೆಯನ್ನು ಮುಂದುವರಿಸುತ್ತಾ ಬೆಳೆದಿದ್ದಾರೆ.

ಶ್ರೀಮತಿ ಶ್ರೀ ಲಕ್ಷ್ಮೀ ಕಾರಂತ್ ಎಂಬವರನ್ನು ವರಿಸಿರುವ ಇವರು ಮೂವರು ಸುಪುತ್ರರನ್ನು ಪಡೆದಿದ್ದಾರೆ. ಹಿರಿಯ ಮಗ ಕೇಶವ ಪ್ರಸಾದ್ ಕಾರಂತರವರು ಪೌರೋಹಿತ್ಯ ಉದ್ಯೋಗವನ್ನು ಮಾಡುತ್ತಿದ್ದಾರೆ. ಮಾತ್ರವಲ್ಲ ಮದ್ದಳೆಯನ್ನು ನುಡಿಸಬಲ್ಲವರಾಗಿದ್ದಾರೆ. ಎರಡನೆಯವರಾದ ಹರಿಪ್ರಸಾದ ಕಾರಂತರು ಎಂ.ಎ.ಎಲ್.ಎಲ್.ಬಿ. ಪದವಿಯೊಂದಿಗೆ ವಕೀಲರಾಗಿದ್ದಾರೆ. ಇವರು ವೇಷಧಾರಿಯಾಗಿರುವರಲ್ಲದೆ ಮದ್ದಳೆಯ ನುಡಿತ ಬಡಿತಗಳ ಅಭ್ಯಾಸ ಮಾಡಿರುವರೊಂದಿಗೆ ಭಾಗವತಿಕೆಯ ಅನುಭವವನ್ನು ಸಂಪಾದಿಸಿ ರಂಗದಲ್ಲಿ ಹಾಡುತ್ತಿದ್ದಾರೆ. ಕಿರಿಯ ಸುಪುತ್ರರಾಗಿರುವ ಗುರುಪ್ರಸಾದ ಕಾರಂತರು ಸಿ.ಎ. ಪದವಿಯ ಅಭ್ಯಾಸದೊಂದಿಗೆ ಉದ್ಯೋಗ ನಿರತರಾಗಿದ್ದಾರೆ. ಇದರೊಂದಿಗೆ ಯಕ್ಷಗಾನದ ವೇಷಧಾರಿಯಾಗಿಯೂ ಪ್ರೌಢಿಮೆಯನ್ನು ಸಾಧಿಸಿದ್ದಾರೆ.

ಕುಳಾಯಿ ಶ್ರೀ ವಿಷ್ಣು ಮೂರ್ತಿ ಯಕ್ಷಗಾನ ಮಂಡಳಿಯ ಕಲಾಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸರಪಾಡಿ ಶಂಕರನಮಾರಾಯಣ ಕಾರಂತರು ಸಂಗೀತ ಶೈಲಿಯ ಭಾಗವತಿಕೆಯಿಂದ ರಸವತ್ತಾಗಿ ಹಾಡಬಲ್ಲ ಪ್ರೌಢಿಮೆಯನ್ನು ಸಾಧಿಸಿ ಧನ್ಯತೆಯನ್ನು ಪಡೆದಿದ್ದಾರೆ.



## ಸತ್ಯನಾರಾಯಣ ಪುಣಿಚಿತ್ತಾಯ

*ಶಿರಂತಡ್ಕ ಮನೆ, ಅಂಚೆ ಪಡ್ರೆ, ವಯಾ ಪೆರ್ಲ,*
***ಕಾಸರಗೋಡು ತಾಲೂಕು–671 525***
*ಕೇರಳ*
***ಮೊಬೈಲ್ : 9447651163 / 9632893496***

ವಿಭಿನ್ನ ಶೈಲಿಯ ಹಾಡಿಗಾರಿಕೆ ಹಾಗೂ ಅದ್ಭುತ ಕಂಠ ಸಿರಿಯೊಂದಿಗೆ ಜನಮಾನಸದಲ್ಲಿ ಅಚ್ಚಳಿಯದೇ ಉಳಿಯುವ ಯುವ ಕಲಾವಿದರಾದ ಶ್ರೀ ಸತ್ಯನಾರಾಯಣ ಪುಣಿಂಚಿತ್ತಾಯರು ಶ್ರೀ ಕೊಲ್ಲಂಗಾನ ಮೇಳದ ಕಲಾವಿದರಾಗಿದ್ದಾರೆ.

ಗಣಪತಿ ಪುಣಿಚಿತ್ತಾಯ ಹಾಗೂ ಗೀತಾ ಪುಣಿಚಿತ್ತಾಯರಿಗೆ ಪೆರ್ಲದ ಪಡ್ರೆಯಲ್ಲಿ 23–11–1971ರಂದು ಜನಿಸಿದ ಶ್ರೀಯುತರು ಪದವಿಪೂರ್ವ ಹಂತದ ವಿದ್ಯಾರ್ಹತೆಯನ್ನು ಗಳಿಸಿರುತ್ತಾರೆ.

ಮನೆತನದ ಪ್ರಭಾವದಿಂದಾಗಿ 23ನೇ ವಯಸ್ಸಿನಲ್ಲಿ ಯಕ್ಷಗಾನದ ಭಾಗವತಿಕೆಯ ಅಧ್ಯಯನಕ್ಕೆ ಮನ ಮಾಡಿದ ಇವರು ಕೋಟೆ ನಾರಾಯಣ ಭಟ್‌ರಿಂದ ತೆಂಕುತಿಟ್ಟಿನ ಭಾವತಿಕೆಯನ್ನು, ಗೋರ್ಪಾಡಿ ವಿಠಲ್ ಪಾಟೀಲ್ ಅವರಿಂದ ಬಡಗು ತಿಟ್ಟಿನ ಭಾಗವತಿಕೆಯನ್ನು ಅಭ್ಯಾಸ ಮಾಡಿದರು.

ತಂದೆಯವರು ಅರ್ಥಧಾರಿಗಳಾಗಿದ್ದರು. ಅಜ್ಜ ರಾಮಕೃಷ್ಣ ಪುಣಿಚಿತ್ತಾಯರು ಭಾಗವತರಾಗಿದ್ದರು. ಇನ್ನೋರ್ವ ಅಜ್ಜ ಸೂರ್ಯ ನಾರಾಯಣ ಕಲ್ಲೂರಾಯರು ಭಾಗವತರು ಹಾಗೂ ಅರ್ಥಧಾರಿಗಳಾಗಿದ್ದರು. ಹೀಗೆ ಕಲಾ ಸೇವೆಯ ಹಿನ್ನಲೆ ಇವರ ಮನೆತನಕ್ಕೆ ಇದ್ದುದರಿಂದ ರಕ್ತಗತವಾಗಿ ಬಂದ ಕಲಾ ಪ್ರೌಢಿಮೆಯನ್ನು ಮೆರೆಸಿದರು.

ಮಂದರ್ತಿ ಮೇಳದಲ್ಲಿ 1 ವರ್ಷ, ಪೆರ್ಡೂರು ಮೇಳದಲ್ಲಿ 3 ವರ್ಷ, ಸಾಲಿಗ್ರಾಮ ಮೇಳದಲ್ಲಿ 2 ವರ್ಷ, ಮಂಗಳಾದೇವಿ ಮೇಳದಲ್ಲಿ 3ವರ್ಷ, ಕುಂಟಾರು ಮೇಳದಲ್ಲಿ 1 ವರ್ಷ ಹಾಗೂ ಕೊಲ್ಲಂಗಾನ ಮೇಳದಲ್ಲಿ 12 ವರ್ಷಗಳಿಂದ ಕಲಾ ಸೇವೆ ಮಾಡುತ್ತಿರುವರು.

ಶ್ರೀಮತಿ ಆಶಾ ಎಂಬವರನ್ನು ವಿವಾಹವಾಗಿರುವ ಇವರು ಕೃಷಿಗಾರಿಕೆಯ ಬಗ್ಗೆ ಅನುಭವವುಳ್ಳವರಾಗಿದ್ದಾರೆ. ಮುಂಬಯಿ ಬಂಟರ ಸಂಘ, ದೆಹಲಿ ಕನ್ನಡ ಸಂಘ, ಕುಂಟಾರು ಕ್ಷೇತ್ರ, ಕೋಡಪದವು ಮುಂತಾದ ಕಡೆಗಳಲ್ಲಿ ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಸಂಮಾನಿಸಿರುವರು.



## ಸತೀಶ್ ಶೆಟ್ಟಿ ಬೋಂದೆಲ್

*ಜಗದ್ಗುರು ನಿಲಯ, ಪೆರ್ಲಗುರಿ ಪದವಿನಂಗಡಿ*
*ದೇವಿನಗರ ಕಾವೂರು ಅಂಚೆ –575015*
*ಮೊಬೈಲ್: 9448696232.*

ಭಾಗವತರಾಗಿ ಬೆಳೆದು ಮನ್ನಣೆಗೆ ಒಳಗಾಗಿರುವ ಶ್ರೀ ಸತೀಶ್ ಶೆಟ್ಟಿ ಬೋಂದೆಲ್ ಇವರು ಬಪ್ಪನಾಡು ಮೇಳದ ಕಲಾವಿದರಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ರಾಮಣ್ಣ ಶೆಟ್ಟಿ ಹಾಗೂ ರತ್ನಾ ಶೆಟ್ಟಿ ದಂಪತಿಯ ಸುಪುತ್ರರಾಗಿ ಜನಿಸಿದ ಸತೀಶ್ ಶೆಟ್ಟರು 10ನೇ ತರಗತಿಯ ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೆ ಐ.ಟಿ.ಐ ತರಬೇತಿಯನ್ನು ಮಾಡಿರುವರು.

ಹಿಮ್ಮೇಳದ ಖ್ಯಾತ ಗುರುಗಳಾಗಿರುವ ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರಿಂದ ಭಾಗವತಿಕೆಯ ಅಭ್ಯಾಸವನ್ನು ಮಾಡಿ ಆಮೇಲೆ ಪದ್ಯಾಣ ಗಣಪತಿಭಟ್ಟರಿಂದ ರಾಗಮಾಹಿತಿಯನ್ನು ಸಂಪಾದಿಸಿ ಪ್ರೌಢಿಮೆಯನ್ನು ಸಾಧಿಸಿದ್ದಾರೆ.

ಕದ್ರಿ ಮೇಳ 1 ವರ್ಷ, ಬಪ್ಪನಾಡು ಮೇಳ 9 ವರ್ಷ, ಸಸಿಹಿತ್ಲು ಮೇಳ 4 ವರ್ಷ ಹೀಗೆ ಕಲಾಸೇವೆಯ ಹಿನ್ನೆಲೆಯನ್ನು ಹೊಂದಿದ್ದಾರೆ.

ಹವ್ಯಾಸಿ ಕಲಾ ಕಾರ್ಯಕ್ರಮಗಳಲ್ಲಿ ಬೇಡಿಕೆಯ ಕಲಾವಿದರಾಗಿರುವ ಶ್ರೀಯುತರು ಸ್ನೇಹಜೀವಿಯಾಗಿ ಹೊಂದಾಣಿಕೆಯ ಗುಣಧರ್ಮವನ್ನು ಹೊಂದಿದ್ದಾರೆ.

ತಾಳ ಖಚಿತತೆ, ರಂಗ ತಂತ್ರದ ಪ್ರೌಢಿಮೆ ಇವರ ಭಾಗವತಿಕೆಯ ನಿರ್ವಹಣೆಯಲ್ಲಿ ಗಮನಿಸಬಹುದಾದ ಅಂಶವಾಗಿದೆ.



## ಸೀತಾರಾಮ್ ಮಿಜಾರ್

*ನಾಪಾಡಿ ಮನೆ, ತೆಂಕಮಿಜಾರು ಗ್ರಾಮ,*
*ಅಶೋಕಪುರ ಅಂಚೆ.*
*ಮೊ ; 9844819276.*

ಯಕ್ಷಗಾನ ಪರಿಸರದ ಪ್ರಭಾವದಿಂದ ಕಲಾಕರ್ಷಿತರಾಗಿ ಚೆಂಡೆ ಮದ್ದಳೆಯ ನುಡಿತ ಬಡಿತಗಳನ್ನು ಅಭ್ಯಾಸ ಮಾಡಿದ ಶ್ರೀ ಸೀತಾರಾಮ್ ಮಿಜಾರು ಇವರು ಪ್ರಸ್ತುತ ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಿದ್ದಾರೆ.

ಗೋಪಾಲ ಶೆಟ್ಟಿಗಾರ್ ಹಾಗೂ ರಶ್ಮೀ ದಂಪತಿಯ ಸುಪುತ್ರರಾದ ಇವರು ತೆಂಕಮಿಜಾರಿನಲ್ಲಿ ಜನಿಸಿದ್ದು, 5ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮಾಡಿರುವರು.

12ನೇ ವರ್ಷದಲ್ಲಿ ಗುರುಪುರ ಅಣ್ಣು ಮಾಸ್ತರರಿಂದ ಚೆಂಡೆ ಮದ್ದಳೆ ಅಭ್ಯಾಸವನ್ನು ಇವರು ಮಾಡಿದರು. ಇಷ್ಟಲ್ಲದೆ ಇವರ ಅಣ್ಣನಾಗಿರುವ ಮೋಹನ ಶೆಟ್ಟಿಗಾರರು ಮದ್ದಳೆಗಾರರಾಗಿದ್ದು ಸೀತಾರಾಮರ ಬೆಳವಣಿಗೆಗೆ ಉತ್ತೇಜನವನ್ನು ನೀಡಿದರು.

45 ವರ್ಷ ವಯಸ್ಸಿನವರಾದ ಇವರು ತಲಕಳ ಮೇಳದಲ್ಲಿ 5ವರ್ಷ, ಕಟೀಲು ಮೇಳದಲ್ಲಿ 5 ವರ್ಷ, ಕರ್ನಾಟಕ ಮೇಳದಲ್ಲಿ 1 ವರ್ಷ, ಕದ್ರಿ ಮೇಳದಲ್ಲಿ 2 ವರ್ಷ, ಹೀಗೆ ತಿರುಗಾಟವನ್ನು ಮಾಡಿದ ಹಿನ್ನೆಲೆಯನ್ನು ಹೊಂದಿದ್ದಾರೆ.

ಮೊದಲಿಗೆ ವೇಷಗಾರಿಕೆಯಲ್ಲಿ ಆಸಕ್ತಿ ವಹಿಸಿರುವ ಇವರು ಮುಖ್ಯ ಸ್ತ್ರೀವೇಷ ಮತ್ತು ಪೋಷಕ ಸ್ತ್ರೀವೇಷಗಳನ್ನು ನಿರ್ವಹಿಸಿರುತ್ತಾರೆ.

ಧರ್ಮಪತ್ನಿ ಶ್ರೀಮತಿ ಸುಜಾತಾ ಹಾಗೂ ಮಗಳು ಸುಶ್ಮಿತಾಳೊಂದಿಗೆ ವೈವಾಹಿಕ ಜೀವನ ನಡೆಸುತ್ತಿರುವ ಇವರು ಕಲಾ ಸೇವೆಯಲ್ಲಿ ತೃಪ್ತರಾಗಿದ್ದಾರೆ.



# ಸುಬ್ರಹ್ಮಣ್ಯ ಭಟ್ ದೇಲಂತ ಮಜಲು

*ದೇಲಂತಮಜಲು ಮನೆ, ಮಾಣಿಲ ಗ್ರಾಮ,*
***ಮುರ್ದ ಅಂಚೆ, ಬಂಟ್ವಾಳ ತಾಲ್ಲೂಕಲು–574243***
***ಮೊ ; 9449453190***
***ಮನೆ : 08255–237208***

ಚೆಂಡೆ–ಮದ್ದಳೆಯ ನುಡಿತ–ಬಡಿತಗಳ ಮುಖೇನ ಯಕ್ಷಗಾನ ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿರುವ ಹಿಮ್ಮೇಳ ಕಲಾವಿದರಾದ ಶ್ರೀ ಸುಬ್ರಹ್ಮಣ್ಯ ಭಟ್ ದೇಲಂತ ಮಜಲು ಇವರು ಎಡನೀರು ಯಕ್ಷಗಾನ ಮಂಡಳಿಯ ಕಲಾವಿದರಾಗಿದ್ದಾರೆ.

2–5–1965ರಂದು ದೇಲಂತಮಜಲಿನಲ್ಲಿ ಜನಿಸಿದ ಇವರ ತಂದೆ ಕೃಷ್ಣ ಭಟ್ ಮತ್ತು ತಾಯಿ ಪಾರ್ವತಿ ಅಮ್ಮ. 10 ನೇ ತರಗತಿಯ ತನಕ ವ್ಯಾಸಂಗ ಮಾಡಿರುವರು.

ಕೀರ್ತಿ ಶೇಷರಾಗಿರುವ ನೆಡ್ಲೆ ನರಸಿಂಹ ಭಟ್ ಅವರಿಂದ ಚೆಂಡೆ, ಮದ್ದಳೆಯ ನುಡಿತ–ಬಡಿತಗಳನ್ನು ಚೆನ್ನಾಗಿ ಅಭ್ಯಾಸಿಸಿ ಕೈಚಳಕದಲ್ಲಿ ಪ್ರೌಢಿಮೆಯನ್ನು ಸಾಧಿಸಿ ಬೆಳೆದು ಬಂದಿದ್ದಾರೆ.


18 ನೇ ವಯಸ್ಸಿನಿಂದ ಕಲಾ ಸೇವೆಯನ್ನು ಆರಂಭಿಸಿದ ಇವರು ಕದ್ರಿ ಮೇಳದಲ್ಲಿ 2 ವರ್ಷ, ಕರ್ನಾಟಕ ಮೇಳದಲ್ಲಿ 16 ವರ್ಷ, ಮಂಗಳಾದೇವಿ ಮೇಳದಲ್ಲಿ 5 ವರ್ಷ, ಹಾಗೂ ಎಡನೀರು ಮೇಳದಲ್ಲಿ 4 ವರ್ಷಗಳನ್ನು ಪೂರೈಸಿ 5ನೇ ವರ್ಷದ ಕಲಾ ಸೇವೆಯನ್ನು ಮುನ್ನಡೆಸಿದ್ದಾರೆ.

ಆರಂಭದಲ್ಲಿ ವೇಷಧಾರಿಕೆಯನ್ನು ಮಾಡುತ್ತಿದ್ದ ಇವರು ರೇಣುಕೆ, ವೃಷಕೇತು, ಕೃಷ್ಣ ಮೊದಲಾದ ಸ್ತ್ರೀ ಪಾತ್ರ ಹಾಗೂ ಪುಂಡು ವೇಷದ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ದೇಲಂತಮಜಲಿನಲ್ಲಿ ಯಕ್ಷಗಾನದ ಕಲಾಭ್ಯಾಸಿಗಳಿಗೆ ಹಿಮ್ಮೇಳವಾದನದ ತರಬೇತಿಯನ್ನು ನೀಡುತ್ತಿರುವ ಇವರು ಕೃಷಿಕ ಮನೆತನಕ್ಕೆ ಸೇರಿದವರಾಗಿದ್ದಾರೆ.

ಶ್ರೀಮತಿ ಚಂದ್ರಕಲಾ ಎಂಬವರನ್ನು ವಿವಾಹವಾಗಿ ಶ್ರೀ ಕೃಷ್ಣರಾಜ್ ಹಾಗೂ ಕುಮಾರಿ ಪುಣ್ಯ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಕಲಾ ಸಾಧನೆಗೆ ಪ್ರತಿಫಲವಾಗಿ ಮಾಣಿಲ ಶ್ರೀಧಾಮ ಕ್ಷೇತ್ರದ ಸ್ವಾಮೀಜಿಯವರಿಂದ ಸಂಮ್ಮಾನಿಸಲ್ಪಟ್ಟಿರುವ ಇವರು ತೆಂಕು ತಿಟ್ಟಿನ ಹಿರಿಯ ಕಲಾವಿದರಾಗಿದ್ದಾರೆ.



## ಸುಬ್ರಹ್ಮಣ್ಯ ಭಟ್ ಶೇಣಿ

*ಉಳುವಾನ ಮನೆ, ಬಾಯಾರು ಗ್ರಾಮ, ಅಂಚೆ,*
*ಉಪ್ಪಳ ವಲಯ, ಕಾಸರಗೋಡು ತಾಲೂಕು– 671348*
*ಮೊ ; 9900351349*

ಮನೆತನದ ಹಿನ್ನೆಲೆಯಿಂದಾಗಿ ಯಕ್ಷಗಾನ ಕಲೆಯಲ್ಲಿ ಆಸಕ್ತಿ ವಹಿಸಿ ಹಿಮ್ಮೇಳ ಕಲಾವಿದರಾಗಿರುವ ಶ್ರೀ ಶೇಣಿ ಸುಬ್ರಹ್ಮಣ್ಯ ಭಟ್ ಅವರು ಮೇಳ ತಿರುಗಾಟವನ್ನು ನಿಲ್ಲಿಸಿದ್ದು, ಹೇಳಿಕೆಯ ಮೇರೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

19–06–1960ರಲ್ಲಿ ಶೇಣಿಯಲ್ಲಿ ಮಹಾಬಲ ಭಟ್ ಮತ್ತು ಶಾರದಮ್ಮ ದಂಪತಿಯ ಸುಪುತ್ರನಾಗಿ ಜನಿಸಿದ ಇವರು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಪಡೆದಿರುವರು.

ಸುಬ್ರಹ್ಮಣ್ಯ ಭಟ್ಟರ ತಂದೆ ಹಿಮ್ಮೇಳ ವಾದಕರಾಗಿದ್ದರು. ಹಾಗಾಗಿ ಬಾಲ್ಯದಿಂದಲೇ ಯಕ್ಷಗಾನ ಕಲೆಯ ಅಭಿರುಚಿಯನ್ನು ಬೆಳೆಸಿರುವ ಇವರು 15ನೇ ವಯಸ್ಸಿನಲ್ಲಿ ತಂದೆಯವರಿಂದಲೇ ಮೊದಲಾಗಿ ಹಿಮ್ಮೇಳವಾದನದ ಅಭ್ಯಾಸವನ್ನು ಮಾಡಿದರು.

ಕುದ್ರೆ ಕೂಡ್ಲು ರಾಮ್‌ಭಟ್, ಪೆರುವಾಯಿ ಕೃಷ್ಣಭಟ್, ಪೆರುವಾಯಿ ನಾರಾಯಣ ಭಟ್ ಇವರೆಲ್ಲರೂ ಸಂಬಂಧಿಕರಾಗಿದ್ದುದರಿಂದ ಇವರಲ್ಲಿ ಹೆಚ್ಚಿನ ಅಭ್ಯಾಸ ಮಾಡಿ ಪ್ರೌಢಿಮೆಯನ್ನು ಸಾಧಿಸಿದರು. ಕೀರ್ತಿ ಶೇಷ ಕಲಾವಿದರಾಗಿರುವ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರಿಂದಲೂ ಅನುಭವವನ್ನು ಸಂಪಾದಿಸಿದ್ದಾರೆ.

ಉಪ್ಪಳ ಭಗವತಿ ಮೇಳ –2 ವರ್ಷ, ಕಟೀಲು ಮೇಳ –2ವರ್ಷ, ಸುರತ್ಕಲ್ ಮೇಳ –3ವರ್ಷ, ಕಟೀಲು ಮೇಳ –2ವರ್ಷ, ಸುಂಕದಕಟ್ಟೆ ಮೇಳ – 1 ವರ್ಷ ಮಲ್ಲ ಮೇಳ –1 ವರ್ಷ, ಮಧೂರುಮೇಳ –1ವರ್ಷ ಹಾಗೂ ಧರ್ಮಸ್ಥಳ ಮೇಳ –5 ವರ್ಷ ಹೀಗೆ ತಿರುಗಾಟ ಮಾಡಿದ ಅನುಭವಿ ಕಲಾವಿದರು ಇವರಾಗಿದ್ದಾರೆ.
ವೇಷಗಾರಿಕೆಯ ಬಗ್ಗೆಯೂ ಆಸಕ್ತರಾಗಿದ್ದ ಇವರು ಮಾಗಧ, ಭಗದತ್ತ, ಅರ್ಜುನ, ಮೋಹಿನಿ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಅನೇಕರಿಗೆ ಹಿಮ್ಮೇಳದ ತರಬೇತಿ ನೀಡಿರುವ ಇವರು ಪ್ರವೃತ್ತಿಯಲ್ಲಿ ಚೆಂಡೆ ಮದ್ದಳೆಗಳ ದುರಸ್ತಿ ಹಾಗೂ ಹೊಸತಾಗಿ ತಯಾರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದರ ಜೊತೆಗೆ ಕೃಷಿಕರಾಗಿಯೂ ಶ್ರಮಿಸಿದ್ದಾರೆ.

ಶ್ರೀಮತಿ ಶೈಲಜಾ (ಗೌರಮ್ಮ) ಇವರನ್ನು ವರಿಸಿ ರವಿಕಿರಣ್, ಮುರಳೀಕೃಷ್ಣ, ಸತ್ಯನಾರಾಯಣ ಎಂಬ ಮೂರು ಮಕ್ಕಳನ್ನು ಪಡೆದು ಕೃತಾರ್ಥರಾಗಿದ್ದಾರೆ.

ಇವರ ಕಲಾ ಸೇವೆಗೆ ಪೆರ್ಲ, ದೆಹಲಿ, ಲಂಡನ್, ಬೆಂಗಳೂರು ಮೊದಲಾದ ದೇಶ ವಿದೇಶಗಳ ಅಭಿನಂದನೆ, ಪುರಸ್ಕಾರಗಳು ಸಂದಿವೆ.



## ಸುಬ್ರಹ್ಮಣ್ಯ ಎಸ್. ಸಜಿಪ

*ಮಿತ್ತ ಪಡ್ಡು ಮನೆ*
*ಸಜಿಪ ಪಡು ಬಂಟ್ವಾಳ ತಾಲೂಕು*
*ಮೊ ; 9164830151*

ಪ್ರಸಕ್ತ ಸಾಲಿನಲ್ಲಿ ಶ್ರೀ ಕಟೀಲು ಮೇಳದ ಕಲಾವಿದರಾಗಿ ಕಲಾ ಸೇವೆ ಮಾಡುತ್ತಿರುವ ಎಸ್. ಸುಬ್ರಹ್ಮಣ್ಯ ಸಜಿಪ ಇವರು ತೀವ್ರ ಗತಿಯ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸ ಬಲ್ಲರು.

14-02-1962ರಂದು ಸಜಿಪದಲ್ಲಿ ನಾರಾಯಣ ಹಾಗೂ ರಾಮಕ್ಕ ದಂಪತಿಗೆ ಸುಪುತ್ರರಾಗಿ ಜನಿಸಿದ ಇವರು 7ನೇ ತರಗತಿಯ ತನಕ ಓದಿರುವರು.

20ನೇ ವಯಸ್ಸಿನಲ್ಲಿ ಯಕ್ಷರಂಗ ಪ್ರವೇಶಿಸಿದ ಸುಬ್ರಹ್ಮಣ್ಯರು ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಕೆ. ಗೋವಿಂದ ಭಟ್ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿರುವರು. ಅರ್ಥಧಾರಿಯಾದ ಐತಪ್ಪ ಕಣಂತೂರು ಇವರ ಮಾವರಾಗಿದ್ದು ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದಾರೆ.

ಕಟೀಲು ಮೇಳದಲ್ಲಿ 7 ವರ್ಷ, ಬಪ್ಪನಾಡು ಮೇಳದಲ್ಲಿ 10 ವರ್ಷ, ಮಧೂರು ಮೇಳದಲ್ಲಿ 3 ವರ್ಷ, ಹಾಗೂ ಗಣೇಶಪುರ ಕಾಟಿಪಳ್ಳ ಮೇಳದಲ್ಲಿ 2 ವರ್ಷಗಳ ಕಾಲ ತಿರುಗಾಟ ಮಾಡಿ ಅನುಭವಿಗಳಾದ ಶ್ರೀಯುತರು ಬಪ್ಪನಾಡು ಮೇಳದಲ್ಲಿ 5 ವರ್ಷಗಳ ಕಾಲ ಸಂಚಾಲಕರಾಗಿಯೂ ದುಡಿದಿರುತ್ತಾರೆ. ಪ್ರಸ್ತುತ ಕಟೀಲು ಮೇಳವನ್ನು ಸೇರಿದ್ದಾರೆ.

ಪುಂಡುವೇಷ, ರಾಜವೇಷ, ಹಾಗೂ ಬಣ್ಣದ ವೇಷಗಳನ್ನು ನಿರ್ವಹಿಸುವ ಇವರು ಶುಂಭ, ಮಹಿಷ, ಚಂಡ-ಮುಂಡರು, ಚಂಡ-ಪ್ರಚಂಡರು, ಹುಂಡ-ಪುಂಡರು, ಅಭಿಮನ್ಯು, ವಾವರ, ಅಯ್ಯಪ್ಪ ಇತ್ಯಾದಿ ವೇಷಗಳನ್ನು ಮಾಡಿರುತ್ತಾರೆ. ವರಾಹ ವೇಷ ಇವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಂತಹ ವೇಷವಾಗಿದೆ.

ಸುಬ್ರಹ್ಮಣ್ಯರವರು ಯಕ್ಷಗಾನ ಹಿಮ್ಮೇಳದ ಚೆಂಡೆ ಮದ್ದಳೆ ಹಾಗೂ ಭಾಗವತಿಕೆಯ ಬಗ್ಗೆ ಆಸಕ್ತಿ ಹೊಂದಿದವರಾಗಿದ್ದು ಕ್ರೀಯಾಶೀಲರಾಗಿದ್ದಾರೆ.

ತೋಕೂರು ಶಾಲೆ, ಕುಬಣೂರು ಶಾಲೆ, ಅರಳ ಬಂಟ್ವಾಳ, ಸಜಿಪ ಶಾಲೆ, ಕೆತ್ತಿಕ್ಕಲ್ ಮೊದಲಾದ ಕಡೆಗಳಲ್ಲಿ ನಾಟ್ಯತರಬೇತಿಯನ್ನು ನಡೆಸಿದ್ದಾರೆ.

ಧರ್ಮಪತ್ನಿ ಶ್ರಿಮತಿ ಶಕೀಲಾ, ಮಕ್ಕಳಾದ ಲಕ್ಷ್ಮೀ ಸಾಗರ್, ಜಗದೀಶ್, ಋಷಿಕೇಶ ಹಾಗೂ ಹರಿಪ್ರಸಾದ್ ಇವರೊಂದಿಗೆ ಸಂತೃಪ್ತ ಜೀವನ ನಡೆಸುತ್ತಿರುವರು.

ಶ್ರೀಯುತರಿಗೆ ಬಂಟ್ವಾಳ, ಅರಳ, ನಾಯ್ಲ, ಪಾಣೆ ಮಂಗಳೂರು ಮುಂತಾದ ಕಡೆಗಳಲ್ಲಿ ಸಾಧನೆಗೆ ಗೌರವ ರೂಪದ ಸಂಮಾನ ಪುರಸ್ಕಾರಗಳು ಸಂದಿವೆ.



# ಸುಬ್ರಹ್ಮಣ್ಯ ಕುಂದರ್

*“ಸೀತಾ ನಿವಾಸ್” ಅಲ್ವೆಕೋಡಿ ಎರ್ಮಾಳು ತೆಂಕಗ್ರಾಮ*
*ಎರ್ಮಾಳು ಅಂಚೆ, ಉಡುಪಿ ತಾಲೂಕು*
*ಮೊಬೈಲ್: 9632063527.*

ಸ್ತ್ರೀವೇಷ, ಪುಂಡುವೇಷ, ಹಾಸ್ಯವೇಷಗಳನ್ನು ನಿರ್ವಹಿಸುತ್ತಾ ಕಲಾವಿದರಾಗಿ ಸ್ತ್ರೀ ಪಾತ್ರದಲ್ಲಿ ಮನ್ನಣೆಯನ್ನು ಪಡೆದಿರುವ ಶ್ರೀ ಸುಬ್ರಹ್ಮಣ್ಯ ಕುಂದರ್ ಅವರು ಪ್ರಸ್ತುತ ಶ್ರೀ ಬಪ್ಪನಾಡು ಮೇಳದಲ್ಲಿ ಕಲಾಸೇವೆಯನ್ನು ಮಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಲಶೇಖರ ಎಂಬಲ್ಲಿ ಪದ್ಮನಾಭ ಸಾಲಿಯನ್ ಹಾಗೂ ಗೌರಿ ದಂಪತಿಗೆ ಸುಪುತ್ರರಾಗಿ ಜನಿಸಿರುವ ಇವರಿಗೆ ಈಗಾಗಲೇ 43 ವರ್ಷಗಳ ಪ್ರಾಯ ಸಂದಿವೆ.

ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಶ್ರೀ ತಿಮ್ಮಪ್ಪ ಗುಜರನ್ ಅವರ ಪ್ರೇರಣೆಯಿಂದಾಗಿ 16ನೇ ವಯಸ್ಸಿನಲ್ಲಿ ಯಕ್ಷಗಾನದ ನಾಟ್ಯಾಭ್ಯಾಸಕ್ಕೆ ಆಸಕ್ತಿಯನ್ನು ತೋರಿದರು.

ಬಜ್ಪೆ ರಾಘವದಾಸ್ ಹಾಗೂ ಕೇಶವ ಶಕ್ತಿನಗರ ಇವರಲ್ಲಿ ನಾಟ್ಯಾಭ್ಯಾಸವನ್ನು ಮಾಡಿ ಪಾತ್ರ ನಿರ್ವಹಣೆಯ ಬಗ್ಗೆ ಅನುಭವವನ್ನು ಸಂಪಾದಿಸಿ ವೇಷ ಹಾಕುತ್ತಾ ಕಲೆಯ ಶೈಲಿಯನ್ನು ರೂಪಿಸಿಕೊಂಡರು.

ತಲಕಳ ಮೇಳಕ್ಕೆ ಮೊತ್ತಮೊದಲಾಗಿ ಸೇರಿದ ಇವರು 16 ವರ್ಷಗಳವರೆಗೆ ಕಲಾ ಸೇವೆಯನ್ನು ಮಾಡಿ ಅನಂತರ ಸುಂಕದಕಟ್ಟೆ ಮೇಳದಲ್ಲಿ 1 ವರ್ಷ ಹಾಗೂ ಶ್ರೀ ಭಗವತಿ ಮೇಳದಲ್ಲಿ 3 ವರ್ಷಗಳ ಕಲಾ ಸೇವೆಯನ್ನು ಮಾಡಿರುವರು.ಪ್ರಸ್ತುತ ಬಪ್ಪನಾಡು ಮೇಳದಲ್ಲಿ ಕಳೆದ 2 ವರ್ಷದಿಂದ ಕಲಾಸೇವೆಯನ್ನು ಮಾಡುತ್ತಿದ್ದಾರೆ.

ಚಿತ್ರಾಂಗದೆ, ಪ್ರಭಾವತಿ, ಸುಭದ್ರೆ, ಪ್ರಮೀಳೆ, ಶಶಿಪ್ರಭೆ, ಗುಣಸುಂದರಿ, ರಂಭಾಮಣಿ, ಭಾಗೀರಥಿ, ಕೃಷ್ಣ, ವಿಷ್ಣು, ಕೋಟಿ ಚೆನ್ನಯರು ಹೀಗೆ ಮುಖ್ಯ ಪಾತ್ರಗಳನ್ನು ಮಾಡುವುದರಲ್ಲಿ ಪರಿಣತಿಯನ್ನು ಹೊಂದಿದ್ದಾರೆ.

ಯಕ್ಷಗಾನದ ಜೊತೆಗೆ ಉಪವೃತ್ತಿಯಾಗಿ ಯಕ್ಷಗಾನಕ್ಕೆ ಸಂಬಂಧಪಟ್ಟಂತಹ ಆಭರಣಗಳನ್ನು ತಯಾರಿಸುವ ಕುಸುರಿ ಕೆಲಸದಲ್ಲಿ ಪೌಢಿಮೆಯನ್ನು ಸಾಧಿಸಿದ್ದಾರೆ. ಯಕ್ಷಗಾನದಲ್ಲಿ ವೇಷ ಮಾಡುವುದರ ಜೊತೆಗೆ ಮದ್ದಳೆ ಬಾರಿಸುವ ಕಲಾಗಾರಿಕೆಯನ್ನು ಕೂಡಾ ಮೈಗೂಡಿಸಿಕೊಂಡಿದ್ದಾರೆ. ಯಕ್ಷಗಾನದ ನಾಟ್ಯದಲ್ಲಿ ಪ್ರೌಢಿಮೆಯನ್ನು ಹೊಂದಿದ ಇವರು ಇತರರಿಗೆ ನಾಟ್ಯಾಭ್ಯಾಸವನ್ನು ಕಲಿಸಿಕೊಟ್ಟಿದ್ದಾರೆ.

ಶ್ರೀಮತಿ ವೇದಾವತಿ ಅವರನ್ನು ವಿವಾಹಮಾಡಿಕೊಂಡ ಇವರು ಪ್ರೀತಮ್ ಹಾಗೂ ಪ್ರಣಾಮ್ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಇವರ ಕಲಾಸೇವೆಯನ್ನು ಗುರುತಿಸಿ ಕುತ್ತೆತ್ತೂರು, ಸೂರಿಂಜೆ, ಎರ್ಮಾಳು ಶಾಲೆ ಹಾಗೂ ಇನ್ನಿತರ ಕಡೆಗಳಲ್ಲಿ ಸಂಮಾನಿಸಿ ಗೌರವಿಸಿದ್ದಾರೆ.



## ಸುನೀಲ್ ಕುಮಾರ್ ಪುತ್ತೂರು

*ಬನ್ನೂರು ಮನೆ, ಬನ್ನೂರು ಗ್ರಾಮ, ಅಂಚೆ,*
*ಪುತ್ತೂರು ತಾಲೂಕು*
*ಮೊಬೈಲ್ :9449566716*

ಬ್ರಹ್ಮ, ವಿಷ್ಣು ಮುಂತಾದ ಪಾತ್ರಗಳನ್ನು ಮಾಡುತ್ತಾ ಜನ ಮೆಚ್ಚುಗೆಯನ್ನು ಪಡೆದ ಯುವ ಕಲಾವಿದರಾದ ಶ್ರೀ ಸುನೀಲ್ ಕುಮಾರ್ ಇವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಾ ಇದ್ದಾರೆ.

ದ.ಕ ಜಿಲ್ಲೆ ಪುತ್ತೂರು ತಾಲೂಕಿನ ಬನ್ನೂರು ಗ್ರಾಮದಲ್ಲಿ ಶ್ರೀಧರ ಭಂಡಾರಿ ಮತ್ತು ಉಷಾ ಎಸ್. ಭಂಡಾರಿ ಇವರ ಪುತ್ರನಾಗಿ 01.06.1977ರಂದು ಜನಿಸಿದರು.

ದ್ವಿತೀಯ ಪಿ.ಯು.ಸಿಯ ತನಕ ವಿದ್ಯಾಭ್ಯಾಸವನ್ನು ಪಡೆದ ಇವರು ಶ್ರೀ ರತ್ನಾಕರ ಹೆಗ್ಡೆ ಅವರ ಪುಂಡುವೇಷದ ಪ್ರೇರಣೆಯಿಂದ ಅವರಲ್ಲಿ ಹಾಗೂ ಗಣೇಶ್ ಕುಂದರ್ ಅವರಿಂದ ಯಕ್ಷಗಾನದ ನಾಟ್ಯವನ್ನು ಕಲಿತರು.

ಇವರು ಸುಂಕದಕಟ್ಟೆ ಮೇಳದಲ್ಲಿ 1 ವರ್ಷ, ಮಂಗಳಾದೇವಿ ಮೇಳದಲ್ಲಿ 9 ವರ್ಷ, ಹೊಸನಗರ ಮೇಳದಲ್ಲಿ 1 ವರ್ಷ, ಹಾಗೂ ಪ್ರಸ್ತುತ ಕಟೀಲು ಮೇಳದಲ್ಲಿ 3 ನೇ ವರ್ಷದ ತಿರುಗಾಟವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಇವರು ಪುಂಡು, ರಾಜ, ಸ್ತ್ರೀವೇಷ ಹಾಗೂ ಹಾಸ್ಯ ವೇಷಗಳನ್ನು ಮಾಡುತ್ತಾ ಜನ ಮೆಚ್ಚುಗೆಯನ್ನು ಪಡೆದಿದ್ದಾರೆ. ಬ್ರಹ್ಮ, ಚಂಡ-ಮುಂಡರು, ಭ್ರಮರ ಕುಂತಳೆ, ದೇವಿ, ಅರ್ಜುನ, ದೇವೇಂದ್ರ, ವಿಜಯ, ದಾರುಕ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಇವರ ಯಕ್ಷಗಾನದ ಕಲಾಸೇವೆಗೆ ಕುವೈಟ್ ಬಂಟರ ಸಂಘದ ವತಿಯಿಂದ ಗೌರವವು ಲಭಿಸಿದೆ. ಇಷ್ಟಲ್ಲದೆ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲಾ ವಿದ್ಯಾರ್ಥಿಗಳ ಸಂಮಾನದ ಗೌರವಕ್ಕೆ ಪಾತ್ರರಾಗಿದ್ದಾರೆ.



# ಸುರೇಂದ್ರ ಮಲ್ಲಿ, ಗುರುಪುರ

*ಮರಂಕರಿಯ ಮನೆ,*
*ಗುರುಪುರ ಅಂಚೆ*
*ಮಂಗಳೂರು – **57406***

ಯಕ್ಷಗಾನ ಕಲೆಯ ಪ್ರಭಾವಕ್ಕೆ ಮಣಿದು ಸ್ವ ಆಸಕ್ತಿಯಿಂದ ಯಕ್ಷಗಾನ ಕಲಿತು ಕಲಾವಿದರಾಗಿ ಮೆರೆದು ಬಂದ ಶ್ರೀ ಸುರೇಂದ್ರ ಮಲ್ಲಿ ಗುರುಪುರ ಇವರು ಪ್ರಸಕ್ತ ಸಾಲಿನಲ್ಲಿ ತಲಕಳ ಮೇಳದ ಸಂಚಾಲಕ.

ಗುರುಪುರದ ಮರಂಕರಿಯದಲ್ಲಿ ಗಣಪ ಮಲ್ಲಿ ಮತ್ತು ಗಿರಿಜಾ ದಂಪತಿಗೆ 22–07–1972 ರಲ್ಲಿ ಮಗನಾಗಿ ಜನಿಸಿದ ಇವರು 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

7ನೇ ತರಗತಿಯಲ್ಲಿರುವಾಗ ಕಲಾಸಕ್ತರಾಗಿ ಹಿರಿಯ ಕಲಾವಿದ ಬಜಪೆ ದೇರಣ್ಣನವರಿಂದ ನಾಟ್ಯಾಭ್ಯಾಸ ಮಾಡಿ ರಂಗ ಪ್ರವೇಶ ಮಾಡಿದರು.

ಸ್ತ್ರೀ ವೇಷ, ಪುಂಡುವೇಷ, ಮುಖ್ಯ ಪೋಷಕ ಪಾತ್ರ ಹಾಗೂ ಹಾಸ್ಯ ಪಾತ್ರಗಳಲ್ಲಿ ಪರಿಣತಿ ಹೊಂದಿರುವ ಇವರು ಆದಿ ಸುಬ್ರಹ್ಮಣ್ಯ ಮೇಳದಲ್ಲಿ 7ವರ್ಷ, ಬಪ್ಪನಾಡು ಮೇಳದಲ್ಲಿ 2ವರ್ಷ ವೇಷಧಾರಿಯಾಗಿ ಹಾಗೂ ತಲಕಳ ಮೇಳದಲ್ಲಿ 6ವರ್ಷಗಳಿಂದ ಯಜಮಾನನಾಗಿ ಮತ್ತು ವೇಷಧಾರಿಯಾಗಿ ಕಲಾಸೇವೆ ಗೈದ ಅನುಭವವಿದೆ.

ಮೋಹಿನಿ, ಭ್ರಮರಕುಂತಳೆ, ಶ್ರೀದೇವಿ, ಮಾಲಿನಿ, ಪ್ರಮೀಳೆ, ಕಿನ್ನಿದಾರು, ದೇಯಿಬೈದೇದಿ, ಸಿದ್ದು, ಕೋಟಿ, ಶಂಕರ, ಬ್ರಹ್ಮ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಗುರುಪುರದಲ್ಲಿ ಕಲಾ ಆರ್ಟ್ಸ್‌ನ್ನು ಸ್ಥಾಪಿಸಿರುವ ಇವರು ಉಳಾಯಿ ಬೆಟ್ಟು ಮತ್ತು ಅಡ್ಯಾರಿನಲ್ಲಿರುವ ಗುಣಶ್ರೀ ವಿದ್ಯಾಲಯದಲ್ಲಿ ನಾಟ್ಯಾ ತರಬೇತಿ ನೀಡುತ್ತಿದ್ದಾರೆ.

ಶ್ರೀಮತಿ ಶೈಲಾಜಾ ಮಲ್ಲಿಯವರನ್ನು ವರಿಸಿ ಮಕ್ಕಳಾದ ಭಾಗ್ಯಲಕ್ಷ್ಮೀ ಮತ್ತು ಯಜ್ಞೇಶ್ ಮಲ್ಲಿಯವರನ್ನೂ ಪಡೆದು ಕೃತಾರ್ಥರಾಗಿದ್ದಾರೆ.

ಪುತ್ತೂರು ಬೊಳುವಾರು ಆಂಜನೇಯ ಮಂದಿರ ಮತ್ತು ಮೂಡುಶೆಡ್ಡೆ ಆದಿಮಾಯೆ ದೇವಸ್ಥಾನದಿಂದ ಸಂಮಾನಗಳನ್ನೂ ಸ್ವೀಕರಿಸುವ ಇವರಿಗೆ ಯುವಜನ ಮೇಳದ ಯಕ್ಷಗಾನ ಸ್ಪರ್ಧೆಯಲ್ಲಿ ಸ್ತ್ರೀ ಪಾತ್ರಕ್ಕೆ ಪ್ರಥಮ ಬಹುಮಾನ ಲಭಿಸಿದೆ.



## ಸುದರ್ಶನ ವಿ ಶೆಟ್ಟಿ ಪೊಳಲಿ

*"ಯಕ್ಷ ವಿಜಯ", ಬಡಕಬೈಲು*
*ಪೊಳಲಿ ಅಂಚೆ, ಬಂಟ್ವಾಳ ತಾಲೂಕು*
*ದೂರವಾಣಿ: 9845546471.*

ಬಣ್ಣದ ವೇಷ ಹಾಗೂ ರಾಜ ವೇಷದ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿರುವ ಹಿರಿಯ ಕಲಾವಿದರಾದ ಶ್ರೀ ಸುದರ್ಶನ ವಿ. ಶೆಟ್ಟಿಯವರು ಶ್ರೀ ಭಗವತೀ ಮೇಳ ಸಸಿಹಿತ್ಲು ಇದದರ ವೇಷಧಾರಿಯಾಗಿ ತಿರುಗಾಟವನ್ನು ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಶ್ರೀ ಕ್ಷೇತ್ರ ಪೊಳಲಿಯ ಸಮೀಪದ ಅರ್ಬಿ ಮೂಡುಶೆಡ್ಡೆ ಎಂಬಲ್ಲಿ ವಾಸು ಶೆಟ್ಟಿ ಹಾಗೂ ರತ್ನ ಶೆಡ್ತಿ ದಂಪತಿಯ ಸುಪುತ್ರರಾಗಿ ದಿನಾಂಕ 31-10-1943ರಂದು ಜನಿಸಿದರು. ಹತ್ತನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕಲಾಕರ್ಷಿತರಾಗಿ ಭಾಗವತರಾಗಿದ್ದ ತನ್ನ ತಂದೆಯುವರಿಂದಲೇ ಕಲೆಯ ಅಧ್ಯಯನಕ್ಕೆ ಪ್ರಚೋದಿತರಾದರು.

1965ರ ಸುಮಾರಿಗೆ ಶ್ರೀ ತ್ರಿವಿಕ್ರಮ ಶೆಣೈ ಹಾಗೂ ಶ್ರೀ ಅನಂತ ಶೆಣೈ ಕತ್ತಲ್‌ಸಾರ್ ಇವರಲ್ಲಿ ಅನುಕ್ರಮವಾಗಿ ನಾಟ್ಯ ಹಾಗೂ ಭಾಗವತಿಕೆಯ ಅಭ್ಯಾಸವನ್ನು ಮಾಡಿದರು. ಉಗ್ರನರಸಿಂಹ ಯಕ್ಷಗಾನ ಮಂಡಳಿ (ಮುಂಬಯಿ) ಯನ್ನು ಸೇರಿಕೊಂಡು ತನ್ನ ಕಲಾ ಜೀವನವನ್ನು ಪ್ರಾರಂಭಿಸಿ ಊರಿಗೆ ಮರಳಿದವರು ಸುಬ್ರಹ್ಮಣ್ಯ ಯಕ್ಷಗಾನ ಮಂಡಳಿ ಕುಲಶೇಖರ ಇದರ ಕಲಾವಿದರಾಗಿ ಹೆಚ್ಚಿನ ಕಲಾಸೇವೆಯನ್ನು ಮಾಡಿದ್ದಾರೆ.


ತಳಕಳ ಮೇಳ -12 ವರ್ಷ, ಸುರತ್ಕಲ್ ಮೇಳ -1 ವರ್ಷ, ಕಟೀಲು ಮೇಳ -2 ವರ್ಷ ಹಾಗೂ ಕಳೆದ 8 ವರ್ಷಗಳಿಂದ ಸಸಿಹಿತ್ಲು ಭಗವತಿ ಮೇಳದಲ್ಲಿ ತನ್ನ ಯಕ್ಷಗಾನದ ಕಲಾಜೀವನವನ್ನು ನಡೆಸುತ್ತಿದ್ದಾರೆ.

ರಾವಣ, ಕುಂಭಕರ್ಣ, ಕಂಸ, ಶುಂಭ, ಭೀಮ, ಮಹಿಷಾಸುರ, ಅರ್ಜುನ, ದೇವೇಂದ್ರ, ಧರ್ಮರಾಯ, ಪಾಂಡ್ಯರಾಜ ಮುಂತಾದ ವೇಷಗಳಲ್ಲಿ ಮಿಂಚಿದ್ದಾರೆ. ಕೇಳು ಪಂಡಿತನ ಪಾತ್ರವನ್ನು ಬಹಳ ಪರಿಣಾಮಕಾರಿಯಾಗಿ ನಿರ್ವಹಿಸಿ ಕೀರ್ತಿ ಸಂಪನ್ನರಾಗಿದ್ದಾರೆ.

ಭಾಗವತರಾಗಿ, ತಾಳಮದ್ದಳೆಯ ಅರ್ಥಧಾರಿಯಾಗಿ ಸದಾ ಕ್ರೀಯಾಶೀಲತೆಯಿಂದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಶೆಟ್ಟರು ಹಲವಾರು ಹವ್ಯಾಸಿ ಕಲಾವಿದರಿಗೆ ಪ್ರಸಂಗ ಮತ್ತು ಪಾತ್ರ ನಿರ್ವಹಣೆಯ ಬಗ್ಗೆ ಅನುಭವವನ್ನು ಹೇಳಿದ್ದಾರೆ.

ಶ್ರೀಮತಿ ಜಯಂತಿ ಶೆಡ್ತಿಯವರನ್ನು ವರಿಸಿರುವ ಇವರು ಹರೀಶ್ ಕುಮಾರ್ ಶೆಟ್ಟಿ ಹಾಗೂ ಅಜೀಯ್ ಕುಮಾರ್ ಶೆಟ್ಟಿ ಎಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ತನ್ನ ಸ್ವಂತ ನೆಲದಲ್ಲಿ ಕೃಷಿಗಾರಿಕೆಯನ್ನು ಮಾಡುತ್ತಾ ಸಂತೃಪ್ತರಾಗಿದ್ದಾರೆ.

ಮುಂಬಯಿ ನಗರದಲ್ಲೂ ಅಭಿಮಾನಿಗಳನ್ನು ಹೊಂದಿರುವ ಇವರು ಅಲ್ಲಿನ ತೀಯಾ ಸಮಾಜ ಯಕ್ಷಗಾನ ಕಲಾಭಿಮಾನಿಗಳಿಂದ ಸನ್ಮಾನಿತರಾಗಿದ್ದಾರೆ. ಅಡ್ಡೂರು ಮುಖ್ಯಪ್ರಾಣ ದೇವಸ್ಥಾನದ ಸಮಿತಿಯ ಸಂಮಾನ ಹಾಗೂ ಹವ್ಯಾಸಿ ಬಳಗ ಕದ್ರಿ ಇದರ ದಶಮಾನದ ಸಂಮಾನವನ್ನು ಪಡೆದಿದ್ದಾರೆ.



## 144. ಸೋಮಶೇಖರ ಕೆ. ಭಟ್

*ರಾಮ ನಿವಾಸ, ಕಾಶೀ ಪಟ್ಣ ಅಂಚೆ ಮತ್ತು ಗ್ರಾಮ*
*ಬೆಳ್ತಂಗಡಿ ತಾಲೂಕು- 574236*
*ಮೊಬೈಲ್: 9880858723.*

ಚೆಂಡೆ-ಮದ್ದಳೆಯ ವಾದನದಲ್ಲಿ ಪ್ರತಿಭಾವಂತರಾಗಿ ಬೆಳೆಯುತ್ತಿರುವ ಕೆ. ಸೋಮಶೇಖರ ಭಟ್, ಇವರು ಕಟೀಲು ಮೇಳದ ಕಲಾವಿದರಾಗಿ ತಿರುಗಾಟವನ್ನು ಮಾಡುತ್ತಾ ಇದ್ದಾರೆ.


ಬೆಳ್ತಂಗಡಿ ತಾಲೂಕಿನ ಕಾಶಿ ಪಟ್ಣ ಗ್ರಾಮದ "ರಾಮ ನಿವಾಸ"ದಲ್ಲಿ ಶ್ರೀ ರಾಮರಾವ್ ಹಾಗೂ ಶ್ರೀಮತಿ ಲಕ್ಷ್ಮೀ ದಂಪತಿಗೆ ಮಗನಗಿರುವ ಕೆ. ಸೋಮಶೇಖರ ಭಟ್‌ರು ದಿನಾಂಕ 18-05-1981ರಲ್ಲಿ ಜನಿಸಿದರು.

ಕೃಷಿಯನ್ನೇ ಅವಲಂಬಿತರಾಗಿರುವ ಮನೆತನದಲ್ಲಿ ಹುಟ್ಟಿದ ಇವರು 7ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

20ನೇ ವರ್ಷದಲ್ಲಿ ಚೆಂಡೆ ಮದ್ದಳೆವಾದಕರಾಗಿ ಬೆಳೆಯಬೇಕೆಂಬ ನಿಟ್ಟಿನಲ್ಲಿ ಆಕಾಂಕ್ಷೆಯನ್ನು ತಾಳಿ ಗುರುಗಳಾದ ಹರಿನಾರಾಯಣ ಬೈಪಾಡಿತ್ತಾಯರಲ್ಲಿ ಚೆಂಡೆ-ಮದ್ದಳೆಗಳ ನುಡಿತ-ಬಡಿತಗಳನ್ನು ಕಲಿತು ಹಿಡಿತವನ್ನು ಸಾಧಿಸಿ ಮೇಳ ತಿರುಗಾಟಕ್ಕೆ ನಾಂದಿ ಹಾಡಿದರು.

ಕಟೀಲು ಮೇಳದ ಹಿರಿಯ ವೇಷಧಾರಿಯಾದ ರೆಂಜಾಳ ರಾಮಕೃಷ್ಣ ಭಟ್ ಅವರು ದೂರ ಸಂಬಂಧಿ ಹಾಗೂ ತಂದೆಯವರು ಹವ್ಯಾಸಿಯಾಗಿ ಚೆಂಡೆ ಮದ್ದಳೆಗಾರರಾಗಿದ್ದುದರಿಂದ ಕಲಾ ಪ್ರತಿಭೆ ಇವರಿಗೆ ರಕ್ತಗತವಾಗಿ ಬಂದಿದೆ.

ಕಟೀಲು ಮೇಳದಲ್ಲಿ 10ನೇ ವರ್ಷದ ತಿರುಗಾಟವನ್ನು ಪೂರೈಸಿರುವ ಇವರು ಹಿರಿಯ ಕಲಾವಿದರ ಒಡನಾಟದಿಂದ ಕಲಾ ಸಾಧಕರಾಗಿ ಬೆಳೆಯುತ್ತಾ ಇದ್ದಾರೆ.



## ಸಂತೋಷ ನಾಯ್ಕ ಎಡನೀರು

*ಗಾಣಿಗರ ಮೂಲೆ, ಪಾಡಿ ಗ್ರಾಮ, ಎಡನೀರು ಅಂಚೆ*
*ಕಾಸರಗೋಡು.*
*ಮೊ ; 9645476056*


ಶ್ರೀ ಹೊಸನಗರ ಮೇಳದ ಯುವ ಕಲಾವಿದರಾಗಿ ಪುಂಡುವೇಷ ಹಾಗೂ ಸ್ತ್ರೀ ವೇಷಗಳನ್ನು ನಿರ್ವಹಿಸುತ್ತಾ ಶ್ರೀ ಸಂತೋಷ ನಾಯ್ಕ, ಎಡನೀರು ಬೆಳೆಯುತ್ತಿದ್ದಾರೆ.

ಹುಟ್ಟೂರಾದ ಎಡನೀರಿನಲ್ಲಿ ಶ್ರೀ ಕೃಷ್ಣ ನಾಯ್ಕ ಮತ್ತು ಶ್ರೀಮತಿ ಪ್ರೇಮ ದಂಪತಿಗೆ ಜನಿಸಿದ ಸಂತೋಷ ನಾಯ್ಕರವರು ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ.

12ನೇ ವಯಸ್ಸಿಗೆ ಕಟೀಲು ಮೇಳದ ಬಣ್ಣದ ವೇಷಧಾರಿಯಾದ ಹರಿನಾರಾಯಣ ಭಟ್‌ರವರ ಪ್ರೇರಣೆಯೊಂದಿಗೆ ಧರ್ಮಸ್ಥಳ ಲಲಿತಕಲಾ ಕೇಂದ್ರವನ್ನು ಸೇರಿ ನಾಟ್ಯಾಭ್ಯಾಸವನ್ನು ಮಾಡಿದರು.

ದಿವಾಣ ಶಿವಶಂಕರ ಭಟ್‌ರಿಂದ ನಾಟ್ಯಾಭ್ಯಾಸ ಮಾಡಿ ರಂಗ ಪ್ರವೇಶಿಸಿದ ಇವರು ಧರ್ಮಸ್ಥಳ ಮೇಳದಲ್ಲಿ 1 ವರ್ಷ, ಕಟೀಲು ಮೇಳದಲ್ಲಿ 3 ವರ್ಷ, ಎಡನೀರು ಮೇಳದಲ್ಲಿ 4 ವರ್ಷ ಹಾಗೂ ಹೊಸನಗರ ಮೇಳದಲ್ಲಿ 3ನೇ ವರ್ಷದ ತಿರುಗಾಟವನ್ನು ನಡೆಸುತ್ತಿದ್ದಾರೆ.

22 ವರುಷಗಳ ವಯೋಮಾನಕ್ಕೇರಿರುವ ಇವರು ವರುಣ, ಮಾರುತ, ಬಾಲಸರಸ್ವತಿ, ನಕುಲ, ಸಹದೇವ ಮೊದಲಾದ ವೇಷಗಳನ್ನು ನಿರ್ವಹಿಸಿದ್ದಾರೆ.



## ಸಂತೋಷ ಶೀನ ಶೆಟ್ಟಿ

*ಕಾಚೂರು ಮನೆ, ಅಂಚೆ ಕೆಂಚನ ಕೆರೆ*
*ಶಿಮಂತೂರು ಗ್ರಾಮ, ಮಂಗಳೂರು ತಾಲೂಕು*
*ಮೊಬೈಲ್ : 0824-2297002*

ಪುಂಡುವೇಷ ಮತ್ತು ರಾಜವೇಷಗಳ ನಿರ್ವಹಣೆ ಮಾಡುತ್ತಾ ಬೆಳೆದಿರುವ ಶ್ರೀ ಸಂತೋಷ ಶೀನ ಶೆಟ್ಟಿ ಇವರು ಶ್ರೀ ಕಟೀಲು ಮೇಳದ ವೃತ್ತಿ ಪರ ಕಲಾವಿದರಾಗಿದ್ದಾರೆ.

2-1-1980ರಂದು ಶೀನ ಶೆಟ್ಟಿ ಮತ್ತು ಪುಷ್ಪಾ ಶೆಟ್ಟಿ ದಂಪತಿಯ ಸುಪುತ್ರರಾಗಿ ಜನಿಸಿದ ಇವರ ಹುಟ್ಟೂರು ಶಿಮಂತೂರು. ದ್ವಿತೀಯ ಪದವಿಪೂರ್ವ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಕೃಷಿಕ ಮನೆತನಕ್ಕೆ ಸೇರಿದವರಾಗಿದ್ದಾರೆ.

ಶಿಮಂತೂರು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭ ಶಾಲಾ ವಾರ್ಷಿಕೋತ್ಸವದ ನಿಮಿತ್ತ ಪ್ರಥಮ ಬಾರಿಗೆ ವೇಷ ಮಾಡಿದ ಪ್ರೇರಣೆಯಿಂದಾಗಿ ಯಕ್ಷಗಾನದತ್ತ ಒಲವು ಮೂಡಿಸಿಕೊಂಡು ಹೆಚ್ಚಿನ ಅಧ್ಯಯನವನ್ನು ಮಾಡಿದರು.

18 ನೇ ವರ್ಷದಿಂದ ಮೇಳ ತಿರುಗಾಟವನ್ನು ಮಾಡಿದ ಇವರ ಗುರುಗಳು ಕೀರ್ತಿಶೇಷ ಕಲಾವಿದರಾದ ವಾಸುದೇವ ಪ್ರಭು ಮರ್ಕಂಜ. ಹಿರಿಯ ಯಕ್ಷಗಾನ ಪ್ರಸಂಗ ಕರ್ತೃ, ಛಂದೋ ಬ್ರಹ್ಮ ಡಾ॥ ಎನ್. ನಾರಾಯಣ ಶೆಟ್ಟಿಯವರು ಸಂತೋಷರವರ ದೂರ ಸಂಬಂಧಿಯಾಗಿದ್ದಾರೆ.

ಬಪ್ಪನಾಡು ಮೇಳ ಹಾಗೂ ಕಟೀಲು ಮೇಳದಲ್ಲಿ ತಿರುಗಾಟವನ್ನು ಮಾಡಿ ಕಲಾಸೇವೆ ಗೈದ ಅನುಭವ ಇರುವ ಇವರು ಕಳೆದ 10 ವರ್ಷಗಳಿಂದ ಯಕ್ಷಗಾನದ ವೃತ್ತಿ ಜೀವನವನ್ನು ನಡೆಸುತ್ತಾ ಇದ್ದಾರೆ.

ಕಾಲಜ್ಞ, ಶಕ್ರಜಿತು, ಶಂಖ-ದುರ್ಗರು, ಯಕ್ಷ, ಕೋಟಿ-ಚೆನ್ನಯರು, ವೃಷಕೇತು, ಪ್ರದ್ಯುಮ್ನ, ದೃಷ್ಟದ್ಯುಮ್ನ, ಭೂದೇವಿ, ಆದಿಮಾಯೆ, ಇತ್ಯಾದಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಗಣೇಶ ಕೊಲೆಕಾಡಿಯವರಿಂದ ಯಕ್ಷಗಾನದ ಸಂಗೀತ ಕಲಿಯುವ ಮೂಲಕ ಪ್ರತಿಭೆಯ ಇನ್ನೊಂದು ಮುಖವನ್ನು ತೋರಿಸಿಕೊಂಡಿದ್ದಾರೆ.

ಇವರು ಪತ್ನಿ ಪ್ರೇಮಲತಾ ಮತ್ತು ಮಗು ನಿತಿನ್ ಕುಮಾರ್ ಅವರೊಂದಿಗೆ ಉತ್ತಮ ಜೀವನ ನಡೆಸುತ್ತಿದ್ದಾರೆ.



## ಸಾಂತಪ್ಪ ಆರ್. ಕಡಬ

*ಗಣೇಶ ಕಲಾವೃಂದ, ಪೈವಳಿಕೆ,*
*ಕಾಸರಗೋಡು.*
*ದೂರವಾಣಿ 04998– 206042.*

ಸ್ತ್ರೀವೇಷ, ಪುರುಷವೇಷ ಮತ್ತು ಪೋಷಕ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿ ಕೀರ್ತಿವಂತರಾಗಿರುವ ಕಡಬ ಸಾಂತಪ್ಪರವರು ಮೇಳ ತಿರುಗಾಟದಿಂದ ನಿವೃತ್ತರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕಡಬ ಗ್ರಾಮದಲ್ಲಿ ಶ್ರೀ ರಾಮಣ್ಣ ಹಾಗೂ ಶ್ರೀಮತಿ ಕಲ್ಯಾಣಿ ದಂಪತಿಯ ಪುತ್ರರಾಗಿ ದಿನಾಂಕ 15–06–1923ರಲ್ಲಿ ಜನಿಸಿದರು.


ಮೇಳ ತಿರುಗಾಟದಲ್ಲಿ ಹಿರಿಯಕಲಾವಿದರಿಂದ ಹೆಚ್ಚಿನ ಅನುಭವವನ್ನು ಸಂಪಾದಿಸಿ ಪ್ರತಿಭಾವಂತರಾಗಿ ಬೆಳೆದ ಇವರು ಕೂಡ್ಲು ಮೇಳ 2 ವರ್ಷ, ಮುಚ್ಚೂರು ಮೇಳ 1 ವರ್ಷ, ಇರಾ ಮೇಳ 5 ವರ್ಷ, ಸುರತ್ಕಲ್ ಮೇಳ 5 ವರ್ಷ, ಹಾಗೂ ಧರ್ಮಸ್ಥಳ ಮೇಳ 28 ವರ್ಷ ಒಟ್ಟು ನಾಲ್ಕು ದಶಕಗಳಿಗೂ ಮಿಕ್ಕ ಮೇಳ ತಿರುಗಾಟ ಮಾಡಿದ ಸಾಧನೆ ಇವರದ್ದಾಗಿದೆ.

ದಮಯಂತಿ, ಮೇನಕಾ, ದೇವೇಂದ್ರ, ಯಯಾತಿ, ಧರ್ಮರಾಯ, ಶಮೀಕ ಮಹರ್ಷಿ ಮೊದಲಾದ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿರುವ ಕಡಬ ಸಾಂತಪ್ಪರವರು ಶ್ರೀ ಧರ್ಮಸ್ಥಳ ಮೇಳದಲ್ಲಿ ಇದ್ದಾಗ ಶ್ರೀ ಧರ್ಮಸ್ಥಳ ಕ್ಷೇತ್ರ ಮಹಾತ್ಮೆಯ ಕುಟ್ಟಿಮೂಸೆ ಎಂಬ ಮುಸ್ಲಿಂ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿ ಹಾಸ್ಯದ ಮುಖೇನ ಪ್ರೇಕ್ಷಕರ ಮನವನ್ನು ರಂಜಿಸಿ ಕೀರ್ತಿಗೆ ಭಾಜನವಾಗಿದ್ದಾರೆ.

ಶ್ರೀ ದೇವಕಾನ ಕೃಷ್ಣ ಭಟ್ಟರ, ಪೇವಳಿಕೆ ಶ್ರೀ ಗಣೇಶ ಕಲಾವೃಂದದಲ್ಲಿ ಕ್ರೀಯಾ ಶೀಲ ಕಲಾವಿದರಾಗಿ ಕಾರ್ಯನಿರ್ವಹಿಸುವ ಇವರು ಯಕ್ಷಗಾನದ ವಸ್ತ್ರಗಳ ಹೊಲಿಗೆ ಕಾರ್ಯದಲ್ಲಿ ನಿಪುಣತೆಯನ್ನು ಸಾಧಿಸಿದ್ದಾರೆ. ಇದರಿಂದಾಗಿ ಇವರ ಪ್ರಸಾಧನ ಕಲೆಗೆ ಯಕ್ಷಗಾನದ ವಲಯದಲ್ಲಿ ಗೌರವ ಲಭಿಸಿದೆ.

ಶ್ರೀಮತಿ ಸುಂದರಿ ಎಂಬವರನ್ನು ವರಿಸಿ ಈರ್ವರು ಸುಪುತ್ರರು ಹಾಗೂ ಈರ್ವರು ಸುಪುತ್ರಿಯರನ್ನು ಪಡೆದು ಸಾರ್ಥಕರಾಗಿರುವ ಇವರು ಬೇಡಿಕೆಯ ಕಲಾವಿದರಾಗಿದ್ದಾರೆ.

ಭಾವಜೀವಿಯಾಗಿ ಸಹಕಾರ ಮನೋಭಾವದಿಂದ ಬೆಳೆದಿರುವ ಇವರ ಕಲಾಸಾಧನೆಯನ್ನು ಗುರುತಿಸಿ ನಾಡಿನ ಅನೇಕ ಸಂಘ ಸಂಸ್ಥೆಗಳು ಗೌರವಿಸಿ ಸಂಮಾನಿಸಿದೆ.



## ಹರೀಶ್ ಕುಲಾಲ್, ವೇಣೂರು

*ತುಂಬೆದ ಲೆಕ್ಕಿ, ಗುಂಡುರಿ ಗ್ರಾಮ*
*ಮುದ್ದಾಡಿ ಅಂಚೆ, ಬೆಳ್ತಂಗಡಿ ತಾಲೂಕು– 574242*
*ಮೊಬೈಲ್ : 9480056864.*

ಸ್ತ್ರೀವೇಷ, ಪುಂಡುವೇಷ ಹಾಗೂ ಕಿರೀಟ ವೇಷಗಳನ್ನು ಮಾಡುತ್ತಾ ಜನ ಮೆಚ್ಚುಗೆಗೆ ಪಾತ್ರರಾಗಿರುವ ಶ್ರೀ ಹರೀಶ ಕುಲಾಲ್ ಅವರು ಸಸಿಹಿತ್ಲು ಶ್ರೀ ಭಗವತಿ ಮೇಳದಲ್ಲಿ ಕಲಾ ಸೇವೆಯನ್ನು ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಗಂಡೂರಿ ಗ್ರಾಮದ ತುಂಬೆದ ಲೆಕ್ಕಿ ಮನೆಯಲ್ಲಿ ಶ್ರೀ ಧರ್ಮಣ ಮೂಲ್ಯ ಹಾಗೂ ಶ್ರೀಮತಿ ಹೊನ್ನಮ್ಮ ದಂಪತಿಯ ಸುಪುತ್ರನರಾಗಿ 1978ರಲ್ಲಿ ಜನಿಸಿದರು.

10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರುವ ಇವರು ಯಕ್ಷಗಾನ ಪರಿಸರದಲ್ಲಿ ಪ್ರಭಾವಿತರಾಗಿ ಕಲಾ ಅಧ್ಯಯನಕ್ಕೆ ಮನ ಮಾಡಿದರು.

ಶ್ರೀ ಅಶೋಕ ಆಚಾರ್ಯ ವೇಣೂರು ಇವರಿಂದ ನಾಟ್ಯಾಭ್ಯಾಸವನ್ನು ಪಡೆದು ಯಕ್ಷಗಾನದ ಮೇಳ ತಿರುಗಾಟವನ್ನು ಆರಂಭಿಸಿದರು.

ಬಪ್ಪನಾಡು ಮೇಳ –2 ವರ್ಷ, ಕಾಟಿಪಳ್ಳ ಮೇಳ –1 ವರ್ಷ, ಸುಂಕದಕಟ್ಟೆ ಮೇಳ –8 ವರ್ಷ, ಹಾಗೂ ಭಗವತೀ ಮೇಳ –5 ವರ್ಷ ಹೀಗೆ 16 ವರ್ಷಗಳ ತಿರುಗಾಟವನ್ನು ಪೂರೈಸಿರುವರು.

ಮಾಲಿನಿ, ರಂಭಾಮಣಿ, ಶಚಿ, ದೇವೇಂದ್ರ ಅರ್ಜುನ, ವಿಷ್ಣು, ಬ್ರಹ್ಮ ಹೀಗೆ ಅನೇಕ ಪಾತ್ರಗಳನ್ನು ನಡೆಸುತ್ತಾ ಯಕ್ಷಗಾನಕ್ಕೆ ತಮ್ಮ ಕಿರುಕಾಣಿಕೆಯನ್ನು ನಡೆಸುತ್ತಾ ಬಂದಿದ್ದಾರೆ.

ಇವರ ಮನೆತನದಲ್ಲಿ ಅಣ್ಣಂದಿರಾದ ನಾರಾಯಣ ಕುಲಾಲ್ ಶ್ರೀ ಕಟೀಲು ಮೇಳದಲ್ಲಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ ಹಾಗೂ ಕೇಶವ ಕುಲಾಲ್ ಅವರು ಹವ್ಯಾಸಿ ಕಲಾವಿದರಾಗಿ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಮಳೆಗಾಲದಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಾ ತಮ್ಮ ಜೀವನವನ್ನು ಸಾಗಿಸುತ್ತಾ ಬಂದಿದ್ದಾರೆ.



## ಹರೀಶ್ ಬಂಗಾಡಿ

*ಪರಾರಿಕೋಡಿ ಮನೆ, ಮಿತ್ತ ಬಾಗಿಲು ಗ್ರಾಮ*
*ಕಿಲ್ಲೂರು ಅಂಚೆ, ಬೆಳ್ತಂಗಡಿ ತಾಲೂಕು– 574214*
*ಮೊಬೈಲ್: 9449486556.*

ಮುಂಡು ವೇಷಧಾರಿಯಾಗಿರುವ ಶ್ರೀ ಹರೀಶ್ ಬಂಗಾಡಿಯವರು ಸಸಿಹಿತ್ಲು, ಶ್ರೀ ಭಗವತಿ ಮೇಳದಲ್ಲಿ ಕಲಾ ಸೇವೆಯನ್ನು ಮಾಡುತ್ತಾ ಇದ್ದಾರೆ.

ಬಂಗಾಡಿಯಲ್ಲಿ ಶ್ರೀ ಪೆರ್ನು ಹಾಗೂ ಶ್ರೀಮತಿ ಗಿರಿಜಾ ದಂಪತಿಯ ಪುತ್ರರಾಗಿರುವ ಹರೀಶ್ ಬಂಗಾಡಿ 9ನೇ ತರಗತಿಯ ತನಕ ವಿದ್ಯಾಭ್ಯಾಸವನ್ನು ಪಡೆದಿರುವರು.

ತಂದೆಯವರ ಪ್ರೇರಣೆಯ ಮೇರೆಗೆ 16ನೇ ವರ್ಷದಿಂದ ಯಕ್ಷಗಾನದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡ ಇವರು ಯಕ್ಷಗಾನ ಕಲಾವಿದರಾದ ಭಾಸ್ಕರ ಬಂಗಾಡಿಯವರಿಂದ ನಾಟ್ಯಾಭ್ಯಾಸವನ್ನು ಕಲಿತರು.

ಇವರ ಚಿಕ್ಕಪ್ಪ ಶಶಿಕಾಂತ್ ಅವರು ಪುಂಡು ವೇಷಧಾರಿಯಾಗಿದ್ದು ಹರೀಶ್ ಬಂಗಾಡಿಯವರಿಗೆ ಹೆಚ್ಚಿನ ಅನುಭವವನ್ನು ನೀಡಿದ್ದಾರೆ.

30 ವರ್ಷ ಪ್ರಾಯದವರಾದ ಹರೀಶ ಬಂಗಾಡಿಯವರು ಬಪ್ಪನಾಡು ಮೇಳದಲ್ಲಿ 1 ವರ್ಷ, ಭಗವತಿ ಮೇಳ 12 ವರ್ಷದ ತಿರುಗಾಟವನ್ನು ಮಾಡಿ ಅನುಭವವನ್ನು ಸಂಪಾದಿಸಿರುವರು.

ಪೌರಾಣಿಕ ವೇಷಗಳಾದ ರಾಮ, ಕೃಷ್ಣ, ವಿಷ್ಣು, ಚಂಡ, ಮುಂಡ, ರುಕ್ಮಿಣಿ, ಹಾಗೂ ತುಳು ಪ್ರಸಂಗಗಳಲ್ಲಿ ಪ್ರಾಧಾನ ಪುಂಡುವೇಷಗಳಾದ ಕಾಂತಬಾರೆ, ಬೂದಾಬಾರೆ, ಕೋಟಿ–ಚೆನ್ನಯ ಮುಂತಾದ ಹಲವಾರು ಪಾತ್ರಗಳನ್ನು ಮಾಡಿರುವರು.



## ಹೊನ್ನಪ್ಪ ಕುಂಬಾರ

*ಬಂದಾರು ಗ್ರಾಮ, ಮತ್ತು ಅಂಚೆ*
*ಬೆಳ್ತಂಗಡಿ ತಾಲೂಕು.*
*ದಕ್ಷಿಣ ಕನ್ನಡ.*

ತಣಿಯಪ್ಪ ಕುಂಬಾರ ಹಾಗೂ ಕೊರೊಪೊಳು ದಂಪತಿಯ ಸುಪುತ್ರರಾಗಿ ಬಂದಾರು ಎಂಬಲ್ಲಿ ಜನಿಸಿದರು. ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದಿರುವ ಇವರು 12ನೇ ವರ್ಷದಿಂದಲೇ ಯಕ್ಷಗಾನದ ರಂಗಪ್ರವೇಶ ಮಾಡಿದ್ದಾರೆ.

ಸುಂಕದಕಟ್ಟೆಯ ಮೇಳದ ಕಲಾವಿದರಾಗಿರುವ ರಾಜಾರಾಮ್ ಕುಲಾಲ್ ಅವರ ಪ್ರೇರಣೆ ಮತ್ತು ಪ್ರೋತ್ಸಾಹದ ಮೇರೆಗೆ, ಕಟೀಲು ಮೇಳದಲ್ಲಿ ತಿರುಗಾಟನ್ನು ಮಾಡಿದ್ದ ಬೆಳ್ಳಾರೆ ಲಕ್ಷ್ಮೀಶ ಅವರಿಂದ ನಾಟ್ಯಾಭ್ಯಾಸವನ್ನು ಮಾಡಿ ತಿರುಗಾಟವನ್ನು ಆರಂಭಿಸಿದರು.

ಸುಂಕದ ಕಟ್ಟೆಯ ಮೇಳವೊಂದರಲ್ಲೇ 16ವರ್ಷಗಳ ತಿರುಗಾಟವನ್ನು ಮಾಡಿರುವ ಇವರು ದಿತಿ, ಮಾಲಿನಿ, ರತಿ ಮೊದಲದ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಾರೆ. ಅನಿವಾರ್ಯ ಸಂಧರ್ಭಗಳಲ್ಲಿ ಮಂತ್ರಿ ಸೇನಾಧಿಪತಿ ಮೊದಲಾದ ಪುರುಷ ಪಾತ್ರಗಳನ್ನು ಕೂಡಾ ಮಾಡುತ್ತಾರೆ.

ಸ್ತ್ರೀಪಾತ್ರಗಳನ್ನು ಮಡುವುದರ ಮುಖೇನ ಕಲಾಕ್ಷೇತ್ರದಲ್ಲಿ ಗುರುತಿಸಲ್ಪಟ್ಟ ಶ್ರೀ ಹೊನ್ನಪ್ಪ ಕುಂಬಾರರು ಸುಂಕದ ಕಟ್ಟೆಯ ಮೇಳದ ಕಲಾವಿದರಾಗಿ ತಿರುಗಾಟವನ್ನು ನಡೆಸುತ್ತಾ ಇದ್ದಾರೆ.

